# ಕೃತಜ್ಞತೆಗಳು


ಪ್ರವಾದಿಪತ್ನಿ ಆಯಿಷಾರವರ ಬಗ್ಗೆ ಸ್ವತಃ ಕಾದಂಬರಿಯೊಂದನ್ನು ಬರೆಯುವ ಆಸೆಯಿಂದ
ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಿದ್ದರೂ, ಕಾರಣಾಂತರಗಳಿಂದ ಬರೆಯಲಾಗದೆ,
ನನ್ನನ್ನು ಬರೆಯುವಂತೆ ಪ್ರೇರೇಪಿಸಿದ ಸಾಹಿತಿಮಿತ್ರ,
**ಅಬ್ದುಲ್ ರಹೀಮ್ ಟೀಕೆ** – ಅವರಿಗೆ,
ಬರವಣಿಗೆಯುದ್ದಕ್ಕೂ, ನಾನು ಬಯಸಿದ ಮಾಹಿತಿಗಳೆಲ್ಲವನ್ನೂ ಒದಗಿಸಿದ್ದಲ್ಲದೆ,
ಹಸ್ತಪ್ರತಿಗಳನ್ನು ಮತ್ತೆ ಮತ್ತೆ ಓದುತ್ತಾ ಪ್ರತಿಯೊಂದು ಪಾತ್ರ, ವ್ಯಕ್ತಿ, ಸಂದರ್ಭ ಹಾಗೂ
ಘಟನೆಗಳನ್ನು ಪರಿಶೀಲಿಸಿ ತಿದ್ದಿ ಸಹಾಯ ಮಾಡಿದ, ಇಸ್ಲಾಮ್ ಧರ್ಮಶಾಸ್ತ್ರ ವಿದ್ಯಾರ್ಥಿ
**ಅಬ್ದುಲ್ ಸಲಾಮ್ ಪುತ್ತಿಗೆ** – ಅವರಿಗೆ,

ಬರೆಯುತ್ತಿರುವಂತೆಯೇ ರವಾನಿಸುತ್ತಿದ್ದ ಹಸ್ತಪ್ರತಿಗಳನ್ನು ಓದಿ
ಉಪಯುಕ್ತ ಸಲಹೆಗಳನ್ನು ನೀಡುತಲಿದ್ದ ನನ್ನ ಹಿತೈಷಿಗಳಾಗಿರುವ,
**ಜುಬೇದಾ, ಭಾರತಿ ಬಿ.ವಿ., ಮಮತಾಜ್, ಮುದ್ದಮ್ಮ, ಬೆನರ್ಝೀರ್,**
**ಶಕುಂತಲಾ ಪಟೇಲ್, ಲೀಲಾ ಹಿರೇಮಠ, ಕಾದಂಬಿನಿ ರಾವಿ,**
**ಪ್ರಶಾಂತ್ ಭಟ್, ಸುನೈಫ್, ರಾಜೇಂದ್ರ ಪ್ರಸಾದ್, ಇರ್ಷಾದ್ ಉಪ್ಪಿನಂಗಡಿ,**
**ಪಿ. ಶೇಷಾದ್ರಿ, ಎ. ಕೆ. ಕುಕ್ಕಿಲ, ಜಯದೇವ ಪ್ರಸಾದ ಮೊಳೆಯಾರ,**
**ಮುಹಮ್ಮದ್ ಬಡ್ಡೂರು, ನಾಗರಾಜ ಮತ್ತಿಗಾರ್, ಎಸ್. ಎ. ರೆಹಮಾನ್,**
**ಯು. ಎ. ಖಾಸಿಮ್ ಉಳ್ಳಾಲ, ಸುಬ್ರಹ್ಮಣ್ಯ ಎಸ್.ಎನ್., Juzt ಶಾಫಿ,**
**ದಾದಾ ಖಲಂದರ್, ಅಬ್ದುಲ್ ಮಲಿಕ್, ಐ. ಕೆ. ಬೊಳುವಾರು, ಬಷೀರ್ ಬಿ. ಎಂ.**
ಪ್ರಕಟಣಪೂರ್ವ ಹಸ್ತಪ್ರತಿಯನ್ನು ಓದಿ ಬೆನ್ನುತಟ್ಟಿದ ಎಲ್ಲ ಸಹೃದಯಿಗಳಿಗೆ
ಹಾಗೂ ಅಂತಿಮ ಕರಡು ಪ್ರತಿಯನ್ನು ಪರಿಶೀಲಿಸಿ ತಿದ್ದಿ ಉಪಕರಿಸಿದ
**ಇರ್ಷಾದ್ ಬೈರಿಕಟ್ಟೆ, ರಘು ವೆಂಕಟಾಚಲಯ್ಯ** ಮತ್ತು **ಹಂಝಾ ಮಲಾರ್**
ಇವರೆಲ್ಲರಿಗೂ ನಾನು ಕೃತಜ್ಞನಾಗಿರುವೆ.

ಏಳನೆಯ ಶತಮಾನದ ಪುರುಷ–ತೋಳ್ಬಲ ಕೇಂದ್ರಿತ ವ್ಯವಸ್ಥೆಯಲ್ಲಿ, ಪ್ರವಾದಿಪತ್ನಿಯರ ಬದುಕಿನ ಮೂಲಕ ಎಲ್ಲಾ ಸ್ತ್ರೀಯರ ಬದುಕು–ಸ್ಥಾನ–ಮಾನಗಳನ್ನು ಚಿತ್ರಿಸುವ 'ಉಮ್ಮಾ' ಕಾದಂಬರಿಯು, ಇದೇ ಲೇಖಕರ 'ಓದಿರಿ' ಕಥನಕ್ಕಿಂತಲೂ ಹೆಚ್ಚು ಗಂಭೀರವಾದುದು ಮತ್ತು ಹೆಚ್ಚು ಪ್ರಬುದ್ಧವಾದುದು.

**– ಡಾ. ಸಿ. ಎನ್. ರಾಮಚಂದ್ರನ್**

ಛಲದಲ್ಲಿ ದ್ರೌಪದಿಯನ್ನೂ ಮೀರಿಸಬಲ್ಲ 'ಹಿಂದ್' ಎಂಬ ಹೆಣ್ಣು ಪಾತ್ರದ ಕ್ರೌರ್ಯವನ್ನೂ, ಪ್ರವಾದಿಪತ್ನಿಯರ ಘನತೆಯನ್ನೂ ಜೊತೆಜೊತೆಯಲ್ಲೇ ತೀರಾ ಸಹಜ ಎಂಬಂತೆ ಚಿತ್ರಿಸುವ ಬೊಳುವಾರು, ಕಾಲ್ಪನಿಕ ಪಾತ್ರಗಳನ್ನಷ್ಟೇ ಅಲ್ಲ, ಐತಿಹಾಸಿಕ ಪಾತ್ರಗಳನ್ನೂ ಮನಮುಟ್ಟುವಂತೆ ಸೃಷ್ಟಿಸುವುದರಲ್ಲಿ ಸಮರ್ಥರು ಎನ್ನುವುದು ಮತ್ತೊಮ್ಮೆ ಸಾಬೀತಾಗುತ್ತದೆ.

**– ಹಸನ್ ನಯೀಮ್ ಸುರಕೋಡ**

ಸಾಮಾನ್ಯವಾಗಿ ತಿಳಿಯದ ವೃತ್ತಾಂತಗಳನ್ನು ಮನೋಜ್ಞವಾಗಿ ಸಂವಹನ ಮಾಡುವುದರಲ್ಲಿ ಬೊಳುವಾರರದು ಎತ್ತಿದ ಕೈ. ಒಂದು ಸಾಹಿತ್ಯ ಕೃತಿಯು ಅದರ ವಸ್ತುವಿನ ಕಾಲದ ಇತಿಹಾಸವನ್ನು ಕಟ್ಟಿಕೊಟ್ಟು, ಸಮಕಾಲೀನ ಸಂದರ್ಭಕ್ಕೆ ಸಹ ಅತ್ಯಂತ ಬೋಧಪ್ರದವಾಗಿ ಪ್ರಸ್ತುತತೆಯನ್ನು ಹೊಂದಬಹುದು ಎಂಬುದಕ್ಕೆ ಬೊಳುವಾರರ ಈ 'ಉಮ್ಮಾ' ಒಂದು ಉತ್ತಮ ಉದಾಹರಣೆ. ಜೊತೆಗೆ, ಹಲವು ಆಲೋಚನೆಗಳಿಗೆ ನಮ್ಮನ್ನು ಹಚ್ಚುವ ಕೃತಿ ಇದಾಗಿದೆ.

**– ಡಾ. ಜಿ. ರಾಮಕೃಷ್ಣ**

ಚರಿತ್ರೆಯನ್ನು ವರ್ತಮಾನ ಪ್ರಜ್ಞೆಯಲ್ಲೂ, ಧಾರ್ಮಿಕವನ್ನು ಲೌಕಿಕ ಚೌಕಟ್ಟಿನಲ್ಲೂ, ಗಂಡುಕೇಂದ್ರಿತ ಸಾರ್ವಜನಿಕ ಬಾಳನ್ನು ಹೆಂಗಣ್ಣ ಮೂಲಕವೂ ಕಾಣಿಸುವ ವಿಶಿಷ್ಟ ಕಥನವಿದು; ಇಲ್ಲಿರುವುದು ಅರಬರ ಜಗತ್ತಾದರೂ, ಇದರೊಳಗೆ ಸಮಸ್ತ ಸ್ತ್ರೀಯರ ಕನಸು ದುಗುಡ ಸಾಹಸಗಳ ಉಸಿರಾಟಗಳನ್ನು ಆಲಿಸಬಹುದು.

**– ಡಾ. ರಹಮತ್ ತರೀಕೆರೆ**

ಪ್ರವಾದಿಪತ್ನಿಯರ ಸ್ವಗತಗಳ ಮೂಲಕ ಏಕಕಾಲದಲ್ಲಿ ಅವರ ಅಂತರಂಗ ಹಾಗೂ ಪ್ರವಾದಿಯ ಬಹಿರಂಗವನ್ನು ಮಾತ್ರವಲ್ಲ, ಆ ಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ವಿದ್ಯಮಾನಗಳನ್ನೂ ತೆರೆದಿಡುವ ಈ ಕಾದಂಬರಿಯು ತನ್ನ ವಸ್ತುವಿನ್ಯಾಸದಿಂದಲೂ, ತಂತ್ರವಿನ್ಯಾಸದಿಂದಲೂ ಕನ್ನಡ ಕಾದಂಬರಿ ಲೋಕಕ್ಕೆ ಒಂದು ಗಮನಾರ್ಹ ಸೇರ್ಪಡೆಯಾಗುತ್ತದೆ.

**– ಪ್ರೊ. ಟಿ. ಪಿ. ಅಶೋಕ**

ಕಾಲ ದೇಶಗಳ ಹಂಗುಗಳನ್ನು ಬಿಟ್ಟು ಹೆಣ್ಣುಮಕ್ಕಳ ಆಸೆ, ನಿರಾಸೆ, ನೋವು ನಲಿವುಗಳನ್ನು ಅದ್ಭುತವಾಗಿ ಕಟ್ಟಿಕೊಡುವ ಈ 'ಉಮ್ಮಾ' ಕೃತಿಯು ಕನ್ನಡದ ಮಹಾತ್ವಾಕಾಂಕ್ಷೆಯ ಕಾದಂಬರಿಗಳ ಮೊದಲ ಸಾಲಿನಲ್ಲಿ ನಿಲ್ಲುತ್ತದೆ.

**– ಡಾ. ಕೇಶವ ಶರ್ಮ**

ತಣ್ಣಗೆ, ಮೆಲ್ಲಗೆ ಆದರೆ, ಓದುಗರ ಎದೆ ನಡುಗುವಂತೆ 'ಉಮ್ಮಾ'ನ ಮೌನ ಮುರಿಯುವ ಮೂಲಕ ಬೊಳುವಾರು, ಮತ್ತೊಮ್ಮೆ ಸ್ಫೋಟಿಸಿದ್ದಾರೆ! 'ಉಮ್ಮಾ' ನಮ್ಮ ನಡುವಿನ ಸತ್ಯ; ನಮ್ಮೆಲ್ಲರ ಪ್ರಶ್ನೆ ಮತ್ತು ಉತ್ತರ. ಮುರಿದುಕಟ್ಟುವ ಪ್ರತಿರೋಧ ಇದು. ಈ ಬಗೆಯ ತಂತ್ರ, ಎಚ್ಚರದ ಪ್ರಯೋಗ ಕನ್ನಡದಲ್ಲಿ ಹಿಂದೆ ಸಂಭವಿಸಿಲ್ಲ. ಮುಂದೆಯೂ......?

**– ಡಾ. ವಿಜಯಾ**

ಅಸಹಾಯಕ ಹೆಣ್ಣುಗಳ 'ಅನಿವಾರ್ಯ' ಮೌನವನ್ನು 'ಸ್ವಗತ'ಗಳಿಂದ ಮೀರುವ ಈ ಕಾದಂಬರಿಯನ್ನು ಸ್ತ್ರೀವಾದವು ಪುರುಷವಿರೋಧಿಯಲ್ಲವೆಂಬ ತಿಳಿವಳಿಕೆಯು ಮುನ್ನಡೆಸಿದೆ. ಸಿಡಿಮದ್ದಿನಂತಹ ವಸ್ತುವನ್ನು, ಪ್ರಚಾರ, ಪ್ರಸಾರ, ಪರಿಣಾಮಗಳ ಹಂಗಿಲ್ಲದೆ ತಂತಿನಡಿಗೆಯಲ್ಲಿ ಲೇಖಕರು ನಿರ್ವಹಿಸಿದ್ದಾರೆ. ಆಶಯ, ತಂತ್ರಗಳು ಒಂದನ್ನೊಂದು ಗೆಲ್ಲಿಸಿವೆ.

**– ಪ್ರೊ. ಎಚ್.ಎಸ್. ರಾಘವೇಂದ್ರ ರಾವ್**

'ಸಾಹಿತ್ಯವು ಬದುಕಿನ ಪ್ರತಿಬಿಂಬ'ವೆಂಬ ಜನಪ್ರಿಯ ಸಿದ್ಧಾಂತವನ್ನು ತಿರಸ್ಕರಿಸಿ, ಅದು 'ಬದುಕಿನ ಗತಿಬಿಂಬವಾಗಬೇಕು' ಎಂದು ಆರಂಭದಿಂದಲೂ ವಾದಿಸುತ್ತಾ ಬರುತ್ತಿರುವ ಬೊಳುವಾರು, 'ಉಮ್ಮಾ' ಕಾದಂಬರಿಯಲ್ಲಿ ತಮ್ಮ ವಾದವನ್ನು ಬಹಳ ಸಮರ್ಥವಾಗಿ ಸಾಬೀತುಪಡಿಸಿದ್ದಾರೆ.

**– ಎನ್. ಎ. ಎಂ. ಇಸ್ಮಾಯಿಲ್**

ತತ್ವ, ಸಿದ್ಧಾಂತಗಳಿಗಿಂತ ಚರಿತ್ರೆಯ ವಾಸ್ತವಕ್ಕಿಂತ ಕಲ್ಪನೆಯೇ ಪ್ರಖರ, ಸತ್ಯ. ಸುತ್ತಲ ಲೋಕದ ಖಚಿತ ವಿವರಗಳನ್ನು, ಅವಕ್ಕೂ ಮನುಷ್ಯರ ಭಾವಲೋಕಕ್ಕೂ ಇರುವ ಸಂಬಂಧವನ್ನು ಓದುಗರ ಮನಸಿನಲ್ಲಿ ನಿರ್ಮಿಸುತ್ತ ಬೊಳುವಾರು, ಎಲ್ಲ ಕಾಲದ ಹೆಣ್ಣು ಬದುಕಿನ ವಾಸ್ತವ ಕಟ್ಟಿಕೊಟ್ಟಿದ್ದಾರೆ. ಅನ್ಯ ಸಂಸ್ಕೃತಿಯ ಪುರಾಣಲೋಕ ಕನ್ನಡಕ್ಕೆ ತಂದಿದ್ದಾರೆ. ಇದು ಮನುಷ್ಯರ ಕಥೆ.

**–ಓ.ಎಲ್. ನಾಗಭೂಷಣ ಸ್ವಾಮಿ**

ಹೆಣ್ಣುಮನಸಿನ ಸ್ವಗತಗಳನ್ನು ಕನಸು, ವಾಸ್ತವ, ಇತಿಹಾಸಗಳ ಮೂಲಕ ಕಟ್ಟಿಕೊಡುವ 'ಉಮ್ಮಾ' ಕನ್ನಡ ಸಾಹಿತ್ಯಲೋಕವನ್ನು ಹೊಸದೊಂದು ಸಾಂಸ್ಕೃತಿಕ ನೆಲೆಗೆ ವಿಸ್ತರಿಸುತ್ತದೆ.

**– ಡಾ. ಕೆ. ಷರೀಫಾ**

ಪ್ರಸ್ತಾವನೆಯ ಮಾತುಗಳನ್ನು ಓದುತ್ತಿರುವಂತೆಯೇ ಓದುಗರನ್ನು 'ಮಾಯಾ ಜಮಖಾನ'ದಲ್ಲಿ ಕೂಡಿಸಿ, ಏಳನೇ ಶತಮಾನದ ಅರೇಬಿಯಾಕ್ಕೆ ಕರೆದುಕೊಂಡು ಹೋಗುವ ರೋಚಕ ಕೃತಿ 'ಉಮ್ಮಾ'.

**– ಡಾ. ಬಿ. ಆರ್. ಮಂಜುನಾಥ**

ವಿನೂತನ ಸ್ವಗತ–ಶೈಲಿಯ ನಿರೂಪಣೆಯಿಂದ ಬೊಳುವಾರರ 'ಉಮ್ಮಾ' ಕಾದಂಬರಿಯು 'ಇನ್ ಶಾ ಅಲ್ಲಾಹ್', ಹೊಸ ಇತಿಹಾಸವೊಂದನ್ನು ನಿರ್ಮಿಸಲಿದೆ. ಓದುತ್ತಿರುವಂತೆಯೇ ಹತ್ತಾರು ಸಲ ಅತ್ತೇ ಬಿಟ್ಟೆ.

**– ಬಿ.ಎ. ಮುಹಮ್ಮದ್ ಆಲಿ**

ಪ್ರವಾದಿಪತ್ನಿಯರ 'ಸ್ವಗತ'ಗಳ ಮೂಲಕವೇ ಆ ಕಾಲದ ಸ್ತ್ರೀಲೋಕವನ್ನು ಕಟ್ಟಿಕೊಡುವ ವಿಶಿಷ್ಟ ತಂತ್ರ–ಶೈಲಿಗಳ ಕಾರಣದಿಂದ ಮಾತ್ರವಲ್ಲ, ಅಪರಿಚಿತ ಸಂಸ್ಕೃತಿಯೊಂದನ್ನು ತನ್ನ ಅನುಭವದ ತೆಕ್ಕೆಯೊಳಗೆ ತೆಗೆದುಕೊಳ್ಳಬಲ್ಲಂತೆ ಕನ್ನಡ ಭಾಷೆಯ ಪರಿಧಿಯನ್ನು ವಿಸ್ತರಿಸಿರುವ ಕಾರಣದಿಂದಲೂ, ಜಾಗತಿಕ ಸಾಹಿತ್ಯದಲ್ಲಿ ಗುರುತಿಸಲೇಬೇಕಾದ ಒಂದು ಕಲಾಸೃಷ್ಟಿ ಈ 'ಉಮ್ಮಾ.'

**– ಡಾ. ಬಿ. ಜನಾರ್ದನ ಭಟ್**

ಉಮ್ಮಾ.., ನೀವೆಲ್ಲರೂ ನಮ್ಮ ಮೊದಲಗಿತ್ತಿಯರು. ಗಂಡಿನ ಅಸೀಮ ಕ್ರೌರ್ಯವನ್ನು, ಹೆಣ್ಣಿನ ಅಸೀಮ ಧೀಶಕ್ತಿಯಿಂದ ಎದುರಿಸಿದವರು. ಹೋರಾಟದುದ್ದಕ್ಕೂ ನೀವು ಉಳಿಸಿಕೊಂಡ ಘನತೆ ಮತ್ತು ಜೀವನಪ್ರೀತಿ ಹೆಣ್ಣಿನ ಜೀವಕೋಶಗಳು. ಇದನ್ನು ಕಾಣಿಸಿದ ಬೊಳುವಾರರಿಗೆ ಪ್ರೀತಿ ಮತ್ತು ಕೃತಜ್ಞತೆಗಳು.

**– ಡಾ. ಆಶಾದೇವಿ ಎಂ. ಎಸ್.**

## ಲೇಖಕರ ಇತರ ಕೃತಿಗಳು

**ಕಥಾ ಸಂಕಲನ :**

ಅತ್ತ ಇತ್ತಗಳ ಸುತ್ತಮುತ್ತ
ದೇವರುಗಳ ರಾಜ್ಯದಲ್ಲಿ
ಆಕಾಶಕ್ಕೆ ನೀಲಿ ಪರದೆ
ಅಂಕ
ಒಂದು ತುಂಡು ಗೋಡೆ
ಆಯ್ದ ಕತೆಗಳು

**ಕಾದಂಬರಿ :**

ಜೆಹಾದ್
ಸ್ವಾತಂತ್ರ್ಯದ ಓಟ
ಓದಿರಿ

**ಐತಿಹಾಸಿಕ:**

ಪುನ್ನಪ್ರ ವಯಲಾರ್ ಸಮರ

**ನಾಟಕ :**

ಮಲಾಲಾ ಅಲ್ಲಾ...

**ಮಕ್ಕಳ ಸಾಹಿತ್ಯ :**

ತಟ್ಟು ಚಪ್ಪಾಳೆ ಪುಟ್ಟ ಮಗು (ಸಂಪಾದಿತ ಮಕ್ಕಳ ಪದ್ಯಗಳು)
ಪಾಪು ಗಾಂಧಿ, ಗಾಂಧಿ ಬಾಪು ಆದ ಕತೆ ( ಕಾದಂಬರಿ)
ಸಂತಮ್ಮಣ್ಣ (ಸಂಪಾದಿತ ಮಕ್ಕಳ ಪದ್ಯಗಳು)
ಹನ್ನೆರಡು ಮಕ್ಕಳ ನಾಟಕಗಳು
From Monu to Mahatma (Peakpublish- London)

**ಸಂಪಾದನೆ :**

ಶತಮಾನದ ಕನ್ನಡ ಕತೆಗಳು
ದೆಹಲಿ ಕನ್ನಡ ಸಾಹಿತ್ಯ
ಪುನ್ನಪ್ರ ವಯಲಾರ್ ಸಮರ

**ಅನುವಾದ :**

ಮಾಯವಾದ ವಾಮನ [ ಕಾದಂಬರಿ–ಮೂಲಃ ಮರಾಠಿ– ಜಯಂತ್ ನಾರ್ಳೀಕರ್]
ಸಂತ ಫ್ಲೋರಾಳ ತಪ್ಪೊಪ್ಪಿಗೆ [ನೀಳ್ಗತೆ–ಮೂಲಃ ಉರ್ದು– ಖುರಾತುಲಿನ್ ಹೈದರ್]

**ಪ್ರಶಸ್ತಿ ಪುರಸ್ಕಾರಗಳು:**

ಕನ್ನಡದ ಸೃಜನಶೀಲ ಗದ್ಯ ಸಾಹಿತ್ಯಕ್ಕೆ ಮುಸ್ಲಿಮ್ ಬದುಕನ್ನು ಮೊತ್ತ ಮೊದಲು ಪರಿಚಯಿಸಿದ್ದ ಬೊಳುವಾರು, 'ಕೇಂದ್ರ ಸಾಹಿತ್ಯ ಅಕಾಡೆಮಿ'ಯ ಇತಿಹಾಸದಲ್ಲಿ ಸೃಜನಶೀಲ ಗದ್ಯ ಕೃತಿಗಳಿಗಾಗಿ ಎರಡು ಬಾರಿ ಪ್ರಶಸ್ತಿಗಳನ್ನು ಪಡೆದ ದೇಶದ ಏಕೈಕ ಸಾಹಿತಿ. ಕನ್ನಡದ ಮಕ್ಕಳ ಸಾಹಿತ್ಯಕ್ಕೆ 'ಕೇಂದ್ರ ಸಾಹಿತ್ಯ ಅಕಾಡೆಮಿ'ಯಿಂದ ಮೊತ್ತ ಮೊದಲ ಪ್ರಶಸ್ತಿಯನ್ನು ತಂದುಕೊಟ್ಟವರೂ ಇವರೇ. 'ಕರ್ನಾಟಕ ಸಾಹಿತ್ಯ ಅಕಾಡೆಮಿ'ಯಿಂದ ಗೌರವ ಪ್ರಶಸ್ತಿ ಸಹಿತ ಮೂರು ಬಾರಿ ಪ್ರಶಸ್ತಿಗಳನ್ನು ಪಡೆದ ಇವರು, ಕಲ್ಕತ್ತಾದ ಭಾರತೀಯ ಭಾಷಾ ಸಂಸ್ಥಾನ, ದೆಹಲಿಯ ಕಥಾ, ಅಬುದಾಬಿಯ BWF, ಹೀಗೆ ಹಲವಾರು ಪ್ರಶಸ್ತಿಗಳ ಜೊತೆಗೆ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಯಿಂದಲೂ ಸನ್ಮಾನಿತರು.

**ಪ್ರವಾದಿ ಮುಹಮ್ಮದರ ಜೀವನಾಧಾರಿತ ಮೊತ್ತಮೊದಲ ಐತಿಹಾಸಿಕ ಕಾದಂಬರಿ**
**'ಓದಿರಿ' ಲೇಖಕರಿಂದ, ಪ್ರವಾದಿಪತ್ನಿ ಆಯಿಷಾ 'ಜೀವನಪ್ರೇರಿತ' ಕಾದಂಬರಿ**

# ಉಮ್ಮಾ

**ಬೊಳುವಾರು ಮಹಮದ್ ಕುಂಞ**

**ಮುತ್ತುಪ್ಪಾಡಿ ಪುಸ್ತಕ**
ಬೆಂಗಳೂರು– 560047

**ಉಮ್ಮಾ**

ಪ್ರವಾದಿಪತ್ನಿ ಆಯಿಷಾ 'ಜೀವನಪ್ರೇರಿತ' ಕಾದಂಬರಿ

**ಬೊಳುವಾರು ಮಹಮದ್ ಕುಂಞಿ**

ಮುತ್ತುಪ್ಪಾಡಿ ಪುಸ್ತಕ, ಬೆಂಗಳೂರು– 560 047

**UMMA**

A fiction in Kannada inspired by the life of
Prophet Muhammad's wife Ayesha
by

**Bolwar Mahamad Kunhi**
**Mob: 87628 00 786**
bolwar.mk@gmail.com

Publishers :
**`Muttuppadi Pustaka'**
`Monu' B-4-016, Kavery Block, National Games Village
Koramangala, Bengaluru - 560 047
Ph: 080 2571 1462

**© Jubeda**
All rights reserved, including the right to reproduce this book or portions thereof in any form whatsoever. This book is a work of fiction. Names, characters, places and incidents either are product's of author's imagination or used fictitiously & any resemblance to actual events or places or persons, living or dead, is entirely coincidental.

Cover design: **Rohith Rao.** Calligraphy: **Ishwar Badiger**

Authorised distributors :
**Navakarnataka Publications (P) Limited**
Embassy Centre, 11 Crescent Road, Bengaluru-560 001
080 - 2216 1900 / 01 / 13 / 14
navakarnataka@gmail.com
navakarnataka.com

Book designed & Printed on 70gsm NS Maplitho-light-weight paper
at
**Ila Graphics**
Raghavanagara, Bengaluru- 560 026
Ph: 080-2675 7159

**320 pages** **First print : 2018** **Rs. 280 /-**

ಸಹನೆಗೆ ಘನತೆ ನೀಡಿದ ನನ್ನ ಉಮ್ಮಾ,

**ಉಮ್ಮು ಫಾತಿಮಾ**

ನೆನಪಿಗೆ

ಚರಿತ್ರೆಯೆಂದರೆ,
ಚಲಿಸುವ ರೈಲಿನ ಕಿಟಕಿಯಿಂದ ತಾತ
ಕಂಡಿದ್ದ ಘಟನೆಯೊಂದನ್ನು ಮೊಮ್ಮಗ
ಸಂದರ್ಭಸಹಿತ ವಿವರಿಸುವುದು.

**ಪಾತ್ರ ಪರಿಚಯ :**

**ಸ್ವಗತಗಳಲ್ಲೇ ಹೆಣೆಯಲಾಗಿರುವ ಈ ಕೃತಿಯಲ್ಲಿ, ಸ್ವಗತಗಳನ್ನು ಪ್ರಕಟಿಸುವ ಹತ್ತು ಪಾತ್ರಗಳು:**

**ಪ್ರವಾದಿಪತ್ನಿ ಆಯಿಷಾ ಬಿಂತಿ ಅಬೂಬಕರ್**

**ಆಯಿಷಾರ ಮೂವರು ಸವತಿಯರಾದ (ಪ್ರವಾದಿಪತ್ನಿಯರು)**

ಸೌದಾ ಬಿಂತಿ ಝುಮ್‌ಆ

ಉಮ್ಮು ಸಲಾಮಾ ಬಿಂತಿ ಅಬಿ ಉಮಯ್ಯಾ

ರಮ್ಲ ಬಿಂತಿ ಅಬೂಸುಫ್ಯಾನ್

**ಆಯಿಷಾರ ಮೂವರು ಮಲಮಕ್ಕಳಾದ (ಪ್ರವಾದಿಪುತ್ರಿಯರು)**

ಝೈನಬ್ ಬಿಂತಿ ಮುಹಮ್ಮದ್

ಕುಲ್ಸೂಮ್ ಬಿಂತಿ ಮುಹಮ್ಮದ್

ರುಖಯ್ಯಾ ಬಿಂತಿ ಮುಹಮ್ಮದ್

**ಆಯಿಷಾರ ತಾಯಿ**

ಉಮ್ಮು ರುಮಾನ್ ಬಿಂತಿ ಅಲ್ ಅಮೀರ್

**ಆಯಿಷಾರ ದಾಸಿ**

ಅಫೀರಾ ಬಿಂತಿ ಮುಅತ್ತಲ್

ಹಾಗೂ

ಅಫೀರಾಳ ತಾಯಿ ಅಕಿಯಾ ಬಿಂತಿ ಮಕ್ಸೂದ್

**ದಯವಿಟ್ಟು ಗಮನಿಸಿರಿ:**

ಇಸ್ಲಾಮ್ ಸಂಸ್ಕೃತಿಯಲ್ಲಿ ಪ್ರತಿಯೊಬ್ಬರನ್ನೂ ಹೆತ್ತ ತಂದೆಯ ಹೆಸರಲ್ಲಿ ಗುರುತಿಸಲಾಗುತ್ತದೆ. ಆದ್ದರಿಂದ, **ಆಯಿಷಾ ಬಿಂತಿ ಅಬೂಬಕರ್ ಎಂದರೆ** ಅಬೂಬಕರ್ ಎಂಬವರ ಪುತ್ರಿ ಆಯಿಷಾ ಎಂದೂ, ಉಮರ್ ಬಿನ್ ಖತ್ತಾಬ್ ಎಂದರೆ ಖತ್ತಾಬ್ ಎಂಬವರ ಪುತ್ರ ಉಮರ್ ಎಂದೂ ಓದಬೇಕು. **ಉಮ್ಮು ಸಲಾಮಾ ಎಂದರೆ** ಸಲಾಮಾ ಎಂಬವರ ತಾಯಿ ಎಂದು ತಿಳಿದುಕೊಳ್ಳಬೇಕು.

ದಯವಿಟ್ಟು ಪ್ರತಿಯೊಂದು ಸ್ವಗತದ ಆರಂಭದಲ್ಲಿ ಮತ್ತು **ಪ್ರತಿಯೊಂದು ಪುಟದ ಬಲನೆತ್ತಿಯಲ್ಲಿ** ಸೂಚಿಸಲಾಗಿರುವ **'ಸ್ವಗತಗಾರ್ತಿ'ಯ ಹೆಸರನ್ನು** ಗಮನಿಸಿಕೊಂಡು ಓದಬೇಕೆಂದು ವಿನಂತಿಸುವೆ.

## ಬರಿಯ ನೋಡಿದರೆ, ಅರಿವು ಕಾಣುವುದಿಲ್ಲ

–೧–

ಪ್ರವಾದಿ ಮುಹಮ್ಮದರ ಜೀವನಾಧಾರಿತ ಐತಿಹಾಸಿಕ 'ಓದಿರಿ' ಕಾದಂಬರಿಯನ್ನು 'ಸಶೇಷ' ಎಂದು ಕೊನೆಗೊಳಿಸಿದ್ದರಿಂದಾಗಿ ಬಹಳಷ್ಟು ಓದುಗರು ಮುಂದಿನ ಕಂತು ಯಾವಾಗ ಎಂದು ಪ್ರಶ್ನಿಸುತ್ತಿದ್ದರು. ಹಾಗೆಂದು ಈ 'ಉಮ್ಮಾ' ಅದರ ಮುಂದುವರಿಕೆಯೂ ಅಲ್ಲ; ಮತ್ತೊಂದು ಐತಿಹಾಸಿಕ ಕಾದಂಬರಿಯೂ ಅಲ್ಲ. ಅರೇಬಿಯಾದ ಕೆಲವು ಗೌರವಾನ್ವಿತ ಪುರಾತನ ಮಹಿಳೆಯರ ಕತೆಗಳಿಂದ ಪ್ರೇರಿತವಾದ ಕೇವಲ ಕಾಲ್ಪನಿಕ ಕೃತಿಯಿದು. ಇದು, ಒಬ್ಬರು 'ಉಮ್ಮಾ'ನ ಕತೆಯೂ ಅಲ್ಲ; ನಮ್ಮೆಲ್ಲರ ಅಜ್ಜ ಮುತ್ತಜ್ಜರ ಕಾಲದ ಎಲ್ಲ ಉಮ್ಮಂದಿರ ಕತೆಗಳೂ ಹೌದು.

'ಓದಿರಿ' ಕಾದಂಬರಿಯಲ್ಲಿ ನಾಲ್ಕಾರು ಹೆಣ್ಣು ಪಾತ್ರಗಳೂ ಇದ್ದವು ಎಂಬುದಕ್ಕೆ ಉದಾಹರಣೆಗಳಿದ್ದರೂ, ಆ ಬರಹದ ಬಹುಭಾಗವನ್ನು ಆವರಿಸಿಕೊಂಡಿದ್ದವರು ಪುರುಷರು. ಯೋಚನೆ, ಮಾತು, ಕೃತ್ಯ ಎಲ್ಲದರಲ್ಲೂ ಅವರದ್ದೇ ಮೇಲುಗೈ. ಪ್ರಸಕ್ತ ಇಪ್ಪತ್ತೊಂದನೆಯ ಶತಮಾನದಲ್ಲೂ ಆ ಸ್ಥಿತಿ ಬಹಳ ಬದಲಾಗಿಯೇನೂ ಇಲ್ಲ. ಆದರೂ, ಸ್ವಾಗತಾರ್ಹ ಸಂಗತಿಯೆಂದರೆ ಕೆಲವರಾದರೂ ಮಹಿಳೆಯರು ಅಲ್ಲೊಮ್ಮೆ, ಇಲ್ಲೊಮ್ಮೆ, ಆಗೊಮ್ಮೆ, ಈಗೊಮ್ಮೆ ತಮ್ಮದೇ ಮಾತುಗಳನ್ನು ಗಟ್ಟಿಯಾಗಿ ಪ್ರಕಟಿಸಲು ಶುರುಮಾಡಿದ್ದು.

ಹಾಗಾದರೆ, ಏಳನೆಯ ಶತಮಾನದ ಹೆಣ್ಣುಗಳು ಸ್ವಂತವಾಗಿ ಯೋಚನೆಯನ್ನೇ ಮಾಡಿದ್ದಿರಲಿಲ್ಲವೆ?

ತಮಗನ್ನಿಸಿದ್ದನ್ನು ಗಟ್ಟಿಯಾಗಿ ಹೇಳಿದ್ದೇ ಇಲ್ಲವೆ?

ಕನಿಷ್ಠ ತಮ್ಮ ತಮ್ಮ ಸ್ವಗತಗಳಲ್ಲಾದರೂ?

ಇದು, ಈ 'ಉಮ್ಮಾ' ಕಾದಂಬರಿಯ ವಸ್ತು.

ಇಪ್ಪತ್ತನೆಯ ಶತಮಾನಪೂರ್ವದ ಇತಿಹಾಸ ಪುಟಗಳನ್ನು ಅವಲೋಕಿಸಿದರೆ, ತಮ್ಮ ಐದನೆಯ ವಯಸ್ಸಿನಲ್ಲಿ ರಾಮಕೃಷ್ಣ ಪರಮಹಂಸರನ್ನು ಮದುವೆಯಾಗಿ ಹನ್ನೆರಡಾನಂತರ ಮನೆತುಂಬಿದ ದೇವಿ ಶಾರದಾ, ಎಂಟನೆಯ ವಯಸ್ಸಿಗೆ ಪ್ರವಾದಿ ಮುಹಮ್ಮದರನ್ನು ಮದುವೆಯಾಗಿ ಹತ್ತರಾನಂತರ ಗಂಡನ ಮನೆಸೇರಿದ ಆಯಿಷಾ, ಹನ್ನೆರಡನೆಯ ವಯಸ್ಸಿನಲ್ಲಿ ಇಂಗ್ಲೆಂಡ್'ನ ರಾಜ ಜಾನ್ ಜೊತೆ ಮದುವೆಯಾದ ಇಸಾಬೆಲ್ಲಾ, ಹದಿನಾಲ್ಕರ ವಯಸ್ಸಿನಲ್ಲಿ ಮೋಹನದಾಸ ಕರಮ್ ಚಂದ್ ಗಾಂಧಿಯನ್ನು ಮದುವೆಯಾದ ಕಸ್ತೂರಿ ಮೊದಲಾದ 'ಬಾಲಿಕಾವಧು'ಗಳ ಬಗ್ಗೆ ಯಾವುದೇ ಅಪಸ್ವರಗಳು ಕಾಣಿಸುವುದಿಲ್ಲ. ಅವೆಲ್ಲವೂ ಆ 'ತೊಟ್ಟಿಲಮದುವೆ ಕಾಲ'ದ ಸಹಜ ಸಂಗತಿಗಳೆಂದೇ ಭಾವಿಸಿ ಸುಮ್ಮನಾಗುತ್ತೇವೆ.

ಪ್ರವಾದಿಪತ್ನಿಯರಲ್ಲಿ ಮೂರನೆಯ ಪತ್ನಿ ಆಯಿಷಾ ಮಾತ್ರ ಕನ್ಯೆ, ಮಿಕ್ಕವರೆಲ್ಲ ಒಂದೋ, ಎರಡೋ, ಮೂರೋ ಮದುವೆಯಾಗಿ, ನಾಲ್ಕೋ, ಐದೋ ಮಕ್ಕಳ ಅಸಹಾಯಕ ವಿಧವೆ ತಾಯಂದಿರು ಎಂಬುದು ಗಮನಾರ್ಹ. ಆದರೂ, ಕಳೆದ ಶತಮಾನದಿಂದೀಚೆಗೆ ಬೇರೆ ಬೇರೆ ಕಾರಣಗಳಿಂದ ಪ್ರವಾದಿಯವರನ್ನು ವಿರೋಧಿಸುತ್ತಿರುವವರ ಹಲವು ವಾದಾಸ್ತ್ರಗಳಲ್ಲಿ ಬಹುಪತ್ನಿತ್ವದೊಂದಿಗೆ ಅವರ 'ಬಾಲಿಕಾವಧು' ಪ್ರಕರಣವೂ ಸೇರಿಕೊಂಡಿವೆ. ವಾಸ್ತವವೆಂದರೆ, ನಮ್ಮಜ್ಜಿಯಜ್ಜಿಯಂದಿರೆಲ್ಲ ಮದುವೆಯಾಗಿದ್ದದ್ದು, ಹತ್ತು ಹನ್ನೆರಡರ ಆಸುಪಾಸಿನ ವಯಸ್ಸಿನಲ್ಲೇ. ಉದಾಹರಿಸುವುದೇ ಆದರೆ, ೧೮೯೧ರ ಜನವರಿ ೯ ರಂದು ಆಗಿನ ಗವರ್ನರ್ ಸರ್ ಆಂಡ್ರ್ಯೂ ಸ್ಕೋಬಲ್, ಆಗ ಚಾಲ್ತಿಯಲ್ಲಿದ್ದ ಐ.ಪಿ.ಸಿ. ಸೆಕ್ಷನ್ ೩೭೫ ರನ್ವಯ, ಹೆಣ್ಣು ಮಕ್ಕಳ ಮದುವೆ ವಯಸ್ಸನ್ನು ೧೦ ರಿಂದ ೧೨ಕ್ಕೆ (೧೮ಕ್ಕೂ ಅಲ್ಲ!) ಏರಿಸಿದ್ದಾಗ, 'ಇದು ನಮ್ಮ ಧರ್ಮದ ಮೇಲೆ ಪ್ರಹಾರ' ಎನ್ನುತ್ತಾ ಬಾಲ ಗಂಗಾಧರ ತಿಲಕರ ನೇತೃತ್ವದಲ್ಲಿ ಪ್ರತಿಭಟಿಸಿದ್ದ ಪುರುಷೋತ್ತಮರು ನಾವು! ಹೋಗಲಿ ಬಿಡಿ; ಈ ಕಾದಂಬರಿ ವಸ್ತು 'ಬಾಲಿಕವಧು' ಅಲ್ಲ.

## –೨–

ಇಸ್ಲಾಮ್ ಧರ್ಮದ ಪುರಾತನ ಮಹಿಳೆಯರ 'ಕತೆ'ಗಳನ್ನು ಅಭ್ಯಸಿಸುತ್ತಿರುವಾಗ, ಹಿರಿಯ ವಿದ್ವಾಂಸರೊಬ್ಬರು ಕುತೂಹಲಕರ ವಾದವೊಂದನ್ನು ಮುಂದಿಟ್ಟಿದ್ದರು. ಇಸ್ಲಾಮ್ 'ಕತೆ'ಗಳನ್ನು ಓದುವವರು ಮೊದಲು ಗಮನಿಸಬೇಕಾದದ್ದು, ಇಸ್ಲಾಮ್ ಪ್ರತಿಪಾದಿಸಿದ್ದು ಪ್ರವಾದಿ ಯೇಸುಸ್ವಾಮಿಯ ಏಕದೇವನನ್ನಲ್ಲ; ಪ್ರವಾದಿ ಇಬ್ರಾಹೀಮರ





ಏಕದೇವನನ್ನು. ಯೇಸುಸ್ವಾಮಿಯ 'ಸ್ವರ್ಗಲೋಕದಲ್ಲಿರುವ ನಿರಾಕಾರಿ ತಂದೆಯು' ಸಿಕ್ಕಾಪಟ್ಟೆ ಕರುಣಾಳುವಾಗಿದ್ದರೆ; ಇಬ್ರಾಹೀಮರ ನಿರಾಕಾರಿ ಅಲ್ಲಾಹು ರಕ್ಷಕನಂತೆ ಶಿಕ್ಷಕನೂ ಹೌದು. ಭಾರತೀಯ ಪರಿಭಾಷೆಯಲ್ಲಿ ಅಲ್ಲಾಹು ನಿರಾಕಾರಿ ನಿಜ; ಆದರೆ ನಿರ್ಗುಣನಲ್ಲ; ಸಗುಣ. ದಕ್ಷಿಣ ಕನ್ನಡದ ಆಡುಭಾಷೆಯಲ್ಲಿ ಹೇಳುವಂತೆ, ನಂಬಿದವರಿಗಷ್ಟೇ 'ಇಂಬು' ಕೊಡುವವನು. ಯೇಸುಸ್ವಾಮಿಯನ್ನು ಸ್ವೀಕರಿಸಲೊಲ್ಲದ ಯೆಹೂದೀಯರನ್ನು ಓಲೈಸುವ ಇಸ್ಲಾಮ್ ವಿಸ್ತರಣಾತಂತ್ರದ ಭಾಗವೂ ಈ ಆಯ್ಕೆಯಲ್ಲಿದ್ದಿರಬಹುದು. ತಮ್ಮದೇ 'ಇಸ್ರಾಕ್' ವಂಶದಲ್ಲಿ ಹುಟ್ಟಿ ಬರಲಿರುವ ಪ್ರವಾದಿಗಾಗಿ ಕಾತರಿಸುತ್ತಿದ್ದ ಯೆಹೂದೀಯರು, ಇಸ್ಮಾಈಲರ ವಂಶದಲ್ಲಿ ಹುಟ್ಟಿದ ಪ್ರವಾದಿಯನ್ನು ನಿರಾಕರಿಸಿದ್ದೂ ಸಹಜವೇ.

ಇಂತಹ ಹತ್ತಾರು ಪುರುಷ ಧಾರ್ಮಿಕ ಅನುಸಂಧಾನಗಳ ನಡುವೆಯೇ ಹುಟ್ಟಿ ಬೆಳೆದು ತನ್ನ ಮಾತ್ರವಲ್ಲ, ತನ್ನಂತಹ ಎಲ್ಲ ಹೆಣ್ಣುಗಳ ಬಾಳು ಬೆಳಗಬಯಸಿದ ಆ ಪುರಾತನ ತಾಯಂದಿರ ನೋವು, ಪ್ರೀತಿ, ಸಹನೆ, ಘನತೆ, ಆತ್ಮಾಭಿಮಾನಗಳನ್ನು ಗೌರವಿಸುವ ಸಣ್ಣ ಪ್ರಯತ್ನ ಈ 'ಉಮ್ಮಾ' ಕಾದಂಬರಿ.

'ಓದಿರಿ'ಯ ಪ್ರಕಟಣಪೂರ್ವ ದಿನಗಳಲ್ಲಿ ಚರ್ಚಿಸುತ್ತಿದ್ದಾಗ, ಸಹಜವಾಗಿ ಆತಂಕ ವ್ಯಕ್ತಪಡಿಸುತ್ತಿದ್ದ ಇಸ್ಲಾಮ್ ಧರ್ಮಶಾಸ್ತ್ರ ಪಂಡಿತರು, 'ಓದಿರಿ'ಯನ್ನು ಕನ್ನಡದ ಓದುಗರು ಓದಿದ ರೀತಿಗೆ ಬೆರಗಾಗಿ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದರು. ಆದರೆ, ಈ 'ಉಮ್ಮಾ' ಬರೆಯಲು ಮತ್ತೊಮ್ಮೆ ಸಹಾಯ ಯಾಚಿಸಿದಾಗ ಸಿಟ್ಟಿಗೆದ್ದಿದ್ದರು. 'ಯಾವಾಗಲೂ ಪ್ರವಾಹದ ವಿರುದ್ಧವೇ ಈಜುವ ಹಟವೇಕೆ? ಅಥವಾ ಸ್ವಪ್ರಚಾರದ ಚಟವೆ?' ಎಂದೂ ಛೇಡಿಸಿದ್ದರು; ಎಚ್ಚರಿಸಿದ್ದರು. ತಾನೇ ಒಂದು ಪ್ರವಾಹವೆಂದು ನಂಬಿದವನಿಗೆ ಪ್ರವಾಹದ ವಿರುದ್ಧ ಈಜುವ ಪ್ರಸಂಗವೇ ಎದುರಾಗುವುದಿಲ್ಲ. ನಾಲ್ಕು ದಶಕಗಳಿಗೂ ಹಿಂದೆ ನನ್ನ ಮೊದಲ ಕತೆಯೊಂದಿಗೆ ನನ್ನ ಹೆಸರನ್ನೂ ಅಂಟಿಸಿಕೊಂಡಿದ್ದಾಗಲೇ, 'ಪ್ರಚಾರ ಬಯಸದ ಪ್ರತಿಭಾವಂತ' ಎಂಬ ನಿಷ್ಕಾಮ ಹೇಳಿಕೆಯ ಹಕ್ಕನ್ನು ಕಳೆದುಕೊಂಡಿದ್ದೇನೆ.

ಅಧ್ಯಾತ್ಮ, ತತ್ವಶಾಸ್ತ್ರ, ತರ್ಕಶಾಸ್ತ್ರ, ಧರ್ಮಶಾಸ್ತ್ರಗಳ ಗಂಭೀರ ಅಭ್ಯಾಸಿಗಳಲ್ಲದವರು ಧಾರ್ಮಿಕ ವಸ್ತುಗಳನ್ನಾಧರಿಸಿ ಪ್ರಕಟವಾಗಿರುವ, ಅದರಲ್ಲೂ ಮುಖ್ಯವಾಗಿ ಧಾರ್ಮಿಕ ಸಂಸ್ಥೆಗಳಿಂದಲೇ ಪ್ರಕಟವಾಗುವ ಗ್ರಂಥಗಳನ್ನು ಓದುವುದಕ್ಕೆ ಹೆಚ್ಚು ಆಸಕ್ತಿ ವಹಿಸುವುದಿಲ್ಲ. ಅದರಲ್ಲೂ, ಧಾರ್ಮಿಕವಾಗಿ ಪೂರ್ವಾಗ್ರಹ ಪೀಡಿತರಾಗಿರುವ ನಾವು ಹುಟ್ಟಿ ಬೆಳೆದ ಜಾತಿ, ಧರ್ಮಕ್ಕೆ ಸಂಬಂಧಿಸಿದ್ದಲ್ಲದ ಪುಸ್ತಕಗಳು ಕಣ್ಣಿಗೆ ಬಿದ್ದಾಗಲೂ ಎತ್ತಿಕೊಳ್ಳುವುದು ಅಪರೂಪ. ಈ ಕಾರಣಗಳಿಂದಾಗಿ, ಕನ್ನಡದ ಓದುಗರಿಗೆ ಹಿಂದೂ ಪೌರಾಣಿಕ ಮತ್ತು ಐತಿಹಾಸಿಕ ನಾಯಕರುಗಳ ಬಗ್ಗೆ ಗೊತ್ತಿರುವಷ್ಟು ಕತೆ–ಸಂಕೇತ–ರೂಪಕ–ನುಡಿಗಟ್ಟುಗಳು, ಕ್ರೈಸ್ತ ಹಾಗೂ ಇಸ್ಲಾಮ್ ನಾಯಕರುಗಳ ಬಗ್ಗೆ ಗೊತ್ತಾಗಲಿಲ್ಲ.

ಕನ್ನಡದಲ್ಲಿ ಈ ಬಗೆಯ ಕೃತಿಗಳ ಸಂಖ್ಯೆ ಹೆಚ್ಚಾದಾಗ ಈ ಸಂಕಷ್ಟ ದೂರವಾಗಬಹುದೇನೊ.

ನಾಲ್ಕಾರು ಸಾವಿರ ವರ್ಷಗಳ ಹಿಂದೆ ನಡೆದಿತ್ತು ಎನ್ನಲಾಗಿರುವ ನಮ್ಮ ನಾಡಿನ ಬಹುಶ್ರುತ ಪುರಾಣಕತೆಗಳಾದ ಸ್ಕಂದ ಪುರಾಣದ ಬ್ರಹ್ಮ, ಬ್ರಹ್ಮವೈವರ್ತ ಪುರಾಣದ ವಿಷ್ಣು ಮತ್ತು ಶಿವ, ಬ್ರಹ್ಮಪುರಾಣದ ವಾಸುದೇವ, ವಿಷ್ಣುಪುರಾಣದ ಕೃಷ್ಣ, ವಾಲ್ಮೀಕಿ ರಾಮಾಯಣದ ದಶರಥ, ವ್ಯಾಸಭಾರತದ ದ್ರೌಪದಿ ಮೊದಲಾದವರು ಇಂದೂ ನಮ್ಮನ್ನು ಆತ್ಮೀಯವಾಗಿ ಮಾತನಾಡಿಸುತ್ತಿರುವುದು, ಆ ಅನನ್ಯ ಪುರಾಣ ಕತೆಗಳ ಮಹಾತ್ವಾಕಾಂಕ್ಷೆಗಳಿಂದಾಗಿಯೇ ವಿನಃ ಆ ಕತೆಗಳ ನಾಯಕ ನಾಯಕಿಯರ ಬಹುಪತ್ನಿತ್ವ ಅಥವಾ ಬಹುಪತಿತ್ವದ ಕಾರಣಗಳಿಂದ ಅಲ್ಲ. ಆದ್ದರಿಂದ, ಏಳನೆಯ ಶತಮಾನದಲ್ಲಿ ಹೀಗೂ ನಡೆದಿರಬಹುದೆಂದು ಕಲ್ಪಿಸಿಕೊಂಡು ಬರೆಯಲಾಗಿರುವ ಈ 'ಉಮ್ಮಾ' ಕೃತಿಯನ್ನು, ಇಪ್ಪತ್ತೊಂದನೆಯ ಶತಮಾನದಲ್ಲಿರುವ ನಮ್ಮ 'ಬಯಕೆ'ಯಂತೆ ಓದದೆ, ಆ ಕಾಲದ ಅವರ 'ಕಣ್ಣಿ'ನಿಂದ, ಅದರಲ್ಲೂ ನಮ್ಮ ನಾಡಿನ ಉಮ್ಮಂದಿರಾದ ಸೀತಾ, ಸಾವಿತ್ರಿ, ಅಹಲ್ಯಾ, ತಾರಾ, ಮಂಡೋದರಿಯರ 'ಕಲ್ಪಿತ ಕತೆ'ಗಳಂತೆಯೇ ಓದಬೇಕೆಂದು ಕೋರುವೆ.

ಅಪರಿಚಿತ ಪ್ರದೇಶದ ಅಪರಿಚಿತರ ಬಗ್ಗೆ, ಪರಿಚಿತ ಪದಗಳೊಂದಿಗೆ ಬರೆಯುವಾಗ ಕೆಲವು ಮಿತಿಗಳನ್ನು ಎದುರಿಸಬೇಕಾಗುತ್ತದೆ.

ಉದಾಹರಣೆಗೆ, 'ತೊಟ್ಟ ಬಾಣವನ್ನು ಮತ್ತೊಮ್ಮೆ ತೊಡಲಾರೆ' ಎಂಬ ನಾಲ್ಕು ಪದಗಳನ್ನು ಓದುತ್ತಿರುವಂತೆಯೇ ನಾವು ಖಾಂಡವ ದಹನ, ಶ್ರೀಕೃಷ್ಣ, ಕುಂತಿ, ಹಾವು, ಬಾಣ, ಅರ್ಜುನ, ಕರ್ಣ ಎಲ್ಲರನ್ನೂ, ಎಲ್ಲವನ್ನೂ ಕ್ಷಣಮಾತ್ರದಲ್ಲಿ ನೆನಪಿಸಿಕೊಳ್ಳಬಲ್ಲೆವು; ಮಾತ್ರವಲ್ಲ, ಆ ಪದಪುಂಜವನ್ನು ಸಂದರ್ಭಸಹಿತವಾಗಿ ವಿವರಿಸಲೂ ಶಕ್ತರು. 'ಲಕ್ಷ್ಮಣ ರೇಖೆ' ಎಂಬ ಪದವು ನಮಗೆ ಇಡೀ ರಾಮಾಯಣದ ಕತೆಯನ್ನು ನೆನಪಿಸಬಲ್ಲುದು. ಆದರೆ, ಇಸ್ಲಾಮ್ ಇತಿಹಾಸದ ಆಳವನ್ನು ಅರಿಯದ ಓದುಗರಿಗೆ, ಈ ಕಾದಂಬರಿಯಲ್ಲಿ ಬರುವ 'ಕಂದಕ' ಎಂಬ ಪದವನ್ನು ಓದುವಾಗ, ಅದು ಹಿಂದೂ ಪುರಾಣದ 'ಕುರುಕ್ಷೇತ್ರ'ದಂತೆಯೇ ಇಸ್ಲಾಮ್ ಇತಿಹಾಸದಲ್ಲಿ ಬಹುಪ್ರಸಿದ್ಧವಾಗಿರುವ 'ಕಂದಕ ಯುದ್ಧ'ವನ್ನು ನೆನಪಿಸಲಾರದು. ಅಂತೆಯೇ ಅವಳು 'ರತಿ'ಯಂತೆ ಇದ್ದಳು ಎಂದೋ, ಅವನ ಮಾತು 'ಹಳಿ'ತಪ್ಪಿತ್ತು, ಅವಳು 'ಗೇಟು' ತೆರೆದಳು ಎಂದೋ ಬರೆಯುವಂತಿಲ್ಲ. ಯಾಕೆಂದರೆ, 'ರತಿ' ಪದದ ಬಳಕೆ ಆ ಸಂಸ್ಕೃತಿಗೆ ಹೊಂದದಿದ್ದರೆ, 'ಹಳಿ' ಆ ಕಾಲದಲ್ಲಿ ಇದ್ದಿರಲಿಲ್ಲ, 'ಗೇಟು' ಎಂಬ ಪದ ಕೂಡಾ ಕಾರು–ಬಸ್ಸು ಲೈಟ್–ಫ್ಯಾನುಗಳಂತೆ ಆ ಕಾಲಕ್ಕೆ ಹೊಂದುವ ಕನ್ನಡ ಪದವಾಗುವುದಿಲ್ಲ. ಅವಳು ನೋವಿನಿಂದ 'ಮುಕ್ತಿ ಪಡೆದಳು' ಎನ್ನುವಲ್ಲಿ, ನೋವಿನಿಂದ 'ಪಾರಾದಳು' ಎಂದೇ





ಬರೆಯಬೇಕಾಗುತ್ತದೆ. ಇಸ್ಲಾಮ್ ಸಂಸ್ಕೃತಿಯಲ್ಲಿ ಸರ್ವೇ ಸಾಧಾರಣವಾಗಿರುವ 'ಬದರ್', 'ಯಸ್ರಿಬ್' ಇತ್ಯಾದಿ ಬಲು ಪ್ರಸಿದ್ಧ ಪದಗಳನ್ನು ಉಪಮೆಗಳಾಗಿ, ರೂಪಕಗಳಾಗಿ ಬಳಸಲಾಗದೆ 'ನೇರ–ಸರಳ–ವಾಕ್ಯ–ಸೂತ್ರ'ಕ್ಕೆ ಬರಹವನ್ನು ಬಲಿ ಕೊಡಲೇಬೇಕಾಗುತ್ತದೆ. ಬಲಿ ಕೊಟ್ಟಿರುವೆ.

'ಬಾಲಿಕಾವಧು'ವಾಗಿಯೇ ನನ್ನ ಅಬ್ಬನ ಮನೆಗೆ ಬಂದಿದ್ದ ನನ್ನ ಅಮ್ಮನನ್ನು ನಾನು ಕರೆಯುತ್ತಿದ್ದದ್ದು 'ಉಮ್ಮಾ' ಎಂದು. ಈ ಕಾದಂಬರಿಯನ್ನು ನನ್ನ ಉಮ್ಮನಂತಹ ಹೆಣ್ಣುಗಳ ಎಣೆಯಿಲ್ಲದ ಪ್ರೀತಿ, ಅಗಣಿತ ಮಮತೆ, ಅನಿವಾರ್ಯ ಪ್ರೇಮ, ಅಸಹಾಯಕ ನೋವು, ಅವ್ಯಕ್ತ ಸ್ವಾಭಿಮಾನ, ಘನತೆ ಗೌರವಗಳ ಗತಿಬಿಂಬವಾಗಿ ರೂಪಿಸಲು ಪ್ರಯತ್ನಿಸಿರುವೆ. 'ಓದಿರಿ'ಯಂತೆಯೇ ಈ 'ಉಮ್ಮಾ' ಕೂಡ ಒಂದು 'ಅಪರಿಪೂರ್ಣ' ಕಾದಂಬರಿ. ಯಾಕೆಂದರೆ, ಪರಿಪೂರ್ಣವಾಗಿರುವ ಯಾವುದೂ ಭೂಮಿಯ ಮೇಲೆ ಉಳಿಯುವುದಿಲ್ಲ.

–೨–

ಇವಿಷ್ಟು ಪ್ರಾಸ್ತಾವಿಕ ಮಾತುಗಳನ್ನು ಬರೆದು ಹೆಚ್ಚುಕಮ್ಮಿ ಮೂರು ವರ್ಷಗಳೇ ಆಗುತ್ತಾ ಬಂದಿದ್ದವು.

ಕಾದಂಬರಿಯೊಂದನ್ನು ಬರೆಯುವ ಮುನ್ನ ಪ್ರಸ್ತಾವನೆಯ ಮಾತುಗಳನ್ನು ಬರೆದಿರಿಸಿಕೊಳ್ಳುವುದು ನನ್ನ ಅಭ್ಯಾಸ. ಅದು ಕೃತಿರಚನೆಗೆ ಒಂದು ಬಗೆಯ ದಿಕ್ಸೂಚಿಯೂ ಆಗುತ್ತಿತ್ತು. ಆದರೆ, ಈ ಬಾರಿ ಕುಲಾವಿ ತಯಾರಾಗಿದ್ದರೂ ಕೂಸು ಹುಟ್ಟಲು ನಿರಾಕರಿಸುತ್ತಿತ್ತು. ಹದಿನೈದು ಶತಮಾನಗಳ ಹಿಂದೆ ಬದುಕಿದ್ದ ಪ್ರವಾದಿಯವರ ಬದುಕು ಹೇಗಿತ್ತು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವ ಗ್ರಂಥಗಳು, ಸಾವಿರ ಸಾವಿರ ಸಂಖ್ಯೆಗಳಲ್ಲಿ ಸಿಗುತ್ತವೆ. ಆದರೆ, 'ಪ್ರವಾದಿಪತ್ನಿ'ಯರ ಬದುಕನ್ನು 'ಇದೇ ಅಂತಿಮಸತ್ಯ' ಎಂಬಂತೆ ತಿಳಿಸುವ ಗ್ರಂಥಗಳ ಸಂಖ್ಯೆ ತೀರಾ ಕಡಿಮೆ. ಸತ್ಯಕ್ಕೆ ಸಮೀಪವಿದೆ ಎಂದು ನಂಬಬಹುದಾದ ಗ್ರಂಥಗಳಲ್ಲೂ ಹೆಚ್ಚಿನವು, ಒಂದೋ ಅವರನ್ನು ಆರಾಧಿಸುತ್ತಾ ಅತಿ ಎತ್ತರದ ಪೀಠಗಳಲ್ಲಿ ಕುಳ್ಳಿರಿಸಿದ್ದರೆ, ಮಿಕ್ಕ ಕೆಲವು ಗ್ರಂಥಗಳು ಅವರನ್ನು ಅವಮಾನಿಸಲೆಂದೇ ಬರೆದಂಥವುಗಳು. ಒಟ್ಟಿನಲ್ಲಿ ನಾನು ಕಾಣಬಯಸಿರುವ 'ಉಮ್ಮಾ'ಗಳನ್ನು ನನಗೆ ತಿಳಿದಿರುವ ಭಾಷೆಗಳಲ್ಲಿ, ನನಗೆ ತೃಪ್ತಿಯಾಗುವಂತೆ ಕಾಣಿಸಬಲ್ಲ ದಾಖಲೆಗ್ರಂಥಗಳು ಸಿಗುತ್ತಿರಲಿಲ್ಲ.

ಆ ದಿನಗಳಲ್ಲಿ ನಿಜವಾಗಿ ನಡೆದದ್ದು ಏನು ಎಂಬುದನ್ನು ಪತ್ತೆ ಮಾಡದೆ ಕಾದಂಬರಿ ಬರೆಯುವುದಾದರೂ ಹೇಗೆ?

ಪತ್ತೇದಾರಿ ಕಾದಂಬರಿಯಂತೆ, 'ಮಧ್ಯರಾತ್ರಿಯ ಹೊತ್ತು. ಎಂದಿನಂತೆ ಮುತ್ತುಪ್ಪಾಡಿಯ ಬೀದಿದೀಪಗಳೆಲ್ಲ ಆರಿವೆ. ಸುತ್ತಲೂ ಕರಿಗತ್ತಲು. ದೂರದಲ್ಲೆಲ್ಲೋ ನಾಯಿಯೊಂದು ವಿಕಾರವಾಗಿ ಊಳಿಡುವುದು ಕ್ಷೀಣವಾಗಿ ಕೇಳಿಸುತ್ತಿದೆ. ಪತ್ತೇದಾರ ಪುರುಷೋತ್ತಮನು ತನ್ನ ಓವರ್ ಕೋಟ್ ಧರಿಸಿ ತನ್ನ ಸಹಾಯಕ ರಾಮನಾಥ ನೊಂದಿಗೆ.....' ಈ ಮಾದರಿಯಲ್ಲಿ ಬರೆದು, ಕೆಲವು ಪುಟಗಳನ್ನು ದಾಟುವಷ್ಟರಲ್ಲೇ ಮುಗ್ಗರಿಸುತ್ತಿದ್ದೆ. ಬರೆಯುವುದು, ಬರೆದದ್ದು ಸರಿಯಾಗಲಿಲ್ಲವೆಂದು ಅಳಿಸಿ ಹಾಕುವುದು, ಇವುಗಳಲ್ಲೇ ಮೂರು ವರ್ಷಗಳೇ ವ್ಯರ್ಥವಾಗಿದ್ದರೂ, ನಲುವತ್ತು ಪುಟಗಳನ್ನೂ ಬರೆಯಲಾಗಿದ್ದಿರಲಿಲ್ಲ.

ಇಂದೂ ಅದೇ ಆಯಿತು. ಏನೇನು ಮಾಡಿದರೂ ಕತೆ ಮುಂದುವರಿಯುತ್ತಿರಲಿಲ್ಲ.

ರೋಸಿಹೋಗಿ ಕಂಪ್ಯೂಟರ್ ಆಫ್ ಮಾಡಿದೆ.

ಪಕ್ಕದಲ್ಲೇ ಬಿದ್ದಿದ್ದ ಪುಸ್ತಕವನ್ನೆತ್ತಿಕೊಂಡು, ಈಗಾಗಲೇ ಸಾಕಷ್ಟು ಬಾರಿ ಓದಿದ್ದ ಕತೆಯನ್ನೇ ಮತ್ತೊಮ್ಮೆ ಓದತೊಡಗಿದೆ.

ಆ ಕತೆಯ ಸಾರಾಂಶ ಒಟ್ಟು ಇಷ್ಟೆ:

'ಮಧ್ಯರಾತ್ರಿಯೊಂದರಲ್ಲಿ ಪ್ರವಾದಿ ಮುಹಮ್ಮದರ ಮನೆಯೊಳಗೆ ತೂರಿಕೊಂಡಿದ್ದ ದೇವದೂತನೊಬ್ಬ, ಗಾಢ ನಿದ್ರೆಯಲ್ಲಿದ್ದ ಪ್ರವಾದಿಯವರನ್ನು ಎತ್ತಿಕೊಂಡು ಮಕ್ಕಾದ ಕಅಬಾ ಮಂದಿರದ ಪಕ್ಕದಲ್ಲಿರುವ, 'ಝಮ್ ಝಮ್' ಬಾವಿಯ ಬಳಿಗೆ ಹೋಗುವನು. ಅಲ್ಲಿ ಪ್ರವಾದಿ ಮುಹಮ್ಮದರನ್ನು ನೆಲದ ಮೇಲೆ ಮಲಗಿಸಿ ಅವರೆದೆ ಸೀಳಿ, ಹೃದಯವನ್ನು ಹೊರತೆಗೆದು ಅದರೊಳಗೆ ಜ್ಞಾನ, ಸಂಯಮ, ಬುದ್ಧಿವಂತಿಕೆ, ವಿಶ್ವಾಸ ಮತ್ತು ಶ್ರದ್ಧೆಗಳನ್ನು ತುಂಬಿಸಿ, ಹೃದಯವನ್ನು ಮತ್ತದೇ ಜಾಗದಲ್ಲಿ ಇರಿಸುವನು. ಆನಂತರ, ಕತ್ತೆಗಿಂತ ತುಸು ದೊಡ್ಡದೂ, ಕುದುರೆಗಿಂತ ತುಸು ಚಿಕ್ಕದೂ ಆಗಿರುವ 'ಬುರಾಕ್' ಎಂಬ ವಿಚಿತ್ರ ಪ್ರಾಣಿಯ ಮೇಲೆ ಅವರನ್ನು ಕುಳ್ಳಿರಿಸಿ ಮದೀನಾದತ್ತ ಹಾರಿಸಿಕೊಂಡು ಹೋಗುವನು. ಅಲ್ಲಿಂದ ಹೊರಟ ಅವರಿಬ್ಬರೂ ಪುರಾತನ ಕಾಲದಲ್ಲಿ ಪ್ರವಾದಿ ಮೂಸಾರನ್ನು ಅಲ್ಲಾಹು ಮಾತನಾಡಿಸಿದ್ದ 'ಸೀನಾಯ್' ಪರ್ವತವನ್ನು ದಾಟಿ, ಪ್ರವಾದಿ ಈಸಾರವರನ್ನು ಅಲ್ಲಾಹು ಮಾತನಾಡಿಸಿದ್ದ ಬೈತುಲ್ಲಹಮ್'ಗೆ ತಲುಪುವರು.

ಪ್ರಯಾಣ ಮುಂದುವರಿಸಿದವರಿಗೆ ದಾರಿಯಲ್ಲಿ, 'ತಮಗೆ ಇಲ್ಲಿ ಸ್ವಾಗತವಿದೆ' ಎಂದು ಯಾರೋ ಒಬ್ಬನು ಆಹ್ವಾನಿಸುವನು, ಅದು ಯೆಹೂದೀಯರ ಕರೆ ಎಂಬುದಾಗಿ ದೂತನು ಎಚ್ಚರಿಸುವನು. ಇನ್ನೂ ಮುಂದೆ ಸಾಗಿದಾಗ, 'ತಮಗೆ ಇಲ್ಲಿ ಸ್ವಾಗತವಿದೆ' ಎಂದು ಇನ್ನೊಬ್ಬ ಕೂಗುವನು. ಅದು ಕ್ರೈಸ್ತರ ಕರೆಯೆಂಬುದಾಗಿ





ದೂತನು ತಿಳಿಸುವನು. ಇನ್ನಷ್ಟು ಮುಂದಕ್ಕೆ ಸಾಗಿದಾಗ ರೂಪಸಿಯಾದ ಕನ್ಯೆಯೊಬ್ಬಳು ಎದುರಾಗಿ, 'ನನ್ನ ಜೊತೆಗೆ ಬನ್ನಿರಿ' ಎಂದು ಆಹ್ವಾನಿಸುವಳು. ಅದು ಇಹಲೋಕದ ಕರೆ ಎಂದು ದೂತನು ಎಚ್ಚರಿಸುವನು. ಮತ್ತಷ್ಟು ದೂರ ಹಾರಿದಾಗ ಹಣ್ಣು ಹಣ್ಣು ಮುದುಕಿಯೊಬ್ಬಳು ಅದೇ ರೀತಿಯಲ್ಲಿ 'ತಮಗೆ ಸ್ವಾಗತವಿದೆ' ಎನ್ನುವಳು. ಇಹಲೋಕದಲ್ಲಿ ಉಳಿದಿರುವ ಆಯುಸ್ಸಿನ ಸಂಕೇತ ಅವಳು ಎಂದು ದೂತನು ವಿವರಿಸುವನು. ಮಗದಷ್ಟು ದೂರಕ್ಕೆ ಹೋದಾಗ ಸಾಮಾನ್ಯ ವ್ಯಕ್ತಿಯೊಬ್ಬ 'ನನ್ನ ಜೊತೆಗಾದರೂ ಬನ್ನಿರಿ' ಎಂದು ಕರೆಯುವನು. ಅದು ದಾರಿ ತಪ್ಪಿಸುವ ಸೈತಾನನ ಕರೆಯೆಂಬುದಾಗಿ ದೂತನು ಎಚ್ಚರಿಸುವನು.

ಮುಂದಿನ ಪ್ರಯಾಣದಲ್ಲಿ, ತಮ್ಮ ನಾಲಗೆ ಮತ್ತು ತುಟಿಗಳನ್ನು ಕತ್ತರಿಸಿಕೊಳ್ಳು ತ್ತಿರುವರು ಕಾಣಿಸಿದಾಗ, ಅವರನ್ನು ಹೊಣೆಗೇಡಿ ಪ್ರವಚನಕಾರರಾಗಿದ್ದವರು ಎಂದು ಪರಿಚಯಿಸುವ ದೂತನು, ತಮ್ಮದೇ ಮಾಂಸಗಳನ್ನು ಕತ್ತರಿಸಿ ತಿನ್ನುವವರನ್ನು ಇತರರ ಬಗ್ಗೆ ವ್ಯಂಗ್ಯವಾಡಿದ್ದವರೆಂದೂ, ಉಗುರುಗಳಿಂದ ದೇಹವಿಡೀ ಪರಚಿಕೊಳ್ಳುತ್ತಿರು ವವರನ್ನು ಬೆನ್ನ ಹಿಂದೆ ಚಾಡಿ ಹೇಳುತ್ತಿದ್ದವರೆಂದೂ, ಬೆಂಕಿಯನ್ನೇ ತಿನ್ನುತ್ತಿರುವ ವರನ್ನು ಅನಾಥರ ಸೊತ್ತುಗಳನ್ನು ಕಬಳಿಸಿದ್ದವರೆಂದೂ, ಕಣ್ಣು, ಮೂಗು, ಬಾಯಿ, ಕಿವಿಗಳ ಎಡೆಯಿಂದ ಹಾವುಗಳು ಇಣುಕುತ್ತಿರುವವರನ್ನು ಬಡ್ಡಿ ವ್ಯಾಪಾರಿಗಳಾಗಿದ್ದ ವರೆಂದೂ, ಒಳ್ಳೆಯ ಮಾಂಸದ ಬಟ್ಟಲು ಎದುರಿಗಿದ್ದರೂ ಪಕ್ಕದಲ್ಲಿಟ್ಟಿದ್ದ ಕೊಳೆತ ಮಾಂಸವನ್ನು ಚಪ್ಪರಿಸುತ್ತಿರುವವರನ್ನು ಪರಪುರುಷ, ಪರಸ್ತ್ರೀಯರ ಜೊತೆಗೆ ಕಾಮದಾಟವಾಡಿದ್ದವರೆಂದೂ ಪರಿಚಯಿಸುವನು.

ಬಹಳ ದೂರ ಸಾಗಿದಾಗ, ವಿಶಾಲವಾದ ಹಸಿರು ಬಯಲಲ್ಲಿ ಬೆಳೆ ಕೊಯ್ಯುತ್ತಿರುವರು, ಕೊಯ್ದಷ್ಟೂ ಫಸಲು ಅಕ್ಷಯವಾಗುತ್ತಿರುವುದನ್ನು ಗಮನಿಸಿದ ಪ್ರವಾದಿಯವರು ಅಚ್ಚರಿ ವ್ಯಕ್ತಪಡಿಸಿದಾಗ, ಅವರೆಲ್ಲರೂ ಭೂಮಿಯ ಮೇಲೆ ಅಲ್ಲಾಹುವಿನ ಮಾರ್ಗದಲ್ಲಿ ನಡೆದಿದ್ದವರು ಎಂದು ದೇವದೂತ ವಿವರಿಸುವನು.

ಅವರಿಬ್ಬರೂ ಅಲ್ಲಿಂದ ಪ್ರಯಾಣ ಮುಂದುವರಿಸಿ ಬೈತುಲ್ ಮಕ್ದಿಸ್ ತಲುಪುವರು. ಈ ಹಿಂದೆ ಅಲ್ಲಾಹು ಭೂಮಿಗೆ ಕಳುಹಿಸಿದ್ದ ಎಲ್ಲ ಪ್ರವಾದಿಗಳೂ ಅಲ್ಲಿ ನಮಾಜಿಗೆ ಸಿದ್ಧರಾಗಿ ನಿಂತಿದ್ದರು. ಆ ನಮಾಜಿನ ನೇತೃತ್ವವನ್ನು ಪ್ರವಾದಿ ಮುಹಮ್ಮದರು ವಹಿಸುವರು. ಆ ಬಳಿಕ ಪ್ರವಾದಿಯವರು 'ಮಿಹ್ರಾಜ್' ಎಂಬ ಏಣಿಯೇರುತ್ತಿರುವಾಗ, ಪೂರ್ವ ಪ್ರವಾದಿಗಳಾದ ಆದಮರು, ಯಹ್ಯಾರವರು, ಈಸಾರವರು, ಯೂಸುಫರು, ಇದ್ರೀಸರು, ಹಾರೂನರು, ಮೂಸಾರವರು ಮತ್ತು ಎಲ್ಲರಿಗಿಂತ ಕೊನೆಯವರಾಗಿ ಪ್ರವಾದಿ ಇಬ್ರಾಹೀಮರು ಭೇಟಿಯಾಗಿ ಮಾತನಾಡಿಸುವರು. ಆ ಬಳಿಕ...,

ಹೀಗೆ ಮುಂದುವರಿದಿತ್ತು ನಾನು ಓದಿದ್ದ ಆ ಕತೆ.

ರಾತ್ರಿ ಮೂರು ದಾಟಿದೆಯೆಂದು ಅಲಾರಾಂ ಎಚ್ಚರಿಸಿದಾಗ, ಓದುವುದನ್ನು ನಿಲ್ಲಿಸಿ ಕಾಲುಗಳನ್ನು ತೊಳೆದುಕೊಂಡು ಹಾಸಿಗೆಯಲ್ಲಿ ಬಿದ್ದುಕೊಂಡೆ. ಇನ್ನೇನು ನಿದ್ರೆ ಬಂದೇ ಬಿಟ್ಟಿತು ಎಂದುಕೊಳ್ಳುತ್ತಿರುವಾಗ, ಯಾರೋ ನನ್ನ ತಲೆ ಸವರುತ್ತಿರುವಂತೆ ಭಾಸವಾಯಿತು!

ಅಚ್ಚರಿಯಿಂದ ಕಣ್ಣು ತೆರೆದು ನೋಡಿದರೆ, ಹೆಂಡತಿ ಗಾಢ ನಿದ್ರೆಯಲ್ಲಿ ಮೈಮರೆತಿರುವುದು ಬೆಡ್ ಲಾಂಪಿನ ಮಂದ ಬೆಳಕಿನಲ್ಲಿ ಕಾಣಿಸಿತ್ತು.

ಹಾಗಾದರೆ ಅವಳಲ್ಲ!

ಕೋಣೆಯೊಳಗೆ ಮೂರನೆಯವರಾರೋ ಇದ್ದಾರೆಂಬ ಅನುಮಾನ ಮೂಡಿತ್ತು.

ಆದರೆ, ಯಾರೂ ಕಾಣಿಸಲಿಲ್ಲ!

ಇವೆಲ್ಲ ನನ್ನ ಭ್ರಮೆಯೂ ಇರಬಹುದೆಂದು ಯೋಚಿಸಿ ಮತ್ತೆ ಹೊದ್ದು ಮಲಗಿದೆ.

* * *

*‘ಬಾ.., ನನ್ನ ಜೊತೆ ಹೊರಡು. ನಿನ್ನ ಬರವಣಿಗೆಗೆ ನಾನು ಸಹಾಯ ಮಾಡುವೆ. ನೀನು ಬಯಸುವ ಪಾತ್ರಗಳನ್ನು ನಾನು ಕಾಣಿಸುವೆ.’*

*ಕಿವಿಯೊಳಗೆ ಯಾರೋ ಪಿಸುಗುಟ್ಟಿದಂತೆ ಕೇಳಿಸಿದಾಗ ನಾನು ಬೆಚ್ಚಿ ಬಿದ್ದು ಕಣ್ಣು ತೆರೆದಿದ್ದೆ!*

*ಸುಮಾರು ಸಾವಿರದ ಐನೂರು ವರ್ಷಗಳಿಗೂ ಹಿಂದೆಯೇ ತೀರಿಕೊಂಡಿರು ವವರನ್ನು ಕಾಣಿಸುತ್ತೇನೆ ಎನ್ನುತ್ತಿರುವ ಇವನಾರು?*

*ರೂಪವಿಲ್ಲದ, ಬಣ್ಣವಿಲ್ಲದ ಅಲ್ಲಾಹು ಇದುವರೆಗೆ ಯಾರಿಗೂ ನೇರವಾಗಿ ಸಹಾಯ ಮಾಡಿದ್ದ ಬಗ್ಗೆ ದಾಖಲೆ ಇಲ್ಲ. ಹಾಗೇನಾದರೂ ಯಾರಾದರೊಬ್ಬರಿಗೆ ಸಹಾಯ ಮಾಡಲು ಅವನು ಬಯಸಿದರೆ, ತನ್ನ ದೂತರುಗಳ ಮೂಲಕ ಸಹಾಯ ಮಾಡುತ್ತಿದ್ದನೆಂದು ಓದಿದ್ದೆ. ಹಾಗಾದರೆ, ಕಿವಿಯೊಳಗೆ ಪಿಸುಗುಟ್ಟುತ್ತಿರುವವನು ನನಗೆ ಸಹಾಯ ಮಾಡಲೆಂದು ಅಲ್ಲಾಹುವೇ ಕಳುಹಿಸಿರುವ ದೂತನಾಗಿದ್ದಿರಬಹುದೆ? ದೂತನಾಗಿದ್ದರೆ ಒಳ್ಳೆಯದೇ ಆಯಿತು. ಒಡೆಯರಿಗಿಂತ ಅವರ ಸೇವಕರ ಜೊತೆ ಮಾತನಾಡುವುದು ಸುಲಭ. ಸ್ವಲ್ಪ ಸಲಿಗೆಯಿಂದಲೇ ಮಾತನಾಡಬಹುದು.*

*‘ನೀನು ಅಲ್ಲಾಹುವೇ ಅಥವಾ ಅವನು ಕಳುಹಿಸಿದ ದೂತನೆ?’*

*‘ಆಯ್ಕೆ ನಿನ್ನದು’ ಎಂದಿದ್ದ ಅವನು.*

*‘ದೂತ ಎಂದುಕೊಳ್ಳಲೆ?’*





*“ಆಯ್ಕೆ ನಿನ್ನದು’ ಅವನು ನಕ್ಕಂತೆ ಕೇಳಿಸಿತ್ತು.*

*‘ಹೆಸರನ್ನಾದರೂ ತಿಳಿದುಕೊಳ್ಳಬಹುದೆ?*

*‘ದಾರಿ ತಿಳಿದವನು ಅಂದುಕೊಳ್ಳು’ ಎಂದ ಅವನು.*

*‘ದಾರಿ ತಿಳಿದವನು ಅಂದರೇ.., ಅಂದರೇ.., ಸರಿದಾರಿಯಲ್ಲಿ ನಡೆಯುವವನನ್ನು, ನಡೆಸುವವನನ್ನು ಮಕ್ಕಾದವರ ಭಾಷೆಯಲ್ಲಿ ಅರ್ಷದ್ ಎಂದು ಕರೆಯುತ್ತಾರೆ. ಅದನ್ನೇ ನಿನ್ನ ಹೆಸರೆಂದು ಭಾವಿಸಲೆ?’*

*‘ತೀರ್ಮಾನ ನಿನ್ನದು’ ಎಂದಿದ್ದ ಅವನು.*

*‘ಅರ್ಷದ್ ಎಂಬ ಹೆಸರನ್ನೇ ಆಯ್ದುಕೊಳ್ಳುವೆ’.*

*‘ನಿನ್ನಿಷ್ಟ’ ಎಂದ.*

*‘ಸರಿ ಅರ್ಷದ್, ನೀನು ತೋರಿಸಲಿರುವುದನ್ನು ನಾನು ನೋಡಲು ಸಿದ್ಧನಿರುವೆ’ ಎಂದುಬಿಟ್ಟಿದ್ದೆ. ಮೊಂಡು ಧೈರ್ಯ ನನ್ನದು.*

*‘ನಾನು ತೋರಿಸುವುದಿಲ್ಲ. ನಾನು ತೋರಿಸಿದರೆ ನಿನ್ನಿಂದ ನೋಡಲಾಗುವುದೂ ಇಲ್ಲ.’ ಒಗಟಿನಂತೆ ಹೇಳಿದ್ದ ಅರ್ಷದ್*

*‘ಮತ್ತೆ ಹೇಳಿದೆಯಲ್ಲ....ತೋ..ರಿ..?’*

*‘ನಾನು ತೋರಿಸುವೆ ಎನ್ನಲಿಲ್ಲ; ಕಾಣಿಸುವೆ’ ಎಂದಿದ್ದ ಅರ್ಷದ್.’*

*‘ಓಹೋ.. ಅರ್ಥವಾಯಿತು, ಅರ್ಥವಾಯಿತು. ನಾನು ಉಮ್ಮಾ ಎಂದು ಗೌರವಿಸುವ ಪ್ರವಾದಿಪತ್ನಿಯರನ್ನೆಲ್ಲ ನನಗೆ ಕಾಣಿಸುವಿಯಲ್ಲವೆ? ಸರಿ, ಕಾಣಲು ನಾನು ಸಿದ್ಧನಿರುವೆ. ಕೆಲವು ಅನುಮಾನಗಳನ್ನು ಪರಿಹರಿಸಿಕೊಳ್ಳಬೇಕಿದೆ. ಆ ದಿನಗಳಲ್ಲಿ ನಿಜವಾಗಿ ನಡೆದದ್ದು ಏನು ಎಂಬುದನ್ನು ಅವರಿಂದಲೇ ತಿಳಿದುಕೊಳ್ಳಬೇಕಾಗಿದೆ. ಆದರೆ, ಪ್ರವಾದಿಪತ್ನಿಯರು ಹಲವರಿದ್ದಾರೆ. ಮೊದಲು ಯಾರನ್ನು ಕಾಣಬೇಕು ಎಂಬುದನ್ನೇ ನಿರ್ಧರಿಸಲಾಗುತ್ತಿಲ್ಲ. ಮೊದಲು ಯಾರನ್ನು ಕಾಣಿಸುವೆ?’ ಎಂದು ಪ್ರಶ್ನಿಸಿದೆ.*

*‘ಒಡೆಯರಿಗಿಂತ ಅವರ ಸೇವಕರ ಜೊತೆ ಮಾತನಾಡುವುದು ಸುಲಭವೆಂದು ಹೇಳಿದೆಯಲ್ಲ?’ ಪ್ರಶ್ನಿಸಿದ್ದ ಅರ್ಷದ್.*

*‘ನಾನೆಲ್ಲಿ ಹಾಗೆ ಹೇಳಿದೆ?’*

*‘ಹೇಳಲಿಲ್ಲ; ಹಾಗೆಂದು ಯೋಚಿಸಿದ್ದೆ.’*

*‘ಅಂದರೆ..! ನಾನು ಯೋಚಿಸಿದ್ದು ಕೂಡಾ ನಿನಗೆ ತಿಳಿಯುತ್ತದೆಯೆ?’*

*ಗಾಬರಿಯಿಂದಲೇ ಪ್ರಶ್ನಿಸಿದ್ದೆ.*

*‘ಹೌದು. ನೀನು ಏನನ್ನೇ ಯೋಚಿಸಿದರೂ ನನಗೆ ತಿಳಿದುಬಿಡುತ್ತದೆ. ನಿನ್ನ ಬಯಕೆಯಂತೆಯೇ ಮೂರನೆಯ ಪ್ರವಾದಿಪತ್ನಿ ಆಯಿಷಾರ ದಾಸಿಯಾಗಿದ್ದ ಅಫೀರಾಳನ್ನು ಮೊದಲು ಕಾಣಿಸುವೆ’ ಎಂದ ಅರ್ಷದ್.*

‘ನನಗೆ ಅಫೀರಾಳನ್ನು ಕಾಣಿಸುವುದೇನೋ ಸರಿ. ಆದರೆ, ಅದಕ್ಕಿಂತ ಮೊದಲೊಮ್ಮೆ ನೀನೇಕೆ ನನಗೆ ಕಾಣಿಸಬಾರದು?’ ಆಸೆಯಿಂದಲೇ ಪ್ರಶ್ನಿಸಿದ್ದೆ.

‘ನನ್ನನ್ನು ಈ ಮೊದಲೆಂದಾದರೂ ನೀನು ಕಾಣಬಯಸಿದ್ದಿದೆಯೆ?’ ಅರ್ಷದ್ ಮರುಪ್ರಶ್ನೆ ಎಸೆದಿದ್ದ.

ಹೌದಲ್ಲ! ಅಲ್ಲಾಹುವಿನ ದೂತನೊಬ್ಬನನ್ನು ಕಾಣಬೇಕೆಂದು ನಾನೆಂದು ಬಯಸಿದ್ದೆ? ಕಳೆದ ಎರಡು ಮೂರು ವರ್ಷಗಳಿಂದ ಹಗಲೂ ರಾತ್ರಿ ಯೋಚಿಸುತ್ತಿದ್ದದ್ದು ಪ್ರವಾದಿಪತ್ನಿಯರ ಬಗ್ಗೆ ಮಾತ್ರ.

ಮಲಗಿದ್ದಲ್ಲಿಂದ ಎದ್ದು, ಪಕ್ಕದಲ್ಲೇ ಇದ್ದ ಲೈಟ್ ಸ್ವಿಚ್ ಅದುಮಲು ಕೈ ಎತ್ತಿದೆ.

ಟ್ಯೂಬ್ ಲೈಟ್ ಬೆಳಕಿನಲ್ಲಾದರೂ ಅವನು ಕಾಣಿಸಬಹುದೇ ಎಂಬ ಸಣ್ಣ ಆಸೆ ನನ್ನದು.

‘ಬೇಡ. ಅದನ್ನು ಮುಟ್ಟಬೇಡ. ನೀವು ಸೃಷ್ಟಿಸಿರುವ ಕೃತಕ ಬೆಳಕಿನಲ್ಲಿ ನೀವು ಕಾಣುವುದು ನೀವೇ ಸೃಷ್ಟಿಸಿಕೊಂಡಿರುವ ಕೃತಕಗಳನ್ನು ಮಾತ್ರ. ನಿನ್ನೊಳಗೇ ಉರಿಯುತ್ತಿರುವ ಬೆಳಕಿನಲ್ಲಿ ಕಾಣಲು ಪ್ರಯತ್ನಿಸಿದರೆ, ಎಲ್ಲವನ್ನು ಅಲ್ಲವಾದರೂ, ಕೆಲವನ್ನಾದರೂ ನೀನು ಕಾಣಬಲ್ಲೆ.

‘ಆದರೂ...’ ನಾನು ಮಾತು ಆರಂಭಿಸುತ್ತಿರುವಂತೆಯೇ ಅರ್ಷದ್ ಹೇಳಿದ್ದ, ‘ನಾನು ಕಾಣಿಸಿದರೆ ನನ್ನ ಜೊತೆ ಸಲಿಗೆಯಿಂದ ಮಾತನಾಡಲು ಸುಲಭ ಎಂದೆಲ್ಲ ಯೋಚಿಸಬೇಡ. ನನ್ನನ್ನು ನಿನಗೆ ಕಾಣಿಸಲು ನನಗೆ ಅನುಮತಿ ಇಲ್ಲ. ನನಗೆ ಆದೇಶವಿರುವುದು ನಿನ್ನ ಬಯಕೆಗಳನ್ನು ಕಾಣಿಸಲು ಮಾತ್ರ.’

‘ಸರಿ. ನಿನಗೆ ಅನುಮತಿಯಿಲ್ಲದಿರುವುದನ್ನು ಮಾಡಲು ಒತ್ತಾಯಿಸಲಾರೆ. ಆದರೆ, ನನ್ನ ಬಯಕೆಗಳನ್ನು ನನಗೆ ಕಾಣಿಸುವಂತೆ ನಿನಗೆ ಅದೇಶ ಮಾಡಿದವರು ಯಾರು?’

‘ಅಲ್ಲಾಹು’ ಎಂದು ಅವನು ಹೇಳಬಹುದೆಂಬ ಆಸೆಯಿಂದಲೇ ಪ್ರಶ್ನಿಸಿದ್ದೆ.

‘ನಿನ್ನ ಈ ಪ್ರಶ್ನೆಗೆ ಉತ್ತರಿಸುವ ಅಧಿಕಾರ ನನಗಿಲ್ಲ. ಅಂತೆಯೇ, ನಾನು ಕಾಣಿಸುವ ಯಾರನ್ನೂ ಪ್ರಶ್ನಿಸುವ ಅಧಿಕಾರವೂ ನಿನಗಿಲ್ಲ. ನಿನ್ನ ಬಯಕೆಗಳು ಏನೆಂಬುದು ನಾನು ಕಾಣಿಸುತ್ತಿರುವವರಿಗೆ ಗೊತ್ತಿರುತ್ತದೆ. ನೀನು ಅವರನ್ನು ಕಂಡಾಗ, ಅವರೂ ನಿನ್ನನ್ನು ಕಾಣುತ್ತಾರೆ. ಆ ದಿನಗಳಲ್ಲಿ ಅಲ್ಲಿ ನಿಜವಾಗಿ ನಡೆದದ್ದು ಏನೆಂಬುದನ್ನು ನಿನಗೆ ವಿವರಿಸುತ್ತಾರೆ. ನಿನ್ನ ಸಂದೇಹಗಳನ್ನೆಲ್ಲ ಪರಿಹರಿಸುತ್ತಾರೆ.’

‘ಸರಿ. ನನಗೆ ನೀನು ಅಷ್ಟು ಕಾಣಿಸಿದರೆ ಸಾಕು. ಯಾರನ್ನೂ ಏನನ್ನೂ ಪ್ರಶ್ನಿಸುವುದಿಲ್ಲವೆಂದು ಮಾತು ಕೊಡುವೆ. ಆದರೆ, ನಿದ್ರೆಹೋಗಿರುವ ನನ್ನ ಹೆಂಡತಿಯನ್ನು ಎಬ್ಬಿಸಿ, ಸ್ವಲ್ಪಹೊತ್ತು ಹೊರಗೆ ಹೋಗಿ ಬರುವೆನೆಂದು ಒಂದು ಮಾತು ಹೇಳಲಾದರೂ ಅನುಮತಿಯಿದೆಯೆ?’





‘ಬೇಡ. ಅವಳಿಗೆ ಎಚ್ಚರವಾಗುವ ಮುನ್ನವೇ ನಾವು ಮರಳಲಿದ್ದೇವೆ. ಬಾ ಹೋಗುವ.’ ಅರ್ಷದ್ ಆದೇಶಿಸಿದ್ದ.

ನಾವು ಹೊರಟೆವು.

* * *

‘ಅಲ್ಲಿ ನೋಡು, ಎಲ್ಲರಿಗಿಂತ ಕಿರಿಯವಳಾಗಿ ಕಾಣಿಸುತ್ತಿರುವವಳೇ, ನೀನು ಕಾಣಲು ಬಯಸಿರುವ ಆಯಿಷಾರ ದಾಸಿ ಅಫೀರಾ.’ ಎಂದಿದ್ದ ಅರ್ಷದ್.

ನೋಡಿದೆ.

ಕೆಂಪು ಕಲ್ಲಿನಿಂದ ಕಟ್ಟಲಾಗಿದ್ದ ದೊಡ್ಡ ಮನೆಯೊಂದರ ಹಿಂಭಾಗದಲ್ಲಿ, ಸುಮಾರು ನಾಲ್ಕು ವರ್ಷದ ಪುಟ್ಟ ಹುಡುಗಿಯೊಬ್ಬಳು ಹೆಚ್ಚು ಕಮ್ಮಿ ಅವಳಷ್ಟೇ, ಅಥವಾ ಅವಳಿಗಿಂತ ಸ್ವಲ್ಪ ದೊಡ್ಡ ವಯಸ್ಸಿನ ಇಬ್ಬರು ಹೆಣ್ಣು ಮಕ್ಕಳೊಂದಿಗೆ ಮರಳ ರಾಶಿಯಲ್ಲಿ ಆಟವಾಡುತ್ತಿರುವುದು ಕಾಣಿಸಿದಾಗ ನಿರಾಸೆಯಾಯಿತು.

‘ಛೇ! ಇವಳಿನ್ನೂ ಪುಟ್ಟ ಮಗು; ಇವಳಲ್ಲ. ನನ್ನ ಕಲ್ಪನೆಯಂತೆ ಅಫೀರಾ, ಪ್ರವಾದಿ ಪತ್ನಿ ಆಯಿಷಾರಿಗಿಂತ ಹತ್ತು ಹನ್ನೆರಡು ವರ್ಷಗಳಷ್ಟಾದರೂ ದೊಡ್ಡವಳು’ ಎಂದೆ.

‘ನಿಜ. ಆದರೆ, ನೀನು ಕಾಣುತ್ತಿರುವುದು ಪುಟ್ಟ ಮಗು ಎಂಬುದು ಎಷ್ಟು ನಿಜವೋ, ಅ ಪುಟ್ಟ ಮಗುವಿನ ಹೆಸರು ಅಫೀರಾ ಎಂಬುದೂ ಅಷ್ಟೇ ನಿಜ.’

‘ಒಂದೇ ಹೆಸರಿನ ಇಬ್ಬರೇಕೆ, ನೂರಾರು ಜನರಿರುವ ಉದಾಹರಣೆಗಳಿವೆ. ನಾನು ಕಾಣಬಯಸಿದ್ದು ಈ ಅಫೀರಾರಳನ್ನಲ್ಲ. ಪ್ರವಾದಿಪತ್ನಿಯ ಸೇವಕಿ ಅಫೀರಾಳನ್ನು.’ ನನ್ನ ಅಸಮಾಧಾನವನ್ನು ನೇರವಾಗಿಯೇ ವ್ಯಕ್ತಪಡಿಸಿದ್ದೆ.

‘ನೀನು ಕಾಣುತ್ತಿರುವುದು ಪ್ರವಾದಿಪತ್ನಿ ಆಯಿಷಾರ ಸೇವಕಿಯಾಗಿದ್ದ ಅದೇ ಅಫೀರಾ ಪುಟ್ಟ ಹುಡುಗಿಯಾಗಿದ್ದಾಗಿನ ರೂಪವನ್ನು. ಪುಟ್ಟ ಆಫೀರಾಳ ಬಾಲ್ಯವನ್ನು ತಿಳಿದುಕೊಳ್ಳದೇ ಹೋದರೆ, ಅವಳು ಬೆಳೆದು ದೊಡ್ಡವಳಾದ ಬಳಿಕದ ಮಾತುಗಳನ್ನು, ವರ್ತನೆಗಳನ್ನು ನೀನು ಅರಗಿಸಿಕೊಳ್ಳಲಾರೆ. ನಿನಗೇ ಅರ್ಥವಾಗದ್ದನ್ನು ಬೇರೆಯವರಿಗೆ ಹೇಳಿದರೆ, ಅವರಿಗೆ ಹೇಗೆ ಅರ್ಥವಾದೀತು?’ ಅರ್ಷದ್ ಪ್ರಶ್ನಿಸಿದ್ದ.

ನಾನು ಪ್ರತಿಕ್ರಿಯಿಸಲಿಲ್ಲ.

‘ನಿನ್ನನ್ನು ಕಂಡಕೂಡಲೇ ಈ ಪುಟ್ಟ ಅಫೀರಾ, ನಿನ್ನೆಯವರೆಗೂ ಯಾರಿಗೂ ಹೇಳಲಾಗದೆ ತನ್ನೆದೆಯೊಳಗೆ ಬಚ್ಚಿಟ್ಟುಕೊಂಡಿದ್ದ ಸ್ವಗತವನ್ನು ಬಿಚ್ಚಿಕೊಳ್ಳುತ್ತಾಳೆ. ಕಿವಿತೆರೆದುಕೊಂಡು ಮೌನವಾಗಿ ಆಲಿಸು.’ ಆದೇಶಿಸುವವನಂತೆಯೇ ಹೇಳಿದ್ದ ಅರ್ಷದ್.

‘ಹೂಂ’ ಎಂದೆ.

❐

‘ನೀವೆಷ್ಟೇ ಬಯಸಿದರೂ,
ನಿಮ್ಮ ಪತ್ನಿಯರ ನಡುವೆ ಸಮಾನ ನ್ಯಾಯ ಪಾಲಿಸಲು
ನಿಮ್ಮಿಂದಾಗದು.
ಒಬ್ಬಳತ್ತ ವಾಲಿಕೊಂಡು, ಇನ್ನೊಬ್ಬಳನ್ನು ನೋಯಿಸದಿರಿ.’

(ಕುರ್‌ಆನ್ : ೪-೧೨೯)

## ಸ್ವಗತ – ಒಂದು

# ಅಫೀರಾ ಬಿಂತಿ ಮುಅತ್ತಲ್

–೧–

ನಿನ್ನೆ ರವಿವಾರ.

ನಿನ್ನೆ ಮುಂಜಾನೆಯ ಹೊತ್ತಲ್ಲಿ, ಪ್ರವಾದಿ ಈಸಾರನ್ನು ಆರಾಧಿಸುವ ಮಹಿಳೆಯರ ತಂಡವೊಂದು ತಮ್ಮ ಎಡಎದೆಯ ಮೇಲೆ ಬಲಗೈಯಿರಿಸಿಕೊಂಡು ಸ್ತೋತ್ರ ಪಠಿಸುತ್ತಾ ನಮ್ಮನೆಯ ಅಂಗಳದೆದುರು ಹಾದುಹೋಗಿತ್ತು. ಮಧ್ಯಾಹ್ನ, ನಾಲ್ಕು ಹನಿ ಮಳೆ ಚೆಲ್ಲಿದ್ದರಿಂದ ಕಣ್ಣಿಗೆ ಕಾಣುವಷ್ಟೂ ದೂರದ ಮರಳ ದಿಬ್ಬಗಳೆಲ್ಲವೂ ಕಂದು ಬಣ್ಣಕ್ಕೆ ತಿರುಗಿದ್ದವು.

ನಿನ್ನೆ ಸಂಜೆ ನಾಲ್ವರೂ ಅಕ್ಕಂದಿರೊಂದಿಗೆ, ಮನೆ ಹಿಂಭಾಗದಲ್ಲಿರುವ ಮರಳ ದಿಬ್ಬದ ಇಳಿಜಾರಿನಲ್ಲಿ ಮನೆ ಕಟ್ಟುವ ಆಟ ಆಡುತ್ತಿದ್ದೆ. ಒದ್ದೆ ಮರಳಮುದ್ದೆಗಳಲ್ಲಿ ಮನೆ ಕಟ್ಟುವುದು ಸುಲಭ. ಮನೆ ಕಟ್ಟಿದ ಬಳಿಕ ಮೊಣಕಾಲಷ್ಟು ಎತ್ತರಕ್ಕೆ ಮನೆಯ ಸುತ್ತ ಕಾವಲು ಗೋಪುರ ಕಟ್ಟಿದರೂ ಮನೆ ಜರಿದು ಬೀಳುವುದಿಲ್ಲ.

‘ಅಫೀರಾ..’ ಉಮ್ಮ ಕರೆದಿದ್ದಳು.

ನನಗಿದು ಹೊಸದಲ್ಲ; ಉಮ್ಮ ಯಾವಾಗಲೂ ಹಾಗೆಯೇ. ದಿನವಿಡೀ ನಾನು ಹಸಿದಿರುತ್ತೇನೆಂದೇ ಭಾವಿಸುತ್ತಿದ್ದವರು ನನ್ನ ಉಮ್ಮ. ನಾನು ಮನೆಯಿಂದ ಹೊರಗೆ ಆಟವಾಡುತ್ತಿದ್ದಾಗಲಂತೂ, ಅವರಿಗೆ ಈ ಅನುಮಾನ ಜಾಸ್ತಿ. ನಿನ್ನೆಯೂ ಹಾಗೆಯೇ ಆಯಿತು. ಸುಂದರವಾದ ಮನೆಯೊಂದನ್ನು ಕಟ್ಟುತ್ತಿದ್ದೆ. ಇನ್ನೇನು ಸ್ವಲ್ಪವೇ ಹೊತ್ತಿನಲ್ಲಿ ಎಲ್ಲ ಸರಿಯಾದೀತು ಅನ್ನುವಷ್ಟರಲ್ಲಿ ಉಮ್ಮ ಕರೆದಿದ್ದರು. ಒಳಗೆ ಹೋದರೆ ಸಾಕು. ಅಡುಗೆಮನೆಗೆ ಕರೆದುಕೊಂಡು ಹೋಗಿ, ನೆಲದಲ್ಲಿ ಕುಳ್ಳಿರಿಸಿ ಖರ್ಜೂರದ ಸಣ್ಣ ಸಣ್ಣ ಹೋಳುಗಳನ್ನು ಆಡಿನ ಹಾಲಿಗೆ ಬೆರೆಸಿ. ಅದಕ್ಕೆ ನಾಲ್ಕು ಹನಿ ಜೇನು ಸೇರಿಸಿ

ಕೊಡುತ್ತಿದ್ದರು. ನಾನದನ್ನು ಪೂರ್ತಿಯಾಗಿ ಕುಡಿದು ಮುಗಿಸುವವರೆಗೂ ಪಕ್ಕದಲ್ಲೇ ಕುಳಿತುಕೊಳ್ಳುತ್ತಿದ್ದರು.

ಆದರೆ, ಅರ್ಧ ಕಟ್ಟಿರುವ ಮರಳಮನೆಯನ್ನು ಹಾಗೆಯೇ ಬಿಟ್ಟು ಹೋಗುವುದೆಂದರೆ ಅಪಾಯವೇ. ಮರಳಿ ಬರುವಷ್ಟರಲ್ಲಿ ನನ್ನ ಶ್ರಮವೆಲ್ಲ ವ್ಯರ್ಥವಾಗಿರುತ್ತಿತ್ತು. ಅದಕ್ಕೆ ಕಾರಣ; ನನ್ನ ಸಣ್ಣಕ್ಕ ಅಫ್ರಿನಾ. ಬಹಳ ಜೋರು ಅವಳು. ನನಗಿಂತ ಎರಡು ವರ್ಷ ದೊಡ್ಡವಳು. ಹಾಲು ಕುಡಿದು ಬಾಯಿ ಒರೆಸಿಕೊಂಡು, ಆಟದ ಜಾಗಕ್ಕೆ ಮರಳುವಷ್ಟರಲ್ಲಿ, ನಾನು ಕಟ್ಟಿರುವ ಮನೆಯನ್ನು ಕಾಲಲ್ಲಿ ಕೆಡವಿ ಏನೇನೂ ಗೊತ್ತಿಲ್ಲದವಳಂತೆ ನಟಿಸುತ್ತಿದ್ದಳು ಅಫ್ರಿನಾ.

ಆದರೆ, ನನ್ನ ಎರಡನೇ ದೊಡ್ಡಕ್ಕ ಸಬ್ರಿನಾ ಹಾಗಲ್ಲ. ನಾನೆಂದರೆ ಬಹಳ ಪ್ರೀತಿ. ನನಗೂ ಅವಳೆಂದರೆ ತುಂಬಾ ಇಷ್ಟ. ರಾತ್ರಿ ನನ್ನನ್ನು ಜೊತೆಯಲ್ಲೇ ಮಲಗಿಸಿಕೊಳ್ಳುತ್ತಿದ್ದವಳು. ಹೆಚ್ಚುಕಮ್ಮಿ ಮುಗಿಯುವ ಹಂತ ತಲುಪಿದ್ದ ನನ್ನ ಮರಳಮನೆಯನ್ನು ದೊಡ್ಡಕ್ಕ ಸಬ್ರಿನಾಳ ಕಾವಲಿಗೆ ಒಪ್ಪಿಸಿ ಮನೆಯೊಳಗೆ ಹೋದೆ.

ನಿರೀಕ್ಷಿಸಿದಂತೆ ಉಮ್ಮನ ಕೈಯಲ್ಲಿ ಖಾಲಿ ಲೋಟೆಯೇನೋ ಇತ್ತು. ಆದರೆ, ಅವಳ ಮುಖದಲ್ಲಿ ಸದಾಕಾಲ ಚಿಗುರುತ್ತಿದ್ದ ನಗು ಕಾಣೆಯಾಗಿತ್ತು. ಒಣಮುಖದಿಂದಲೇ ನನ್ನನ್ನು ನೋಡಿದ ಉಮ್ಮ, ಮನೆಯ ಹಿಂಭಾಗದಲ್ಲಿರುವ ನೀರಮನೆಗೆ ಕರೆದುಕೊಂಡು ಹೋದರು. ಕೈಕಾಲುಗಳಿಗೆ ಅಂಟಿಕೊಂಡಿದ್ದ ಮರಳನ್ನು ಒರೆಸಿದರು. ಕೈಗಳನ್ನು ನೀರಿನಿಂದ ತೊಳೆದರು. ‘ಇಲ್ಲೇ ಇರು’ ಎಂದು ಹೇಳಿ ಒಳಗೆ ಹೋದರು. ಲೋಟದಲ್ಲಿ ಹಾಲು ತುಂಬುಕೊಂಡು ಮತ್ತೆ ಅಲ್ಲಿಗೇ ಬಂದರು. ನನಗೆ ಅಚ್ಚರಿ! ನೀರಮನೆಯ ಬಳಿ ಈ ಹಿಂದೆಂದೂ ಉಮ್ಮ ನನಗೆ ಹಾಲು ಕುಡಿಸಿದವರಲ್ಲ.

ನಾನು ಹಾಲಿನ ಲೋಟ ಎತ್ತಿಕೊಳ್ಳುತ್ತಿರುವಂತೆಯೇ ಉಮ್ಮ ಹೇಳಿದ್ದರು, ‘ಈವತ್ತು ರಾತ್ರಿ ಸಬ್ರಿನಾಳೊಂದಿಗೆ ನೀನು ಮಲಗುವುದು ಬೇಡ ಅಫಿರಾ. ಒಳಕೋಣೆಯಲ್ಲಿ ಅಬ್ಬನ ಪಕ್ಕದಲ್ಲಿ ಮಲಗಿಕೊಳ್ಳು.’ ಎಂದರು.

‘ನಿಜವಾಗಿಯೂ!’ ನಾನು ಖುಷಿಯಿಂದ ಕಣ್ಣರಳಿಸಿದ್ದೆ.

‘ಆದರೆ, ಒಂದು ಮಾತು ಅಫೀರಾ. ಕತ್ತಲಾಗುವವರೆಗೆ ಉಮ್ಮ ಹೀಗೆ ಹೇಳಿದರು ಎಂದು ಯಾರಿಗೂ ಹೇಳಬಾರದು ಆಯ್ತಾ? ಇದು ಗುಟ್ಟು.’ ಎಂದರು.

ನಮ್ಮೂರಲ್ಲಿ ಹಗಲೆಲ್ಲ ಮರಳಕಣಗಳನ್ನು ಕರಗಿಸುವಂತೆ ಸುಡುವ ಸೂರ್ಯ. ಉರಿದೂ ಉರಿದೂ ಆಯಾಸಗೊಂಡು ಪಶ್ಚಿಮದ ಬೆಟ್ಟಗಳ ಸಂದಿಗಳಲ್ಲಿ ಅವನು ಇಳಿದರೆ ಸಾಕು, ವಾತಾವರಣ ಒಮ್ಮೆಲೇ ತಂಪೇರತೊಡಗುತ್ತದೆ. ಕತ್ತಲಾಗುತ್ತಿರುವಂತೆ, ನಮ್ಮ ದೊಡ್ಡ ಮನೆಯ ಕೋಣೆಗಳ ಗೋಡೆಗಳಿಗೆ ಅಂಟಿಸಿ ತೂಗಿಸಿರುವ ಕಂದೀಲುಗಳನ್ನು ಹಚ್ಚುವ ಹೊಣೆ ದೊಡ್ಡಕ್ಕ ಸಬ್ರಿನಾಳದ್ದು.





ಸುತ್ತಮುತ್ತಲಿನ ಪರಿಸರದಲ್ಲೇ ಬಲುದೊಡ್ಡ ಮನೆ ನಮ್ಮದು. ಮನೆಗಿಂತ ನಾಲ್ಕು ಪಟ್ಟು ವಿಶಾಲವಾದ ಕುದುರೆಲಾಯ ಹಿತ್ತಲಲ್ಲಿ. ಅದರ ಪಕ್ಕದಲ್ಲಿ ಇನ್ನೂರು ಆಡುಗಳಿಗೆಂದೇ ನಿರ್ಮಿಸಲಾಗಿದ್ದ ವಿಶಾಲವಾದ ಹಟ್ಟಿ. ಅಬ್ಬನಿಗೆ ಕುದುರೆಗಳೆಂದರೆ ಪ್ರಾಣ. ಕುದುರೆಲಾಯದಲ್ಲಿ ಏಳೆಂಟಾದರೂ ಕುದುರೆಗಳಿರುತ್ತಿದ್ದವು. ಪ್ರತಿದಿನದ ಸೂರ್ಯ ಕಣ್ಣು ಬಿಡುತ್ತಿರುವಂತೆಯೇ ಸೊಂಟದಲ್ಲಿ ಖಡ್ಗವನ್ನು ತೂಗಿಸಿಕೊಂಡು, ಕುದುರೆಯೇರಿ ಊರೊಳಗೆ ಸುತ್ತಾಡಿಕೊಂಡು ಬರುವುದು ಅವರ ದಿನಚರಿಯ ಮೊದಲ ಭಾಗ. ಬೆಳಗಿನ ಉಪಾಹಾರ ಮುಗಿಸಿ, ಕಅಬಾ ದೇವಮಂದಿರದ ಉತ್ತರಕ್ಕಿರುವ ಸಂತೆಪೇಟೆಗೆ ಹೋದರೆ, ಅವರಿಗೆ ಮನೆಯ ನೆನಪಾಗುವುದು, ನೂರ್ ಬೆಟ್ಟಸಾಲುಗಳ ಬೆನ್ನಹಿಂದೆ ಸೂರ್ಯ ಅಡಗಿಕೊಂಡ ಆನಂತರವೇ. ಹೊಸ ವಸ್ತುಗಳ ಖರೀದಿಗೆಂದು ಸಿರಿಯಾ ದೇಶಕ್ಕೆ ಅಬ್ಬ ಪ್ರವಾಸ ಹೋದರೆಂದರೆ ಮರಳುವಾಗ ತಿಂಗಳುಗಳೇ ಉರುಳುತ್ತಿದ್ದವು. ಅಬ್ಬ ಇಲ್ಲದ ದಿನಗಳಲ್ಲಿ ಮನೆಯೊಳಗೆ ನಮ್ಮದೇ ಆಟ. ಉಮ್ಮ ಗೆಲುವಾಗಿ ನಮ್ಮೊಡನೆ ಸ್ವಲ್ಪವಾದರೂ ಹಾಡುಹರಟೆ ಹೊಡೆಯುತ್ತಿದ್ದದ್ದು ಆ ದಿನಗಳಲ್ಲಿ ಮಾತ್ರ. ಅಬ್ಬ ಮನೆಯೊಳಗೆ ಇದ್ದಾರೆಂದರೆ ಮನೆಯೊಳಗಿರುವ ಹಲ್ಲಿಗಳು ಕೂಡಾ ಕಚಕ್ ಪಿಚಕ್ ಅನ್ನುವುದಿಲ್ಲ.

ಆರು ಕೋಣೆಗಳ ನಮ್ಮ ಮನೆಗೆ ಸೇರಿಕೊಂಡಂತೆ ಏಳನೆಯದಾಗಿ ಹೊಸದೊಂದು ಕೋಣೆಯನ್ನು ಕಟ್ಟಿಸಿಕೊಳ್ಳುವವರೆಗೆ, ಅಡುಗೆ ಮಾಡಲೆಂದೇ ಪ್ರತ್ಯೇಕ ಕೋಣೆ ಬೇಕಾಗುತ್ತದೆ ಎಂಬುದು ನಮಗಾರಿಗೂ ತಿಳಿದಿರಲಿಲ್ಲ. ಅಡುಗೆಕೋಣೆಯನ್ನು ಮನೆಯೊಳಗೂ ಕಟ್ಟಿಸಿಕೊಳ್ಳಲು ಸಾಧ್ಯ ಎಂಬುದನ್ನು ವಠಾರಕ್ಕೆ ತೋರಿಸಿಕೊಟ್ಟವರೇ ನನ್ನಬ್ಬ.

ಮೊದಮೊದಲೆಲ್ಲ ಮನೆಯೊಳಗೆ ಅಡುಗೆ ಮಾಡುವುದೆಂದರೆ ಉಮ್ಮನಿಗೆ ಹಿಂಸೆಯಾಗುತ್ತಿತ್ತು. ನನ್ನ ಉಮ್ಮ ಮಾತ್ರವಲ್ಲ, ವಠಾರದ ಎಲ್ಲ ಮನೆಯವರೂ ಪರಸ್ಪರ ಹಾಡಿಕೊಳ್ಳುತ್ತಲೋ, ತಮ್ಮ ತಮ್ಮ ಗಂಡಂದಿರ ಸಾಹಸಗಳನ್ನು ಕೊಚ್ಚಿಕೊಳ್ಳುತ್ತಲೋ, ಬೀಸುಗಲ್ಲಿನಲ್ಲಿ ಧಾನ್ಯಗಳನ್ನು ಹುಡಿ ಮಾಡುವುದರಿಂದಾರಂಭಿಸಿ, ರೊಟ್ಟಿ ತಟ್ಟಿ ಬೇಯಿಸುವವರೆಗಿನ ಕೆಲಸಗಳನ್ನೆಲ್ಲಾ ನಡೆಸುತ್ತಿದ್ದದ್ದು, ಮನೆಗಳ ಹಿಂಭಾಗದಲ್ಲಿದ್ದ ಖಾಲಿ ಬಯಲಿನಲ್ಲೇ. ಸಾಮಾನ್ಯವಾಗಿ ಮಕ್ಕಾದ ಮನೆಮಂದಿಯೆಲ್ಲ ಜೊತೆಯಲ್ಲೇ ಕುಳಿತು ಆಹಾರ ಸೇವಿಸುವುದು ಕ್ರಮ. ಆದರೆ, ನನ್ನಬ್ಬ ಮಾತ್ರ ಊಟಮಾಡುತ್ತಿದ್ದದ್ದು ಅವರ ಮಲಗುವ ಕೋಣೆಯಲ್ಲೇ. ಅಲ್ಲಿಗೆ ಆಹಾರವನ್ನು ಎತ್ತಿಕೊಂಡು ಹೋಗುವ ಹೊಣೆ ದೊಡ್ಡಕ್ಕ ಸಬ್ರಿನಾಳದ್ದು. ಅಬ್ಬನ ಊಟದ ಬಳಿಕ ನಾವೆಲ್ಲ ಅಡುಗೆಮನೆಯೊಳಗೆ ಊಟ ಮಾಡುತ್ತಿದ್ದೆವು.

ರಾತ್ರಿ ಹೊತ್ತಲ್ಲಿ ಅಬ್ಬನ ಪಕ್ಕದಲ್ಲಿ ನಾನು ಮಲಗಲಿರುವೆನೆಂಬ ಗುಟ್ಟನ್ನು ರಾತ್ರಿಯ ಊಟ ಮುಗಿಸುವವರೆಗೂ ಯಾರಿಗೂ ಬಿಟ್ಟುಕೊಟ್ಟಿರಲಿಲ್ಲ. ತಮಗೆ ಗೊತ್ತಿದೆ ಎಂಬಂತೆ

ಅಕ್ಕಂದಿರೂ ವರ್ತಿಸಿರಲಿಲ್ಲ. ಮಲಗುವ ಹೊತ್ತು ಬಂದಾಗ ಹೇಗೂ ಅವರಿಗೆ ಗೊತ್ತಾಗುತ್ತದೆಯಲ್ಲ ಎಂದು ಯೋಚಿಸಿ ನಾನೂ ಸುಮ್ಮನಿದ್ದೆ. ರಾತ್ರಿಯಾಗುವುದನ್ನೇ ನಿರೀಕ್ಷಿಸುತ್ತಿದ್ದೆ.

ಕತ್ತಲೂ ಆಯಿತು.

ಅಕ್ಕಂದಿರಿಬ್ಬರೂ ಹೊರಗಿನ ಕೋಣೆಯಲ್ಲಿ ಮಲಗುವ ಸಿದ್ಧತೆಯಲ್ಲಿದ್ದರು. ಉಮ್ಮ ಪಾತ್ರೆಗಳನ್ನು ತೊಳೆಯುತ್ತಿರುವ ಸದ್ದು ಅಡುಗೆ ಮನೆಯಿಂದ ಕೇಳಿಸುತ್ತಿತ್ತು. ಅಬ್ಬ ಅದಾಗಲೇ ಮಲಗುವ ಕೋಣೆ ಸೇರಿಯಾಗಿತ್ತು.

ಅಬ್ಬನ ಕೋಣೆಗೆ ನಾನೇ ಹೋಗುವುದೆ? ಅಥವಾ, ಉಮ್ಮ ಕರೆದುಕೊಂಡು ಹೋಗುತ್ತಾರೋ ಎಂಬ ಗೊಂದಲಗಳೊಂದಿಗೇ ಅಕ್ಕಂದಿರ ಜೊತೆಗೆ ಕುಳಿತುಕೊಂಡಿದ್ದೆ.

'ಅಫೀರಾ..' ನನ್ನ ನಿರೀಕ್ಷೆ ಸುಳ್ಳಾಗಿರಲಿಲ್ಲ. ಕೊನೆಗೂ ಉಮ್ಮ ಕರೆದಿದ್ದರು.

ಎದ್ದು ನಿಂತೆ. ಅಡುಗೆ ಮನೆಯ ದಿಕ್ಕಿನಲ್ಲಿ ಹೆಜ್ಜೆಯೆತ್ತಿದೆ; ಅಷ್ಟೆ. ಅದುವರೆಗೂ ನನ್ನ ಪಕ್ಕದಲ್ಲಿ ಕುಳಿತಿದ್ದರೂ, ಬೇರೆತ್ತಲೋ ನೋಡುತ್ತಿದ್ದ ದೊಡ್ಡಕ್ಕ ಸಬ್ರಿನಾ, ಒಮ್ಮೆಲೆ ನನ್ನನ್ನು ಬಾಚಿ ತಬ್ಬಿಕೊಂಡಿದ್ದಳು. ನನಗೆ ನಾಚಿಕೆ; ಮುಜುಗರ. ಹಾಗೆಂದು, ಪ್ರೀತಿಯ ದೊಡ್ಡಕ್ಕ ನನ್ನನ್ನು ಅಪ್ಪಿಕೊಂಡು ಮುದ್ದಾಡುವುದು ಹೊಸದೇನಲ್ಲ. ಆದರೆ, ಈ ಬಾರಿಯ ಹಿಡಿತ ಎಂದಿನಂತಿರಲಿಲ್ಲ. ಅವಳ ಅಪ್ಪುಗೆಯಲ್ಲಿ ಬಿಸಿಯಿರಲಿಲ್ಲ. ಅವಳ ತೋಳುಗಳು ಮಂಜಿನಂತೆ ತಣ್ಣಗಾಗಿದ್ದವು.

ಅದು ಹೇಗೋ ಅವಳಿಂದ ತಪ್ಪಿಸಿಕೊಂಡು ಧಾವಿಸಿದೆ.

ಅಡುಗೆಕೋಣೆಯ ಗೋಡೆಗಂಟಿದ್ದ ಕಂದೀಲ ಜ್ವಾಲೆ, ಹಳದಿ ಹಾವಿನಂತೆ ಅತ್ತಿತ್ತ ತೊಯ್ದಾಡುತ್ತಿತ್ತು.

ಉಮ್ಮ ನೆಲದಲ್ಲಿ ಕುಳಿತಿದ್ದರು. ಅವರ ಕಣ್ಣುಗೊಂಬೆಗಳು ನೀರಲ್ಲಿ ಮುಳುಗಿರುವಂತೆ ಕಾಣಿಸಿತ್ತು.

ಅಳುತ್ತಿದ್ದಾರೆಯೆ! ಯಾಕೆ?

ನನ್ನ ಸಂಭ್ರಮಗಳೆಲ್ಲವೂ ಜರ್ರನೆ ಜಾರಿದ್ದವು. ಅಬ್ಬನ ಪಕ್ಕದಲ್ಲಿ ನಾನು ಮಲಗಲಿರುವ ಗುಟ್ಟನ್ನು ಮಧ್ಯಾಹ್ನದ ಹೊತ್ತಲ್ಲಿ ಕಿವಿಯೊಳಗೆ ಸುರಿಯುತ್ತಿದ್ದಾಗ ಉಮ್ಮನ ಮುಖ ಕಾಣಿಸುತ್ತಿರಲಿಲ್ಲ. ಆಗಲೂ ಅವರು ಅಳುತ್ತಿದ್ದರೆ?

ಅಡುಗೆಮನೆಯ ಹೊಸ್ತಿಲ ಬಳಿ ನನ್ನನ್ನು ಗಮನಿಸಿದ ಉಮ್ಮ, 'ಬಾ' ಎನ್ನುವಂತೆ ಎರಡೂ ತೋಳು ಚಾಚಿದರು. ನಾನು ಹತ್ತಿರ ಹೋದೆ. ಕುಳಿತಿರುವಂತೆಯೇ ಉಮ್ಮ ನನ್ನನ್ನು ಬಾಚಿ ತಬ್ಬಿಕೊಂಡರು.

'ಇದೊಂದು ರಾತ್ರಿ ಮಾತ್ರ ಮಗಳೇ...' ಎನ್ನುವಷ್ಟರಲ್ಲಿ ಗಂಟಲು ಉಬ್ಬಿಬಂದವರಂತೆ ಬಿಕ್ಕಳಿಸತೊಡಗಿದರು.





ಇದೊಂದು ರಾತ್ರಿ ಮಾತ್ರ!

ಏನು ಹಾಗೆಂದರೆ!? ನಾನು ಬಯಸಿದರೂ ಅಬ್ಬನ ಜೊತೆಗೆ ಇನ್ನೊಮ್ಮೆ ಮಲಗಿಕೊಳ್ಳುವ ಅವಕಾಶ ಸಿಗಲಾರದೆ?

ನನ್ನ ಇಬ್ಬರು ಅಕ್ಕಂದಿರಿಗೂ ಹೀಗೆಯೇ ಒಂದೊಂದೇ ಅವಕಾಶಗಳು ಸಿಕ್ಕಿದ್ದವೆ?

ಅವರನ್ನೂ ಉಮ್ಮ ಹೀಗೆಯೇ ಅಳುತ್ತಲೇ ಅಬ್ಬನ ಮಲಗುವ ಕೋಣೆಗೆ ಕಳುಹಿಸುತ್ತಿದ್ದರೆ?

ಉಮ್ಮ ನನ್ನನ್ನು ಹಿಡಿದುಕೊಂಡೇ ಎದ್ದು ನಿಂತರು. ಪಕ್ಕದ ಸಣ್ಣ ಕೋಣೆಗೆ ಕರೆದು ಕೊಂಡು ಹೋದರು. ಕೊಳೆಯಾಗಿರುವ ನನ್ನ ಮೇಲಂಗಿಯನ್ನು ಕಳಚಿದರು. ಮಂಚದ ಮೇಲೆ ಮುಂದಾಗಿಯೇ ತೆಗೆದಿರಿಸಿದ್ದ ಹೊಸ ಉಡುಪು ತೊಡಿಸಿದರು. ಕೊಂಬಿನ ಬಾಚಣಿಗೆಯಿಂದ ತಲೆಗೂದಲು ಬಾಚಿದರು. ತಲೆ ಸವರಿ ಹಣೆಗೆ ಮುತ್ತಿಟ್ಟರು.

ಹುಟ್ಟುಮೂಕಳಂತೆ ಉಮ್ಮ ವರ್ತಿಸಿದ್ದು ಅದೇ ಮೊದಲು.

ನಾನೂ ತುಟಿ ಬಿಗಿದುಕೊಂಡಿದ್ದೆ.

ನನ್ನನ್ನು ಅಪ್ಪಿಕೊಂಡ ಉಮ್ಮ ಜೋರಾಗಿ ಬಿಕ್ಕಳಿಸಿದರು.

ದೀರ್ಘವಾಗಿ ಉಸಿರೆಳೆದುಕೊಂಡು, ನನ್ನನ್ನು ಅಬ್ಬನ ಕೋಣೆಯತ್ತ ನಡೆಸಿಕೊಂಡು ಹೋದರು.

ಅಬ್ಬನ ಮಲಗುವ ಕೋಣೆಯ ಹೊಸ್ತಿಲಲ್ಲಿ ಸಬ್ರಿನಾ!

ಸಂಜೆಯಿಂದ ಎದೆಯೊಳಗೇ ಬಚ್ಚಿಟ್ಟುಕೊಂಡಿದ್ದ ಗುಟ್ಟೆಲ್ಲ ರಟ್ಟಾಗಿ ಹೋಯಿತಲ್ಲ ಎಂದು ನಿರಾಸೆಯಾಗಿತ್ತು. 'ಸಿಕ್ಕಿಬಿದ್ದಿ ಕಳ್ಳೀ' ಎಂದು ಆಲಿಂಗಿಸಿ ಸಬ್ರಿನಾ ಕಿಚಾಯಿಸ ಬಹುದೆಂದುಕೊಂಡಿದ್ದೆ. ಆದರೆ, ಸಬ್ರಿನಾ ನನ್ನ ಮುಖ ನೋಡಲೂ ಇಲ್ಲ. ಉಮ್ಮನಿಂದ ನನ್ನನ್ನು ಕಸಿದುಕೊಳ್ಳುವವಳಂತೆ ಸೆಳೆದುಕೊಂಡು ಬಲವಾಗಿ ಅಪ್ಪಿ ಕೊಂಡಿದ್ದಳು. ಅವಳಿಂದ ಬಿಡಿಸಿಕೊಂಡ ನಾನು ಅಬ್ಬನ ಕೋಣೆಯೊಳಗೆ ಕಾಲಿರಿಸಿದೆ.

ಮಂಚದಲ್ಲಿ ಅಂಗಾತ ಮಲಗಿ ಸೂರು ದಿಟ್ಟಿಸುತ್ತಿದ್ದ ಅಬ್ಬ, ನನ್ನ ನಿರೀಕ್ಷೆಯಲ್ಲೇ ಇದ್ದವರಂತೆ ಎದ್ದು ಬಂದರು. ಮುಖ ನೋಡಿ ನಾನು ನಗುವ ಮೊದಲೇ ಎತ್ತಿಕೊಂಡು ಎದೆಗೆ ತಬ್ಬಿಕೊಂಡರು. ನನ್ನನ್ನು ಎತ್ತಿಕೊಂಡು ಮಂಚದತ್ತ ನಡೆದ ಅಬ್ಬ, ನನ್ನನ್ನು ಹಾಸಿಗೆಯ ಮೇಲೆ ಮಲಗಿಸಿದರು. ನನ್ನ ಪಕ್ಕದಲ್ಲಿ ಅವರೂ ಮಲಗಿಕೊಂಡರು. ನಾನವರ ತೋಳಿನ ಮೇಲೆ ತಲೆಯಿರಿಸಿ ಮಲಗಿದೆ. ಅಬ್ಬ ಪ್ರೀತಿಯಿಂದ ನನ್ನ ಬೆನ್ನನ್ನು ಮೆತ್ತಗೆ ನೇವರಿಸತೊಡಗಿದರು.

ಸ್ವಲ್ಪವೇ ಹೊತ್ತಿನಲ್ಲಿ ಗೋಡೆಗಂಟಿದ್ದ ಕಂದೀಲನ್ನು ಯಾರೋ ಆರಿಸಿದಂತೆ ಅನ್ನಿಸಿತ್ತು. ಕೋಣೆಯೊಳಗೆ ಕತ್ತಲು.

ಅಷ್ಟರಲ್ಲಿ, ನನ್ನ ಇನ್ನೊಂದು ಪಕ್ಕದಲ್ಲಿ ಉಮ್ಮ ಬಂದು ಮಲಗಿದ್ದರು!

ಅಬ್ಬ ಮತ್ತು ಉಮ್ಮನ ನಡುವೆ ನಾನು!

ಪ್ರತಿ ರಾತ್ರಿಯೂ ಅಬ್ಬ ಮತ್ತು ಉಮ್ಮನ ನಡುವೆ ಮಲಗಿ ನಿದ್ರಿಸುವಂತಿದ್ದರೆ ಎಷ್ಟು ಚೆನ್ನಾಗಿತ್ತು?

ಇದ್ದಕ್ಕಿದ್ದಂತೆ ನನ್ನ ಪಕ್ಕದಲ್ಲಿದ್ದ ಅಬ್ಬ, ಅವರ ತೋಳಿನ ಮೇಲಿದ್ದ ನನ್ನ ತಲೆಯನ್ನು ಸರಿಸಿ ಎದ್ದು ಕುಳಿತಂತೆ ಭಾಸವಾಯಿತು. ಕತ್ತಲಲ್ಲಿ ಏನೂ ಕಾಣಿಸುತ್ತಿರಲಿಲ್ಲ. ಎಡಗೈ ಚಾಚಿ ಅಬ್ಬನನ್ನು ಮುಟ್ಟುವಷ್ಟರಲ್ಲಿ ಅಬ್ಬ ಮಂಚದಿಂದ ಇಳಿದು ಹೋಗಿದ್ದರು. ಎಲ್ಲಿಗೆ ಹೋಗಿರಬಹುದು? ಕಿಟಿಕಿಯ ಪಕ್ಕದಲ್ಲಿದ್ದ ಆಸನವನ್ನು ಯಾರೋ ಎಳೆದಂತಹ ಸದ್ದು ಕೇಳಿಸಿತ್ತು. ಅಬ್ಬ ಕಿಟಿಕಿಯ ಬಳಿಗೆ ಹೋಗಿ ಕುಳಿತುಕೊಂಡರೆ? ಯಾಕೆ? ನನ್ನ ಪಕ್ಕದಲ್ಲಿ ಮಲಗುವುದು ಅವರಿಗೆ ಇಷ್ಟವಾಗಲಿಲ್ಲವೆ?

ಇನ್ನೊಂದು ಪಕ್ಕದಲ್ಲಿದ್ದ ಉಮ್ಮ ಒಮ್ಮೆಲೇ ನನ್ನನ್ನು ಬರಸೆಳೆದುಕೊಂಡಿದ್ದಳು.

ಬಿಕ್ಕಳಿಸುತ್ತಿದ್ದಾರೆಯೇ ಅವರು?

ಎಷ್ಟು ಹೊತ್ತಿಗೆ ನನಗೆ ನಿದ್ರೆ ಬಂತೋ ತಿಳಿಯದು.

–೨–

ಎಚ್ಚರವಾದಾಗ ಅಬ್ಬ ಮತ್ತು ಉಮ್ಮ ಇಬ್ಬರೂ ನನ್ನ ಪಕ್ಕದಲ್ಲಿರಲಿಲ್ಲ. ಉಮ್ಮ ಅಡುಗೆ ಮನೆಯಲ್ಲಿದ್ದಿರಬಹುದು. ಪಕ್ಕನೆ ನೆನಪಾಗಿ, ಕೋಣೆಯ ಎಡಭಾಗಕ್ಕೆ ಕಣ್ಣು ಹಾಯಿಸಿದರೆ, ಕಿಟಿಕಿಯ ಪಕ್ಕದಲ್ಲಿ ಕುಳಿತಿದ್ದ ಅಬ್ಬ, ಹೊರಗೆಲ್ಲೋ ಕಣ್ಣು ನೆಟ್ಟಿದ್ದಂತೆ ಕಾಣಿಸಿತು.

ಹಾಗಾದರೆ ಅಬ್ಬ ರಾತ್ರಿಯಿಡೀ ಅಲ್ಲೇ ಕುಳಿತುಕೊಂಡಿದ್ದರೆ?!

'ಅಬ್ಬಾ...,' ಎಂದು ಕರೆದೆ.

ಒಂದು ಕ್ಷಣ ನನ್ನನ್ನು ನೋಡಿದವರು, ಮತ್ತೆ ಕತ್ತು ತಿರುಗಿಸಿ ಮೊದಲಿನಂತೆಯೇ ಕಿಟಿಕಿಯ ಹೊರಗೆ ಕಣ್ಣು ತೂರಿಸಿದ್ದರು. ನಾನು ಮಂಚದಿಂದ ಇಳಿದು ಅವರ ಬಳಿ ಹೋಗಿ ನಿಂತೆ. ಅವರ ತೊಡೆಗಳನ್ನು ನನ್ನೆರಡೂ ತೋಳುಗಳಿಂದ ಬಳಸಿ ಕೊಂಡು, ಕತ್ತು ಎತ್ತಿ ಅವರ ಮುಖವನ್ನು ದಿಟ್ಟಿಸಿದೆ. ಅವರ ಗಡ್ಡದ ಕೂದಲುಗಳ ತುದಿಗಳಲ್ಲಿ ನೀರಬಿಂದುಗಳು ಜೋಕಾಲಿಯಾಡುತ್ತಾ ಮಿನುಗುತ್ತಿದ್ದವು. ಅವುಗಳನ್ನು ಮುಟ್ಟಿ ನೋಡಲು ಬಲಗೈ ಚಾಚಿದೆ. ಕೈಗೆಟುಕಲಿಲ್ಲ. ಅವರ ತೊಡೆಗಳ ಮೇಲೆ ತಲೆಯಾನಿಸಿ ಸುಮ್ಮನೆ ನಿಂತೆ. ಎತ್ತಿ ಮುತ್ತಿಡಬಹುದೆಂಬ ನನ್ನ ಆಸೆ ಕೊನೆಗೂ ನಿಜವಾಗಲೇ ಇಲ್ಲ. ಅವರು ಕಲ್ಲಿನಂತೆ ಕುಳಿತಿದ್ದರು. ನನಗೆ ಸಿಟ್ಟು ಬಂತು.





ಅವರನ್ನು ಹಾಗೆಯೇ ಬಿಟ್ಟು ಬಾಗಿಲ ಬಳಿಗೆ ಸರಿದೆ.

ಮುಚ್ಚಿದ ಬಾಗಿಲ ಬಳಿ ನಿಂತವಳು ಕತ್ತು ತಿರುವಿ ಅವರತ್ತ ನೋಡಿದೆ.

ಅವರು ನನ್ನನ್ನು ಕರೆಯಬಹುದು ಎಂದುಕೊಂಡಿದ್ದೆ. ಆದರೆ ಅವರು ನನ್ನನ್ನು 'ಅಫೀರಾ..' ಎಂದು ಕರೆಯಲೇ ಇಲ್ಲ.

ಬಾಗಿಲು ಎಳೆದು ತೆರೆಯುತ್ತಿದ್ದಂತೆ ಉಮ್ಮ ನನ್ನನ್ನು ಎತ್ತಿಕೊಂಡಿದ್ದರು.

ರಾತ್ರಿಯಿಡೀ ಅವರು ಬಾಗಿಲ ಬಳಿಯೇ ಕುಳಿತಿದ್ದರೆ?!

ಬಣ್ಣಗೆಟ್ಟ ಉಮ್ಮನ ಮುಖದಲ್ಲಿ ಯಾವ ಭಾವವೂ ಇರಲಿಲ್ಲ. ನನ್ನನ್ನು ಅಪ್ಪಿಕೊಂಡಿರುವಂತೆಯೇ ಅಡುಗೆ ಮನೆಯತ್ತ ಕಾಲೆಳೆದ ಅವರು ಮೂಲೆಯಲ್ಲಿ ಕುಸಿದು ಕುಳಿತರು. ನಮ್ಮನ್ನು ಹಿಂಬಾಲಿಸಿಕೊಂಡೇ ಬಂದಿದ್ದ ದೊಡ್ಡಕ್ಕ ಸಬ್ರಿನಾ ಉಮ್ಮನ ಪಕ್ಕದಲ್ಲೇ ಕುಳಿತಳು. ಅಡುಗೆ ಕೋಣೆಯ ಹೊಸ್ತಿಲ ಬಲಭಾಗದ ಗೋಡೆಗೊರಗಿ ಅಫ್ರಿನಾ ತಲೆ ತಗ್ಗಿಸಿ ನಿಂತಿದ್ದಳು!

ದೊಡ್ಡಕ್ಕ ಒಂದೆರಡು ಬಾರಿ ನನ್ನತ್ತ ಕೈ ಚಾಚಿದರೂ, ನಾನು ಉಮ್ಮನಿಗೆ ಅಂಟಿಕೊಂಡೇ ಕುಳಿತಿದ್ದೆ.

ಉಮ್ಮನಿಗೆ ಅಡುಗೆ ಕೆಲಸಗಳಿಗೆ ನೆರವಾಗುತ್ತಿದ್ದ ಸೇವಕಿ ಬಾಗಿಲ ಹೊರಗಿನಿಂದಲೇ ಇಣುಕುತ್ತಿದ್ದಳು.

ಅವಳೇಕೆ ಒಳಗೆ ಬರುವುದಿಲ್ಲ?

ಸಾಮಾನ್ಯವಾಗಿ ಅಡುಗೆ ಕೋಣೆಗೆ ಅಬ್ಬ ಬರುವ ಕ್ರಮವಿಲ್ಲ. ಆದರೆ, ಇಂದು ಅವರೂ ಬಂದರು. ಹೊರಗೆ ಹೋಗಲು ಸಿದ್ಧರಾಗಿದ್ದವರಂತೆ ನೀಲಿ ಬಣ್ಣದ ನಿಲುವಂಗಿ ಧರಿಸಿದ್ದರು. ತಲೆಗೆ ಮುಂಡಾಸು ಕಟ್ಟಿಕೊಂಡಿದ್ದರು. ಅಫ್ರಿನಾ ಗಾಬರಿಯಿಂದ ನಿಂತಲ್ಲಿಯೇ ಗೋಡೆಗೊತ್ತಿಕೊಂಡರೆ, ನನ್ನ ಪಕ್ಕದಲ್ಲಿದ್ದ ಸಬ್ರಿನಾ ಎದ್ದು ನಿಂತಿದ್ದಳು. ಆದರೆ, ಉಮ್ಮ ಕುಳಿತಲ್ಲಿಂದ ಮಿಸುಕಾಡಿರಲಿಲ್ಲ.

ಹತ್ತಿರ ಬಂದ ಅಬ್ಬ ನನ್ನೆದುರು ಮೊಣಕಾಲುಗಳ ಮೇಲೆ ಕುಳಿತುಕೊಂಡರು. ಉಮ್ಮನಿಗೆ ಅಂಟಿಕೊಂಡು ಕುಳಿತಿದ್ದ ನನ್ನ ಎರಡೂ ತೋಳುಗಳನ್ನು ಹಿಡಿದು ತಮ್ಮತ್ತ ಸೆಳೆದು ಬಿಗಿಯಾಗಿ ಎದೆಗಪ್ಪಿಕೊಂಡರು. ನನಗೆ ಉಸಿರುಗಟ್ಟಿದಂತಾಗಿತ್ತು.

ಉಮ್ಮ ಇದ್ದಕ್ಕಿದ್ದಂತೆ ಸ್ವರವೆಬ್ಬಿಸಿ ಅಳುತ್ತಾ ನೆಲಕ್ಕೆ ಬಿದ್ದು ಹೊರಳಾಡತೊಡಗಿದರು.

ಉಮ್ಮನ ಈ ನಡೆಯನ್ನು ಅಬ್ಬ ನಿರೀಕ್ಷಿಸಿದಂತಿತ್ತು. ಉಮ್ಮನತ್ತ ಕಡೆಗಣ್ಣನ್ನೂ ಹಾಯಿಸದೆ ನನ್ನನ್ನು ಎತ್ತಿಕೊಂಡವರು ಚಾವಡಿಗೆ ಕಾಲಿಟ್ಟರು. ಹೊಸ್ತಿಲ ಹೊರಗಿನಿಂದಲೇ ಅರೆಕ್ಷಣ ಅಡುಗೆ ಕೋಣೆಯತ್ತ ಇಣುಕಿದರು. ಅದನ್ನು ಗಮನಿಸಿದ ಉಮ್ಮನ ಅಳು ಮತ್ತಷ್ಟು ಜೋರಾಯಿತು. ಬೇರೇನೂ ಮಾಡಲು ತೋಚದೆ ಇಬ್ಬರು ಅಕ್ಕಂದಿರೂ

ಉಮ್ಮನ ಜೊತೆಗೆ ಅಳಲಾರಂಭಿಸಿದರು. ಇವರು ಯಾಕೆ ಅಳುತ್ತಿದ್ದಾರೆಂಬುದೇ ನನಗೆ ಅರ್ಥವಾಗಲಿಲ್ಲ. ಅದ್ಯಾವುದೋ ಒಗಟಿನ ಬೆಟ್ಟವೊಂದರ ಮೇಲೆ ನಡುಗುತ್ತಾ ನಿಂತಿರುವಂತೆ ಕಾಣಿಸುತ್ತಿದ್ದರು.

ನನ್ನನ್ನು ಎತ್ತಿಕೊಂಡಿದ್ದ ಅಬ್ಬ ಅಂಗಳಕ್ಕಿಳಿದರು. ಜೀನು ಏರಿಸಿದ್ದ ಕುದುರೆಯೊಂದನ್ನು ಆಳು ಅದಾಗಲೇ ಅಂಗಳದಲ್ಲಿ ನಿಲ್ಲಿಸಿದ್ದ. ಅನಾಮತ್ತಾಗಿ ನನ್ನನ್ನು ಎತ್ತಿ ಕುದುರೆಯೇರಿಸಿದ ಅಬ್ಬ, ತಾವೂ ಹಾರಿ ಕುಳಿತರು. ಕುದುರೆ ಹೊರಟಿತು. ಮನೆಯ ಗೋಡೆಗಳೆಲ್ಲಾ ಕುಸಿದುಬೀಳುವಷ್ಟು ಸ್ವರವೇರಿಸಿ ಮೂವರೂ ಕಿರುಚುತ್ತಿರುವುದು ಬಲುದೂರದವರೆಗೂ ಕೇಳಿಸುತ್ತಿತ್ತು.

ಸೂರ್ಯ ನಿಧಾನವಾಗಿ ಮೇಲೇರಿಬರುತ್ತಿದ್ದ. ಬಲು ದೂರದಲ್ಲಿ ದೇವಮಂದಿರ ಸಣ್ಣ ಗುಡಿಯಂತೆ ಕಾಣಿಸುತ್ತಿತ್ತು. ಬಹು ಹಿಂದಿನ ಕಾಲದ ಕಲ್ಲು ಮತ್ತು ಮರಗಳನ್ನು ಜೋಡಿಸಿ ನಿರ್ಮಿಸಲಾಗಿದ್ದ ಹಳೆಮನೆಗಳ ಸಾಲುಗಳ ನಡುವಿನ ಅಗಲಕಿರಿದಾದ ಬೀದಿಯನ್ನು ಹಾದು ಮುಂದುವರಿದ ಕುದುರೆ, ದೇವಮಂದಿರಕ್ಕೆ ಹೋಗುವ ಮುಖ್ಯ ರಸ್ತೆಗೆ ಕಾಲಿಟ್ಟಿತ್ತು. ದೂರದೂರುಗಳಿಂದ ಕಅಬಾ ಮಂದಿರವನ್ನು ಕಾಣಲು ಬರುವ ಯಾತ್ರಾರ್ಥಿಗಳು ಬಳಸುವ ಮುಖ್ಯ ರಸ್ತೆ ಅದು.

ಆದರೆ ಅಬ್ಬನ ದಾರಿ ಬೇರೆಯೇ ಆಗಿತ್ತು.

ಜೀನನ್ನು ಬಲವಾಗಿ ಎಳೆದ ಅಬ್ಬ, ಕುದುರೆಯನ್ನು ಎಡಭಾಗದ ಹಳೆಯ ಮನೆಯೊಂದರ ಬಲಭಾಗದಲ್ಲಿದ್ದ ಸಣ್ಣ ಸಂದಿಯಲ್ಲಿ ನುಗ್ಗಿಸಿದರು. ಕಿರುದಾರಿಯಲ್ಲೇ ಸ್ವಲ್ಪ ಹೊತ್ತು ಹೆಜ್ಜೆ ಬದಲಿಸಿದ ಕುದುರೆ, ದೇವಮಂದಿರದ ಪಕ್ಕದಲ್ಲೇ ಇದ್ದ 'ಝಮ್ ಝಮ್' ಬಾವಿಯ ಹಿಂಭಾಗದಲ್ಲಿ ಇದ್ದ ಆಳೆತ್ತರದ ಮಣ್ಣಗೋಡೆಯ ಮರೆಯಲ್ಲಿ ನಿಂತಿತು.

ಚೌಕಾಕಾರದ ದೇವಮಂದಿರ 'ಬಾ' ಎನ್ನುತ್ತಿತ್ತು.

ಕುದುರೆಯಿಂದ ಹಾರಿ ಇಳಿದ ಅಬ್ಬ ನನ್ನನ್ನೂ ನೆಲಕ್ಕಿಳಿಸಿದರು. ಕುದುರೆಯನ್ನು ಅಲ್ಲೇ ಪಕ್ಕದ ಕಂಬವೊಂದಕ್ಕೆ ಕಟ್ಟಿದರು. ನನ್ನ ಕೈ ಹಿಡಿದು ನಡೆಸುತ್ತಾ ಬಾವಿಯ ಮೆಟ್ಟಲುಗಳನ್ನು ಇಳಿಸಿದರು. ಬಾವಿಯ ನೀರಿನಿಂದ ನನ್ನ ಕೈಕಾಲು ಮುಖಗಳನ್ನು ತೊಳೆದ ಅಬ್ಬ, ಅವರ ಕೈಕಾಲು ಮುಖಗಳನ್ನೂ ತೊಳೆದುಕೊಂಡರು. ನನ್ನನ್ನು ನಡೆಸಿಕೊಂಡೇ ದೇವಮಂದಿರದ ಮೆಟ್ಟಲೇರಿದರು.

ದೇವಮಂದಿರದ ಜಗಲಿಯಲ್ಲಿ ಹಲವರು ಕುಳಿತಿದ್ದರು; ಕೆಲವರು ನಿಂತಿದ್ದರು. ಒಂದ್ಕೈದಾರು ಭಕ್ತರು ಮೂರ್ತಿಯೊಂದರ ಎದುರು ಒತ್ತೊತ್ತಾಗಿ ಅಡ್ಡಬಿದ್ದು





ಪೂಜಿಸುತ್ತಿದ್ದರೆ, ಮತ್ತೊಂದಿಷ್ಟು ಮಂದಿ ಎಲ್ಲ ಮೂರ್ತಿಗಳನ್ನೂ ಸಮಾನವಾಗಿ ಗೌರವಿಸುತ್ತಾ ಪ್ರದಕ್ಷಿಣೆ ಹಾಕುತ್ತಿದ್ದರು. ಅವರಲ್ಲಿ ಕೆಲವರು ಅರೆನಗ್ನರಾಗಿದ್ದರು. ಪಕ್ಕದ ಜಗಲಿಯಲ್ಲಿ ಕತ್ತು ಕೊಯ್ಯಿಸಿಕೊಂಡಿದ್ದ ಒಂಟೆಯ ದೇಹ ಬಿದ್ದಿತ್ತು. ಅದರ ಕೊರಳಿನಿಂದ ಚಿಮ್ಮಿ ಹರಿಯುತ್ತಿದ್ದ ರಕ್ತದ ಹೊಳೆಯಲ್ಲಿ ಐವರು, ಅವರಲ್ಲಿ ಇಬ್ಬರು ಹೆಂಗಸರು, ಚಿಕ್ಕ ಮಕ್ಕಳಂತೆ ಸಂಪೂರ್ಣ ಬೆತ್ತಲಾಗಿ ಉರುಳಾಡುತ್ತಿದ್ದರು. ರಕ್ತದಿಂದ ಒದ್ದೆಯಾಗಿದ್ದ ಅವರೆಲ್ಲ ಕೆಂಪು ಕೆಂಪಾಗಿ ಭಯಾನಕವಾಗಿ ಕಾಣಿಸುತ್ತಿದ್ದರು.

ಉಝ್ಝಾ ದೇವತೆಯ ಎದುರು ಹೆಚ್ಚು ಕೊಳಕಾಗಿರದ ಜಾಗದಲ್ಲಿ ನನ್ನನ್ನು ಇಳಿಸಿದ ಅಬ್ಬ ಪಕ್ಕದಲ್ಲೇ ಕುಳಿತರು. ಅದೇನನ್ನೋ ಮರೆತವರಂತೆ ಅತ್ತಿತ್ತ ದೃಷ್ಟಿ ಹಾಯಿಸಿದರು. ಎದ್ದು ಹೋಗಿ ದೂರದ ಕಟ್ಟೆಯ ಮೇಲಿರಿಸಿದ್ದ ಹೂಜಿಯೊಂದರಲ್ಲಿ ನೀರು ತಂದುಕೊಟ್ಟು, 'ಎಷ್ಟು ಸಾಧ್ಯವೋ ಅಷ್ಟು ನೀರು ಕುಡಿದುಬಿಡು. ನಿನಗೆ ಬಾಯಾರಿಕೆಯಾಗಬಹುದು' ಎಂದರು.

ಬೆಳಗ್ಗೆ ನಾನೇನೂ ತಿಂದಿರಲಿಲ್ಲ. ಆದರೂ ಹಸಿವಿರಲಿಲ್ಲ. ನಿನ್ನೆ ರಾತ್ರಿ ಅಬ್ಬನ ಕೋಣೆಯಲ್ಲಿರಿಸಿದ್ದ ಹಣ್ಣುಗಳಲ್ಲಿ ಅರ್ಧದಷ್ಟನ್ನು ನಾನೇ ತಿಂದು ಮುಗಿಸಿದ್ದೆ. ಅಬ್ಬನಿಗೆ ಬೇಸರವಾಗಬಹುದೆಂದು ನೀರು ಕುಡಿದೆ. ಹೂಜಿಯನ್ನು ಎತ್ತಿಕೊಂಡು ಅದೇ ಜಾಗದಲ್ಲಿ ಇಟ್ಟು ಬಂದ ಅಬ್ಬ, ಸೊಂಟದಲ್ಲಿ ತೂಗುತ್ತಿದ್ದ ಖಡ್ಗವನ್ನು ಕಿತ್ತು ನೆಲದ ಮೇಲಿರಿಸಿದರು. ಹೊದೆದುಕೊಂಡಿದ್ದ ಮೇಲುವಸ್ತ್ರವನ್ನು ಕಳಚಿ ಮೂರ್ತಿಯ ಎದುರು ಹಾಸಿದರು. ನಾನು ಧರಿಸಿದ್ದ ಮೇಲಂಗಿಯನ್ನೂ ಕಳಚಿ ಮೂರ್ತಿಯ ಎದುರಿಟ್ಟರು. ನಾನು ಸಂಪೂರ್ಣ ಬೆತ್ತಲೆಯಾಗಿದ್ದೆ. ನೆಲದಲ್ಲಿ ಹಾಸಿದ್ದ ಅವರ ಮೇಲುವಸ್ತ್ರದ ಮೇಲೆ ನನ್ನನ್ನು ಮಲಗುವಂತೆ ಹೇಳಿದರು. ನಾನು ಹಾಗೆಯೇ ಮಾಡಿದೆ.

ಎರಡೂ ಕಣ್ಣುಗಳನ್ನು ಮುಚ್ಚಿದ ಅಬ್ಬ ದೇವರ ಸ್ತೋತ್ರ ಪಠಿಸಲಾರಂಭಿಸಿದರು. ದೇವರ ಎದುರು ಸ್ತೋತ್ರಗಳನ್ನು ಪಠಿಸುವುದರಲ್ಲಿ ನನಗೆ ಅಂತಹ ವಿಶೇಷವೇನೂ ಕಾಣಿಸಲಿಲ್ಲ. ಆದರೆ, ಅಬ್ಬನ ಎರಡೂ ಕಣ್ಣುಗಳಿಂದ ನೀರು ಧಾರೆ ಧಾರೆಯಾಗಿ ಇಳಿಯುತ್ತಿರುವುದನ್ನು ಕಂಡಾಗ ಅಚ್ಚರಿಯ ಜೊತೆಗೆ ಭಯವೂ ಆಗಿತ್ತು. ಸೂರ್ಯ ನಿಧಾನವಾಗಿ ನೆತ್ತಿಗೇರುತ್ತಿದ್ದರೂ, ಅವನ ಬಿಸಿಲಕೋಲು ಮಂದಿರದ ಒಳಗೆ ಚಾಚುತ್ತಿರಲಿಲ್ಲ. ಬಹಳ ಹೊತ್ತಾದರೂ ಮುಚ್ಚಿದ್ದ ಅಬ್ಬನ ಕಣ್ಣುರೆಪ್ಪೆಗಳು ತೆರೆದುಕೊಳ್ಳುವ ಯಾವ ಸೂಚನೆಯನ್ನೂ ನೀಡಲಿಲ್ಲ. ಬಹಳ ಹೊತ್ತು ಹಾಗೆಯೇ ಕಳೆಯಿತು.

ಅಷ್ಟರಲ್ಲಿ, ಅಲ್ಲಿಗೆ ಬಂದವರೊಬ್ಬರು ಅಬ್ಬನ ಹೆಗಲ ಮೇಲೆ ಕೈ ಇರಿಸಿದ್ದರು. ಈ ಹಿಂದೆಯೂ ಅವರನ್ನು ಒಂದೆರಡು ಬಾರಿ ಅಬ್ಬನ ಜೊತೆಗೆ ಕಂಡಿದ್ದೆ. ಅಬ್ಬನದೇ ವಯಸ್ಸಿನ ಗೆಳೆಯ ಅವರು. ದೊಡ್ಡ ದೇಹದ ಅಬ್ಬನಿಗೆ ಹೋಲಿಸಿದರೆ ಅವರದು ಕಡ್ಡಿ ಶರೀರ. ಬೆನ್ನ ಮೇಲೆ ಕೈ ಬಿದ್ದಾಗ ಅಬ್ಬ ಕುತೂಹಲದಿಂದ ಕಣ್ಣು ರೆಪ್ಪೆಗಳನ್ನು

ಅಗಲಿಸಿದ್ದರು. ದಡಕ್ಕನೆ ಎದ್ದು ನಿಂತರು. ಅವರನ್ನು ತಬ್ಬಿಕೊಂಡು ಬಿಕ್ಕಳಿಸಿ ಅಳತೊಡಗಿದರು. ಗಾಬರಿಯಿಂದ ನಾನೂ ಎದ್ದು ಕುಳಿತಿದ್ದೆ. ಆನೆಗಾತ್ರದ ಅಬ್ಬನ ದೇಹದ ಭಾರಕ್ಕೆ ಆ ಸಣಕಲು ಗೆಳೆಯನ ಕಾಲುಗಳು ಸೋತು ಕುಸಿಯುತ್ತಿರುವಂತೆ ಕಾಣಿಸಿತು.

ಕಾಣಿಸಿದ್ದು ನಿಜವೂ ಆಯಿತು. ನೋಡು ನೋಡುತ್ತಿರುವಂತೆಯೇ ಇಬ್ಬರೂ ದೊಪ್ಪನೆ ನೆಲಕ್ಕೆ ಬಿದ್ದರು. ಬಿದ್ದ ಸದ್ದಿಗೆ ಅಲ್ಲಿದ್ದವರಲ್ಲಿ ಕೆಲವರು ಓಡಿ ಬಂದು ಇಬ್ಬರನ್ನೂ ತೋಳು ಹಿಡಿದು ಎತ್ತಿ ಕುಳ್ಳಿರಿಸಿದರು. ಎಲ್ಲವೂ ಅರ್ಥವಾದವರಂತೆ ಕಣ್ಣು ಮಿಟುಕಿಸಿದ ಒಬ್ಬರು ಹಿರಿಯರು ನನ್ನ ಕೆನ್ನೆ ಸವರಿ, 'ಒಳ್ಳೆಯದಾಗಲಿ' ಎಂದರು.

ನಾನು ನಕ್ಕೆ.

ನಾನು ನಕ್ಕದ್ದು ಅಬ್ಬನ ಗೆಳೆಯನಿಗೆ ಇಷ್ಟವಾದಂತಿರಲಿಲ್ಲ.

ಸಿಟ್ಟಿನಿಂದ ನನ್ನನ್ನು ದುರುಗುಟ್ಟಿ ನೋಡಿದರು; ಎಲ್ಲದಕ್ಕೂ ನಾನೇ ಕಾರಣವೆಂಬಂತೆ.

'ತಡ ಮಾಡುವುದರಿಂದ ದುಃಖ ಹೆಚ್ಚಾಗುತ್ತದೆ.' ಅಬ್ಬನ ಗೆಳೆಯ ಹೇಳುತ್ತಿದ್ದರು, 'ಈ ಹಿಂದೆ ಎರಡು ಬಾರಿ ತಪ್ಪು ಮಾಡಿದ್ದೀಯಾ. ಈ ಬಾರಿಯೂ ಅದೇ ತಪ್ಪನ್ನು ಮತ್ತೆ ಮಾಡಬೇಡ. ಎದೆ ಕಲ್ಲು ಮಾಡಿಕೊಳ್ಳು. ನೀನು ಸಾಮಾನ್ಯನಲ್ಲ. ಖೈಸ್ ಬಿನ್ ಆಸೀಮ್ ಅಲ್–ತಮೀಮಿಯವರ ಹೆಮ್ಮೆಯ ವಂಶಸ್ಥ ಎಂಬುದನ್ನು ಮರೆಯಬೇಡ. ಬಿಸಿಲೇರುವ ಮುನ್ನವೇ ಕೆಲಸ ಮುಗಿಸಿಬಿಡು.'

ಅಬ್ಬ ಒಂದು ಕ್ಷಣ ಸುತ್ತಲೂ ಕಣ್ಣು ಹಾಯಿಸಿದರು. ಅಲ್ಲಿ ಸೇರಿದ್ದವರೆಲ್ಲ ನಮ್ಮತ್ತವೇ ಕಣ್ಣು ನೆಟ್ಟಿರುವಂತೆ ಅನ್ನಿಸಿತು.

ದೇವಮೂರ್ತಿಯ ಎದುರಿನ ನೆಲದ ಮೇಲೆ ಹಾಸಿದ್ದ ತಮ್ಮ ಅಂಗವಸ್ತ್ರವನ್ನು ಎತ್ತಿಕೊಂಡ ಅಬ್ಬ, ಎದೆ ಮರೆಯಾಗುವಂತೆ ಹೊದೆದುಕೊಂಡರು. ಖಡ್ಗವನ್ನು ಸೊಂಟದ ಪಟ್ಟಿಗೆ ಸೇರಿಸಿಕೊಂಡರು. ನೆಲದಲ್ಲಿ ಹಾಸಿದ್ದ ನನ್ನ ಮೇಲುವಸ್ತ್ರವನ್ನು ಎತ್ತಿಕೊಂಡು ನನಗೂ ತೊಡಿಸಬಹುದು ಅಂದುಕೊಂಡಿದ್ದೆ. ಆದರೆ ಅವರು ಹಾಗೆ ಮಾಡಲಿಲ್ಲ. ಬೆತ್ತಲೆಯಾಗಿರುವಂತೆಯೇ ನನ್ನನ್ನು ಮೆತ್ತಗೆ ಎತ್ತಿಕೊಂಡು ಎದೆಗೊರಗಿಸಿಕೊಂಡರು. ಅಷ್ಟೂ ಮಂದಿಗಳ ಎದುರು ನನ್ನ ಕೆನ್ನೆಗೆ ಮುತ್ತಿಟ್ಟರು. ನನಗೆ ನಾಚಿಕೆಯಾಯಿತು. ತಾವು ತೊಟ್ಟುಕೊಂಡಿದ್ದ ಅಂಗವಸ್ತ್ರವನ್ನು ಬಿಡಿಸಿ, ನನ್ನ ಬೆತ್ತಲು ದೇಹವನ್ನೂ ಒಳಗೊಳ್ಳುವಂತೆ ಹೊದೆದುಕೊಂಡರು.

ತಮ್ಮ ಗೆಳೆಯನತ್ತ ವಾರೆನೋಟ ಬೀರಿದಾಗ ಅವರು, 'ಮುಂದುವರಿಯಲಿ' ಎಂಬಂತೆ ಕಣ್ಣಲ್ಲೇ ಸಮ್ಮತಿ ಸೂಚಿಸಿದರು.

ಅಬ್ಬ ಮಂದಿರದ ಮೆಟ್ಟಲಿಳಿದರು. ಕುದುರೆಯ ಬಳಿ ಹೋಗಬಹುದೆಂದು ಕೊಂಡಿದ್ದೆ. ಆದರೆ, ಹೋಗಲಿಲ್ಲ.





ನನ್ನನ್ನು ಹೆಗಲಿಗೊರಗಿಸಿಕೊಂಡವರು ಕಅಬಾ ದೇವಮಂದಿರದ ವಿರುದ್ಧ ದಿಕ್ಕಲ್ಲಿ ದಾಪುಗಾಲು ಹಾಕತೊಡಗಿದರು.

ಅಬ್ಬನ ಗೆಳೆಯ ಕೂಡಾ ಜೊತೆಗೆ ಬರಬಹುದು ಎಂಬ ನನ್ನ ನಿರೀಕ್ಷೆಯೂ ಸುಳ್ಳಾಯಿತು.

ಕಅಬಾ ದೇವಮಂದಿರದಿಂದ ನೂರ್ ಬೆಟ್ಟಸಾಲು ಬಹಳ ದೂರದಲ್ಲೇನೂ ಇಲ್ಲ. ತೀರಾ ಹತ್ತಿರ.

ಬೆಟ್ಟದ ದಿಕ್ಕಿನಲ್ಲಿ ಕಾಲೆಳೆಯುತ್ತಿದ್ದ ಅಬ್ಬ, ಸಣ್ಣ ಕಣಿವೆಯೊಂದರ ಬಳಿ ಬಲಕ್ಕೆ ತಿರುಗಿದರು. ಆನಂತರ ನೇರವಾಗಿ ಮುಂದುವರಿದರು. ಮರಳಿನ ಪುಟ್ಟ ಪುಟ್ಟ ದಿಬ್ಬಗಳ ನಡುವೆ ಬೆಳೆದಿದ್ದ ಪೊದರುಗಳ ನಡುವೆ ದಾರಿ ಮಾಡಿಕೊಂಡು ಮುಂದೆ ಸಾಗುವುದು ಸುಲಭದ ಕೆಲಸವಲ್ಲ. ಅಬ್ಬನ ಮೇಲುವಸ್ತ್ರದ ಒಳಗೆ, ಎದೆಗೊರಗಿ ಕೊಂಡಿದ್ದ ನನ್ನ ಮೈ ಬೆವರುತ್ತಿತ್ತು. ಆದರೆ, ಅಬ್ಬನ ಹೆಗಲು ಮಾತ್ರ ಮಂಜಿನಂತೆ ತಂಪಾಗಿತ್ತು.

ದಾಪುಗಾಲು ಹಾಕಿ ನಡೆಯುತ್ತಿದ್ದ ಅಬ್ಬ ಇದ್ದಕ್ಕಿದ್ದಂತೆ ನಿಂತುಬಿಟ್ಟರು.

ಸುತ್ತಲೂ ಕಣ್ಣು ಹಾಯಿಸಿದರು. ಕಅಬಾ ಮಂದಿರ ಮರೆಯಾಗಿತ್ತು.

ನಾವಿಬ್ಬರೂ ನಿರ್ಜನ ಮರಳಸಾಗರದ ನಡುವೆ ನಿಂತಿದ್ದೆವು.

ಅಬ್ಬ ಒಮ್ಮೆ ಆಕಾಶದತ್ತ ಕತ್ತು ಎತ್ತಿ ದಿಟ್ಟಿಸಿದರು. ಬಳಿಕ, ಕತ್ತು ಬಾಗಿಸಿ ನನ್ನ ಮುಖ ನೋಡಿದರು. ನನ್ನ ಹಣೆಗೊಂದು ಮುತ್ತು ಕೊಟ್ಟರು. ನಾನು ನಕ್ಕೆ. ನಾಲ್ಕಾರು ಹೆಜ್ಜೆ ಬಲಕ್ಕೆ ಸರಿದ ಅಬ್ಬ ಎರಡಾಳೆತ್ತರ ಬೆಳೆದಿದ್ದ ಕುರುಚಲು ಗಿಡವೊಂದರ ಬಳಿಯಿದ್ದ ಮರಳ ರಾಶಿಯನ್ನು ಕಾಲಲ್ಲಿ ಅಗಲವಾಗಿ ಹರಡಿ ಸಮತಟ್ಟುಗೊಳಿಸಿದರು. ಎಡಕೈಯಲ್ಲಿ ನನ್ನನ್ನು ಅವುಚಿ ಹಿಡಿದುಕೊಂಡೇ, ಹೊದೆದುಕೊಂಡಿದ್ದ ಅಂಗವಸ್ತ್ರದ ಒಂದು ಮೂಲೆಯನ್ನು ಹಲ್ಲಿನಿಂದ ಕಚ್ಚಿಹಿಡಿದು, ಬಲಗೈಯಿಂದ ಅಂಗವಸ್ತ್ರವನ್ನು ನಾಲ್ಕು ಮಡಕೆ ಮಡಚಿ ಮರಳ ಮೇಲೆ ಹರಡಿದರು. ಸಮಾಧಾನವಾದಂತಿರಲಿಲ್ಲ. ಬೆನ್ನು ಬಾಗಿಸಿ ಅದನ್ನು ಹಾಸಿಗೆ ಹಾಸುವಂತೆ ಮತ್ತೊಮ್ಮೆ ಹರಡಿದರು. ಅದರ ಮೇಲೆ ನನ್ನನ್ನು ಮೆತ್ತಗೆ ಮಲಗಿಸಿದರು. ಸ್ವಲ್ಪ ಹೊತ್ತು ನನ್ನನ್ನು ದಿಟ್ಟಿಸುತ್ತಾ ಕಂಭದಂತೆ ನಿಂತರು. ಸೂರ್ಯನ ಕಾಲಬುಡದಲ್ಲಿ ಬೆತ್ತಲಾಗಿ ಅಂಗಾತ ಮಲಗಿಕೊಂಡಿದ್ದೆ ನಾನು.

ಹತ್ತು ಮಾರು ದೂರದಲ್ಲಿ ಬೆಳೆದ ಗಿಡದ ಟೊಂಗೆಯೊಂದನ್ನು ಖಡ್ಗದಿಂದ ತುಂಡರಿಸಿದ ಅಬ್ಬ, ಅದರ ಎಲೆಗಳನ್ನೂ, ಪುಟ್ಟ ಪುಟ್ಟ ಗೆಲ್ಲುಗಳನ್ನೂ ಕಳಚಿ, ಗುದ್ದಲಿಯಂತೆ ಮಾಡಿ ಅದರಿಂದಲೇ ಮರಳುನೆಲ ಬಗೆಯತೊಡಗಿದರು. ನಡು ನಡುವೆ ಮುಂಗೈಯಿಂದ ಕಣ್ಣೊರಸಿಕೊಳ್ಳುತ್ತಿದ್ದ ಅಬ್ಬ, ಮೊಣಕಾಲಿನಷ್ಟು ಆಳದ ಗುಂಡಿ ತೋಡಿದರು.

ಗುಂಡಿಯಿಂದ ಮೇಲೆ ಬಂದ ಅಬ್ಬ ನನ್ನನ್ನೊಮ್ಮೆ ದಿಟ್ಟಿಸಿದರು. ನೋಡುತ್ತಿದ್ದಂತೆಯೇ ಕಾಲುಗಳ ಬಲವನ್ನೆಲ್ಲ ಕಳೆದುಕೊಂಡವರಂತೆ ಒಮ್ಮೆಲೆ ನೆಲಕ್ಕೆ ಕುಸಿದು ಕುಳಿತರು. ಹಾಗೆಯೇ ಸ್ವಲ್ಪ ಹೊತ್ತು ಕುಳಿತುಕೊಂಡಿದ್ದ ಅಬ್ಬ ನಿಧಾನವಾಗಿ ಎದ್ದು ನಿಂತರು. ನೀರಕೊಳವಾಗಿದ್ದ ಅವರ ಕಣ್ಣುಗಳು, ಅದಾಗಲೇ ನೆತ್ತಿದಾಟಿದ್ದ ಸೂರ್ಯನ ಬಿಸಿಲಲ್ಲಿ ಕೆಂಪಾಗಿ ಹೊಳೆಯುತ್ತಿದ್ದವು.

ನನ್ನತ್ತ ಕಾಲೆಳೆಯುತ್ತಾ ಬಂದ ಅಬ್ಬ ಎರಡೂ ತೋಳುಗಳಲ್ಲಿ ನನ್ನನ್ನೆತ್ತಿ ಬಲವಾಗಿ ತಬ್ಬಿಕೊಂಡು ಬೆನ್ನು ನೇವರಿಸತೊಡಗಿದರು. ಅದೇನನ್ನಿಸಿತೋ, ಗಲ್ಲಕ್ಕೆ ಮುತ್ತಿಟ್ಟು ಮತ್ತೊಮ್ಮೆ ಅಪ್ಪಿಕೊಂಡರು, ಹೆಗಲ ಮೇಲೆ ಒರಗಿಸಿ ಬೆನ್ನು ಸವರುತ್ತಾ ನನ್ನನ್ನು ಎತ್ತಿಕೊಂಡು ತೋಡಿದ ಗುಂಡಿಯ ಬಳಿಗೆ ಸಾಗಿದರು.

ಅಲ್ಲೂ ಸ್ವಲ್ಪಹೊತ್ತು ಹಾಗೆಯೇ ನಿಂತಿದ್ದರು.

ಆಮೇಲೆ ಆವೇಶ ಬಂದವರಂತೆ ನನ್ನನ್ನು ಗುಂಡಿಯೊಳಗೆ ಇಳಿಸಿದರು.

ನಾನು ಎದೆಮುಳುಗುವಷ್ಟು ಆಳದಲ್ಲಿ ನಿಂತಿದ್ದೆ.

ನನ್ನೆರಡೂ ಕಾಲುಗಳು ಕಾದ ಮರಳಿನ ಶಾಖಕ್ಕೆ ಸುಡುತ್ತಿದ್ದವು.

ಮುಂದೇನು ಮಾಡಬೇಕೆಂದು ನನ್ನನ್ನೇ ಪ್ರಶ್ನಿಸುವವರಂತೆ ಅಬ್ಬ ನನ್ನನ್ನೇ ದಿಟ್ಟಿಸುತ್ತಿದ್ದರು.

ಅಬ್ಬ ಹೀಗೆಲ್ಲ ಯಾಕೆ ಮಾಡುತ್ತಿದ್ದಾರೆಂಬುದನ್ನು ನಾನು ಕುತೂಹಲದಿಂದ ನೋಡುತ್ತಿದ್ದೆ.

ಮರಳ ಪುಟ್ಟ ರಾಶಿಯೊಂದನ್ನು ಬಲಗಾಲಿನಿಂದ ಗುಂಡಿಗೆ ತಳ್ಳಿದ ಅಬ್ಬ, ಬಳಿಕ ನಿರ್ಧಾರ ಬದಲಿಸಿದವರಂತೆ ಎರಡೂ ಕೈಗಳಿಂದ ಮರಳನ್ನು ಬಾಚುತ್ತಾ ಗುಂಡಿಗೆ ಸುರಿಯತೊಡಗಿದರು.

ನೋಡು ನೋಡುತ್ತಿರುವಂತೆಯೇ ನಾನು ಸೊಂಟದವರೆಗೂ ಮರಳಲ್ಲಿ ಮುಳುಗಿದ್ದೆ.

ಮೈಗಂಟಿದ ಮರಳಿನ ಶಾಖವನ್ನು ತಡೆಯಲಾಗದೆ ಅಳಲು ಶುರುಮಾಡಿದೆ.

ಎರಡೂ ಕೈಗಳನ್ನು ಚಾಚುತ್ತಾ ನನ್ನನ್ನು ಎತ್ತಿಕೊಳ್ಳುವಂತೆ ಅಬ್ಬನನ್ನು ಬೇಡಿಕೊಂಡೆ.

ಆದರೆ, ಅಬ್ಬ ಕಣ್ಣು ಮುಚ್ಚಿದ್ದರು!

ಗುಂಡಿ ಮುಚ್ಚುವ ಅವರ ಕೆಲಸಕ್ಕೆ ವೇಗ ಬಂದಿತ್ತು.

ಅಬ್ಬನ ಚಾಚಿದ ಅಂಗೈಗಳು ನನ್ನ ಎದೆಯ ಬಳಿಗೆ ಬಂದಾಗ, ಎರಡೂ ಕೈಗಳಿಂದ ನಾನು ಅವರ ಬಲಗೈಯ ಕಿರುಬೆರಳನ್ನು ಬಲವಾಗಿ ಹಿಡಿದುಕೊಂಡೆ.

ಆ ಉರಿಬಿಸಿಲಲ್ಲೂ ಅಬ್ಬನ ಬೆರಳು ಮಂಜಿನಂತೆ ಮರಗಟ್ಟಿದ್ದವು!

ನನ್ನ ಮುಷ್ಟಿಯಲ್ಲಿದ್ದ ಅವರ ಕಿರುಬೆರಳನ್ನು ಹಾಗೆಯೇ ಚೀಪಲಾರಂಭಿಸಿದೆ.

* * *





*ನಾನು ಕಣ್ಣೀರ ಕೊಳವಾಗಿದ್ದೆ.*

*ಕೆಂಡದಂತೆ ಸುಡುವ ಮರಳಿನಲ್ಲಿ ಅಷ್ಟೊಂದು ಮುದ್ದಾದ ಮಗುವನ್ನು ಹೂತ ಕಟುಕ ತಂದೆಯ ಬಗ್ಗೆ ಎಲ್ಲಿಲ್ಲದ ಸಿಟ್ಟು ಬಂದಿತ್ತು. ಕಣ್ಣೀರಿನಿಂದ ಮುಳುಗಿದ್ದ ಕಣ್ಣುಗಳನ್ನು ಉಜ್ಜಿಕೊಂಡು ನೋಡಿದರೆ, ಅದುವರೆಗೂ ಕತೆ ಹೇಳುತ್ತಿದ್ದ ಪುಟ್ಟ ಅಫೀರಾ ಮಾಯವಾಗಿದ್ದಳು! ಅವಳನ್ನು ಹೂಳಿದ್ದ ಗುಳಿಯ ಜಾಗದ ಮರಳುನೆಲ ಸಮತಟ್ಟಾಗಿತ್ತು.*

*ಹಾಗಾದರೆ ಇದುವರೆಗೂ ನಾನು ಕಾಣುತ್ತಿದ್ದದ್ದು, ಆಲಿಸುತ್ತಿದ್ದದ್ದು ಏನನ್ನು? ಯಾರಲ್ಲಿ ವಿಚಾರಿಸುವುದು? ದಾರಿ ತೋರಿಸುವೆನೆಂದು ನನ್ನನ್ನು ಕರೆದುಕೊಂಡು ಬಂದ ಅರ್ಷದ್ ಈಗಲೂ ನನ್ನ ಜೊತೆ ಇರುವನೆ?*

*'ಎಲ್ಲಿ ಹೋದಳು ಅವಳು?' ಗಟ್ಟಿ ಸ್ವರದಲ್ಲೇ ಪ್ರಶ್ನಿಸಿದ್ದೆ.*

*'ಸಿಟ್ಟಿಗೇಳದಿರು. ನೀನು ಮೆತ್ತಗೆ ಮಾತನಾಡಿದರೂ ನಾನು ಕೇಳಿಸಿಕೊಳ್ಳಬಲ್ಲೆ.' ಅರ್ಷದ್ ನಕ್ಕಿದ್ದ!*

*'ಆ ಮಗು ಇಲ್ಲಿಂದ ಎಲ್ಲಿಗೆ ಹೋಯಿತು?' ನಾನು ಮತ್ತೊಮ್ಮೆ ಪ್ರಶ್ನಿಸಿದ್ದೆ.*

*'ಮಗು ಅಲ್ಲಿ ಇದ್ದಿದ್ದರಲ್ಲವೆ ಎಲ್ಲಿಗಾದರು ಹೋಗುವುದು?'*

*'ಹಾಗಾದರೆ ನಾನು ನೋಡಿದ್ದು, ಕೇಳಿಸಿಕೊಂಡದ್ದು ಎರಡೂ ಸುಳ್ಳೆ?' ನನಗೆ ಸಿಟ್ಟು ಬಂದಿತ್ತು.*

*'ಖಂಡಿತವಾಗಿಯೂ ಸುಳ್ಳಲ್ಲ. ನೀನು ಕಾಣಬಯಸಿದ್ದನ್ನು ಕಂಡೆ. ಆಲಿಸ ಬಯಸಿದ್ದನ್ನು ಆಲಿಸಿದೆ.'*

*'ಸುಳ್ಳು. ನಾನು ಕಾಣಬಯಸಿದ್ದು ಅಥವಾ ಕೇಳಬಯಸಿದ್ದು ಇವಳನ್ನಾಗಲೀ ಇವಳ ಮಾತುಗಳನ್ನಾಗಲೀ ಅಲ್ಲವೆಂಬುದು ನಿನಗೂ ಗೊತ್ತಿದೆ. ನಾನು ಕಾಣಬಯಸಿದ್ದು ಪ್ರವಾದಿಪತ್ನಿಯರನ್ನು'*

*'ಈ ಪುಟ್ಟ ಆಫಿರಾಳಿಗೆ ಮುಂದೇನಾಯಿತು ಎಂಬ ಕನಿಷ್ಠ ಕುತೂಹಲವೂ ನಿನಗಿಲ್ಲವೆ?' ಮರ್ಮವನ್ನೇ ಕೆದಕುವಂತೆ ಪ್ರಶ್ನಿಸಿದ್ದ ಅರ್ಷದ್.*

*ಹೌದಲ್ಲ! ನಾನೇಕೆ ಇಷ್ಟೊಂದು ನಿರ್ದಯಿಯಾಗಿಬಿಟ್ಟೆ?*

*ಮರಳರಾಶಿಯಲ್ಲಿ, ಅವಳಪ್ಪನಿಂದಲೇ ಹೂಳಲ್ಪಟ್ಟ ಆ ಪುಟ್ಟ ಅಫೀರಾಳನ್ನು ಯಾರಾದರೂ ಎತ್ತಿಕೊಂಡು ಹೋಗಿ ಕಾಪಾಡಿದ್ದಿರಲೇಬೇಕು. ಹಾಗಿಲ್ಲವಾ ಗಿದ್ದಲ್ಲಿ, ಅವಳು ಬೆಳೆದು ದೊಡ್ಡವಳಾದ ಬಳಿಕ ಪ್ರವಾದಿಪತ್ನಿ ಆಯಿಷಾರ ದಾಸಿಯಾಗುವುದಾದರೂ ಹೇಗೆ?*

*‘ತಪ್ಪಾಯಿತು. ಆ ಪುಟ್ಟ ಮಗುವನ್ನು ಯಾರು ಕಾಪಾಡಿದರು?’ ಎಂದು ಪ್ರಶ್ನಿಸಿದೆ.*

*‘ಅವಳನ್ನು ಕಾಪಾಡಿದವರ ಬಾಯಿಯಿಂದಲೇ ವಿವರ ಆಲಿಸೋಣ, ಬಾ’ ಎಂದ ಅರ್ಷದ್.*

*‘ಸರಿ’ಎಂದೆ ನಾನು.*

*ಕಣ್ಣು ಮಿಟುಕಿಸುವುದರೊಳಗೆ ನಾನು ನೂರ್ ಪರ್ವತದ ತಪ್ಪಲಿನ ಹುಲ್ಲುಗಾವಲು ಪ್ರದೇಶದಲ್ಲಿದ್ದೆ.*

*ಸುಮಾರು ಇಪ್ಪತ್ತರ ಹೆಣ್ಣೊಬ್ಬಳು ಕುರಿಮಂದೆಯೊಂದನ್ನು ಮೇಯಿಸುತ್ತಿರುವುದು ದೂರದಿಂದಲೇ ಕಾಣಿಸಿತ್ತು.*

*ನನಗೆ ಅಚ್ಚರಿಯಾಗಿತ್ತು!*

*ಏಳನೆಯ ಶತಮಾನದ ಮಹಿಳೆಯರೂ ದುಡಿಮೆಗಾಗಿ ಮನೆಯಿಂದ ಹೊರಗೆ ಹೋಗುತ್ತಿದ್ದರೆ?!!*

❐



## ಸ್ವಗತ – ಎರಡು

# ಅಕಿಯಾ ಬಿಂತಿ ಮಕ್ಸೂದ್

–೧–

ಪ್ರಸಿದ್ಧವಾದ ಬನೂ ಸುಲೈಮ್ ಗೋತ್ರದಲ್ಲಿ ಹುಟ್ಟಿರುವ ನನ್ನಂತಹ ಹೆಣ್ಣು ಮನೆಯಿಂದ ಹೊರಗೆ, ಅದೂ ಬಟ್ಟಬಯಲಿನಲ್ಲಿ ಮೇಕೆಗಳನ್ನು ಮೇಯಿಸುವಂತಹ ಕೆಲಸ ಮಾಡುವ ಸಂಪ್ರದಾಯವಿಲ್ಲ. ಹಾಗೆ ನೋಡುವುದಾದರೆ, ಅದ್ಯಾವ ಗೋತ್ರದಲ್ಲಿ ಹುಟ್ಟಿದ್ದರೂ, ಹೆಣ್ಣೊಬ್ಬಳು ಜೊತೆಗಾರನಿಲ್ಲದೆ ಬಯಲಲ್ಲಿ ಓಡಾಡುವುದೆಂದರೆ ಅಪಾಯಕ್ಕೆ ಆಮಂತ್ರಣ ಕೊಟ್ಟಂತೆಯೆ. ಹಾಗೆ ಹೊರಗೆ ಹೋಗುವ ಹೆಣ್ಣು ಮದುವೆ ಮಾಡಿಕೊಂಡಿರುವ ಗಂಡನಿಗೂ, ಹುಟ್ಟಿದ ಗೋತ್ರಕ್ಕೂ ಅವಮಾನ ಮಾಡಿದಂತೆ. ಆರಂಭದಲ್ಲಿ ನನ್ನಾಸೆಯನ್ನು ಪತಿ ಮುಅತ್ತಲ್ ನಿರಾಕರಿಸುತ್ತಿದ್ದದ್ದೂ ಇವೇ ಕಾರಣಕ್ಕಿರಬಹುದು.

ಹಾಗೆಂದು ಮುಅತ್ತಲ್ ನೂರು ಕುದುರೆಗಳ ಸರದಾರರೇನೂ ಅಲ್ಲ. ಹೋಗಲಿ, ಸಣಕಲು ಒಂಟೆಯೊಂದರ ಒಡೆಯನೂ ಅಲ್ಲ. ಕುರೈಶ್ ಸರದಾರರ ಕುದುರೆಗಳನ್ನು ಪಳಗಿಸುವ ಚಾಕರಿಯಲ್ಲಿದ್ದವರು. ಅವರೇ ತಮಾಷೆಯಾಗಿ ಹೇಳುವಂತೆ, ಮುಅತ್ತಲ್ ಎಂಬ ಹೆಸರಿಗೆ ಅನ್ವರ್ಥವಾಗುವಂತೆ, ಸುಖದ ಬದುಕಿನಿಂದ ಯಾವತ್ತೂ ಅಮಾನತ್ತಿನಲ್ಲಿರುವ ನತದೃಷ್ಟ. ಆದ್ದರಿಂದಲೇ ಇರಬೇಕು, ಮದುವೆಯಾಗಿ ನಾಲ್ಕು ವರ್ಷಗಳಲ್ಲಿ ಒಂದು ಮಗುವನ್ನೂ ಸರಿಯಾಗಿ ಹೆತ್ತು ಕೊಡಲಾಗದ ನನ್ನನ್ನು ಕಟ್ಟಿಕೊಂಡು ಏಗುತ್ತಿರುವುದು.

ಅಬ್ಬ ಇಟ್ಟ ಹೆಸರೂ ನೆನಪಿಲ್ಲದ ನನ್ನನ್ನು ಎಲ್ಲರೂ ಅಕಿಯಾ ಎಂದೇ ಕರೆಯುತ್ತಿದ್ದರು. ಅಕಿಯಾ ಅಂದರೆ ಸೋದರಿ. ಕ್ರಮೇಣ ಅದೇ ನನ್ನ ಹೆಸರಾಯಿತು. ಮುಅತ್ತಲ್ ನನ್ನನ್ನು ಅಕಿಯಾ ಎಂದು ಕರೆದಾಗಲೆಲ್ಲ ನಗು ಬರುತ್ತಿತ್ತು. ನನಗೆ ಐದಾರು

ಮಕ್ಕಳಿರುತ್ತಿದ್ದರೆ ಮನೆಯಿಂದ ಹೊರಗೆ ಹೋಗಿ ಮೇಕೆ ಮೇಯಿಸುವ ಚಾಕರಿ ಮಾಡಲು ಸಾಧ್ಯವೂ ಇರುತ್ತಿರಲಿಲ್ಲ. 'ಮೇಕೆ ಮೇಯಿಸುವ ಕೆಲಸಗಳಲ್ಲಿ ಅಕಿಯಾ ಯಾವ ಗಂಡಿಗೂ ಕಡಿಮೆಯವಳಲ್ಲ' ಎಂದು ಎಲ್ಲರೂ ನನ್ನನ್ನು ಹೊಗಳುವವರೇ. ನಾನು ಮೇಯಿಸುವ ಮೇಕೆಗಳ ಹಿಂಡಿನಿಂದ ಇಂದಿನವರೆಗೂ ಒಂದೇ ಒಂದು ಮೇಕೆ ತಪ್ಪಿಸಿಕೊಂಡದ್ದಿಲ್ಲ.

ಆದರೆ, ಕಳೆದ ವಾರವಷ್ಟೇ ಎರಡು ಪುಟ್ಟ ಮರಿಗಳಿಗೆ ಜನ್ಮ ನೀಡಿದ್ದ ನನ್ನ ಪ್ರೀತಿಯ ಅಲೈನಾ ಇಂದು ಅದು ಹೇಗೋ ತಪ್ಪಿಸಿಕೊಂಡಿದ್ದಳು. ನನ್ನ ಪ್ರೀತಿಯ ಅಲೈನಾ, ನನ್ನ ರಾಜಕುಮಾರಿ ತಪ್ಪಿಸಿಕೊಂಡಿದ್ದಳು! ಆರು ಆರರಂತೆ, ಒಂಬತ್ತು ಹಿಂಡುಗಳಲ್ಲಿದ್ದ ಒಟ್ಟು ಐವತ್ತನಾಲ್ಕು ಮೇಕೆಗಳಲ್ಲಿ 'ಅಲೈನಾ' ತಪ್ಪಿಸಿಕೊಂಡಿದ್ದಳು. ಆ ಕಪ್ಪು ಸುಂದರಿಗೆ ಅಲೈನಾ ಎಂದು ಹೆಸರಿಟ್ಟವಳೂ ನಾನೇ. ಅದೂ ಅಂತಿಂಥ ಮೇಕೆಯಲ್ಲ. ಎರಡು ವರ್ಷ ತುಂಬುವಷ್ಟರಲ್ಲೇ ನಾಲ್ಕು ವರ್ಷಗಳ ಬೆಳವಣಿಗೆ ತೋರಿಸಿದವಳು.

ಒಡೆಯನ ಕೆಂಪು ಮೂಗು ನೆನಪಾಗುತ್ತಿದ್ದಂತೆ ರಕ್ತವೆಲ್ಲ ತಣ್ಣಗಾಗಿತ್ತು.

ಅವನು ಕೆಟ್ಟವನು; ಬಹಳ ಕೆಟ್ಟವನು. ಕರುಣೆಯ ಲವಲೇಶವೂ ಇಲ್ಲದ ಕಟುಕ. ಮೇಕೆಗಳ ಹಿಂಡಿನೊಂದಿಗೆ ಹೊತ್ತು ಇಳಿಯುತ್ತಿರುವಂತೆಯೇ ಅವನ ಮನೆಯ ಹಿತ್ತಲ ಬಾಗಿಲು ತಲುಪುತ್ತಿದ್ದವಳು ನಾನು. ನನ್ನನ್ನೇ ನಿರೀಕ್ಷಿಸುತ್ತಿದ್ದವನಂತೆ ಹದ್ದಿನಂತೆ ಹಾರಿ ಬಂದು ಎದುರು ನಿಲ್ಲುತ್ತಿದ್ದ. ನನ್ನನ್ನು ತಿನ್ನುವಂತೆ ದಿಟ್ಟಿಸುತ್ತಿದ್ದ. ಎಲ್ಲ ಮೇಕೆಗಳನ್ನು ಒಂದೊಂದಾಗಿ ಎಣಿಸಿ ತೃಪ್ತನಾದ ಬಳಿಕವೇ ಮನೆಗೆ ಮರಳಲು ಅನುಮತಿಸುತ್ತಿದ್ದ.

ನನಗಿಂತ ಮೊದಲು ಮೇಕೆಗಳನ್ನು ಮೇಯಿಸುತ್ತಿದ್ದ ಮುದುಕನೊಬ್ಬನನ್ನು, ಒಂದು ಮೇಕೆ ಕಡಿಮೆಯಾಗಿದೆ ಎಂಬ ಸುಳ್ಳು ಆರೋಪ ಹೊರಿಸಿ, ಎರಡು ತಿಂಗಳ ಕೂಲಿಯನ್ನೂ ಕೊಡದೆ ನೌಕರಿಯಿಂದ ಓಡಿಸಿದ್ದನಂತೆ ಅವನು.

ಒಂದು ಬಾರಿ ಅವನ ಗಂಡಸುತನದ ಶಾಖ ನನಗೂ ತಟ್ಟಿತ್ತು. ಐದಾರು ತಿಂಗಳ ಹಿಂದಿನ ಕತೆ ಅದು.

ಒಡೆಯನ ಹಟ್ಟಿಗೆ ಮರಳುವ ದಾರಿಯಲ್ಲಿ ಅಗಲ ಕಿರಿದಾದ ಅರೆ ಆಳೆತ್ತರದ ಕಂದಕವೊಂದಿತ್ತು. ಅದನ್ನು ಇಳಿದು ಏರಿ ಮುಂದುವರಿಯುವುದು ಮೇಕೆಗಳಿಗೆ ಪ್ರಯಾಸದ ಕೆಲಸವೇನೂ ಅಲ್ಲ. ಸರಸರನೆ ಇಳಿದು ಏರಿಬಿಡುತ್ತಿದ್ದವು. ನಾನೂ ಅಷ್ಟೆ. ಆದರೆ, ಅದೊಂದು ಕೆಟ್ಟ ದಿನ. ಮೇಕೆಮರಿಯೊಂದರ ಅದೃಷ್ಟ ಕೆಟ್ಟಿರಬೇಕು. ಕಂದಕದೊಳಗೆ ಇಳಿಯುವವರೆಗೆ ಎಲ್ಲವೂ ಚೆನ್ನಾಗಿತ್ತು. ಅದು ಮುಕ್ಕಾಲು ಪಾಲು ಮೇಲಕ್ಕೇರಿಯೂ ಇತ್ತು. ಅದೇನಾಯಿತೋ, ಕಾಲು ಜಾರಿದ ಮೇಕೆಮರಿ ಕಂದಕಕ್ಕೆ ಉರುಳಿಬಿತ್ತು. ಹಿಂದೆಯೇ ನಿಂತಿದ್ದ ನಾನು ಕಂದಕಕ್ಕೆ ಧುಮುಕಿ ಆ ಮರಿಯನ್ನು ಎತ್ತಿಕೊಂಡಿದ್ದೆ. ಕಂದಕ ಏರಿ ನೆಲದಲ್ಲಿ ಇಳಿಬಿಟ್ಟಿದ್ದೆ.





ಎಲ್ಲ ಸರಿಯಾಯಿತೆಂದು ಸಮಾಧಾನಪಟ್ಟುಕೊಳ್ಳುತ್ತಿರುವಾಗಲೇ, ಅದಕ್ಕೆ ನಡೆಯಲು ಸಾಧ್ಯವಾಗದೆ ನೆಲದಲ್ಲೇ ಮಲಗಿರುವುದನ್ನು ಕಂಡು ಆತಂಕವಾಯಿತು. ಹತ್ತಿರ ಹೋಗಿ ಎದ್ದು ನಿಲ್ಲಿಸಿದೆ. ಉಹುಂ.., ಅದು ನಿಲ್ಲಲು ಸಮ್ಮತಿಸಿರಲಿಲ್ಲ. ನಿರುಪಾಯಳಾಗಿ ಅದನ್ನು ಎತ್ತಿಕೊಂಡೇ ಒಡೆಯನ ಮನೆಗೆ ಹೋಗಿದ್ದೆ.

ಭಯಪಟ್ಟಂತೆಯೇ ಹಿತ್ತಲ ಬಾಗಿಲ ಬಳಿ ಅವನು ಕಾಯುತ್ತಾ ನಿಂತಿದ್ದ.

ನನ್ನ ತೋಳಿನಲ್ಲಿದ್ದ ಮರಿಯನ್ನು ಕಂಡವನಿಗೆ ಅನುಮಾನ ಮೂಡಿತ್ತು. ಹತ್ತಿರ ಬಂದವನೇ, 'ಏನು ಮಾಡಿಬಿಟ್ಟೆ ನನ್ನ ಮರಿಗೆ?' ಎಂದು ಅಬ್ಬರಿಸಿದ್ದ. ಮೇಕೆಮರಿಯನ್ನು ನಾನು ಎತ್ತಿಕೊಂಡಿರುವಂತೆಯೇ ನಡೆದ ಘಟನೆಯನ್ನು ವಿವರಿಸಿದೆ. ಮಾತು ಮುಗಿಸುವವರೆಗೂ ನನ್ನನ್ನೇ ನುಂಗುವಂತೆ ದಿಟ್ಟಿಸಿ ನೋಡುತ್ತಿದ್ದ ಅವನಿಗೆ ಏನನ್ನಿಸಿತೋ, ತೀರಾ ಹತ್ತಿರ ಬಂದು ನನ್ನ ಎದೆಗಂಟಿಕೊಂಡಿದ್ದ ಮೇಕೆಮರಿಯನ್ನು ಪರೀಕ್ಷಿಸುವವನಂತೆ, ಅದರ ಬೆನ್ನು ಸವರುತ್ತಾ ನನ್ನ ಎದೆಯನ್ನು ಮೆತ್ತಗೆ ಸವರಿದ್ದ.

ಗಲಿಬಿಲಿಗೊಂಡು ಹಿಮ್ಮೆಟ್ಟಿದ ನಾನು ಮೇಕೆಮರಿಯನ್ನು ನೆಲಕ್ಕೆ ಇಳಿಸಿಬಿಟ್ಟೆ.

'ಎತ್ತು..' ಎಂದ.

ನಾನು ಗಾಬರಿಯಿಂದ ಹಾಗೆಯೇ ನಿಂತುಬಿಟ್ಟೆ.

'ಎತ್ತಿ ಹಿಡಿದುಕೋ.., ಅದಕ್ಕೇನಾಗಿದೆಯೆಂದು ನಾನು ಪರೀಕ್ಷಿಸಬೇಕಾಗಿದೆ.' ಅಬ್ಬರಿಸಿದ್ದ ಅವನು.

ಅವನು ಒಡೆಯ; ನಾನು ದಾಸಿ.

ಮಲಗಿಕೊಂಡಿದ್ದ ಮರಿಯನ್ನು ಮತ್ತೊಮ್ಮೆ ಎತ್ತಿಕೊಂಡು ನನ್ನೆದೆಯನ್ನು ಸಂಪೂರ್ಣವಾಗಿ ಮುಚ್ಚಿಕೊಳ್ಳುವಂತೆ ಗಟ್ಟಿಯಾಗಿ ಅವಚಿಕೊಂಡೆ. ಮೇಕೆಮರಿಯ ಕೊರಳನ್ನು ಪರೀಕ್ಷೆ ಮಾಡುವವನಂತೆ ನಟಿಸುತ್ತಾ ಅವನು ನನ್ನ ಮುಖವನ್ನು ಅಳೆಯುವಂತೆ ದಿಟ್ಟಿಸಿದ.

ಅವನ ಬಿಸಿಯುಸಿರು ನನ್ನ ಕಣ್ಣುಗಳನ್ನು ಹಿಂಸಿಸುತ್ತಿತ್ತು. ಅಸಹ್ಯವೆನ್ನಿಸಿ ಅರೆಕ್ಷಣ ರೆಪ್ಪೆಗಳನ್ನು ಮುಚ್ಚಿದೆ.

ಆ ಕ್ಷಣಕ್ಕಾಗಿಯೇ ಕಾಯುತ್ತಿದ್ದವನಂತೆ, ನನ್ನ ಎಡ ಎದೆಯನ್ನು ಜೋರಾಗಿಯೇ ಹಿಚುಕಿಬಿಟ್ಟ.

'ಯಾ ಉಮ್ಮೀ...' ಎಂದು ಸಾಕಷ್ಟು ಜೋರಾಗಿಯೇ ಕೂಗಿದ ನಾನು ನೆಲಕ್ಕೆ ಕುಸಿದು ಕುಳಿತುಬಿಟ್ಟೆ.

ದೇವರೇ ಕಳುಹಿಸಿದಂತೆ, ಅವನ ಹಿರಿಮಗಳು ಸಯೀದಾ, 'ಅಬ್ಬಾ..' ಎನ್ನುತ್ತಾ ಓಡಿ ಬಂದಿದ್ದಳು.

ಗಲಿಬಿಲಿಗೊಂಡ ಒಡೆಯ, ಅಲ್ಲಿ ಏನೂ ನಡೆದಿಲ್ಲವೆಂಬಂತೆ ಸುಮ್ಮನೆ ನಿಂತಿದ್ದ.

ನನ್ನನ್ನು ಪರೀಕ್ಷಿಸುವವಳಂತೆ ದಿಟ್ಟಿಸಿದ ಸಯೀದಾಳಿಗೆ ಎಲ್ಲವೂ ಅರ್ಥವಾಗಿದ್ದಿರಬಹುದು; ನನ್ನಂತೆಯೇ ಒಬ್ಬಳು ಹೆಣ್ಣು ಅವಳು.

'ಮೇಕೆಗಳನ್ನು ಹಟ್ಟಿಯಲ್ಲಿ ಬಿಟ್ಟು ನೀನು ಇಲ್ಲಿಂದ ಹೊರಡು' ಎಂದಳು. ನಾನು ಹಾಗೆಯೇ ಮಾಡಿದೆ.

ಆ ಘಟನೆ ನಡೆದ ಬಳಿಕದ ದಿನಗಳಲ್ಲಿ ಅವನ ವರ್ತನೆಯಲ್ಲಿ ಸ್ವಲ್ಪ ಪರಿವರ್ತನೆ ಕಾಣಿಸಿತ್ತು. ಮೇಕೆಗಳನ್ನು ಎಣಿಸುವ ಅಭ್ಯಾಸದಲ್ಲಿ ಹೆಚ್ಚಿನ ಬದಲಾವಣೆಯಾಗಿರದಿದ್ದರೂ ನನ್ನನ್ನು ನೇರವಾಗಿ ದಿಟ್ಟಿಸುವುದಕ್ಕೆ ಹಿಂಜರಿಯುತ್ತಿದ್ದ.

ಮುಅತ್ತಲನಿಗೆ ಈ ಘಟನೆಯನ್ನು ಹೇಳಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲಾಗದೆ ಕೆಲವು ದಿನಗಳ ಕಾಲ ಗೊಂದಲದಲ್ಲಿದ್ದೆ. ಹೇಳಿದರೆ, ಕೆಲಸಕ್ಕೆ ಹೋಗುವುದನ್ನೇ ನಿಲ್ಲಿಸು ಅಂದಾರು. ಹಾಗಾಗಿ, ಕೆಟ್ಟಕನಸು ಎಂದುಕೊಂಡು, ಆ ಕಹಿಘಟನೆಯನ್ನೇ ಮರೆಯಲು ಯತ್ನಿಸಿದ್ದೆ.

ಆದರೆ, ಇಂದು ಆಗಿರುವ ತಪ್ಪು ಸಣ್ಣದಲ್ಲ. ಅದೆಷ್ಟೇ ಒಳ್ಳೆಯ ಒಡೆಯನೂ ಸುಲಭದಲ್ಲಿ ಕ್ಷಮಿಸಲಾರ. ಆತಂಕದಿಂದ ಅತ್ತಿತ್ತ ನೋಡಿದೆ. ಸುಮಾರು ನೂರೈವತ್ತು ಮಾರು ದೂರದಲ್ಲಿ ಪರಿಚಯದ ಹುಡುಗನೊಬ್ಬ ಮೇಕೆಗಳ ಹಿಂಡೊಂದನ್ನು ಮೇಯಿಸುತ್ತಿದ್ದ. ತಡಮಾಡಲಿಲ್ಲ. ಕೂಗಿ ಕರೆದೆ. ಅವನು ಬಂದ.

ನನ್ನ ಅಲೈನಾ ತಪ್ಪಿಸಿಕೊಂಡಿರುವುದನ್ನು ಹೇಳಿದೆ. ನೆರವು ಯಾಚಿಸಿದೆ. ಆತನ ಮೇಕೆಗಳ ಹಿಂಡಿನ ನಡುವೆಯೇನಾದರೂ ಸೇರಿಕೊಂಡಿದೆಯೇನೋ ಎಂಬುದನ್ನು ಪರೀಕ್ಷಿಸಲು ಹೇಳಿದೆ. ಯಾವುದೇ ಮೇಕೆ, ತನ್ನ ಹಿಂಡನ್ನು ತೊರೆದು ಬೇರೆ ಹಿಂಡಿನ ಜೊತೆಗೆ ಸೇರಿಕೊಳ್ಳುವುದಿಲ್ಲವೆಂಬ ಸತ್ಯ ಅವನಿಗೂ ಗೊತ್ತಿತ್ತು. ಆದರೂ, ನನ್ನ ಸಮಾಧಾನಕ್ಕಾಗಿ ತನ್ನ ಹಿಂಡಿನ ಬಳಿಗೆ ಹೋಗಿ ಮೇಕೆಗಳನ್ನು ಎಣಿಸಿ ಇಲ್ಲವೆನ್ನುವಂತೆ ಕೈಯಾಡಿಸುತ್ತಾ ಮರಳಿದ.

'ನನಗೊಂದು ಸಹಾಯ ಮಾಡಬಲ್ಲೆಯಾ?' ಹುಡುಗನನ್ನು ಮತ್ತೊಮ್ಮೆ ವಿನಂತಿಸಿದೆ.

'ಮಾಡುವೆ' ಎಂಬಂತೆ ತಲೆಯಾಡಿಸಿದ.

'ನಿನ್ನ ಹಿಂಡನ್ನು ನಾನು ನೋಡಿಕೊಳ್ಳುವೆ. ಬೆಟ್ಟದ ತಪ್ಪಲಿನವರೆಗೆ ಹೋಗಿ ನನ್ನ ಮೇಕೆಯನ್ನು ಹುಡುಕಬಲ್ಲೆಯಾ?' ಎಂದೆ.

ಹುಡುಗ ತೆಳ್ಳಗೆ ನಕ್ಕ.

'ನಿನ್ನ ಮೇಕೆಗಳನ್ನೇ ಸರಿಯಾಗಿ ಕಾಪಾಡಲಾರದ ನೀನು, ನಿನ್ನ ಮೇಕೆಗಳ ಜೊತೆಯಲ್ಲಿ ನನ್ನ ಮೇಕೆಗಳನ್ನೂ ಹೇಗೆ ರಕ್ಷಿಸಬಲ್ಲೆ?' ಎಂದು ಪ್ರಶ್ನಿಸುವವನಂತೆ ಮತ್ತೊಮ್ಮೆ ನಕ್ಕ. ನಾನು ತಲೆತಗ್ಗಿಸಿದೆ.





'ಕಳೆದುಕೊಂಡಿರುವ ಮೇಕೆ ಹೇಗಿದೆಯೆಂಬುದು ನನಗಿಂತಲೂ ನಿನಗೆ ಹೆಚ್ಚು ಗೊತ್ತಿರುತ್ತದೆ. ನಿನ್ನ ಹಿಂಡನ್ನು ನಾನು ನೋಡಿಕೊಳ್ಳುವೆ. ನೀನೇ ಹೋಗಿ ಹುಡುಕು' ಎನ್ನುತ್ತಾ ಪರಿಹಾರವನ್ನು ಅವನೇ ಸೂಚಿಸಿದ.

ನನ್ನ ಮೇಕೆಗಳನ್ನು ಅವನ ವಶಕ್ಕೊಪ್ಪಿಸಿ, ಬೆಟ್ಟದ ದಾರಿಯಲ್ಲಿ ಇಳಿಯತೊಡಗಿದೆ.

ಸೂರ್ಯ ಅದಾಗಲೇ ತಂಪಾಗಲಾರಂಭಿಸಿದ್ದ.

ಹುಲ್ಲುಗಾವಲು ದಾಟಿ, ಕುರುಚಲು ಬೆಳೆದಿದ್ದ ಹಸುರು ಕಾಡಿನ ಎಂಟೂ ಸುತ್ತುಗಳಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದೆ. ನನ್ನ ರಾಜಕುಮಾರಿ ಕಾಣಿಸಲಿಲ್ಲ. ಸಿಟ್ಟು, ಅಳು ಎರಡೂ ಒಂದರೊಂದಿಗೆ ಇನ್ನೊಂದು ಅಂಟಿಕೊಂಡು ಬಂದವು. ಅಲೈನಾ ಸಿಗದಿದ್ದರೆ ಒಡೆಯನ ಮನೆಗೆ ಮರಳುವಂತಿರಲಿಲ್ಲ. ನನ್ನ ಮೇಕೆಗಳ ಕಾವಲನ್ನು ಒಪ್ಪಿಕೊಂಡಿದ್ದ ಹುಡುಗನೇನಾದರೂ ತಡವಾಯಿತೆಂದು ತನ್ನ ಮೇಕೆಗಳನ್ನಷ್ಟೇ ಹೊಡೆದುಕೊಂಡು ಹೋದರೆ, ನನ್ನ ಉಳಿದ ಮೇಕೆಗಳಿಗೂ ದಿಕ್ಕಿಲ್ಲದಂತಾಗುತ್ತದೆ.

ಏನು ಮಾಡುವುದು?

ಮುಂದಕ್ಕೆ ಹೋಗಿ ಹುಡುಕುವುದು ವ್ಯರ್ಥ. ಮುಂದಿರುವುದು ಬರೀ ಮರಳ ಹಾಸಿಗೆ. ಮೇಕೆಗಳಿಗೆ ಮೇಯಲು ಅಲ್ಲಿ ಆಹಾರವಿಲ್ಲ. ಒಡೆಯನ ಮನೆಗೆ ಹೋಗಿ ತಪ್ಪೊಪ್ಪಿಕೊಳ್ಳುವುದೆ? ಒಡೆಯ ಯಾವ ಶಿಕ್ಷೆ ವಿಧಿಸಬಹುದು? ತಪ್ಪುಕಾಣಿಕೆಯಾಗಿ ಕೆಟ್ಟದೇನನ್ನಾದರೂ ಬಯಸಿದರೆ? ಒಡೆಯರುಗಳು ಹಾಗೆಲ್ಲ ಬಯಸುವುದು ಅವರದೇ ಕಾನೂನುಗಳಂತೆ ತಪ್ಪೇನೂ ಅಲ್ಲ. ಮೈಮೇಲೆ ಕೆಸರು ಸುರಿದಂತಾಗಿತ್ತು.

'ಓ ದೇವರೇ? ಈ ಸಂಕಷ್ಟದಿಂದ ನನ್ನನ್ನು ಪಾರು ಮಾಡು. ನನ್ನ ಮೇಕೆಯನ್ನು ನನಗೆ ಮರಳಿ ಕೊಡು. ನಿನ್ನ ದೇವಮಂದಿರಕ್ಕೆ ಏಳುನೂರು ಪ್ರದಕ್ಷಿಣೆ ಬರುವೆ' ಎಂದು ಹರಕೆ ಹೊತ್ತೆ.

'ಅಂ! ಅದೇನದು!!?

ನನ್ನ ಹರಕೆ ಫಲಿಸಿತ್ತು.

ಐವತ್ತು ಮಾರು ಅಳತೆಯಷ್ಟು ದೂರದಲ್ಲಿರುವ ಮರಳ ದಿಬ್ಬದ ಬಳಿ ಅಲೈನಾ ಮಲಗಿಕೊಂಡಿದ್ದಾಳೆ!'

ನಂಬಿಕೆಯೇ ಆಗಲಿಲ್ಲ. ನಿಂತಲ್ಲಿಂದಲೇ ಗಟ್ಟಿಯಾಗಿ ಕೂಗಿದೆ, 'ಅಲೈನಾ...., ನನ್ನ ರಾಜಕುಮಾರೀ..'

ಸಾಮಾನ್ಯವಾಗಿ ನನ್ನ ಉಸಿರಿನ ಸದ್ದು ಕೇಳಿಸಿಕೊಂಡರೂ ಸಾಕು; ಅಲೈನಾ ಕುಪ್ಪಳಿಸಿಕೊಂಡು ಬರುವವಳು. ಆದರೆ, ಈ ಬಾರಿ ಮಿಸುಕಾಡಿದಂತೆ ಕಾಣಿಸಲಿಲ್ಲ. ಮತ್ತೊಮ್ಮೆ ಕರೆದೆ, 'ಅಲೈನಾ.., ಅಲ್ಲೇನು ಮಾಡುತ್ತಿದ್ದೀಯಾ..? ಬಾ.., ಮನೆಗೆ ಹೋಗುವ.'

ಆದರೆ, ಅಲ್ಯೆನಾ ನನ್ನ ಧ್ವನಿಯನ್ನೇ ಗುರುತಿಸದವಳಂತೆ ವರ್ತಿಸಿದ್ದಳು. ಗಾಬರಿಯಾಗಿತ್ತು. ಮರಳಲ್ಲಿ ಹುದುಗುವ ಕಾಲುಗಳನ್ನೆಳೆದುಕೊಳ್ಳುತ್ತಾ ನನ್ನ ಅಲ್ಯೆನಾಳತ್ತ ಧಾವಿಸಿದೆ.

ಹಾವು ತುಳಿದವಳಂತೆ ಬೆಚ್ಚಿಬಿದ್ದೆ!

ಕಣ್ಣು ಕತ್ತಲೆ ಬಂದಂತಾಗಿತ್ತು!

ಮರಳಿನ ಸಣ್ಣ ಗುಳಿಯೊಂದರಲ್ಲಿ ಕತ್ತಿನವರೆಗೆ ಹುದುಗಿದ್ದ ಪುಟ್ಟ ಮಗುವೊಂದು, ಅಲ್ಯೆನಾಳ ಮೊಲೆಯೊಂದನ್ನು ಬಾಯೊಳಗೆ ಚೀಪುತ್ತಿರುವಂತೆಯೇ ನಿದ್ರೆಗೆ ಜಾರಿತ್ತು!

ಕೈಕಾಲುಗಳ ಶಕ್ತಿಯೆನ್ನೆಲ್ಲಾ ಕಳೆದುಕೊಂಡವಳಂತೆ ಅಲ್ಯೆನಾಳ ಪಕ್ಕದಲ್ಲಿ ಕುಸಿದು ಕುಳಿತುಬಿಟ್ಟಿದ್ದೆ!

ನಾನೇನು ಮಾಡಬೇಕೆಂಬುದನ್ನು ಸೂಚಿಸುವವಳಂತೆ ಮಲಗಿದ್ದಲ್ಲಿಂದ ಎದ್ದು ಬದಿಗೆ ಸರಿದಿದ್ದಳು ಅಲ್ಯೆನಾ.

ನಾನು ತಡಮಾಡಲಿಲ್ಲ. ಮಗುವಿನ ಪಕ್ಕದಲ್ಲಿ ಕುಳಿತು, ಸ್ವಲ್ಪವೂ ನೋವಾಗದಂತೆ ಮೈಗಂಟಿದ ಮರಳನ್ನು ನಿಧಾನವಾಗಿ ಬಾಚಿದೆ. ಮಗುವಿಗೆ ಎಚ್ಚರವಾಗಲಿಲ್ಲ. ಕಣ್ಣುರೆಪ್ಪೆಗಳು ಜೋಡಿಕೊಂಡೇ ಇದ್ದವು. ಮಗುವಿನ ಎರಡೂ ತೋಳುಗಳ ಅಡಿಯಲ್ಲಿ ಕೈಗಳನ್ನು ತೂರಿ ಮಗುವನ್ನು ನಿಧಾನವಾಗಿ ಮೇಲಕ್ಕೆ ಎತ್ತಿಕೊಂಡೆ. ಆಗಲೂ ಮಗು ಕಣ್ಣು ತೆರೆಯಲ್ಲಿಲ್ಲ; ಆತಂಕವಾಯಿತು. ಮೂಗಿನ ಬಳಿ ಬೆರಳಿಟ್ಟೆ. ಸ್ವಲ್ಪ ಸಮಾಧಾನ ವಾಯಿತು. ಮಗು ಉಸಿರಾಡುತ್ತಿತ್ತು. ಪಕ್ಕದಲ್ಲಿ ನಿಂತಿದ್ದ ನನ್ನ ರಾಜಕುಮಾರಿಯನ್ನು ಕೃತಜ್ಞತೆಯಿಂದ ದಿಟ್ಟಿಸಿದೆ.

ಅಲ್ಲೇನು ನಡೆದಿರಬಹುದೆಂಬುದನ್ನು ಗ್ರಹಿಸಲು ಕಷ್ಟವೇನೂ ಆಗಲಿಲ್ಲ. ಈ ಬಗೆಯ ಕ್ರೌರ್ಯದ ಘಟನೆಗಳು ಗಂಡಸರ ಕಾನೂನಿನಂತೆ ಸಹಜವೇ ಆಗಿದ್ದವು. ಈ ಬಾರಿ ಅಂತಹ ಒಂದು ದುರ್ಘಟನೆಗೆ ನಾನೇ ಸಾಕ್ಷಿಯಾಗಿದ್ದೆ.

ಖೈಸ್ ಬಿನ್ ಆಸೀಮ್–ಅಲ್–ತಮೀಮಿ ಗುಡ್ಡಗಾಡು ತಂಡದ ನಾಯಕನೊಬ್ಬ ಈ ಕ್ರೂರ ಪದ್ಧತಿಯ ಮೂಲ ಪುರುಷನಂತೆ. ಸಮರ್ಥನೆಗೆಂದು ಅವನಿಗೂ ಒಂದು ನೆವವಿತ್ತು. ಶತ್ರು ತಂಡವೊಂದರ ವಿರುದ್ಧ ನಡೆದ ಯುದ್ಧದಲ್ಲಿ ಸೆರೆಯಾಗಿದ್ದ ಅವನ ಮಗಳು, ಯುದ್ಧನಿಯಮದಂತೆ ವಿರೋಧಿ ತಂಡದ ಸದಸ್ಯನೊಬ್ಬನ ಪತ್ನಿಯೂ ಆಗಿಬಿಟ್ಟಿದಳು. ಕೆಲಕಾಲದ ಬಳಿಕ ಎರಡೂ ತಂಡಗಳು ಪರಸ್ಪರ ರಾಜಿ ಒಪ್ಪಂದ ಮಾಡಿಕೊಂಡವು. ರಾಜಿಯಾದ ಬಳಿಕ, ತನ್ನ ಮಗಳನ್ನು ಸ್ವಾಧೀನಕ್ಕೆ ಒಪ್ಪಿಸುವಂತೆ ಖಾಯಿಸ್ ವಿನಂತಿಸಿದ್ದ. ಆದರೆ, ಗಂಡನನ್ನು ಬಿಟ್ಟು ಬರಲು ಆಕೆ ಸಿದ್ಧಳಿರಲಿಲ್ಲ. ಪತಿಯ ಜೊತೆಗೆ ಬಾಳುವೆ ಮುಂದುವರಿಸಲು ನಿರ್ಧರಿಸಿದ ಮಗಳ ವಿರುದ್ಧ ರೊಚ್ಚಿಗೆದ್ದ ಖಾಯಿಸ್, ತನಗೆ ಮತ್ತೊಬ್ಬಳು ಮಗಳು ಹುಟ್ಟಿದರೆ ಜೀವಂತ





ಹೂಳಿಬಿಡುವೆ ಎಂದು ಪ್ರಮಾಣ ಮಾಡಿದ್ದ. ಮುಂದೊಂದು ದಿನ ಹುಟ್ಟಿದ ಮತ್ತೊಬ್ಬಳು ಮಗಳನ್ನು ಹಾಗೆಯೇ ಮಾಡಿ ತನ್ನ ಪ್ರಮಾಣದಂತೆ ನಡೆದುಕೊಂಡಿದ್ದ.

ಮೊದಮೊದಲು ಅವನ ಜನಾಂಗದವರಷ್ಟೇ ಈ ಪದ್ಧತಿಯನ್ನು ಆಚರಿಸುತ್ತಿದ್ದರು. ಕ್ರಮೇಣ ಬೇರೆ ಗೋತ್ರದವರೂ ಅವರನ್ನು ಅನುಸರಿಸಿದರು. ಹೂಳುವುದರಲ್ಲೂ ಅಧಿಕೃತವಾದ ಎರಡು ವಿಧಾನಗಳಿದ್ದವು. ಹೆರಿಗೆಯ ದಿನದಂದು ಗಂಡ, ತನ್ನ ಹೆಂಡತಿಯನ್ನು ಮರಳಿನ ಗುಂಡಿಯೊಂದರಲ್ಲಿ ಹೆರುವಂತೆ ನಿರ್ಬಂಧಿಸುತ್ತಿದ್ದ. ಹುಟ್ಟಿದ ಮಗು ಗಂಡಾದರೆ ಎತ್ತಿಕೊಳ್ಳುತ್ತಿದ್ದ. ಹೆಣ್ಣಾದರೆ ಅಲ್ಲೇ ಮರಳು ಸುರಿದು ಪತ್ನಿಯನ್ನು ಕರೆದುಕೊಂಡು ಹೋಗುತ್ತಿದ್ದ. ಎರಡನೆಯ ಪದ್ಧತಿಯಲ್ಲಿ, ತಂದೆಯೊಬ್ಬ ತನಗೆ ಹುಟ್ಟಿದ ಹೆಣ್ಣು ಮಗುವಿನ ಜೊತೆಗೆ ಎರಡು ಮೂರು ವರ್ಷಗಳ ಕಾಲ ಸಂತಸ ಪಡುವ ಅವಕಾಶವನ್ನು ತಾಯಿಗೆ ನೀಡುತ್ತಿದ್ದ. ಆ ಬಳಿಕ ಹೂಳುವ ವಿಧಿಯನ್ನು ಆಚರಿಸುತ್ತಿದ್ದ.

ಹೆಚ್ಚು ಚಿಂತಿಸಲೂ ಸಮಯಾವಕಾಶವಿರಲಿಲ್ಲ. ಆದಷ್ಟು ಬೇಗ ಮಗುವಿಗೆ ಅಂಟಿಕೊಂಡಿದ್ದ ಮರಳನ್ನು ತೊಳೆಯಬೇಕಾಗಿತ್ತು. ಮಗುವಿಗೆ ನೀರು ಕುಡಿಸಬೇಕಾಗಿತ್ತು. ಅಕ್ಕಪಕ್ಕದಲ್ಲೆಲ್ಲೂ ನೀರಿನ ಆಸರೆಯಿರಲಿಲ್ಲ. ಏನು ಮಾಡುವುದು?

ಅಷ್ಟರಲ್ಲಿ, ಕುದುರೆಯೊಂದು ಬರುತ್ತಿರುವ ಸದ್ದು ಕೇಳಿಸಿತು. ಈ ಹೊತ್ತಲ್ಲಿ ಕುದುರೆಯೇರಿ ಇಲ್ಲಾರು ಬರುತ್ತಾರೆ? ಮಗುವನ್ನು ಈ ಸ್ಥಿತಿಯಲ್ಲಿ ಬಿಟ್ಟುಹೋದವರು, ಮನಸ್ಸು ಕರಗಿ ಕರೆದೊಯ್ಯಲು ಮರಳಿ ಬಂದಿರಬಹುದೇ? ಸದ್ದು ಬಂದತ್ತ ಕತ್ತು ತಿರುವಿದೆ. ದೂರದ ಹಸಿರು ಗಿಡವೊಂದರ ಬಳಿ ಕುದುರೆಯಿಂದ ಇಳಿದ ಸವಾರನೊಬ್ಬ, ಕುದುರೆಯನ್ನು ಗಿಡದ ಕೊಂಬೆಗೆ ಕಟ್ಟಿ ನನ್ನತ್ತ ಧಾವಿಸಿ ಬರುತ್ತಿದ್ದ.

ಒಂದರ ಬಳಿಕ ಮತ್ತೊಂದರಂತೆ ಅಚ್ಚರಿಗಳೇ ಘಟಿಸುತ್ತಿವೆ ಅನ್ನಿಸಿತ್ತು.

ಓಡುತ್ತಾ ಬಂದವರು ಮುಅತ್ತಲ್!

ನನ್ನ ಮಡಿಲಲ್ಲಿದ್ದ ಮಗು ಮತ್ತು ಪಕ್ಕದಲ್ಲಿ ನಾನು ಎತ್ತಿಹಾಕಿದ್ದ ಮರಳಗುಡ್ಡೆಯನ್ನು ಕಂಡ ಅವರಿಗೆ, ಯಾರೂ ಏನನ್ನೂ ವಿವರಿಸಿ ಹೇಳಬೇಕಾಗಿದ್ದಿರಲಿಲ್ಲ. ನನ್ನ ಮಡಿಲಿನಿಂದ ಮಗುವನ್ನು ಎತ್ತಿಕೊಂಡ ಮುಅತ್ತಲ್, 'ಇದು ಉಳಿಯಬೇಕಾದರೆ ಮೊದಲು ನೀರು ಕುಡಿಸಬೇಕು. 'ಝಮ್ ಝಮ್' ಬಾವಿಯ ಬಳಿಗೆ ಮಗುವನ್ನು ಎತ್ತಿಕೊಂಡು ಹೋಗುವೆ. ದೇವಮಂದಿರದ ಬಳಿ ಯಾರಾದರೂ ಹಕೀಮರೂ ಸಿಗಬಹುದು. ನೀನು ಮೇಕೆಗಳ ಜೊತೆಗೆ ಒಡೆಯರ ಮನೆಗೆ ಹೋಗು. ನಾನು ಬರುವವರೆಗೂ ಅವರ ಮನೆಯ ಬಳಿಯೇ ಇರು' ಎಂದವರೇ ಮಗುವನ್ನು ಎದೆಗವಚಿಕೊಂಡು ಕುದುರೆಯ ಬಳಿಗೆ ಧಾವಿಸಿದ್ದರು.

–೨–

ಸೂರ್ಯ ಮರೆಯಾದ ಬಳಿಕ ಒಡೆಯನ ಹಿತ್ತಲಿಗೆಂದೂ ಕಾಲಿಟ್ಟವಳಲ್ಲ ನಾನು. ಎಂದಿಗಿಂತ ಬಹಳ ತಡವಾಗಿದ್ದರಿಂದ ಅವನು ಅಬ್ಬರಿಸಬಹುದಾಗಿದ್ದ ಬಿರುನುಡಿಗಳನ್ನು ಕಲ್ಪಿಸಿಕೊಳ್ಳುತ್ತಾ, ಢವಢವಗುಡುತ್ತಿದ್ದ ಎದೆಯ ಮೇಲೆ ಕೈಯಿರಿಸಿಕೊಂಡು ಆತಂಕದಿಂದಲೇ ಹಿತ್ತಲಿನ ಗೇಟು ಸರಿಸಿದ್ದೆ.

ಆದರೆ, ಒಡೆಯ ಕಾಣಿಸಲಿಲ್ಲ!

ಮೇಕೆಗಳನ್ನು ಮತ್ತೊಮ್ಮೆ ಎಣಿಸಿ ಹಟ್ಟಿಯೊಳಕ್ಕೆ ಅಟ್ಟಿದೆ.

ಉಹುಂ; ಒಡೆಯ ಕಾಣಿಸಲಿಲ್ಲ.

ಮನೆಯ ಹಿತ್ತಲ ಬಾಗಿಲು ತೆರೆದು ಒಡೆಯನ ಮಗಳು ಸಯೀದಾ ಹೊರಗೆ ಬಂದಿದ್ದಳು. ಇನ್ನೂ ಹತ್ತರ ಹೊಸ್ತಿಲಲ್ಲಿರುವ ಚಂದದ ಹುಡುಗಿ. ಅವಳಪ್ಪ ಅದೆಷ್ಟು ಒರಟನೋ, ಇವಳು ಅದಕ್ಕೆ ತದ್ವಿರುದ್ಧ. ಹೆಸರೇ ಹೇಳುವಂತೆ ಸಹನೆ ಮತ್ತು ಮಿದುಮಾತಿನ ಮಿಳಿತದಂತಿದ್ದ ಸೊಗಸುಗಾತಿ.

'ಯಾಕೆ ತಡವಾಯಿತು?' ಸಯೀದಾಳ ಧ್ವನಿಯೂ ಹಾಡಿನಂತೆ.

'ಅಬ್ಬ ಎಲ್ಲಿ?' ನಾನಿನ್ನೂ ಒಡೆಯನ ಗುಂಗಿನಲ್ಲೇ ಇದ್ದೆ.

'ಮನೆಯೊಳಗಿದ್ದಾರೆ. ಯಾಕೆ ತಡ ಮಾಡಿದೆ?' ಮತ್ತೊಮ್ಮೆ ಹಾಡಿದ್ದಳು.

'ಅಬ್ಬ ನನ್ನ ಬಗ್ಗೆ ಏನಾದರೂ ಹೇಳಿದರೆ?' ಅನಗತ್ಯವಾಗಿತ್ತು ನನ್ನ ಪ್ರಶ್ನೆ.

'ಇನ್ನೂ ಇಲ್ಲ; ಏನಾಯಿತು ಇಂದು ನಿನಗೆ?' ತಾಳ್ಮೆ ಕಳೆದುಕೊಳ್ಳದೆ ಮತ್ತೊಮ್ಮೆ ಪ್ರಶ್ನಿಸಿದ್ದಳು.

ದೀರ್ಘವಾಗಿ ಉಸಿರೆಳೆದುಕೊಂಡು, 'ಅದೂ.., ಏನಾಯಿತು... ಅಂದರೇ..' ಎಂದು ಆರಂಭಿಸಿ, ಅಲ್ಯೆನಾ ತಪ್ಪಿಸಿಕೊಂಡ ಆನಂತರದಲ್ಲಿ ಮುಅತ್ತಲ್ ಬರುವವರೆಗೆ ನಾನಿಲ್ಲೆ ಕಾದು ಕುಳಿತಿರಬೇಕಾಗಿರುವ ಅನಿವಾರ್ಯತೆಯವರೆಗೆ ಎಲ್ಲವನ್ನೂ ವಿವರಿಸಿದೆ.

ನನ್ನ ಮಾತುಗಳೆಲ್ಲವನ್ನೂ ಸಮಾಧಾನದಿಂದಲೇ ಆಲಿಸಿದ್ದಳು ಸಯೀದಾ.

ಆದರೆ, ಮಗುವನ್ನು ಜೀವಂತವಾಗಿ ಹೂಳಿದವನ ಬಗ್ಗೆ ತಾತ್ಸಾರದ ಒಂದು ಮಾತೂ ಆಡಲಿಲ್ಲ. ಮಗುವಿನ ಅಸಹಾಯಕತೆಯ ಬಗ್ಗೆ 'ಅಯ್ಯೋ ಪಾಪವೇ' ಎಂದೂ ಉದ್ಗರಿಸಲಿಲ್ಲ. ಬದಲಿಗೆ, ವಿಷಯಾಂತರಿಸುವವಳಂತೆ, 'ನಿನಗೆ ನಿನ್ನ ಅಲ್ಯೆನಾಳ ಬಗ್ಗೆ ಅಷ್ಟೊಂದು ಪ್ರೀತಿಯೆ?' ಎಂದು ಪ್ರಶ್ನಿಸಿದ್ದಳು.

'ನನ್ನ ಪಾಲಿಗೆ ಅದೃಷ್ಟ ತಂದು ಕೊಟ್ಟ ದೇವರು ಅಲ್ಯೆನಾ.' ತಡವರಿಸದೆ ಉತ್ತರಿಸಿದ್ದೆ.





'ನಾಳೆಯಿಂದ ಮೇಯಿಸಲೆಂದು ಮೇಕೆಗಳನ್ನು ಹೊಡೆದುಕೊಂಡು ಹೋಗಲು ಇಲ್ಲಿಗೆ ಬಂದರೆ, ಮನೆಯಲ್ಲಿ ಆ ಮಗುವನ್ನು ಯಾರು ನೋಡಿಕೊಳ್ಳುತ್ತಾರೆ?' ಪ್ರಶ್ನಿಸಿದ್ದಳು ಸಯೀದಾ.

ಗರಬಡಿದಂತಾಗಿತ್ತು ನನಗೆ! ಈ ಬಗ್ಗೆ ನಾನು ಯೋಚಿಸಿರಲೇ ಇಲ್ಲ. ಮಗುವನ್ನು ಮನೆಯಲ್ಲಿ ಒಂಟಿಯಾಗಿ ಬಿಟ್ಟು ಮೇಕೆ ಮೇಯಿಸಲೆಂದು ಮನೆಯಿಂದ ಹೊರಡಲು ಸಾಧ್ಯವೆ? ಉತ್ತರಿಸಲಾಗದೆ ಮೌನಕ್ಕೆ ಶರಣಾದೆ.

'ಹಾಗಾದರೆ, ನಾಳೆಯಿಂದ ನೀನು ಬರುವುದಿಲ್ಲ ಅಲ್ವೆ?' ಸಯೀದಾ ನಾನೇನು ಮಾಡಬೇಕೆಂಬುದನ್ನೂ ತನ್ನ ಮೆಲುಧ್ವನಿಯಲ್ಲೇ ಸೂಚಿಸಿದ್ದಳು. ನಾನು ಮೂಕಳಾಗಿದ್ದೆ.

'ನೀನು ಬರುವುದು ಬೇಡ.' ತೀರ್ಮಾನವನ್ನೂ ಅವಳೇ ಹೇಳಿದ್ದಳು. 'ಹಾಗೆ ಮಾಡುವುದು ದೇವರು ಮೆಚ್ಚುವ ಕೆಲಸವಲ್ಲ.'

ನಾನು ಮೌನವಹಿಸಿದೆ.

'ಸ್ವಲ್ಪ ಹೊತ್ತು ನೀನಿಲ್ಲೇ ಕುಳಿತಿರು. ಇದುವರೆಗಿನ ಕೂಲಿಯನ್ನು ನಿನಗೆ ಕೊಡುವಂತೆ ಅಬ್ಬನಿಗೆ ಹೇಳುವೆ' ಎಂದವಳು, ಎಲ್ಲವನ್ನೂ ಅದಾಗಲೇ ನಿರ್ಧರಿಸಿದವಳಂತೆ ನನ್ನ ಪ್ರತಿಕ್ರಿಯೆಗೂ ಕಾಯದೆ ಹೊರಟುಹೋದಳು.

ಉತ್ತರ ಕಾಣದ ಪ್ರಶ್ನೆಗಳ ಬೆಟ್ಟವೇ ಬಾಯ್ತೆರೆದು ನಿಂತಿತ್ತು. ನಾಳೆಯಿಂದ ಕೆಲಸಕ್ಕೆ ಬಾರದಿದ್ದರೆ ಕೂಲಿ ಸಿಗುವುದಿಲ್ಲ. ಇಬ್ಬರ ಆದಾಯದಿಂದ ಹಾಗೂ ಹೀಗೂ ಬದುಕುತ್ತಿದ್ದವರು ನಾವು. ನಾಳೆಯಿಂದ ಮುಅತ್ತಲ್ ಒಬ್ಬರ ಆದಾಯದಿಂದ ಬದುಕು ಮುಂದುವರಿಸಲು ಕಷ್ಟವಾಗಲಾರದೆ? ಜೊತೆಯಲ್ಲಿ, ಹೊಸದಾಗಿ ಸೇರಿಕೊಂಡ ಮಗುವನ್ನೂ ಸಾಕುವ ಖರ್ಚುಗಳು. ಗಂಡನೊಡನೆ ಚರ್ಚಿಸದೆ ಕೆಲಸ ಬಿಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದೂ ಜಾಣತನವಲ್ಲ. ಸಯೀದಾಳ ಮಾತಿಗೆ ಒಪ್ಪಿದ ಇವಳಬ್ಬ ನನ್ನ ಕೂಲಿ ಸಂದಾಯ ಮಾಡಿ, 'ನಾಳೆಯಿಂದ ಬರಬೇಡ' ಎಂದುಬಿಟ್ಟರೆ ಏನು ಮಾಡುವುದು?

ಭುಜದ ಮೇಲೆ ಯಾರದೋ ಕೈ ಬಿದ್ದಂತಾದಾಗ ಬೆಚ್ಚಿ ಎದ್ದು ನಿಂತೆ.

ಭುಜದ ಮೇಲೆ ಮಗುವನ್ನು ಒರಗಿಸಿಕೊಂಡು ಮುಅತ್ತಲ್ ನಿಂತಿದ್ದರು! ಹೋದ ಉಸಿರು ಬಂದಂತಾಗಿತ್ತು. ಅನುಮಾನದಿಂದಲೇ ಮಗುವಿನ ಕಾಲು ಮುಟ್ಟಿದೆ. ತಣ್ಣಗಿದ್ದಿರಲಿಲ್ಲ. ಮುಖವನ್ನು ಹಿಡಿದು ನೋಡಿದೆ. ಮಗು ನಿದ್ರೆಯಲ್ಲೇ ಇತ್ತು.

ಸಯೀದಾಳ ಜೊತೆಗೆ ನಡೆದ ಮಾತುಕತೆಗಳನ್ನು ಚುಟುಕಾಗಿ ವಿವರಿಸಿದ ನಾನು, 'ನಾಳೆಯಿಂದ ಏನು ಮಾಡುವುದು?' ಎಂಬ ಪ್ರಶ್ನೆಯ ಮೂಲಕ, ನನ್ನೊಬ್ಬಳ ತಲೆತಿನ್ನುತ್ತಿದ್ದ ಸಮಸ್ಯೆಗಳನ್ನೆಲ್ಲ ಅವರ ಹೆಗಲಿಗೇರಿಸಿದೆ.

ಆದರೆ, ಅವರೇನೂ ಚಿಂತಿತರಾದಂತೆ ಕಾಣಿಸಲಿಲ್ಲ!

‘ದೇವರು ಒಂದು ಕೈಯಲ್ಲಿ ಕಿತ್ತುಕೊಂಡರೆ ಮತ್ತೊಂದು ಕೈಯಲ್ಲಿ ಕೊಡುತ್ತಾನೆ ಅಕಿಯಾ. ಚಿಂತಿಸುವ ಅಗತ್ಯವಿಲ್ಲ. ಎಲ್ಲವನ್ನೂ ಮನೆಯಲ್ಲಿ ಹೇಳುವೆ. ಸಿಕ್ಕಿದಷ್ಟು ಕೂಲಿಯನ್ನು ಎತ್ತಿಕೊಂಡು ಒಮ್ಮೆ ಇಲ್ಲಿಂದ ಹೊರಡುವ’ ಎಂದರು. ಅವರ ಮಾತಿನಿಂದ ಸ್ವಲ್ಪ ಸಮಾಧಾನವಾಯಿತಾದರೂ, ನಾಳೆಯಿಂದ ಅವರೊಬ್ಬರ ಸಂಪಾದನೆಯಲ್ಲೇ ಮೂರು ಜೀವಗಳು ಬದುಕುವಂತಾಯಿತಲ್ಲ ಎಂಬ ಚಿಂತೆಯಲ್ಲಿ ಮುಳುಗಿದೆ.

ನಾನು ಚಡಪಡಿಸುತ್ತಿರುವಂತೆಯೇ ಹಿತ್ತಲ ಬಾಗಿಲು ತೆರೆದುಕೊಂಡಿತು.

ಸಯೀದಾ ಹೊರಬಂದಳು; ಅವಳ ಬೆನ್ನ ಹಿಂದೆ ಅವಳ ಅಬ್ಬ.

ಮುಂದೇನಾಗಲಿದೆಯೋ ಎಂಬ ಯೋಚನೆಯಿಂದ ಉಸಿರು ಜೋರಾಯಿತು. ಗಂಡ ಪಕ್ಕದಲ್ಲಿರದಿದ್ದರೆ ಕುಸಿದು ನೆಲಕ್ಕೊರಗುತ್ತಿದ್ದೆನೇನೋ.

ಒಡೆಯ ನನ್ನತ್ತ ತಲೆಯೆತ್ತಿಯೂ ನೋಡಲಿಲ್ಲ.

ಮುಅತ್ತಲ್ ಕೈಯಲ್ಲಿ ಕೆಲವು ನಾಣ್ಯಗಳನ್ನಿಟ್ಟು, ‘ಸಯೀದಾ ಎಲ್ಲವನ್ನೂ ಹೇಳಿದ್ದಾಳೆ. ಅವಳ ಸಲಹೆಯನ್ನು ನಾನೆಂದೂ ತಿರಸ್ಕರಿಸಿದ್ದಿಲ್ಲ. ನಾಳೆಯಿಂದ ಅಕಿಯಾ ಕೆಲಸಕ್ಕೆ ಬರುವುದು ಬೇಡ. ನಿನ್ನ ಹೆಂಡತಿಯನ್ನು ಕರೆದುಕೊಂಡು ಹೋಗು. ಹೋಗುವಾಗ ಅವಳ ಪ್ರೀತಿಯ ಅಲ್ಲೈನಾಳನ್ನು, ಅದರ ಎರಡು ಮರಿಗಳೊಂದಿಗೆ ಕರೆದುಕೊಂಡು ಹೋಗಲಿ. ದೇವರು ಕರುಣಿಸಿದ ಅವಳ ಹೊಸ ಮಗುವಿಗೆ ಹಾಲು ಉಣಿಸಲು ಸಹಾಯಕವಾದೀತು.’

ನನ್ನ ಕಿವಿಗಳನ್ನು ನನಗೇ ನಂಬಲು ಕಷ್ಟವಾಗಿತ್ತು!

ಎರಡು ತಿಂಗಳ ಹಿಂದೆ ನನ್ನೆದೆಯನ್ನು ಒರಟಾಗಿ ಅಮುಕಿದ್ದ ಗಂಡಸು, ಇಂದು ನನ್ನ ಕರುಳನ್ನೇ ಹಿಂಡಿದ್ದರು!

ಮೊತ್ತ ಮೊದಲ ಬಾರಿಗೆ ತಲೆಯೆತ್ತಿ ನನ್ನ ಒಡೆಯರನ್ನು ಗೌರವದಿಂದ ದಿಟ್ಟಿಸಿದ್ದೆ!

ಅವರು ಬೇರೆತ್ತಲೋ ಕಣ್ಣು ನೆಟ್ಟಿದ್ದರು.

–೩–

ಮಗುವನ್ನು ಎದೆಗವಚಿಕೊಂಡು ಕುದುರೆಯ ಪಕ್ಕದಲ್ಲಿ ನಾನು ಕಾಲೆಳೆಯುತ್ತಿದ್ದರೆ, ಅಲ್ಲೈನಾಳ ಕೊರಳಿಗೆ ಬಿಗಿದ ಹಗ್ಗದ ಮತ್ತೊಂದು ಕೊನೆಯನ್ನು ಸೊಂಟಕ್ಕೆ ಕಟ್ಟಿಕೊಂಡ ಮುಅತ್ತಲ್, ತನ್ನೆರಡೂ ತೋಳುಗಳಲ್ಲಿ ಎರಡೂ ಮೇಕೆಮರಿಗಳನ್ನು ತಬ್ಬಿಕೊಂಡು ಹೆಜ್ಜೆ ಬದಲಿಸುತ್ತಿದ್ದರು.





‘ಒಂದು ವೇಳೆ ನಮಗೊಂದು ಹೆಣ್ಣು ಮಗು ಹುಟ್ಟಿದ್ದು, ಅದನ್ನು ನಾನೂ ಇದೇ ರೀತಿಯಲ್ಲಿ ಹೂಳಿದ್ದರೆ ನೀನು ಸಹಿಸಿಕೊಳ್ಳುತ್ತಿದ್ದೆಯಾ?’ ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳನ್ನು ಉದ್ದೇಶಿಸಿ ಪ್ರಶ್ನಿಸಿದಂತಿತ್ತು ಮುಅತ್ತಲ್.

‘ಅಷ್ಟೊಂದು ನಿರ್ದಯಿಯಾಗುವ ಗಂಡನನ್ನು, ಹಿಂದಿನ ರಾತ್ರಿಯಲ್ಲೇ ವಿಷವಿಕ್ಕಿ ಕೊಲ್ಲುತ್ತಿದ್ದೆ.’ ನನಗರಿವಿಲ್ಲದೆ ತುಟಿಗಳ ಸೆರೆಯಿಂದ ಮಾತು ಚಿಮ್ಮಿತ್ತು. ನನ್ನ ಮಾತುಗಳು ತೀರಾ ಒರಟಾಯಿತೆಂಬ ಅಳುಕಿನಿಂದ ತುಟಿಕಚ್ಚಿಕೊಂಡಿದ್ದೆ.

ಆದರೆ, ಅವರೇನೂ ಸಿಟ್ಟಿಗೆದ್ದಂತೆ ಕಾಣಿಸಲಿಲ್ಲ. ‘ಹೆಣ್ಣೋ.., ಗಂಡೋ.., ನಮ್ಮ ಮನೆಯೊಳಗೂ ಆ ಅದೃಷ್ಟದ ದಿನ ಎಂದು ಕಾಲಿಟ್ಟೀತೊ?’ ಎಂದು ಗುಣುಗಿದ್ದರು.

‘ಈ ಮಗು ಆ ಅದೃಷ್ಟವನ್ನೂ ತರಲಿದೆ’ ನಾನು ಭರವಸೆಯ ಧ್ವನಿಯಲ್ಲೇ ಹೇಳಿದ್ದೆ. ‘ನೋಡುತ್ತಿರಿ. ಈ ಮಗುವಿನ ಕಾರಣದಿಂದ ನನ್ನ ಅಲ್ಲೈನಾ ಸಿಕ್ಕಿದಳು, ರಾಜಕುಮಾರಿಯ ಇಬ್ಬರು ಮಕ್ಕಳೂ ಸಿಕ್ಕಿದರು. ನಮಗೆ ಅದೃಷ್ಟವಿಲ್ಲದಿರಬಹುದು. ಈ ಮಗುವಿನ ಅದೃಷ್ಟ ದಿಂದ ನಮಗೇಕೆ ಮುಂದೊಂದು ದಿನ ಆರೋಗ್ಯವಂತ ಮಕ್ಕಳಾಗಬಾರದು?’ ಇದು ನಾನು ತುಟಿತಪ್ಪಿ ಹೇಳಿದ ಮಾತಾಗಿರಲಿಲ್ಲ. ನನಗೇಕೋ ಹಾಗೆ ಹೇಳಬೇಕು ಅನ್ನಿಸಿತ್ತು.

‘ನಿನ್ನ ಮಾತು ಬಲುಬೇಗ ನಿಜವಾಗಲೂಬಹುದು, ಯಾಕೆಂದರೆ.., ಯಾಕೆಂದರೇ...,’ ಎಂದವರು ಮಾತು ಮುಂದುವರಿಸಲಾಗದೆ ತಡವರಿಸಿದರು. ನಾಲ್ಕು ಹೆಜ್ಜೆ ಮೌನವಾಗಿಯೇ ಹೆಜ್ಜೆ ಬದಲಿಸಿದ ಮುಅತ್ತಲ್, ‘ನಾಳೆಯಿಂದ ಯಾರಾದರೂ ಈ ಮಗು ಯಾರದ್ದು ಎಂಬುದಾಗಿ ವಿಚಾರಿಸಿದರೆ, ನಿನ್ನ ಅಕ್ಕನದ್ದು ಎಂದೇ ಹೇಳಬೇಕು. ನಿನ್ನ ಅಕ್ಕ ಎಲ್ಲಿದ್ದಾಳೆ ಎಂದು ಕೇಳಿದರೆ, ಮಗುವನ್ನು ಹೆತ್ತಕೂಡಲೇ ತೀರಿಕೊಂಡಳು ಎಂದೇ ಹೇಳಬೇಕು. ನಾನೂ ಹಾಗೆಯೇ ಹೇಳುವೆ. ನೀನೊಂದು ರೀತಿ, ನಾನೊಂದು ರೀತಿಯಲ್ಲಿ ಹೇಳಿದರೆ ಇಬ್ಬರೂ ಸಿಕ್ಕಿ ಹಾಕಿಕೊಂಡೇವು.’

‘ನಿಜವನ್ನು ಹೇಳಿದರೆ ನಾವೇಕೆ ಸಿಕ್ಕಿಹಾಕಿಕೊಳ್ಳುತ್ತೇವೆ! ನಾವೇನು ಮಗುವನ್ನು ಕದ್ದು ತಂದಿದ್ದೇವೆಯೆ?’ ಅಸಹನೆಯಿಂದಲೇ ಪ್ರಶ್ನಿಸಿದ್ದೆ.

‘ಕಾರಣ ಇದೆ.’ ಭುಜಕ್ಕೆ ಭುಜ ತಾಗುವಷ್ಟು ಹತ್ತಿರಕ್ಕೆ ಬಂದ ಮುಅತ್ತಲ್, ನಾವು ನಡೆಯುತ್ತಿರುವ ದಾರಿಯಲ್ಲಿ ನಮ್ಮಿಬ್ಬರನ್ನು ಹೊರತುಪಡಿಸಿ ಬೇರೆ ಮನುಷ್ಯರ ನೆರಳೂ ಇಲ್ಲದಿದ್ದರೂ, ನನ್ನ ಕಿವಿಗೆ ಮಾತ್ರ ಕೇಳಿಸುವಷ್ಟು ಮೆತ್ತಗಿನ ಸ್ವರದಲ್ಲಿ ಹೇಳತೊಡಗಿದರು.

‘ಈ ಮಗು ನಮಗೆ ಅದೃಷ್ಟ ತಂದಿರುವುದಂತೂ ಸತ್ಯ. ನನ್ನ ಸೊಂಟದಲ್ಲಿರುವ ನಾಣ್ಯಗಳ ಥೈಲಿಯೇ ಅದಕ್ಕೆ ಸಾಕ್ಷಿ.’ ಎಂದರು.

‘ಎನು!?’

‘ನನ್ನ ಸೊಂಟದಲ್ಲಿ ತೂಗುತ್ತಿರುವ ಕೆಂಪು ಥೈಲಿಯೊಂದು ಕಾಣಿಸುತ್ತಿದೆಯೆ?’

ನೋಡಿದೆ. ಕತ್ತಲಲ್ಲಿ ಕಪ್ಪಾಗಿ ಕಾಣಿಸುತ್ತಿದ್ದ ಪುಟ್ಟ ಚೀಲವೊಂದು ಅವರ ಸೊಂಟದಲ್ಲಿ ತೂಗುತ್ತಿತ್ತು. ಅಚ್ಚರಿಯಿಂದ ಮುಟ್ಟಿ ನೋಡಿದೆ. ನಾಣ್ಯಗಳನ್ನು ತುಂಬಿಕೊಂಡಂತಿತ್ತು. ಬಂಗಾರದದ್ದಿರಬಹುದೆ!

'ಚೀಲದಲ್ಲಿ ಬಂಗಾರದ ನಾಣ್ಯಗಳಿವೆಯೆ?'

'ಹೌದು; ಒಂದಲ್ಲ, ಎರಡಲ್ಲ; ಆರು ನೂರು ದಿರ್ಹಾಮ್‌ಗಳಿಗಿಂತಲೂ ಹೆಚ್ಚು!'

'ಆರು ನೂರು ದಿರ್ಹಮ್‌ಗಳಿಗಿಂತಲೂ ಹೆಚ್ಚು? ಎಲ್ಲಿಂದ ಸಿಕ್ಕಿತು ಇಷ್ಟೊಂದು ದೊಡ್ಡ ಸಂಪತ್ತು?' ಅಂಜಿಕೆಯಿಂದಲೇ ಪ್ರಶ್ನಿಸಿದ್ದೆನಾದರೂ ಅದರ ಜೊತೆಯಲ್ಲಿ 'ಇವಿಷ್ಟೂ ನಮ್ಮದೇನಾ?' ಎಂಬ ಆಸೆಯನ್ನೂ ಸೇರಿಸಿದ್ದೆ.

'ನಮ್ಮದಲ್ಲ, ನಿನ್ನ ಹೆಗಲಲ್ಲಿರುವ ಮಗುವಿಗೆ ಸೇರಿದ್ದು.'

'ಏನು? ಈ ಮಗುವಿಗೆ ಸೇರಿದ್ದು!'

'ಹೌದು. ಆ ಮಗುವಿನ ಜೊತೆಗೆ ಬಂದಿರುವ ಅದೃಷ್ಟದ ಸಂಪತ್ತು ಇವು.'

ನನಗೆ ಒಟ್ಟಿನಲ್ಲಿ ಗೊಂದಲ. 'ಅದು ಹೇಗೆ ಸಾಧ್ಯ? ಮರಳಿನ ಗುಂಡಿಯಿಂದ ಮಗುವನ್ನು ಎತ್ತಿ ನಿಮಗೆ ಕೊಟ್ಟಿದ್ದಾಗ, ಅದರ ಮೈ ಮೇಲೆ ಒಂದು ನೂಲಿನ ಎಳೆಯೂ ಇರಲಿಲ್ಲ. ನಾಣ್ಯಗಳನ್ನು ಅದೇನು ಹೊಟ್ಟೆಯೊಳಗೆ ಬಚ್ಚಿಟ್ಟುಕೊಂಡಿತ್ತೆ?'

ಮುಅತ್ತಲ್ ಉತ್ತರಿಸಲು ಅನುಮಾನಿಸಿದರು.

'ಯಾಕೆ ಮಾತನಾಡುವುದಿಲ್ಲ?' ನನಗೆ ಕುತೂಹಲ.

'ಹಾಗಾದರೆ, ನಾನು ಹೇಳುವುದನ್ನೆಲ್ಲ ಗಮನವಿಟ್ಟು ಕೇಳು. ನಡುನಡುವೆ ಬಾಯಿ ಹಾಕಬೇಡ. ಹಾಗೆಯೇ ಇದು ನಮ್ಮಿಬ್ಬರೊಳಗೆ ಮಾತ್ರ ಉಳಿಯಬೇಕಾದ ರಹಸ್ಯ. ಯಾವುದೇ ಕಾರಣಕ್ಕೂ ಬೇರೆಯವರಿಗೆ ಗೊತ್ತಾಗಬಾರದು. ಗೊತ್ತಾದರೆ, ನಮ್ಮಿಬ್ಬರನ್ನೂ ಈ ಮಗುವಿನ ಜೊತೆಗೆ ಅದೇ ಗುಂಡಿಯಲ್ಲಿ ಹೂತುಬಿಡುವರು. ಅರ್ಥವಾಯಿತೆ?'

'ಹೂಂ. ಹೂಂ.., ಖಂಡಿತಾ ಯಾರಿಗೂ ಹೇಳುವುದಿಲ್ಲ. ಇದೆಲ್ಲ ಹೇಗೆ ಆಯಿತು ಎಂಬುದನ್ನು ಒಮ್ಮೆ ಹೇಳಿಬಿಡಿ' ಎಂದೆ.

ಅತ್ತಿತ್ತ ಕಣ್ಣು ಹಾಯಿಸಿದ ಮುಅತ್ತಲ್ ನಿಧಾನವಾಗಿ ಹೇಳತೊಡಗಿದರು.

'ನಾನು ಮಗುವನ್ನು ಎತ್ತಿಕೊಂಡು ಝಮ್ ಝಮ್ ಬಾವಿಯ ಬಳಿಗೆ ತಲುಪಿದ್ದಾಗ, ಬಾವಿಯ ಬಳಿಯಾಗಲೀ ದೇವಮಂದಿರದ ಜಗಲಿಯಲ್ಲಾಗಲೀ ಒಂದೇ ಒಂದು ನರಪಿಳ್ಳೆಯೂ ಇರಲಿಲ್ಲ. ನಿನಗೂ ಗೊತ್ತಿರಬಹುದು, ಯಾವುದೇ ಹೊತ್ತಿನಲ್ಲೂ, ಅದು ನಡು ರಾತ್ರಿಯೇ ಆಗಿದ್ದಿರೂ, ನಾಲ್ಕೈದು ಭಕ್ತರಾದರೂ ಅಲ್ಲಿ ಇದ್ದೇ ಇರುತ್ತಿದ್ದರು. ಪೂರ್ತಿ ಕತ್ತಲೆಯೇನೂ ಆಗಿದ್ದಿರಲಿಲ್ಲ. ಮಂದಿರದ ಹೊರಗೆ ಸ್ವಲ್ಪ ದೂರದಲ್ಲಿ ಅದ್ಯಾರೋ ಉರಿಸಿದ್ದ ಕೆಂಡರಾಶಿಯಿಂದ ಹೊಗೆ ಮೇಲೇಳುತ್ತಿತ್ತು. ನನಗೆ ಅಚ್ಚರಿಯ ಜೊತೆಗೆ ಭಯವಾಗಿತ್ತಾದರೂ, ಹೆಚ್ಚು ಯೋಚಿಸಲು ಸಮಯವಿರಲಿಲ್ಲ.





'ಮಗುವಿನೊಂದಿಗೆ ಕುದುರೆಯಿಂದ ಇಳಿದ ನಾನು, ಕುದುರೆಯನ್ನು ಕಂಬಕ್ಕೆ ಕಟ್ಟಿ ಬಾವಿಯ ಮೆಟ್ಟಲುಗಳನ್ನು ಇಳಿದೆ. ಮಗುವಿನ ತುಟಿ ಸಂದಿಯಲ್ಲಿ ಒಂದೆರಡು ಹನಿ ನೀರು ಹನಿಸಿದೆ. ಮಗುವಿನ ಮೈಗೆ ಅಂಟಿಕೊಂಡಿದ್ದ ಮರಳನ್ನೆಲ್ಲ ನಿಧಾನವಾಗಿ ತೊಳೆದೆ. ಮೆಟ್ಟಲೇರುತ್ತಿರುವಂತೆಯೇ ಮಗು ಅಳಲಾರಂಭಿಸಿತ್ತು. ಸಂತೋಷವೇನೋ ಆಗಿತ್ತು. ಆದರೆ, ಅಳುವನ್ನು ನಿಲ್ಲಿಸಲು ಏನು ಮಾಡಬೇಕೆಂಬುದು ನನಗೆ ಗೊತ್ತಿರಲಿಲ್ಲ. ಮಗುವಿಗೆ ಚಳಿಯಾಗುತ್ತಿರಬಹುದೇನೋ ಎಂಬ ಅನುಮಾನಿಸಿದೆ. ಬೆಚ್ಚಗೆ ಹೊದಿಸಲು ಏನಾದರೊಂದು ವಸ್ತ್ರ ಬೇಕಿತ್ತು. ಮಗುವನ್ನು ಎತ್ತಿಕೊಂಡು ಮಂದಿರದ ಒಳಗೆ ಹೋದೆ. ಉಹದ್ ದೇವರ ವಿಗ್ರಹದ ಎದುರು ಯಾರೋ ಭಕ್ತರು ಹಾಸಿದ ಚಾದರವೊಂದನ್ನು ಹಾಗೆಯೇ ಇತ್ತು. ಅತ್ತಿತ್ತ ನೋಡಿದೆ. ಯಾರೂ ಕಾಣಿಸಲಿಲ್ಲ. 'ದೇವರೇ ನೀನೇ ಕಾಪಾಡಬೇಕು' ಎಂದು ಪ್ರಾರ್ಥಿಸಿ, ಚಾದರವನ್ನು ಸರಕ್ಕನೆ ಎಳೆದು ಮಗುವನ್ನು ಸುತ್ತಿಕೊಂಡೆ.

'ಇನ್ನೇನು, ಮಂದಿರದ ಮೆಟ್ಟಲು ಇಳಿಯಬೇಕೆನ್ನುವಷ್ಟರಲ್ಲಿ, ನನ್ನ ದಾರಿಗೆ ವೃದ್ಧರೊಬ್ಬರು ಅಡ್ಡಲಾಗಿ ನಿಂತಿದ್ದರು!

'ರಕ್ತವೆಲ್ಲ ತಣ್ಣಗಾಗಿತ್ತು!

'ಚಾದರ ಕಳವು ಮಾಡಿದ್ದನ್ನು ಅವರು ಗಮನಿಸಿದ್ದಿರಬಹುದೇ ಎಂಬ ಅಳುಕು ಕಾಡಿತು.

'ಹತ್ತಿರ ಬಂದ ಅವರು, ಬೆಂಕಿಯ ಬಳಿ ಮಗುವನ್ನು ಚಾದರ ಸಹಿತ ಸ್ವಲ್ಪ ಹೊತ್ತು ಹಿಡಿದುಕೋ' ಎಂದರು. ಸಂಮೋಹಿನಿ ಗೊಂಡವನಂತೆ ಅತ್ತ ಕಾಲೆಳೆಯುತ್ತಿದ್ದಾಗ ಅವರೂ ಬಂದರು. ತಮ್ಮ ಜೋಳಿಗೆಯಿಂದ ಚರ್ಮದ ಚೀಲವೊಂದನ್ನು ಹೊರತೆಗೆದರು. ಭಯದಿಂದ ನಾನು ಅವರತ್ತ ಕಣ್ಣು ನೆಟ್ಟಿದ್ದೆ. ನನ್ನ ತೋಳುಗಳಲ್ಲಿದ್ದ ಮಗುವನ್ನು ಮುಚ್ಚಿದ್ದ ಚಾದರವನ್ನು ಅವರು ಸರಿಸುತ್ತಿದ್ದಾಗಲೂ ಪ್ರತಿರೋಧ ಸೂಚಿಸಲು ಸಾಧ್ಯವಾಗಲಿಲ್ಲ. ನಾನು ಕಣ್ಣರಳಿಸಿ ನೋಡುತ್ತಿರುವಂತೆಯೇ ಮಗುವಿನ ತುಟಿಗಳನ್ನು ಬೆರಳುಗಳಿಂದ ಅಗಲಿಸಿ ಎರಡು ಬಿಂದು ಅದೇನೋ ಒಂದು ಕೆಂಪಾದ ದ್ರವ ಸುರಿದರು. ಬಳಿಕ, 'ನಾಳೆಯ ಸೂರ್ಯ ಕಣ್ಣು ಬಿಡುವ ಜೊತೆಯಲ್ಲಿ ಈ ಮಗು ಕೂಡಾ ಸರಿಯಾಗಿ ಕಣ್ಣು ಬಿಡುತ್ತದೆ. ನಿಮಗೆಲ್ಲ ಶುಭವಾಗುತ್ತದೆ. ನೀನು ಹೊರಡು' ಎಂದರು. ಅಲ್ಲಿಂದ ಬಿರಬಿರನೆ ಹೊರಟು ಹೋದರು. ಈ ಹಿಂದೆ ಎಲ್ಲಿಯೂ ಅವರನ್ನು ನೋಡಿದ್ದ ನೆನಪಿಲ್ಲ ನನಗೆ. ದೂರದ ನಸುಗತ್ತಲಲ್ಲಿ ಅವರು ಕರಗಿಹೋಗುತ್ತಿರುವುದನ್ನು ಕೃತಜ್ಞತೆಯಿಂದ ನೋಡುತ್ತಾ ಬಹಳ ಹೊತ್ತು ನಿಂತಿದ್ದೆ.

'ಮಗುವಿನ ಅಳುವಿನ ಸದ್ದು ಮತ್ತೊಮ್ಮೆ ಕೇಳಿಸಿದಾಗಲೇ ಎಚ್ಚರವಾದದ್ದು. ನನ್ನೆದುರು ಎರಡು ಆಯ್ಕೆಗಳಿದ್ದವು. ನನ್ನ ಬಳಿ ಇರುವ ಕುದುರೆಯನ್ನು ಒಡೆಯನ ಮನೆಯ ಲಾಯದಲ್ಲಿ ಸೇರಿಸಿ ನೀನಿರುವಲ್ಲಿಗೆ ಬರುವುದು ಮೊದಲನೆಯದು.

ಅಥವಾ, ಅಳುತ್ತಿರುವ ಮಗುವನ್ನು ಎತ್ತಿಕೊಂಡು ಕುದುರೆಯೇರಿ ನೇರವಾಗಿ ಇಲ್ಲಿಗೆ ಬಂದುಬಿಡುವುದು ಎರಡನೆಯದು. ಯಾವುದನ್ನು ಮೊದಲು ಮಾಡಬೇಕೆಂಬುದನ್ನೇ ನಿರ್ಧರಿಸಲು ಕಷ್ಟವಾಯಿತು. ಮಗುವಿನ ಜೊತೆಗೆ ಕುದುರೆಯ ಒಡೆಯನ ಮನೆಗೆ ಹೋದರೆ, ಅಲ್ಲಿ ಯಾರಾದರೂ 'ಈ ಮಗು ಯಾರದ್ದು' ಎಂದು ವಿಚಾರಿಸಬಹುದು. ಆ ಭಯದಿಂದ ನೇರ ಇಲ್ಲಿಗೆ ಬರುವ ದಾರಿಯಲ್ಲಿ ಹೊರಟೆ.

'ನಿನ್ನ ಒಡೆಯರ ಮನೆಯಿಂದ ಸುಮಾರು ನೂರು ಮಾರು ದೂರದ ತಿರುವಿನ ಹಾದಿಯಲ್ಲಿ ಮತ್ತೊಂದು ವಿಸ್ಮಯ ನಡೆಯಿತು.

'ನಿರ್ಜನ ಹಾದಿ ಅದು.

'ಇದ್ದಕ್ಕಿದ್ದಂತೆ ನನ್ನ ಕುದುರೆಯ ದಾರಿಗೆ ಎದುರಾಗಿ ಬಂದವರೊಬ್ಬರು ನನ್ನನ್ನು ತಡೆದು ನಿಲ್ಲಿಸಿದರು. ಬಲು ಎತ್ತರದ ಆಳು. ಕಣ್ಣುಗಳನ್ನು ಹೊರತಾಗಿ ಬೇರೇನೂ ಕಾಣಿಸದಂತೆ ಮುಖ ಮುಚ್ಚಿಕೊಂಡಿದ್ದರು. ಭಯದಿಂದ ನಾನು ಬೆವೆತುಹೋಗಿದ್ದೆ. ಅವರು ಮೆತ್ತಗಿನ, ಆದರೆ ಆದೇಶ ನೀಡುವ ಸ್ವರದಲ್ಲೇ ಹೇಳಿದ್ದರು, 'ಕುದುರೆಯಿಂದ ಇಳಿಯದೆ ಹಾಗೆಯೇ ಇರು. ಈ ಮಗು ಯಾರದ್ದು, ಅದು ನಿನ್ನ ಬಳಿಗೆ ಹೇಗೆ ಬಂತು ಎಂಬುದೆಲ್ಲ ನನಗೆ ತಿಳಿದಿದೆ. ಹಾಗೆಂದು ನೀನೇನೂ ಭಯಪಡಬೇಕಿಲ್ಲ. ಭೂಮಿಯಲ್ಲಿ ಸಿಕ್ಕಿದ ಈ ಮಗುವಿಗೆ ನೀನು ಅಫೀರಾ ಎಂದೇ ಹೆಸರಿಡಬೇಕು. ಅಫೀರಾ ಎಂದರೆ ಭೂಮಿಯಲ್ಲಿ ಸಿಕ್ಕವಳು ಎಂದು ಅರ್ಥ. ಇವಳನ್ನು ಚೆನ್ನಾಗಿ ಸಾಕಿ ಸಲಹಬೇಕು' ಎಂದರು.

'ನನ್ನೆದೆಗೆ ಒರಗಿ ನಿದ್ರೆಗೆ ಜಾರಿದ್ದ ಮಗುವಿನ ತೊಡೆಯ ಬಳಿ ಈ ಥೈಲಿಯನ್ನಿರಿಸಿ, ಇದರಲ್ಲಿ ಎಷ್ಟು ದಿರಾಮುಗಳಿವೆಯೆಂಬುದನ್ನು ನಾನು ಎಣಿಸಲಿಲ್ಲ. ಆರುನೂರಕ್ಕಿಂತಲೂ ಹೆಚ್ಚಿರಬಹುದು. ಮಗುವಿನ ನಾಲ್ಕೈದು ವರ್ಷಗಳ ಖರ್ಚಿಗೆ ಸಾಕಾಗಬಹುದು. ಮುಂದೆಂದಾದರೊಂದು ದಿನ ಹಣದ ಅಗತ್ಯಬಿದ್ದರೆ, ಕಅಬಾದ ಉಹದ್ ದೇವರ ಎದುರು, ಮಗುವಿಗೆ ಈಗ ಹೊದಿಸಿರುವ ಚಾದರವನ್ನು ತಂದು ಹಾಸಿಬಿಡು. ಹಾಗೆ ಹಾಸಿದ ಆನಂತರದ ಕೆಲವು ದಿನಗಳ ಕಾಲ ಪ್ರತಿನಿತ್ಯ ರಾತ್ರಿ ಎರಡನೆಯ ಜಾಮದಲ್ಲಿ ಅಲ್ಲಿಗೆ ಹೋಗಿ ಒಂದರ್ಧ ತಾಸು ಕುಳಿತಿರು. ಅಗತ್ಯವಿರುವ ನಾಣ್ಯಗಳನ್ನು ಅಲ್ಲಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತದೆ.

'ಆದರೆ, ಒಂದು ನಿಬಂಧನೆ ಜ್ಞಾಪಕದಲ್ಲಿರಲಿ. ನೀನು ಮತ್ತು ನಿನ್ನ ಹೆಂಡತಿಯ ಹೊರತಾಗಿ ಈ ರಹಸ್ಯ ಬೇರಾರಿಗೂ ತಿಳಿಯಬಾರದು.

'ಬಹಿರಂಗವಾದರೆ, ಆ ಮಗುವಿನಂತೆಯೇ ನಿಮ್ಮಿಬ್ಬರನ್ನೂ ಜೀವಂತ ಹೂಳಿಸಿಬಿಡುವೆ. ಎಚ್ಚರ!'





–೪–

'ಈ ಮಗು ನಮಗೆ ಅದೃಷ್ಟವನ್ನೂ ತರಲಿದೆ' ಎಂದು ಅದ್ಯಾವ ಘಳಿಗೆಯಲ್ಲಿ ಹೇಳಿದ್ದೆನೋ, ಅವೆಲ್ಲವೂ ಅನಂತರದ ಐದಾರು ವರ್ಷಗಳಲ್ಲಿ ನಿಜವಾಗಿದ್ದವು. ಅಫೀರಾ ನಮ್ಮ ಮನೆಗೆ ಕಾಲಿಟ್ಟ ಬಳಿಕದ ದಿನಗಳೆಲ್ಲವೂ ನಮಗೆ ಸುಖದ ದಿನಗಳು. ಒಂದೇ ಒಂದು ದಿನವೂ ನಾವು 'ಹಸಿವು' ಎಂದು ದುಃಖಿಸಿದ್ದಿಲ್ಲ. ನಾಳೆ ಏನಾದೀತು ಎಂದು ಒಂದು ರಾತ್ರಿಯಲ್ಲೂ ಪರಿತಪಿಸಿದವರಲ್ಲ. ಆಫಿರಾಳ ಕಿಲಕಿಲ ನಗುವಿನಂತೆಯೇ ನಮ್ಮ ಮನೆಯಲ್ಲಿ ನಗುವಿನ ಹೂವು ಅರಳಿತ್ತು.

ನಾನು ಮತ್ತು ಮುಅತ್ತಲ್, ಕಂಠಪಾಟ ಮಾಡಿಕೊಂಡವರಂತೆ ಒಂದೇ ಸುಳ್ಳನ್ನು ಹೇಳಿದ್ದೆವು. ಗಂಡನಿಂದ ತ್ಯಜಿಸಲ್ಪಟ್ಟ ತುಂಬು ಗರ್ಭಿಣಿಯಾಗಿದ್ದ ನನ್ನಕ್ಕ ನಮ್ಮ ಮನೆಗೆ ಬರುತ್ತಿದ್ದಾಗ, ದಾರಿಯಲ್ಲೇ ಮಗುವನ್ನು ಹೆತ್ತು ತೀರಿಕೊಂಡಳು. ಅನಾಥವಾದ ಮಗುವಿಗೆ ಇನ್ನು ನಾವೇ ದಿಕ್ಕು ಎನ್ನುತ್ತಿದ್ದೆವು. ಕೆದಕಿ ವಿಚಾರಿಸುವ ಉತ್ಸಾಹ ಯಾರಿಗೂ ಇದ್ದಿರಲಿಲ್ಲ. ಆದರೆ, ಸ್ವಲ್ಪ ಗಾಬರಿ ಹುಟ್ಟಿಸಿದವಳು ನನ್ನ ರಾಜ ಕುಮಾರಿ ಅಲೈನಾಳೇ.

ಅಫೀರಾಳ ಹೆತ್ತವರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದಿದ್ದ ನೆರೆಯವರಿಗೆ, ನಮ್ಮ ಮನೆಯಂಗಳದಲ್ಲಿ ಇದ್ದಕ್ಕಿದ್ದಂತೆ ಕಾಣಿಸಿಕೊಂಡ ಅಲೈನಾ, ಮತ್ತವಳ ಎರಡು ಮುದ್ದಾದ ಮೇಕೆಮರಿಗಳು ಹೆಚ್ಚು ಕುತೂಹಲವನ್ನು ಹುಟ್ಟಿಸಿದ್ದವು. ಅತಿ ಆಸೆಯೇ ನನ್ನ ಗಾಬರಿಗೆ ಕಾರಣವೆನ್ನಬಹುದು. ಅಫಿರಾಳಿಗೆ ಕುಡಿಸಿದ ಬಳಿಕ ಮಿಕ್ಕಿದ ಸ್ವಲ್ಪ ಹಾಲನ್ನು ನೆರೆಮನೆಯ ಹೆಂಗಸೊಬ್ಬಳಿಗೆ ಮಾರಲು ಯತ್ನಿಸಿದ್ದೇ ತಪ್ಪಾಗಿಹೋಗಿತ್ತು.

'ಇದ್ಯಾವಾಗ ಮೇಕೆಗಳನ್ನು ಖರೀದಿಸಿದೆ ಅಕಿಯಾ?' ಎಂದು ಪ್ರಶ್ನಿಸಿದವಳು ಅಲ್ಲಿಗೇ ಸುಮ್ಮನಾಗಿದ್ದರೆ ಏನಾದರೊಂದು ಸುಳ್ಳು ಹೇಳಿ ಅವಳ ಬಾಯಿ ಮುಚ್ಚಿಸಬಹುದಾಗಿತ್ತು. ಆದರೆ ಅವಳು, 'ಇಷ್ಟು ದುಡ್ಡು ನಿನ್ನ ಬಳಿ ಎಲ್ಲಿಂದ ಬಂತು?' ಎನ್ನುತ್ತಾ ತನ್ನ ಮೊದಲ ಪ್ರಶ್ನೆಗೆ ಬಾಲವನ್ನು ಜೋಡಿಸಿದಾಗ ನಾನು ಕಂಗಾಲಾಗಿದ್ದೆ.

ನಾನು ಆಡು ಮೇಯಿಸುವ ಕೆಲಸವನ್ನು ಬಿಟ್ಟು ಮನೆಯಲ್ಲಿ ಕುಳಿತಿರುವುದು ಅವಳಿಗೆ ಗೊತ್ತಿತ್ತು. ಅಷ್ಟು ಮಾತ್ರವಲ್ಲ, ಕಳೆದ ವಾರ ಅವಳು ಮನೆಗೆ ಬಂದಿದ್ದಾಗ ಒಲೆಯಲ್ಲಿ ಬೇಯುತ್ತಿದ್ದ ಒಂಟೆ ಮಾಂಸದ ಸುವಾಸನೆ ಗ್ರಹಿಸಿದವಳು, 'ಓಹೋ.., ನಿನ್ನ ಗಂಡನಿಗೆ ಈಗ ಒಳ್ಳೆಯ ಸಂಪಾದನೆ ಆಗುವಂತಿದೆಯಲ್ಲ? ಎಂದು ವ್ಯಂಗ್ಯವಾಡಿದ್ದಳು.

ನಮ್ಮ ಮನೆಯಲ್ಲಿ ಎಣಿಸಲಾರದಷ್ಟು ಬಂಗಾರದ ನಾಣ್ಯಗಳಿವೆ ಎಂದೇನಾದರೂ ಹೇಳಿರುತ್ತಿದ್ದರೆ ಅವಳು ಮೂರ್ಛೆ ಹೋಗುತ್ತಿದ್ದಳೋ ಏನೋ. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಬೇಕಾಗಿತ್ತು. 'ಮುಅತ್ತಲರ ಒಡೆಯರು ದಾನ ಕೊಟ್ಟ ಮೇಕೆ ಮತ್ತು ಮರಿಗಳು ಅವು' ಎಂದೆ. ತಕ್ಷಣಕ್ಕೆ ಹೊಳೆದ ಸುಳ್ಳು ಅದೊಂದೇ ಆಗಿತ್ತು.

ನನ್ನ ಉತ್ತರದಿಂದ ಆಕೆಯ ಅನುಮಾನ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ.

‘ನಮ್ಮೂರಲ್ಲಿ ಅದ್ಯಾರಪ್ಪ ಅಷ್ಟೊಂದು ಕರುಣೆಯುಳ್ಳ ಒಡೆಯರು? ನಾನೂ ಅವರ ಬಳಿ ಹೋಗಿ ನನಗೂ ಒಂದು ಕೆಲಸ ಕೊಡಿ ಎಂದು ಬೇಡುತ್ತಿದ್ದೆನಲ್ಲಾ?’ ಎಂದು ಕುಹಕದಿಂದ ನಕ್ಕಿದ್ದಳು.

ನನಗೆ ಸಿಟ್ಟು ಬಂತು.

‘ನಿನಗೆ ಹಾಲು ಬೇಕೋ ಬೇಡವೊ, ಅದು ಹೇಳು. ಅನಗತ್ಯ ಪ್ರಶ್ನೆ ಕೇಳಬೇಡ’ ಎನ್ನುತ್ತಾ ಅವಳನ್ನು ಸಾಗಹಾಕಲು ಅಳುಕಿದ್ದೆ. ಯಾಕೆಂದರೆ ಆಕೆ ಸುಮ್ಮನಿರುವವಳಲ್ಲ. ಕಅಬಾ ದೇವಮಂದಿರದ ಪೂಜಾರಿಯೊಬ್ಬರ ಉಮ್ಮ ಅವಳು. ಮಗನ ಅಧಿಕಾರದ ಪ್ರಭಾವದಿಂದಲೇ, ಪರಿಸರದ ಹೆಣ್ಣುಮಕ್ಕಳ ನಡುವೆ ಕಿಡಿಯೇಳುವ ಸಣ್ಣ ಪುಟ್ಟ ಜಗಳಗಳ ವಿಚಾರಣೆ ನಡೆಸಿ ನ್ಯಾಯತೀರ್ಮಾನ ಹೇಳುವ ಜವಾಬ್ದಾರಿಯನ್ನು ತನ್ನ ಮೇಲೆ ತಾನೇ ಹೊರಿಸಿಕೊಂಡಿದ್ದವಳು ಅವಳು.

ಗಲಿಬಿಲಿಗೊಂಡ ನಾನು, ‘ಮುಹಮ್ಮದರು ಕೊಟ್ಟದ್ದು’ ಎಂದುಬಿಟ್ಟಿದ್ದೆ.

‘ಯಾವ ಮುಹಮ್ಮದರು! ದೊಡ್ಡ ಸಂಪತ್ತು ಬಹಳ ಇದೆಯೆಂದು, ಖದೀಜಾಳನ್ನು ಮದುವೆಯಾದನಲ್ಲ, ಆ ವರ್ತಕನಾ?’ ಅವಳು ತಿರಸ್ಕಾರದಿಂದ ಮುಖ ಕಿವುಚಿಕೊಂಡು ಉದ್ಘರಿಸುತ್ತಿದ್ದಂತೆಯೇ ಮನೆಯೆದುರು ಮುಅತ್ತಲ್ ಕಾಣಿಸಿಕೊಂಡಿದ್ದರು. ನನ್ನ ಗಂಡನನ್ನು ಕಂಡವರೇ ಅವಳು, ‘ಇನ್ನೊಮ್ಮೆ ಮಾತಾಡುವ’ ಎಂದು ತಪ್ಪಿಸಿಕೊಳ್ಳುವವಳಂತೆ ಹೊರಟು ಹೋಗಿದ್ದಳು.

ಮನೆಯೊಳಗೆ ಕಾಲಿಡುತ್ತಲೇ ಮುಅತ್ತಲ್ ಸಂಭ್ರಮದಿಂದ ಹೇಳಿದ್ದರು, ‘ನಮ್ಮ ಅಫೀರಾಳ ಅದೃಷ್ಟದಿಂದ ಈವತ್ತು ಮುಹಮ್ಮದರ ಭೇಟಿಯಾಯಿತು.’

‘ಯಾವ ಮುಹಮ್ಮದರು! ಎಲ್ಲರಂಥವರಲ್ಲ ಅನ್ನುತ್ತಾರಲ್ಲ ಆ ವರ್ತಕರಾ?’

‘ಹೂಂ, ಅದೇ ವರ್ತಕರು’ ಎನ್ನುತ್ತಿದ್ದಂತೆಯೇ ಅಫೀರಾ ಬಂದಿದ್ದಳು. ಹೆಗಲ ಚೀಲದಿಂದ ಸಿಹಿತಿಂಡಿಯ ಪೊಟ್ಟಣವೊಂದನ್ನು ಹೊರತೆಗೆದು ಅವಳ ಕೈಯಲ್ಲಿರಿಸಿ ತಲೆ ನೇವರಿಸಿದ ಮುಅತ್ತಲ್ ನನ್ನತ್ತ ತಿರುಗಿ, ‘ಈವತ್ತು ಏನಾಯಿತು ಅಂದರೇ.., ಮಂದಿರದ ಬಳಿ ಒಬ್ಬರು ಸಿಕ್ಕಿದ್ದರು. ಸಂತೆಬೀದಿಯ ಪ್ರಸಿದ್ಧ ವರ್ತಕ ಮುಹಮ್ಮದರು ನನ್ನನ್ನು ಕಾಣಬಯಸಿದ್ದಾರೆ ಅಂದರು. ನನಗೆ ಭಯವಾಗಿತ್ತು. ಯಾರಾದರೂ ಏನಾದರೂ ತಪ್ಪು ಮಾಡಿದರೆ, ಅಂಥವರನ್ನು ಕರೆಸಿ ಬುದ್ಧಿಮಾತು ಹೇಳುತ್ತಿದ್ದರೆಂಬುದು ನನಗೆ ಗೊತ್ತಿತ್ತು. ಎಷ್ಟು ನೆನಪಿಸಿಕೊಂಡರೂ ನಾನು ಮಾಡಿದ್ದ ಯಾವುದೇ ತಪ್ಪು ಘಟನೆ ನೆನಪಾಗಲಿಲ್ಲ.

‘ಅಳುಕಿನಿಂದಲೇ ಅವರ ಮಂಡಿಗೆ ಹೋದೆ. ನನ್ನ ಕಾಲ ಬೆರಳಿನಿಂದಾರಂಭಿಸಿ ನನ್ನ ತಲೆಯವರೆಗೆ ಪರೀಕ್ಷಿಸುವವರಂತೆ ಕಣ್ಣುಗಳಲ್ಲೇ ಅಳೆದ ಅವರು, ‘ನೀನೊಬ್ಬ





ಒಳ್ಳೆಯ ಕುದುರೆಪಾಲಕ ಎಂದು ಕೇಳಿದ್ದೇನೆ. ನನ್ನ ಜೀವದ ಗೆಳೆಯನೊಬ್ಬ ನಿನ್ನಂಥ ಕುದುರೆ ಪಾಲಕನನ್ನು ಹುಡುಕುತ್ತಿದ್ದಾನೆ. ವಸ್ತ್ರಮಂಡಿಯ ಮಾಲಕ ಅಬೂಬಕರ್ ಹೆಸರು ನೀನು ಕೇಳಿದ್ದಿರಬಹುದು. ಅವರ ಮನೆಯ ಕುದುರೆಗಳನ್ನು ನೋಡಿಕೊಳ್ಳಲು ನಿನ್ನಿಂದ ಸಾಧ್ಯವೆ? ಒಳ್ಳೆಯ ಕೂಲಿಯನ್ನೂ ಕೊಡುತ್ತಾರೆ. ನಿನ್ನ ಅಭಿಪ್ರಾಯ ಏನು?’ ಎಂದು ಪ್ರಶ್ನಿಸಿದ್ದರು.

ಅಬೂಬಕರ್ ಸರದಾರರಂತಹ ಸಜ್ಜನರ ಬಳಿ ಕೆಲಸಕ್ಕೆ ಸೇರುವ ಅವಕಾಶ ಎಲ್ಲರಿಗೂ ಸಿಗಲಾರದು. ದಾನ, ಧರ್ಮ, ದಯೆ ಎಂದರೆ ಏನೆಂಬುದನ್ನು ಆ ಸರದಾರರಿಂದ ಕಲಿಯಬೇಕು ಅಂತ ಎಲ್ಲರೂ ಹೇಳುತ್ತಿರುತ್ತಾರೆ. ಹಿಂದೆ ಮುಂದೆ ನೋಡದೆ ಆಗಬಹುದು ಎಂದೆ.

‘ಮುಹಮ್ಮದರಿಗೆ ತೃಪ್ತಿಯಾದಂತಿತ್ತು. ಪಕ್ಕದಲ್ಲಿರಿಸಿದ್ದ ಪೆಟ್ಟಿಗೆಯಿಂದ ಸಿಹಿ ತುಂಬಿದ ಪೊಟ್ಟಣವೊಂದನ್ನು ಹೊರತೆಗೆದು ನನಗೆ ಕೊಡುತ್ತಾ, ‘ನನಗಿಂದು ಬಹಳ ಸಂತಸದ ದಿನ. ಬಹಳ ದಿನಗಳ ಬಳಿಕ ನನಗೊಬ್ಬಳು ಮಗಳು ಹುಟ್ಟಿದ್ದಾಳೆ. ಅವಳಿಗೆ ಫಾತಿಮಾ ಎಂದು ಹೆಸರಿಟ್ಟಿರುವೆ. ಇಂದಿನಿಂದ ನಿನ್ನ ಬದುಕೂ ಸಂತಸದಿಂದಿರುತ್ತದೆ’ ಎಂದರು.

ಅದು ನಿಜವೂ ಆಯಿತು. ವರ್ಷ ಕಳೆಯುವಷ್ಟರಲ್ಲಿ ನಾನು ಸಫ್ವಾನನಿಗೆ ತಾಯಿಯಾಗಿದ್ದೆ.

ಸಫ್ವಾನನಿಗೆ ನಾಲ್ಕು ತುಂಬುತ್ತಿರುವಾಗ ಅಬೂಬಕರರ ಪತ್ನಿ ಉಮ್ಮು ರುಮಾನರ ಖಾಸಗಿ ದಾಸಿಯಾಗಿ ನನಗೆ ಚಾಕರಿಯೂ ಸಿಕ್ಕಿತ್ತು.

–೨–

ನಾನು ಒಡೆಯರ ಮನೆಯ ಕೆಲಸಕ್ಕೆ ಸೇರಿ ಎರಡು ವರ್ಷ ಕಳೆಯುವಷ್ಟರಲ್ಲಿ ಎಲ್ಲರಂಥವರಲ್ಲದ ಮುಹಮ್ಮದರಿಗೆ ಅಲ್ಲಾಹುವಿನಿಂದ ‘ಅಂತಿಮಸತ್ಯ’ದ ಬೋಧನೆಯಾಗಿತ್ತು. ಅವರು ಅಲ್ಲಾಹುವಿನ ‘ಅಂತಿಮಪ್ರವಾದಿ’ಯೆಂದು ಘೋಷಿಸಲ್ಪಟ್ಟಿದ್ದರು.

ಮುಹಮ್ಮದರ ಜೀವದ ಗೆಳೆಯರಾಗಿದ್ದ ನನ್ನ ಒಡೆಯ ಅಬೂಬಕರರು ಮಾತ್ರವಲ್ಲ, ಅವರ ಮನೆಯವರೂ ಅಂತಿಮಸತ್ಯದಲ್ಲಿ ವಿಶ್ವಾಸವಿರಿಸುವ ಪ್ರತಿಜ್ಞೆ ಮಾಡಿದ್ದರು. ನಮ್ಮ ಒಡೆಯರಂತಹ ಒಡೆಯರು ಮತ್ತೊಬ್ಬರು ಇರಲು ಸಾಧ್ಯವಿಲ್ಲವೆಂಬುದನ್ನು ಕಂಡು ಅನುಭವಿಸಿದ್ದವರು ನಾವು. ಅವರ ಸಲಹೆಯಂತೆ ನಾವೂ ಅಂತಿಮ ಸತ್ಯದಲ್ಲಿ ವಿಶ್ವಾಸವಿರಿಸುವ ಪ್ರತಿಜ್ಞೆ ಮಾಡಿದೆವು.

ನಾನು ಮಕ್ಕಳಿಬ್ಬರನ್ನೂ ಕರೆದುಕೊಂಡೇ ಒಡೆಯರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದೆ. ಹಸಿದು ಬಂದವರಿಗೆಲ್ಲ ಉಣಬಡಿಸುತ್ತಿದ್ದ ಒಡತಿ ಉಮ್ಮು ರುಮಾನರಿಗೆ ನನ್ನಿಬ್ಬರು ಮಕ್ಕಳು ಹೊರೆಯಾಗಲು ಸಾಧ್ಯವೇ ಇರಲಿಲ್ಲ.

ಅಫೀರಾಳಿಗೆ ಹತ್ತು ತುಂಬುತ್ತಿದ್ದಂತೆ ಅವಳಿಗೆ ಮದುವೆಯನ್ನೂ ಮಾಡಿಸಿದ್ದೆ. ಆದರೆ, ಯಾವ ಮಗುವಿನ ಕಾರಣದಿಂದ ನಮ್ಮೆಲ್ಲರ ಬದುಕು ಸಿಹಿಯಾಗಿತ್ತೋ, ಅದೇ ಮಗುವಿನ ಬದುಕು ಮಾತ್ರ ಬಹಳ ಕಹಿಯಾಗಿತ್ತು. ಹೆತ್ತ ಎರಡು ಮಕ್ಕಳೂ ಹೆಚ್ಚು ದಿನ ಬದುಕಲಿಲ್ಲ. ಅದನ್ನಾದರೂ ಸಹಿಸಿಕೊಳ್ಳಬಹುದಿತ್ತು. ಆದರೆ, ತನ್ನ ಕಣ್ಣುಗೊಂಬೆಗಳಂತೆ ಇವಳನ್ನು ಪ್ರೀತಿಸುತ್ತಿದ್ದವನು ನಾಲ್ಕೇ ವರ್ಷಗಳಲ್ಲಿ ಖಾಯಿಲೆ ಬಿದ್ದು ತೀರಿಕೊಂಡುಬಿಟ್ಟ. ಅಫೀರಾ ಹೂಂ ಎಂದಿದ್ದರೆ, ನಾಲ್ಕು ತಿಂಗಳು ಕಳೆಯುತ್ತಿರುವಂತೆಯೇ ಅವಳಿಗೆ ಮತ್ತೊಬ್ಬ ಗಂಡಿನೊಂದಿಗೆ ಮದುವೆ ಮಾಡಿಸಲು ಒಡತಿ ಸಿದ್ಧರಿದ್ದರು. ಬಹಳ ಒತ್ತಾಯವನ್ನೂ ಮಾಡಿದ್ದರು. ಆದರೆ, ಮತ್ತೊಬ್ಬನನ್ನು ಮದುವೆಯಾಗಿ ತೀರಿಹೋದ ಗಂಡನ ನೆನಪನ್ನು ಮರೆಯಲು ಸಿದ್ಧಳಿರಲಿಲ್ಲ ಅಫೀರಾ.

ಆ ದಿನಗಳಲ್ಲಿ ನನ್ನ ಒಡತಿ, ಉಮ್ಮು ರುಮಾನ್ ತುಂಬು ಗರ್ಭಿಣಿ.

‘ನನಗೆ ಇನ್ನೊಂದು ಮದುವೆ ಬೇಡ ಒಡತಿ. ನಿಮಗೆ ನಾಳೆ ಹುಟ್ಟುವ ಮಗು ಗಂಡಾಗಿರಲಿ, ಹೆಣ್ಣಾಗಿರಲಿ ಅದರ ಸೇವೆಗೆ ನೀವು ಅನುಮತಿ ಕೊಟ್ಟರೆ, ಜೀವನದುದ್ದಕ್ಕೂ ನಾನು ಈ ಮನೆಗೆ ಕೃತಜ್ಞಳಾಗಿರುವೆ’ ಎಂದಿದ್ದಳು ಅಫಿರಾ.

ಉಮ್ಮು ರುಮಾನ್ ಹೆತ್ತರು. ಮಗು ಹೆಣ್ಣು.

ಹೆರಿಗೆ ಸುಲಭವಾಗಿದ್ದಿರಲಿಲ್ಲ. ರಾತ್ರಿಯ ಕೊನೆಯ ಜಾವದಲ್ಲೇ ಒಡತಿಗೆ ಹೊಟ್ಟೆ ನೋವಿನ ಮುನ್ಸೂಚನೆ ಸಿಕ್ಕಿತ್ತು. ಕೆಲಸ ಮುಗಿಸಿ ಮನೆಗೆ ಹೊರಟು ನಿಂತಿದ್ದ ನನ್ನನ್ನು, ‘ಈವತ್ತು ನಿನ್ನ ಮಕ್ಕಳ ಜೊತೆಗೆ ಈ ಒಂದು ರಾತ್ರಿ ಇಲ್ಲೇ ಇದ್ದುಬಿಡು ಅಕಿಯಾ. ನಿನ್ನ ಸಹಾಯ ಬೇಕಾಗಬಹುದು’ ಎಂದಿದ್ದರು.

ರಾತ್ರಿಯ ಎರಡನೆಯ ಜಾವವಾಗುತ್ತಿದ್ದಂತೆ ಒಡತಿಗೆ ಹೊಟ್ಟೆನೋವು ಜಾಸ್ತಿಯಾಯಿತು. ಸೂಲಗಿತ್ತಿ ಅಮಾಲಳನ್ನು ಕರೆತರಲು ದೊಡ್ಡ ಒಡೆಯರು ಮನೆಯಾಳು ಅಮೀರನನ್ನು ಅಟ್ಟಿದ್ದರು.

‘ನಲುವತ್ತರ ಹೊಸ್ತಿಲಲ್ಲಿದ್ದ ಹೆಂಗಸಿಗೆ ಹೆರಿಗೆ ಮಾಡಿಸುವುದು ಸುಲಭವಲ್ಲ. ಎರಡು ಪಟ್ಟು ಹಣ ಕೊಡಬೇಕಾಗುತ್ತದೆ, ಅದನ್ನು ಕೊಡಿಸುವುದು ನಿನ್ನ ಹೊಣೆ’ ಎಂಬುದಾಗಿ ಅಮೀರನನ್ನು ಒಪ್ಪಿಸಿದ ಬಳಿಕವೇ ಅವಳು ಬರಲೊಪ್ಪಿದ್ದಂತೆ. ಅವಳು ಬರುವಷ್ಟರಲ್ಲಿ ಒಡತಿ ಅರೆಜೀವವಾಗಿದ್ದರು. ಕಿಬ್ಬೊಟ್ಟೆಯನ್ನು ಯಾರೋ ಒತ್ತಿ





ಹಿಂಡಿದಂತೆ, ತೊಡೆ ಸಂದಿಯಲ್ಲಿ ಯಾರೋ ಮುಳ್ಳುಗಳನ್ನು ಇರುಕಿ ಹಿಂಸಿಸಿದಂತೆ. ಪಕ್ಕದಲ್ಲಿ ನಿಂತಿದ್ದ ನಾನು ಕೂಡಾ ಒಡತಿಯ ನೋವನ್ನು ಅನುಭವಿಸುತ್ತಿದ್ದೆ.

‘ಒಡೆಯರನ್ನು ಒಳಗೆ ಬರಲು ಹೇಳಲೆ ಒಡತಿ?’ ಹುಚ್ಚು ಹುಚ್ಚಾಗಿ ಪ್ರಶ್ನಿಸಿದ್ದೆ ನಾನು.

‘ಹೆರಿಗೆ ಕೋಣೆಯಲ್ಲಿ ಗಂಡಸರಿಗೆ ಏನೂ ಕೆಲಸವಿರುವುದಿಲ್ಲ..’ ಅಮಾಲ್ ಒರಟಾಗಿಯೇ ಹೇಳಿದ್ದಳು.

ಅಂತಿಮಸತ್ಯದಲ್ಲಿ ವಿಶ್ವಾಸಿಯಾಗುವ ಹಿಂದಿನ ದಿನಗಳಲ್ಲಾದರೆ, ನೋವು ನಿವಾರಣೆಗೆಂದು ಇದೇ ಅಮಾಲ್ ಗುಟ್ಟಾಗಿ ತಂದು ಕೊಡುವ ಔಷಧಿಯನ್ನು ಕುಡಿದು ನೋವಿನ ಜೊತೆಗೆ ಮಗುವನ್ನೂ ಇಲ್ಲವಾಗಿಸಬಹುದಾಗಿತ್ತು. ಅದು ತಪ್ಪೂ ಆಗಿದ್ದಿರಲಿಲ್ಲ. ಆದರೆ ಪ್ರವಾದಿಯವರು ಹೇಳಿದ ದಾರಿಯಲ್ಲಿ ನಡೆಯಲೊಪ್ಪಿ ಪ್ರಮಾಣ ಮಾಡಿದ ಆನಂತರದ ದಿನಗಳಲ್ಲಿ ಹಾಗೆಲ್ಲ ಮಾಡುವುದು ಅಕ್ಷಮ್ಯ ಅಪರಾಧವಾಗಿತ್ತು. ಪ್ರವಾದಿಯವರು ಹೇಳಿದ್ದರು, ‘ಹೊಟ್ಟೆಯೊಳಗಿರುವಾಗಲಾಗಲೀ, ಹೆತ್ತ ಬಳಿಕವಾಗಲೀ ಮಗುವನ್ನು ಹತ್ಯೆ ಮಾಡುವುದು ಮಹಾ ಪಾಪ. ಹಾಗೆ ಮಾಡಿದವರನ್ನು ಅಲ್ಲಾಹು ಕ್ಷಮಿಸುವುದಿಲ್ಲ’.

ಅಮಾಲ್ ಒಡತಿಯ ಕಿಬ್ಬೊಟ್ಟೆಯನ್ನು ಜೋರಾಗಿ ಹಿಸುಕಿದಾಗ, ‘ಯಾ ಅಲ್ಲಾಹ್.., ನಾನು ಸಹಿಸಿಕೊಳ್ಳಲಾರೆ. ನಾನು ಸತ್ತೆ. ನನ್ನಿಂದಾಗದು ಇದು.’ ಒಡತಿ ಜೋರಾಗಿಯೇ ಕಿರುಚಿದ್ದರು. ತೊಡೆ ಸಂದಿ ಹರಿದು ರಕ್ತ ಚಿಮ್ಮಿತ್ತು.

‘ಜೋರಾಗಿ ಉಸಿರೆಳೆದುಕೊಂಡು ಹೊಟ್ಟೆಯ ಮೂಲಕ ಗಾಳಿ ಬಿಟ್ಟು ಇನ್ನಷ್ಟು ಕೆಳಗೆ ತಳ್ಳಿಬಿಡು.’ ಅಮಾಲ್ ನಿರ್ದೇಶನ ಮಾಡುತ್ತಿದ್ದಳು. ಅವಳಿಗೆ ಇದು ಅಭ್ಯಾಸ. ಇಲ್ಲಿ ನೋವು ಅನುಭವಿಸುತ್ತಿರುವವಳು ಅವಳಲ್ಲ; ನನ್ನ ಒಡತಿ.

‘ಹೂಂ..., ಇನ್ನೂ ಸ್ವಲ್ಪ, ಎದೆಯೊಳಗಿನ ಗಾಳಿಯನ್ನೆಲ್ಲ ಬಲವಾಗಿ ತಳ್ಳು.. ಆಯಿತು, ಆಯಿತು.. ಇನ್ನೂ ಸ್ವಲ್ಪ.’ ಅಮಾಲ್ ಹೇಳುತ್ತಲೇ ಇದ್ದಳು. ಒಡತಿಯ ಕಿಬ್ಬೊಟ್ಟೆಯನ್ನು ಮೇಲಿನಿಂದ ಕೆಳಕ್ಕೆ ಗಟ್ಟಿಯಾಗಿ ಸವರುತ್ತಳೇ ಇದ್ದಳು.

‘ಯಾ ಅಲ್ಲಾ...,’ ಉಸಿರು ಬಿಗಿ ಹಿಡಿದು, ಇನ್ನೊಮ್ಮೆ ಸಾಧ್ಯವೇ ಇಲ್ಲ ಎಂದು ನಿರ್ಧರಿಸಿದವರಂತೆ ಒಡತಿ ಜೊರಾಗಿ ತಳ್ಳಿದರು ಅಬ್ಬಾ..., ಕೊನೆಗೂ ಮುಗಿದಿತ್ತು.

ಕೀರಲು ಧ್ವನಿಯಲ್ಲಿ ಅಳುತ್ತಾ ಹೆಣ್ಣು ಮಗು ಭೂಮಿಗಿಳಿದುಬಿಟ್ಟಿತ್ತು. ನಾನು ಸಮಾಧಾನದ ನಿಟ್ಟುಸಿರುಬಿಟ್ಟಿದ್ದೆ. ಆದರೆ ಈ ಸಮಾಧಾನ ಹೆಚ್ಚು ಹೊತ್ತು ಉಳಿಯಲಿಲ್ಲ. ಮಗುವನ್ನು ಎತ್ತಿಕೊಂಡ ಅಮಾಲ್, ‘ಓಹ್! ಪ್ರಮಾದವಾಗಿ ಹೋಯಿತು. ಓ ನನ್ನ ಮನಾತ್ ದೇವತೆಯೇ, ಮತ್ತೊಂದು ಹೆಣ್ಣು ಹೆರಿಸಿದ್ದನ್ನು ಕ್ಷಮಿಸು’ ಎಂದು ಗಟ್ಟಿಯಾಗಿ ಅರಚಿದ್ದಳು.

ಬಾಗಿಲ ಹೊರಗೆಯೇ ನಿಂತಿದ್ದ ದೊಡ್ಡ ಒಡೆಯರು ಅಲ್ಲಿಂದಲೇ ಪ್ರಶ್ನಿಸಿದ್ದರು, 'ಯಾಕೇ..? ಏನಾಗುತ್ತಿದೆ ಒಳಗೆ? ಬಾಗಿಲು ತೆಗೆಯಿರಿ.' ಬಾಗಿಲ ಮೇಲೆ ಬಡ ಬಡ ಬಡಿಯಲಾರಂಭಿಸಿದ್ದರು.

ಹೂವಿನ ಚೆಂಡಿನಂತಿದ್ದ ಅಳುವ ಮಗುವನ್ನು ಕೆಂಪು ವಸ್ತ್ರದಲ್ಲಿ ಬಿಗಿಯಾಗಿ ಸುತ್ತಿ ಒಡತಿಯ ಪಕ್ಕದಲ್ಲಿ ಮಲಗಿಸಿ, ತೊಡೆಗಳಿಗೆ ಅಂಟಿಕೊಂಡಿದ್ದ ರಕ್ತವನ್ನೆಲ್ಲ ಒರೆಸಿ ಅಗಲವಾದ ಬಟ್ಟೆಯನ್ನು ಹೊದಿಸಿದ ಸೂಲಗಿತ್ತಿ ಅಮಾಲ್, ನನ್ನನ್ನು ತಾತ್ಸಾರದಿಂದ ದಿಟ್ಟಿಸುತ್ತಾ, 'ಹೋಗು. ಈಗ ಹೋಗು. ಬಾಗಿಲು ತೆರೆದು ನಿನ್ನ ಒಡೆಯರನ್ನು ಕರೆದುಕೊಂಡು ಬಾ. ಇಲ್ಲಿ ಏನಾಗಿದೆಯೆಂಬುದನ್ನು ಅವರೇ ಕಣ್ಣಾರೆ ಕಾಣಲಿ.'

ಬಾಗಿಲ ಪಕ್ಕದಲ್ಲೇ ನಿಂತು ಒಡತಿಯ ನೋವನ್ನು, ನನ್ನದೇ ನೋವೆಂದು ಅನುಭವಿಸುತ್ತಿದ್ದ ನಾನು ಅವಸರದಿಂದ ಬಾಗಿಲು ತೆರೆದೆ.

'ಏನಾಯಿತು ಇಲ್ಲಿ?' ಎನ್ನುತ್ತಲೇ ಒಳಗೆ ನುಗ್ಗಿ ಬಂದ ಒಡೆಯರು ಒಡತಿಯ ಪಕ್ಕದಲ್ಲಿ ಕೆಂಪು ವಸ್ತ್ರದಲ್ಲಿ ಮುದುಡಿ ಮಲಗಿದ್ದ ಮಗುವನ್ನು ಎತ್ತಿಕೊಂಡು ಒಡತಿಯತ್ತ ನೋಡಿ, 'ಬಹಳ ನೋವು ಅನುಭವಿಸಿದೆಯಲ್ಲಾ? ಇರಲಿ. ಈಗೊಂದು ಸಂತಸದ ಸುದ್ದಿ ಕೇಳು. ನಾವು ಪ್ರವಾದಿಯವರ ಸಂದೇಶದಲ್ಲಿ ವಿಶ್ವಾಸವಿರಿಸಿದ ಬಳಿಕ ಹುಟ್ಟಿದ ಮೊದಲ ಸತ್ಯವಿಶ್ವಾಸಿ ಮಗು ಇದು. ಈ ಅದೃಷ್ಟಶಾಲಿ ಮಗುವಿನ ಉಮ್ಮ ಎಂಬ ಹೆಮ್ಮೆಗೆ ನೀನು ಪಾತ್ರಳಾಗಿದ್ದೀಯಾ' ಎಂದರು ಸಂಭ್ರಮದಿಂದ.

'ಓ ನನ್ನ ಮನಾತ್ ದೇವತೆಯೇ, ಇವರಿಗೆ ಬುದ್ಧಿ ಕೊಡು. ಕಪ್ಪು ನಕ್ಷತ್ರದಲ್ಲಿ ಹುಟ್ಟಿದ ಈ ಮಗುವಿನಿಂದಾಗಿ ಈ ಮನೆಯ ಮೇಲೆ ಎರಗಲಿರುವ ಎಲ್ಲ ವಿಪತ್ತುಗಳನ್ನೂ ಸಹಿಸಿಕೊಳ್ಳುವ ಶಕ್ತಿಯನ್ನು ಈ ಮನೆಯವರಿಗೆ ಕೊಡು.' ಅಮಾಲ್ ತನ್ನದೇ ಲೋಕದಲ್ಲಿ ಮುಳುಗಿ ಪ್ರಾರ್ಥಿಸಲಾರಂಭಿಸಿದ್ದಳು.

'ಏನದು, ಹೊಲಸು ಮಾತು?' ಅಮಾಲಳನ್ನು ಕಣ್ಣುಗಳಲ್ಲೇ ತಿವಿದಿದ್ದರು ದೊಡ್ಡ ಒಡೆಯರು.

'ನನ್ನದು ಹೊಲಸು ಮಾತಲ್ಲ. ನಿಮ್ಮ ಕೈಯಲ್ಲಿರುವುದು ಹೊಲಸು. ಅದನ್ನು ಹಿಡಿದುಕೊಂಡು ಈಗಲೇ ಧಾವಿಸಿರಿ. ಕಅಬಾ ದೇವಮಂದಿರದಿಂದ ದೂರಕ್ಕೆ, ಬಲುದೂರಕ್ಕೆ ಈ ಶಾಪದ ಮುದ್ದೆಯನ್ನು ಎತ್ತಿಕೊಂಡು ಓಡಿರಿ. ಮರಳಿನ ಆಳದಲ್ಲಿ ಯಾರಿಗೂ ಕಾಣಿಸದಂತೆ ಹುಗಿಯಿರಿ. ಕಪ್ಪು ನಕ್ಷತ್ರದಲ್ಲಿ ಹುಟ್ಟಿದ ಅವಳನ್ನು ಯಾರೂ ನೋಡಲಾಗದಂತೆ ಮಣ್ಣಿನಾಳದಲ್ಲಿ ಮುಚ್ಚಿಬಿಡಿರಿ. ಈ ಮನೆಯವರನ್ನು ಕ್ಷಮಿಸುವಂತೆ ಮನಾತ್ ದೇವತೆಯನ್ನು ನಾನು ಪ್ರಾರ್ಥಿಸುವೆ. ನನ್ನಿಂದಾದ ಈ ಪ್ರಮಾದವನ್ನು ಕ್ಷಮಿಸು ಎಂದು ನಾನು ಬೇಡುವೆ.' ಅಮಾಲ್ ಎಚ್ಚರಿಸುವ ಸ್ವರದಲ್ಲೇ ಹೇಳಿದ್ದಳು.





'ಮುಚ್ಚು ಬಾಯಿ' ಎಂದರಚಿದ ಒಡೆಯರು, ಮಗುವನ್ನು ಒಡತಿಯ ಪಕ್ಕದಲ್ಲಿ ಮಲಗಿಸಿ ಅಮಾಲಳತ್ತ ನುಗ್ಗಿದ್ದರು. ಅವಳ ರಟ್ಟೆ ಹಿಡಿದು ಎಳೆದುಕೊಂಡೇ ಹೋದವರು ಬಾಗಿಲ ಹೊರಗೆ ದಬ್ಬಿದರು. 'ನಿನ್ನ ಕೂಲಿಯ ಹಣವನ್ನು ಅಮೀರನಿಂದ ತೆಗೆದುಕೊಂಡು ಮಾಯವಾಗು. ಇನ್ನೊಮ್ಮೆ ನೀನು ನನಗೆ ಕಾಣಿಸಿದರೆ, ಕಪ್ಪು ನಕ್ಷತ್ರದಂತಿರುವ ನಿನ್ನ ಕೆಟ್ಟ ಕಣ್ಣುಗಳನ್ನು ಕಿತ್ತು, ಹೊಲಸು ಮಾತಾಡುವ ನಿನ್ನ ಬಾಯಿಯೊಳಗೆ ತುಂಬಿಸುವೆ. ಓಡು ಇಲ್ಲಿಂದ' ಎಂದು ಎಚ್ಚರಿಸಿದರು.

ಬಾಗಿಲ ಹೊರಗಿನಿಂದಲೇ ಅವಳು ಚೀರಿದ್ದಳು, 'ಹೋಗುವೆ, ಹೋಗುವೆ. ಆದರೆ, ಈ ಮಗುವೇ ನಿಮ್ಮನ್ನು ಮಕ್ಕಾದಿಂದ ಓಡಿಸುವುದಕ್ಕೆ ಕಾರಣವಾಗುತ್ತದೆ ಎಂಬುದನ್ನು ಮತ್ತೊಮ್ಮೆ ನೆನಪಿಸಿ ಹೋಗುವೆ' ಎಂದಳು.

ಅವಳ ಮಾತಿಗೆ ಪ್ರತಿಕ್ರಿಯೆಯೆಂಬಂತೆ ಮಂಚದ ಬಳಿ ಸಾಗಿದ ಒಡೆಯರು, ಮಗುವನ್ನು ಮೆತ್ತಗೆ ಎತ್ತಿಕೊಂಡು ಅದರ ಮುಚ್ಚಿದ ಕಣ್ಣುಗಳನ್ನೇ ನೋಡುತ್ತಾ, 'ಸತ್ಯವಿಶ್ವಾಸಿಯಾಗಿರುವ ನನ್ನ ಮನೆಯಲ್ಲಿ ಹುಟ್ಟಿದ ಮೊದಲ ಮಗು ನೀನು. ನಿನಗೆ ಆಯಿಷಾ ಎಂದು ಹೆಸರಿಡುವೆ. ಆಯಿಷಾ ಎಂದರೆ ಜೀವನ. ನನ್ನ ಮರಣಕ್ಕೆ ನೀನೇ ಕಾರಣವಾಗಬೇಕೆಂಬುದು ಅಲ್ಲಾಹುವಿನ ಇಚ್ಛೆಯಾಗಿದ್ದಲ್ಲಿ, ಆ ಮರಣವನ್ನು ನಾನು ಸಂತೋಷದಿಂದ ಸ್ವಾಗತಿಸುವೆ' ಎಂದರು.

ಮಗು ಆಯಿಷಾಳನ್ನು ನೋಡಲು ಜನರು ತಂಡ ತಂಡವಾಗಿ ಬಂದು ಹೋಗುತ್ತಿದ್ದರು. ದೊಡ್ಡ ಬೀಸಣಿಗೆಯಿಂದ ಮಗುವಿಗೆ ಗಾಳಿ ಬೀಸುವುದೇ ದಾಸಿಯೊಬ್ಬಳ ಕೆಲಸವಾಗಿತ್ತು. ಪ್ರವಾದಿಪತ್ನಿ ಖದೀಜಾ, ಮೊದಲ ದಿನವೇ ಬಂದು ಮಗುವನ್ನು ನೋಡಿಕೊಂಡು ಹೋಗಿದ್ದರು. ಪ್ರವಾದಿಪುತ್ರಿ ಫಾತಿಮಾ ಮಗುವನ್ನು ನೋಡಲು ಬರುವಾಗ ವಾರ ಕಳೆದಿತ್ತು. ಫಾತಿಮಾಳನ್ನು ಕಂಡ ಒಡತಿ ಮುಗುಳು ನಗುತ್ತಾ, 'ಬಾ ಮಗು, ನಿನ್ನಂತೆ ಇರುವ ನಿನ್ನ ಪುಟ್ಟ ತಂಗಿಯನ್ನು ನೋಡಲು ನಿನಗೆ ಇಷ್ಟು ದಿನಗಳು ಬೇಕಾಯಿತೆ?' ಎಂದು ನಕ್ಕಿದ್ದರು.

'ಉಮ್ಮ ಬಿಡಬೇಕಲ್ಲ? ಅಬ್ಬನ ಬಳಿ ಅನುಮತಿ ಪಡೆಯದೆ ಹೋಗಬೇಡ ಎಂದರು. ಅಷ್ಟು ಸುಲಭದಲ್ಲಿ ಮಾತಾಡಲು ಅಬ್ಬ ಸಿಗುತ್ತಾರಾ? ಅವರ ಅನುಮತಿ ಸಿಕ್ಕಿದ್ದೇ ನೆನ್ನೆ ರಾತ್ರಿ.' ಫಾತಿಮಾ ಸಮಜಾಯಿಸಿ ನೀಡಿದ್ದಳು.

ಪ್ರವಾದಿಪುತ್ರಿ ಫಾತಿಮಾ ನಮ್ಮ ಮನೆಗೆ ಅದೃಷ್ಟ ತಂದ ಮತ್ತೊಬ್ಬಳು ಹೆಣ್ಣು. ಅವಳ ಹುಟ್ಟಿದ ದಿನದಂದೇ ಅವಳಬ್ಬ, ನನ್ನ ಗಂಡ ಮುಅತ್ತಲನನ್ನು ಕರೆಸಿಕೊಂಡು ಈ ಮನೆಗೆ ಕೆಲಸಕ್ಕೆ ಸೇರಿಸಿದ್ದು. ಅವಳ ಬಳಿಗೆ ಹೋಗಿ ತಲೆ ಸವರುತ್ತಾ, 'ಫಾತಿಮಾ..., ನಿನ್ನನ್ನು ಮೊನ್ನೆಯಿಂದಲೂ ನಾವೆಲ್ಲ ನೆನಪಿಸಿಕೊಳ್ಳುತ್ತಿದ್ದೆವು ಗೊತ್ತಾ? ನಿನ್ನ

ಹೆರಿಗೆಯಲ್ಲಿ ನಿನ್ನ ಉಮ್ಮ ಎಷ್ಟೊಂದು ಕಷ್ಟಪಟ್ಟಿದ್ದರೋ, ಅದಕ್ಕಿಂತ ಹತ್ತು ಪಟ್ಟು ಹೆಚ್ಚು ಕಷ್ಟವಾಗಿತ್ತು ಈ ಮಗುವನ್ನು ಹೆರುವಾಗ.' ಎಂದೆ.

ಫಾತಿಮಾಳನ್ನು ಹೆರುವಾಗ ಅವಳ ಉಮ್ಮ ಖದೀಜಾ ಬಹಳ ನೋವು ಅನುಭವಿಸಿದ್ದರು ಎಂಬುದಾಗಿ ಜನರಾಡಿಕೊಳ್ಳುತ್ತಿದ್ದರು. ಹೆರಿಗೆಯ ನೋವನ್ನು ತಡೆಯಲಾಗದೆ ಖದೀಜಾರವರು ನೆರೆಮನೆಯ ಕುರೈಶ್ ಮಹಿಳೆಯೊಬ್ಬರನ್ನು ಸಹಾಯಕ್ಕಾಗಿ ಪರಿಪರಿಯಾಗಿ ವಿನಂತಿಸಿದ್ದರಂತೆ. ಆದರೆ, ಕುಟುಂಬದ ಕೆಲವು ಹಿರಿಯರ ವಿರೋಧಗಳನ್ನು ಲೆಕ್ಕಿಸದೆಯೇ ಮುಹಮ್ಮದರನ್ನು ಮದುವೆಯಾದ ತಪ್ಪಿಗೆ, ಖದೀಜಾರಿಗೆ ಸಹಾಯ ಮಾಡಲು ಆ ಮನೆಯವರು ನಿರಾಕರಿಸಿದ್ದರಂತೆ. ಹೀಗೆ, ನೋವು ಸಹಿಸಲಾಗದೆ ಕಣ್ಣೀರಿಡುತ್ತಾ ಮಂಚದ ಮೇಲೆ ಅವರು ನರಳುತ್ತಿದ್ದಾಗ, ಬೆಳಕಿನ ಚಕ್ರಗಳನ್ನು ತಲೆಯ ಹಿಂಭಾಗದಲ್ಲಿ ಹೊಂದಿದ್ದ ನಾಲ್ವರು ಎತ್ತರದ ಮಹಿಳೆಯರು ಕೋಣೆಯೊಳಗೆ ಪ್ರವೇಶಿಸಿದ್ದರಂತೆ. ಇನ್ನಷ್ಟು ಆತಂಕದಿಂದ ಉಮ್ಮ ಚೀರಾಡಬೇಕೆನ್ನುವಷ್ಟರಲ್ಲಿ ಬಂದವರಲ್ಲಿ ಒಬ್ಬರು, 'ಹೆದರದಿರು ಖದೀಜಾ, ನಾನು ಪ್ರವಾದಿ ಇಸಾಕರ ತಾಯಿ ಸಾರಾ, ಜೊತೆಯಲ್ಲಿರುವವರು ಪ್ರವಾದಿ ಯೇಸು ಕ್ರಿಸ್ತರ ತಾಯಿ ಮೇರಿ, ಮುಝಾಹಿಮ್ ಮಗಳು ಆಸಿಯಾ ಮತ್ತು ಅವರ ಸೋದರಿ ಉಮ್ಮು ಕುಲ್ಸೂಮ್. ನಾವೆಲ್ಲ ನಿಮಗೆ ಸಹಾಯ ಮಾಡಲು ಬಂದಿದ್ದೇವೆ' ಎಂದಿದ್ದರಂತೆ.

ಅವನ್ನೆಲ್ಲ ದೊಡ್ಡ ಒಡತಿ ನೆನಪಿಸಿಕೊಳ್ಳುತ್ತಿರುವಂತೆಯೇ, ತೊಟ್ಟಿಲಲ್ಲಿ ಮಲಗಿದ್ದ ಮಗು ಆಯಿಷಾ ಎಚ್ಚರಗೊಂಡು ಅಳತೊಡಗಿತು. ಮಗುವನ್ನು ಎತ್ತಿಕೊಂಡು ಉಮ್ಮನ ಮಡಿಲಲ್ಲಿ ಮಲಗಿಸಿದೆ. ಫಾತಿಮಾಳನ್ನು ಹಿತ್ತಲ ಬಾಗಿಲ ಮೂಲಕ ಕರೆದುಕೊಂಡು, ಖರ್ಜೂರದ ಮರಗಳ ನಡುವೆ ನಿರ್ಮಿಸಿದ್ದ ಕಲ್ಲು ಮಂಟಪದ ಬಳಿ ಆಟವಾಡುತ್ತಿದ್ದ ನನ್ನ ಮಗ ಸಫ್ವಾನನ ಬಳಿ ಕುಳಿತಿರಲು ಹೇಳಿ, 'ಈಗ ಬಂದೆ' ಎನ್ನುತ್ತಾ ಒಳಗೆ ಹೋದೆ. ಜೇನು ಬೆರೆಸಿದ ಕರ್ಜೂರದ ಪಾಯಸವನ್ನು ತಂದು ಫಾತಿಮಾಳಿಗೆ ಕೊಡುತ್ತಾ, 'ನೀನು ನಮ್ಮ ಅದೃಷ್ಟದ ದೇವತೆ' ಎಂದೆ.

'ದೇವತೆಗಳೆಲ್ಲ ಸತ್ತು ಹೋಗಿ ಬಹಳ ಕಾಲವಾಯಿತಲ್ಲ?' ಕಿಲಕಿಲನೆ ನಕ್ಕಿದ್ದಳು ಪ್ರವಾದಿಪುತ್ರಿ.

ನನ್ನ ತಪ್ಪಿನ ಅರಿವಾಗಿ ನಾನು ತುಟಿ ಕಚ್ಚಿಕೊಂಡೆ. ಅಲ್ಲಾಹುವಿಗೆ ಯಾರನ್ನೂ ಪಾಲುದಾರರನ್ನಾಗಿ ಮಾಡಬಾರದು ಎಂಬ ಪ್ರವಾದಿಯ ಸಂದೇಶವನ್ನು ನಾನು ಮರೆತುಬಿಟ್ಟಿದ್ದೆ. ನನ್ನ ಮುಜುಗರವನ್ನು ಮರೆಸುವ ಆಸೆಯಿಂದ ಫಾತಿಮಾ, 'ನನಗೆ ಕುದುರೆ ಸವಾರಿ ಕಲಿಸುವಂತೆ ಈ ಸಫ್ವಾನನ ಅಬ್ಬನಿಗೆ ಹೇಳಿದರೆ ಅವರು ಕಲಿಸುವುದೇ ಇಲ್ಲ' ಎಂದು ನಕ್ಕಳು.





ಅಷ್ಟು ಹೊತ್ತಿಗೆ ಅಫೀರಾಳೊಂದಿಗೆ ಅಲ್ಲಿಗೆ ಬಂದ ಮುಅತ್ತಲ್, ಪ್ರವಾದಿ ಪುತ್ರಿಯನ್ನು ಕಣ್ಣರಳಿಸಿ ನೋಡುತ್ತಾ, 'ನಿನ್ನಬ್ಬ ಹೇಳಿದರೆ ನಿನಗೂ ಕಲಿಸಬಲ್ಲೆ ಫಾತಿಮಾ. ನಿನಗೆ ಕಲಿಸುವುದನ್ನು ಬಲು ದೊಡ್ಡ ಭಾಗ್ಯವೆಂದೇ ಭಾವಿಸುವೆ' ಎಂದರು.

ಆಗ, ಪಕ್ಕದಲ್ಲೇ ಆಡುತ್ತಿದ್ದ ಸಫ್ವಾನನತ್ತ ತೋರು ಬೆರಳು ಚಾಚಿದ ಫಾತಿಮಾ, 'ನಿಮ್ಮ ಮಗ ಸಫ್ವಾನನಿಗೆ ಮೊದಲು ಕಲಿಸಿ' ಎಂದಳು.

'ತಲೆತಗ್ಗಿಸಿಯೇ ಓಡುವ ಕುದುರೆಯೊಂದು ಸಿಕ್ಕಿದರೆ, ಸಫ್ವಾನನಿಗೆ ಕಲಿಸಲು ಸುಲಭವಾದೀತು ಅಲ್ವಾ?' ಎಂದೆ ನಾನು. ಹಾಗೆ ಹೇಳಲು ಕಾರಣವೂ ಇತ್ತು. ಸಫ್ವಾನ್ ಒಂದು ಸಂಕೋಚದ ಮುದ್ದೆ. ತಲೆಯೆತ್ತಿ ಯಾರನ್ನೂ ನೋಡಲಾರ. ಹುಡುಗಿಯರಿಗಿಂತಲೂ ಹೆಚ್ಚು ನಾಚಿಕೆ.

'ಅದನ್ನು ಹೇಳು ಮೊದಲು.' ಮುಅತ್ತಲ್ ಕೂಡಾ ನಕ್ಕು ತನ್ನ ಕೆಲಸಕ್ಕೆ ಮರಳಿದ್ದರು. ಸ್ವಲ್ಪ ಹೊತ್ತು ಕಳೆದ ಬಳಿಕ ಫಾತಿಮಾಳ ಬಳಿಗೆ ಬಂದ ಸಫ್ವಾನ್ ಅವಳ ಕೈ ಹಿಡಿದು ಜಗ್ಗುತ್ತಾ, 'ಅಕ್ಕಾ..' ಎಂದ. ಏನು ಎಂಬಂತೆ ಅವನತ್ತ ಕತ್ತು ತಿರುವಿದಳು ಫಾತಿಮಾ. ಅವನು ಹೇಳಲು ಹಿಂಜರಿಯುತ್ತಿದ್ದಂತೆ ಅನ್ನಿಸಿತು. 'ಏನಾಯಿತೋ ಹೇಳೋ' ಎಂದು ಅಫೀರಾಳೂ ಒತ್ತಾಯಿಸಿದ್ದಳು.

ಸಫ್ವಾನ್ ಸಂಕೋಚದಿಂದಲೇ ಪಿಸುಗುಟ್ಟಿದ್ದ, 'ಮಗು ಎಷ್ಟು ಚಂದ ಅಲ್ವಾ ಅಕ್ಕಾ?'

ಅಷ್ಟರಲ್ಲೇ, ಸಫ್ವಾನನ ಮುಖ ನಾಚಿಕೆಯಿಂದ ಕೆಂಪಾಗಿತ್ತು. ನನ್ನ ಮಗ ಇರುವುದೇ ಹಾಗೆ.

* * *

*'ನೀನು ಕಾಣಿಸಿದ ಆಯಿಷಾ ಇನ್ನೂ ಪುಟ್ಟ ಮಗು. ಅವಳೆದುರು ಹೋಗಿ ನಿಂತರೆ ನನ್ನ ಪ್ರಯಾಣದ ಉದ್ದೇಶ ಅವಳಿಗೆ ತಿಳಿದೀತೆ?' ನನ್ನೊಳಗೇ ಅನುಮಾನಿಸಿದ್ದೆ.*

*'ನಾನು ಕಾಣಿಸಿದ್ದ ಅಫೀರಾ ಕೂಡ ಸಣ್ಣ ಮಗುವಾಗಿರಲಿಲ್ಲವೆ? ಅವಳಿಗೆ ನಿನ್ನ ಬಯಕೆ ತಿಳಿಯಲಿಲ್ಲವೆ?' ಗೆಳೆಯ ಅರ್ಷದ್ ಪ್ರಶ್ನಿಸಿದ್ದ!*

*ನಾನು ಏನನ್ನು ಯೋಚಿಸಿದರೂ ಅರ್ಷದ್‌ನಿಗೆ ಗೊತ್ತಾಗಿಬಿಡುತ್ತಿತ್ತು. ಅವನಿಗೆ ಗೊತ್ತಾಗುವುದೆಂದು ಹೆದರಿ ನಾನು ಯೋಚಿಸದೇ ಇರುವುದಕ್ಕಾಗುತ್ತದೆಯೇ?*

*'ಪುಟ್ಟ ಮಗು ಆಯಿಷಾಳನ್ನು ಈಗ ಹೋಗಿ ಮಾತನಾಡಿಸುವುದರಿಂದ*

*ನನಗಿರುವ ಸಂದೇಹಗಳನ್ನು ಪರಿಹರಿಸಿಕೊಳ್ಳುವುದು ಸಾಧ್ಯವಿಲ್ಲ. ನಾನು ತಿಳಿದುಕೊಳ್ಳಬೇಕಾ ಗಿರುವುದು, ಆಯಿಷಾ ಪ್ರವಾದಿಪತ್ನಿಯಾದ ಬಳಿಕದ ಸಂಗತಿಗಳನ್ನು. ಪ್ರವಾದಿಯವರ ಜೊತೆಯಲ್ಲಿ ಇಪ್ಪತ್ತೈದು ವರ್ಷಗಳ ಕಾಲ ಜೊತೆಯಲ್ಲಿದ್ದದ್ದು ಮಾತ್ರವಲ್ಲ, ಅಲ್ಲಾಹುವಿನ ಅಂತಿಮಸತ್ಯದಲ್ಲಿ ವಿಶ್ವಾಸವಿರಿಸಿದ ಮೊತ್ತ ಮೊದಲ ಮಹಿಳೆಯಾಗಿದ್ದ ಖದೀಜಾರಿಗಿಂತಲೂ ಹೆಚ್ಚು ಪ್ರಸಿದ್ಧಿ ಮತ್ತು ಪ್ರಚಾರ ಪಡೆದಿದ್ದವರು ಮೂರನೇ ಪ್ರವಾದಿಪತ್ನಿ ಆಯಿಷಾ.'*

*'ನಿನಗೆ ಕುತೂಹಲವಿರುವುದು, ಆಯಿಷಾ ಪ್ರವಾದಿಪತ್ನಿಯಾದ ಬಳಿಕದ ಸಂಗತಿಗಳಲ್ಲಿ ಎಂಬುದು ನನಗೂ ಗೊತ್ತಿದೆ. ಆದ್ದರಿಂದ, ಆಯಿಷಾರನ್ನು ಮದುವೆಯಾಗಬಯಸಿದ ಪ್ರವಾದಿಯು, ಮದುವೆ ಪ್ರಸ್ತಾಪವನ್ನು ಆಯಿಷಾರ ಮನೆಗೆ ಕಳುಹಿಸಿದ ಪ್ರಕರಣವನ್ನೇ ಮೊದಲು ಕಾಣಿಸುವೆ. ಬಾ ಹೊರಡೋಣ' ಎಂದ ಅರ್ಷದ್ ನನ್ನನ್ನು ಕರೆದುಕೊಂಡು ಹೊರಟ.*

❒



## ಸ್ವಗತ – ಮೂರು

## ಉಮ್ಮು ರುಮಾನ್ ಬಿಂತಿ ಅಲ್‌ಅಮೀರ್

–೧–

'ನಿಮ್ಮ ಮಗಳು ಆಯಿಷಾಳನ್ನು ನಾನು ಮದುವೆಯಾಗಬಯಸಿರುವೆ.'

ನಿನ್ನೆ ಮುಸ್ಸಂಜೆಗೆ ಖೌಲಾ ಮೂಲಕ ಪ್ರವಾದಿಯವರು ನನಗೆ ಕಳುಹಿಸಿದ್ದ ಸಂದೇಶವಿದು. ಏನೆಂದು ಪ್ರತಿಕ್ರಿಯಿಸಬೇಕಿತ್ತು ನಾನು?

'ಒಹೋ.., ಬಹಳ ಸಂತೋಷವಾಯಿತು ಪ್ರವಾದಿಯವರೇ. ನನ್ನ ಮಗಳಿಗೂ ಒಂಬತ್ತು ದಾಟಿದೆ. ಅವಳು ಪ್ರವಾದಿಪತ್ನಿ ಯಾಗುವುದನ್ನು ನಾನು ಬೇಡವೆನ್ನುತ್ತೇನಾ? ಅದು ನನ್ನ ಸೌಭಾಗ್ಯವಲ್ಲವೆ?' ಎನ್ನುತ್ತಾ ಸಂದೇಶ ತಂದ ಖೌಲಾಳನ್ನು ಬರಸೆಳೆದು ಅಪ್ಪಿಕೊಂಡು ಮುದ್ದಾಡಬೇಕಿತ್ತೆ?

ಪ್ರವಾದಿಯವರ ನೆರಳಿನಂತೆ ಹಗಲೂ ರಾತ್ರಿ ಜೊತೆಗೇ ಇರುವ ಆಯಿಷಾಳ ಅಬ್ಬನಿಗೆ ಒಂದು ಸಣ್ಣ ಸೂಚನೆಯನ್ನೂ ನೀಡದೆ, ತೀರಿಹೋದ ತಮ್ಮ ಪತ್ನಿ ಖದೀಜಾರ ಗೆಳತಿ ಖೌಲಾಳ ಮೂಲಕ ತಮ್ಮ ಬಯಕೆಯನ್ನು ಪ್ರವಾದಿಯವರು ನನಗೆ ತಲುಪಿಸುತ್ತಾರೆಂಬುದನ್ನು ಕನಸಿನಲ್ಲೂ ಕಲ್ಪಿಸಿಕೊಂಡವಳಲ್ಲ. ಮದುವೆಯೆಂದರೆ ಅದೇನು ಮಕ್ಕಳಾಟವೆ?

ಹಾಗೆಂದು ಸಂದೇಶ ಹೊತ್ತು ಬಂದಿದ್ದ ಖೌಲಾ ನನಗೆ ಅಪರಿಚಿತಳೇನೂ ಅಲ್ಲ. ಹಕೀಮ್ ಸರದಾರರ ಪುತ್ರಿ ಖೌಲಾ, ನನಗಿಂತ ಒಂದೆರಡು ವರ್ಷಕ್ಕೆ ದೊಡ್ಡವಳಿರಬಹುದು. ಮೊದಲ ಪ್ರವಾದಿಪತ್ನಿಯ ಮರಣದ ಬಳಿಕ ಕಡಿಮೆಯೆಂದರೆ

ವಾರಕ್ಕೆರಡು ಬಾರಿಯಾದರೂ ಪ್ರವಾದಿಯ ಮನೆಗೆ ಹೋಗಿ, ಉಮ್ಮನನ್ನು ಕಳೆದುಕೊಂಡ ಹೆಣ್ಣು ಮಕ್ಕಳಿಗೆ ಸಾಂತ್ವನ ಹೇಳಿ ಬರುತ್ತಿದ್ದವಳು. ಅಂತೆಯೇ ತಿಂಗಳಿಗೊಂದೆರಡು ಬಾರಿಯಾದರೂ ನಮ್ಮ ಮನೆಗೆ ಬಂದು ಕುಶಲ ವಿಚಾರಿಸುವ ಜೊತೆಯಲ್ಲಿ, ಪ್ರವಾದಿಮನೆಯ ಸುಖ ದುಃಖಗಳನ್ನೂ ಹಂಚಿಕೊಂಡು ಹೋಗುತ್ತಿದ್ದವಳು. ತಿಂಗಳ ಹಿಂದೊಮ್ಮೆ ಮನೆಗೆ ಬಂದಿದ್ದ ಖೌಲಾ, ಪ್ರವಾದಿ ಮನೆಯ ದಯನೀಯ ಸ್ಥಿತಿಯನ್ನು ಕಣ್ಣಂಚುಗಳಲ್ಲಿ ನೀರು ತುಂಬಿಕೊಳ್ಳುತ್ತಾ ಬಣ್ಣಿಸಿ ಮರಳಿದ್ದಳು. ಅವಳು ಹೇಳಿದ್ದ ಸಂಗತಿಗಳು ನನಗೆ ಗೊತ್ತಿರದವುಗಳೇನೂ ಆಗಿದ್ದಿರಲ್ಲ. ಆಯಿಷಾಳ ಅಬ್ಬನ ಮೂಲಕ ಎಲ್ಲವೂ ತಿಳಿದಿತ್ತು.

ಬೀಬಿ ಖತೀಜಾರ ನಿಧನವು ಪ್ರವಾದಿಯ ಬದುಕನ್ನೇ ಅಲುಗಿಸಿತ್ತು. ಪ್ರೀತಿಯ ದೊಡ್ಡಪ್ಪ ಅಬೂತಾಲಿಬರ ಮರಣದ ಬಳಿಕದ ಎರಡು ವರ್ಷಗಳಲ್ಲಿ ಹತ್ತಾರು ದುರ್ಘಟನೆಗಳು ಪ್ರವಾದಿಯ ಬೆನ್ನುಹಿಡಿದಿದ್ದವು. ತಮ್ಮ ಕೊನೆಯುಸಿರಿನವರೆಗೂ, ಸತ್ಯವಿಶ್ವಾಸಿಯಾಗಲು ನಿರಾಕರಿಸಿದ್ದ ಆ ದೊಡ್ಡಪ್ಪ, 'ನಾನು ಬದುಕಿರುವರೆಗೂ ನಿನ್ನ ಕೂದಲು ಕೊಂಕಿಸಿದವರನ್ನು ಕತ್ತರಿಸಿ ಹಾಕುವೆ' ಎಂಬುದಾಗಿ ತಮ್ಮ ಸೋದರ ಪುತ್ರನಿಗೆ ಅಭಯ ನೀಡಿದ್ದು ವಿಶೇಷವೇ ಆಗಿತ್ತು. ಅಬೂತಾಲಿಬರ ಮರಣದ ಬಳಿಕ ಪ್ರವಾದಿಯ ಬದುಕೇ ಅಪಾಯದಲ್ಲಿ ಸಿಲುಕಿಕೊಂಡಿತ್ತು.

ಕಅಬಾದ ಮೂರ್ತಿಗಳನ್ನು ದೇವರುಗಳಲ್ಲ ಎನ್ನಲಾರಂಭಿಸಿದ ಬಳಿಕದ ದಿನಗಳಲ್ಲಿ, ಪ್ರವಾದಿಯನ್ನು ತಮ್ಮ ಪರಮಶತ್ರು ಎಂದು ಗುಟ್ಟಾಗಿ ಹೇಳುತ್ತಿದ್ದ ಇನ್ನೊಬ್ಬ ದೊಡ್ಡಪ್ಪ ಅಬೂಲಹಬರು, ತಮ್ಮಣ್ಣ ಅಬೂತಾಲಿಬರ ಮರಣದ ಬಳಿಕ ಅದನ್ನು ಬಹಿರಂಗವಾಗಿಯೇ ಘೋಷಿಸಿದ್ದರು. ಅವರ ಗೂಂಡಾಗಳು ಪ್ರವಾದಿಯ ಬೆಂಬಲಿಗರನ್ನು ಕಂಡಲ್ಲಿ ಕಲ್ಲೆಸೆದು ಓಡಿಸುತ್ತಿದ್ದರು. ತಮ್ಮ ಖಾಸಾ ದೋಸ್ತ್ ಅಬೂಜಹಲನ ಜೊತೆ ಸೇರಿಕೊಂಡು, ಅವರು ನಡೆಸುತ್ತಿದ್ದ ಪುಂಡಾಟಗಳಿಗೆ ಬೆದರಿ ಬಹಳಷ್ಟು ಸತ್ಯವಿಶ್ವಾಸಿಗಳು ಮನೆ ಮಾರು ಬಿಟ್ಟೋಡಿದ್ದರು. ಕೆಲವರು ಮದೀನಾಕ್ಕೆ ಧಾವಿಸಿದ್ದರೆ, ಇನ್ನು ಕೆಲವರು ಬಲುದೂರದಲ್ಲಿರುವ ಆಫ್ರಿಕಾದ ಅಬಿಸೀನಿಯಾಕ್ಕೆ ವಲಸೆ ಹೋಗಿದ್ದರು. ಹಲವರ ಪತ್ತೆಯೇ ಇಲ್ಲದಂತಾಗಿತ್ತು. ಎಲ್ಲ ಬಗೆಯ ಹಿಂಸೆಗಳನ್ನೂ ಸಹಿಸಿಕೊಳ್ಳುತ್ತಾ ಪ್ರವಾದಿಯ ಜೊತೆಗೆ ಉಳಿದುಕೊಂಡವರ ಹಸಿವು ನೀಗಿಸುವಲ್ಲಿ, ಖದೀಜಾ ಬಿಟ್ಟು ಹೋಗಿದ್ದ ಅಪಾರ ಸಂಪತ್ತು ಕರಗಿಹೋಗಿತ್ತು. ಪ್ರವಾದಿಯ ಜೊತೆಗೆ ಅಂತಿಮವಾಗಿ ಉಳಿದದ್ದು ಒಂದು ಜೊತೆ ಚಪ್ಪಲಿ ಮತ್ತು ಅವರನ್ನು ಪ್ರವಾದಿ ಎಂದು ಘೋಷಿಸಿದ್ದ ಅಲ್ಲಾಹು ಮಾತ್ರ.

ಈ ಎಲ್ಲ ಹಿಂಸೆಗಳಿಗೂ ಕಳಸವಿಟ್ಟಂತೆ ಅಬೂಲಹಬರು, ಪ್ರವಾದಿಯ ಇಬ್ಬರೂ ಹೆಣ್ಣುಮಕ್ಕಳಾದ ರುಖಿಯಾ ಮತ್ತು ಕುಲ್ಸೂಮರಿಗೆ, ತಮ್ಮಿಬ್ಬರು ಮಕ್ಕಳಿಂದ





ಒತ್ತಾಯಪೂರ್ವಕ ವಿಚ್ಛೇದನ ಕೊಡಿಸಿದ್ದರು. ಅಬೂಲಹಬರ ಮಕ್ಕಳಿಂದ ತ್ಯಜಿಸಲ್ಪಟ್ಟ ಪ್ರವಾದಿಪುತ್ರಿಯರು ಅನಿವಾರ್ಯವಾಗಿ ತವರಲ್ಲೇ ಉಳಿಯುವಂತಾಗಿತ್ತು.

ನಿನ್ನೆ ದಿನ ಬಂದಿದ್ದಾಗ ಖೌಲಾ ಹೇಳಿದ್ದಳು, 'ನಾನಲ್ಲಿಗೆ ಹೋಗಿದ್ದಾಗ, ಕಣ್ಣು ಮುಚ್ಚಿ ಗೋಡೆಗಂಟಿಕೊಂಡು ಕುಳಿತಿದ್ದ ಪ್ರವಾದಿಯವರ ಪಕ್ಕದಲ್ಲಿ ಪ್ರೀತಿಯ ಮಗಳು ಫಾತಿಮಾ ಅವರ ಬಲಗೈ ಸವರುತ್ತಿದ್ದರೆ, ಉಳಿದಿಬ್ಬರು ಮಕ್ಕಳಾದ ರುಖಿಯ್ಯಾ ಮತ್ತು ಕುಲ್ಸೂಮ್ ತಲೆ ತಗ್ಗಿಸಿ ನಿಂತಿದ್ದರು. ನನಗೆ ಹೆಚ್ಚು ಹೊತ್ತು ಅಲ್ಲಿ ನಿಲ್ಲಲಾಗಲಿಲ್ಲ. ತಲೆವಸ್ತ್ರದಿಂದ ಕಣ್ಣೊರಸಿಕೊಳ್ಳುತ್ತಾ ಇಲ್ಲಿಗೆ ಓಡಿ ಬಂದುಬಿಟ್ಟೆ.'

ಅದೇನು ಕಾರಣವೋ, ಮುಂದಿನ ಎರಡು ತಿಂಗಳ ಅವಧಿಯಲ್ಲಿ ಖೌಲಾ ಬಂದಿರಲಿಲ್ಲ. ಮೊನ್ನೆ, ಮೂರು ದಿನಗಳ ಹಿಂದಿನ ಸೂರ್ಯ, ಬೆಟ್ಟಗಳ ಸಂದಿಯಲ್ಲಿ ಅಡಗಿಕೊಳ್ಳಲು ತಯಾರಿ ನಡೆಸುತ್ತಿದ್ದ ಹೊತ್ತಲ್ಲಿ ಇದ್ದಕ್ಕಿದ್ದಂತೆ ಅಂಗಳದಲ್ಲಿ ಕಾಣಿಸಿಕೊಂಡಿದ್ದಳು. ಈ ಬಾರಿ ಅವಳ ಮುಖದಲ್ಲಿ ನೋವಿನ ಲವಲೇಶವೂ ಇರಲಿಲ್ಲ. ಬದಲಿಗೆ, ಅಸಾಧ್ಯವಾದುದೇನನ್ನೋ ಸಾಧಿಸಿ ಗೆದ್ದ ಹೊಳಪಿತ್ತು. ಹೊಸ್ತಿಲು ದಾಟಿ ಒಳಬರುತ್ತಿರುವಂತೆಯೇ ಘೋಷಿಸಿದ್ದಳು, 'ಈ ಮನೆಯಲ್ಲಿ ಮಹತ್ತರವಾದ ಸಂಗತಿಯೊಂದು ನಡೆಯಲಿದೆ.'

ನನ್ನ ಎದೆ ಜಲ್ಲೆಂದಿತ್ತು!

ಮಹತ್ತರವಾದ ಸಂಗತಿಯೊಂದು ಈ ಮನೆಯಲ್ಲಿ ಹಿಂದೊಮ್ಮೆ ಸಂಭವಿಸಿದ ಕಾರಣದಿಂದಲೇ ಅಸ್ಮಾ, ತನ್ನ ಹೆತ್ತ ಉಮ್ಮ ಕುತಾಯ್ಲಾರನ್ನು ಕಳೆದು ಕೊಂಡದ್ದು ಮತ್ತು ನಾನೇ ಅಸ್ಮಾಳ ಅಬ್ಬನನ್ನು ಮದುವೆಯಾಗಿ ಈ ಮನೆಗೆ ಬಂದದ್ದು. ಇದೀಗ, 'ಈ ಮನೆಯಲ್ಲಿ ಮಹತ್ತರವಾದ ಮತ್ತೊಂದು ಸಂಗತಿಯೊಂದು ಬಲು ಬೇಗ ನಡೆಯಲಿದೆ' ಎಂಬ ಸಂದೇಶದೊಂದಿಗೆ ಖೌಲಾ ಬಂದಿದ್ದಾಳೆ! ಭಯವಾಗಿತ್ತು.

'ಅದೇನು ಖೌಲಾ, ಮಹತ್ತರವಾದದ್ದು?' ಆತಂಕದಿಂದಲೇ ಪ್ರಶ್ನಿಸಿದ್ದೆ.

'ಅಲ್ಲಾಹು ಬಲು ಬೇಗ ಈ ಮನೆಯಲ್ಲಿ ಸಂತೋಷದ ಹೊಳೆಯನ್ನೇ ಹರಿಸಲಿದ್ದಾನೆ' ಆಕೆ ಒಗಟನ್ನೇ ಮುಂದುವರಿಸಿದ್ದಳು.

ನನಗೆ ಸಿಟ್ಟು ಬಂದಿತ್ತು. 'ಅದೇನೆಂಬುದನ್ನು ಸರಿಯಾಗಿ ವಿವರಿಸಿ ಹೇಳುತ್ತೀಯಾ? ಅಥವಾ ಇಲ್ಲಿಂದ ತೊಲಗುತ್ತೀಯಾ?' ಒರಟಾಗಿಯೇ ಗುಡುಗಿದ್ದೆ. ನಾನೆಂದೂ ಅವಳೆದುರು ಈ ರೀತಿ ಧ್ವನಿಯೇರಿಸಿ ಮಾತನಾಡಿದವಳಲ್ಲ. ನನ್ನ ಮಾತುಗಳಿಂದ ಅವಳ ಉತ್ಸಾಹವೆಲ್ಲ ಕರಗಿ ಹೋಗಿದ್ದಿರಬಹುದು. ಆದರೂ ನನ್ನ ಬೆನ್ನಿಗಂಟಿಕೊಂಡೇ ಒಳ ಕೋಣೆಗೆ ಬಂದಳು. 'ಮಕ್ಕಳೆಲ್ಲಿ? ಯಾರೂ ಕಾಣುತ್ತಿಲ್ಲವಲ್ಲ?' ಎಂದು ಪ್ರಶ್ನಿಸಿದಳು. ಅವಳಿಗೆ ಮಾತು ಮುಂದುವರಿಸಬೇಕಾಗಿತ್ತು.

‘ಹಿತ್ತಲಲ್ಲಿ ಆಡುತ್ತಿರಬೇಕು’ ಎಂದಿದ್ದೆ ಚುಟುಕಾಗಿ.

ಅವಳ ಬಾಡಿದ ಮುಖವನ್ನು ಗಮನಿಸಿದ ನನಗೆ ಅಯ್ಯೋ ಅನ್ನಿಸಿತ್ತು.

‘ಬಾ ಕುಳಿತುಕೋ’ ಎಂದೆ.

ಬೇರಾರೂ ಒಳ ಬಾರದಿರಲಿ ಎಂಬಂತೆ ಹೊಸ್ತಿಲ ಮೇಲೆ ಅಡ್ಡಲಾಗಿ ಕುಳಿತವಳು, ‘ಏನಾಯಿತು ಅಂದರೆ...’ ಎಂದು ಪೀಠಿಕೆ ಹಾಕುತ್ತಾ, ಪ್ರವಾದಿ ಮತ್ತು ಅವಳ ನಡುವೆ ನಡೆದ ಸಂವಾದವನ್ನು ವಿವರಿಸಿದ್ದಳು.

ಬೀಬಿ ಖದೀಜಾರ ಮರಣದ ಬಳಿಕ ಪ್ರವಾದಿಯ ಮುಖದಲ್ಲಿ ನಗುವೆಂಬುದೇ ಮಾಯಾವಾಗಿತ್ತು. ಆ ಕೊರತೆಯನ್ನು ನೀಗಲು ಸಾಧ್ಯವಾದರೆ, ಅಲ್ಲಾಹುವಿನ ಸಂದೇಶಗಳನ್ನು ಹೆಚ್ಚು ಉತ್ಸಾಹದಿಂದ ಹರಡಲು ಅವರಿಂದ ಸಾಧ್ಯವಾಗಬಹುದು ಎಂಬುದು ಖೌಲಾಳ ಹೆಣ್ಣು ಹೃದಯದ ತರ್ಕ. ತನ್ನ ಗಂಡ ಉತ್ತಮಾನನೊಂದಿಗೆ ಅಲ್ಲಾಹುವಿನ ಸಂದೇಶಗಳನ್ನು ಸ್ವೀಕರಿಸಿದ್ದ ಆರಂಭದ ಸತ್ಯವಿಶ್ವಾಸಿಗಳಲ್ಲಿ ಅವಳೂ ಒಬ್ಬಳು. ಹಾಗಾಗಿ ಪ್ರವಾದಿಯವರಿಗೂ ಅವಳ ಬಗ್ಗೆ ವಿಶೇಷ ನಂಬುಗೆ. ಆದರೆ, ಆಕೆಯ ಯೋಚನೆಯನ್ನು ಪ್ರವಾದಿಯವರಿಗೆ ತಿಳಿಯಹೇಳುವವರು ಯಾರೂ ಇರಲಿಲ್ಲ. ಇವಳಿಗೊಂದು ಹುಚ್ಚು ಯೋಚನೆ. ತಾನೇ ಅದನ್ನು ಪ್ರವಾದಿಯವರಿಗೆ ತಿಳಿಸಿದರೆ ಹೇಗೆ? ಎಂಬುದು. ಕೆಲವು ದಿನಗಳ ಕಾಲ ಪ್ರವಾದಿಯವರ ಹಿಂದೆ ಮುಂದೆ ಓಡಾಡಿಕೊಂಡಿದ್ದ ಖೌಲಾ, ಮೊನ್ನೆ ಸಂಜೆಯ ಹೊತ್ತಲ್ಲಿ ಪ್ರವಾದಿಯವರು ಒಂಟಿಯಾಗಿದ್ದಾಗ ಧೈರ್ಯವಹಿಸಿ ಹೇಳಿಯೇ ಬಿಟ್ಟಳಂತೆ.

ಖೌಲಾಳ ಎಲ್ಲ ಮಾತುಗಳನ್ನೂ ಶಾಂತವಾಗಿಯೇ ಆಲಿಸಿದ ಪ್ರವಾದಿಯವರು, ‘ನೀನೇ ಯಾಕೆ ಯಾರನ್ನಾದರೂ ಆರಿಸಿ ನನಗೆ ಹೇಳಬಾರದು?’ ಎಂದು ಪ್ರಶ್ನಿಸಿದರಂತೆ!

ಎಲ್ಲವನ್ನೂ ಮೊದಲೇ ತಯಾರಿ ಮಾಡಿಕೊಂಡು ಸಮರ್ಪಕ ವೇಳೆಗಾಗಿ ಹೊಂಚುಹಾಕುತ್ತಿದ್ದ ಖೌಲಾ, ಸಿಕ್ಕಿದ ಅವಕಾಶವನ್ನು ಬಿಟ್ಟಾಳೆಯೆ? ‘ಇಬ್ಬರನ್ನು ಹುಡುಕಿ ಇಟ್ಟಿರುವೆ. ಅವರಲ್ಲೊಬ್ಬರು ವಿಧವೆ. ಇನ್ನೊಬ್ಬರು ಕನ್ಯೆ. ತಾವು ಯಾರನ್ನು ಆರಿಸಿಕೊಳ್ಳುತ್ತೀರಿ?’ ಎಂದು ಅವರನ್ನೇ ಮರುಪ್ರಶ್ನಿಸಿದ್ದಳು.

‘ಇಬ್ಬರ ಹೆಸರುಗಳನ್ನೂ ಹೇಳು. ಆ ಬಳಿಕ ನನ್ನ ಆಯ್ಕೆಯನ್ನು ತಿಳಿಸುವೆ’ ಎಂದಿದ್ದರಂತೆ ಪ್ರವಾದಿ.

‘ಒಬ್ಬರು ಸೌದಾ. ತಮ್ಮ ಸಂದೇಶಗಳ ಬಗ್ಗೆ ಎಳ್ಳಿನಷ್ಟೂ ಅವಿಶ್ವಾಸ ತೋರಿಸದಿರುವ ವಿಧವೆ. ಮತ್ತೊಬ್ಬರು ಕನ್ಯೆ. ತಮ್ಮ ಬಾಲ್ಯದ ಗೆಳೆಯ ಅಬೂಬಕರ್ ಸರದಾರರ ಮಗಳು ಆಯಿಷಾ.’

ಎರಡು ಕ್ಷಣ ಖೌಲಾಳ ಸಲಹೆಯನ್ನು ಅಳೆದು ತೂಗುವಂತೆ ಕಣ್ಣು ಮುಚ್ಚಿ ಯೋಚಿಸುತ್ತಿದ್ದ ಪ್ರವಾದಿಯವರು, ಸ್ವಲ್ಪ ಹೊತ್ತಿನ ಹೇಳಿದ್ದು, ‘ಇಬ್ಬರನ್ನೂ’.

‘ಏನು! ಇಬ್ಬರನ್ನೂ!!’ ಸ್ವತಃ ಖೌಲಾಳೇ ದಂಗಾಗಿದ್ದಳು.





ಅದನ್ನು ಗಮನಿಸಿದ ಪ್ರವಾದಿ, ‘ಹೌದು, ಇಬ್ಬರನ್ನೂ. ನನ್ನ ಪರವಾಗಿ ಅವರ ಮನೆಗಳಿಗೆ ಈ ಮದುವೆ ಪ್ರಸ್ತಾಪವನ್ನು ತಲುಪಿಸು’ ಎಂದುಬಿಟ್ಟಿದ್ದರು.

‘ಇದಕ್ಕಿಂತ ದೊಡ್ಡ ಸಂತೋಷ ನನಗೇನಿದೆ? ಅಲ್ಲಿಂದ ದಾಪುಗಾಲು ಹಾಕುತ್ತಾ ನೇರವಾಗಿ ಇಲ್ಲಿಗೇ ಬಂದುಬಿಟ್ಟೆ’ ಎಂದಿದ್ದಳು ಖೌಲಾ; ಬಲು ದೊಡ್ಡ ಯುದ್ಧವೊಂದನ್ನು ಗೆದ್ದು ಬಂದವಳಂತೆ.

ನನಗೆ ಗರಬಡಿದಂತಾಗಿತ್ತು. ನನ್ನ ಮಗಳೊಬ್ಬಳು ಪ್ರವಾದಿಪತ್ನಿಯಾಗಲಿದ್ದಾಳೆಯೆ? ಇದು ಹೇಗೆ ಸಾಧ್ಯ!!

ನಮ್ಮ ಮನೆಯ ವಿನಾಶಕ್ಕೆ ಕಾರಣವಾಗುತ್ತದೆಯೆಂದು ಸೂಲಗಿತ್ತಿ ಅಮಾಲ್ ಭವಿಷ್ಯ ಹೇಳಿದ್ದ ನನ್ನ ಮಗಳನ್ನು ವಿವಾಹವಾಗಲು ಸ್ವತಃ ಪ್ರವಾದಿಯವರೇ ಬಯಸುತ್ತಿದ್ದಾರೆಯೆ? ಇದು ಅಸಾಧ್ಯ. ನನ್ನೆದುರು ಖೌಲಾ ಇದ್ದಾಳೆಯೆಂಬುದನ್ನೂ ಮರೆತು ನನ್ನದೇ ಯೊಚನೆಗಳಲ್ಲಿ ಮುಳುಗಿಬಿಟ್ಟಿದ್ದೆ. ನನ್ನ ಸುದೀರ್ಘ ಮೌನದ ಕಾರಣವನ್ನು ತಪ್ಪಾಗಿ ಅಳೆದ ಖೌಲಾ, ‘ಯಾಕೆ, ಇಷ್ಟವಿಲ್ಲವೆ?’ ಎಂದು ನೇರವಾಗಿಯೇ ಪ್ರಶ್ನಿಸಿದ್ದಳು. ಏನೆಂದು ಉತ್ತರಿಸುವುದು?

ಸಣ್ಣ ಬಟ್ಟಲೊಂದರಲ್ಲಿ ಆಡಿನ ಹಾಲನ್ನು ಸುರಿದು, ಜೇನು ಬೆರೆಸಿ ಅವಳೆದುರು ಇರಿಸಿದೆ. ‘ಇದನ್ನು ಮೊದಲು ಕುಡಿ’ ಎಂದೆ.

ನನಗೆ ಯೋಚಿಸಲು ಕಾಲಾವಕಾಶ ಬೇಕಿತ್ತು. ಆಯಿಷಾಳ ಅಬ್ಬನ ಮನಸ್ಸಿನಲ್ಲಿ ಏನಿದೆಯೆಂಬುದನ್ನು ತಿಳಿಯದೆ ಏನನ್ನೂ ಹೇಳುವುದು ಸರಿಯಲ್ಲ. ಬಹಳ ಯೋಚಿಸಿದ ಬಳಿಕ ಹೇಳಿದೆ. ‘ನಾನೊಬ್ಬಳು ಹೆಣ್ಣು. ಗಂಡನ ಅನುಮತಿಯಿಲ್ಲದೆ ಇಂತಹ ಪ್ರಮುಖ ಸಂಗತಿಗಳನ್ನು ನಿರ್ಧರಿಸುವುದು ಸರಿಯಲ್ಲ. ಅವರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೋ ಅದೇ ನನ್ನ ನಿರ್ಧಾರ. ಅವರು ಸಮ್ಮತಿಸಿದ ಕೂಡಲೇ ನಿನಗೆ ಹೇಳಿಕಳುಹಿಸುವೆ’ ಎಂದೆ.

ಹಾಲಿನ ಬಟ್ಟಲನ್ನು ತನ್ನ ಎರಡೂ ಕೈಗಳಲ್ಲಿ ಜೋಪಾನವಾಗಿ ಹಿಡಿದುಕೊಂಡು ನನ್ನ ಮುಖವನ್ನೇ ದಿಟ್ಟಿಸುತ್ತಿದ್ದ ಖೌಲಾ, ಪಾತ್ರೆಯನ್ನೆತ್ತಿ ಹಾಲು ಗುಟುಕರಿಸಿ ಪಾತ್ರೆಯನ್ನು ನೆಲದ ಮೇಲಿರಿಸಿ, ‘ನಿಮ್ಮ ಮಾತಿನಲ್ಲೂ ನ್ಯಾಯವಿದೆ’ ಎಂದು ಹೇಳಿ ಎದ್ದು ಹೊರಟು ನಿಂತಳು.

ಅವಳ ಜೊತೆಯಲ್ಲಿ ಅಂಗಳದವರೆಗೂ ಹೆಜ್ಜೆ ಹಾಕಿದ ನಾನು, ‘ನಾನು ಹೀಗೆ ಹೇಳಿದೆನೆಂದು ಪ್ರವಾದಿಯವರಿಗೆ ಈಗಲೇ ತಿಳಿಸಬೇಡ’ ಎಂದೆ.

‘ನಾನಷ್ಟು ದಡ್ಡಿಯಲ್ಲ. ಅಲ್ಲಾಹುವಿನ ಕೃಪೆ ನಿನ್ನ ಮೇಲಿರಲಿ’ ಎನ್ನುತ್ತಾ ನಕ್ಕು ಹೊರಟು ಹೋದಳು.

ಅಂದು ರಾತ್ರಿ ನಿದ್ರೆಯೆಂಬುದು ನನ್ನ ಬಳಿ ಸುಳಿದಿರಲಿಲ್ಲ.

ಕಳೆದ ಕೆಲವು ವರ್ಷಗಳಿಂದ, ಮುಂಜಾನೆಯ ನಮಾಜಿಗೆಂದು ಸೂರ್ಯ ಇಣುಕುವ ಮುನ್ನವೇ ನಿದ್ರೆಯನ್ನು ಒದ್ದು ಏಳುವುದು ನನಗೆ ಅಭ್ಯಾಸವಾಗಿತ್ತು. ನಿನ್ನೆ ರಾತ್ರಿ ಕಣ್ಣರೆಪ್ಪೆಗಳನ್ನು ಜೋಡಿಸಿಕೊಂಡಿದ್ದರೆ ತಾನೆ, ಬೆಳಗ್ಗೆ ಎಚ್ಚರವಾಗುವ ಅಗತ್ಯ ಬೀಳುವುದು? ಯೋಚನೆಗಳ ಗೊಂಚಲುಗಳೊಂದಿಗೆ ರಾತ್ರಿಯಿಡೀ ಹೊರಳಾಡಿದ್ದ ರಿಂದಲೇ ಇರಬೇಕು; ಇನ್ನೇನು ಸಿಡಿದೇಬಿಡುತ್ತೇನೆ ಎನ್ನುವಂತೆ ತಲೆ ನೋಯುತ್ತಿತ್ತು. ಖೌಲಾ ಮೂಲಕ ಪ್ರವಾದಿಯವರು ಕಳುಹಿಸಿದ್ದ ಅನಿರೀಕ್ಷಿತ ಸಂದೇಶ ಹಾಗಿತ್ತು.

ಆಯಿಷಾಳ ಅಬ್ಬ ಅದಾಗಲೇ ಎದ್ದು ನಮಾಜಿನ ಸಿದ್ಧತೆಯಲ್ಲಿದ್ದರು.

ಅವ್ವಾನ್ ಸರದಾರರ ಪುತ್ರ ಅಲ್ ಜುಬೈರ್'ನ ಹೆಂಡತಿಯಾಗಿ ಅಸ್ಮಾ ಗಂಡನ ಮನೆಗೆ ಹೋಗುವುದಕ್ಕಿಂತ ಮುಂಚಿನ ದಿನಗಳಲ್ಲಾಗಿದ್ದರೆ, ನಮಾಜಿನ ದೇಹ ಶುದ್ಧಿಗಾಗಿ ವಲು ಮಾಡಲೆಂದು ನೀರು ತುಂಬಿದ ತಂಬಿಗೆಯನ್ನು ತಂದಿಟ್ಟು ಹೋಗುತ್ತಿದ್ದಳು. ಈಗ ಆ ಹೊಣೆಯನ್ನು ಅಫೀರಾ ಹೊತ್ತುಕೊಂಡಿದ್ದಳಾದರೂ, ನೀರತಂಬಿಗೆಯನ್ನು ಮಲಗುವ ಕೋಣೆಗೆ ತಾರದೆ, ನೀರ ಮನೆಯ ಪಕ್ಕದ ಕಲ್ಲುಬೆಂಚಿನ ಮೇಲಿರಿಸುತ್ತಿದ್ದಳು.

ದುರದೃಷ್ಟೆ ಅಫೀರಾ.

ಮದುವೆಯಾಗಿ ನಾಲ್ಕು ವರ್ಷವಾಗುವಷ್ಟರಲ್ಲಿ. ಪ್ರೀತಿಯ ಗಂಡನನ್ನು ಕಳೆದು ಕೊಂಡುಬಿಟ್ಟಿದ್ದಳು. ಹೆತ್ತ ಇಬ್ಬರು ಮಕ್ಕಳೂ ಕಣ್ಣು ಬಿಡುವ ಮುನ್ನವೇ ಮರಣಿಸಿದ್ದವು. ಇವಳ ಗಂಡ, ಕಅಬಾ ಮಂದಿರದಿಂದ ಮದೀನಾಕ್ಕೆ ಹೋಗುವ ರಸ್ತೆಪಕ್ಕದ ನಾಟ್ಯಾಲಯದಲ್ಲಿ, ತಾನೇ ರಚಿಸುತ್ತಿದ್ದ ಹಾಡುಗಳನ್ನು ಹಾಡುತ್ತಾ ಮನರಂಜಿಸುವ ಕೆಲಸದಲ್ಲಿದ್ದವನು. ಅಫೀರಾಳನ್ನು ಜೀವಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದ ಕವಿ ಅವನು. ಅಫೀರಾಳೇ ಒಮ್ಮೆ ನಾಚುತ್ತಾ ಹೇಳಿದಂತೆ, ಇವಳ ಬಗ್ಗೆಯೇ ಕೆಲವು ಹಾಡುಗಳನ್ನು ಬರೆದು, ಮತ್ತಾವಳೋ ಸುಂದರಿಯನ್ನು ವರ್ಣಿಸುವಂತೆ ನಾಟ್ಯಾಲಯದಲ್ಲಿ ಹಾಡುತ್ತಾ ಎಲ್ಲರಿಂದಲೂ 'ವಾಹ್ ವಾಹ್' ಅನ್ನಿಸಿಕೊಳ್ಳುತ್ತಿದ್ದನಂತೆ.

ಅವನ ಒಡನಾಟದಲ್ಲಿ ಇವಳೂ ಅರೆಕವಿಯಾಗಿದ್ದಳು. ಅವಳ ಮಾತಿನ ಧಾಟಿಯೂ ಬದಲಾಗಿತ್ತು. ಕೆಲಸದ ನಡುವೆ ರಾಗವಾಗಿ ಗುಣುಗುಣಿಸುತ್ತಿರುವುದನ್ನು ನಾನೇ ಹಲವು ಬಾರಿ ಗಮನಿಸಿದ್ದೆ. 'ಗಟ್ಟಿಯಾಗಿ ಹಾಡು ಅಫೀರಾ, ನಾನೂ ಕೇಳಿಸಿಕೊಳ್ಳುತ್ತೇನೆ' ಎಂದರೆ ನಾಚಿ ನೀರಾಗುತ್ತಿದ್ದಳು.

ಅಸ್ಮಾ ಗಂಡನ ಮನೆಗೆ ಹೋದ ಆಸುಪಾಸಿನ ದಿನಗಳಲ್ಲೇ ಅಫೀರಾ ವಿಧವೆ ಯಾದದ್ದು. ಅದೇನು ಖಾಯಿಲೆಯೋ ಏನೋ. ಒಂದೆರಡು ದಿನ ಹೊಟ್ಟೆನೋವೆಂದು ನರಳಾಡುತ್ತಿದ್ದವನು, ನಾಲ್ಕನೇ ದಿನ ಕಣ್ಣು ಮುಚ್ಚಿದ್ದ. ಅಫೀರಾ ಏನಾದರೂ 'ಹೂಂ' ಅಂದಿದ್ದರೆ, ಆಯಿಷಾಳ ಅಬ್ಬ ಅವಳಿಗೆ ಮತ್ತೊಂದು ಗಂಡು ಹುಡುಕಿ





ಗಂಟುಹಾಕುತ್ತಿದ್ದರು. ಆದರೆ, ತೀರಿಹೋದ ಗಂಡನ ಚಾಪೆಯಲ್ಲಿ ಮತ್ತೊಬ್ಬನ ಜೊತೆಗೆ ಮಲಗಲಾರೆ ಎಂದು ತನಗೆ ಬರುತ್ತಿದ್ದ ಮದುವೆ ಪ್ರಸ್ತಾಪಗಳನ್ನೆಲ್ಲ ಕಡ್ಡಿ ಮುರಿದಂತೆ ನಿರಾಕರಿಸುತ್ತಿದ್ದಳು ಅಫೀರಾ.

ನಮಾಜು ಮುಗಿಸಿ ರೊಟ್ಟಿ ತಯಾರಿಸುತ್ತಿದ್ದಾಗ ಆಯಿಷಾ ಅಡುಗೆ ಮನೆಗೆ ಬಂದಿದ್ದಳು. ಅವಳನ್ನು ಕಂಡಾಗ ಸಂತೋಷಪಡಬೇಕೋ ದುಃಖಿಸಬೇಕೋ ತಿಳಿಯಲಿಲ್ಲ. ಅವಳ ಗಲ್ಲ ಹಿಡಿದು, 'ಮದುವೆಯಾದ ಬಳಿಕ, ನನ್ನನ್ನು ಬಿಟ್ಟು ಹೋಗುತ್ತೀಯೇನೆ ನೀನು?' ಎಂದು ಹುಚ್ಚು ಹುಚ್ಚಾಗಿ ಪ್ರಶ್ನಿಸಿದ್ದೆ.

ನನ್ನ ಮುಖವನ್ನೇ ವಿಚಿತ್ರವಾಗಿ ದಿಟ್ಟಿಸಿ ಆಯಿಷಾ, 'ಮದುವೆಯಾದ ಬಳಿಕ ಅವನನ್ನೂ ಇಲ್ಲೇ ಇರಲು ಹೇಳಿದರಾಯಿತು, ಅಲ್ಲವೇ ಉಮ್ಮಾ?' ಎಂದವಳು, ಮಾತು ಮುಂದುವರಿಸಲು ಬಯಸದವಳಂತೆ, ಎಡಗೈಯಲ್ಲಿ ಹಿಡಿದುಕೊಂಡಿದ್ದ ಬೊಂಬೆಯನ್ನು ಎತ್ತಿ ಮುದ್ದಿಸುತ್ತಾ, 'ಇದರ ಜೊತೆಗೇ ನನ್ನ ಮದುವೆ ಮಾಡಿಸಿಬಿಟ್ಟರೆ, ಈ ಮನೆಯಿಂದ ನನ್ನನ್ನು ಯಾರೂ ಹೊತ್ತುಕೊಂಡು ಹೋಗಲಾಗುವುದಿಲ್ಲ ಅಲ್ವೇ ಉಮ್ಮಾ?' ಎಂದು ಪ್ರಶ್ನಿಸುತ್ತಾ ಹೊರಟುಹೋಗಿದ್ದಳು.

ಅಳಬೇಕೋ ನಗಬೇಕೋ ಎಂದು ತಿಳಿಯದೆ ಗೊಂದಲಗೊಂಡಿದ್ದೆ.

ಆಯಿಷಾಳ ಅಬ್ಬನನ್ನು ಮಾತನಾಡಿಸಿದರೆ, ಸಮಸ್ಯೆ ಬಗೆ ಹರಿಯಬಹುದು ಎಂಬ ಯೋಚನೆಯಿಂದ, ಮೂರು ರೊಟ್ಟಿಗಳನ್ನು ತಟ್ಟೆಯಲ್ಲಿರಿಸಿಕೊಂಡು ಅವರ ಕೋಣೆಗೆ ಹೋದೆ.

ನನ್ನನ್ನು ಕಂಡವರೇ, 'ನೀನು ಇಲ್ಲಿಗೆ ಬಂದದ್ದು ಒಳ್ಳೆಯದೇ ಆಯಿತು. ರಾತ್ರಿಯೇ ನಿನಗೆ ಹೇಳಬೇಕೆಂದುಕೊಂಡಿದ್ದೆ. ಆದರೆ ಹೇಳಲಾಗಲಿಲ್ಲ. ಬೆಳಗ್ಗೆ ಹೇಳಿದ ರಾಯಿತೆಂದು ಸುಮ್ಮನಾದೆ. ನನ್ನ ಗೆಳೆಯನ ಕನಸಿನಲ್ಲಿ ನಮ್ಮ ಮಗಳು ಆಯಿಷಾ ಕಾಣಿಸಿಕೊಂಡಿದ್ದಾಳಂತೆ. ನನ್ನ ಗೆಳೆಯ ಸತ್ಯಸಂಧ; ಸುಳ್ಳು ಹೇಳುವುದಿಲ್ಲ. ಯಾವಳೇ ಹೆಣ್ಣು, ತಾನಿಷ್ಟಪಡುವ ಗಂಡನ್ನು ಮದುವೆಯಾಗುವುದಕ್ಕಿಂತ, ತನ್ನನ್ನು ಇಷ್ಟಪಡುತ್ತಿರುವ ಗಂಡನ್ನೇ ಮದುವೆಯಾದರೆ ಹೆಚ್ಚು ಸುಖಿಯಾಗುತ್ತಾಳೆ. ಇದಕ್ಕಿಂತ ದೊಡ್ಡ ಅದೃಷ್ಟ ಯಾವ ಹೆಣ್ಣಿಗೆ ಸಿಕ್ಕೀತು? ಅದೂ ಎಂತಹಾ ಗಂಡು? ಎಲ್ಲರಿಂದಲೂ ಎಲ್ಲರಂಥವರಲ್ಲ ಎಂದು ಹೊಗಳಿಸಿಕೊಂಡಿರುವ ಅಪರೂಪದ ಗಂಡು. ಅಲ್ಲಾಹು ತನ್ನ ಅಂತಿಮ ಸಂದೇಶವಾಹಕನೆಂದು ಆರಿಸಿರುವ ಗಂಡು.'

ನಾನೆಲ್ಲಾದರೂ ನಡುವೆ ಪ್ರಶ್ನೆಯನ್ನೇನಾದರೂ ಕೇಳಿಬಿಡುತ್ತೇನೆಯೇ ಎಂಬ ಅನುಮಾನದಲ್ಲಿರುವವರಂತೆ ಒಂದೇ ಉಸಿರಲ್ಲಿ ಎಲ್ಲವನ್ನೂ ಹೇಳಿಮುಗಿಸಿದ್ದರು. ಅವರ ಮಾತಿಗೆ ನಾನೆಂದೂ ಎದುರಾಡಿದವಳಲ್ಲ. ಅಂತೆಯೇ ಮದುವೆಯಾದ ದಿನದಿಂದ ಇಂದಿನವರೆಗೂ ನನ್ನ ವಿರುದ್ಧ ಅವರೂ ಕೆಟ್ಟ ಮಾತೂ ಆಡಿದವರಲ್ಲ. ನನ್ನ

ಮೊದಲ ಪತಿ ಸಖ್ ಬರಾಹ್ ಪುತ್ರ ಅಲ್ ಹರಿತ್ ಮರಣದ ಬಳಿಕ, ನನ್ನೊಬ್ಬನೇ ಮಗ ತುಫಯ್ ಜೊತೆಗೆ ದಿಕ್ಕುಗಾಣದೆ ಕುಳಿತು ಕಣ್ಣೀರಿಡುತ್ತಿರುವ ದಿನಗಳಲ್ಲಿ, ಕರುಣೆಯಿಂದ ನನ್ನನ್ನು ಮದುವೆಯಾಗಿ ಹೊಸ ಬಾಳುವೆ ಕೊಟ್ಟ ಉದಾರಿ ಇವರು.

'ನಿನಗೆ ಸಂತೋಷವಾಗಲಿಲ್ಲವೆ?' ನನ್ನ ಮೌನವನ್ನು ಗಮನಿಸಿ ಪ್ರಶ್ನಿಸಿದ್ದರು ಆಯಿಷಾಳ ಅಬ್ಬ.

ಇದೇ ಪ್ರಶ್ನೆಯನ್ನು ಖೌಲಾ ಕೇಳಿದ್ದಾಗ ಅವಳಿಗೆ ಗಂಡನ ಅಧಿಕಾರವನ್ನು ನೆನಪಿಸಿ ತಪ್ಪಿಸಿಕೊಂಡಿದ್ದೆ. ಈಗ ಗಂಡನೇ ಕೇಳುತ್ತಿದ್ದಾರೆ. ಖೌಲಾಳ ಅನುಮತಿ ಕೇಳದೆ ಏನನ್ನೂ ಹೇಳಲಾರೆ ಎನ್ನುವಂತಿರಲಿಲ್ಲ. ಏನಾದರೊಂದು ಬಗೆಯ ಉತ್ತರ ಕೊಡಲೇ ಬೇಕಾಗಿತ್ತು. ಸ್ವಲ್ಪ ಹೊತ್ತಿಗೆ ಮುನ್ನ ಆಯಿಷಾಳ ಜೊತೆಗೆ ನಡೆದ ಮಾತುಗಳು ನೆನಪಾದುವು. ಅದನ್ನೇ ಪ್ರಶ್ನೆಯನ್ನಾಗಿಸಿದೆ, 'ನಿಖಾ ಮಾಡಿಕೊಂಡ ಕೂಡಲೇ ಪ್ರವಾದಿಯವರು ಆಯಿಷಾಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರಾ?'

'ಇಲ್ಲ.' ತಟ್ಟನೆ ಹೇಳಿದ್ದರು ಆಯಿಷಾಳ ಅಬ್ಬ, 'ಇಲ್ಲಿ ಕೆಲವು ಕುರೈಶ್ ಸರದಾರರುಗಳಿಂದ ಗೆಳೆಯ ಎದುರಿಸುತ್ತಿರುವ ಅಪಾಯಗಳನ್ನು ಗಮನಿಸಿದರೆ, ಈಗಲೇ ಕರೆದುಕೊಂಡು ಹೋಗುತ್ತಾರೆಂದು ಅನ್ನಿಸುವುದಿಲ್ಲ.'

'ಈ ಬಗ್ಗೆ ಆಯಿಷಾಳೊಂದಿಗೆ ಒಂದು ಮಾತು ಕೇಳುವುದು ಒಳ್ಳೆಯದಲ್ಲವೆ?' ಮತ್ತೊಂದು ಪ್ರಶ್ನೆ ಮುಂದಿಟ್ಟಿದ್ದೆ.

'ಅವಳಿನ್ನೂ ಚಿಕ್ಕವಳು. ಯಾರ ಜೊತೆಗೆ ಮದುವೆಯಾದರೆ ಒಳ್ಳೆಯದು ಎಂಬುದನ್ನು ನಿರ್ಧರಿಸುವ ವಯಸ್ಸಲ್ಲ ಅವಳದ್ದು.' ಅವರ ಮಾತಿನಲ್ಲಿ ಆಯಿಷಾಳ ಅಭಿಪ್ರಾಯವನ್ನು ಕೇಳುವುದರಲ್ಲೇ ಅರ್ಥವಿಲ್ಲ ಎಂಬ ಭಾವವಿತ್ತು.

ನಾನು ಮಾತು ಮುಗಿಸುವವಳಂತೆ, 'ಅಲ್ಲಾಹು ಬಯಸಿದಂತೆ ಅಗಲಿ' ಎಂದೆ.

ಸ್ವಲ್ಪ ಹೊತ್ತು ನಮ್ಮ ನಡುವೆ ಮೌನವೇ ಮಾತಾಡಿತು. ಅವರು ನನ್ನ ಕಣ್ಣು ತಪ್ಪಿಸಿ ಬೇರೆಲ್ಲೋ ನೋಡುವವರಂತೆ ನಟಿಸುತ್ತಿದ್ದರು. ಸಾಮಾನ್ಯವಾಗಿ ಬೆಳಗಿನ ಹೊತ್ತು ಮೂರು ರೊಟ್ಟಿಗಳನ್ನು ತಿನ್ನುತ್ತಿದ್ದ ಅವರು, ಅರ್ಧ ರೊಟ್ಟಿಯನ್ನೂ ತಿಂದಿರಲಿಲ್ಲ.

'ರೊಟ್ಟಿ ತಿನ್ನಿ' ಎಂದೆ.

ಮೌನ ಅವರಿಗೂ ಅಸಹನೆ ತಂದಿರಬೇಕು. 'ಯಾಕೋ ನನಗೆ ಹಸಿವಾಗುತ್ತಿಲ್ಲ' ಎನ್ನುತ್ತಾ ರೊಟ್ಟಿ ತಟ್ಟೆಯನ್ನು ಮುಂದಕ್ಕೆ ಸರಿಸಿದರು. ನನ್ನಂತೆಯೇ ಅವರೂ ಯಾವುದೋ ಗೊಂದಲದಲ್ಲಿ ಮುಳುಗಿರುವಂತೆ ಕಾಣಿಸಿತು. ಅವರ ಪಕ್ಕದಲ್ಲಿ ಕುಳಿತು ಹಣೆಯ ಮೇಲೆ ಕೈಯಿರಿಸಿ, 'ದೇಹಾರೋಗ್ಯದಲ್ಲಿ ಏನಾದರೂ...'ಎಂದೆ.

'ದೇಹದಲ್ಲಲ್ಲ; ಮನಸ್ಸಿನಲ್ಲಿ' ಎಂದವರು, ಬಾಯಿಪಾಠದ ಮಾತು ಒಪ್ಪಿಸುವವರಂತೆ, 'ನಾನೊಂದು ಕಡೆಗೆ ಹೋಗಿ ಬರಬೇಕಾಗಿದೆ. ಬರಲು ಎರಡು ದಿನಗಳಾಗಬಹುದು. ಮೂರು ದಿನಗಳೂ ಆಗಬಹುದು' ಎಂದರು.





ಪ್ರವಾದಿಯವರ ಸಂಗಾತಿಯಾದ ನಂತರದ ದಿನಗಳಲ್ಲಿ ತಾವು ಎಲ್ಲಿಗೆ ಹೋಗುತ್ತಿದ್ದೇನೆ ಎಂಬುದನ್ನು ಅವರೆಂದೂ ಹೇಳಿದವರಲ್ಲ. ನಾನು ಪ್ರಶ್ನಿಸಿದವಳೂ ಅಲ್ಲ. ಬಹಳ ಹಿಂದೆಯೆಲ್ಲ ಅಂದರೆ, ಅವರು ವರ್ತಕರಾಗಿದ್ದ ದಿನಗಳಲ್ಲಿ ಸಿರಿಯಾಕ್ಕೋ, ಲೆಬನಾನಿಗೋ ವ್ಯಾಪಾರದ ಉದ್ದೇಶದಿಂದ ತಿಂಗಳುಗಟ್ಟಲೆ ಪ್ರವಾಸಕ್ಕೆಂದು ಹೊರಡುತ್ತಿದ್ದಾಗ ಮಾತ್ರ ಹೇಳಿ ಹೋಗುತ್ತಿದ್ದರು. ಆದರೆ, ಪ್ರವಾದಿಯವರ ಸಂಗಾತಿಗಳಲ್ಲಿ ಒಬ್ಬರಾದ ಬಳಿಕ ಏನನ್ನೂ ತಿಳಿಸುತ್ತಿರಲಿಲ್ಲ. ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದು ಅವರಿಗೂ ಮುಂದಾಗಿ ಗೊತ್ತಾಗುತ್ತಿರಲಿಲ್ಲವೇನೊ? ಇಂದು ಹೇಳಿ ಹೋಗುತ್ತಿದ್ದಾರೆ. ಎಲ್ಲಿಗೆ ಹೋಗುತ್ತಿರಬಹುದು?

'ಎಲ್ಲಿಗೆ ಹೋಗಲಿದ್ದೇನೆಂಬುದನ್ನು ನೀನು ಕೇಳಲೇ ಇಲ್ಲವಲ್ಲಾ?' ನಾವಿಬ್ಬರು ಜೊತೆಯಾದ ಬಳಿಕದ ದಿನಗಳಲ್ಲಿ, ಮೊತ್ತ ಮೊದಲ ಬಾರಿ ಈ ಪ್ರಶ್ನೆಯನ್ನು ಆಯಿಷಾಳ ಅಬ್ಬ ಕೇಳಿದ್ದರು.

'ಎಲ್ಲಿಗೆ ಹೋಗುತ್ತಿದ್ದೀರಿ ಎಂಬುದನ್ನು ಈ ಹಿಂದೆಯೂ ನಾನು ವಿಚಾರಿಸಿದವಳಲ್ಲ. ಈ ದಿನವೂ ವಿಚಾರಿಸುವುದಿಲ್ಲ. ಆದರೆ, ಹೋಗುತ್ತಿರುವ ಜಾಗದಲ್ಲಿ ತಮಗೆ ಗೆಲುವು ಸಿಗಲಿ ಎಂದು ಅಲ್ಲಾಹುವನ್ನು ಪ್ರಾರ್ಥಿಸಲು ಮರೆಯುವುದಿಲ್ಲ' ಎಂದೆ.

ನನ್ನ ಮಾತಿಗೆ ಅವಾಕ್ಕಾದವರಂತೆ ಅರೆಕ್ಷಣ ಹುಬ್ಬೇರಿಸಿದ ಅವರು, ಬಳಿಕ ಕ್ಷಮೆ ಯಾಚಿಸುವವರಂತೆ, 'ನಿನ್ನಲ್ಲಿ ಈ ಹಿಂದೆಯೇ ಹೇಳದೆ ತಪ್ಪು ಮಾಡಿದ್ದೆ. ಆಯಿಷಾಳನ್ನು ಮದುವೆ ಮಾಡಿಕೊಳ್ಳುವಂತೆ ಪ್ರವಾದಿಯವರನ್ನು ಕಳೆದ ವರ್ಷವೇ ನಾನು ವಿನಂತಿಸಿದ್ದೆ. ಆದರೆ, ನನ್ನ ಪ್ರಸ್ತಾಪವನ್ನು ಅವರು ನಯವಾಗಿಯೇ ತಿರಸ್ಕರಿಸಿದ್ದರು. ನಮ್ಮಿಬ್ಬರ ಬಾಲ್ಯದ ಗೆಳೆತನವನ್ನು ಗಟ್ಟಿಗೊಳಿಸಲು ಇಂತಹ ಸಂಬಂಧಗಳು ಬೇಕು ಅನ್ನಿಸುತ್ತಿದೆಯಾ ಸಿದ್ದೀಕ್? ಎಂಬ ಪ್ರಶ್ನೆಯಲ್ಲೇ ನನ್ನ ಬಾಯಿ ಮುಚ್ಚಿಸಿದ್ದರು. ಆದರೂ, ನನ್ನ ಆಸೆಯನ್ನು ಹಾಗೆಯೇ ಬಚ್ಚಿಟ್ಟುಕೊಂಡಿದ್ದೆ. ಕಳೆದ ವಾರ ಮತ್ತೊಮ್ಮೆ ನನ್ನ ಬಯಕೆಯನ್ನು ಖೌಲಾ ಮೂಲಕ ಪ್ರವಾದಿಗೆ ತಲುಪಿಸಿದ್ದೆ. ಖೌಲಾ ತನ್ನ ಪ್ರಯತ್ನದಲ್ಲಿ ಗೆದ್ದದ್ದನ್ನು ಮಾತ್ರವಲ್ಲ, ನಿನ್ನ ಸಮ್ಮತಿ ಪಡೆಯಲು ಇಲ್ಲಿಗೆ ಬಂದಿದ್ದಾಗ, ನೀನೇನು ಹೇಳಿದ್ದೆ ಎಂಬುದನ್ನೂ ನನಗೆ ತಿಳಿಸಿದ್ದಳು.

ಅವರ ಮಾತುಗಳನ್ನು ಆಲಿಸುತ್ತಾ ನಾನು ಅಚ್ಚರಿಪಡುತ್ತಿರುವಂತೆಯೇ ನನ್ನೆರಡೂ ಭುಜಗಳನ್ನು ಹಿಡಿದು ನನ್ನ ಕಣ್ಣುಗಳಲ್ಲಿ ಕಣ್ಣಿಟ್ಟು, 'ಮನೆಯೊಳಗೆ ನಡೆಯಲಿರುವ ಬಹುಮುಖ್ಯ ಸಂಗತಿಗಳನ್ನು ತೀರ್ಮಾನಿಸುವ ಸಂದರ್ಭಗಳಲ್ಲಾದರೂ ನನ್ನಂತಹ ಗಂಡಸರಿಗೆ, ನಿನ್ನಂತಹ ಹೆಂಗಸರಿಗಿರುವ ದೊಡ್ಡ ಮನಸ್ಸಿನ ಅರ್ಧದಷ್ಟನ್ನಾದರೂ ಅಲ್ಲಾಹು ಕರುಣಿಸಬಾರದಿತ್ತೆ?' ಎಂದು ನಕ್ಕರು.

ಬೇರಾವುದೇ ಸಂದರ್ಭದಲ್ಲಾಗಿದ್ದರೆ ಅವರ ಹೊಗಳಿಕೆಯ ಮಾತುಗಳಿಗೆ ನಾನು ನಾಚಿ ನೀರಾಗುತ್ತಿದ್ದೆ. ಆದರೆ, ನನ್ನನ್ನು ಕಳೆದ ಸಂಜೆಯಿಂದ ಹಿಂಸಿಸುತ್ತಿದ್ದ ಸಮಸ್ಯೆ, ಆಯಿಷಾಳನ್ನು ಪ್ರವಾದಿಯವರಿಗೆ ಮದುವೆ ಮಾಡಿ ಕೊಡಬೇಕೆ? ಬೇಡವೆ? ಎಂಬುದಾಗಿರಲಿಲ್ಲ. ಕೊಡಲು ಸಾಧ್ಯವಾಗುವುದಾದರೂ ಹೇಗೆ ಎಂಬುದು. ನನ್ನ ಮುಖಭಾವವನ್ನು ಸರಿಯಾಗಿಯೇ ಗುರುತಿಸಿದ ಅವರು, 'ನಾನು ಈ ಬಾರಿ ಎಲ್ಲಿಗೆ ಹೊರಟಿರುವೆ ಎಂಬುದನ್ನು ನೀನು ಬಯಸಿದರೆ ಊಹಿಸಬಲ್ಲೆ' ಎಂದರು.

'ನಾನು! ಊಹಿಸಬಲ್ಲೆ!' ದಂಗುಬಡಿದಂತಾಗಿತ್ತು.

'ಹೌದು. ನೆನ್ನೆಯಿಂದ ನಿನ್ನನ್ನು ಹಿಂಸಿಸುತ್ತಿರುವ ಎಲ್ಲ ಸಮಸ್ಯೆಗಳೂ ಇನ್ನೆರಡು ದಿನಗಳಲ್ಲಿ ನಿವಾರಣೆಯಾಗಲಿವೆ.'

'ಅಂದರೆ! ನೀವೂ..?' ಅರ್ಧ ಅಚ್ಚರಿ, ಅರ್ಧ ಕುತೂಹಲದಿಂದ ಪ್ರಶ್ನಿಸಿ ಅವರನ್ನು ದಿಟ್ಟಿಸಿದೆ.

'ಹೌದು. ನೀನು ಯಾವ ಊರಿನ ಬಗ್ಗೆ ಯೋಚಿಸುತ್ತಿರುವೆಯೋ ಅದೇ ಊರಿಗೆ ಹೊರಟಿರುವೆ. ಪ್ರವಾದಿಯವರ ಜೊತೆಗೆ ಆಯಿಷಾಳ ಮದುವೆಗಿರುವ ಎಲ್ಲ ಅಡ್ಡಿ ಆತಂಕಗಳನ್ನೂ ನಿವಾರಿಸಿಕೊಂಡೇ ಬರುವೆ' ಎಂದವರು ಮಂಚದ ಬಡಿಗೆಗೆ ತೂಗಿಸಿದ್ದ ಪ್ರಯಾಣದ ಚೀಲವನ್ನೆತ್ತಿಕೊಂಡರು.

ಮುಂಬಾಗಿಲವರೆಗೂ ಅವರ ಜೊತೆಗೆ ಹೆಜ್ಜೆ ಹಾಕಿದ ನಾನು, 'ತಾವು ಸಿಟ್ಟು ಮಾಡಿಕೊಳ್ಳುವುದಿಲ್ಲ ಎಂದು ಮಾತು ಕೊಟ್ಟರೆ ಒಂದು ಪ್ರಶ್ನೆ ಕೇಳುವೆ' ಎಂದೆ.

ಹೊಸ್ತಿಲ ಒಳಗೆಯೇ ನಿಂತುಬಿಟ್ಟ ಅವರು ಹೇಳಿದರು, 'ಸಿಟ್ಟು ಮಾಡಿಕೊಳ್ಳು ವಂತಹ ಪ್ರಶ್ನೆಯನ್ನು ನೀನೆಂದೂ ಕೇಳಿದವಳಲ್ಲ. ಇಂದೂ ಕೇಳುವುದಿಲ್ಲ ಎಂಬುದು ನನಗೆ ಗೊತ್ತಿದೆ. ಏನದು ಕೇಳು' ಎಂದು ಮುಗುಳುನಕ್ಕರು.

'ನಮ್ಮ ಮಗಳು ಆಯಿಷಾಳಿಗೆ ಈಗಾಗಲೇ ಮುತ್‌ಇಮ್ ಪುತ್ರ ಜುಬೈರ್ ಜೊತೆಗೆ ಮದುವೆ ನಿಶ್ಚಯವಾಗಿದೆಯೆಂಬುದು ಪ್ರವಾದಿಯವರಿಗೆ ತಿಳಿದೇ ಇಲ್ಲವೆ? ಅವಳಿಗೆ ಮತ್ತೊಬ್ಬ ಗಂಡಿನೊಂದಿಗೆ ಈಗಾಗಲೇ ಮದುವೆ ನಿಶ್ಚಯವಾಗಿದ್ದಿರುವಾಗ, ಪ್ರವಾದಿ ಯವರಿಗೆ ಮದುವೆ ಮಾಡಿ ಕೊಡುವುದಾದರೂ ಹೇಗೆ? ಮುತಿಮ್ ಕುಟುಂಬದವರು ಇದಕ್ಕೆ ಸಮ್ಮತಿಸುವರೆ? ಆಯಿಷಾಳನ್ನು ಜುಬಾಯಿರ್ ಜೊತೆಗೆ ಮಾಡಿಕೊಂಡಿರುವ ಒಪ್ಪಂದ ರದ್ದಾಗುವವರೆಗೆ ಇದು ಸಾಧ್ಯವಾಗುವುದಾದರೂ ಹೇಗೆ?'

ಏನನ್ನೂ ಹೇಳದೆ ಹೊಸ್ತಿಲು ದಾಟಿದವರು, ಅಂಗಳದಲ್ಲಿ ನಿಂತು, ಕತ್ತು ಎತ್ತಿ ಇಡೀ ಲೋಕಕ್ಕೇ ಘೋಷಿಸುವಂತೆ ಹೇಳಿದ್ದರು.





'ನನ್ನ ಗೆಳೆಯನಿಗೆ ಎಲ್ಲವೂ ತಿಳಿದಿತ್ತು. ಪ್ರವಾದಿಯವರಿಗೆ ತಿಳಿಸದೆ ಏನನ್ನೂ ಮಾಡುವವನಲ್ಲ ನಾನು. ಆದರೆ, ಈ ಹಿಂದೆ ಆಗಿಹೋದ ಎಲ್ಲ ತಪ್ಪುಗಳನ್ನೂ ಮಹತ್ತರವಾದ ಕಾರಣಗಳಿಗಾಗಿ ಒಂದೊಂದಾಗಿ ಸರಿಪಡಿಸಿಕೊಂಡು ಮುನ್ನುಗ್ಗಲು ಅಲ್ಲಾಹುವಿನಿಂದ ಆದೇಶವಾಗಿದೆ ಮತ್ತು ಎಲ್ಲವೂ ಅವನ ಆದೇಶದಂತೆಯೇ ನಡೆಯಲಿದೆ. ನೀನು ಈ ಚಿಂತೆ ಬಿಡು.'

* * *

*ಸಣ್ಣದೊಂದು ಅನುಮಾನ ಕಾಡಲಾರಂಭಿಸಿತ್ತು.*

*ನನ್ನ ಓದಿನಂತೆ, ಪ್ರವಾದಿಯವರು ಸೌದಾರನ್ನು ಮದುವೆಯಾದದ್ದು ಮೊದಲ ಪತ್ನಿ ಖದೀಜಾರವರ ಮರಣದ ಬಳಿಕ. ಆದರೆ, ಆಯಿಷಾರನ್ನು ಮದುವೆಯಾಗುವ ದಿನಗಳಲ್ಲಿ ಸೌದಾರವರು ಬದುಕಿದ್ದರು. ಹಾಗಾದರೆ, ಆಯಿಷಾರನ್ನು ಮದುವೆಯಾಗುವುದಾಗಿ ಪ್ರವಾದಿಯವರು ಪ್ರಸ್ತಾಪ ಕಳುಹಿಸಿದ್ದು ಸೌದಾರಿಗೆ ತಿಳಿದೇ ಇರಲಿಲ್ಲವೆ?*

*ನಾನು ಯೋಚಿಸುತ್ತಿರುವುದೆಲ್ಲ ನನ್ನನ್ನು ಕರೆದುಕೊಂಡು ಹೋಗುತ್ತಿರುವ ಅರ್ಷದ್'ನಿಗೆ ತಿಳಿದುಬಿಡುತ್ತದೆ ಎಂಬುದು ನನಗೆ ಗೊತ್ತಿತ್ತು. ನನ್ನ ಈ ಪ್ರಶ್ನೆಯೂ ಅವನಿಗೆ ಗೊತ್ತಾಗಿರುತ್ತದೆ. ನನ್ನ ಪ್ರಶ್ನೆಯಿಂದ ಅವನಿಗೆ ಸಿಟ್ಟು ಬಂದರೆ?*

*ಆದರೆ, ಆತ ಸಿಟ್ಟಿಗೆದ್ದಂತೇನೂ ಅನ್ನಿಸಲಿಲ್ಲ. ಹಾಗಾಗಿದ್ದರೆ, ತಕ್ಷಣ ಏನಾದರೊಂದು ಮಾತು ಕೇಳಿಸಬೇಕಾಗಿತ್ತು. ಆದರೆ, ಬಹಳ ಹೊತ್ತಾದರೂ ಅವನ ಧ್ವನಿ ಕೇಳಿಸದಿದ್ದಾಗ ಎದೆಯೊಳಗೆ ನಡುಕ ಶುರುವಾಗಿತ್ತು.*

*'ನೀನು ಭಯಪಡುವ ಅಗತ್ಯವಿಲ್ಲ. ಹೆಂಡತಿಯೊಬ್ಬಳು ಬದುಕಿರುವಾಗ, ಮತ್ತೊಬ್ಬಳನ್ನು ಮದುವೆಯಾಗಬಯಸುವ ಗಂಡ, ತನ್ನ ಬಯಕೆಯನ್ನು ಹೆಂಡತಿಯೊಂದಿಗೆ ಮುಂದಾಗಿ ಚರ್ಚಿಸಬೇಕೆಂಬ ಕಡ್ಡಾಯ ನಿಬಂಧನೆಯೇನೂ ಇಲ್ಲ. ಆದರೂ, ನಿನ್ನ ನಿಲುವು ಸರಿಯಾಗಿಯೇ ಇದೆ. ಅದನ್ನು ಸೌದಾರವರಿಂದಲೇ ಕೇಳಿ ತಿಳಿದುಕೊಳ್ಳೋಣ' ಎಂದ ಅರ್ಷದ್.*

*ನನ್ನ ಎದೆ ಬಡಿತವೇ ನಿಂತಂತಾಗಿತ್ತು!*

*ಸೌದಾರವರನ್ನು ಕಾಣಬೇಕಾದರೆ, ನೇರವಾಗಿ ಪ್ರವಾದಿಯವರ ಮನೆಗೇ ಹೋಗಬೇಕು. ನಾವಲ್ಲಿಗೆ ಹೋದಾಗ, ಮನೆಯೊಳಗೆ ಪ್ರವಾದಿಯವರೂ*

*ಇದ್ದರೆ, ನನ್ನಉದ್ದೇಶ ಅವರಿಗೂ ತಿಳಿದುಬಿಡುತ್ತದೆ. ಬೇರೆಯವರ ವೈಯುಕ್ತಿಕ ಬದುಕಿನ ಬಗ್ಗೆ ಅನಗತ್ಯವಾಗಿ ನಾನು ಮೂಗು ತೂರಿಸುತ್ತಿದ್ದೇನೆಂದುಕೊಂಡು, ನನ್ನ ವಿರುದ್ಧ ಅವರು ಸಿಟ್ಟಿಗೆದ್ದರೆ?*

*‘ಅವರೇಕೆ ಸಿಟ್ಟಿಗೇಳುತ್ತಾರೆ? ನಿನ್ನ ನಿಜವಾದ ಉದ್ದೇಶ ಏನೆಂಬುದು ಅವರಿಗೂ ಗೊತ್ತಿರುತ್ತದೆ. ಅವರು ಸಂತೋಷದಿಂದಲೇ ನಿನ್ನನ್ನು ಹರಸುತ್ತಾರೆ.’*

*‘ಸರಿ, ನಾನು ತಯಾರು’ ಎಂದೆ.*

❐



## ಸ್ವಗತ – ನಾಲ್ಕು

## ಸೌದಾ ಬಿಂತಿ ಝಮ್‌ಆ

–೧–

‘ನಾನು ಆಯಿಷಾಳನ್ನು ಮದುವೆಯಾಗಲಿರುವುದು ನಿನಗೆ ತಿಳಿದಿರಬೇಕಲ್ಲವೆ?’

ತಿಂಗಳೊಂದರ ಬಳಿಕದ ತಿಂಗಳ ಬೆಳಕಿನ ಒಂದು ರಾತ್ರಿಯಲ್ಲಿ ಬೇರೇನೋ ಮಾತಿನ ನಡುವೆ, ಅದೇನನ್ನೋ ನೆನಪಿಸಿಕೊಂಡವರಂತೆ ಪ್ರವಾದಿಯವರು ಪ್ರಶ್ನಿಸಿದ್ದರು.

ನನಗೆ ತಿಳಿದಿತ್ತು; ಮಾತ್ರವಲ್ಲ, ನನಗೆ ತಿಳಿದಿತ್ತು ಎಂಬುದು ಅವರಿಗೂ ತಿಳಿದಿತ್ತು.

ಪ್ರವಾದಿಯವರ ಬಾಲ್ಯದ ಗೆಳೆಯ ಅಬೂಬಕರರ ಕೊನೆ ಮಗಳು ಆಯಿಷಾಳನ್ನು ಪ್ರವಾದಿಯವರು ಮದುವೆಯಾಗಲಿದ್ದಾರೆ ಎಂಬುದನ್ನು ಸ್ವತಃ ಖೌಲಾಳೇ ನನಗೆ ತಿಳಿಸಿದ್ದಳು. ನನ್ನ ಮದುವೆ ತಯಾರಿ ನಡೆಯುತ್ತಿದ್ದ ದಿನಗಳಲ್ಲಿ, ನನಗೆ ತಿಳಿದಿರಲಾರದು ಎಂದು ಭಾವಿಸಿದ್ದ ಕೆಲವರು ನನಗೆ ಕೇಳಿಸುವಂತೆಯೇ ಗುಸುಗುಸು ಮಾಡುತ್ತಿದ್ದದ್ದೂ ನನಗೆ ಗೊತ್ತಿತ್ತು. ಬೇರೊಬ್ಬ ಹುಡುಗನೊಂದಿಗೆ ಆಯಿಷಾಳಿಗೆ ಈಗಾಗಲೇ ಮದುವೆ ಒಪ್ಪಂದವಾಗಿದ್ದು, ಆ ಒಪ್ಪಂದವನ್ನು ಮುರಿದುಕೊಂಡ ಬಳಿಕವೇ ಅವಳಿಗೆ ಪ್ರವಾದಿಯವರೊಂದಿಗೆ ಹೊಸದಾಗಿ ಮದುವೆ ಒಪ್ಪಂದವಾಗಲಿದೆ ಎಂಬುದೂ ತಿಳಿದಿತ್ತು.

ಸುತ್ತಮುತ್ತ ಕಾಣಿಸುತ್ತಿದ್ದ ಗಂಡುಗಳೆಲ್ಲ ಎರಡು, ಮೂರು, ನಾಲ್ಕು, ಐದು, ಆರು, ಏಳು ಎಂಟು ಮದುವೆಯಾಗುತ್ತಲೇ ಇದ್ದವರು. ಹಳೆಯ ಹೆಂಡತಿ ಸಹವಾಸ ಸಾಕೆನ್ನಿಸಿದವರು ಅವಳನ್ನು ತ್ಯಜಿಸಿ ಹೊಸಬಳನ್ನು ಕರೆದು ತರುತ್ತಿದ್ದರು, ಕೆಲವು ಹೆಂಡತಿಯರನ್ನು ಕೊನೆಯವರೆಗೂ ಮನೆಯಲ್ಲೇ ಉಳಿಸಿಕೊಂಡಿರುವುದೂ ಇತ್ತು.

ಇಷ್ಟವಾದಾಗ ತನಗಿಷ್ಟಬಂದಷ್ಟು ಸಂಖ್ಯೆಯಲ್ಲಿ ಹೆಣ್ಣುಗಳನ್ನು ಮದುವೆಯಾಗುವುದು ಗಂಡಿನ ಹಕ್ಕು ಮತ್ತು ಸಂಪ್ರದಾಯವೇ ಅಗಿತ್ತು. ಸಂಪ್ರದಾಯದ ವಿಧಿವಿಧಾನಗಳನ್ನು ನಿರ್ಧರಿಸುವ ಹಕ್ಕು ಹೆಂಗಸರಾದ ನಮಗಿರಲಿಲ್ಲ. ನನ್ನ ಓರಗೆಯ ಗೆಳತಿಯರನ್ನು ಗುಟ್ಟಾಗಿ ಕೇಳಿದರೆ, ತನ್ನ ಗಂಡನ ಹಾಸಿಗೆಯನ್ನು ಮತ್ತೊಬ್ಬಳೊಂದಿಗೆ ಹಂಚಿಕೊಳ್ಳಲು ಯಾವೊಬ್ಬಳೂ ಬಯಸುತ್ತಿರಲಿಲ್ಲ. ಆದರೂ, ಮಾತಿನ ನಡುವೆಯೆಲ್ಲ, 'ಹೆಂಗಸರಿಗೆ ಅಸೂಯೆ ಹೆಚ್ಚು' ಎಂದು ಗಂಡಸರು ಹೇಳುತ್ತಿರುವಾಗ ನಗು ಬರುತ್ತಿತ್ತು.

ಪ್ರವಾದಿಯವರ ಜೊತೆಗಿನ ಮೊದಲ ರಾತ್ರಿಯಲ್ಲೇ ನನ್ನ ಅನುಮಾನ ನಿಜವಾಗಿತ್ತು. ನನ್ನಿಂದ ಮಾತ್ರವಲ್ಲ, ಜಗತ್ತಿನ ಯಾವ ಹೆಣ್ಣಿನಿಂದಲೂ ಪ್ರವಾದಿಯ ಹೃದಯದಲ್ಲಿರುವ ಮೊದಲ ಪತ್ನಿ ಖದೀಜಾರ ಜಾಗವನ್ನು ಕಿತ್ತುಕೊಳ್ಳುವುದಿರಲಿ, ಅದರ ಸನಿಹಕ್ಕೆ ತಲುಪುವುದೂ ಸಾಧ್ಯವಿಲ್ಲ ಎಂಬುದು. ಆದ್ದರಿಂದಲೇ, 'ಪ್ರವಾದಿಪತ್ನಿ' ಎಂಬ ಗೌರವವನ್ನು ನನ್ನಿಂದ ಕಿತ್ತುಕೊಳ್ಳಬಯಸದ ಯಾವಳೇ ಹೆಣ್ಣನ್ನೂ ಸವತಿಯನ್ನಾಗಿ ಸ್ವಾಗತಿಸಲು ನಾನು ಮನಃಪೂರ್ವಕಾಗಿ ಸಿದ್ಧಳು ಎಂಬುದಾಗಿ ಅಂದೇ ನಿರ್ಧರಿಸಿಕೊಂಡಿದ್ದೆ. ನನ್ನ ಮಿತಿಯ ಅರಿವಿದ್ದುದರಿಂದಲೇ ಈ ಭೂಮಿಯ ಮೇಲೆ ನನ್ನಷ್ಟು ಅದೃಷ್ಟವಂತೆ ಬೇರಾರೂ ಇಲ್ಲ ಎಂಬುದಾಗಿ ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ.

'ಪ್ರವಾದಿಪತ್ನಿ'ಯಾಗಿ ಅವರ ಮನೆ ಸೇರಿದ್ದಾಗ, ಪ್ರವಾದಿಯನ್ನೂ ಸೇರಿಸಿಕೊಂಡರೆ ಅಲ್ಲಿದ್ದವರು ಒಟ್ಟು ಆರು ಮಂದಿ. ಪ್ರವಾದಿಯವರ ಎರಡನೆಯ ಮಗಳಾದ ರುಖಯ್ಯಾ, ಮೂರನೆಯವಳಾದ ಉಮ್ಮು ಕುಲ್ಸೂಮ್ ಮತ್ತು ನಾಲ್ಕನೆಯವಳಾದ ಫಾತಿಮಾ. ಮೊದಲ ಮಗಳು ಝೈನಬ್, ಅಬುಲ್ ಆಸ್ ಎಂಬ ಸಿರಿವಂತ ಸುಂದರನನ್ನು ಮದುವೆಯಾಗಿ ಮಕ್ಕಾದಲ್ಲೇ ಸುಖವಾಗಿದ್ದಳು. ಆನಂತರದ ಇಬ್ಬರಿಗೆ ಮದುವೆಯಾಗಿದ್ದರೂ, ಅಲ್ಲಾಹುವಿನ ಸಂದೇಶಗಳಲ್ಲಿ ವಿಶ್ವಾಸವಿರಿಸಿದರೆಂಬ ಆರೋಪ ಹೊತ್ತು, ಗಂಡಂದಿರನ್ನು ಸೇರಲಾಗದೆ ತವರಲ್ಲೇ ಉಳಿದುಬಿಟ್ಟಿದ್ದರು.

ಮನೆಯಲ್ಲಿ ಇನ್ನೂ ಇಬ್ಬರಿದ್ದರು; ಇದ್ದೂ ಇಲ್ಲದಂತೆ. ಪ್ರವಾದಿಯವರ ದೊಡ್ಡಪ್ಪ ಅಬೂತಾಲಿಬರ ಪುತ್ರ ಅಲೀ ಮತ್ತು ದತ್ತುಪುತ್ರ ಝೈದ್. ಇವರಿಬ್ಬರೂ ಮುಂಜಾನೆ ಪ್ರವಾದಿಯವರೊಂದಿಗೆ ಹೊರಟರೆ ಮರಳುವುದೂ ಅವರ ಜೊತೆಯಲ್ಲೇ.

'ನನಗೆ ತಿಳಿದಿತ್ತು' ಎಂದೆ.

'ಹಾಗೆ ಮಾಡದಿರಿ ಎಂದು ಹೇಳುವುದಿಲ್ಲವೆ?'

'ಖಂಡಿತಾ ಇಲ್ಲ.'

'ಅಸೂಯೆಯಾಗುವುದಿಲ್ಲವೆ?'





'ಖಂಡಿತವಾಗಿಯೂ ಇಲ್ಲ. ಪ್ರವಾದಿಪತ್ನಿಯೆಂಬ ಗೌರವವನ್ನು ನನಗೆ ಕರುಣಿಸಿದ ತಮ್ಮ ಬಗ್ಗೆ ನಾನೇಕೆ ಅಸೂಯೆಪಡಬೇಕು?' ನನ್ನ ಅನುಮತಿಯಿಲ್ಲದೆ ಬಾಯಿಯಿಂದ ಮಾತು ಹೊರಬಿದ್ದಿತ್ತು.

ಅರೆಕ್ಷಣ ಅವಾಕ್ಕಾಗಿ ನನ್ನ ಮುಖ ದಿಟ್ಟಿಸಿದರು ಪ್ರವಾದಿಯವರು, 'ಅಲ್ಲಾಹುವಿನ ಅಯ್ಕೆಗೆ ಸರಿಸಮನಾದುದು ಯಾವುದೂ ಇಲ್ಲ ಎಂಬುದಕ್ಕೆ ನೀನು ಬಲುದೊಡ್ಡ ಉದಾಹರಣೆ' ಎಂದು ನಕ್ಕರು. ಆ ರಾತ್ರಿ ನಾನು ನಿಶ್ಚಿಂತೆಯಿಂದ ನಿದ್ರಿಸಿದ್ದೆ.

ಆದರೆ, ಆಯಿಷಾಳನ್ನು ಮನೆತುಂಬಿಸಿಕೊಳ್ಳುವ ಮುನ್ನವೇ ಪ್ರವಾದಿಯವರು ಶತ್ರುಗಳ ಕೊಲೆಸಂಚಿನಿಂದ ತಪ್ಪಿಸಿಕೊಂಡು ಮದೀನಾಕ್ಕೆ ವಲಸೆ ಹೋಗಬೇಕಾಯಿತು. ಇದೀಗ, ಸುಮಾರು ಎರಡು ವರ್ಷಗಳ ಬಳಿಕ ನಮ್ಮನ್ನೆಲ್ಲ ಮದೀನಾಕ್ಕೆ ಕರೆಸಿಕೊಳ್ಳುತ್ತಿದ್ದಾರೆ. ನಮ್ಮ ತಂಡದಲ್ಲಿ ನನಗೆ ಸವತಿಯಾಗಿ ಬರಲಿರುವ ಆಯಿಷಾಳೂ ಇದ್ದಳು.

ಸೂರ್ಯ ಸರಿಯಾಗಿ ಕಣ್ಣು ಬಿಡುವ ಮುನ್ನವೇ ಅಮೀರ್ ಬಿನ್ ಫುಹೈರಾನ ನೇತೃತ್ವದಲ್ಲಿ ಮಕ್ಕಾ ತೊರೆದು ಮದೀನಾಕ್ಕೆ ಪ್ರಯಾಣ ಹೊರಟಿದ್ದವು.

ಆರು ಒಂಟೆಗಳ ಬೆನ್ನ ಇಕ್ಕೆಲಗಳಲ್ಲೂ ತೂಗುತ್ತಿದ್ದ ದೊಡ್ಡ ದೊಡ್ಡ ಚೀಲಗಳಲ್ಲಿ ತುಂಬಿದ ನೀರು, ಧಾನ್ಯಗಳು, ಬಟ್ಟೆಬರೆಗಳು, ಸಾಮಾನು ಸರಂಜಾಮುಗಳ ಜೊತೆಗೆ ಎಂದೂ ನೋಡಿರದಿದ್ದ ಊರಿಗೆ ಹೊರಟಿದ್ದ ನಮ್ಮ ತಂಡದಲ್ಲಿ ಒಟ್ಟು ಇಪ್ಪತ್ತೆರಡು ಮಂದಿ. ಮಕ್ಕಾದಿಂದ ಬಹಿಷ್ಕೃತರಾಗಿ ವಲಸೆ ಹೊರಟಿರುವ ಸಮಾನ ದುಃಖಿಗಳು. ಎಲ್ಲರಿಗಿಂತ ಮುಂದೆ ನಡೆಯುತ್ತಿದ್ದ ಅಮೀರ್, ತನ್ನ ಬೆನ್ನ ಹಿಂದೆ ಸಾಲಾಗಿ ಬರುತ್ತಿರುವ ಆರೂ ಒಂಟೆಗಳನ್ನು ಒಂದೊಂದಾಗಿ ಪರೀಕ್ಷಿಸುತ್ತಿರುವವನಂತೆ ಆಗಾಗ ಹಿಂದಕ್ಕೆ ತಿರುಗಿ ನೋಡುತ್ತಿದ್ದ.

ಎಲ್ಲರಿಗಿಂತ ಮುಂದಿದ್ದ ಒಂಟೆಯ ಮೇಲೆ ಪ್ರವಾದಿಯ ಎರಡನೆಯ ಮಗಳು ರುಖಯ್ಯಾ ಜೊತೆಗೆ ನಾನು ಕುಳಿತಿದ್ದೆ. ಎರಡನೆಯದರಲ್ಲಿ ಆಯಿಷಾಳ ಅಬ್ಬನ ಎರಡನೆ ಪತ್ನಿ ಉಮ್ಮು ರುಮಾನರೊಂದಿಗೆ, ಮೊದಲ ಪತ್ನಿ ಖುತೈಲಾರ ಮಗಳು ಅಸ್ಮಾ ಸವಾರಿ ಮಾಡುತ್ತಿದ್ದಳು. ಮೂರನೆಯದರಲ್ಲಿ ಅವರ ಮೂರನೆ ಪತ್ನಿ ಉಮೈಸ್ ಪುತ್ರಿ ಅಸ್ಮಾ ಮತ್ತು ಪುತ್ರ ಮುಹಮ್ಮದ್. ನಾಲ್ಕನೆಯದರಲ್ಲಿ ಅವರ ನಾಲ್ಕನೇ ಪತ್ನಿ ಹಬೀಬಾ ಮತ್ತು ಪುತ್ರಿ ಕುಲ್ಸೂಮ್. ಐದನೆಯದರಲ್ಲಿ ಅಸ್ಮಾಳ ಪುತ್ರ ಪುಟ್ಟ ನಾಲಾಹ್'ನನ್ನು ನಡುವೆ ಇರುಕಿಕೊಂಡು ಕುಳಿತಿದ್ದ ಪ್ರವಾದಿಯ ಕೊನೆಯ ಪ್ರೀತಿಯ ಪುತ್ರಿ ಫಾತಿಮಾ ಮತ್ತು ಉಮ್ಮು ರುಮಾನಾರ ದಾಸಿ ಅಕಿಯಾ. ಎಲ್ಲಕ್ಕಿಂತ ಕೊನೆಯ ಆರನೆಯ ಒಂಟೆಯ ಮೇಲೆ ನನ್ನ ಸವತಿಯಾಗಿ ಬರಲಿದ್ದ ಆಯಿಷಾ ಮತ್ತು ಅವಳ ದಾಸಿ ಅಫೀರಾ. ಕೊನೆಯ ಒಂಟೆಯ

ಬೆನ್ನಿಗಂಟಿಕೊಂಡಂತೆ ತಲೆ ತಗ್ಗಿಸಿ ಕಾಲೆಯುತ್ತಿದ್ದ ಅಫಿರಾಳ ಸೋದರ ಸಫ್ವಾನನ ಕೈ ಹಿಡಿದುಕೊಂಡು ಅಸ್ಮಾಳ ಸೋದರ ಅಬ್ದುಲ್ಲಾ ಉತ್ಸಾಹದಿಂದ ಹೆಜ್ಜೆ ಬದಲಿಸುತ್ತಿದ್ದ.

ನಮ್ಮನ್ನೆಲ್ಲ ಮದೀನಾಕ್ಕೆ ಕರೆದುಕೊಂಡು ಬರಲು ಪ್ರವಾದಿಯವರು ಮಕ್ಕಾದಿಂದ ಕಳುಹಿಸಿದ್ದ ಝೈದನ ಜೊತೆಗಾರ ಅಬೂರಾಫಿ ಮತ್ತು ಅಕಿಯಾಳ ಪತಿ ಮುಅತ್ತಲ್, ತಲಾ ಆರು ಆಡುಗಳ ಕತ್ತಿಗೆ ಹಗ್ಗ ಕಟ್ಟಿ ಎಳೆದುಕೊಂಡು ಎಲ್ಲರಿಗಿಂತ ಹಿಂದಿನಿಂದ ಬರುತ್ತಿದ್ದರೆ, ಅವರ ಬೆನ್ನಹಿಂದೆ ಒರೆಯಿಂದ ಹಿರಿದ ಖಡ್ಗಗಳನ್ನು ಬಲಗೈಗಳಲ್ಲಿ ಹಿಡಿದುಕೊಂಡು ಅತ್ತಿತ್ತ ಕಣ್ಣಾಡಿಸುತ್ತಾ, ಝೈದ್ ಮತ್ತು ಜುಬೈರ್ ಬೆಂಗಾವಲಿಗರಂತೆ ಬರುತ್ತಿದ್ದರು.

ಪ್ರಯಾಣ ಹೊರಡುವ ದಿನದವರೆಗೂ ಆಯಿಷಾಳನ್ನು ನಾನು ಹತ್ತಿರದಿಂದ ಕಂಡವಳಲ್ಲ.

ಸವತಿಯಾಗಿ ಬರಲಿರುವವಳು ಹೇಗಿರುತ್ತಾಳೆಂಬ ಹೆಣ್ಣೊಬ್ಬಳ ಸಹಜ ಕುತೂಹಲ ನನಗೆ ಇದ್ದೇ ಇತ್ತು. ಆಯಿಷಾಳಿನ್ನೂ ಪುಟ್ಟ ಹುಡುಗಿ ಎಂಬುದು ಗೊತ್ತಿತ್ತು. ಅವಳ ಉಮ್ಮ, ಉಮ್ಮು ರುಮಾನರನ್ನು ಹಿಂದೆಲ್ಲೋ ಕಂಡು ಮಾತನಾಡಿಸಿದ್ದಿದೆ. ನಾಲ್ಕೈದು ವರ್ಷಗಳ ಹಿಂದೊಮ್ಮೆ ಅವರ ಪುಟಾಣಿ ಮಕ್ಕಳನ್ನು ಕಂಡ ನೆನಪೂ ಇತ್ತು. ಆದರೆ, ಆ ಪುಟ್ಟ ಮಕ್ಕಳಲ್ಲಿ ಪ್ರವಾದಿಯ ಮನಗೆದ್ದ ಚೆಲುವೆ ಯಾರೆಂಬುದನ್ನು ಊಹಿಸಲು ಸಾಧ್ಯವಾಗುತ್ತಿರಲಿಲ್ಲ. ಅವರ ಮನೆ ಬಲುದೂರದಲ್ಲೇನೂ ಇರಲಿಲ್ಲ. ಒಂದು ಕೂಗಳತೆಯ ದೂರ ಅದು. ಉಮ್ಮು ರುಮಾನರ ಮನೆಗೆ ಹೋದರೆ, ಆಯಿಷಾಳನ್ನು ಮಾತನಾಡಿಸಿಕೊಂಡೇ ಬರಬಹುದಾಗಿತ್ತು. 'ಫಾತಿಮಾಳನ್ನು ಕರೆದುಕೊಂಡು ಆ ಮನೆಗೊಮ್ಮೆ ಹೋಗಿ ಬರಲೇ' ಎಂದು ವಿನಂತಿಸಿದರೆ, ಪ್ರವಾದಿಯವರೂ ಬೇಡವೆನ್ನುವವರಲ್ಲ. ಆದರೆ ಸಂಕೋಚ. ಅಲ್ಲಿ ಹೋಗಿ ಮಾತನಾಡುವುದಾದರೂ ಏನನ್ನು? 'ಖದೀಜಾರ ಜಾಗವನ್ನು ನನ್ನಂತೆ ನಿನ್ನಿಂದಲೂ ಪಡೆಯಲು ಸಾಧ್ಯವಿಲ್ಲ' ಎಂದು ಆ ಹುಡುಗಿಯ ಬಳಿ ಹೇಳಿದರೆ, ಬೊಂಬೆಗಳೊಂದಿಗೆ ಆಡುತ್ತಿರುವ ಅವಳಿಗೆ ಎಷ್ಟು ಅರ್ಥವಾದೀತು? ಅವಳನ್ನು ಸರಿಯಾಗಿ ನೋಡಲು ಸಾಧ್ಯವಾಗಿದ್ದದ್ದೇ ಪ್ರಯಾಣದ ಮೊದಲ ದಿನ.

'ವರ್ತಕರು ಬಳಸುತ್ತಿರುವ ಸಿರಿಯಾ ದಾರಿಯಲ್ಲಿ ಹೋದರೆ ಮದೀನಾ ತಲುಪಲು ಮೂರರಿಂದ ನಾಲ್ಕು ವಾರಗಳು ಬೇಕು. ಆದರೆ, ಪ್ರವಾದಿಯವರು ನಡೆದ ಕಲ್ಲು ಮುಳ್ಳಿನ ಹಾದಿಯಲ್ಲಿ ಹೆಜ್ಜೆಹಾಕಿದರೆ ಬೇಗ ಗುರಿಮುಟ್ಟಬಹುದು. ಯಾವ ದಾರಿಯಲ್ಲಿ ಹೋಗೋಣ?' ಎಂದು ದಾರಿ ತೋರಿಸಲಿರುವ ಅಮೀರ್ ಪ್ರಶ್ನಿಸಿದ್ದ.

'ನಾವೇನು ವ್ಯಾಪಾರ ಮಾಡಲು ಹೋಗುತ್ತಿದ್ದೇವೆಯೆ?' ತಟ್ಟನೆ ಪ್ರತಿಕ್ರಿಯಿಸಿದ್ದವಳು ಒಬ್ಬಳು ಎಳೆಯ ಹುಡುಗಿ!





ಅಮೀರನ ಒಗಟನ್ನು ಎಲ್ಲರಿಗಿಂತಲೂ ಮೊದಲು ಅವಳೇ ಗ್ರಹಿಸಿದಂತಿತ್ತು. ಅಚ್ಚರಿಯಿಂದ ಅವಳತ್ತ ನೋಡಿದ್ದೆ. ಹಳೆಯ ವಸ್ತ್ರಗಳನ್ನು ಜೋಡಿಸಿ ತಯಾರಿಸಿದ್ದ ಕಪ್ಪು ಬಣ್ಣದ ಬೊಂಬೆಯೊಂದನ್ನು ಮುತ್ತಿಡುತ್ತಿದ್ದ ಆ ಹುಡುಗಿಗೆ ಬಹಳವೆಂದರೆ ಒಂಬತ್ತು ದಾಟಿದ್ದಿರಬಹುದು.

ಆಕೆಯ ಕಡೆನೋಟ ನನ್ನನ್ನೇ ಅಳೆಯುತ್ತಿದ್ದರೂ, ಬೇರೆತ್ತಲೋ ನೋಡುತ್ತಿರುವಳಂತೆ ನಟಿಸುತ್ತಿದ್ದಳು. ಅವಳು ಹಾಗಿದ್ದಾಳೆ, ಅವಳು ಹೀಗಿದ್ದಾಳೆ ಎಂಬೆಲ್ಲ ಮಾತುಗಳಲ್ಲಿ, ಸ್ವಲ್ಪ ಉತ್ಪ್ರೇಕ್ಷೆಗಳೂ ಇರಬಹುದೆಂಬುದನ್ನು ಒಪ್ಪಿಕೊಂಡೂ, ಆಕೆ ಸುಂದರಿಯಾಗಿಯೇ ಇರಬಹುದೆಂದೇ ನಾನು ತರ್ಕಿಸಿದ್ದೆ.

ಆದರೆ, ಒಂಟೆಯ ಮೇಲೆ ಅಫೀರಾಳ ಎದೆಮೇಲೆ ಒರಗಿದಂತೆಯೇ ಕುಳಿತಿದ್ದ ಆ ಹುಡುಗಿಯನ್ನು ಮೊದಲ ಬಾರಿ ಕಂಡಾಗ, ಅವಳ ರೂಪದ ಬಗ್ಗೆ ನಾನು ಕಲ್ಪಿಸಿಕೊಂಡಿದ್ದ ಚಿತ್ರಗಳೆಲ್ಲ ಸುಳಿಗಾಳಿಗೆ ಸಿಕ್ಕಿಬಿದ್ದ ಮರಳಿನ ಕಣಗಳಂತೆ ಚೆದುರಿ ಛಿದ್ರವಾಗಿದ್ದವು. ಎಷ್ಟು ನೋಡಿದರೂ ಮತ್ತಷ್ಟು ನೋಡಬೇಕೆಂಬ ರೂಪಸಿ ಅವಳು.

ಹೆಣ್ಣಾಗಿ ಹುಟ್ಟಿರುವ ನನ್ನಲ್ಲೇ ಅಸೂಯೆ ಚಿಗುರುತ್ತಿದ್ದರೆ ಗಂಡಸರ ಪಾಡೇನು? ನನ್ನಂತವರಿಂದ ಕಸಿದುಕೊಂಡ ಸೌಂದರ್ಯವನ್ನೆಲ್ಲ ಅಲ್ಲಾಹು ಅವಳೊಬ್ಬಳಿಗೇ ಕರುಣಿಸಿದ್ದಂತೆ ಭಾಸವಾಗಿತ್ತು.

ನೆತ್ತಿಯ ಮೇಲೆ ಸೂರ್ಯ ಸುಡುತ್ತಿರುವಾಗ ಮರುಭೂಮಿಯ ಮರಳ ದಿಬ್ಬಗಳನ್ನು ಹತ್ತಿ ಇಳಿಯುವುದು ಹೋಗಲಿ, ಹಾಲು ಮುಗಿದಿದೆಯೆಂದು ಪಕ್ಕದ ನಾಲ್ಕನೆಯ ಮನೆಗೆ ಹೊರಟರೆ, ಕೈಯಲ್ಲಿ ಹಿಡಿದುಕೊಂಡ ಹಾಲಿನ ಪಾತ್ರೆ ಕೈ ಸುಡುತ್ತದೆ. ಅಂತಹಾ ಸುಡುಬಿಸಿಲ ಬೇಗೆಯ ದಿನಗಳು ಅವು. ಆದರೆ, ಈ ಪ್ರಯಾಣದಲ್ಲಿ ಮರಳಲ್ಲಿ ಹುಗಿದ ಕಾಲುಗಳನ್ನು ಎತ್ತಿಕೊಂಡು ನಡೆಯುವುದು ನಾವಲ್ಲ; ಹುಟ್ಟಿರುವುದೇ ಪರೋಪಕಾರಕ್ಕೆ ಎಂದು ನಂಬಿರುವ ಒಂಟೆಗಳು.

ತಂಡದಲ್ಲಿದ್ದ ಬಹಳಷ್ಟು ಮಂದಿಗೆ ಒಂಟೆಸವಾರಿಯೂ ಹೊಸದು. ಒಂದಿಬ್ಬರಿಗೆ, ಅವರ ಮದುವೆ ಮೆರವಣಿಗೆಗಳಲ್ಲಿ ಒಂಟೆಯ ಮೇಲೆ ಹೇರಿದ ರೇಶ್ಮೆ ವಸ್ತ್ರಗಳ ಮೇನೆಯಲ್ಲಿ ಅವಿತುಕೊಂಡು ಗಂಡನ ಮನೆಗೆ ಹೋಗಿದ್ದ ಅನುಭವ ಇದ್ದಿರಬಹುದೇನೊ. ಆದರೆ ಮದುವೆ ಮೆರವಣಿಗೆಗಳು ಉರಿಬಿಸಿಲಲ್ಲಿ ನಡೆಯುವ ಕ್ರಮವಿಲ್ಲ. ಇದ್ದರೂ ಕ್ರಮಿಸುವ ದೂರವೂ ಹೆಚ್ಚಿರುವುದಿಲ್ಲ.

ಇಲ್ಲಿ, ಬಿಸಿಲ ತಿವಿತದಿಂದ ರಕ್ಷಿಸಲು ನಮ್ಮ ತಲೆಗಳ ಮೇಲಿದ್ದದ್ದು ಅಚ್ಚ ಬಿಳಿಯ ಚಾದರಗಳು ಮಾತ್ರ.

## –೨–

ಮುಂದಿನ ಕೆಲವೇ ದಿನಗಳಲ್ಲಿ ಎಳೆ ವಯಸ್ಸಿನ ಚೆಂದುಳ್ಳಿ ಚೆಲುವೆಯೊಬ್ಬಳು ಸವತಿಯಾಗಿ ಬರಲಿದ್ದಾಳೆ ಎಂದು ತಿಳಿದಿದ್ದರೂ, ಅತ್ಯಂತ ಸಂತೋಷದಿಂದ, ಕ್ಷಣ ಮಾತ್ರದಲ್ಲಿ ಮದುವೆಗೆ ಸಮ್ಮತಿಸಿರುವ ಜಗತ್ತಿನ ಮೊತ್ತ ಮೊದಲ ಹಾಗೂ ಕಟ್ಟ ಕಡೆಯ ಹೆಣ್ಣು ನಾನಾಗಿದ್ದಿರಬಹುದು. ಅದಕ್ಕೆ ಕಾರಣ, ನನಗೆ ಸಿಗಲಿರುವ 'ಪ್ರವಾದಿಪತ್ನಿ' ಎಂಬ ಪಟ್ಟ.

ನನ್ನ ಮಿತಿಯ ಬಗ್ಗೆ ನನಗೆ ಸ್ಪಷ್ಟವಾದ ಅರಿವಿತ್ತು. ಮದುವೆ ವಯಸ್ಸನ್ನು ಅದೆಂದೋ ದಾಟಿದ್ದ ವಿಧವೆ ನಾನು. ನನ್ನ ಐವತ್ತರ ಇಳಿವಯಸ್ಸನ್ನು, ಗುಡಾಣ ದಂತಹ ನನ್ನ ದೇಹವನ್ನು, ಸುಕ್ಕುಗಟ್ಟಿದ ನನ್ನ ಕಂದು ಮುಖವನ್ನು, ಗಿಡ್ಡಗಿರುವ ನನ್ನ ಮೂಗನ್ನು, ಆಸೆಗಳನ್ನೇ ಪ್ರತಿಫಲಿಸದಿರುವ ನನ್ನ ಕಿರಿದಾದ ಕಣ್ಣುಗಳನ್ನು ಕಾಣುವ ಯಾವನೇ ಗಂಡು ನನ್ನನ್ನು ಮದುವೆಯಾಗಲು ಬಯಸಿ ಪ್ರಸ್ತಾಪ ಕಳುಹಿಸಲಾರ. ನನಗೆ ಗೊತ್ತಿತ್ತು. ಪ್ರವಾದಿಯ ಸಂದೇಶಗಳಲ್ಲಿ ವಿಶ್ವಾಸವಿರಿಸಿದ್ದ ಮೊದಲ ಗುಂಪಿನಲ್ಲೇ ನಾನಿಲ್ಲದಿರುತ್ತಿದ್ದರೆ, ಮತ್ತು ಆ ಕಾರಣದಿಂದಲೇ ಹತ್ತು ವರ್ಷಗಳ ಹಿಂದೊಮ್ಮೆ ದೇಶಭ್ರಷ್ಟಳಾಗಿ ಅಬೀಸೀನಿಯಾಕ್ಕೆ ಪಲಾಯನ ಮಾಡದಿರುತ್ತಿದ್ದರೆ, ಅಂದು ಕಡಲ ಕಿನಾರೆಯವರೆಗೂ ಬೆನ್ನಟ್ಟಿ ಬಂದಿದ್ದ ಕುರೈಶರ ಖಡ್ಗಗಳಿಗೆ ನಾನು ಬಲಿಯಾಗದೆ ಉಳಿದುಕೊಂಡಿರದಿರುತ್ತಿದ್ದರೆ, ಈ 'ಪ್ರವಾದಿಪತ್ನಿ' ಎಂಬ ಕಿರೀಟ ನನಗೆ ದಕ್ಕುತ್ತಿರಲಿಲ್ಲ ಎಂಬುದು.

ಹಿಂದೊಮ್ಮೆ ಪ್ರವಾದಿ ಸಂದೇಶಗಳಲ್ಲಿ ವಿಶ್ವಾಸವಿರಿಸಿದ ಕಾರಣದಿಂದ ನಾನು ದೇಶಭ್ರಷ್ಟಳಾಗಿದ್ದೆ. ಇದೀಗ, 'ಪ್ರವಾದಿಪತ್ನಿ' ಪಟ್ಟಕ್ಕೇರಿದ ಕಾರಣದಿಂದ ಎರಡನೆಯ ಬಾರಿಗೆ ದೇಶಭ್ರಷ್ಟಳಾಗಿದ್ದೆ.

ಮೊದಲಬಾರಿ ಅಬಿಸೀನಿಯಾಕ್ಕೆ ಪಲಾಯನ ಮಾಡಿದ್ದ ಸತ್ಯವಿಶ್ವಾಸಿಗಳ ತಂಡದಲ್ಲಿ ನಾವು ಹದಿನೈದು ಮಂದಿ ಇದ್ದೆವು. ಸಾವಿರಾರು ಮೈಲಿಗಳಷ್ಟು ದೂರದಲ್ಲಿರುವ ಆಫ್ರಿಕಾ ಖಂಡದ ದೇಶ ಅಬಿಸೀನಿಯಾ. ನಮ್ಮ ತಂಡಕ್ಕೆ ದಾರಿ ತೋರಿಸುವವರು ಅಂದು ಯಾರೂ ಇರಲಿಲ್ಲ. ರಕ್ಷಣೆ ನೀಡುವವರೂ ಇರಲಿಲ್ಲ. ಆದರೆ, ಈಗ ಹೊರಟಿರುವ ಪ್ರಯಾಣದಲ್ಲಿ ದಾರಿ ತೋರಿಸಲು ಅಮೀರ್ ಇದ್ದಾನೆ. ರಕ್ಷಕನಾಗಿ ಪ್ರವಾದಿಯ ಸಾಕುಪುತ್ರ ಝೈದ್ ಇದ್ದಾನೆ. ಯಾರೇ ಇದ್ದರೂ, ಹುಟ್ಟಿ ಬೆಳೆದ ಮನೆತೊರೆದು ಹೊರಡುತ್ತಿರುವಾಗ, ಮುಂದೊಂದು ದಿನ ಮರಳಿ ಬರುವ ಭರವಸೆಯಿದ್ದರೆ, ಹೆಚ್ಚು





ದುಃಖವಾಗುವುದಿಲ್ಲ. ಆದರೆ ನಾವೆಲ್ಲ ಹುಟ್ಟಿ ಬೆಳೆದ, ನಡೆದ, ಓಡಿದ, ಕುಣಿದ, ಆಟವಾಡಿದ ನಮ್ಮೆಲ್ಲರ ಪ್ರೀತಿಯ 'ಮಕ್ಕಾ'ವನ್ನು ತೊರೆದು ಹೊರಟಿದ್ದೆವು. ಎಲ್ಲವನ್ನೂ ಮತ್ತೆ ಮತ್ತೆ ಮುತ್ತಿಟ್ಟು ಪ್ರಾಣ ಉಳಿಸಿಕೊಳ್ಳಲು ವಲಸೆಹೋಗುತ್ತಿರುವವರು ನಾವು. ನಮ್ಮೆಲ್ಲರ ಕಣ್ಣುಗಳಿಗೂ ಕಟ್ಟಿದ ನೀರಿನ ಪರದೆಗಳಲ್ಲಿ, ನಾವೆಲ್ಲ ಆಡಿ ಬೆಳೆದ ಮನೆ ಮಂದಿರಗಳ ಬಿಂಬಗಳೆಲ್ಲ ಪ್ರತಿಬಿಂಬಿಸುತ್ತಿದ್ದವು.

'ಪ್ರಾಣ ಭಯ' ಎಂದರೇನು ಎಂಬುದು ಕಳೆದ ಐದಾರು ತಿಂಗಳುಗಳಲ್ಲೇ ನಮಗೆ ಅರ್ಥವಾಗಿತ್ತು. ಅಲ್ಲಿ ಹಾಗಾಯಿತಂತೆ, ಇಲ್ಲಿ ಹೀಗಾಯಿತಂತೆ ಎಂಬ ಭಯಾನಕ ಸುದ್ದಿಗಳು ಪ್ರತಿದಿನವೂ ಒಳಮನೆಯೊಳಗೆ ನುಗ್ಗಿ, ಮುದುಡಿ ಬದುಕುತ್ತಿದ್ದ ನಮ್ಮನ್ನು ಕಂಗಾಲುಗೊಳಿಸುತ್ತಿದ್ದವು. ಮುಂಬಾಗಿಲನ್ನು ಸರಿಯಾಗಿ ಮುಚ್ಚಿ ಅಗಳಿ ಹಾಕಲಾಗಿದೆಯೇ ಇಲ್ಲವೇ ಎಂಬುದನ್ನು, ಒಬ್ಬರಿಗೆ ತಿಳಿಯದಂತೆ ಮತ್ತೊಬ್ಬರು ಆಗಾಗ ಹೋಗಿ ಪರೀಕ್ಷಿಸುತ್ತಿದ್ದೆವು.

ಪ್ರವಾದಿಯವರ ಮೊದಲ ಶತ್ರು ಅವರ ದೊಡ್ಡಪ್ಪ ಅಬೂಲಹಬರು ಎನ್ನುತ್ತಾರೆ ಕೆಲವರು. ಅಲ್ಲ, ಅಲ್ಲ; ಅವರ ಖಾಸಾ ಗೆಳೆಯ ಅಬೂಜಹಲ ಎನ್ನುತ್ತಾರೆ ಹಲವರು. ತಮ್ಮ ತಮ್ಮ ಅಭಿಪ್ರಾಯಗಳನ್ನು ಸಮರ್ಥಿಸಲು ನೂರು ಜನರು ನೂರು ಕತೆಗಳನ್ನು ಹೇಳುತ್ತಿದ್ದರು. ಕಅಬಾ ಮಂದಿರವನ್ನು ನಿರ್ವಹಿಸುತ್ತಿದ್ದ ಪ್ರವಾದಿಯವರ ಅಜ್ಜ ಗೌರವಾನ್ವಿತ ಕುರೈಶ್ ಸರದಾರ ಅಬ್ದುಲ್ ಮುತ್ತಲಿಬರ ಮರಣಾನಂತರ, ಅದರ ಹೊಣೆ ಸಹಜವಾಗಿ ಹಿರಿಮಗ ಅಬೂತಾಲಿಬರಿಗೆ ದಕ್ಕಿತ್ತು. ಮಂದಿರದ ಉಸ್ತುವಾರಿಯ ಜೊತೆಗೆ ಪ್ರವಾದಿಯವರನ್ನು ತಮ್ಮ ಕಣ್ಣುಗಳ ರೆಪ್ಪೆಗಳಂತೆ ಕಾಪಾಡಿ ಕೊಂಡು ಬರುತ್ತಿದ್ದ ಅಬೂತಾಲಿಬರ ಮರಣದ ಬಳಿಕ, ಆ ಜವಾಬ್ದಾರಿಯನ್ನು ಅವರ ಕಿರಿಯ ಸೋದರ ಅಬೂಲಹಬರು ತಾವಾಗಿಯೇ ಮುಗಿಬಿದ್ದು ಸೆಳೆದುಕೊಂಡಿದ್ದರು. ಅಬೂತಾಲಿಬರ ಸೋದರ ಎಂಬ ಕಾರಣದಿಂದ ಮಿಕ್ಕ ಕುರೈಶರೂ ಅಡ್ಡಿ ಪಡಿಸಲಿಲ್ಲ.

ಕಅಬಾದ ಮೂರ್ತಿಗಳಲ್ಲಿ ದೇವರಿಲ್ಲ ಎಂಬ ಪ್ರಚಾರದಿಂದಾಗಿ ದೇವಮೂರ್ತಿಗಳ ದರ್ಶನಕ್ಕಾಗಿ ದೇಶ ವಿದೇಶಗಳಿಂದ ಬರುತ್ತಿದ್ದ ಯಾತ್ರಿಕರ ಸಂಖ್ಯೆಯಲ್ಲಿ ಕಡಿತ ವಾದರೆ, ಮಂದಿರದ ಆದಾಯದಲ್ಲೂ ಕಡಿತವುಂಟಾಗುತ್ತದೆ. ಮಂದಿರದ ಆದಾಯದ ಬಹುಭಾಗವನ್ನು ತನ್ನ ಬಡ್ಡಿ ವ್ಯವಹಾರಗಳಿಗೆ ಗುಟ್ಟಾಗಿ ಬಳಸಿಕೊಳ್ಳುತ್ತಿದ್ದ ಅಬೂಲಹಬರಿಗೆ, ಸಿಟ್ಟಿಗೇಳಲು ಬೇರೆ ಕಾರಣಗಳೇ ಬೇಕಾಗಿದ್ದಿರಲಿಲ್ಲ. ಪ್ರವಾದಿಯು ತನ್ನ ಸೋದರನ ಮಗ ಎಂಬ ಪ್ರೀತಿಯನ್ನು ಹಣದ ಮೋಹ ಕೊಂದು ಹಾಕಿತ್ತು. ಆದರೆ, ಪ್ರವಾದಿಯನ್ನು ಕೊಲ್ಲುವ ಮಟ್ಟಕ್ಕೂ ಅವರು ಇಳಿಯಬಲ್ಲರು ಎಂಬುದನ್ನು ಅಬೂಲಹಬರ ಶತ್ರುಗಳೂ ಒಪ್ಪಿಕೊಳ್ಳುತ್ತಿರಲಿಲ್ಲ.

ಪ್ರವಾದಿಯವರನ್ನು ಮೊದಲ ದಿನದಿಂದಲೇ ಗುಟ್ಟಾಗಿ ವಿರೋಧಿಸುತ್ತಿದ್ದ ಅಬೂಲ ಹಬರು, ಅಣ್ಣನ ಮರಣದ ಬಳಿಕ ತಮ್ಮ ಗೆಳೆಯ ಅಬೂಜಹಲನನ್ನು ಪ್ರವಾದಿ ಮತ್ತು

ಅವರ ಸಂಗಾತಿಗಳ ವಿರುದ್ಧ ಬಹಿರಂಗವಾಗಿಯೇ ಥೂ ಬಿಟ್ಟರು. ಅಬೂಜಾಯಿಲನ ಪುಂಡರ ಪಡೆ ಸತ್ಯವಿಶ್ವಾಸಿಗಳನ್ನು ಕಂಡ ಕಂಡಲ್ಲೆಲ್ಲ ಅವಮಾನಿಸುತ್ತಿತ್ತು. ಬೀದಿಗಳಲ್ಲಿ ತಲೆ ತಗ್ಗಿಸಿ ನಡೆಯುತ್ತಿದ್ದರೆ ಹದ್ದುಗಳಂತೆ ಎರಗಿ ತಲೆ ವಸ್ತ್ರವನ್ನು ನೆಲಕ್ಕೆ ಬೀಳಿಸುತ್ತಿದ್ದರು. ನಮಾಜಿನ ಮೊದಲು ಅಂಗ ಶುದ್ಧಿ ಮಾಡಲೆಂದು ಸೇದಿರಿಸಿದ ಶುದ್ಧ ನೀರಿನ ಪಾತ್ರೆಗೆ ಮೇಕೆಯ ಹಿಕ್ಕೆಗಳನ್ನು ಸುರಿಯುತ್ತಿದ್ದರು. ಅವರ ಕೈಗೆ ಸಿಕ್ಕ ಬಲಹೀನರ ಪರವಾಗಿ ವಾದಿಸಲು ಪ್ರಭಾವಶಾಲಿಗಳಾರೂ ಇಲ್ಲ ಎಂಬುದು ಖಚಿತವಾದರೆ, ಅಂಥವರ ಕಾಲಿಗೆ ಹಗ್ಗ ಕಟ್ಟಿ ರಸ್ತೆಯಲ್ಲಿ ಎಳೆದಾಡುತ್ತಿದ್ದರು. ಪ್ರತಿವಾದಿಸಿದವರನ್ನು ನೆಲದಲ್ಲಿ ಅಡ್ಡ ಮಲಗಿಸಿ ಕಾದು ಕೆಂಪಾದ ಕಬ್ಬಿಣದ ಸಲಾಕೆಗಳಿಂದ ಚುಚ್ಚಿ ಹಿಂಸಿಸುತ್ತಿದ್ದರು. ಮೇಕೆ ಅಥವಾ ಒಂಟೆಯ ಚರ್ಮದಿಂದ ಬಿಗಿದು ಬಿಸಿಲಲ್ಲಿ ಎಸೆಯುತ್ತಿದ್ದರು.

ಇಷ್ಟೆಲ್ಲಾ ಅನಾಹುತಗಳು ಮಕ್ಕಾದ ದಿನಚರಿಯೇ ಆಗಿದ್ದ ದಿನಗಳಲ್ಲೂ, ಅಬೂಬಕರರು ಮಾತ್ರ ತಮ್ಮ ಜೀವದ ಗೆಳೆಯ ಪ್ರವಾದಿಯ ಜೊತೆಗೇ ಇರುತ್ತಿದ್ದು, ಸಾವಿನ ಭಯವನ್ನು ಮರೆತಂತೆಯೇ ವರ್ತಿಸುತ್ತಿದ್ದರು. ಒಂದು ದಿನ ನಾನೇ ಪ್ರಶ್ನಿಸಿದ್ದೆ, 'ನಿಮಗೆ ಭಯವಾಗುವುದಿಲ್ಲವೆ?'

'ಪ್ರವಾದಿಪತ್ನಿ'ಯಾಗುವ ಮುಂಚಿನ ದಿನಗಳಲ್ಲಾದರೆ, ಪ್ರೀತಿಯಿಂದ ಕರೆದು ನನ್ನ ಕುಶಲ ವಿಚಾರಿಸುತ್ತಿದ್ದವರು ಆಯಿಷಾಳ ಅಬ್ಬ. ಆದರೆ, ಯಾವ ದಿನದಲ್ಲಿ ನಾನೂ ಒಬ್ಬಳು ಪ್ರವಾದಿಪತ್ನಿ ಅನ್ನಿಸಿಕೊಂಡೆನೋ, ಅಂದಿನಿಂದ ಅವರ ವರ್ತನೆಯೇ ಬದಲಾಗಿತ್ತು. ಮುಂದೊಂದು ದಿನ 'ಪ್ರವಾದಿಪತ್ನಿ'ಯಾಗಲಿರುವ ತಮ್ಮ ಮಗಳ ಸವತಿ ನಾನೆಂಬ ಮತ್ಸರವೂ ಅವರಿಗಿದ್ದಂತಿರಲಿಲ್ಲ. ಆದರೆ, ಮಾತಿನ ದಾಟಿಯಲ್ಲಿದ್ದ ಆತ್ಮೀಯತೆಯ ಜಾಗವನ್ನು ಗೌರವ ಕಬಳಿಸಿತ್ತು. ಧ್ವನಿಯಲ್ಲಿ ವಿನಯವಿತ್ತು. ನೇರವಾಗಿ ನನ್ನ ಮುಖ ನೋಡುವುದನ್ನೇ ನಿಲ್ಲಿಸಿಬಿಟ್ಟಿದ್ದರು. ನಾನೇನಾದರೂ ಪ್ರಶ್ನಿಸಿದರೆ, ತಲೆ ತಗ್ಗಿಸಿಯೇ ಉತ್ತರಿಸುತ್ತಿದ್ದರು.

'ಇತ್ತು ಉಮ್ಮಾ..' ಮೆತ್ತಗಿನ ಧ್ವನಿಯಲ್ಲಿ ಉತ್ತರಿಸಿದ್ದರು. 'ಆರಂಭದ ದಿನಗಳಲ್ಲಿ ನನಗೂ ಆ ಭಯ ಕಾಡುತ್ತಿತ್ತು. ಆದರೆ, ನನ್ನ ಬಗ್ಗೆ ಅಲ್ಲ; ಜೀವದ ಗೆಳೆಯನ ಬಗ್ಗೆ' ಎಂದು ನನ್ನ ಬಾಯಿ ಮುಚ್ಚಿಸಿದ್ದರು.

ಪ್ರವಾದಿಯ ಜೀವದ ಗೆಳೆಯ ಅಬೂಬಕರರು. ಪ್ರವಾದಿ ಕುಟುಂಬದ ಹೊರಗೆ, ಅಲ್ಲಾಹುವಿನ ಸಂದೇಶಗಳಲ್ಲಿ ವಿಶ್ವಾಸವಿರಿಸಿದ್ದ ಮೊತ್ತಮೊದಲಿಗರು. ವರ್ಷವೆರಡರ ಹಿಂದಿನ ಆ ಒಂದು ಒಂದು ಕರಾಳ ರಾತ್ರಿಯಲ್ಲಿ ಪ್ರವಾದಿಯವರೊಂದಿಗೆ ಅಬೂಬಕರರು ಮದೀನಾಕ್ಕೆ ವಲಸೆ ಹೋಗಿರದಿರುತ್ತಿದ್ದರೆ ಅವರೂ ಜೀವಂತ ಉಳಿಯುತ್ತಿರಲಿಲ್ಲವೇನೊ?





**–೩–**

ನನ್ನೆದೆಗೆ ಒರಗಿಕೊಂಡಂತೆ ಒಂಟೆಯಲ್ಲಿ ಕುಳಿತಿದ್ದ ರುಖಯ್ಯಾ ಏನೋ ಹೇಳಿದಂತೆ ಕೇಳಿಸಿತ್ತು. ಹೇಳಿದ್ದು ಏನೆಂಬುದನ್ನು ಅರಿಯಲಾಗಿರಲಿಲ್ಲ. ನಾನು ಮೆತ್ತಗೆ ಉಸಿರಾಡಿದರೂ ರುಖಯ್ಯಾಳ ಕಿವಿಗೆ ಬೀಳುತ್ತಿತ್ತು; ಅಷ್ಟು ಹತ್ತಿರ. ಆದರೆ, ಅವಳೇನಾದರೂ ಹೇಳಿದ್ದು ನನಗೆ ಕೇಳಿಸುವ ಮೊದಲೇ ಒಂಟೆಯೆದುರು ದಾಪುಗಾಲು ಹಾಕುತ್ತಿದ್ದ ಅಮೀರನಿಗೆ ಕೇಳಿಸಿಬಿಡುತ್ತಿತ್ತು. ಮೊದಲ ದಿನ ಒಂದೆರಡು ಬಾರಿ ರುಖಯ್ಯಾಳ ಮಾತಿಗೆ ಹಿಂತಿರುಗಿ ನೋಡಿದ್ದ ಅಮೀರ, ಆ ಮಾತು ಅವನಿಗೆ ಸಂಬಂಧಿಸಿದ್ದಲ್ಲ ಎಂದು ಅರಿವಾದ ಬಳಿಕ, ಅವನನ್ನೇ ಕರೆದರೂ ಅದು ತನಗಲ್ಲವೆಂದು ಭಾವಿಸಿ ಮುಂದಕ್ಕೆ ಹೆಜ್ಜೆಯಿಡುತ್ತಿದ್ದ.

ನನಗೆ ಮಾತ್ರ ಕೇಳಿಸುವಂತೆ ರುಖಯ್ಯಾ ಮಾತನಾಡಬೇಕಾದರೆ ಅವಳ ಕತ್ತು ಹಿಂದಕ್ಕೆ ತಿರುಗಿಸಬೇಕು. ಎಷ್ಟು ಅಂತ ಕತ್ತನ್ನು ಹಿಂದಕ್ಕೆ ತಿರುಗಿಸಲು ಸಾಧ್ಯ? ಆದರೆ, ನಮ್ಮಿಬ್ಬರ ನಡುವೆ ಇದ್ದ ಒಂದೇ ಒಂದು ಸಾಮ್ಯತೆಯೆಂದರೆ, ನಮ್ಮ ಮುಖಭಾವ ಗಳನ್ನು ಗುಟ್ಟಾಗಿರಿಸಿಕೊಂಡೇ ನಾವು ಮಾತು ಬದಲಿಸಿಕೊಳ್ಳಬಹುದಾಗಿತ್ತು. ಸುಳ್ಳು ಹೇಳುತ್ತಿದ್ದರೂ ಪರಸ್ಪರ ಗೊತ್ತಾಗುವಂತಿರಲಿಲ್ಲ.

ಅವಳ ಭುಜದ ಮೇಲೆ ಕೈಯಿರಿಸಿ 'ಏನಾದರೂ ಹೇಳಿದೆಯಾ ಮಗಳೆ?' ಎಂದು ಪ್ರಶ್ನಿಸಿದೆ.

'ಅಂತೂ ಕೊನೆಯ ದಿನ ಹತ್ತಿರವಾಯಿತಲ್ಲ ಚಿಕ್ಕಮ್ಮ?' ರುಖಯ್ಯಾ ಪ್ರಶ್ನಿಸಿದಂತೆ ಕೇಳಿಸಿತ್ತು.

ರುಖಯ್ಯಾಳಿಗೆ ನಾನೆಂದರೆ ಬಹಳ ಇಷ್ಟ. ಈ ಇಷ್ಟಕ್ಕೂ ಕಾರಣವಿದೆ. ಮೂರು ನಾಲ್ಕು ವರ್ಷಗಳ ಹಿಂದೆ ಅಬಿಸೀನಿಯಾ ದೇಶಕ್ಕೆ ವಲಸೆ ಹೋಗುತ್ತಿದ್ದಾಗಲೂ ಅವಳು ನನ್ನ ಜೊತೆಗಿದ್ದಳು. ಆ ದಿನಗಳಲ್ಲಿ ನಾನವಳ ಚಿಕ್ಕಮ್ಮನಾಗಿರಲಿಲ್ಲ; ಅಷ್ಟೆ. ಅದೇ ಸಲಿಗೆಯಿಂದಲೇ ರುಖಯ್ಯಾ ನನ್ನ ಜೊತೆಗೇ ಒಂಟೆಯೇರಿದ್ದಳು.

'ನೀವು ಆ ದಿನ ಹೇಳಿದ್ದ ಅಂತಿಮದಿನದ ಕತೆ ನೆನಪಾಗಿ ಭಯವಾಯಿತು ಉಮ್ಮಾ' ಎಂದಳು ರುಖಯ್ಯಾ.

ಪಶ್ಚಿಮದಿಂದ ಜೋರಾಗಿ ಬೀಸುತ್ತಿದ್ದ ಗಾಳಿಯ ತಾಳಕ್ಕೆ ಅಮೀರನ ಮುಂಡಾಸಿನ ಅಂಚು ಕುಣಿಯುತ್ತಿರುವುದನ್ನೇ ಗಮನಿಸುತ್ತಿದ್ದ ನಾನು ಗಾಬರಿಯಿಂದ, 'ಯಾಕೆ ಮಗಳೆ? ಅಂತಿಮದಿನವನ್ನು ನೆನಪಿಸಿಕೊಂಡು ಹೆದರಿದೆಯಾ? ಅಲ್ಲಾಹುವಿನ ಹೊರತಾಗಿ ಬೇರಾರಿಗೂ ಹೆದರಬಾರದೆಂದು ಉಳಿದವರಿಗೆಲ್ಲ ಬುದ್ಧಿ ಹೇಳುತ್ತಿದ್ದವಳಲ್ಲವೇ ನೀನು?' ಎಂದೆ.

ಅಂತಿಮದಿನವೆಂದರೆ ಬೇರೆ ದಿನಗಳಂತಲ್ಲ ಎಂಬುದು ಪ್ರವಾದಿಯ ಸಂದೇಶಗಳಿಂದ ನಮಗೆಲ್ಲ ಅಲ್ಪಸ್ವಲ್ಪ ಅರ್ಥವಾಗಿತ್ತು. ಆದರೆ, ಆ ದಿನ ಯಾವಾಗ ಬರುತ್ತದೆ ಎಂದು ಪ್ರವಾದಿಯವರನ್ನು ಪ್ರಶ್ನಿಸಿದರೆ, 'ಯಾವಾಗ ಎಂಬುದು ತಿಳಿಯದು. ಆದರೆ, ಪರಲೋಕದ ಚಿಂತೆಯನ್ನು ಮರೆತು ಈ ಲೋಕದಲ್ಲಿ ತಮಗಿಷ್ಟಬಂದಂತೆ ಬದುಕುತ್ತಿರುವವರನ್ನು ಪರೀಕ್ಷಿಸಲು, ಆ ಒಂದು ದಿನ ಬರಲಿರುವುದಂತೂ ಸತ್ಯ' ಎಂದಷ್ಟೇ ಹೇಳಿ ಮಾತು ಮುಗಿಸುತ್ತಿದ್ದರು.

ನಾವಿಬ್ಬರು ಅಬಿಸೀನಿಯಾದಲ್ಲಿದ್ದ ದಿನಗಳಲ್ಲಿ ಕ್ರೈಸ್ತ ಮತಪಂಡಿತರೊಬ್ಬರು, ಅಂತಿಮದಿನ ಹೇಗಿರುತ್ತದೆ ಎಂಬುದನ್ನು ನಿಖರವಾಗಿ ತಿಳಿಸದಿದ್ದರೂ, ಅದು ಬರುವ ಮೊದಲು ಭೂಮಿಯ ಮೇಲೆ ಏನೆಲ್ಲ ನಡೆಯುತ್ತವೆ ಎಂಬುದನ್ನು ಕಣ್ಣಾರೆ ಕಂಡಿದ್ದವರಂತೆ ಭಯಾನಕವಾಗಿ ವಿವರಿಸಿದ್ದರು. ರಾತ್ರಿಯ ಊಟದ ಬಳಿಕ ಅಂತಿಮದಿನದ ಮುನ್ಸೂಚನೆಯನ್ನು ವಿವರಿಸಲಾರಂಭಿಸಿದ್ದ ಆ ಪಂಡಿತರು, ಮಾತು ಮುಗಿಸುವಾಗ ನಡು ರಾತ್ರಿಯಾಗಿತ್ತು. ಬೆದರಿ ಬೆವರಿದ್ದ ರುಖಯ್ಯಾ ರಾತ್ರಿಯಿಡೀ ನನ್ನನ್ನು ಅವುಚಿ ಹಿಡಿದುಕೊಂಡೇ ಮಲಗಿದ್ದಳು. ಆ ರಾತ್ರಿಯಿಡೀ ನನಗೆ ನಿದ್ರೆಯಿರಲಿಲ್ಲ.

'ಎಲ್ಲವೂ ಮೊನ್ನೆ ಮೊನ್ನೆ ಬಿದ್ದುಹೋದ ಕೆಟ್ಟ ಕೆಟ್ಟ ಕನಸಿನಂತೆ ಅನ್ನಿಸುತ್ತಿದೆ, ಅಲ್ಲವೇ ಮಗಳೇ' ಎನ್ನುತ್ತಾ ರುಖಯ್ಯಾಳ ಬೆನ್ನು ಸವರಿದೆ.

'ಹೌದು ಉಮ್ಮಾ. ಎಲ್ಲವೂ ಅಲ್ಲಾಹುವಿನ ಆಟ. ಈ ನಮ್ಮ ಪ್ರಯಾಣವನ್ನೇ ನೋಡಿ. ಆ ದಿನ ನಾವು ಪಲಾಯನ ಮಾಡಿದ್ದು, ಕುರೈಶರ ಭಯದಿಂದ. ಇಂದು ಪ್ರಯಾಣದ ಕಾರಣವೂ ಅದೇ ಕುರೈಶರ ಭಯದಿಂದ. ಆದರೆ, ಒಂದು ವ್ಯತ್ಯಾಸವಿದೆ. ಅಂದು ಹೊರಟಿದ್ದಾಗ, ತಲುಪುವ ದೇಶದಲ್ಲಿ ನಮಗೆ ಸ್ವಾಗತ ಸಿಗುವುದೋ ಇಲ್ಲವೋ ಎಂಬ ಆತಂಕ ಕಾಡುತ್ತಿತ್ತು. ಆದರೆ, ಇಂದು ಆ ಭಯವಿಲ್ಲ. ನಮ್ಮನ್ನು ಸ್ವಾಗತಿಸಲು ಕಾದಿರುವ ನಮ್ಮವರು ಅಲ್ಲಿದ್ದಾರೆ.' ನನಗೇ ಸಮಾಧಾನ ಹೇಳಿದ್ದಳು ರುಖಯ್ಯಾ.

ಇನ್ನೂರು ಮೈಲಿಗಳಿಗಿಂತಲೂ ಹೆಚ್ಚಿನ ದೂರವನ್ನು ಒಂಟೆಸವಾರಿಯಲ್ಲಿ, ಅದರಲ್ಲೂ ಕಡಿದಾದ ಕಣಿವೆದಾರಿಯಲ್ಲಿ ಸಾಗಿ ತಲುಪುವುದು ಸುಲಭವಲ್ಲ. ನಡು ನಡುವೆ ಅಡ್ಡವಾಗುವ ಗುಡ್ಡ ಬೆಟ್ಟಗಳು. ಮುಳ್ಳು ಪೊದರುಗಳು, ಹರಿದಾಡುವ ವಿಷಜಂತುಗಳು. ಹಗಲೆಲ್ಲ ನೆತ್ತಿ ಸುಡುವ ಸೂರ್ಯ. ರಾತ್ರಿಯೆಲ್ಲ ಮೈಕೊರೆಯುವ ಚಳಿ. ಆ ಎಲ್ಲ ಹಿಂಸೆಗಳನ್ನೂ, ಮದೀನಾದಲ್ಲಿ ನಮ್ಮನ್ನು ಪ್ರೀತಿಯಿಂದ ಸ್ವಾಗತಿಸಲಿರುವ ನಮ್ಮವರ ನಗುಮುಖಗಳನ್ನು ಕಲ್ಪಿಸಿಕೊಳ್ಳುತ್ತಾ ಸಹಿಸಿಕೊಳ್ಳುತ್ತಿದ್ದೆವು.

ಕಣಿವೆ ದಾರಿಗೆ ತಲುಪುವ ಮುನ್ನ ಮರಳಿನ ಹಾದಿಯಲ್ಲಿ ಒಂಟೆಯ ಬೆನ್ನಮೇಲೆ ಓಲಾಡುತ್ತಾ ಆಯಾಸಗೊಳ್ಳುತ್ತಿದ್ದ ನಮಗೆ, ಕಣಿವೆಯೊಳಗಿನ ಪ್ರಯಾಣ ಕ್ರಮೇಣ





ಬಲು ಸುಲಭ ಅನ್ನಿಸತೊಡಗಿತ್ತು. ಮೊದಲ ದಿನದ ಮರುಭೂಮಿಯ ಪ್ರಯಾಣದಲ್ಲಿ ಎತ್ತ ನೋಡಿದರತ್ತ ಮರಳ ಸಾಗರವೇ ಕಾಣಿಸುತ್ತಿದ್ದವು. ನೋಡಿದ್ದನ್ನೆ ಮತ್ತೆ ಮತ್ತೆ ಕಾಣಲೂ ಬೇಸರವಾಗುತ್ತಿತ್ತು. ಆದರೆ, ಕಣಿವೆಗಿಳಿದ ಬಳಿಕ ನಮ್ಮ ಒಂಟೆಗಳು ಹೆಜ್ಜೆ ಹಾಕುತ್ತಿದ್ದದ್ದು ಜಾರುವ ಕಲ್ಲುಗಳೇ ಹರಡಿದ್ದ ನೆಲದ ಮೇಲೆ. ಕೆಲವೊಮ್ಮೆ ಕಪ್ಪು, ಕೆಲವೊಮ್ಮೆ ಕೆಂಪು ಬಣ್ಣಗಳ ಬೃಹತ್ ಕಲ್ಲು ಬಂಡೆಗಳ ನಡುವಿನಿಂದ ತೂರುವಾಗ ತಲೆಗೆಲ್ಲಿ ಬಂಡೆ ಬಡಿಯುವುದೋ ಎಂಬ ಭಯದಿಂದ ತಲೆ ತಗ್ಗಿಸುತ್ತಿದ್ದವು. ನಡುವೆ ಅಪರೂಪದಲ್ಲೊಮ್ಮೆ ನೀಲಿ ಹೂವುಗಳ ಕುರುಚಲು ಗಿಡಗಳು. ಹಸಿರು ಪೊದರುಗಳು.

ಒಂಟೆಗಳ ಬದಲು ಕುದುರೆಯಲ್ಲೇ ಪ್ರಯಾಣ ಮಾಡಿದ್ದರೆ ಒಳ್ಳೆಯದಿತ್ತೇನೋ ಎಂದು ಅನ್ನಿಸಿದ್ದೂ ಇದೆ.

ನಾನು ಎರಡನೆಯ ಬಾರಿಗೆ ಒಂಟೆ ಸವಾರಿ ಮಾಡುತ್ತಿದ್ದೆ. ಮೊದಲ ಸಲ ಒಂಟೆಯಲ್ಲಿ ಕುಳಿತಿದ್ದದ್ದು ಮದುವೆಯಾಗಿ ಗಂಡ ಅಮ್ರ್ ಮನೆಗೆ ಸಾಗುತ್ತಿದ್ದ ಮೆರವಣಿಗೆಯಲ್ಲಿ. ಅಬಿಸೀನಿಯಾದಲ್ಲಿದ್ದ ದಿನಗಳಲ್ಲಿ ಅಮ್ರ್ ನನಗೆ ಕುದುರೆ ಸವಾರಿ ಕಲಿಸಿದ್ದರು. ಕಲಿಕೆ ಸುಲಭವಾಗಿಯೇನೂ ಇದ್ದಿರಲಿಲ್ಲ. ಎಲ್ಲಿ ನೆಲಕ್ಕೆ ಉರುಳಿ ಬಿದ್ದುಬಿಡುತ್ತೇನೋ ಎಂಬ ಭಯ ಮೊದಮೊದಲು ಕಾಡುತ್ತಿತ್ತು. ಕುದುರೆ ಜೀನಿನ ಎರಡೂ ಕಾಲುಬಳೆಗಳಲ್ಲಿ ಪಾದಗಳನ್ನು ತೂರಿಸಿ, ಅದರ ಬಲದಲ್ಲೇ ಸವಾರಿ ಮಾಡುವುದನ್ನು ಅಭ್ಯಾಸ ಮಾಡಿದ ಬಳಿಕ, ಆ ಅಳುಕು ಮಾಯವಾಗಿತ್ತು. ಆದರೆ, ನಾವು ಮದೀನಾಕ್ಕೆ ಪ್ರಯಾಣ ಹೊರಟದ್ದು ಕುದುರೆಗಳ ಮೇಲಲ್ಲ. ಒಂಟೆಗಳ ಮೇಲೆ. ಅವು ನೀಳವಾದ ಕಾಲುಗಳನ್ನೆತ್ತಿ ಹೆಜ್ಜೆ ಬದಲಿಸುತ್ತಿರುವಾಗ ಬೆನ್ನ ಮೇಲೆ ಕುಳಿತ ನಾವು, ಒಮ್ಮೆ ಮೇಲೇರಿದಂತೆ ಮತ್ತೊಮ್ಮೆ ಕೆಳಗೆ ಬೀಳುತ್ತಿರುವಂತೆ ಭಾಸವಾಗುತ್ತಿತ್ತು.

ಕುದುರೆಗಳ ಮೇಲೆ ನಾವು ಪ್ರಯಾಣ ಮಾಡಿರುತ್ತಿದ್ದರೆ, ಸಾಮಾನು ಸರಂಜಾಮುಗಳನ್ನು ಹೊರಲೆಂದೇ ಬೇರೆ ಒಂಟೆಗಳನ್ನು ಬಳಸಬೇಕಾಗಿತ್ತು. ನಮ್ಮನ್ನು ಹೊತ್ತು ಸಾಗುತ್ತಿದ್ದ ಆರು ಒಂಟೆಗಳ ಬೆನ್ನಲ್ಲೂ ನೀರು, ಆಹಾರ, ಡೇರೆಗಳನ್ನು ಹೇರಲಾಗಿತ್ತು. ಕುದುರೆಗಳಾದರೆ ಇಷ್ಟು ತೂಕ ಹೊರಲಾರವು. ತೊಡೆಗಳು ಒಂಟೆಯ ಮೈಗೆ ಉಜ್ಜೀ ಉಜ್ಜೀ ಉರಿಯತೊಡಗಿತ್ತು. ಆ ನೋವನ್ನಾದರೂ ಸಹಿಸಿಕೊಳ್ಳಬಹುದು. ಆದರೆ ಒಂಟೆಯ ದೇಹದಿಂದ ಹೊರಡುವ ಬೆವರಿನ ವಾಸನೆಯನ್ನು ಸಹಿಸಿಕೊಳ್ಳಲಾಗುತ್ತಿರಲಿಲ್ಲ. ಮರಳು ದಾರಿಯಲ್ಲಿ ಸಾಗುತ್ತಿರುವಾಗಲಾದರೆ, ಒಂದು ಬಗೆಯ ಅಹ್ಲಾದಕರ ಪರಿಮಳವಿರುತ್ತದೆ.

ವಾರದ ಬಳಿಕದ ಸೂರ್ಯ ತಂಪಾಗುವ ಹೊತ್ತಲ್ಲಿ, ನಮ್ಮೆದುರು ನೀರಿನ ಸಣ್ಣ ತೊರೆಯೊಂದು ದಾರಿಗೆ ಅಡ್ಡವಾಗಿ ಹರಿಯುತ್ತಿರುವುದು ಕಾಣಿಸಿತ್ತು. ಕತ್ತಲಾಗಲು ಇನ್ನೂ ಬಹಳ ಸಮಯವಿತ್ತು. ಇನ್ನೂ ಒಂದೆರಡು ಮೈಲುಗಳ ಪ್ರಯಾಣ ಸಾಧ್ಯವಿತ್ತು.

ಆದರೂ, ಅಮೀರನ ಸಲಹೆಯಂತೆ ನಾವೆಲ್ಲ ಅಲ್ಲೇ ಡೇರೆ ಹೂಡಿದೆವು. ನೀರಿನ ಚೀಲಗಳನ್ನೆಲ್ಲ ತುಂಬಿಕೊಂಡೆವು. ಒಂಟೆಗಳೆಲ್ಲ ಎಷ್ಟು ಬೇಕೋ ಅಷ್ಟು ನೀರು ತುಂಬಿಕೊಂಡವು. ನೀರಿನ ಒಂದು ಹನಿಯನ್ನೂ ಗುಟುಕರಿಸದೆಯೂ ಒಂಟೆಗಳು ವಾರವಿಡೀ ಇರುತ್ತವೆಯಂತೆ. ಆದರೆ, ಅವು ನೀರು ಸಿಕ್ಕಿತೆಂದು ಅಗತ್ಯಕ್ಕಿಂತ ಹೆಚ್ಚು ಕುಡಿಯುವುದೂ ಇಲ್ಲವಂತೆ. ರಾತ್ರಿಯ ಊಟ ಭರ್ಜರಿಯಾಗಿತ್ತು. ಮೂರೇ ದಿನಗಳಲ್ಲಿ ನಾಲ್ಕು ಆಡುಗಳು ನಮ್ಮ ಹೊಟ್ಟೆ ಸೇರಿದ್ದವು.

'ಮಧ್ಯಾಹ್ನದ ಹೊತ್ತಿಗೆ ನಾವು ಕುಬಾ ತಲುಪಲಿದ್ದೇವೆ' ಕಳೆದ ರಾತ್ರಿಯಲ್ಲಿ ಕಲ್ಲುಗಳನ್ನು ಜೋಡಿಸಿ ಆಡುಗೆಗಾಗಿ ನಿರ್ಮಿಸಿದ್ದ ಒಲೆಯಲ್ಲಿ ಮಿನುಗುತ್ತಿದ್ದ ಕೆಂಡದ ರಾಶಿಯ ಮೇಲೆ ನೀರು ಸುರಿದು ಆರಿಸುತ್ತಾ ಅಮೀರ ಹೇಳಿದಾಗ, ನಮ್ಮೆಲ್ಲರ ಕಣ್ಣುಗಳೂ ನಕ್ಷತ್ರಗಳಂತೆ ಹೊಳೆಯಲಾರಂಭಿಸಿದ್ದವು.

ಶತ್ರುಗಳ ಕಾಟದಿಂದ ತಪ್ಪಿಸಿಕೊಂಡು ಮದೀನಾ ತಲುಪಿದ್ದ ಪ್ರವಾದಿಯ ಮುಖದಲ್ಲಿ ಮೊದಲ ಬಾರಿಗೆ ನಗು ಚಿಗುರಿಸಿದ್ದ ಪ್ರದೇಶವಂತೆ ಆ ಕುಬಾ. ಮಕ್ಕಾದಿಂದ ಹೊರಡುವ ಮೊದಲೇ ಝೈದ್ ಆ ಘಟನೆಯನ್ನು ಸಂಭ್ರಮಿಸುತ್ತಲೇ ವಿವರಿಸಿದ್ದ. ಕುಬಾದ ಗಡಿಯಲ್ಲಿ ಅಂದು ಪ್ರವಾದಿ ಕಾಣಿಸುತ್ತಿದ್ದಂತೆಯೇ ಅಲ್ಲಿನ ನಿವಾಸಿಗಳು 'ಅಲ್ಲಾಹು ಅಕ್ಬರ್' ಜಯಘೋಷ ಕೂಗಿದ್ದರಂತೆ. ತಮಗೆ ಅಂತಿಮ ಸತ್ಯವನ್ನು ಬೋಧಿಸಲಿರುವ ಹೊಸ ಪ್ರವಾದಿಯು ತಮ್ಮೂರಿಗೆ ಬರಲಿದ್ದಾರೆಂಬ ಮಾಹಿತಿ, ಸಾಕಷ್ಟು ಮುಂದಾಗಿಯೇ ಆ ಊರಿಗೆ ತಲುಪಿತ್ತು. ಕುಬಾದಲ್ಲಿ ವಾಸಿಸುತ್ತಿರುವವರಲ್ಲಿ ಬಹು ಪಾಲು ಮಂದಿ ಅದಾಗಲೇ ಸತ್ಯವಿಶ್ವಾಸಿಗಳಾಗಿದ್ದರು. ಕಳೆದ ಏಳೆಂಟು ವರ್ಷಗಳಿಂದ ಧರ್ಮ ಪ್ರಚಾರದ ಸಲುವಾಗಿ ಪ್ರವಾದಿಯವರು ಮಕ್ಕಾದಿಂದ ರವಾನಿಸುತ್ತಿದ್ದ ಸಹವರ್ತಿಗಳು, ಆ ಕೆಲಸವನ್ನು ಬಹಳ ಸಮರ್ಥವಾಗಿಯೇ ಮಾಡಿದ್ದರು.

ಅಷ್ಟರಲ್ಲಿ, ಯಾರೋ ಕಿಟಾರನೆ ಕಿರುಚಿದ್ದರು!

ನಾವಾಗ ತಮ್ಮನ್ನಿಯ ಬೈದ್ ಎಂಬ ಪ್ರದೇಶದಲ್ಲಿ ಸಾಗುತ್ತಿದ್ದೆವು.

'ನಿಲ್ಲಿಸೀ..., ನಿಲ್ಲಿಸೀ.., ನಿಲ್ಲಿಸೀ..' ಯಾರೋ ಕೂಗುತ್ತಿದ್ದಾರೆ.

ನನ್ನನ್ನು ಒಂಟೆಯಿಂದ ಇಳಿಯಲು ಸಹಾಯ ಮಾಡಿದ್ದ ಅಮೀರ್ ಹಿಂದಕ್ಕೆ ಓಡಿದ. ನಾನೂ ಸಾಧ್ಯವಾದಷ್ಟು ವೇಗದಿಂದ ಹಿಂಬಾಲಿಸಿದೆ. ಎಲ್ಲರಿಗಿಂತ ಹಿಂದೆ ಆರನೆಯ ಒಂಟೆಯ ಮೇಲೆ ಅಫೀರಾಳೊಂದಿಗೆ ಕುಳಿತಿದ್ದ ಆಯಿಷಾ ಜಾರಿಬೀಳುತ್ತಿರುವಂತೆ ಕಾಣಿಸಿತ್ತು.

ಹೌದು, ಅವಳೇ!

ಅನಾಹುತ ನಡೆದೇಬಿಟ್ಟಿತ್ತು.





ನೋಡು ನೋಡುತ್ತಿರುವಂತೆಯೇ ಒಂಟೆಯ ಎಡಭಾಗದಿಂದ ಆಯಿಷಾ ಜಾರಿದ್ದಳು.

ಅಷ್ಟರಲ್ಲಿ ಎಲ್ಲರೂ ಅಲ್ಲಿಗೆ ಓಡಿ ಬಂದಿದ್ದರು.

ಆದರೆ, ಅಲ್ಲಾಹು ಬೇರೆಯೇ ನಿರ್ಧರಿಸಿದ್ದ!

ಇನ್ನೇನು, ಆಯಿಷಾಳ ತಲೆ ಕಲ್ಲುನೆಲಕ್ಕೆ ಬಡಿಯುತ್ತದೆ ಎನ್ನುವಷ್ಟರಲ್ಲಿ, ಅವಳು ಕುಳಿತಿದ್ದ ಒಂಟೆಯ ಹಿಂದೆಯೇ ತಲೆ ತಗ್ಗಿಸಿ ನಡೆದುಕೊಂಡು ಬರುತ್ತಿದ್ದ ಅಫೀರಾಳ ಸೋದರ ಸಫ್ವಾನ್, ಮಿಂಚಿನಂತೆ ಮುನ್ನುಗ್ಗಿ ನೆಲದಲ್ಲಿ ಬೋರಲಾಗಿ ಮಲಗಿದ್ದ! ಅವನ ಬೆನ್ನ ಮೇಲೆ ಬಿದ್ದ ಆಯಿಷಾಳಿಗೆ ಯಾವುದೇ ಗಾಯವಾಗಿದ್ದಿರಲಿಲ್ಲ. ಅಷ್ಟರಲ್ಲಿ ಬಾಣದಂತೆ ಚಿಮ್ಮಿಬಂದ ಮುಅತ್ತಲ್ ಆಯಿಷಾಳ ಬೆನ್ನ ಹಿಂದೆಯೇ ಜಾರುತ್ತಿದ್ದ ಅಫೀರಾಳನ್ನು ನೆಲಕ್ಕೆ ಬೀಳದಂತೆ ಅಪ್ಪಿಕೊಂಡಿದ್ದ.

ಏದುಸಿರು ಬಿಡುತ್ತಾ ಧಾವಿಸಿ ಬಂದಿದ್ದ ಆಯಿಷಾಳ ಉಮ್ಮ, 'ನನ್ನ ಮಗಳೇ.., ನನ್ನ ಮದುಮಗಳೇ..' ಎನ್ನುತ್ತಾ ಅವಳನ್ನು ತಬ್ಬಿ ಮುದ್ದಿಸುತ್ತಾ, ಸಫ್ವಾನನಿಗೆ ಕಣ್ಣುಗಳಲ್ಲೇ ಕೃತಜ್ಞತೆ ಅರ್ಪಿಸುತ್ತಿದ್ದರು. ಆಯಿಷಾಳಿಗೆ ಯಾವುದೇ ಗಾಯವಾಗಿರದಿದ್ದರೂ ಗಾಬರಿಯಿಂದ ಅವಳ ಕೆಂಪು ಮುಖ ಬಿಳಿಚಿಕೊಂಡಿತ್ತು.

'ಇನ್ನೊಂದೇ ದಿನ. ನಾಳೆ ಮಧ್ಯಾಹ್ನದ ಹೊತ್ತಿಗೆ ನಾವು ಮದೀನಾ ತಲುಪಲಿದ್ದೇವೆ. ಎಲ್ಲ ಸರಿಯಾಗುತ್ತದೆ' ಅಮೀರ ಎಲ್ಲರನ್ನೂ ಸಮಾಧಾನ ಪಡಿಸುತ್ತಿದ್ದ.

ಎಲ್ಲರೂ ಸಫ್ವಾನನನ್ನು ಹೊಗಳುವವರೇ.

ನಾಚಿ ಮುದುಡಿದ್ದ ಕೆಂಪುಕೆನ್ನೆಯ ಕಿರುಮೀಸೆಯ ಆ ಹುಡುಗ, ತನ್ನೆರಡೂ ಕೈಗಳನ್ನು ಬೆನ್ನಹಿಂದೆ ಜೋಡಿಸಿಕೊಂಡು, ತಲೆ ತಗ್ಗಿಸಿ ನಿಂತಿದ್ದ.

ತನ್ನದೇನೂ ತಪ್ಪಿಲ್ಲವೆಂಬಂತೆ!

* * *

*'ಯಾಕೆ ಮೌನವಾಗಿರುವೆ?' ನಾನು ಕೇಳಬೇಕಾಗಿದ್ದ ಪ್ರಶ್ನೆಯನ್ನು ಈ ಬಾರಿ ಅರ್ಷದ್ ಕೇಳಿದ್ದ.*

*ನನಗೊಂದು ಗೊಂದಲ ಕಾಡಲಾರಂಭಿಸಿತ್ತು.*

*ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋಗುತ್ತಿರುವ ಸೌದಾರವರ ಜೊತೆಗಿರುವ ಅಷ್ಟೂ ಸಹಪ್ರಯಾಣಿಕರ ಹೆಸರುಗಳನ್ನು ನೆನಪಿಟ್ಟುಕೊಳ್ಳಬೇಕೋ ಬೇಡವೋ ಎಂಬುದನ್ನು ತೀರ್ಮಾನಿಸಲಾರದವನಾಗಿದ್ದೆ. ಇಡೀ ಕತೆಯ ಬೆಳವಣಿಗೆಗೆ ಅಷ್ಟೊಂದು ಹೆಸರುಗಳನ್ನು ನೆನಪಿಡುವ ಅಗತ್ಯವೇನೂ ಇರಲಾರದು.*

*ಜಗತ್ತಿನ ಸುಪ್ರಸಿದ್ಧ ಕತೆಗಾರನೊಬ್ಬ, ಕಾಫ್ಕಾ ಅಥವಾ ಚೆಕಾಫ್ ಇರಬೇಕು, ಕತೆಯೊಂದರ ಆರಂಭದಲ್ಲಿ, 'ಅವನು ಮನೆಯೊಳಗೆ ಕಾಲಿರಿಸಿದಾಗ ಗೋಡೆಯಲ್ಲಿ ತೂಗಿಸಿದ್ದ ಬಂದೂಕು ಕಾಣಿಸಿತ್ತು' ಎಂಬ ಸಾಲು ಮುದ್ರಿತವಾಗಿದ್ದರೆ, ಕತೆ ಮುಗಿಯುವ ಮುನ್ನ ಆ ಬಂದೂಕಿನಿಂದ ಗುಂಡು ಸಿಡಿಯಲೇಬೇಕು. ಇಲ್ಲದಿದ್ದರೆ, ಮನೆಯೊಳಗೆ ಕಾಲಿಡುವವನಿಗೆ ಕಾಣಿಸದಂತೆ ಆ ಬಂದೂಕನ್ನು ಒಳಕೋಣೆಯ ಸಂದೂಕದಲ್ಲಿ ಬಚ್ಚಿಡಬೇಕು' ಎಂದು ಎಚ್ಚರಿಸಿದ್ದು ನೆನಪಾಗಿತ್ತು.*

*'ನಿಜ. ನಿನ್ನ ತರ್ಕವೂ ಸರಿಯಾದದ್ದೆ.' ಅರ್ಷದ್ ಹೇಳತೊಡಗಿದ್ದ, 'ನಿನ್ನ ಕೃತಿಯಲ್ಲಿ ಪ್ರವಾದಿಪತ್ನಿಯರು ಮತ್ತು ಪ್ರವಾದಿಪುತ್ರಿಯರ ಜೊತೆಯಲ್ಲಿ ಮತ್ತೆ ಮತ್ತೆ ಕಾಣಿಸುವ ಮುಖ್ಯ ಪಾತ್ರಗಳು ಬಹಳವೆಂದರೆ ಏಳೋ ಅಥವಾ ಎಂಟೋ ಜನರು ಮಾತ್ರ. ಈ ಮಾಹಿತಿಯನ್ನು ಕೃತಿಯ ಆರಂಭದಲ್ಲೇ ಬರೆದುಬಿಡು. ನಿನ್ನ ಗೊಂದಲ ಮಾತ್ರವಲ್ಲ, ಓದುಗರ ಆತಂಕವೂ ಮಾಯವಾಗುತ್ತದೆ.'*

*'ಸರಿ ಹಾಗೇ ಮಾಡುವೆ ಅರ್ಷದ್. ನನ್ನನ್ನು ನೀನು ನೇರವಾಗಿ ಮುಖ್ಯ ಪಾತ್ರಗಳ ಬಳಿಗಷ್ಟೇ ಕರೆದುಕೊಂಡು ಹೋದರೆ ಮಾತ್ರ ಇದು ಇನ್ನೂ ಹೆಚ್ಚು ಸುಲಭವಾಗುತ್ತದೆ' ಎಂದೆ.*

*'ನಿನ್ನ ಆಸೆಯಂತೆಯೇ ಆಗಲಿ. ನಾವೀಗ ನೇರವಾಗಿ ಆಯಿಷಾರ ಮದುವೆ ಮಂಟಪಕ್ಕೆ ಹೋಗುತ್ತಿದ್ದೇವೆ' ಎಂದ ಅರ್ಷದ್.*

*ಏನು! ಆಯಿಷಾರವರು ಪ್ರವಾದಿಯವರನ್ನು ಮದುವೆಯಾಗುತ್ತಿರುವುದನ್ನು ನಾನು ಕಣ್ಣಾರೆ ಕಾಣಲಿದ್ದೇನೆಯೆ?!*

❐



## ಸ್ವಗತ – ಐದು

# ರುಖಿಯ್ಯಾ ಬಿಂತಿ ಮುಹಮ್ಮದ್

–೧–

'ಅಬೂಬಕರ್ ಸಿದ್ದೀಕ್ ಎಂಬವರ ಎರಡನೆಯ ಪುತ್ರಿಯಾಗಿರುವ ಆಯಿಷಾ ಎಂಬ ಹೆಸರಿನ ನಿನಗೆ, ಮರುಹೂಮ್ ಅಬ್ದುಲ್ಲಾ ಎಂಬವರ ಪುತ್ರ ಮುಹಮ್ಮದ್ ಎಂಬವರ ಜೊತೆಗೆ ಐನೂರು ದಿರ್ಹಾಮ್ ಮೆಹರ್'ಗೆ ಪ್ರತಿಯಾಗಿ ನಿಕಾಹ್ ಮಾಡಿಕೊಳ್ಳಲು ಸಮ್ಮತಿಯಿದೆಯೆ?'

ನಿಕಾಹ್ ನಿಬಂಧನೆಗಳನ್ನು ನಿರ್ವಹಿಸಲಿದ್ದ ಹಿರಿಯರೊಬ್ಬರು ಮೆತ್ತಗಿನ ಧ್ವನಿಯಲ್ಲಿ ಮದುವಣಗಿತ್ತಿಯನ್ನು ಪ್ರಶ್ನಿಸುತ್ತಿದ್ದಾಗ, ಆಯಿಷಾಳನ್ನು ಒತ್ತಿಕೊಂಡೇ ಅಸ್ಮಾಳ ಜೊತೆಗೆ ನಾನೂ ಕುಳಿತಿದ್ದೆ. ನಮ್ಮ ಮತ್ತು ಆ ಹಿರಿಯರ ನಡುವೆ ತೆಳುವಾದ ರೇಶ್ಮೆಯ ಪರದೆಯೊಂದು ಅಡ್ಡವಿತ್ತು. ಆದರೆ, ಆ ಪ್ರಶ್ನೆ ತನಗೆ ಸಂಬಂಧಿಸಿದ್ದೇ ಅಲ್ಲವೆಂಬಂತೆ ಆಯಿಷಾ ಮೌನವಾಗಿಯೇ ಕುಳಿತಿದ್ದಳು.

ಆಯಿಷಾಳಿಗೆ ಮದುವೆಯೆಂಬುದು ಮತ್ತೊಂದು ಮಕ್ಕಳಾಟವೆಂದೇ ಅನ್ನಿಸಿದ್ದಿರ ಬಹುದು. ಹಾಗಿಲ್ಲದಿರುತ್ತಿದ್ದರೆ, ಅವಳಬ್ಬ ಬೆಹರಿನ್ ದೇಶದಿಂದ ತರಿಸಿದ್ದ, ಬಂಗಾರದ ಪುಟ್ಟ ಪುಟ್ಟ ನಕ್ಷತ್ರಗಳನ್ನು ಅಂಟಿಸಿದ್ದ ಕೆಂಬಣ್ಣದ ರೇಶ್ಮೆಯ ಮೇಲಂಗಿಯನ್ನು, ಅವಳ ಉಮ್ಮ ಬಲವಂತದಿಂದ ತೊಡಿಸುವವರೆಗೂ, ಹಿತ್ತಲಿನ ಉಯ್ಯಾಲೆಯಲ್ಲಿ ಗೆಳತಿಯ ರೊಂದಿಗೆ ಜೋಕಾಲಿಯಾಡುತ್ತಲೇ ಇದ್ದಳು. ಚಳಿಗಾಲದ ಬಿಸಿಲು ಹಿತವಾಗುವ ಮಧ್ಯಾಹ್ನದ ಹೊತ್ತು ಅದು.

ನಿಕಾಹ್ ಶಾಸ್ತ್ರಕ್ಕೆ ಸಾಕ್ಷಿಯಾಗಲೆಂದು ಅಬ್ಬನ ಜೊತೆಗೆ ಬಂದಿದ್ದ ಏಳೆಂಟು ಸಂಗಾತಿ ಗಳನ್ನು ಸ್ವಾಗತಿಸಲೆಂದು ಅಂಗಳದಲ್ಲಿ ನಿಂತಿದ್ದವರ ಸಂಖ್ಯೆ ಬಹಳವೆಂದರೆ ಇಪ್ಪತ್ತಾ ದೀತು. ಅವರಲ್ಲೂ ಸ್ಥಳೀಯ ಅನ್ಸಾರ್'ಗಳ ಸಂಖ್ಯೆಯೇ ಅಧಿಕ. ಮದುವೆಯ ವಿಧಿ

ವಿಧಾನಗಳನ್ನು ತೀರಾ ಸರಳವಾಗಿ ನಡೆಸಿಕೊಡಬೇಕು. ಆಡಂಬರದ ಮದುವೆಗಳನ್ನು ಅಲ್ಲಾಹು ಇಷ್ಟಪಡುವುದಿಲ್ಲವೆಂದು ನೆನಪಿನಲ್ಲಿರಲಿ ಎಂಬುದಾಗಿ ಆಯಿಷಾಳ ಆಬ್ಬನಿಗೆ ನನ್ನಬ್ಬ ಮುಂದಾಗಿಯೇ ಎಚ್ಚರಿಸಿದ್ದರಂತೆ. ಹಾಗಿಲ್ಲದಿರುತ್ತಿದ್ದರೆ, ಆಯಿಷಾಳ ಅಬ್ಬ ಏನಿಲ್ಲವೆಂದರೂ ಎರಡು ನೂರು ಅತಿಥಿಗಳನ್ನು ಆಮಂತ್ರಿಸುವವರೇ.

ಆಯಿಷಾಳ ಅಬ್ಬನ ಜೊತೆಗೆ ಸುಮಾರು ಎರಡು ವರ್ಷಗಳಷ್ಟು ಹಿಂದೆಯೇ ಈ ಮದುವೆ ಒಪ್ಪಂದವನ್ನು ಮಾಡಿಕೊಂಡಿದ್ದ ನನ್ನಬ್ಬ, ಅವಳನ್ನು ಕರೆದುಕೊಂಡು ಬಂದು ಮನೆ ತುಂಬಿಸಿಕೊಳ್ಳುವ ಯೋಚನೆಯಲ್ಲೇ ಇದ್ದಂತಿರಲಿಲ್ಲ. ಹಗಲೂ ರಾತ್ರಿ ಧಾರ್ಮಿಕ ಸಭೆಗಳನ್ನು ನಡೆಸುತ್ತಾ ಅಲ್ಲಾಹುವಿನ ಸಂದೇಶಗಳನ್ನು ಹಂಚುವುದರಲ್ಲೇ ಮುಳುಗಿ ಹೋಗಿದ್ದರು. ದಿನವಿಡೀ ಮಾತ್ರವಲ್ಲ ನಡು ರಾತ್ರಿಯವರೆಗೂ ಅಬ್ಬನ ನೆರಳಿನಂತೆಯೇ ಇರುತ್ತಿದ್ದ ಆಯಿಷಾಳ ಅಬ್ಬ ಒಂದು ಮಧ್ಯಾಹ್ನದ ಹೊತ್ತಲ್ಲಿ ಮನೆಗೆ ಹೋಗಲು ಸಿದ್ಧರಾಗಿ ಅಂಗಳಕ್ಕಿಳಿದವರು, ಬಾವಿಯ ಬಳಿ ನಿಂತಿದ್ದ ನನ್ನನ್ನು ಕಂಡು ಹತ್ತಿರ ಬಂದಿದ್ದರು.

'ಈ ಮನೆಯಲ್ಲಿ ದೊಡ್ಡವರು ಅಂತ ನೀವು ನಾಲ್ವರಿದ್ದೀರಿ. ಒಬ್ಬರು ನಿನ್ನ ಚಿಕ್ಕಮ್ಮ. ಅವರಲ್ಲಿ ಇದನ್ನು ಪ್ರಸ್ತಾಪಿಸುವುದು ಸರಿಯಲ್ಲ. ಇನ್ನಿಬ್ಬರು ನಿನ್ನ ತಂಗಿಯಂದಿರು. ನೀನು ಎಲ್ಲರಿಗಿಂತ ದೊಡ್ಡವಳು. ನೀನು ಮನಸ್ಸು ಮಾಡಿ ನಿನ್ನಬ್ಬನನ್ನು ನೆನಪಿಸಿದರೆ, ನನ್ನ ಮಗಳನ್ನು ಮನೆತುಂಬಿಸಿಕೊಳ್ಳುವ ಬಗ್ಗೆ ಅವರು ಯೋಚನೆಯನ್ನಾದರೂ ಮಾಡಬಹುದೇನೊ ಎಂಬ ಆಸೆ ನನ್ನದು. ನಾನೇ ನೇರವಾಗಿ ಕೇಳಬಹುದಲ್ಲ ಎಂದು ನೀನು ಸಲಹೆ ಮಾಡಬಹುದು. ಅದು ಹುಡುಗಿಯ ತಂದೆಯ ಕರ್ತವ್ಯವೂ ಹೌದು. ಆದರೇಕೋ ಸಂಕೋಚ. ನನ್ನಿಂದಾಗುತ್ತಿಲ್ಲ. ನಿನ್ನಿಂದ ಸಹಾಯ ಮಾಡಲು ಸಾಧ್ಯವೆ?' ಎಂದು ಪ್ರಶ್ನಿಸಿದ್ದರು.

'ಅಬ್ಬನನ್ನು ಕೈ ಹಿಡಿದು ಎಳೆದು ಮಾತನಾಡಿಸುವ ಶಕ್ತಿಯಿರುವುದು ನನ್ನ ಕಿರಿಯ ತಂಗಿ ಫಾತಿಮಾಳಿಗೆ ಮಾತ್ರ. ಅವಳ ಮಾತಿಗೆ ಅಬ್ಬ ಇಲ್ಲವೆನ್ನುವುದಿಲ್ಲ. ನಾನವಳ ಬಳಿ ಹೇಳಿ ನೋಡುತ್ತೇನೆ' ಎಂದಿದ್ದೆ.

'ಯಾರಿಗೆ ಬೇಕಾದರೂ ಹೇಳಿಕೊಳ್ಳು. ಒಟ್ಟಿನಲ್ಲಿ ನನ್ನ ಮಗಳನ್ನು ನಿಮ್ಮ ಮನೆ ತುಂಬಿಸಿಕೊಳ್ಳುವ ಹೊಣೆಯನ್ನು ನಿನಗೆ ವಹಿಸಿದ್ದೇನೆ' ಎನ್ನುತ್ತಾ, ನನ್ನ ಪ್ರತಿಕ್ರಿಯೆಗೂ ಕಾಯದೆ ಹೊರಟುಹೋಗಿದ್ದರು ಆಯಿಷಾಳ ಅಬ್ಬ.

ಎರಡು ದಿನಗಳ ಬಳಿಕದ ಒಂದು ಮುಂಜಾನೆ, ಫಾತಿಮಾ ಒಂಟಿಯಾಗಿದ್ದಾಗ ನಾನೇ ವಿಷಯ ಪ್ರಸ್ತಾಪಿಸಿದ್ದೆ.





ಐದಾರು ತಿಂಗಳ ಹಿಂದೆಯೆಲ್ಲ 'ಮದುವೆ' ಎಂಬ ಸದ್ದು ಕೇಳಿಸಿದ ಕೂಡಲೇ ಮುಖವನ್ನೆಲ್ಲಾ ಅಷ್ಟಗಲ ಊದಿಸಿಕೊಳ್ಳುತ್ತಿದ್ದ ಹುಡುಗಿ, ಅಬೂತಾಲಿಬರ ಮಗ ಅಲೀಯವರೊಂದಿಗೆ ಮದುವೆ ನಿಶ್ಚಯವಾದ ಬಳಿಕ ಅಪ್ಪಟ ಗೃಹಿಣಿಯಂತಾಗಿ ಬಿಟ್ಟಿದ್ದಳು. ಬದುಕಿನಲ್ಲಿ ಅವೆಲ್ಲ ಇದ್ದದ್ದೇ ಎಂಬಂತೆ ವರ್ತಿಸುತ್ತಿದ್ದಳು. ನನ್ನ ಮಾತುಗಳನ್ನೆಲ್ಲ ಆಲಿಸಿದ ಅವಳು 'ಓ.. ಇಷ್ಟೇನಾ ಅಕ್ಕ? ಈ ಸಂಗತಿ ನನಗೆ ಬಿಡು' ಎಂದಿದ್ದಳು. ಹೇಳಿದಂತೆ ಮಾಡಿದ್ದಳು ಕೂಡಾ. ಅದೇ ದಿನ ಸಂಜೆಯ ಹೊತ್ತಲ್ಲಿ ತನ್ನ ರಾಯಭಾರದ ಫಲಿತಾಂಶವನ್ನೂ ನನಗೆ ತಿಳಿಸಿದ್ದಳು.

ಅಬ್ಬನ ಜೊತೆಯಲ್ಲಿ ಯಾರೇ ಇರಲಿ, ಇಲ್ಲದಿರಲಿ. ಅವರೆಲ್ಲ ಸೇರಿಕೊಂಡು ಅದ್ಯಾವುದೋ ಧಾರ್ಮಿಕ ಸಂಪ್ರದಾಯವೊಂದರ ಒಳಿತು ಕೆಡುಕುಗಳ ಬಗ್ಗೆ ಗಹನವಾದ ಚರ್ಚೆಯನ್ನೇ ನಡೆಸುತ್ತಿರಲಿ, ಫಾತಿಮಾ ಮಾತ್ರ ಯಾವುದೇ ಸಂಕೋಚ ವಿಲ್ಲದೆ ಅಲ್ಲಿಗೆ ನುಗ್ಗಿಬಿಡುತ್ತಿದ್ದಳು. ಅಬ್ಬನೂ ಅಷ್ಟೆಯೇ. ಪ್ರೀತಿಯ ಮಗಳನ್ನು ಕಂಡ ಕೂಡಲೇ ಎಲ್ಲವನ್ನೂ ಮರೆತುಬಿಡುತ್ತಿದ್ದರು. ಅವಳು ಬಂದಿರುವ ಕಾರಣದ ಬಗ್ಗೆ ಗಮನ ಹರಿಸುತ್ತಿದ್ದರು.

ಅಬ್ಬನನ್ನು ಕಾಣಲು ಇವಳು ಹೋದದ್ದು ಸಂಜೆಯ ಹೊತ್ತಿಗೆ. ನಮಾಜು ಮುಗಿಸಿ ಕೊಂಡಿದ್ದ ನನ್ನಬ್ಬ ಕೆಲವು ಸಹವರ್ತಿಗಳೊಂದಿಗೆ ಮಸೀದಿಯ ಹೊರಗಿನ ಜಗಲಿಯಲ್ಲಿ ಮಾತನಾಡುತ್ತಾ ಕುಳಿತಿದ್ದರಂತೆ. ಆಯಿಷಾಳ ಅಬ್ಬ ಕೂಡಾ ಅಲ್ಲಿ ಇದ್ದರಂತೆ. ಯಾರಿದ್ದರು, ಯಾರಿಲ್ಲ ಎಂಬುದನ್ನು ಗಮನಿಸುವವಳಲ್ಲ ಫಾತಿಮಾ. ನೇರವಾಗಿಯೇ ಅಬ್ಬನನ್ನು ಪ್ರಶ್ನಿಸಿದ್ದಳು.

'ಅಬ್ಬ, ನೀವು ಹೊಸ ಚಿಕ್ಕಮ್ಮನನ್ನು ಮನೆಗೆ ಕರೆದುಕೊಂಡು ಬರುವುದು ಯಾವಾಗ?'

ಅಲ್ಲಿ ಕುಳಿತಿದ್ದವರೆಲ್ಲರಿಗೂ ಮುಜುಗರವಾಗಿತ್ತು! ಪ್ರವಾದಿಯವರು ಏನು ಹೇಳಲಿದ್ದಾರೋ ಎಂಬುದನ್ನು ಊಹಿಸಲೂ ಸಾಧ್ಯವಾಗದೆ ಕಣ್ಣು ಪಿಳಿ ಪಿಳಿ ಮಾಡುತ್ತಿದ್ದರು. ಆಯಿಷಾಳ ಅಬ್ಬನ ಮುಖವಂತೂ ಕಪ್ಪಿಟ್ಟು ಹೋಗಿತ್ತು.

ಆದರೆ, ನನ್ನ ಅಬ್ಬ ಮಾತ್ರ ಎಂದಿನಂತೆ ಶಾಂತವಾಗಿಯೇ ತಮ್ಮ ಪಕ್ಕದಲ್ಲೇ ಕುಳಿತಿದ್ದ ಆಯಿಷಾಳ ಅಬ್ಬನತ್ತ ಬೊಟ್ಟು ಮಾಡುತ್ತಾ, 'ಮೆಹರ್ ಕೊಡಲು ನನ್ನ ಬಳಿ ಈಗೇನೂ ನಾಣ್ಯಗಳು ಉಳಿದಿಲ್ಲ. ಎರಡು ವರ್ಷಗಳ ಹಿಂದೆ ಆಯಿಷಾಳ ಜೊತೆಗೆ ವಿವಾಹ ಒಪ್ಪಂದವಾಗಿದ್ದ ದಿನದಂದು ನಿರ್ಧಾರವಾಗಿದ್ದ ಮೊತ್ತವನ್ನು ಇವರು ಸಾಲವಾಗಿ ಕೊಡುವುದಾದರೆ, ನಾಳೆಯೇ ನಿನ್ನ ಹೊಸ ಚಿಕ್ಕಮ್ಮಳನ್ನು ಕರೆದುಕೊಂಡು ಬರುವೆ ಆಯ್ತಾ? ಈಗ ಹೋಗು. ನಮಗಿಲ್ಲಿ ಬೇರೆ ವಿಷಯ ಮಾತನಾಡುವುದಿದೆ' ಎಂದುಬಿಟ್ಟಿದ್ದರಂತೆ.

ಅಷ್ಟರಲ್ಲಿ ತಟ್ಟಿ ಎಬ್ಬಿಸಿದವರಂತೆ ಎದ್ದು ನಿಂತ ಆಯಿಷಾಳ ಅಬ್ಬ, 'ನನ್ನಿಂದ ತಪ್ಪಾಗಿ ಬಿಟ್ಟಿದೆ. ಅ ದಿನದಂದು ವಧುದಕ್ಷಿಣೆಯಾಗಿ ನಿರ್ಧಾರವಾಗಿದ್ದ ಐನೂರು ದಿರ್ಹಮ್'ಗಳನ್ನು ಪ್ರವಾದಿಯವರಿಗೆ ಸಾಲವಾಗಿ ನೀಡುವೆನೆಂದು ವಾಗ್ದಾನ ಮಾಡುವೆ. ಇಲ್ಲಿ ಸೇರಿರುವ ಎಲ್ಲ ಸಹವರ್ತಿಗಳೇ ನನ್ನ ವಾಗ್ದಾನಕ್ಕೆ ಸಾಕ್ಷಿ' ಎಂದಿದ್ದರಂತೆ.

ಆಯಿಷಾಳ ಅಬ್ಬ ತಾವು ನೀಡಿದ್ದ ವಾಗ್ದಾನವನ್ನು ಪೂರೈಸಿದ ಮರುದಿನವೇ ನನ್ನಬ್ಬ ಮದುವೆಗೆ ಸಮ್ಮತಿ ನೀಡಿದ್ದರು.

ನನ್ನಬ್ಬನೇನೋ ಸಮ್ಮತಿಸಿದ್ದರು. ಆದರೆ ಅವರ ಹೆಂಡತಿಯಾಗಲಿರುವವಳು ಸಮ್ಮತಿ ಸೂಚಿಸಬೇಕಲ್ಲ?

ಆಯಿಷಾಳಿಂದ, ತನ್ನ ಸಮ್ಮತಿಯ ಬಗ್ಗೆ ಯಾವುದೇ ಪ್ರತಿಕ್ರಿಯೆ ಬರದಿದ್ದಾಗ ಅಚ್ಚರಿಯಿಂದ ಅವಳ ಮುಖ ದಿಟ್ಟಿಸಿದ್ದೆ. ಅವಳು ತಲೆ ತಗ್ಗಿಸಿ ತೊಡೆಯ ಮೇಲಿರಿಸಿ ಕೊಂಡಿದ್ದ ಬೊಂಬೆಯೊಂದರ ಬೆರಳುಗಳನ್ನು ಮತ್ತೆ ಮತ್ತೆ ಎಣಿಸುತ್ತಿರುವುದು ಕಾಣಿಸಿತ್ತು. ಪಕ್ಕಕ್ಕೆ ತಿರುಗಿ ಅಸ್ಮಾಳ ಮುಖ ನೋಡಿದರೆ, ಅವಳ ತುಟಿಗಳ ಸಂದಿಯಲ್ಲಿ ಎಂದಿನಂತೆಯೇ ನಗುಮೊಗ್ಗು ಇಣುಕುತ್ತಿತ್ತು!

'ನಿಕಾಹ್ ಶಾಸ್ತ್ರಗಳನ್ನು ನೆರವೇರಿಸಲಿರುವ ಒಬ್ಬರು ನಿನ್ನನ್ನು ಹೀಗೆಂದು ಪ್ರಶ್ನಿಸಲಿದ್ದಾರೆ. ಆಗ ನೀನು, ನನಗೆ ಸಮ್ಮತಿ ಇದೆ ಎಂದು ಹೇಳಬೇಕು' ಎಂದು ಆಯಿಷಾಳಿಗೆ ಸ್ವಲ್ಪವೇ ಹೊತ್ತಿನ ಹಿಂದೆ ಅವಳ ಉಮ್ಮ ಸೂಚನೆ ನೀಡಿದ್ದನ್ನು ನಾನೇ ಕೇಳಿಸಿಕೊಂಡಿದ್ದೆ. ಉಮ್ಮನ ಬಳಿ ಆಗ 'ಆಯಿತು' ಎಂದಿದ್ದವಳು ಈಗ ಮಾತ್ರ ತುಟಿ ಬಿಗಿದು ಕುಳಿತಿದ್ದಳು. ಆ ಹಿರಿಯರು ಅದೇ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿದಾಗಲೂ, ಆಯಿಷಾ ತನ್ನ ಮೌನ ಮುರಿದಿರಲಿಲ್ಲ. ಮದುಮಗಳ ಸಮ್ಮತಿಯನ್ನು ಪಡೆದುಕೊಂಡು ಹೋಗಲು ಬಂದಿದ್ದ ಆ ಹಿರಿಯರಿಗೆ ಆಯಿಷಾಳ ಮೌನದ ಕಾರಣ ತಿಳಿಯದೆ ಗೊಂದಲವಾಗಿತ್ತು. ಅವಳ ಸಮ್ಮತಿಯಿಲ್ಲದೆ ನಿಖಾದ ವಿಧಿವಿಧಾನಗಳು ಮುಂದುವರಿಯುವಂತಿರಲಿಲ್ಲ.

ಆಯಿಷಾಳ ಮೌನದಿಂದ ಗಾಬರಿಗೊಂಡ ನಾನು ಅಸ್ಮಾಳ ಮುಖವನ್ನು ಮತ್ತೊಮ್ಮೆ ನೋಡಿದ್ದೆ. ನಿನ್ನ ತಂಗಿ ಹೀಗೇಕೆ ಮಾಡುತ್ತಿದ್ದಾಳೆಂಬುದನ್ನು ಕಣ್ಣುಗಳಲ್ಲೇ ಪ್ರಶ್ನಿಸಿದ್ದೆ. ಆದರೆ, ಅಸ್ಮಾಳ ಮುಖದಲ್ಲಿ ಗೊಂದಲದ ಲವಲೇಶವೂ ಕಾಣಿಸಿದ್ದಿರಲಿಲ್ಲ. ತಂಗಿಯ ಮೌನದ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದೆ ಆರಾಮವಾಗಿ ಕುಳಿತಿದ್ದಳು. ಆದರೆ, ನನಗೆ ತಡೆದುಕೊಳ್ಳಲಾಗಲಿಲ್ಲ. ಅಸ್ಮಾಳ ಕಿವಿಯೊಳಗೆ ಮೆತ್ತನೆ ಮಾತು ತೂರಿಸಿದೆ.

'ಸಮ್ಮತಿ ಇದೆ ಎಂದು ಉತ್ತರಿಸಲು ನಿನ್ನ ತಂಗಿಗೆ ಹೇಳು.'

ಅಸ್ಮಾ ಮೆಲ್ಲನೆ ನಕ್ಕಳು. 'ಹೆದರಬೇಡಿ ಅಕ್ಕಾ. ನನ್ನ ಮುದ್ದು ತಂಗಿ ಎಲ್ಲರಂಥವಳಲ್ಲ. ಎಲ್ಲರಂಥವರಲ್ಲದ ಗಂಡನ್ನೇ ಮದುವೆಯಾಗಲಿರುವವಳು. ಅವಳು ಬಲು ಜಾಣೆ.





ಅವಳು ಆಡುತ್ತಿರುವ ಬೊಂಬೆಗಳನ್ನು ನೋಡಿಕೊಂಡು ಅವಳ ಬುದ್ಧಿಶಕ್ತಿಯನ್ನು ಅಳೆಯಬೇಡಿ. ಅಲ್ಲಾಹು ನಿಮ್ಮಬ್ಬನ ಮೂಲಕ ಪ್ರಕಟಿಸುತ್ತಿರುವ ಅಂತಿಮಸತ್ಯದ ಸಂದೇಶಗಳನ್ನೆಲ್ಲ ಕಂಠಪಾಟ ಮಾಡಿಕೊಂಡಿರುವ ಹೆಣ್ಣು ಅವಳು. ಸಕಾರಣವಿಲ್ಲದೆ ಅವಳು ಏನನ್ನೂ ಮಾಡುವವಳಲ್ಲ. ಅವಳ ಮೌನದ ಹಿಂದೆ ಯಾವುದಾದರೊಂದು ಬಲವಾದ ಕಾರಣವಿದ್ದೇ ಇರುತ್ತದೆ. ಮುಂದೆ ಏನಾಗಲಿದೆಯೆಂಬುದನ್ನು ನೋಡಿಯೇ ಬಿಡುವ' ಅಸ್ಮಾ ನನಗೆ ಧೈರ್ಯ ತುಂಬಿದ್ದಳು.

'ಅಬೂಬಕರ್ ಮಗಳಾಗಿರುವ ಆಯಿಷಾ ಎಂಬ ಹೆಸರಿನ ನಿನಗೆ, ಮರ್ಹೂಮ್ ಅಬ್ದುಲ್ಲಾರ ಮಗ ಮುಹಮ್ಮದರ ಜೊತೆಗೆ, ಐನೂರು ದಿರ್ಹಮ್ ಮೆಹರ್'ಗೆ ಪ್ರತಿಯಾಗಿ ನಿಕಾಹ್ ಮಾಡಿಕೊಳ್ಳಲು ಒಪ್ಪಿಗೆಯಿದೆಯೆ?' ಆ ಹಿರಿಯರು ಮೂರನೇ ಬಾರಿಯೂ ಅದೇ ಪ್ರಶ್ನೆಯನ್ನು ಆಯಿಷಾಳಿಗೆ ಮಾತ್ರವಲ್ಲ, ಅಲ್ಲಿ ಸೇರಿದ್ದವರಿಗೆಲ್ಲ ಕೇಳಿಸುವಂತೆ ಪ್ರಶ್ನಿಸಿದ್ದರು. ನಾವೆಲ್ಲರೂ ನಮ್ಮ ಮನದೊಳಗೇ 'ಹೂಂ' ಅಂದಿದ್ದೆವಾದರೂ, ಆಯಿಷಾ ಮಾತ್ರ ತುಟಿ ತೆರೆದಿರಲಿಲ್ಲ. ರೋಸಿಹೋದ ಆ ಹಿರಿಯರು, ತಮ್ಮ ಅಸಹಾಯಕತೆಗೆ ನಾಚಿಕೊಂಡವರಂತೆ, ಮುಂಡಾಸಿನ ವಸ್ತ್ರದಿಂದ ಮುಖ ಒರಸಿಕೊಳ್ಳುತ್ತಾ ಹೊರಗೆ ಹೋಗಿದ್ದರು.

ಹಾಗಾದರೆ ಈ ಮದುವೆ ಮುರಿದುಬೀಳುವುದೆ? ನಾನಂತೂ ಹೆದರಿಹೋಗಿದ್ದೆ.

ಕಳೆದ ಒಂದು ವಾರದಿಂದಲೂ ಅಸ್ಮಾಳ ಅಬ್ಬನ ಮನೆಯಲ್ಲಿ ಮದುವೆ ತಯಾರಿ ನಡೆಯುತ್ತಿರುವುದನ್ನು ಗಮನಿಸಿದ್ದವಳು ನಾನು. ಏನಿಲ್ಲವೆಂದರೂ ಒಂದು ಮೂವತ್ತು ಮಂದಿಗೆ ಹೊಟ್ಟೆ ತುಂಬುವಷ್ಟು ಆಹಾರ ಸಿದ್ಧವಾಗಿತ್ತು. ಮದುಮಗಳ ಒಪ್ಪಿಗೆಯ ಬಳಿಕ, ಹೊರಗೆ ನಿಕಾಹ್ ವಿಧಿಗಳೆಲ್ಲ ನಡೆಯಲಿದ್ದವು. ಅದೇನೂ ಬಹಳ ಹೊತ್ತಿನ ಶಾಸ್ತ್ರವಲ್ಲ. ಆ ಬಳಿಕ ಔತಣ ಕೂಟ. ಆದರೆ, ಆಯಿಷಾಳ ಸಮ್ಮತಿಯಿಲ್ಲದಿದ್ದರೆ ಯಾವುದೂ ನಡೆಯುವಂತಿರಲಿಲ್ಲ.

ಏನಾಗಬಹುದು ಮುಂದೆ?

ಹಿರಿಯರು ಹೊರಗೆ ಹೋಗುತ್ತಿರುವಂತೆಯೇ ಧಾವಿಸಿ ಬಂದ ಆಯಿಷಾಳ ಉಮ್ಮ, ನಡು ಬಗ್ಗಿಸಿ ಮಗಳ ಎರಡೂ ಭುಜಗಳನ್ನು ಹಿಡಿದುಕೊಂಡು, 'ಯಾಕೆ ಮಗಳೇ.. ಹೀಗೇಕೆ ಮಾಡಿದೆ?' ಎಂದು ಆತಂಕದಿಂದಲೇ ಪ್ರಶ್ನಿಸಿದ್ದರು. ಅವರ ಕಣ್ಣುಗಳು ಅದಾಗಲೇ ಮಂಜಾಗಿದ್ದವು.

ಆಯಿಷಾ ಉತ್ತರಿಸಲಿಲ್ಲ.

'ಯಾಕೆ ಹೇಳು' ಉಮ್ಮ ಅಳಲಾರಂಭಿಸಿದ್ದರು.

'ನಾನೇನು ತಪ್ಪು ಮಾಡಿದೆ ಉಮ್ಮ? ಏನನ್ನು ಮಾಡಬೇಕಾಗಿತ್ತೋ ಅದನ್ನೇ ಮಾಡಿರುವೆ.' ಆಯಿಷಾ ಕಡ್ಡಿ ಮುರಿದಂತೆ ಪ್ರತಿಕ್ರಿಯಿಸಿದ್ದಳು.

'ಏನು ಸರಿಯಾದುದನ್ನು ಮಾಡಿದೆ? ಮದುವೆಗೆ ಸಮ್ಮತಿ ಹೇಳಲಿಲ್ಲವೇಕೆ?' ಉಮ್ಮ ಸಿಡುಕಿದ್ದರು.

ಆಯಿಷಾಳ ಮುಖದಲ್ಲಿದ್ದ ತುಂಟ ನಗು ಇದ್ದಕ್ಕಿದ್ದಂತೆ ಆರಿಹೋಗಿತ್ತು. ತಲೆಯೆತ್ತಿ ಮೊದಲು ಉಮ್ಮನನ್ನು ಅಳೆಯುವಂತೆ ನೋಡಿದಳು; ಬಳಿಕ, ಎದುರಿಗೆ ಕಾಣಿಸಿದ ಎಲ್ಲರನ್ನೂ ತಿವಿಯುವಂತೆ ಪ್ರಶ್ನಿಸಿದ್ದಳು, 'ಮದುವೆಯ ಹೆಣ್ಣು ಕನ್ಯೆಯಾಗಿದ್ದರೆ, ಆಕೆಯ ಮೌನವನ್ನೇ ಸಮ್ಮತಿಯೆಂದು ತೀರ್ಮಾನಿಸಬೇಕೆಂಬ ಅಲ್ಲಾಹುವಿನ ಆದೇಶವನ್ನು ಕನ್ಯೆಯಾಗಿರುವ ನಾನು ಕಡೆಗಣಿಸಬೇಕೆ? ಕನ್ಯೆಯೊಬ್ಬಳು ತನ್ನ ಅಸಮ್ಮತಿಯನ್ನು ಸ್ಪಷ್ಟ ಮಾತುಗಳಲ್ಲಿ ವ್ಯಕ್ತಪಡಿಸಿದರೆ ಮಾತ್ರ ಅದನ್ನು ನಿರಾಕರಣೆಯೆಂದು ಪರಿಗಣಿಸ ಬೇಕಲ್ಲವೆ? ಈ ಹಿಂದೆ ಮದುವೆಯಾಗಿ ವಿಧವೆಯಾಗಿರುವ ಅಥವಾ ಗಂಡನಿಂದ ತ್ಯಜಿಸಲ್ಪಟ್ಟ ಹೆಣ್ಣು ಮಾತ್ರ, ತನ್ನ ಸಮ್ಮತಿ ಅಥವಾ ಅಸಮ್ಮತಿಯನ್ನು ಸ್ಪಷ್ಟ ಮಾತುಗಳಲ್ಲಿ ತಿಳಿಸಬೇಕೆಂಬ ನಿಯಮಗಳನ್ನು ನಾನು ನಿಮಗೆ ನೆನಪಿಸಬೇಕೆ?'

ತಮ್ಮ ಮಗಳಿಂದ ಮದುವೆಗೆ ಸಮ್ಮತಿ ಪಡೆಯಲು ಯುದ್ಧಕ್ಕೆ ಸಿದ್ಧರಾಗಿರುವ ವರಂತೆ ತಲೆಯೆತ್ತಿ ಠೀವಿಯಲ್ಲಿ ಮನೆಯೊಳಗೆ ಹೋಗಿದ್ದ ಆ ಹಿರಿಯರು, ಪೇಲವ ಮುಖದೊಂದಿಗೆ ತಲೆತಗ್ಗಿಸಿ ಕತ್ತು ತಿರುಗಿಸಿ ಬರುವುದನ್ನು ಕಾಣುತ್ತಿದ್ದಂತೆಯೇ ಅಸ್ಮಾಳ ಅಬ್ಬನ ರಕ್ತವೆಲ್ಲ ಕುದಿದಿದ್ದಿರಬಹುದು. 'ಮದುಮಗಳು ಸಮ್ಮತಿಸಲು ಹಿಂದೆ ಮುಂದೆ ನೋಡುತ್ತಿದ್ದಾಳೆ. ಬಾಯಿ ಬಿಟ್ಟು ಏನನ್ನೂ ಹೇಳುವುದಿಲ್ಲ...' ಎನ್ನುತ್ತಾ ಆ ಹಿರಿಯರು ಮಾತು ಮುಂದುವರಿಸುತ್ತಿದ್ದಂತೆಯೇ, ಕುಳಿತಲ್ಲಿಂದ ಎದ್ದ ಆಯಿಷಾಳ ಅಬ್ಬ ಬಿರುಗಾಳಿಯಂತೆ ಮನೆಯೊಳಗೆ ನುಗ್ಗಿದ್ದರು.

ಆದರೆ, ಹೊಸ್ತಿಲು ದಾಟುತ್ತಿರುವಂತೆಯೇ ಅವರಿಗೆ ಆಯಿಷಾಳ ದಿಟ್ಟ ಮಾತುಗಳು ಕೇಳಿಸಿಬಿಟ್ಟಿದ್ದವು!

ಆಕೆಯ ಒಂದೊಂದೇ ಪದಗಳನ್ನು ಆಲಿಸುತ್ತಾ ದಿಗ್ಭ್ರಮೆಗೊಳ್ಳುತ್ತಿದ್ದ ಅವರ ' ಕಣ್ಣುಕಟ್ಟೆಗಳನ್ನು ಒಡೆದ ಕಣ್ಣೀರು ಧಾರೆಯಾಗಿ ಇಳಿದು ಅವರ ನೀಳವಾದ ಗಡ್ಡವನ್ನು ತೊಯ್ದುಬಿಟ್ಟಿತ್ತು!

ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದ ಅವರು, ಕಾಲೆಳೆದುಕೊಂಡು ತಮ್ಮ ಮುದ್ದಿನ ಮಗಳ ಎದುರು ಬಂದು ಕುಕ್ಕರುಗಾಲಲ್ಲಿ ಕುಳಿತರು. ತಮ್ಮ ಪ್ರೀತಿಯ ಮಗಳ ತಲೆ ನೇವರಿಸಿದರು. ನಮ್ಮನ್ನೆಲ್ಲ ನೋಡುತ್ತಾ ಜೋರಾಗಿ ಬಿಕ್ಕಳಿಸತೊಡಗಿದರು. ನಮ್ಮೆಲ್ಲರ ಕಣ್ಣಂಚುಗಳೂ ತೇವವಾಗಿದ್ದವು.

'ನಾವು ಯಾರೂ ನಿನ್ನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಮಗಳೇ. ಅಲ್ಲಾಹುವಿನ ಅಂತಿಮ ಸಂದೇಶ ಪ್ರಕಟವಾದ ಬಳಿಕ ನಮ್ಮ ಮನೆಯಲ್ಲಿ ಹುಟ್ಟಿದ ಮೊತ್ತಮೊದಲ ಸತ್ಯವಿಶ್ವಾಸಿ ನೀನೆಂಬುದನ್ನೇ ನಾವು ಮರೆತುಬಿಟ್ಟೆವು. ಅಲ್ಲಾಹುವಿನ





ಅಂತಿಮಸತ್ಯದ ಮೇಲೆ ನೀನಿರಿಸಿರುವ ಅಚಲ ವಿಶ್ವಾಸದೆದುರು ನಾವೆಲ್ಲ ಸೋತೆವು ಮಗಳೇ' ಎನ್ನುತ್ತಾ ಮತ್ತೆ ಮತ್ತೆ ಬಿಕ್ಕಳಿಸತೊಡಗಿದರು. ಅವರ ಬಿಕ್ಕಳಿಕೆಯನ್ನು ಹೊರತು ಪಡಿಸಿದರೆ ಕೋಣೆಯೊಳಗೆ ಸೂಜಿ ಬಿದ್ದರೂ ಕೇಳಿಸುವಷ್ಟು ಮೌನ ಆವರಿಸಿತ್ತು.

ನನ್ನ ತೊಡೆಯನ್ನು ಗುಟ್ಟಾಗಿ ತಿವಿದ ಅಸ್ಮಾ, 'ಹೇಗೆ ನನ್ನ ತಂಗಿ?' ಎಂಬಂತೆ ನಕ್ಕಿದ್ದಳು. ಮಲತಾಯಿಯಾಗಿ ನಮ್ಮ ಮನೆಗೆ ಬರಲಿರುವ ಆ ಪುಟ್ಟ ಹುಡುಗಿಯನ್ನು ಮೊತ್ತ ಮೊದಲ ಬಾರಿಗೆ ನೋಡುವವಳಂತೆ, ಗೌರವಾದರಗಳಿಂದ ಕಾಣುತ್ತಾ ಬಹಳ ಹೊತ್ತು ಹಾಗೆಯೇ ಕುಳಿತುಬಿಟ್ಟಿದ್ದೆ.

ನಿಕಾಹದ ವಿಧಿಗಳೆಲ್ಲ ಮುಗಿಯುತ್ತಿರುವಂತೆಯೇ ಊಟದ ಗೌಜಿ ಶುರುವಾಯಿತು. ನಮಗೆಲ್ಲ ಮನೆ ಹಿಂಭಾಗದಲ್ಲಿ ಊಟದ ಏರ್ಪಾಡಾಗಿದ್ದರೆ, ಗಂಡಸರಿಗೆಲ್ಲ ಅಂಗಳದಲ್ಲಿ ಡೇರೆಗಳ ವಸ್ತ್ರಗಳನ್ನು ಜೋಡಿಸಿ ಬಿಸಿಲು ಮರೆಮಾಡಿದ್ದ ಚಪ್ಪರದಲ್ಲಿ ಆಯಿಷಾಳ ಅಬ್ಬನ ಉಸ್ತುವಾರಿಯಲ್ಲಿ ಔತಣ ನಡೆಯುತ್ತಿತ್ತು. 'ಸಫ್ವಾನ್ ಇಲ್ಲಿ ಬಾ, ಸಫ್ವಾನ್ ಈ ಖಾಲಿ ತಟ್ಟೆಯನ್ನು ಒಳಗೆ ತೆಗೆದುಕೊಂಡು ಹೋಗಿ ಮಾಂಸ ತುಂಬಿಸಿಕೊಂಡು ಬಾ. ಸಫ್ವಾನ್..' ಅಬ್ಬನ ಗಟ್ಟಿ ಧ್ವನಿ ಹಿತ್ತಲಿನವರೆಗೂ ಕೇಳಿಸುತ್ತಿತ್ತು.

–೨–

ಸಂಜೆಯಾಗುತ್ತಿದ್ದಂತೆ ತನ್ನೆರಡೂ ಕೈಗಳಲ್ಲಿ ಐದಾರು ಬೊಂಬೆಗಳನ್ನು ಅವಚಿ ಹಿಡಿದುಕೊಂಡು ನಡೆದು ಬರುತ್ತಿದ್ದ 'ಪ್ರವಾದಿಪತ್ನಿ'ಯ ಉಡುಪು ನೆಲಕ್ಕೆ ತಾಗದಂತೆ, ಜಾಗ್ರತೆಯಾಗಿ ಎತ್ತಿ ಹಿಡಿದುಕೊಂಡು ನಮ್ಮ ಮನೆಗೆ ಅಸ್ಮಾ ಕೂಡಾ ಬಂದಿದ್ದಳು.

ಅಸ್ಮಾ ಬಾಲ್ಯದಿಂದಲೇ ನನ್ನ ಆತ್ಮೀಯ ಗೆಳತಿ.

ಮದೀನಾಕ್ಕೆ ಬಂದ ಆನಂತರದ ದಿನಗಳಲ್ಲಂತೂ ನನ್ನ ಅಂತರಂಗದ ಗೆಳತಿಯೇ ಆಗಿಬಿಟ್ಟಿದ್ದಳು. ವಾರಕ್ಕೆರಡು ಬಾರಿ ಅವಳ ಮನೆಗೆ ನಾನು ಹೋಗುವುದೂ, ವಾರಕ್ಕೆರಡು ಬಾರಿ ನಮ್ಮ ಮನೆಗೆ ಅವಳು ಬರುವುದೂ ನಡೆದೇ ಇತ್ತು. ಮಕ್ಕಾದಲ್ಲಿರುವಾಗಲಾದರೆ ನಮ್ಮ ಮನೆಗೆ ತೀರಾ ಹತ್ತಿರದಲ್ಲೇ ಅವಳ ಮನೆಯಿದ್ದದ್ದು. ಜೋರು ಮಳೆ ಸುರಿಯುತ್ತಿದ್ದರೂ, ತಲೆಯ ಮೇಲೊಂದು ಚಾದರ ಎಳೆದುಕೊಂಡು ಇಡಿಯಾಗಿ ಒದ್ದೆಯಾಗದೆಯೇ ಅವಳ ಮನೆ ತಲುಪಬಹುದಾಗಿತ್ತು. ಅಷ್ಟು ಹತ್ತಿರವಿತ್ತು ಮಕ್ಕಾದ ಅವಳಬ್ಬನ ದೊಡ್ಡ ಮನೆ. ಆದರೆ, ಇಲ್ಲಿ ಮದೀನಾದಲ್ಲಿ ಹಾಗಿರಲಿಲ್ಲ. ಸ್ವಂತ ಮನೆ, ಕಾರುಬಾರುಗಳನ್ನೆಲ್ಲ ಮಕ್ಕಾದಲ್ಲೇ ಬಿಟ್ಟುಬಂದಿದ್ದ ಗಂಡ ಝುಬೈರ್ ಬಿನ್ ಅವ್ವಾಮ್ ಜೊತೆಗೆ ಒಂದು ಚಿಕ್ಕ ಮನೆಯಲ್ಲಿ ಅಸ್ಮಾ ಬದುಕು

ಮುಂದುವರಿಸಿದ್ದಳು. ಆದರೂ ತನ್ನ ಕಷ್ಟಗಳನ್ನು ಯಾರಿಗೂ ಗೊತ್ತಾಗದಂತೆ, ನಗುಮುಖದ ಪರದೆಯೊಳಗೆ ತನ್ನ ಅಸಹಾಯಕತೆಯನ್ನು ಬಚ್ಚಿಟ್ಟುಕೊಳ್ಳುತ್ತಿದ್ದಳು.

ಹೆಣ್ಣು ಜಾತಿಗೇ ಅಪವಾದವೆಂಬಂತೆ, ಅವಳಿಗೆ ರೊಟ್ಟಿ ತಟ್ಟಲು ಬರುತ್ತಿರಲಿಲ್ಲ. ಅದೆಷ್ಟು ಕಲಿಸಿದರೂ ಪೂರ್ಣಚಂದ್ರನಂತಿರುವ ಒಂದೇ ಒಂದು ರೊಟ್ಟಿಯನ್ನು ತಟ್ಟಿ ಬೇಯಿಸಲು ಅವಳಿಂದ ಸಾಧ್ಯವಾಗುತ್ತಿರಲಿಲ್ಲ. ಪರಿಸರದ ಎಲ್ಲ ಹೆಂಗಸರೂ ಅಸ್ಮಾಳನ್ನು ಬಹಳ ಇಷ್ಟಪಡುತ್ತಿದ್ದರು. ಅಸ್ಮಾಳ ಗಂಡ ಝುಬೈರ್ ಸ್ವಲ್ಪ ಒರಟ ಮತ್ತು ಹೆಚ್ಚು ಮುಂಗೋಪಿಯೆಂಬುದು ಗೊತ್ತಾದ ಬಳಿಕವಂತೂ ಅಸ್ಮಾಳ ಮನೆಗೆ ಅಗತ್ಯವಿರುವಷ್ಟು ರೊಟ್ಟಿ ತಟ್ಟುವ ಕೆಲಸಗಳನ್ನು ನೆರೆಕರೆಯವರು ತಮ್ಮೊಳಗೆ ಹಂಚಿಕೊಂಡಿದ್ದರು. ಖರ್ಜೂರದ ಬೀಜಗಳನ್ನು ಕುಟ್ಟಿ ಪುಡಿ ಮಾಡಿ ಕುದುರೆಗಳಿಗೆ ಆಹಾರ ತಯಾರಿಸುವ ಕೆಲಸವನ್ನು ಮಾತ್ರ ಅಸ್ಮಾ ಬಹಳ ಅಚ್ಚುಕಟ್ಟಿನಿಂದ ಮಾಡುತ್ತಿದ್ದಳು.

ಝುಬೈರ್ ಬರಿಗೈಯ್ಯಲ್ಲಿ ಮದೀನಾಕ್ಕೆ ವಲಸೆ ಬಂದಿರುವುದು ನನ್ನ ಅಬ್ಬನಿಗೂ ತಿಳಿದಿತ್ತು. ಅವರ ಬದುಕಿಗೆ ದಾರಿಯಾಗಲೆಂದು, ಮನೆಯಿಂದ ಸುಮಾರು ಎರಡು ಮೈಲು ದೂರದಲ್ಲಿದ್ದ ಚೆನ್ನಾಗಿ ಫಸಲು ನೀಡುವ ಖರ್ಜೂರದ ಸಣ್ಣ ತೋಟ ವೊಂದನ್ನು ಝುಬೈರ್‌ಗೆ ಉಡುಗೊರೆಯಾಗಿ ನೀಡಿದ್ದರು. ಆ ತೋಟದಿಂದ ಖರ್ಜೂರದ ಹಣ್ಣುಗಳನ್ನು ಕಿತ್ತು ಮನೆಗೆ ಹೊತ್ತು ತರುವ ಹೊಣೆ ಅಸ್ಮಾಳದ್ದು. ಮದುವೆಗೆ ಮೊದಲು ಅಬ್ಬನ ಮನೆಯಲ್ಲೂ, ಮದುವೆಯಾದ ಬಳಿಕ ಗಂಡನ ಮನೆಯಲ್ಲೂ ಆಳು ಕಾಳುಗಳ ಜೊತೆಗೆ ಸುಖ ಸಂಪತ್ತಿನೊಂದಿಗೆ ಸಂತಸದಿಂದಲೇ ಬೆಳೆದಿದ್ದ ಅಸ್ಮಾಳಿಗೆ ಭಾರವಾದ ಬುಟ್ಟಿಯನ್ನು ಹೊತ್ತುಕೊಂಡು ಅಷ್ಟು ದೂರದಿಂದ ನಡೆದುಕೊಂಡು ಬರುವುದು ಬಲು ಪ್ರಯಾಸದ ಕೆಲಸವೇ ಆಗಿತ್ತು. ಆದರೂ ಆಕೆ ಆ ಕೆಲಸವನ್ನೂ ಯಾವುದೇ ಗೊಣಗಾಟವಿಲ್ಲದೆ ನಿರ್ವಹಿಸುತ್ತಿದ್ದಳು.

ಒಂದು ನಡು ಮಧ್ಯಾಹ್ನದ ಬಿಸಿಲಲ್ಲಿ, ಖರ್ಜೂರದ ಬೀಜಗಳ ಬುಟ್ಟಿಯ ಭಾರಕ್ಕೆ ನಲುಗುತ್ತಾ ಕಾಲೆಳೆದುಕೊಂಡು ಬರುತ್ತಿದ್ದ ಅಸ್ಮಾಳನ್ನು ಅದೇ ದಾರಿಯಲ್ಲಿ ಬರುತ್ತಿದ್ದ ನನ್ನಬ್ಬ ಕಂಡರಂತೆ. ಅವಳ ಕಷ್ಟವನ್ನು ಕಾಣಲಾಗದೆ, ಅವಳ ಹತ್ತಿರ ಹೋಗಿ ಕುದುರೆಯ ಮೇಲೆ ಬುಟ್ಟಿಯಿರಿಸಿ ತಮ್ಮ ಜೊತೆಗೆ ಬರುವಂತೆ ಹೇಳಿದರೆ, ಅವಳು ನಯವಾಗಿಯೇ ನಿರಾಕರಿಸಿದ್ದಳಂತೆ!

ನಾಲ್ಕೈದು ದಿನಗಳ ಬಳಿಕ ನನ್ನನ್ನು ಕರೆದ ಅಬ್ಬ ಈ ವಿಷಯ ತಿಳಿಸಿದ್ದರು. ಇಡೀ ಮದೀನಾವೇ ಪ್ರವಾದಿಯೆಂದು ಗೌರವಿಸುವ ನನ್ನ ಅಬ್ಬನನ್ನೂ ಅನುಮಾನಿಸುವಷ್ಟು ಸಣ್ಣ ಮನಸ್ಸಿನವಳೇ ನನ್ನ ಗೆಳತಿ? ಯೋಚಿಸಿದಾಗ ದುಃಖವೇ ಉಕ್ಕುಕ್ಕಿ ಬಂದಿತ್ತು. ಸಿಟ್ಟನ್ನು ತಡೆದುಕೊಳ್ಳಲಾಗದೆ ಮರುದಿನ ಮಧ್ಯಾಹ್ನವೇ ಅವಳ ಮನೆಗೆ ಓಡಿದ್ದೆ. ಅವಳು ನನ್ನ ಅಂತರಂಗದ ಗೆಳತಿ ಎಂಬುದನ್ನೂ ಮರೆತು ನಿಷ್ಠುರವಾಗಿಯೇ 'ಹೀಗೇಕೆ ಮಾಡಿದೆ?' ಎಂದು ಸ್ವಲ್ಪ ಒರಟಾಗಿಯೇ ಪ್ರಶ್ನಿಸಿದ್ದೆ. ನನ್ನ





ಮಾತುಗಳೆಲ್ಲವನ್ನೂ ಶಾಂತವಾಗಿಯೇ ಆಲಿಸಿದ ಅಸ್ಮಾ, ಮೊತ್ತ ಮೊದಲ ಬಾರಿಗೆ ನಗುವಿಲ್ಲದ ವಿಷಾದದ ಸ್ವರದಲ್ಲಿ ಉತ್ತರಿಸಿದ್ದಳು.

'ಝುಬೈರ್ ಹೆಂಡತಿಯಾಗಿರುತ್ತಿದ್ದರೆ ನೀವೂ ನಿರಾಕರಿಸುತ್ತಿದ್ದಿರಿ. ಜೊತೆಗೆ ಬರಲು ನಿಮ್ಮನ್ನು ಕರೆಯುತ್ತಿರುವವರು ನಿಮ್ಮ ಅಬ್ಬನೇ ಆಗಿದ್ದರೂ....'

ಸಿಡಿಲೆರಗಿದಂತಾಗಿತ್ತು ನನಗೆ. ಒಂದೇ ಮಾತಿನಲ್ಲಿ ಅಸ್ಮಾ ಎಲ್ಲವನ್ನೂ ವಿವರಿಸಿದ್ದಳು.

ಅಸ್ಮಾಳನ್ನು ಜೋರಾಗಿ ಅಪ್ಪಿಕೊಂಡು ಹೇಳಿದ್ದೆ, 'ನನ್ನನ್ನು ಕ್ಷಮಿಸು ಗೆಳತಿ.'

ಅಸ್ಮಾಳ ಗಂಡ ಝುಬೈರ್ ಮಹಾ ಒರಟ ಮಾತ್ರವಲ್ಲ, ಸಣ್ಣ ಪುಟ್ಟ ತಪ್ಪುಗಳಿಗೂ ಬಾಸುಂಡೆ ಬರುವಂತೆ ಹೊಡೆಯುತ್ತಿದ್ದನೆಂಬುದೂ ಗೊತ್ತಿತ್ತು. ಇವೆಲ್ಲವುಗಳ ಜೊತೆಗೆ ಅವನು ಮತ್ತೊಂದು ಮದುವೆಯಾಗಲು ತಯಾರಿ ನಡೆಸುತ್ತಿದ್ದಾನೆಂಬುದೂ ತಿಳಿದಿತ್ತು. ಆದರೆ, ಅಸ್ಮಾಳಂತಹ ಹೆಂಡತಿಯ ಚಾರಿತ್ರ್ಯವನ್ನೂ ಅನುಮಾನಿಸುವಷ್ಟು ದುಷ್ಟನೆಂಬುದನ್ನು ಊಹಿಸಿರಲಿಲ್ಲ.

'ಹೆಣ್ಣಾಗಿ ಹುಟ್ಟಿದ ಬಳಿಕ ಇದನ್ನೆಲ್ಲ ಅನುಭವಿಸಲೇ ಬೇಕಲ್ಲವೆ?' ಕಣ್ಣೊರಸಿ ಕೊಳ್ಳುತ್ತಲೇ ನಕ್ಕಿದ್ದಳು ಅಸ್ಮಾ.

ಅವಳನ್ನು ಮತ್ತೊಮ್ಮೆ ತಬ್ಬಿಕೊಂಡು ಅತ್ತಿದ್ದೆ.

ನಾಡಿಗೇ ಆದರ್ಶ ಪುರುಷ ನನ್ನಬ್ಬ. ಅಲ್ಲಾಹುವಿನ ಅಂತಿಮಪ್ರವಾದಿ. ನನ್ನಬ್ಬನ ಮೂಲಕ ಅಲ್ಲಾಹು ತಿಳಿಸುವ ಅಂತಿಮಸತ್ಯ ಸಂದೇಶಗಳನ್ನು ಅನುಮಾನಿಸುವವರಿಲ್ಲ; ಪ್ರಶ್ನಿಸುವವರು ಇಲ್ಲವೇ ಇಲ್ಲ. ಮುಟ್ಟಿ ಕೈಮುತ್ತಿಕ್ಕಲು ಹಾತೊರೆಯುವವರೇ ಎಲ್ಲ. ಪ್ರವಾದಿಯ ನೆರಳು ತಮ್ಮ ಮೇಲೆ ಬಿದ್ದರೆ ಸಾಕೆಂದು ಬಳಿಗೋಡಿ ಬರುವವರೇ ಅಧಿಕ. ಎಲ್ಲವೂ ನಿಜ. ನಾಲ್ಕು ಮಂದಿಯ ಎದುರು 'ಪ್ರವಾದಿಪುತ್ರಿ' ಎಂದು ಕರೆಸಿಕೊಳ್ಳಲು ನನಗೂ ಹೆಮ್ಮೆ.

ವಾರವೊಂದರ ಬಳಿಕದ ಒಂದು ದಿನ ಅಸ್ಮಾಳ ಮನೆಗೆ ಹೊರಟಿದ್ದೆ.

ಮನೆ ಜಗಲಿಯಲ್ಲಿ ಮೊಣಕಾಲು ಮಡಚಿ ಒಂಟಿಯಾಗಿ ಕುಳಿತಿದ್ದ ಅಸ್ಮಾಳನ್ನು ಕಂಡಾಗ ಗಾಬರಿಯಾಗಿತ್ತು. 'ಏನಾಯಿತೇ ಅಸ್ಮಾ ನಿನಗೆ?' ಅಂಗಳದ ಬದಿಯಿಂದಲೇ ಕೂಗುತ್ತಾ ಅವಳ ಬಳಿಗೆ ದಾಪುಗಾಲು ಹಾಕಿದ್ದೆ. ನನ್ನತ್ತ ಅರೆಕ್ಷಣ ನೋಡಿದಳಾದರೂ, ಮತ್ತೆ ಮೊದಲಿನಂತೆಯೇ ಮೊಣಕಾಲ ಸಂದಿಯಲ್ಲಿ ಮುಖ ಹುದುಗಿಸಿದ್ದಳು. ಮತ್ತೊಮ್ಮೆ ಕೇಳಿದ್ದೆ, 'ಏನಾಯಿತು ಅಸ್ಮಾ? ಈವತ್ತೂ ಮತ್ತೆ ಹೊಡೆದರೆ? ನನ್ನಲ್ಲೂ ಹೇಳಬಾರದೆ?'

'ಅವರ ಹೊಡೆತವನ್ನಾದರೂ ಸಹಿಸಿಕೊಳ್ಳುತ್ತಿದ್ದೆ ಅಕ್ಕಾ. ಅದು ನನಗೆ ಹೊಸ ದೇನಲ್ಲ' ಎನ್ನುತ್ತಾ, ಇನ್ನೊಂದು ಮೂಲೆಯಲ್ಲಿ ಕಾಣಿಸುತ್ತಿದ್ದ ಬುಟ್ಟಿಯೊಂದರತ್ತ ಬೊಟ್ಟು ಮಾಡಿದ್ದಳು. ನಾನು ನೋಡಿದೆ. ಬಿಳಿ ವಸ್ತ್ರದಿಂದ ಮುಚ್ಚಿಕೊಂಡಿದ್ದ ಬುಟ್ಟಿ ಅದು. ಅದರ ಬಳಿಗೆ ಹೋಗಲು ಯಾಕೋ ಭಯವಾಗಿತ್ತು.

‘ಏನದು?’ ಎನ್ನುತ್ತಾ, ಅವಳ ಪಕ್ಕದಲ್ಲೇ ಕುಳಿತುಕೊಂಡು ಅವಳ ತೋಳು ಸವರಿದೆ.

‘ಉಮ್ಮಾ...’ ಎಂದವಳೇ ಬಿಕ್ಕಿ ಬಿಕ್ಕಿ ಅಳತೊಡಗಿದಳು.

‘ಏನಾಯಿತು ಹೇಳೆ?’ ಅವಳ ಭುಜ ಅಲುಗಾಡಿಸುತ್ತಾ ಪ್ರಶ್ನಿಸಿದ್ದೆ.

‘ನನ್ನ ಉಮ್ಮಾ..’ ಎಂದವಳು ಮತ್ತೆ ಬಿಕ್ಕಳಿಸತೊಡಗಿದಾಗ ನನ್ನ ತಾಳ್ಮೆಯ ಗಡಿಗೆ ಒಡೆದುಬಿಟ್ಟಿತ್ತು.

‘ಹೇಳುತ್ತಿಯಾ... ಅಥವಾ ನಾನು ಬಂದ ದಾರಿಯಲ್ಲೆ ಮರಳಿ ಹೋಗಲೆ?’

‘ಉಮ್ಮ ಬಂದಿದ್ದರು.’ ಮೆತ್ತಗೆ ಗುಣುಗಿದ್ದಳು.

‘ಏನು! ನಿನ್ನ ಉಮ್ಮ ಬಂದಿದ್ದರೆ! ಅವರು ಬಂದಿದ್ದರೆ ಅಳುವುದು ಯಾಕೆ? ಸಂತೋಷಪಡಬೇಕಿತ್ತಲ್ಲ?’

‘ಬಂದದ್ದು ಆಯಿಷಾಳ ಉಮ್ಮ ಅಲ್ಲ, ನನ್ನನ್ನು ಹೆತ್ತ ಉಮ್ಮ.., ನನ್ನನ್ನು ಬಿಟ್ಟುಹೋದ ಉಮ್ಮ’

ಸಿಡಿಲೆರಗಿದಂತಾಗಿತ್ತು ನನಗೆ!

–೩–

ಆಯಿಷಾ ಮತ್ತು ಅಸ್ಮಾಳ ಉಮ್ಮ ಒಬ್ಬರೇ ಅಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಗುಟ್ಟೇ.

ಅಬ್ದುಲ್ ಉಝ್ಝಾರ ಪುತ್ರಿ ಖುತಾಯ್ಲಾರ ಮಗಳು ಅಸ್ಮಾ. ಖುತಾಯ್ಲಾರು ತಮ್ಮ ಮಗಳನ್ನು ಬಿಟ್ಟು ಹೋಗಲು ಒಂದು ರೀತಿಯಲ್ಲಿ ನನ್ನಬ್ಬನೇ ಕಾರಣ. ಅಥವಾ ಅಲ್ಲಾಹುವೇ ನೇರ ಕಾರಣ.

ಹೆತ್ತ ಉಮ್ಮ ಬಿಟ್ಟು ಹೊರಟ ಆ ದಿನವನ್ನು ಅಸ್ಮಾ ಎಳೆಯೆಳೆಯಾಗಿ ನೆನಪಿಸಿಕೊಳ್ಳ ಬಲ್ಲಳು. ಅವಳಬ್ಬ ಮತ್ತು ಉಮ್ಮನ ನಡುವೆ ಪರಸ್ಪರ ಡಿಕ್ಕಿಹೊಡೆದ ಪ್ರತಿಯೊಂದು ಮಾತುಗಳನ್ನೂ ನೆನಪಿಸಿಕೊಂಡು ಮಕ್ಕಾದಲ್ಲಿರುವಾಗಲೇ ಕಣ್ಣೀರಿಡುತ್ತಾ ನನಗೆ ವಿವರಿಸಿದ್ದಳು.

ಮಧ್ಯಾಹ್ನದ ಹೊತ್ತಲ್ಲಿ ಸಾಮಾನ್ಯವಾಗಿ ಮನೆಗೆ ಬರುವ ಕ್ರಮವಿಟ್ಟುಕೊಂಡಿರದಿದ್ದ ಅವಳ ಅಬ್ಬ, ಅಂದು ಮಧ್ಯಾಹ್ನದ ಹೊತ್ತಲ್ಲಿ ಅನಿರೀಕ್ಷಿತವಾಗಿ ಬಂದಿದ್ದರಂತೆ. ಆಗ ಅಸ್ಮಾಳಿಗೆ ಐದೋ ಆರೋ ಇದ್ದೀತು. ಬಾಗಿಲ ಬಳಿ ಕುಳಿತು ಆಕಾಶ ಅಳೆಯು ತ್ತಿದ್ದವಳು ಅಬ್ಬನನ್ನು ಕಂಡು ಖುಷಿಯಿಂದ ಎದ್ದು ನಿಂತಿದ್ದಳು.

‘ಎಲ್ಲಿ ನಿನ್ನ ಉಮ್ಮ?’ ಅಬ್ಬನ ಧ್ವನಿ ಎಂದಿನಂತಿರಲಿಲ್ಲವಂತೆ.





ಅದನ್ನು ಅಷ್ಟಾಗಿ ಗಮನಿಸಿರದಿದ್ದ ಅಸ್ಮಾ, ‘ಉಮ್ಮಾ.. ಅಬ್ಬ ಕರಿತಿದ್ದಾರೇ..’ ಕೂಗಿ ಕರೆದಿದ್ದಳು.

ಮಗಳ ಧ್ವನಿಯನ್ನು ಕೇಳಿದ ಉಮ್ಮ ಹೊರಗೆ ಬಂದಿದ್ದರು.

ಉಮ್ಮನನ್ನು ಕಂಡವರೇ ಅಬ್ಬ, ‘ನಮ್ಮ ಬದುಕಿನಲ್ಲಿ ಮಹತ್ತರವಾದುದೊಂದು ಬಲು ಬೇಗ ಘಟಿಸಲಿದೆ’ ಎಂದಿದ್ದರಂತೆ. ಅವರ ಕಣ್ಣುಗಳು ನಕ್ಷತ್ರಗಳಂತೆ ಹೊಳೆಯುತ್ತಿದ್ದವಂತೆ.

‘ತಮ್ಮನ್ನು ಜೊತೆಯಾದ ಬಳಿಕದ ಪ್ರತಿಯೊಂದು ಕ್ಷಣದಲ್ಲೂ ನನ್ನ ಬದುಕಿನಲ್ಲಿ ಮಹತ್ತರವಾದವುಗಳೇ ಘಟಿಸುತ್ತಿವೆ’ ಎಂದಿದ್ದರು ಅಸ್ಮಾಳ ಉಮ್ಮ; ಆಕೆ ಬಲು ಜಾಣೆ.

ಮತ್ತಷ್ಟು ಉತ್ಸಾಹದಿಂದ ಅಬ್ಬ ಮಾತು ಮುಂದುವರಿಸಿದ್ದರು.

‘ಮೊನ್ನೆಯ ರಾತ್ರಿ ಹಿರಾ ಬೆಟ್ಟದ ಗುಹೆಯೊಂದರಲ್ಲಿ ಧ್ಯಾನಕ್ಕೆ ಕುಳಿತಿದ್ದ ನನ್ನ ಗೆಳೆಯನಿಗೆ ಕಾಣಿಸಿಕೊಂಡ ದೇವದೂತರುಗಳು, ಅವರನ್ನು ಅಲ್ಲಾಹುವಿನ ಅಂತಿಮ ಪ್ರವಾದಿಯೆಂಬುದಾಗಿ ಘೋಷಿಸಿದ್ದಾರೆ. ಅಜ್ಞಾನವನ್ನು ಹೊದ್ದು ಮಲಗಿರುವವರನ್ನು ತಟ್ಟಿ ಎಚ್ಚರಿಸುವ ಹೊಣೆಗಾರಿಕೆಯನ್ನು ನೀಡಿದ್ದಾರೆ. ನನ್ನ ಗೆಳೆಯ ಸುಳ್ಳು ಹೇಳುವುದಿಲ್ಲ. ಆದ್ದರಿಂದ, ಅಲ್ಲಾಹು ನನ್ನ ಗೆಳೆಯನ ಮೂಲಕ ನೀಡಿರುವ ಸಂದೇಶಗಳಲ್ಲಿ ನಾನು ವಿಶ್ವಾಸವಿರಿಸಿದ್ದೇನೆ. ನನ್ನ ಗೆಳೆಯನನ್ನು ಅಲ್ಲಾಹುವಿನ ಅಂತಿಮ ಪ್ರವಾದಿಯೆಂಬುದಾಗಿ ವಿಶ್ವಾಸವಿರಿಸಿದ್ದೇನೆ. ಅಲ್ಲಾಹು ಇದುವರೆಗೆ ಭೂಮಿಗೆ ಇಳಿಸಿರುವ ಎಲ್ಲ ಪ್ರವಾದಿಗಳಲ್ಲೂ ನಾನು ವಿಶ್ವಾಸವಿರಿಸಿದ್ದೇನೆ. ಅಲ್ಲಾಹುವಿನ ಗ್ರಂಥದಲ್ಲಿ ನಾನು ವಿಶ್ವಾಸವಿರಿಸಿದ್ದೇನೆ. ಒಳಿತು ಕೆಡುಕುಗಳ ನಿರ್ಣಾಯಕನು ಅಲ್ಲಾಹು ಮಾತ್ರ ಎಂದು ವಿಶ್ವಾಸವಿರಿಸಿದ್ದೇನೆ. ಆದ್ದರಿಂದ, ನನ್ನ ಪ್ರಿಯಪತ್ನಿಯಾಗಿರುವ ನೀನೂ, ನನ್ನಂತೆ ಅಲ್ಲಾಹುವಿನ ಅಂತಿಮ ಸಂದೇಶಗಳಲ್ಲಿ ವಿಶ್ವಾಸವಿರಿಸಬೇಕು ಎಂದು ಬಯಸುತ್ತೇನೆ. ಯಾಕೆಂದರೆ, ಇದುವರೆಗೆ ನಾವೆಲ್ಲ ಪೂಜಿಸುತ್ತಿದ್ದ ಕಅಬಾ ಮಂದಿರದ ಮುನ್ನೂರ ಅರುವತ್ತು ದೇವರಮೂರ್ತಿಗಳನ್ನು ಎತ್ತಿ ಎಸೆಯುವ ದಿನ ಬಹಳ ಸಮೀಪದಲ್ಲಿದೆ.’

ಅಸ್ಮಾಳ ಉಮ್ಮ ಜಾಣೆ ಮಾತ್ರವಲ್ಲ; ಅಷ್ಟೇ ಸ್ವಾಭಿಮಾನಿ ಮತ್ತು ಅವೆರಡಕ್ಕಿಂತಲೂ ಹೆಚ್ಚು ಹಟವಾದಿ.

‘ತಮ್ಮ ಜೀವದ ಗೆಳೆಯನ ಸಂದೇಶಗಳ ಮೇಲೆ ವಿಶ್ವಾಸವಿರಿಸಲು ತಾವು ಸ್ವತಂತ್ರರಿದ್ದೀರಿ. ಅದರೆ, ತಾವು ತಮ್ಮ ಗೆಳೆಯನ ಜೊತೆಗೆ ಸೇರಿಕೊಂಡು ಕಅಬಾ ಮಂದಿರದಿಂದ ಕಿತ್ತು ಎಸೆಯಲಿರುವ ಮುನ್ನೂರ ಅರುವತ್ತು ದೇವ ವಿಗ್ರಹಗಳ ಮೇಲೆ ಇದುವರೆಗೂ ನಾನಿರಿಸಿಕೊಂಡು ಬಂದಿರುವ ವಿಶ್ವಾಸಗಳನ್ನು ಮುಂದುವರಿಸಲು ನಾನೂ ಸ್ವತಂತ್ರಳಿರುವೆ.’ ಹೆಚ್ಚು ಯೋಚಿಸಲೂ ಹೋಗದೆ, ಅಬ್ಬನ ಮುಖಕ್ಕೇ ಹೇಳಿಬಿಟ್ಟಿದ್ದರು ಅಸ್ಮಾಳ ಉಮ್ಮ.

ಅಸ್ಮಾಳ ಉಮ್ಮನ ಮಾತಿನಿಂದ ಅಬ್ಬ ಬೆಚ್ಚಿಬಿದ್ದಿರಬಹುದು. ತಮ್ಮ ಹೆಂಡತಿಯಿಂದ ಆ ಬಗೆಯ ಪ್ರತಿಕ್ರಿಯೆಯನ್ನು ಖಂಡಿತವಾಗಿಯೂ ಅವರು ನಿರೀಕ್ಷಿಸಿದ್ದಿರಲಾರರು. ಸಿಟ್ಟು ನೆತ್ತಿಗೇರಿದ್ದಿರಬಹುದು.

'ಗಂಡನ ಮಾತಿಗೂ ಎದುರಾಡುತ್ತಿದ್ದೀಯಾ?' ಎಂದು ಕಟುವಾಗಿಯೇ ಪ್ರಶ್ನಿಸಿದ್ದರು ಅಸ್ಮಾಳ ಅಬ್ಬ. ಆದರೆ, ಮಾತಿನಲ್ಲಿ ತಮ್ಮ ಸಂಪೂರ್ಣ ಶಕ್ತಿಯನ್ನು ಜೋಡಿಸಲು ಸೋತಿದ್ದರು.

'ಖಂಡಿತವಾಗಿಯೂ ಎದುರುವಾದಿಸುತ್ತಿಲ್ಲ. ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ.' ಅಸ್ಮಾಳ ಉಮ್ಮ ಶಾಂತವಾಗಿಯೇ ಉತ್ತರಿಸಿದ್ದರು.

'ನನ್ನ ಜೊತೆಗೆ ಬಾಳು ಮುಂದುವರಿಸಲು ಬಯಸುವಿಯಾದರೆ, ನನ್ನ ಗೆಳೆಯನನ್ನು ಅಂತಿಮಪ್ರವಾದಿಯೆಂದು ನೀನು ವಿಶ್ವಾಸವಿರಿಸಲೇಬೇಕು ಎಂದು ನಾನು ಬಯಸುವೆ.' ಈ ಬಾರಿ ಅವಳಬ್ಬನ ಮಾತಿನಲ್ಲಿ ಆದೇಶಕ್ಕಿಂತಲೂ ಹೆಚ್ಚು ಬೇಡಿಕೆಯಿತ್ತು.

ಸ್ವಲ್ಪ ಹೊತ್ತು ಮಾತಿಗಾಗಿ ತಡವರಿಸುತ್ತಿರುವವರಂತೆ ಅತ್ತಿತ್ತ ನೋಡಿದ ಅಸ್ಮಾಳ ಉಮ್ಮ ಕೊನೆಗೂ ಬಾಯಿಬಿಟ್ಟಿದ್ದರು.

'ಅದೆಂತಹಾ ವಿಪತ್ತು ಎದುರಾದರೂ ಕೈ ಹಿಡಿದು ಕಾಪಾಡುತ್ತಿರುವ ಪತಿಯ ಎದುರು ಏನನ್ನೂ ಮುಚ್ಚಿಟ್ಟುಕೊಳ್ಳಬಾರದು ಎಂಬುದನ್ನು ನಂಬುವ ಸಂಪ್ರದಾಯಸ್ಥ ಮನೆತನದಿಂದ ಬಂದವಳು ನಾನು. ಇದುವರೆಗೂ ತಮ್ಮೆದುರು ಒಂದು ಸಣ್ಣ ಸುಳ್ಳನ್ನೂ ಹೇಳಿದವಳಲ್ಲ. ನನ್ನ ಹೆತ್ತವರು ಆಚರಿಸುತ್ತಿರುವ ಸಂಪ್ರದಾಯವನ್ನು ನಾನು ಮುರಿಯಲಾರೆ. ಹುಟ್ಟಿದಂದಿನಿಂದ ನಂಬಿಕೊಂಡು ಬಂದಿರುವ ನನ್ನ ದೇವರು ಗಳನ್ನು, ಬಲವಂತವಾಗಿ ಕಿತ್ತು ಎಸೆಯುವವರ ಜೊತೆಗೆ ಬಾಳುವೆ ಮುಂದುವರಿಸಲು ನನ್ನ ಮನಸ್ಸು ಸಮ್ಮತಿಸುತ್ತಿಲ್ಲ.' ಅಸ್ಮಾಳ ಉಮ್ಮನ ಮಾತಿನಲ್ಲಿ ಖಚಿತತೆ ಇತ್ತು.

'ಇದೇ ನಿನ್ನ ಕೊನೆಯ ಮಾತೆ?' ಅಬ್ಬ ಅಸಹಾಯಕರಂತೆಯೇ ಪ್ರಶ್ನಿಸಿದ್ದರಂತೆ.

ಉತ್ತರಿಸಲು ಹಿಂದೆಮುಂದೆ ನೋಡಿದ್ದರಂತೆ ಅಸ್ಮಾಳ ಉಮ್ಮ.

'ಹೇಳು.' ಈ ಬಾರಿ ಅಸ್ಮಾಳ ಅಬ್ಬ ಗುಡುಗಿದ್ದರು.

ಆಗಲೂ ಉಮ್ಮ ತುಟಿ ಎರಡು ಮಾಡಲಿಲ್ಲವಂತೆ.

'ನೀನು ನನ್ನ ಹೆಂಡತಿಯೇ ಅಲ್ಲ ಎಂಬುದನ್ನು ನನ್ನ ಬಾಯಿಂದಲೇ ಹೇಳಿಸಲು ಒತ್ತಾಯಿಸುತ್ತಿದ್ದೀಯಾ..?' ಅಬ್ಬ ಅಸಹಾಯಕತೆಯಿಂದಲೇ ಪ್ರಶ್ನಿಸಿದ್ದಿರಬೇಕು. ನೇರವಾಗಿ ಉಮ್ಮನ ಕಣ್ಣಿಗೆ ಕಣ್ಣಿಟ್ಟು ನೋಡಲೂ ಅವರಿಂದ ಸಾಧ್ಯವಾಗಿದ್ದಿರಲಿಲ್ಲ. ಉಮ್ಮ ಕೂಡಾ ತಲೆ ತಗ್ಗಿಸಿ ಸುಮ್ಮನೆ ನಿಂತಿದ್ದರು.

'ಇಂದಿನ ಸೂರ್ಯ ಮರೆಯಾಗುವ ಮುನ್ನ ನನ್ನ ದಾರಿಗೆ ನೀನು ಬರದಿದ್ದರೆ, ನೀನು ನಿನ್ನ ದಾರಿ ನೋಡಿಕೊಳ್ಳಬೇಕಾಗಬಹುದು.' ಅಬ್ಬ ತಮ್ಮ ತೀರ್ಮಾನ ಪ್ರಕಟಿಸಿದ್ದರು.





'ಇದೇ ತಮ್ಮ ಕಡೆಯ ನಿರ್ಧಾರವೆ?' ಈ ಬಾರಿ ಪ್ರಶ್ನಿಸಿದವರು ಅಸ್ಮಾಳ ಅಬ್ಬನಲ್ಲ; ಉಮ್ಮ.

ಈ ಬಾರಿ ಉತ್ತರಿಸಲು ತಡವರಿಸಿದವರು ಅಸ್ಮಾಳ ಉಮ್ಮನಲ್ಲ; ಅಬ್ಬ.

'ನಿನ್ನದೂ ಇದೇ ಕೊನೆಯ ನಿರ್ಧಾರವೆ?' ಅಬ್ಬ ಅಸಹಾಯಕರಂತೆ ಪ್ರಶಿಸಿದ್ದರು.

ಉಮ್ಮ ತುಟಿ ಬಿಗಿಹಿಡಿದು ನಿಂತಿದ್ದರು.

ಉಮ್ಮನಿಂದ ಸಮ್ಮತಿಯ ಸಿಹಿಮಾತುಗಳನ್ನು ನಿರೀಕ್ಷಿಸುತ್ತಾ ಸ್ವಲ್ಪ ಹೊತ್ತು ಹೊಸ್ತಿಲ ಬಳಿಯೇ ನಿಂತಿದ್ದ ಅಬ್ಬ, ಉಮ್ಮನ ಮೌನವನ್ನು ಗಮನಿಸಿ, ಬೇಸರದಿಂದಲೇ ಮರಳಿ ಹೋಗಿದ್ದರು.

ಅಸ್ಮಾಳನ್ನೂ, ಅವಳ ಹಿರಿಯ ಸೋದರ ಅಬ್ದುಲ್ಲಾನನ್ನೂ ತಬ್ಬಿಕೊಂಡು ಕುಸಿದು ಕುಳಿತ ಉಮ್ಮ ಬಹಳ ಹೊತ್ತು ಬಿಕ್ಕಿ ಬಿಕ್ಕಿ ಅಳುತ್ತಿದ್ದರಂತೆ. ಅದೆಷ್ಟು ಹೊತ್ತು ಅಳುತ್ತಾ ಅವರು ಕುಳಿತಿದ್ದರೋ. ಉಮ್ಮನ ಮಡಿಲಲ್ಲೇ ನಿದ್ರೆ ಹೋಗಿದ್ದ ಅಸ್ಮಾ ಎದ್ದು ನೋಡಿದಾಗ ಪಕ್ಕದಲ್ಲಿ ಉಮ್ಮ ಇರಲಿಲ್ಲವಂತೆ. ಮುಂದಿನ ಒಂದು ತಿಂಗಳ ಕಾಲ ಅಸ್ಮಾಳ ಅಬ್ಬ ಸರಿಯಾಗಿ ಊಟವನ್ನೇ ಮಾಡುತ್ತಿರಲಿಲ್ಲವೆಂಬುದನ್ನು ನೆನಪಿಸಿಕೊಂಡಾಗಲೆಲ್ಲ ಅಸ್ಮಾ ಇಂದಿಗೂ ಕಣ್ಣೀರಾಗುತ್ತಾಳೆ. ಅಂದು ತ್ಯಜಿಸಿಹೋಗಿದ್ದ ಆ ಉಮ್ಮ ಈವತ್ತು ಮತ್ತೆ ಬಂದಿದ್ದಾರೆಯೆ!

'ಎಲ್ಲಿದ್ದಾರೆ ಅಸ್ಮಾ ನಿನ್ನ ಉಮ್ಮಾ?' ಕುತೂಹಲದಿಂದಲೇ ಕೇಳಿದ್ದೆ.

'ಅವರನ್ನು ಮನೆಯೊಳಗೆ ಬಿಟ್ಟುಕೊಳ್ಳದೆ, ಅಂಗಳದಿಂದಲೇ ವಾಪಾಸು ಕಳಿಸಿಬಿಟ್ಟೆ' ದುಃಖಿಸುತ್ತಲೇ ಹೇಳಿದ್ದಳು ಅಸ್ಮಾ.

'ಏನು! ಉಮ್ಮನನ್ನು ಮನೆಯೊಳಗೆ ಬಿಟ್ಟುಕೊಳ್ಳದೆ ಕಳಿಸಿದೆಯಾ! ಯಾಕೆ?'

ಅವಳು ಉತ್ತರಿಸಲಿಲ್ಲ. ಬಿಕ್ಕಳಿಕೆಯನ್ನೇ ಮುಂದುವರಿಸಿದ್ದಳು.

ಕುಳಿತಲ್ಲಿಂದ ಎದ್ದು ಹೋಗಿ ಬುಟ್ಟಿಯನ್ನು ಮುಚ್ಚಿದ್ದ ಬಟ್ಟೆಯನ್ನು ಸರಿಸಿದೆ. ಬುಟ್ಟಿ ತುಂಬಾ ಹಣ್ಣುಗಳಿದ್ದವು. ಸಣ್ಣ ಪಾತ್ರೆಯೊಂದರಲ್ಲಿ ರೊಟ್ಟಿಗಳಿದ್ದವು. ಹಸಿರು ಮತ್ತು ಹಳದಿ ಬಣ್ಣಗಳ ಚಂದದ ಎರಡು ಮೇಲಂಗಿಗಳಿದ್ದವು.

'ಇವನ್ನೆಲ್ಲ ನಿನ್ನ ಉಮ್ಮ ತಂದು ಕೊಟ್ಟರಾ? ಜೊತೆಗೆ ಯಾರು ಬಂದಿದ್ದರು?'

'ಅವರೊಬ್ಬರೇ ಬಂದದ್ದು'

'ಇವನ್ನೆಲ್ಲ ಅವರೇ ಹೊತ್ತುಕೊಂಡು ಬಂದರಾ? ನಿಜ ಹೇಳು, ಯಾರಿದ್ದರು ಅವರ ಜೊತೆಯಲ್ಲಿ?'

ಅಸ್ಮಾಳನ್ನು ಅನಾಥಳನ್ನಾಗಿ ಮಾಡಿ ಹೋದ ಉಮ್ಮಾನ ಬಗ್ಗೆ, ಮಕ್ಕಾದ ಯಾರಿಗೂ ಯಾವುದೇ ಮಾಹಿತಿ ಇದ್ದಂತಿರಲಿಲ್ಲ. ಬೇರೆ ಯಾರನ್ನಾದರೂ ಮದುವೆಯಾಗಿ ದೂರದಲ್ಲೆಲ್ಲೋ ಬದುಕುತ್ತಿರಬಹುದು ಎಂದೇ ಭಾವಿಸಿ ಅವರ ಬಗ್ಗೆ

ಚರ್ಚೆಯನ್ನೂ ಮಾಡುತ್ತಿರಲಿಲ್ಲ. ಸೆಟೆದು ಕುಳಿತ ಅಸ್ಮಾ ಏನೆಲ್ಲ ನಡೆದುಹೋಯಿತು ಎಂಬುದನ್ನು ವಿವರಿಸಿದ್ದಳು.

ಉಮ್ಮ ಮರಳಿ ಹೋದ ಸ್ವಲ್ಪ ಹೊತ್ತಾದ ಬಳಿಕ, ಸಣ್ಣ ಹುಡುಗನೊಬ್ಬ ಆ ಬುಟ್ಟಿಯನ್ನು ಹೊತ್ತುಕೊಂಡು ಬಂದಿದ್ದನಂತೆ. ಇದನ್ನು ನಿಮ್ಮ ಮನೆಯೊಳಗೆ ಇಡಲು ಒಬ್ಬರು ಹೇಳಿದರು ಎನ್ನುತ್ತಾ ಬುಟ್ಟಿಯನ್ನು ಮನೆಯೊಳಗಿರಿಸಿದವನು, ತಿರುಗಿಯೂ ನೋಡದೆ ಹೊರಟು ಹೋಗಿದ್ದನಂತೆ. ಗಾಬರಿಯಿಂದ ಇವಳು ಹೊರಗೆ ಬಂದು ನೋಡಿದರೆ, ದೂರದ ಮನೆಯೊಂದರ ಗೋಡೆಗೊರಗಿ ಉಮ್ಮ ಕಾಣಿಸಿದ್ದರಂತೆ!

ಅಂದು ಮುಂಜಾನೆಯೇ ಸಣ್ಣ ಕಾರಣವೊಂದನ್ನೇ ದೊಡ್ಡದು ಮಾಡಿಕೊಂಡು, ಅಸ್ಮಾಳಿಗೆ ಝುಬೈರ್ ಹೊಡೆದಿದ್ದ. ಒಂಟೆಯ ಎಲುಬಿನಿಂದ ಹೊಡೆದ ರಭಸಕ್ಕೆ ಅವಳ ಎಡಮುಂಗೈ ಗಂಟು ಬಾತುಹೋಗಿತ್ತು. ಅದೇ ನೋವಿನಿಂದ ದುಃಖಿಸುತ್ತಿದ್ದವಳಿಗೆ ಉಮ್ಮನನ್ನು ಕಂಡಾಗ ಹಿಂದಿನದ್ದೆಲ್ಲ ನೆನಪಾಗಿ ಜೋರಾಗಿ ಅಳು ಬಂದುಬಿಟ್ಟಿತ್ತು. ಅದರ ಜೊತೆಗೆ ತಡೆದುಕೊಳ್ಳಲಾಗದಷ್ಟು ಸಿಟ್ಟೂ ಬಂದಿತ್ತು.

'ನಿಮಗೆ ಈಗ ಸಂತೋಷವಾಗಿರಬೇಕಲ್ಲವೆ? ಈಗೇಕೆ ಬಂದಿರಿ? ನನ್ನ ಬಡತನವನ್ನು ನೋಡಿ ನಗಲು ಬಂದಿರಾ? ಹೋಗಿ, ನನ್ನ ಕಣ್ಣೆದುರು ನಿಲ್ಲಬೇಡಿ, ಹೊರಟು ಹೋಗಿ ಇಲ್ಲಿಂದ' ಎಂದು ಜೋರಾಗಿಯೇ ಕಿರುಚಿದ್ದಳಂತೆ.

ನಾಲ್ಕು ಹೆಜ್ಜೆ ಮುಂದೆ ಬಂದಿದ್ದ ಉಮ್ಮ ಗಾಬರಿಗೊಂಡು ಅಲ್ಲೇ ನಿಂತುಬಿಟ್ಟರಂತೆ. ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದವರು, 'ಇನ್ನೊಂದು ದಿನ ಬರುತ್ತೇನೆ' ಎಂದವರು ಹೊರಟು ಹೋಗಿದ್ದಂತೆ. ಅವರು ಹೋದ ಬಳಿಕ ಇವಳಿಗೆ ತನ್ನ ತಪ್ಪಿನ ಅರಿವಾಗಿತ್ತು. ಆದರೆ, ಕಾಲ ಮಿಂಚಿಹೋಗಿತ್ತು.

'ನೀನು ತಪ್ಪು ಮಾಡಿಬಿಟ್ಟೆ ಅಸ್ಮಾ..' ಎಂದೆ ನಾನು.

'ತಪ್ಪಾ? ಅವರನ್ನು ಒಳಗೆ ಬಿಟ್ಟುಕೊಂಡದ್ದು ಗಂಡನಿಗೆ ಗೊತ್ತಾದರೆ, ನನ್ನನ್ನು ಸುಮ್ಮನೆ ಬಿಡುತ್ತಿದ್ದರೆ?' ಅಸ್ಮಾ ಪ್ರಶ್ನಿಸಿದ್ದಳು.

'ನಿನ್ನ ಗಂಡನಿಗೆ ಸಿಟ್ಟೇಕೆ ಬರಬೇಕು? ಅವರು ನಿನ್ನನ್ನು ಹೆತ್ತ ಉಮ್ಮನಲ್ಲವೆ?'

'ಆದರೆ ಪ್ರವಾದಿಯ ಸಂದೇಶಗಳಲ್ಲಿ ವಿಶ್ವಾಸವಿರಿಸಲು ನಿರಾಕರಿಸಿ ನನ್ನ ಅಬ್ಬನನ್ನು ಬಿಟ್ಟು ಹೋದವರಲ್ಲವೆ ನನ್ನ ಉಮ್ಮ?'

ನಾನು ಉತ್ತರಿಸಲಿಲ್ಲ; ಏನು ಉತ್ತರಿಸುವುದೆಂದು ಹೊಳೆದಿರಲಿಲ್ಲ.

'ನನ್ನ ಗಂಡನ ಸಿಟ್ಟು ಹೋಗಲಿ. ಅದನ್ನಾದರೂ ಅನುಭವಿಸಿ ಅಭ್ಯಾಸವಾಗಿದೆ. ಆದರೆ ಪ್ರವಾದಿಯವರಿಗೆ ಸಿಟ್ಟು ಬಂದರೆ? ಅಲ್ಲಾಹುವಿನ ಸಂದೇಶಗಳನ್ನು ಧಿಕ್ಕರಿಸಿ ಹೋದವರನ್ನು ಮನೆಯೊಳಗೆ ಬಿಟ್ಟುಕೊಂಡವಳ ಸೋದರಿ ಆಯಿಷಾಳನ್ನು, ಪ್ರವಾದಿಯವರೇ ಹೆಂಡತಿಯಾಗಿ ಮನೆ ತುಂಬಿಸಿಕೊಂಡಿದ್ದಾರೆಂಬ ಆರೋಪವನ್ನು ಅವರು ಹೇಗೆ ಎದುರಿಸುತ್ತಾರೆ? ಪ್ರವಾದಿಯವರನ್ನು ನಾನು ಈ ಮುಜುಗರಕ್ಕೆ ದೂಡಬೇಕಾಗಿತ್ತೆ?'

ನಾನು ಉತ್ತರಿಸಲಿಲ್ಲ. ಏನೆಂದು ಉತ್ತರಿಸುವುದು?

ನಾವಿಬ್ಬರೂ ಕುಂಟುಗಾಲಿನ ಒಂದೇ ಕುದುರೆಯೇರಿ ಸವಾರಿ ಮಾಡುತ್ತಿರುವವರು.

ನನ್ನ ಅಬ್ಬನನ್ನು ಅಲ್ಲಾಹು ತನ್ನ ಅಂತಿಮ ಪ್ರವಾದಿಯನ್ನಾಗಿ ನೇಮಿಸಿದ ಕಾರಣದಿಂದಲೇ ನಾನು ಗಂಡನಿಂದ ತ್ಯಜಿಸಲ್ಪಟ್ಟಿದ್ದರೆ, ಅದೇ ಕಾರಣದಿಂದ ಅಸ್ಮಾ, ಅವಳ ಉಮ್ಮನಿಂದ ತ್ಯಜಿಸಲ್ಪಟ್ಟಿದ್ದಳು.

–೪–

ಮೌನವಾಗಿಯೇ ನಾವಿಬ್ಬರೂ ಬಹಳ ಹೊತ್ತು ಮಾತು ಬದಲಿಸಿಕೊಳ್ಳದೆ ಕುಳಿತುಬಿಟ್ಟಿದ್ದೆವು.

'ಅಕ್ಕಾ..' ಯಾರೋ ಕರೆದಂತಾಗಿ ಕತ್ತು ತಿರುಗಿಸಿ ನೋಡಿದರೆ, ಬಾಗಿಲಿಗಡ್ಡವಾಗಿ ಆಯಿಷಾ ನಿಂತಿದ್ದಳು!

'ಆಯಿಷಾ ನೀನು! ಒಬ್ಬಳೇ ಬಂದಿಯಾ? ' ಅಚ್ಚರಿಯಿಂದ ಕೇಳಿದ್ದೆ.

'ನಾನು ಒಬ್ಬಳೇ ಆಗಿ ಬರುವುದುಂಟೆ? ಅಫೀರಾ ಜೊತೆಗಿದ್ದಾಳೆ. ಅಷ್ಟೇ ಅಲ್ಲ. ಇನ್ನೂ ಒಬ್ಬರಿದ್ದಾರೆ.'

'ಇನ್ನೊಬ್ಬರಿದ್ದಾರೆ! ಯಾರು?'

'ಅಕ್ಕ ಅಸ್ಮಾಳ ಉಮ್ಮ ಕೂಡಾ ಬಂದಿದ್ದಾರೆ' ಎಂದಿದ್ದಳು ಆಯಿಷಾ.

'ಅಸ್ಮಾಳ ಉಮ್ಮಾ ಕೂಡಾ!' ನನಗೆ ನಂಬಿಕೆಯೇ ಆಗಲಿಲ್ಲ. ಎದ್ದು ಹೊರಗೆ ಬಂದೆ.

ಪಕ್ಕದ ಮನೆಯ ಗೋಡೆಯ ಮರೆಯಲ್ಲಿ ಅಸ್ಮಾಳ ಉಮ್ಮ ನಿಂತಿದ್ದರು!

ಅವರನ್ನು ಸರಿಯಾಗಿ ನಾನು ನೋಡಿದ್ದು ಅದೇ ಮೊದಲು.

'ಅಸ್ಮಾ, ನಿನ್ನ ಉಮ್ಮ ಬಂದಿದ್ದಾರೆ. ಎದ್ದು ಹೋಗಿ ಕರೆದುಕೊಂಡು ಬಾ' ಎಂದೆ.

ಅಸ್ಮಾ ಕುಳಿತಲ್ಲಿಂದ ಎದ್ದು ನಿಂತಳೇನೋ ಹೌದು. ಆದರೆ ಹೊರಗೆ ನೋಡಲು ಅಳುಕಿದ್ದಳು.

'ಪ್ರವಾದಿಯವರಿಗೆ ಸಿಟ್ಟು ಬಂದರೆ?'

'ಪ್ರವಾದಿಯವರೇ ನಿನ್ನ ಉಮ್ಮನನ್ನು ನಮ್ಮ ಜೊತೆಗೆ ಇಲ್ಲಿಗೆ ಕಳುಹಿಸಿದ್ದು.' ಅಫೀರಾ ಹೇಳಿದ್ದಳು!

*           *           *

*ನಾನೆಷ್ಟೇ ವಿನಂತಿಸಿದರೂ, ನನ್ನ ಬಯಕೆಯನ್ನು ಕಾಣಿಸಲೆಂದು ಕರೆದುಕೊಂಡು ಹೋಗುತ್ತಿರುವ ಅರ್ಷದ್, ಕಾಣಿಸುತ್ತಿರುವುದು ಅವನ ಬಯಕೆಯಂತೆ ಮಾತ್ರ ಎಂಬುದು ಅದಾಗಲೇ ನನಗೆ ಮನದಟ್ಟಾಗಿತ್ತು.*

*ಆದರೂ, ಆತ ಸರದಿಯಂತೆ ಕಾಣಿಸುತ್ತಿರುವವುಗಳಲ್ಲಿ ಆಯಿಷಾರ ಕತೆ ಮಾತ್ರ ಬೆಳೆಯುತ್ತಲೇ ಇತ್ತು. ಆ ಕಾರಣದಿಂದಲೇ, 'ನಮ್ಮ ಮುಂದಿನ ಪ್ರಯಾಣ ಎಲ್ಲಿಗೆ' ಎಂದು ಪ್ರಶ್ನಿಸಬಾರದು. ಅವನು ಕರೆದುಕೊಂಡು ಹೋಗುವಲ್ಲಿ ಹೋಗಲು, ಅವನು ಕಾಣಿಸುವುದನ್ನು ಮಾತ್ರ ಕಾಣಲು ನಾನು ಸಿದ್ಧನಾಗಿದ್ದೆ.*

*'ನಾನೊಂದು ಸಲಹೆ ನೀಡಲೆ?' ಅವನು ಪ್ರಶ್ನಿಸಿದ್ದ!*

*'ನನ್ನ ಅನುಮತಿ ಪಡೆದೇ ಇದುವರೆಗೆ ಸಲಹೆ ನೀಡುತ್ತಿದ್ದವನಲ್ಲವಲ್ಲ ನೀನು?' ಹಿಂದೊಮ್ಮೆ ಅವನು ಕೇಳಿದ್ದ ಪ್ರಶ್ನೆಯನ್ನೇ ಮರಳಿಸಿದ್ದೆ.*

*'ನಿನ್ನ ನೆನಪಿನ ಶಕ್ತಿ ಬಹಳ ಬಲವಾಗಿದೆಯುಂಬುದು ನನಗೆ ಗೊತ್ತಿದೆ ಗೆಳೆಯಾ' ಎಂದ ಅರ್ಷದ್, ಸ್ವಲ್ಪ ಹೊತ್ತು ಸುಮ್ಮನಿದ್ದು, 'ನಿನ್ನನ್ನು ನಾನು ಗೆಳೆಯಾ ಎನ್ನಬಹುದೆ?' ಎಂದು ಪ್ರಶ್ನಿಸಿದ್ದ.*

*'ಅದರಿಂದ ನನಗೆ ಹೆಚ್ಚು ಸಂತೋಷವಾಗುತ್ತದೆ' ಎಂದಿದ್ದೆ ತಟ್ಟನೆ.*

*'ನನಗೂ ಸಂತೋಷವೇ.' ಆತನ ಧ್ವನಿಯಲ್ಲೂ ಸಂತಸವಿತ್ತು.*

*ಗೆಳೆಯ ಹೇಳತೊಡಗಿದ್ದ, 'ಈಗ ನನ್ನ ಸಲಹೆ ಏನೆಂಬುದನ್ನು ಕೇಳು. ಇದುವರೆಗೆ ನಾನು ಕಾಣಿಸಿದ್ದವರು ಹೇಳಿರುವ ಮಾತುಗಳನ್ನೆಲ್ಲ ನೀನು ಉರು ಹೊಡೆದು ಕೊಳ್ಳುತ್ತಿರುವುದು ನನಗೆ ಗೊತ್ತಿದೆ. ನೀನು ಉರುಹೊಡೆಯುತ್ತಿರುವ ಮಾತುಗಳನ್ನೆಲ್ಲ ಬರೆದು ನಿನ್ನ ಓದುಗರೊಂದಿಗೆ ಹಂಚಿಕೊಳ್ಳಲು ನೀನು ತುದಿಗಾಲಲ್ಲಿ ನಿಂತಿರುವಿ ಎಂಬುದೂ ನನಗೆ ಗೊತ್ತಿದೆ.*

*'ನಿನ್ನ ಬಯಕೆಯಂತೆ ಪ್ರವಾದಿಪತ್ನಿ ಆಯಿಷಾರ ಬಳಿಗೆ ನೇರವಾಗಿ ನಿನ್ನನ್ನು ಕರೆದುಕೊಂಡು ಹೋಗಿರುತ್ತಿದ್ದರೆ, ಆಯಿಷಾರ ಹಿನ್ನೆಲೆಯ ಬಗ್ಗೆ ಅರಿವಿರದ ನಿನ್ನ ಗೆಳೆಯರಿಗೆ ನೀನೇನನ್ನು ಹೇಳಹೊರಟಿರುವೆ ಎಂಬುದೇ ಅರ್ಥವಾಗುತ್ತಿರಲಿಲ್ಲ ಎಂಬುದನ್ನು ಈಗಲಾದರೂ ಒಪ್ಪಿಕೊಳ್ಳುವೆಯಾ?'*

*ಅರ್ಷದ್ ನನಗೆ ಕಾಣಿಸುತ್ತಿದ್ದರೆ, ಅವನ ಕೈ ಹಿಡಿದು, 'ನನ್ನ ಆತುರವನ್ನು ಕ್ಷಮಿಸು ಗೆಳೆಯಾ' ಎನ್ನುತ್ತಿದ್ದೆ. ಆದರೆ ಆತ ಕಾಣಿಸುತ್ತಿರಲಿಲ್ಲ.*

*'ಒಪ್ಪಿದೆ ಗೆಳೆಯಾ. ಇನ್ನು ಮುಂದೆ ಆ ತಪ್ಪು ಮಾಡುವುದಿಲ್ಲ' ಎಂದೆ.*

*'ಆಯಿಷಾ ಮದುವೆಯಾಗುತ್ತಿರುವುದನ್ನು ನಿನಗೆ ಕಾಣಿಸಿರುವೆ. ಮುಂದೇನಾಯಿತು ಎಂಬುದನ್ನು ಈಗ ಕಾಣಿಸುವೆ' ಎಂದ ಅರ್ಷದ್ ನನ್ನನ್ನು ಕರೆದುಕೊಂಡು ಹೊರಟ.*

❐





## ಸ್ವಗತ – ಆರು

# ಅಫೀರಾ ಬಿಂತಿ ಮುಅತ್ತಲ್

–೧–

ಸೂರ್ಯ ಇನ್ನೂ ಸರಿಯಾಗಿ ಕಣ್ಣು ಬಿಟ್ಟಿರಲಿಲ್ಲ.

ಮನೆ ಬಾಗಿಲು ಬಡಿದ ಸದ್ದು ಕೇಳಿಸಿದಾಗ, ಯಾರಿರಬಹುದಪ್ಪಾ ಈ ಹೊತ್ತಲ್ಲಿ? ಎಂಬ ಕುತೂಹಲದಿಂದಲೇ ಬಾಗಿಲು ತೆರೆದರೆ ಅಂಗಳದಲ್ಲಿ ಚೆಲ್ಲಿದ್ದ ತೆಳುವಾದ ಕತ್ತಲಲ್ಲಿ, ನನ್ನ ಪ್ರೀತಿಯ ಸಣ್ಣ ಒಡತಿ ಮುಖ ಕಪ್ಪಿಟ್ಟುಕೊಂಡು ನಿಂತಿದ್ದರು! ನಾನವರ ಮನೆಗೆ ಹೊರಡುವ ಸಿದ್ಧತೆಯಲ್ಲೇ ಇದ್ದೆ. ತಡ ಮಾಡಿದೆನೆಂಬ ಸಿಟ್ಟಿನಿಂದ ಬಂದಿರಬಹುದೆ? ಹಸಿವಾಗಿರಬಹುದೆ? ನನ್ನ ಪುಟ್ಟ ಒಡತಿಗೆ?

'ಸ್ವಲ್ಪವೇ ಹೊತ್ತಿನಲ್ಲಿ ನಾನೇ ಬರುತ್ತಿದ್ದೆನಲ್ಲ ಸಣ್ಣ ಒಡತಿ? ನೀವೇಕೆ ಬಂದಿರಿ?' ಎಂದು ಪ್ರಶ್ನಿಸುತ್ತಾ, ಅವರ ಜೊತೆಗೆ ಹೊರಟು ಸಿದ್ಧಳಾದೆ.

'ನಮ್ಮ ಮನೆಗೆ ಈಗ ಬೇಡ ಅಫೀರಾ. ಸ್ವಲ್ಪ ಹೊತ್ತು ಇಲ್ಲೇ ಕುಳಿತಿರುವ. ನಿನ್ನ ಜೊತೆಗೆ ಸ್ವಲ್ಪ ಮಾತಾಡುವುದಿದೆ' ಎಂದವರೇ ಬಾಗಿಲ ಬಳಿಯೇ ಅಡ್ಡವಾಗಿ ಕುಳಿತುಕೊಂಡರು.

ನಾಲ್ಕು ತಿಂಗಳ ಕೆಳಗೆ, 'ಮದುಮಗಳ ಜೊತೆಗೆ ನೀನೂ ಹೋಗುತ್ತೀಯೇನೆ ಅಫೀರಾ?' ಎಂದು ದೊಡ್ಡ ಒಡತಿ ಪ್ರಶ್ನಿಸಿದ್ದಾಗ, 'ಇದಕ್ಕಿಂತ ದೊಡ್ಡ ಭಾಗ್ಯ ಬೇರೇನಿದೆ ದೊಡ್ಡ ಒಡತಿ?' ಎಂದು ಸಂಭ್ರಮದಿಂದಲೇ, ಆ ಮನೆಯಿಂದ ನನ್ನ ಬಟ್ಟೆಯ ಗಂಟನ್ನು ಎತ್ತಿಕೊಂಡು ಸಣ್ಣ ಒಡತಿಯೊಂದಿಗೆ ಪ್ರವಾದಿಯವರ ಮನೆಗೆ ಬಂದಿದ್ದೆ.

ಸಣ್ಣ ಒಡತಿ ಭೂಮಿಗೆ ಬಿದ್ದ ದಿನದಿಂದಲೇ ನೆರಳಿನಂತೆ ಇದ್ದವಳು ನಾನು. ಅವರಿಲ್ಲದ ಒಂದು ಕ್ಷಣವನ್ನೂ ಕಲ್ಪಿಸಿಕೊಳ್ಳಲಾರೆ. ನಾನೊಬ್ಬಳು ಅದೃಷ್ಟವಂತೆ ಹೆಣ್ಣೆಂದು ಎಲ್ಲರೂ ಹೊಗಳುತ್ತಿದ್ದರು. ಅದು ನಿಜವೇ ಇರಬೇಕು. ಅಂತಹ ಅಪರೂಪದ ಅದೃಷ್ಟ

ವಂತೆಯಾಗದೇ ಇರುತ್ತಿದ್ದರೆ, ಸಣ್ಣ ಒಡತಿಯ ಉಮ್ಮನಂತಹ ಉಮ್ಮ ನನಗೆ ದೊಡ್ಡ ಒಡತಿಯಾಗಿ ಸಿಗುತ್ತಿದ್ದರೆ? ಪ್ರವಾದಿಪತ್ನಿಗೆ ದಾಸಿಯಾಗುವ ಅದೃಷ್ಟ ನನಗೆ ಸಿಗುತ್ತಿತ್ತೆ?

ಶೃಂಗಾರಗೊಂಡಿದ್ದ ಮದುವಣಗಿತ್ತಿಯನ್ನು ಕೈತಟ್ಟಿ ಹಾಡುತ್ತಾ ದೊಡ್ಡ ಒಡೆಯರ ಮನೆಯಿಂದ ಮೆರವಣಿಗೆ ಹೊರಟಿದ್ದ ನಾವು ಏಳೆಂಟು ಮಂದಿ ಹೊಸ ಮನೆಗೆ ತಲುಪುತ್ತಿರುವಂತೆಯೇ, ಮದೀನಾವನ್ನು ಅದುವರೆಗೂ ಸುಡುತ್ತಿದ್ದ ಸೂರ್ಯ ಸೋತು ಹೋದವನಂತೆ ಮೆತ್ತಗಾಗಿದ್ದ. ಸಂಜೆಯ ನಮಾಜು ಮುಗಿದು ಅರ್ಧ ತಾಸಾದರೂ ಕಳೆದಿದ್ದಿರಬಹುದು. ಐದಾರು ಗಂಡಸರು ಮತ್ತು ಏಳೆಂಟು ಹೆಂಗಸರು ಮಸೀದಿಯಲ್ಲಿ ನಮಾಜು ಸಲ್ಲಿಸುತ್ತಿದ್ದರು. ಮಸೀದಿಗೆ ಹೊಂದಿಕೊಂಡೇ ಪ್ರವಾದಿಯವರ ಮನೆ ಇದ್ದದ್ದು. ಆ ಮಸೀದಿಯ ಬಗ್ಗೆ ಜನರೆಲ್ಲ ಬಹಳ ಹೊಗಳುತ್ತಿದ್ದುದರಿಂದ, ಅದನ್ನೊಂದು ಬಲು ದೊಡ್ಡ ಕಟ್ಟಡವೆಂದೇ ಕಲ್ಪಿಸಿಕೊಂಡಿದ್ದೆ. ಆದರೆ ಅದು ಹಾಗಿರಲಿಲ್ಲ.

ಕಲ್ಲು ಮತ್ತು ಈಚಲು ಮರದ ಕಾಂಡಗಳಿಗೆ ಮಣ್ಣು ಬೆರೆಸಿ ನಿರ್ಮಿಸಲಾಗಿದ್ದ ಗೋಡೆಯ ಆವರಣವು ಒಂದು ಪುಟ್ಟ ಮಂಟಪದಂತೆಯೇ ಕಾಣಿಸಿತ್ತು. ಸ್ಥಳೀಯ ನಿವಾಸಿ ಝುರಾರಾಃರ ಪುತ್ರ ಸಅದ್ ಎಂಬ ಕರುಣಾಳುವಿನ ರಕ್ಷಣೆಯಲ್ಲಿದ್ದ ಇಬ್ಬರು ಪುಟ್ಟ ಮಕ್ಕಳು, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಉಡುಗೊರೆಯಾಗಿ ನೀಡಿದ್ದ ಜಾಗದಲ್ಲಿ, ಪ್ರವಾದಿಯವರೇ ಕಟ್ಟಿಸಿದ್ದ ಮಸೀದಿಯದು. ಮಸೀದಿ ನಿರ್ಮಾಣವಾದ ಬಳಿಕ ಸಂತೋಷಪಟ್ಟ ಪ್ರವಾದಿಯವರು, 'ಒಂದು ನಮಾಜಿಗೆ ಒಂದು ಸಾವಿರ ನಮಾಜುಗಳಷ್ಟು ಶ್ರೇಯಸ್ಸು ಸಂಪಾದಿಸುವ, ಕಅಬಾದ ಬಳಿಕದ, ಅತಿ ಶ್ರೇಷ್ಟ ಮಸೀದಿಯಿದು' ಎಂದೇ ಘೋಷಿಸಿದ್ದರಂತೆ. ಆ ಕಾರಣದಿಂದಲೇ ಅದುವರೆಗೂ 'ಯಸ್ರಿಬ್' ಎಂದು ಕರೆಯಲ್ಪಡುತ್ತಿದ್ದ ಆ ಪ್ರದೇಶವನ್ನು ಜನರೆಲ್ಲ ಮದೀನತುನ್ನೆಬಿ ಎಂದು ಕರೆಯಲಾರಂಭಿಸಿದ್ದರಂತೆ. ಆ ಪ್ರದೇಶದಲ್ಲೇ ಉಳಿಯಬಯಸಿದ ಪ್ರವಾದಿಯವರಿಗೆ ಊರವರೆಲ್ಲ ಸೇರಿಕೊಂಡು ಮಸೀದಿಯ ಪಕ್ಕದಲ್ಲೇ ಪುಟ್ಟ ಮನೆಯೊಂದನ್ನು ನಿರ್ಮಿಸಿಕೊಟ್ಟಿದ್ದರು.

ಪ್ರವಾದಿಯವರ ಮನೆಯ ಪಕ್ಕದಲ್ಲೇ ನಿರ್ಮಿಸಲಾಗಿದ್ದ ಮತ್ತೊಂದು ಮನೆಯಲ್ಲಿ ಅವರ ಹೆಣ್ಣು ಮಕ್ಕಳು ವಾಸಿಸುತ್ತಿದ್ದರು. ಅದರ ಮಗ್ಗುಲಲ್ಲಿ ಪ್ರವಾದಿಪತ್ನಿ ಸೌದಾರವರು. ಸೌದಾ ಮದೀನಾ ತಲುಪುವ ಮುನ್ನವೇ ಅವರಿಗೆಂದು ಮತ್ತೊಂದು ಮನೆಯ ನಿರ್ಮಾಣವಾಗಿತ್ತು. ಎಲ್ಲವೂ ಒಂದೆರಡು ಕೋಣೆಗಳ ಪುಟ್ಟ ಪುಟ್ಟ ಮನೆಗಳು. ಒಂದರಲ್ಲಿ ಸ್ನಾನವಾದರೆ ಮತ್ತೊಂದರಲ್ಲಿ ಅಡುಗೆ ಮತ್ತು ವಿಶ್ರಾಂತಿ. ಪ್ರವಾದಿಯವರು ಸಣ್ಣ ಒಡತಿಯನ್ನು ಮನೆತುಂಬಿಕೊಳ್ಳುವ ನಿರ್ಧಾರ ಮಾಡಿದಾಗ ಅವರಿಗಾಗಿ ಇನ್ನೊಂದು ಮನೆಯನ್ನು ಬಹಳ ಅವಸರದಲ್ಲೇ ಕಟ್ಟಿದ್ದಿರಬೇಕು. ಮದುವೆ ಮೆರವಣಿಗೆ ಅಲ್ಲಿಗೆ ತಲುಪಿದಾಗಲೂ, ಮಣ್ಣಿನಲ್ಲಿ ಕಟ್ಟಲಾಗಿದ್ದ ಹೊಸ ಮನೆಗೆ ಹೊದಿಸಿದ್ದ ಈಚಲು ಸೋಗೆಗಳು, ತಮ್ಮ ಹಸುರು ಬಣ್ಣವನ್ನು ಸರಿಯಾಗಿ ಒಣಗಿಸಿಕೊಂಡಿರಲಿಲ್ಲ. ನಾವು





ತಲುಪುವಷ್ಟರಲ್ಲಿ, ದೊಡ್ಡ ಒಡೆಯರೂ ಬಂದುಬಿಟ್ಟಿದ್ದರು. ಮಸೀದಿಯಲ್ಲಿ ನಮಾಜು ಮಾಡುತ್ತಿದ್ದವರೂ ಬಂದು ನಮ್ಮನ್ನು ಸುತ್ತುವರಿದಿದ್ದರು. ಮಗಳ ಕೈ ಹಿಡಿದುಕೊಂಡ ದೊಡ್ಡ ಒಡೆಯರು ಮನೆಯೊಳಗೆ ಕರೆದುಕೊಂಡು ಹೋದರು.

ಕುತೂಹಲದಿಂದ ನಾನೂ ನುಗ್ಗಿದೆ. ಅದೊಂದು ಸಣ್ಣ ಮನೆ. ಎಷ್ಟು ಸಣ್ಣದೆಂದರೆ, ಒಂಟೆ ಪಾಲಕನಾಗಿರುವ ನನ್ನಬ್ಬನ ಮನೆಗಿಂತಲೂ ಸಣ್ಣದು. ದೊಡ್ಡ ಒಡೆಯರ ಮನೆಯಲ್ಲಿರುವಾಗ, ಸಣ್ಣ ಒಡತಿ ಮಲಗುತ್ತಿದ್ದ ಕೋಣೆಯ ವಿಸ್ತಾರವೇ ಈ ಮನೆಯ ಎರಡು ಪಾಲಷ್ಟಿತ್ತು.

ಹಿಂಭಾಗದ ಗೋಡೆಯ ಬಳಿ ಹಾಸಿದ್ದ ಚಾಪೆಯ ಮೇಲೆ ಪ್ರವಾದಿಯವರು ಮುಗುಳುನಗುತ್ತಾ ಕುಳಿತಿದ್ದರು.

ಸಣ್ಣ ಒಡತಿಯನ್ನು ಪ್ರವಾದಿಯವರ ಪಕ್ಕದಲ್ಲಿ ಕುಳ್ಳಿರಿಸಿದ ಅಬ್ಬ, ಪಕ್ಕದಲ್ಲೇ ನಿಂತರು.

ಸಣ್ಣ ಒಡತಿಯ ದೊಡ್ಡ ಕಣ್ಣುಗಳು ನಾಚಿಕೆಯಿಂದ ಪುಟ್ಟದಾಗಿ ಪಿಳಿಪಿಳಿಗುಟ್ಟುತ್ತಿದ್ದವು. ತಮ್ಮ ನಿಲುವಂಗಿಯ ಜೇಬಿನಿಂದ ಕಪ್ಪು ಮಣಿಗಳನ್ನು ಪೋಣಿಸಿದ ಆಭರಣವೊಂದನ್ನು ಹೊರತೆಗೆದ ಪ್ರವಾದಿಯವರು ಅದನ್ನು ಹೊಸ ಮದುಮಗಳ ಕೊರಳಿಗೆ ತೊಡಿಸಿದರು. ಪಕ್ಕದಲ್ಲೇ ಇರಿಸಿದ್ದ ಮೇಕೆ ಹಾಲಿನ ಬೋಗುಣಿಯನ್ನು ಎತ್ತಿಕೊಂಡ ಪ್ರವಾದಿಯವರು, ಒಂದು ಗುಟುಕು ಕುಡಿದು ತಮ್ಮ ಹೊಸ ಪತ್ನಿಯತ್ತ ಚಾಚಿದಾಗ ಮದುಮಗಳ ಮುಖ ರಂಗೇರಿತ್ತು. ಪ್ರವಾದಿಯವರ ಮುಖ ನೋಡಲೂ ನಾಚಿ ತಲೆ ತಗ್ಗಿಸಿದ್ದರಾದರೂ, ಅವರ ಕೈಯಿಂದ ಬೋಗುಣಿಯನ್ನು ಎತ್ತಿಕೊಂಡು ಸಂಕೋಚದಿಂದಲೇ ಒಂದು ಗುಟುಕು ಹಾಲು ಕುಡಿದಂತೆ ನಟಿಸಿ ಬೋಗುಣಿಯನ್ನು ಬೆನ್ನ ಹಿಂದೆ ಮೊಣಕಾಲು ಬಗ್ಗಿಸಿ ಕುಳಿತಿದ್ದ ಅವರಕ್ಕ ಅಸ್ಮಾರಿಗೆ ನೀಡಿದರು. ಸಂತೋಷದಿಂದಲೇ ಗುಟುಕು ಹಾಲು ಕುಡಿದ ಅಸ್ಮಾ ಬೋಗುಣಿಯನ್ನು ಪಕ್ಕದಲ್ಲಿ ನಿಂತಿದ್ದ ದೊಡ್ಡ ಒಡತಿಗೆ ದಾಟಿಸಿದರು. ಅವರೂ ಒಂದು ಗುಟುಕು ಕುಡಿದು ಅವರ ಪಕ್ಕದಲ್ಲಿದ್ದವರಿಗೆ ಬೋಗುಣಿಯನ್ನು ನೀಡಿದರು. ಆ ಪುಟ್ಟ ಕೋಣೆಯ ನಾಲ್ಕೂ ದಿಕ್ಕಿನಲ್ಲಿ ಹಾಲಿನ ಬೋಗುಣಿ ತೇಲುತ್ತಿರುವಂತೆಯೇ, ಪ್ರವಾದಿಪತ್ನಿಯೆಂಬ ಬೆಳಕು ನನ್ನ ಪುಟ್ಟ ಒಡತಿಯ ದೊಡ್ಡ ಕಣ್ಣುಗಳಲ್ಲಿ ನಿಧಾನವಾಗಿ ಚಿಗುರಲಾರಂಭಿಸಿತ್ತು.

ಇವೆಲ್ಲ ನಡೆದು ನಾಲ್ಕೈದು ತಿಂಗಳು ದಾಟಿದ್ದಿರಬಹುದು.

ನನ್ನ ಮನೆಯಿಂದ ಸಣ್ಣ ಒಡತಿಯ ಮನೆಗೆ ಬಹಳ ದೂರವೇನೂ ಇಲ್ಲ. ಹಗಲಿಡೀ ಅವರ ಜೊತೆಯಲ್ಲೇ ಇರುವ ನನ್ನನ್ನು ಕಾಣಲು ಅವರು ನನ್ನ ಮನೆಗೆ ಬರಬೇಕಾಗಿರುವ ಪ್ರತ್ಯೇಕ ಕಾರಣವೂ ಇರುತ್ತಿರಲಿಲ್ಲ.

'ಏನಾಯಿತು ನನ್ನ ಪುಟ್ಟ ಒಡತಿಗೆ ? ಜಗಳ ಮಾಡಿಕೊಂಡಿರಾ?' ಪ್ರಶ್ನಿಸಿದ್ದೆ,

'ಇನ್ನೂ ಇಲ್ಲ ಅಫೀರಾ, ಜಗಳವಾಡುವ ಮೊದಲು ನಿನ್ನ ಸಲಹೆ ಪಡೆಯಲು ಬಂದೆ' ಎಂದರು

‘ಜಗಳವೇಕೆ ಮಾಡಬೇಕು? ಅದೂ, ಎಲ್ಲ ತಿಳಿದ ಪ್ರವಾದಿಯವರ ಜೊತೆಗೆ?’

‘ಅವರು ಮೊದಲು ಮನುಷ್ಯ, ಬಳಿಕ ಪ್ರವಾದಿ.’ ಅರೆಕ್ಷಣವೂ ಯೋಚಿಸದೆ ಕಡ್ಡಿ ಮುರಿದಂತೆ ಹೇಳಿದ್ದರು ಪುಟ್ಟ ಒಡತಿ.

ಸಿಡಿಲೆರಗಿದಂತಾಗಿತ್ತು ನನಗೆ!

ಎಲ್ಲ ಮನುಷ್ಯರ ಸಾಲಿನಲ್ಲಿ ಪ್ರವಾದಿಯವರನ್ನೇಕೆ ನಿಲ್ಲಿಸುತ್ತಿದ್ದಾರೆ ಇವರು? ಅದೂ, ಮದುವೆಯಾಗಿ ನಾಲ್ಕು ತಿಂಗಳೂ ಕಳೆದಿಲ್ಲ. ಚಿಕ್ಕವಳಿದ್ದಾಗ ಪುಟ್ಟ ಒಡತಿ ಸ್ವಲ್ಪ ಮುಂಗೋಪಿಯಾಗಿದ್ದದ್ದೇನೋ ನಿಜವೇ. ಆದರೂ, ಇಂದಿನಂತೆ ಎಂದೂ ಮುಖ ಗಂಟಿಕ್ಕಿಕೊಂಡವರಲ್ಲ.

‘ಏನಾಯಿತು ಹೇಳಿ ಸಣ್ಣ ಒಡತಿ?’ ಎನ್ನುತ್ತಾ ಅವರ ಬಳಿ ಕುಳಿತೆ.

‘ನಿನ್ನೆ ರಾತ್ರಿ..’ ಎಂದವರು ಮಾತು ಮುಂದುವರಿಸಲಾಗದೆ ಮೌನಕ್ಕೆ ಜಾರಿದ್ದರು.

ಗಂಡ ಹೆಂಡತಿ ನಡುವೆ ಜಗಳ ನಡೆದಿದ್ದಿರಬೇಕೆಂದು ಊಹಿಸಿದೆ. ಸಣ್ಣ ಒಡತಿಯ ಬೆನ್ನು ಸವರುತ್ತಾ, ‘ಹೇಳಿ ಒಡತಿ, ನಿಮಗೆ ಅವರು ಹೊಡೆದರೆ? ಅದಕ್ಕೇಕೆ ಚಿಂತೆ ಮಾಡುವಿರಿ? ಗಂಡ ಹೆಂಡತಿ ಅಂದಮೇಲೆ ಅವೆಲ್ಲ ಇರುವಂಥದ್ದೆ. ನಾವು ಏನಾದರೂ ಗಂಡಾಗಿ ಹುಟ್ಟಿದ್ದರೆ ನಾವೂ ಹಾಗೆಯೇ ಮಾಡುತ್ತಿದ್ದೆವೋ ಏನೋ’ ಎಂದು ನಕ್ಕಂತೆ ನಟಿಸಿ ಅವರನ್ನು ಸಮಾಧಾನಿಸಲು ಯತ್ನಿಸಿದೆ. ‘ಹೆಂಡತಿಗೆ ಗಂಡ ಹೊಡೆಯುವುದು ಅಪರಾಧವೇ ಅಲ್ಲ. ನನ್ನನ್ನು ಅಷ್ಟೊಂದು ಪ್ರೀತಿಸುತ್ತಿದ್ದ ಗಂಡನೂ ಕೆಲವೊಮ್ಮೆ ನನಗೆ ಹೊಡೆಯುತ್ತಿದ್ದರು. ಮರುಕ್ಷಣವೇ ತಬ್ಬಿಕೊಂಡು ಅಳುತ್ತಿದ್ದರು. ಇನ್ನೆಂದೂ ಹೊಡೆಯುವುದಿಲ್ಲ ಎಂದು ಹೇಳುತ್ತಾ ರಮಿಸುತ್ತಿದ್ದರು. ಆದರೆ, ನನ್ನನ್ನು ಬಹಳ ಪ್ರೀತಿಸುತ್ತಿದ್ದ ಅವರಿಗೆ ಒಂದು ಆರೋಗ್ಯವಂತ ಮಗುವನ್ನು ಹೆತ್ತು ಕೊಡಲು ನನ್ನಿಂದ ಸಾಧ್ಯವಾಗಿದ್ದಿರಲಿಲ್ಲ. ನಾನೇನಾದರೂ ಸತ್ಯವಿಶ್ವಾಸಿಯಾಗದಿರುತ್ತಿದ್ದರೆ, ಕಅಬಾ ಮಂದಿರದಲ್ಲಿ ನಡು ರಾತ್ರಿಯ ಹೊತ್ತಲ್ಲಿ ನಡೆಯುತ್ತಿದ್ದ ಉಜ್ಝಾ ದೇವತೆಯ ಗರ್ಭದಾನ ಪೂಜೆಗೆ ಹೋಗಲೂ ಸಿದ್ಧಳಾಗಿದ್ದೆ.

ಗರ್ಭಿಣಿ ಹೆಂಗಸಿನಂತೆ ದೊಡ್ಡ ಹೊಟ್ಟೆಯನ್ನು ತೋರಿಸುತ್ತಿದ್ದ ಆ ಉಜ್ಝಾ ದೇವತೆಯು ಫಲವಂತಿಕೆಯ ದೇವತೆ. ದೇವರ ಮೂವರು ಪುತ್ರಿಯರಲ್ಲಿ ಅವಳೇ ಹಿರಿಯವಳಂತೆ. ಚಿಕ್ಕವಳಿದ್ದಾಗ ತಿಂಗಳಿಗೆರಡು ಬಾರಿಯಾದರೂ ಉಮ್ಮನ ಜೊತೆಯಲ್ಲಿ ಹೋಗಿ ಪೂಜೆ ಮಾಡಿಕೊಂಡು ಬರುತ್ತಿದ್ದೆ. ಉಜ್ಝಾದೇವತೆಯ ಎದೆಯ ಮೇಲೆ ಅಂಟಿಸಿದಂತಿರುವ ಉರುಟು ಉರುಟಾಗಿರುವ ಎರಡು ದಪ್ಪ ಮೊಲೆಗಳನ್ನು ನೆನಪಿಸಿಕೊಳ್ಳುವಾಗಲೇ ಕೈ ಕಾಲುಗಳು ನಡುಗುತ್ತಿದ್ದವು. ಅಷ್ಟೊಂದು ಭಯಾನಕ





ವಾಗಿದ್ದವು ಅವಳ ರೂಪ. ದೊಡ್ಡ ಗುಡಾಣವೊಂದನ್ನು ಕವುಚಿ ಇರಿಸಿದಂತೆಯೇ ಕಾಣಿಸುತ್ತಿತ್ತು ಅವಳ ಹಿಂಭಾಗ. ಮಕ್ಕಳಾಗದ ಮಹಿಳೆಯರು ಅಲ್ಲಿ ತಮ್ಮ ಎದೆವಸ್ತ್ರವನ್ನು ಸರಿಸಿ, ಉಝ್ಝಾ ದೇವತೆಯ ಎದೆಗೆ ಮೆತ್ತಗೆ ಸವರುತ್ತಿದ್ದುದನ್ನು ಕಣ್ಣಾರೆ ಕಂಡಿದ್ದೆ. ಅಕ್ಕಪಕ್ಕಗಳಲ್ಲಿ ಪ್ರದಕ್ಷಿಣೆ ಬರುತ್ತಿದ್ದವರು ಅವನ್ನೆಲ್ಲ ಕಂಡೂ ಕಾಣದವರಂತೆ ತಮ್ಮ ತಮ್ಮ ಪೂಜೆಗಳಲ್ಲಿ ಮುಳುಗಿರುತ್ತಿದ್ದರು. ಆ ಹೆಂಗಸರು ಹಾಗೇಕೆ ಮಾಡುತ್ತಾರೆಂಬುದು ಎಲ್ಲರಿಗೂ ಗೊತ್ತಿರುತ್ತಿತ್ತು. ಉಝ್ಝಾ ದೇವತೆಯನ್ನು ಪೂಜಿಸಿದರೆ ಮಕ್ಕಳಾದವರಿಗೂ ಮಕ್ಕಳಾಗುತ್ತಿತ್ತು. ಹುಟ್ಟಿದ ಮಕ್ಕಳು ಸಾಯುತ್ತಿರಲಿಲ್ಲ ಅಲ್ಲಿ ನೆಲೆಸಿದ್ದ ಇತರ ದೇವತೆಗಳಿಗಿಂತ ವಿಶೇಷ ಪೂಜೆಗಳು ಅವಳಿಗೆ ಸಲ್ಲುತ್ತಿದ್ದವು. ಹಾಗೊಂದು ವೇಳೆ, ಹಾಗೆಲ್ಲ ಎದೆ ಸವರಿದ ಬಳಿಕವೂ ಮಕ್ಕಳಾಗದಿದ್ದರೆ, ನಡು ರಾತ್ರಿಯಲ್ಲಿ ಆ ದೇವತೆಯ ಎದುರು ಕಪ್ಪು ನಿಲುವಂಗಿ ಧರಿಸಿರುವ ಅರ್ಚಕರು ನಡೆಸುತ್ತಿದ್ದ ವಿಶೇಷ ಪೂಜೆಗಳಿಗೆ ಹೋಗಿ, ಕಣ್ಣಿಗೆ ಕಪ್ಪು ವಸ್ತ್ರ ಕಟ್ಟಿಕೊಂಡು ಒಂದು ರಾತ್ರಿ ಬೆತ್ತಲಾಗಿ ಮಲಗಿದರೆ ಸಾಕು; ಗರ್ಭವತಿಯಾಗುವುದರಲ್ಲಿ ಯಾವುದೇ ಅನುಮಾನವಿರುತ್ತಿರಲಿಲ್ಲ. ಆದರೆ, ಅಂತಿಮಸತ್ಯದ ವಿಶ್ವಾಸಿಗಳಾದ ಬಳಿಕ ಅಂಥವುಗಳನ್ನೆಲ್ಲ ನಾವು ನಂಬುತ್ತಿರಲಿಲ್ಲ. ಪ್ರವಾದಿಯವರು ಸ್ಪಷ್ಟವಾಗಿ ಹೇಳಿದ್ದರು. ಅಲ್ಲಾಹುವಿಗೆ ಹೆಂಡತಿ ಮಕ್ಕಳು ಯಾರೂ ಇಲ್ಲದಿರುವಾಗ, ಅವನ ಮಗಳಾಗಿ ದೇವತೆಯೊಬ್ಬಳು ಇರುವುದಾದರೂ ಹೇಗೆ?

ನನ್ನ ಗಂಡನಿಗೆ ಹಗಲಲ್ಲಿ ಏನೂ ಕೆಲಸವಿರುತ್ತಿರಲಿಲ್ಲ. ಅವರ ಕೆಲಸ ಆರಂಭ ವಾಗುವುದೇ ಕತ್ತಲಾದ ಬಳಿಕ. ಕಅಬಾ ಮಂದಿರದಿಂದ ಮದೀನಾಕ್ಕೆ ಹೋಗುವ ಉತ್ತರ ದಿಕ್ಕಿನ ಹಾದಿಯ ಪಕ್ಕದಲ್ಲಿ, ಕಿನಾನಾ ಗೋತ್ರದವರ ನಾಟ್ಯ ಮಂದಿರದಲ್ಲಿ ಹಾಡುಗಾರರಾಗಿದ್ದವರು ಅವರು. ಅವರು ಸ್ವತಃ ಕವಿಯೂ ಕೂಡಾ. ಆ ನಾಟ್ಯ ಮಂದಿರದಲ್ಲಿ ನಡುರಾತ್ರಿಯವರೆಗೂ ಕಾವ್ಯಗೋಷ್ಠಿಗಳು ನಡೆಯುತ್ತಿದ್ದವು. ಮಧುರ ಕಾವ್ಯದಿಂದ ಶುರುವಾಗುತ್ತಿದ್ದ ಪಾನ ಗೋಷ್ಠಿಗಳು, ಕೆಲವೊಮ್ಮೆ ಕೊಲೆಗಳೊಂದಿಗೆ ಕೊನೆಗೊಳ್ಳುವುದೂ ಇತ್ತು. ಮದುವೆಯಾದ ಮೊದಲ ವರ್ಷದಲ್ಲಿ ಅವರು ಮಧ್ಯರಾತ್ರಿ ಯಾಗುವ ಮುನ್ನವೇ ಮನೆಗೆ ಬಂದು ಸೇರುತ್ತಿದ್ದರು. ನಾಟ್ಯಾಲಯದಲ್ಲಿ ಯಾರು ಏನು ಮಾಡಿದರು, ಯಾರು ಯಾವ ನರ್ತಕಿಯ ಮೇಲೆ ಹಲ್ಲೆ ಮಾಡಿದರು, ಯಾರೆಲ್ಲ ಹೊಡೆದಾಡಿಕೊಂಡರು ಇತ್ಯಾದಿ ಎಲ್ಲವನ್ನೂ ವಿವರಿಸುತ್ತಿದ್ದರು. ಅಲ್ಲಿಗೆ ಶ್ರೀಮಂತರು ಮಾತ್ರವಲ್ಲ, ಬಡವರೂ ಬರುತ್ತಿದ್ದರಂತೆ. ಬಡವನಲ್ಲಿ ನಾಲ್ಕು ನಾಣ್ಯ ಸೇರಿದ ಕೂಡಲೇ ಅವನಿಗೆ ಸಿರಿವಂತರ ಎಲ್ಲ ಖಾಯಿಲೆಗಳೂ ಅಂಟಿಕೊಂಡುಬಿಡುತ್ತಿದ್ದವು. ನಾಟ್ಯ ಮಂದಿರದ ಪಕ್ಕದಲ್ಲೇ ಮದ್ಯದಂಗಡಿ. ಎದುರಿಗೆ ಜೂಜು ಕಟ್ಟೆ.

ಕರುಣಾಳುವಾದ ಅಲ್ಲಾಹು ಗಂಡಿಗೆ ಕೊಟ್ಟಿರುವ ಹಲವು ಹಕ್ಕುಗಳಲ್ಲಿ ಹೆಂಡತಿಗೆ ಹೊಡೆಯುವುದೂ ಒಂದು. ಇಲ್ಲದಿದ್ದರೆ ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದ ಗಂಡನೂ

ನನಗೆ ಯಾಕೆ ಹೊಡೆಯುತ್ತಿದ್ದರು? ನನ್ನ ಗಂಡನ ವಿಷಯ ಹೋಗಲಿ. ಎಲ್ಲರಂಥ ವರಲ್ಲ ಎಂದು ಎಲ್ಲರಿಂದಲೂ ಹೊಗಳಿಸಿಕೊಳ್ಳುತ್ತಿರುವ ಪ್ರವಾದಿಯವರೂ ಹೆಂಡತಿಗೆ ಹೊಡೆಯುತ್ತಾರೆಯೆ? ಇರಲಾರದು, ಬೇರೇನೋ ಆಗಿದೆ. ಏನಾಗಿರಬಹುದು?

'ಏನಾಯಿತು ಹೇಳಿ ಒಡತಿ?' ಮತ್ತೊಮ್ಮೆ ಪ್ರಶ್ನಿಸಿದೆ.

'ನಿನ್ನೆ ರಾತ್ರಿ ಅವರ ತಲೆದಿಂಬಿನಡಿಯಲ್ಲಿ ಬಂಗಾರದ ಕಂಠೀಹಾರವೊಂದನ್ನು ನೋಡಿದೆ ಅಫೀರಾ!' ಅವರ ಮಾತಿನಲ್ಲಿ ಅಚ್ಚರಿಗಿಂತ ಅಸೂಯೆಯೇ ಹೆಚ್ಚಿದ್ದಂತೆ ಅನ್ನಿಸಿತ್ತು.

'ಏನು! ಪ್ರವಾದಿಯವರ ತಲೆದಿಂಬಿನ ಅಡಿಯಲ್ಲಿ ಬಂಗಾರದ ಕಂಠೀಹಾರವೆ?' ನನಗೆ ನಂಬಿಕೆಯೇ ಆಗಿರಲಿಲ್ಲ.

'ಅವರನ್ನೇ ಕೇಳಬೇಕಾಗಿತ್ತು ನೀವು. ಅದು ಯಾರದ್ದು ಅಂತ? ನೀವು ಕೇಳಿದರೆ ಅವರೇನು ಹೇಳದಿರುತ್ತಾರಾ?'

'ಕೇಳಬೇಕೆಂದು ನನಗೂ ಅನ್ನಿಸಿತ್ತು ಅಫೀರಾ. ಆದರೆ ಯಾಕೋ ನಾಲಗೆಯೇ ಹೊರಳಲಿಲ್ಲ. ಒಂದು ವೇಳೆ ಆ ಹಾರದ ಗುಟ್ಟನ್ನು ರಹಸ್ಯವಾಗಿಯೇ ಇಟ್ಟುಕೊಳ್ಳಲು ಅವರು ಬಯಸಿದ್ದರೆ, ಏನಾದರೊಂದು ಸುಳ್ಳು ಉತ್ತರ ಕೊಡಬೇಕಾಗುತ್ತದೆ. ಸುಳ್ಳು ಅವರ ಬಾಯಿಂದ ಬರಲಾರದು. ಆಗವರು ಸಂದಿಗ್ಧದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಹಾಗಾಗಿ ಸುಮ್ಮನಿದ್ದೆ.'

ಸಣ್ಣ ಒಡತಿಯ ಮಾತಿನಲ್ಲಿ ಪ್ರಾಮಾಣಿಕೆಯೂ ಇತ್ತು. ಪ್ರವಾದಿಯವರ ಬಗ್ಗೆ ಅಭಿಮಾನವೂ ಇತ್ತು.

'ಆದರೆ, ಈಗ ಸ್ವಲ್ಪ ಹೊತ್ತಿನ ಮೊದಲು ಏನಾಯ್ತು ಗೊತ್ತಾ?' ಎಂದು ಪ್ರಶ್ನಿಸಿದ ಪುಟ್ಟ ಒಡತಿ, ತನ್ನ ದೊಡ್ಡ ಕಣ್ಣುಗಳಿಂದ ನನ್ನ ಮುಖ ದಿಟ್ಟಿಸಿದ್ದರು. ನಾನೂ ಅವರನ್ನು ದಿಟ್ಟಿಸುತ್ತಾ 'ಇಲ್ಲ' ಎನ್ನುವಂತೆ ತುಟಿ ಕಚ್ಚಿ ತಲೆ ಅಲ್ಲಾಡಿಸಿದೆ.

'ಏನಾಯ್ತು ಅಂದ್ರೇ...,, ಈಗ ಸ್ವಲ್ಪ ಹೊತ್ತಿನ ಹಿಂದೆ ಅವರು ಸ್ನಾನಕ್ಕೆಂದು ಮಸೀದಿಯ ಬಾವಿ ಬಳಿಗೆ ಹೋಗಿದ್ದರು. ನನಗೆ ಕುತೂಹಲವನ್ನು ತಡೆದುಕೊಳ್ಳ ಲಾಗಿರಲಿಲ್ಲ. ಅವರ ತಲೆದಿಂಬು ಸರಿಸಿ ಹಾರವನ್ನು ಎತ್ತಿಕೊಂಡೆ. ಎಷ್ಟು ಚಂದ ಇತ್ತು ಗೊತ್ತೇ ಅದು? ಅಂತಹ ಹಾರವನ್ನು ಇದುವರೆಗೆ ಕಂಡವಳಲ್ಲ ನಾನು. ಅದನ್ನೇ ಸ್ವಲ್ಪ ಹೊತ್ತು ಹಾಗೇ ಹಿಡಿದುಕೊಂಡೆ. ನಾನು ತೊಟ್ಟುಕೊಂಡರೆ ಹೇಗೆ ಕಂಡೀತು ಎಂದು ಕಾಣುವ ಆಸೆಯಾಯಿತು. ಒಂದು ಬಟ್ಟಲಲ್ಲಿ ನೀರು ತುಂಬಿಸಿ ತಂದು ನೆಲದ ಮೇಲಿರಿಸಿದೆ. ಇನ್ನೇನು ಕೊರಳಿಗೆ ತೊಟ್ಟುಕೊಳ್ಳಬೇಕು ಅನ್ನುವಷ್ಟರಲ್ಲಿ, ಹಲ್ಲುಜ್ಜುವ ಕಡ್ಡಿ ಮರೆತುಹೋಗಿದ್ದ ಅವರು ಒಳಗೆ ಬಂದುಬಿಟ್ಟಿದ್ದರು.





'ನಿಲ್ಲು! ಎಂದವರೇ, ಹಾರವನ್ನು ನನ್ನಿಂದ ಕಿತ್ತು ತಲೆದಿಂಬಿನ ಅಡಿಯಲ್ಲೇ ಇರಿಸಿ, 'ಅದನ್ನು ಇನ್ನೊಮ್ಮೆ ಮುಟ್ಟಬೇಡ. ಇದು ನನ್ನ ಆದೇಶ' ಎಂದು ಎಚ್ಚರಿಸಿ ಸ್ನಾನಕ್ಕೆ ಹೋಗಿಯೇಬಿಟ್ಟರು. ಅವರ ಮಾತು ಕೇಳಿ ನನಗೆ ಅಳುವೇ ಬಂತು. ಏನು ಮಾಡಬೇಕೆಂಬುದೇ ಹೊಳೆಯಲಿಲ್ಲ. ಸೀದಾ ಇಲ್ಲಿಗೆ ಬಂದೆ. ಈಗ ನೀನೇ ಹೇಳು, ನಾನೇನು ಮಾಡಬೇಕು?'

ಏನು ಮಾಡಬೇಕೆಂಬುದು ನನಗೂ ಹೊಳೆದಿರಲಿಲ್ಲ
ಆ ಬಂಗಾರದ ಕಂಠೀಹಾರ ಪ್ರವಾದಿಯವರ ಬಳಿಗೆ ಬಂದದ್ದಾದರೂ ಹೇಗೆ?

ಎರಡು ವಾರಗಳ ಹಿಂದೆ ನಡೆದಿದ್ದ 'ಬದರ್' ಯುದ್ಧದಲ್ಲಿ ಸೋತ ಶತ್ರುಗಳು ರಣರಂಗದಲ್ಲಿ ಬಿಟ್ಟೋಡಿದ ಸಂಪತ್ತನ್ನು ಹಂಚಿಕೊಳ್ಳುವಾಗ ಎದುರಾದ ತಕರಾರೊಂದನ್ನು ನಿವಾರಿಸಿಕೊಡುವ ಬೇಡಿಕೆಯೊಂದಿಗೆ ಕೆಲವು ಯೋಧರು ಅವರ ಬಳಿಗೆ ಬಂದಿದ್ದರು. ಆಗಿನ್ನೂ ಪ್ರವಾದಿಯವರು, ತಮ್ಮ ಎರಡನೆ ಮಗಳು ರುಖಿಯ್ಯಾಳ ಮರಣದ ದುಃಖದಿಂದ ಹೊರಬಂದಿರಲಿಲ್ಲ. ಯುದ್ಧಭೂಮಿಯ ಮುಂಚೂಣಿಯಲ್ಲಿ ನಿಂತು ಶತ್ರುಗಳಿಗೆ ಎದೆಯೊಡ್ಡಿ ನಿಂತು ಹೋರಾಡಿ ಗೆದ್ದವರಿಗೆ, ಹಿಂದಿನ ಸಾಲುಗಳಲ್ಲಿ ಸರದಿ ಕಾಯುತ್ತಿದ್ದವರಿಗಿಂತ ದೊಡ್ಡ ಪಾಲು ಹಂಚಿಕೆಯಾಗ ಬೇಕೆಂಬುದು ಯೋಧರ ವಾದವಾಗಿತ್ತು. ಬಾಗಿಲ ಬಳಿ ನಿಂತು ಅವರೆಲ್ಲರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ನನಗೂ ಅವರ ವಾದ ಸರಿಯೆನ್ನಿಸಿತ್ತು.

ಆದರೆ, ಪ್ರವಾದಿಯವರು ಹೇಳಿದ್ದ ತೀರ್ಮಾನವೇ ಬೇರೆ.

'ಕೊಂದವನೇ ಕೊಲ್ಲಲ್ಪಟ್ಟವನ ಸೊತ್ತಿಗೆ ಹಕ್ಕುದಾರನು. ಬಂಧಿಸಿದವನೇ ಬಂಧಿಸಲ್ಪಟ್ಟವನ ಪರಿಹಾರಧನಕ್ಕೆ ಯಜಮಾನನು. ಆದರೆ, ಬಂಧಿಸಿದವ ರಾರೆಂಬುದು ನಿರ್ಧರಿಸಲಾಗದ ಒತ್ತೆಯಾಳುಗಳ ಬಿಡುಗಡೆಗಾಗಿ ಪಡೆಯಲಾಗುವ ಹಾಗೂ ಶತ್ರುಗಳು ಬಿಟ್ಟೋಡಿದ ಸೊತ್ತುಗಳ ಹಕ್ಕುದಾರನು ಅಲ್ಲಾಹು ಮಾತ್ರ. ಅವುಗಳನ್ನು ಸತ್ಯವಿಶ್ವಾಸಿ ಸಮಾಜದ ಕೆಲಸಗಳಿಗಾಗಿ ಬಳಸುವ ಅಧಿಕಾರವಿರುವುದು, ಅವನಿಂದ ನಿಯಮಿತನಾದ ಪ್ರವಾದಿಗೆ ಮಾತ್ರ.'

ಈ ತೀರ್ಮಾನದಿಂದಾಗಿ ಯುದ್ಧಾರ್ಜಿತ ಸೊತ್ತುಗಳೆಲ್ಲವೂ ಮಸೀದಿಗೆ ಹೊಂದಿ ಕೊಂಡಂತಿದ್ದ ಸಣ್ಣ ಕೋಣೆಯೊಂದಕ್ಕೆ ಸೇರಿಕೊಳ್ಳುತ್ತಿದ್ದವು. ಆದರೆ, ಅವುಗಳಲ್ಲಿ ಯುದ್ಧಾಯುಧಗಳಿದ್ದವೇ ಹೊರತು, ನಗನಾಣ್ಯಗಳಿರಲಿಲ್ಲ. ಅವೆಲ್ಲ ಸಂಗ್ರಹವಾಗ ಲಾರಂಭಿಸಿದ್ದು, ಒತ್ತೆಯಾಳುಗಳನ್ನು ಪರಿಹಾರಧನ ನೀಡಿ ಬಿಡಿಸಿಕೊಂಡುಹೋಗಲು, ಅವರ ಬಂಧುಗಳು ಬರಲಾರಂಭಿಸಿದ ಆನಂತರವೇ.

ಒತ್ತೆಸೆರೆಯಾಳಾಗಿದ್ದ ಎಪ್ಪತ್ತು ಯೋಧರನ್ನು ಮದೀನಾದ ಬೇರೆ ಬೇರೆ ಮನೆಗಳಲ್ಲಿ ಇರಿಸಿಕೊಳ್ಳಲಾಗಿತ್ತು. ಅವರವರ ಅಪರಾಧದ ಪ್ರಮಾಣಕ್ಕನುಗುಣವಾಗಿ ರಕ್ತಪರಿಹಾರ ಧನವನ್ನು ನಿರ್ಧರಿಸಲಾಗುತ್ತಿತ್ತು. ರಕ್ತಪರಿಹಾರಧನವನ್ನು ನೀಡುವಷ್ಟು ಸಿರಿವಂತ ಬಂಧುಗಳಿಲ್ಲದ ಹಾಗೂ ಅನಕ್ಷರಸ್ತರನ್ನು ಹಾಗೆಯೇ ಬಿಟ್ಟುಬಿಡಲಾಗುತ್ತಿತ್ತು. ಅಕ್ಷರಸ್ತ ಒತ್ತೆಯಾಳುಗಳಿಗೆ ಹತ್ತು ಹತ್ತು ಮಕ್ಕಳಿಗೆ ಓದು ಕಲಿಸುವ ಶಿಕ್ಷೆ ವಿಧಿಸ ಲಾಗುತ್ತಿತ್ತು. ನಿರ್ದಿಷ್ಟವಾಗಿ ಯಾರು ಬಂಧಿಸಿದ್ದರು ಎಂಬುದನ್ನು ತೀರ್ಮಾನಿಸ ಲಾಗದ ಕೈದಿಗಳ ಬಿಡುಗಡೆಗಾಗಿ ವಸೂಲಿ ಮಾಡಲಾದ ಸಂಪತ್ತನ್ನು ಪ್ರವಾದಿಯವರ ವಶಕ್ಕೆ ಒಪ್ಪಿಸಲಾಗುತ್ತಿತ್ತು. ಆ ಪರಿಹಾರಧನದಲ್ಲಿ, ಬೆಳ್ಳಿ ನಾಣ್ಯಗಳಿದ್ದವು, ಬಂಗಾರದ ಆಭರಣ ಗಳಿದ್ದವು. ಅವೆಲ್ಲವನ್ನೂ ಸಣ್ಣ ಒಡತಿಯ ಮನೆಯೊಳಗೆ ಎರಡು ಮರದ ಪೆಟ್ಟಿಗೆಗಳಲ್ಲಿ ಜೋಪಾನವಾಗಿ ಇರಿಸಲಾಗಿತ್ತು. ಅವುಗಳನ್ನು ಇರಿಸುತ್ತಿದ್ದವರು ಸ್ವತಃ ಸಣ್ಣ ಒಡತಿಯೆ.

ಆ ಪೆಟ್ಟಿಗೆಗಳಿಗೆ ಬೀಗಗಳೇನೂ ಇರಲಿಲ್ಲ. ಮನೆಯ ಬಾಗಿಲಿಗೆ ಬೀಗವಿದ್ದರೆ ತಾನೆ ಪೆಟ್ಟಿಗೆಗಳಿಗೆ ಬೀಗಗಳಿರುವುದು? ಪ್ರವಾದಿಯವರು ಬಯಸಿರುತ್ತಿದ್ದರೆ ಯಾವುದೇ ಹೊತ್ತಲ್ಲಿ ಅವುಗಳನ್ನು ಹೊರತೆಗೆದು ಬಳಸಬಹುದಾಗಿತ್ತು. ಆದರೆ, ಬಂಗಾರದ ಹಾರವನ್ನು ಇಟ್ಟುಕೊಂಡು ಅವರೇನು ಮಾಡುತ್ತಾರೆ? ತೊಟ್ಟುಕೊಳ್ಳುತ್ತಾರೆಯೆ? ಮಾರಾಟ ಮಾಡುತ್ತಾರೆಯೆ? ಸ್ವಂತಕ್ಕೆಂದು ಹೊಸ ಚಪ್ಪಲಿಯನ್ನೇ ಖರೀದಿಸಲು ಇಷ್ಟ ಪಡದವರು, ಬೇರೆಯವರ ಸೊತ್ತಿಗೆ ಆಸೆಪಡುತ್ತಾರೆಯೆ? ಆ ಹಾರದ ಹಿಂದೆ ಬೇರೇನೋ ಗುಟ್ಟು ಇರಬಹುದು. ಅದನ್ನು ಅವರಾಗಿ ರಟ್ಟು ಮಾಡುವವರೆಗೆ, ಇತರರಿಗೆ ಗೊತ್ತಾಗುವಂತಿರಲಿಲ್ಲ.

ಆದನ್ನೇ ಒಡತಿಗೂ ಹೇಳಿದೆ. 'ಆ ಹಾರದ ವಿಷಯ ಮರೆತುಬಿಡಿ ಒಡತಿ. ಯಾವ ಗಂಡಸೂ ತನ್ನ ಎಲ್ಲ ಗುಟ್ಟುಗಳನ್ನೂ ಹೆಂಡತಿಗೆ ಹೇಳಬೇಕೆಂಬ ನಿಯಮವಿಲ್ಲ. ನಿಯಮ ವಿರಬೇಕೆಂದು ನಾವೂ ಬಯಸಬಾರದು. ಆ ಹಾರ ಯಾರದ್ದೆಂಬುದನ್ನು ನಿಮಗೆ ಹೇಳಬೇಕು ಎಂದು ಅವರಿಗೆ ಅನ್ನಿಸಿದರೆ, ಒಂದೆರಡು ದಿನಗಳಲ್ಲಿ ಹೇಳಬಹುದು. ಅಲ್ಲಿಯವರೆಗೆ ಸುಮ್ಮನಿದ್ದುಬಿಡಿ' ಎಂದೆ.

ಅವರಿಗೆ ಸಮಾಧಾನವೇನೂ ಆದಂತಿರಲಿಲ್ಲ.

'ಸರಿ, ಹಾಗೇ ಮಾಡುವೆ' ಎಂದು ನನ್ನ ಸಮಾಧಾನಕ್ಕೆ ಹೇಳಿದವರು ಎದ್ದು ನಿಂತರು.

ನಾನೂ ಅವರ ಜೊತೆಗೆ ಹೊರಟೆ.

–೨–

ಬೆಳಕು ಮೇಲೇರುತ್ತಿದ್ದಂತೆ, ಮಸೀದಿಯಂಗಳದಲ್ಲಿ ಸಹವರ್ತಿಗಳೆಲ್ಲ ಸಭೆ ಸೇರಿದ್ದರು. ಮನೆಯಂಗಳದಲ್ಲಿ ಸಣ್ಣ ಒಡತಿಯ ಜೊತೆಗೆ ನಾನೂ ನಿಂತಿದ್ದೆ.





ಪ್ರವಾದಿಯವರು ಊರಲ್ಲಿದ್ದಾರೆಂದರೆ ಬೆಳಗ್ಗೆಯೇ ಆರಂಭವಾಗುವ ಧಾರ್ಮಿಕ ಸಭೆಗಳು, ಕತ್ತಲಾಗುವವರೆಗೂ ನಡೆಯುತ್ತಿದ್ದವು. ಕೆಲವೊಮ್ಮೆ ಮಧ್ಯರಾತ್ರಿಯಾದರೂ ಮುಗಿಯುತ್ತಿರಲಿಲ್ಲ. ಸಭೆ ಆರಂಭವಾಗುತ್ತಿದ್ದಂತೆಯೇ ಪ್ರವಾದಿಯವರು ಹೇಳಿದ್ದರು, 'ಮುಂದಿನ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡುವ ಮುನ್ನ ನನ್ನದೊಂದು ವೈಯುಕ್ತಿಕ ಅಹವಾಲನ್ನು ಆಲಿಸಿ, ಸಹವರ್ತಿಗಳಾಗಿರುವ ನೀವು ತೀರ್ಪು ನೀಡಬೇಕು.'

'ನಿಮ್ಮ ಅಹವಾಲಿಗೆ ನಮ್ಮ ತೀರ್ಪು! ತಮಗೆ ತಿಳಿಯಲಾಗದ್ದು ನಮಗೇನು ತಿಳಿಯುತ್ತದೆ?' ಪ್ರವಾದಿಯವರ ಬಲಗೈಯಂತಿದ್ದ ಮಹಾ ಪರಾಕ್ರಮಿ ಉಮ್ಮರ್ ಹೇಳಿದ್ದರು.

'ನಿಜ. ಏನು ಮಾಡಬೇಕೆಂಬುದನ್ನು ಅದಾಗಲೇ ನಾನು ತೀರ್ಮಾನಿಸಿರುವೆ. ನನ್ನ ತೀರ್ಮಾನಕ್ಕೆ ತಮ್ಮೆಲ್ಲರ ಅನುಮೋದನೆ ಬೇಕಾಗಿದೆ.'

'ನಮ್ಮೆಲ್ಲರ ಅನುಮೋದನೆಯನ್ನು ಈಗಲೇ ಪ್ರಕಟಿಸುತ್ತೇವೆ. ಹೇಳಿ, ನಿಮ್ಮ ಅಹವಾಲಾದರೂ ಏನು?' ಎಂದು ದೊಡ್ಡ ಒಡೆಯರು ಹೇಳಿದಾಗ, ಎಲ್ಲರೂ ಒಟ್ಟಾಗಿ 'ಹೌದು, ಹೌದು' ಎಂದು ತಮ್ಮ ಸಮ್ಮತಿಗಳನ್ನು ಘೋಷಿಸಿದ್ದರು.

'ನನ್ನ ಮೇಲೆ ತಾವಿಟ್ಟಿರುವ ವಿಶ್ವಾಸಗಳಿಗೆ ಕೃತಜ್ಞ' ಎಂದ ಪ್ರವಾದಿಯವರು ಎಲ್ಲರನ್ನೂ ದಿಟ್ಟಿಸುತ್ತಾ, 'ನಿಮಗೆಲ್ಲರಿಗೂ ಗೊತ್ತು, ನನಗೆ ಅಲ್ಲಾಹು ಕರುಣಿಸಿರುವ ಅನುಗ್ರಹಗಳಲ್ಲಿ, ಗತಿಸಿಹೋಗಿರುವ ನನ್ನ ಮೊದಲ ಪತ್ನಿ ಖದೀಜಾಳೇ ಬಲು ದೊಡ್ಡ ಬಹುಮಾನ. ಎಲ್ಲರೂ ನನ್ನನ್ನು ನಿರ್ಗತಿಕನೆಂದು ಮೂದಲಿಸುತ್ತಿದ್ದ ದಿನಗಳಲ್ಲಿ, ನನ್ನನ್ನು ಗಂಡನನ್ನಾಗಿ ಸ್ವೀಕರಿಸಿದ್ದವಳು ಖದೀಜಾ. ನನ್ನನ್ನು ಎಲ್ಲರೂ ಹುಚ್ಚನೆಂದು ಕರೆದಾಗಲೂ ಯಾಕೆ ಹಾಗೆ ಎಂದು ಪ್ರಶ್ನಿಸಿದವಳಲ್ಲ. ನನಗೆ ಸಂತಾನಭಾಗ್ಯವನ್ನು ನೀಡಿದವಳೂ ಅವಳೊಬ್ಬಳು ಮಾತ್ರ. ಸತ್ಯವಿಶ್ವಾಸಿಗಳಿಗೆಲ್ಲ ಕುರೈಶರು ಬಹಿಷ್ಕಾರ ಹಾಕಿದ್ದಾಗ, ತಾನು ಸಂಪಾದಿಸಿದ್ದ ಸಂಪತ್ತನ್ನೆಲ್ಲ ಕರಗಿಸಿ ನಮ್ಮೆಲ್ಲರ ಹಸಿವೆಯನ್ನು ಅವಳು ನೀಗಿಸಿದ್ದು ನಿಮಗೆಲ್ಲರಿಗೂ ಗೊತ್ತು' ಎಂದ ಪ್ರವಾದಿಯವರು, ತಮ್ಮ ನಿಲುವಂಗಿಯ ಜೇಬಿನಿಂದ ಅದೇ ಬಂಗಾರ ಕಂಠೀಹಾರವನ್ನು ಹೊರತೆಗೆದಿದ್ದರು.

'ಇದು ಖದೀಜಾಳ ಕಂಠೀಹಾರ. ನನ್ನ ಮೊದಲ ಮಗಳು ಝೈನಬಾಳಿಗೆ ಅವಳ ಮದುವೆಯ ದಿನದಲ್ಲಿ ಖದೀಜಾ ಉಡುಗೊರೆಯಾಗಿ ನೀಡಿದ್ದ ಹಾರವಿದು' ಎಂದವರು ಒಮ್ಮೆಲೆ ಬಿಕ್ಕಳಿಸತೊಡಗಿದ್ದರು.

ಸಹವರ್ತಿಗಳಿಗೆಲ್ಲ ಮುಜುಗರವಾಗಿತ್ತು. ಅದೆಂತಹಾ ವಿಪತ್ತು ಎದುರಾದ ಸಂದರ್ಭಗಳಲ್ಲೂ ಪ್ರವಾದಿಯವರು ಕಣ್ಣೀರು ಹಾಕಿದ್ದವರಲ್ಲ.

'ನಮ್ಮ ಬಂಧನದಲ್ಲಿರುವ ಒತ್ತೆಯಾಳೊಬ್ಬನನ್ನು ಬಿಡಿಸಿಕೊಳ್ಳಲು ರಕ್ತ ಪರಿಹಾರವಾಗಿ ಈ ಹಾರ ನನ್ನ ಬಳಿಗೆ ಬಂದಿದೆ. ಇದನ್ನು ಕಳುಹಿಸಿದವಳು ನನ್ನ

ಮಗಳು ಝೈನಬಾ' ಎನ್ನುತ್ತಾ ಪ್ರವಾದಿಯವರು, ತಮ್ಮ ಮುಂಡಾಸಿನ ಅಂಚಿನಿಂದ ಮುಖ ಮುಚ್ಚಿಕೊಂಡು, ಮತ್ತೊಮ್ಮೆ ಬಿಕ್ಕಳಿಸಿದ್ದರು.

ಪ್ರವಾದಿಯವರ ಅಸಹಜ ವರ್ತನೆಯನ್ನು ಕಾಣಲಾಗದೆ ಎಲ್ಲ ಸಹವರ್ತಿಗಳೂ ಕಲ್ಲಿನಂತೆ ಕುಳಿತುಬಿಟ್ಟಿದ್ದರು. ನಾನು ಸಣ್ಣ ಒಡತಿಯತ್ತ ಕತ್ತು ತಿರುವಿದೆ. ಅವಳ ಎರಡೂ ಕಣ್ಣುಗಳಿಂದ ನೀರು ಧಾರೆಯಾಗಿ ಇಳಿಯುತ್ತಿತ್ತು.

'ಹಾರವನ್ನು ಸ್ವೀಕರಿಸದೆಯೇ ಅದರ ಒಡತಿಗೆ ಅವಳ ಗಂಡನನ್ನು ಒಪ್ಪಿಸ ಬೇಕೆಂಬುದು ತಮ್ಮ ತೀರ್ಮಾನವಾಗಿದ್ದರೆ, ಅದಕ್ಕೆ ನನ್ನ ಸಮ್ಮತಿ ಇದೆ' ಎಂದಿದ್ದರು ದೊಡ್ಡ ಒಡೆಯರು.

'ತಮ್ಮ ತೀರ್ಮಾನ ಅದುವೇ ಆಗಿದ್ದರೆ, ನನ್ನ ಸಮ್ಮತಿಯೂ ಇದೆ.' ಉಮ್ಮರ್ ಬಿನ್ ಖತ್ತಾಬರು ಗಟ್ಟಿ ದನಿಯಲ್ಲಿ ಹೇಳಿದಾಗ, 'ನನ್ನದೂ ಇದೆ.' 'ನನ್ನದೂ ಇದೆ.' ಎಂದು ಎಲ್ಲರೂ ಒಕ್ಕೊರಲಿನಿಂದ ಘೋಷಿಸಿದ್ದರು.

ತಮ್ಮ ಎರಡೂ ಕೈಗಳನ್ನೆತ್ತಿದ ಪ್ರವಾದಿಯವರು, 'ತಮ್ಮೆಲ್ಲರ ಪ್ರೀತಿ ವಿಶ್ವಾಸಗಳಿಗೆ ನಾನು ಕೃತಜ್ಞನು. ಆದರೆ, ನಾನು ತೀರ್ಮಾನಿಸಿದ್ದು ಅದಷ್ಟನ್ನೇ ಅಲ್ಲ.., ಅಲ್ಲಾಹು ನನಗೆ ಮತ್ತೊಂದು ಶರತ್ತನ್ನೂ ವಿಧಿಸಿರುತ್ತಾನೆ' ಎಂದರು.

'ಮತ್ತೊಂದು ಶರತ್ತು!' ಸೇರಿದವರೆಲ್ಲ ಮುಖ ಮುಖ ನೋಡಿಕೊಂಡಿದ್ದರು.

'ಹೌದು ಮತ್ತೊಂದು ಶರತ್ತು ಇದೆ. ಕೈದಿಯಾಗಿರುವ ನನ್ನ ಅಳಿಯ ಅಬುಲ್ ಆಸ್'ನನ್ನು ಇಲ್ಲಿಗೆ ಕರೆದುಕೊಂಡು ಬರಲು ಝೈದ್ ಹೋಗಿದ್ದಾನೆ. ಅವರು ಬಂದ ಬಳಿಕ ಅವರೆದುರಲ್ಲೇ ಅಲ್ಲಾಹು ವಿಧಿಸಿರುವ ಶರತ್ತನ್ನು ತಿಳಿಸುವೆ' ಎಂದರು.

ಅವರು ಮಾತು ಮುಗಿಸುತ್ತಿರುವಂತೆಯೇ, ಝೈದ್ ಬೆನ್ನ ಹಿಂದೆ, ಇಬ್ಬರು ಕಾವಲು ಭಟರ ನಡುವೆ ಅಬುಲ್ ಆಸ್ ತಲೆ ತಗ್ಗಿಸಿ ಭಾರವಾದ ಹೆಜ್ಜೆಗಳನ್ನೂರುತ್ತಾ ಬಂದರು. ಪ್ರವಾದಿಯ ಎದುರು ಕೈ ಕಟ್ಟಿ ನಿಂತರು. ಪ್ರವಾದಿಪುತ್ರಿ ಫಾತಿಮಾ ಹಲವು ಸಲ ನನ್ನೊಡನೆ ಹೇಳಿದ್ದುಂಟು. ತನ್ನ ಹಿರಿಯಕ್ಕ ಝೈನಬಾಳ ಗಂಡನಷ್ಟು ಚಂದದ ಯುವಕ ಇಡೀ ಮಕ್ಕಾದಲ್ಲೇ ಇಲ್ಲ ಎಂದು. ನಾಲ್ಕೈದು ದಿನಗಳ ಜೈಲುವಾಸ ದಲ್ಲಿದ್ದರೂ, ಉಡುಪುಗಳೆಲ್ಲ ತುಂಬಾ ಕೊಳೆಯಾಗಿದ್ದರೂ, ಅವಳು ವರ್ಣಿಸಿದ್ದ ಕ್ಕಿಂತಲೂ ಹೆಚ್ಚು ಚಂದದ ಯುವಕ ಅಬುಲ್ ಆಸ್.

ಪ್ರವಾದಿಯವರು ತಲೆ ಎತ್ತಿ ತಮ್ಮ ಅಳಿಯನನ್ನು ದಿಟ್ಟಿಸಿದರು. ಮಾತು ಮರೆತವರಂತೆ ಅರೆಕ್ಷಣ ತಲೆ ತಗ್ಗಿಸಿದರು. ತಮ್ಮ ಮುಂಡಾಸು ಕಳಚಿ ಮುಖ ಒರೆಸಿಕೊಂಡರು. ಅದನ್ನು ಕೈಯ್ಯಲ್ಲಿ ಹಿಡಿದಿರುವಂತೆಯೇ ಮೆತ್ತಗೆ ಪ್ರಶ್ನಿಸಿದರು.

'ಈ ಹಾರ ಯಾರದ್ದೆಂದು ಗೊತ್ತಿದೆಯೆ?'





'ಹೌದು. ಮದುವೆಗೆ ಮೊದಲು ತಮ್ಮ ಹೆಂಡತಿಯ ಸೊತ್ತು. ಈಗ ನನ್ನ ಹೆಂಡತಿಯ ಸೊತ್ತು.'

'ರಕ್ತಪರಿಹಾರ ಧನವಾಗಿ ಈ ಹಾರದ ಬದಲಾಗಿ ಬೇರೇನನ್ನಾದರೂ ತೆರಬಲ್ಲೆಯಾ?'

'ತಮ್ಮ ಒತ್ತೆ ಸೆರೆಯಾಳಾಗಿರುವ ನನ್ನ ಬಳಿ ನಿನ್ನೆಯಷ್ಟೇ ತಲುಪಿರುವ ಈ ಹಾರವನ್ನು ಹೊರತುಪಡಿಸಿದರೆ ಬೇರೇನೂ ಇಲ್ಲ. ನನ್ನ ಮೇಲೆ ನಂಬಿಕೆಯಿದ್ದರೆ, ತಾವು ನನ್ನನ್ನು ಮಕ್ಕಾಕ್ಕೆ ಕಳುಹಿಸಿರಿ. ವೇಗವಾಗಿ ಓಡುವ ಒಂದು ಕುದುರೆಗೆ ಮಕ್ಕಾದಿಂದ ಮದೀನಾಕ್ಕೆ ತಲುಪಲು ಎಷ್ಟು ಸಮಯ ಬೇಕಾಗಬಹುದೋ, ಅಷ್ಟೇ ವೇಗದಲ್ಲಿ ತಾವು ರಕ್ತಪರಿಹಾರ ಧನವಾಗಿ ವಿಧಿಸಿರುವ ನಾಲ್ಕು ಸಹಸ್ರ ದಿರ್ಹಮ್ ಗಳನ್ನು ತಮಗೆ ತಲುಪಿಸಬಲ್ಲೆ'.

ಪಕ್ಕದಲ್ಲೇ ಇರಿಸಿದ್ದ ಕಂಠೀಹಾರವನ್ನು ಎತ್ತಿದ ಪ್ರವಾದಿಯವರು ಅದನ್ನು ತಮ್ಮ ಅಳಿಯನತ್ತ ಚಾಚಿದರು. ಎರಡು ಹೆಜ್ಜೆ ಮುಂದೆ ಬಂದ ಅಬುಲ್ ಆಸ್, ತನ್ನೆರಡೂ ಬೊಗಸೆಯಲ್ಲಿ ಹಾರವನ್ನು ಸ್ವೀಕರಿಸಿ ಮುಂದಿನ ಆದೇಶವನ್ನು ನಿರೀಕ್ಷಿಸುವವರಂತೆ ತಲೆ ತಗ್ಗಿಸಿ ನಿಂತರು.

'ರಕ್ತಪರಿಹಾರಕ್ಕೆ ನಿಗದಿಪಡಿಸಿದ ಮೊತ್ತವನ್ನು ಸ್ವೀಕರಿಸದೆ ಒತ್ತೆಸೆರೆಯಾಳನ್ನು ಬಿಡುಗಡೆಗೊಳಿಸುವುದು ಯುದ್ಧದ ನಿಯಮಗಳಿಗೆ ವಿರುದ್ಧವಾದುದು. ಆದರೂ, ನಿನ್ನನ್ನು ಬಿಡುಗಡೆಗೊಳಿಸಲು ನನ್ನ ಸಂಗಾತಿಗಳು ಅನುಮತಿಸಿದ್ದಾರೆ' ಎಂದ ಪ್ರವಾದಿ ಯವರು, ಸಭೆಯತ್ತ ನೋಡುತ್ತಾ, 'ತಮ್ಮೆಲ್ಲರ ಸಮ್ಮತಿಯಿದೆಯಲ್ಲವೆ?' ಎಂದು ಪ್ರಶ್ನಿಸಿದ್ದರು.

'ಪ್ರವಾದಿಯವರ ತೀರ್ಮಾನವನ್ನು ಸತ್ಯವಿಶ್ವಾಸಿಗಳಾರೂ ವಿರೋಧಿಸುವುದಿಲ್ಲ' ಎಂದರು ಎಲ್ಲರೂ.

'ಇಂದು ಹೊಸದೊಂದು ಸಂದೇಶವನ್ನು ಪ್ರಕಟಿಸುವಂತೆ ಅಲ್ಲಾಹು ಆದೇಶಿಸಿ ರುವನು. ಅದೇನೆಂದರೆ, ವಿಶ್ವಾಸಿ ಮತ್ತು ಅವಿಶ್ವಾಸಿಗಳ ನಡುವಿನ ವಿವಾಹವನ್ನು ಅಲ್ಲಾಹು ನಿಷೇಧಿಸಿರುವನು.' ಪ್ರವಾದಿಯವರ ಬಾಯಿಯಿಂದ ಹೊಸ ಸಂದೇಶವೊಂದು ಹೊರಬಿದ್ದಿತ್ತು.

ಅಬುಲ್ ಆಸ್, ಸೆಟೆದು ನಿಂತಿದ್ದರು.

ಪ್ರವಾದಿಯವರು ಹೇಳಿದ್ದರು, 'ಆದ್ದರಿಂದ ನೀನು ಸತ್ಯವಿಶ್ವಾಸಿಯಾದರೆ ಮಾತ್ರ, ಈಗಾಗಲೇ ಸತ್ಯವಿಶ್ವಾಸಿಯಾಗಿರುವ ನನ್ನ ಮಗಳ ಜೊತೆ ಸಂಸಾರ ಮುಂದುವರಿಸಲು ಅಲ್ಲಾಹುವಿನ ಅನುಮತಿಯಿದೆ.'

ಎಲ್ಲರ ಕಣ್ಣುಗುಡ್ಡೆಗಳೂ ಅಬುಲ್ ಆಸರತ್ತ ಹೊರಳಿದ್ದವು. ಅವರು ಏನೆಂದು ಉತ್ತರಿಸಬಹುದೆಂದು ಯೋಚಿಸುತ್ತಾ, ಉಸಿರು ಬಿಗಿ ಹಿಡಿದು ಕುಳಿತಿದ್ದರು.

'ಕ್ಷಮಿಸಬೇಕು. ನನ್ನ ಹಿರಿಯರಿಂದ ಬಳುವಳಿಯಾಗಿ ಬಂದಿರುವ ಸಾಂಪ್ರದಾಯಿಕ ಜ್ಞಾನವನ್ನು ತಿರಸ್ಕರಿಸಿ, ಅವರನ್ನು ಅವಮಾನಿಸಲಾರೆ.' ಕಂಚಿನ ಕಂಠದಿಂದ ಚಿಮ್ಮಿ ಬಂದಿತ್ತು ಉತ್ತರ!

ಆದರೆ, ಪ್ರವಾದಿಯವರು ವಿಚಲಿತರಾದಂತಿರಲಿಲ್ಲ. ಅಥವಾ, ಅಬುಲ್ ಆಸರಿಂದ ಅವರು ಇದೇ ಉತ್ತರವನ್ನೇ ನಿರೀಕ್ಷಿಸಿದ್ದಿರಬಹುದು.

ಖಂಡಿತವಾದ ಧ್ವನಿಯಲ್ಲೇ ಹೇಳಿದ್ದರು, 'ನಿನ್ನನ್ನು ಬಿಡುಗಡೆಗೊಳಿಸುವುದಾಗಿ ನಾನು ವಚನ ಕೊಟ್ಟಾಗಿದೆ. ನೀನೀಗ ಸ್ವತಂತ್ರನು. ಆದರೆ, ಮಕ್ಕಾ ತಲುಪಿದ ಮರು ದಿನವೇ ನನ್ನ ಮಗಳನ್ನು ಅವಳಿಬ್ಬರು ಮಕ್ಕಳ ಜೊತೆ ನನ್ನ ಬಳಿಗೆ ನೀನು ಕಳುಹಿಸಿಕೊಡಲೇಬೇಕು.'

ಅಬುಲ್ ಆಸರ ಮುಖದ ಬಣ್ಣ ಮೊದಲ ಬಾರಿ ಕಳೆಗುಂದಿತ್ತು. ಆದರೂ ಸಾವರಿಸಿಕೊಳ್ಳುತ್ತಿರುವವರಂತೆ, ತಮ್ಮ ಮುಖವನ್ನು ಅಂಗೈಯಿಂದಲೇ ಒರೆಸಿಕೊಂಡ ಅವರು, ಸಹವರ್ತಿಗಳಿಗೆಲ್ಲ ನಡುಕ ಹುಟ್ಟಿಸುವವರಂತೆ ಹೇಳಿದ್ದರು.

'ಮಕ್ಕಾದ ಕುರೈಶರ ಎಲ್ಲ ಬಗೆಯ ಅವಹೇಳನದ ಮಾತುಗಳಿಗೆ ಕಿವಿಗೊಡದೆ, ಅವರ ವಿರೋಧಗಳನ್ನೂ ಲೆಕ್ಕಿಸದೆ, ಝೈನಬಳನ್ನು ಇದಿಷ್ಟು ವರ್ಷಗಳ ಕಾಲ ಪ್ರೀತಿಸಿದ, ಕಣ್ಣು ರೆಪ್ಪೆಗಳಂತೆ ರಕ್ಷಿಸಿದ, ಮರಣದವರೆಗೂ ಅವಳನ್ನು ಪ್ರೀತಿಸುವ, ಅವಳನ್ನು ಹೊರತಾಗಿ ಬೇರಾವ ಹೆಣ್ಣನ್ನು ಕಣ್ಣೆತ್ತಿಯೂ ನೋಡುವುದಿಲ್ಲವೆಂದು ವಾಗ್ದಾನ ಮಾಡಿರುವ ನನ್ನನ್ನು ತಾವು ಅಭಿನಂದಿಸುವ ಬದಲು ಇದಿಷ್ಟು ದೊಡ್ಡ ಶಿಕ್ಷೆಯನ್ನು ವಿಧಿಸುವಿರೆಂದು ಊಹಿಸಿರಲಿಲ್ಲ. ತಾವು ಬಯಸಿದರೆ ನಿನ್ನೆಯವರೆಗೂ ತಮ್ಮ ಪ್ರೀತಿಯ ಮಗಳ ಗಂಡನಾಗಿದ್ದ ನನ್ನನ್ನು ಕ್ಷಮಿಸುವಂತೆ ನಿಮ್ಮ ದೇವನಲ್ಲಿ ಪ್ರಾರ್ಥಿಸಬಲ್ಲಿರಿ. ತಮ್ಮ ತಾತ ಅಬೂತಾಲಿಬರ ಅಂತಿಮದಿನಗಳನ್ನು ನೆನಪಿಸಿಕೊಳ್ಳಿರಿ. ಕೊನೆಯುಸಿರಿನವರೆಗೂ ತಮ್ಮನ್ನು ಕಣ್ಣಿನ ರೆಪ್ಪೆಗಳಂತೆ ಕಾಪಾಡುತ್ತಿದ್ದ ಅವರು, ಮರಣಮಂಚದಲ್ಲಿದ್ದಾಗಲೂ ತಮ್ಮ ಕೋರಿಕೆಯನ್ನು ಮನ್ನಿಸಿ ಸತ್ಯವಿಶ್ವಾಸಿಯಾಗಿ ಬದಲಾಗಲಿಲ್ಲ. ಹಿರಿಯರಿಂದ ಬೋಧಿಸಲ್ಪಟ್ಟಿದ್ದ ಧರ್ಮವನ್ನು ತೊರೆಯಲು ಅವರು ಸಮ್ಮತಿಸಿರಲಿಲ್ಲ. ನನಗೂ ಅಂತಹ ಒಂದು ವಿಶೇಷ ಅವಕಾಶವನ್ನು ನೀಡುವಂತೆ ದೇವನಲ್ಲಿ ತಾವು ಪ್ರಾರ್ಥಿಸಿರಿ. ತಮ್ಮ ಪ್ರಾರ್ಥನೆಯನ್ನು ದೇವನು ಖಂಡಿತವಾಗಿಯೂ ಪೂರೈಸುವನು.'

ತಮ್ಮ ಅಳಿಯನ ಮಾತುಗಳನ್ನು ಆಲಿಸುತ್ತಿದ್ದಂತೆ ಪ್ರವಾದಿಯವರು ಗಲಿಬಿಲಿಗೊಂಡಿದ್ದರು!

ಅಬುಲ್ ಆಸರ ಮಾತುಗಳು ಸುಳ್ಳೇನೂ ಆಗಿದ್ದಿರಲಿಲ್ಲ. ಕುರೈಶರ ಎಲ್ಲ ಒತ್ತಡ ಗಳನ್ನೂ ಎದುರಿಸಿ ಕೂದಲು ಕೊಂಕದಂತೆ ತಮ್ಮನ್ನು ರಕ್ಷಿಸುತ್ತಿದ್ದವರು ದೊಡ್ಡಪ್ಪ ಅಬೂತಾಲಿಬರು. ಆದರೆ, ಅದೆಷ್ಟು ಬಾರಿ ವಿನಂತಿಸಿದರೂ ಕೊನೆಯುಸಿರಿನವರೆಗೂ





ಸತ್ಯವಿಶ್ವಾಸಿಯಾಗಲು ಖಂಡತುಂಡವಾಗಿ ನಿರಾಕರಿಸಿದ್ದರು. ಈ ಸತ್ಯ ಎಲ್ಲ ಸಹವರ್ತಿ ಗಳಿಗೂ ಗೊತ್ತಿರುವ ಸಂಗತಿಯೇ. ಆದರೂ ತಮ್ಮ ಅಳಿಯ ಅದನ್ನು ಮತ್ತೊಮ್ಮೆ ನೆನಪಿಸಿದಾಗ ಮುಜುಗರಕ್ಕೆ ಈಡಾಗಿದ್ದರು. ಅಳೆದು ತೂಗಿ ಪದಗಳನ್ನು ಜೋಡಿಸಿ ಕೊಳ್ಳುತ್ತಾ ಪ್ರವಾದಿಯವರು ಹೇಳಿದರು, 'ಅವರನ್ನು ಕ್ಷಮಿಸುವಂತೆ ಕರುಣಾಳುವಾದ ಅಲ್ಲಾಹುವನ್ನು ನಾನು ಪ್ರಾರ್ಥಿಸುತ್ತಲೇ ಇರುವೆ. ತಪ್ಪು ದಾರಿಯಲ್ಲಿ ನಡೆಯುವ ವರನ್ನು ಕ್ಷಮಿಸುವ ಅಧಿಕಾರ ನನಗಿಲ್ಲ. ನಾನು ಅಲ್ಲಾಹುವಿನ ಸಂದೇಶವಾಹಕ ಮಾತ್ರ.'

'ನಿಜ, ತಾವು ದೇವನ ಸಂದೇಶವಾಹಕರು ಮಾತ್ರ. ಆದರೆ, ತಮ್ಮ ಮಗಳ ಗಂಡನಾಗಿರುವ ನಾನು, ನನ್ನ ಅನುಮತಿಯಿಲ್ಲದೆ ತಮ್ಮನ್ನು ಅಂತಿಮಪ್ರವಾದಿಯೆಂದು ಒಪ್ಪಿಕೊಂಡು ಸತ್ಯವಿಶ್ವಾಸಿಯಾಗಿ ಬದಲಾದ ಝೈನಬಳನ್ನು ಮನಃಪೂರ್ವಕವಾಗಿ ಕ್ಷಮಿಸಿದ್ದೇನೆಂಬುದು ತಮಗೂ ಅರಿವಿದೆ. ಯಾಕೆಂದರೆ, ನನ್ನ ಪೂರ್ವಜರಿಂದ ನನಗೆ ಬಳುವಳಿಯಾಗಿ ಬಂದಿದ್ದ ನನ್ನ ಧರ್ಮದ ಬೇಲಿಯನ್ನು ನಾನು ನನ್ನ ಹೆಂಡತಿಗಾಗಿ ವಿಸ್ತರಿಸಿಕೊಂಡಿದ್ದೆ. ಅದಕ್ಕೆ ಕಾರಣ; ಒಳ್ಳೆಯ ಕಾರಣಗಳಿಗಾಗಿ ಧರ್ಮದ ಬೇಲಿಯನ್ನು ವಿಸ್ತರಿಸಿಕೊಳ್ಳುವುದು ಅಪರಾಧವಾಗುವುದಿಲ್ಲ ಎಂಬುದಾಗಿ ಸಿರಿಯಾದ ಕ್ರೈಸ್ತ ಸನ್ಯಾಸಿಯೊಬ್ಬರು ನನಗೆ ಹೇಳಿದ್ದು.

ಆ ಸನ್ಯಾಸಿಯು ಹೇಳಿದ್ದ ಘಟನೆಯೊಂದನ್ನು ತಮ್ಮ ಸಭೆಗೂ ನಿವೇದಿಸಿಕೊಳ್ಳ ಬಯಸುವೆ' ಎಂದ ಅಬ್ದುಲ್ ಆಸ್, ಎಲ್ಲರ ಕಣ್ಣುಗಳೂ ತನ್ನತ್ತವೇ ನೆಟ್ಟಿದೆ ಯೆಂಬುದನ್ನು ಖಾತರಿಪಡಿಸಿಕೊಳ್ಳುವವರಂತೆ ಸುತ್ತಲೂ ಕಣ್ಣಾಡಿಸಿದ ಬಳಿಕ ಗಟ್ಟಿ ಧ್ವನಿಯಲ್ಲೇ ಹೇಳತೊಡಗಿದ್ದರು.

'ಎರಡು ಗುಂಪುಗಳ ನಡುವಿನ ಹೋರಾಟವೊಂದರಲ್ಲಿ ಸೈನಿಕನೊಬ್ಬನ ಮರಣವಾಗುತ್ತದೆ. ಆತನ ಜೊತೆಗಿದ್ದ ಇಬ್ಬರು ಸೈನಿಕರು ಗೆಳೆಯನ ಶವವನ್ನು ಹೊತ್ತುಕೊಂಡು ಸಮೀಪವೇ ಇದ್ದ ಯೇಸುಸ್ವಾಮಿಯ ಆರಾಧನಾಲಯವೊಂದಕ್ಕೆ ಹೋಗುತ್ತಾರೆ. ಶವವನ್ನು ದಫನ ಮಾಡಲು ಆರಾಧನಾಲಯದ ಆವರಣದಲ್ಲಿರುವ ಸಮಾಧಿಸ್ಥಳದಲ್ಲಿ ಅವಕಾಶ ನೀಡುವಂತೆ, ಅಲ್ಲಿಯ ಮೇಲ್ವಿಚಾರಕರಾಗಿದ್ದ ಆ ಹಿರಿಯ ಸನ್ಯಾಸಿಯನ್ನು ಕೋರುತ್ತಾರೆ.

'ಆದರೆ, ತೀರಿಹೋಗಿರುವ ವ್ಯಕ್ತಿಯು ಯೇಸುಭಕ್ತರ ಯಾವ ಬಣಕ್ಕೆ ಸೇರಿದ್ದ ನೆಂಬುದನ್ನು ಖಚಿತಪಡಿಸಿಕೊಳ್ಳದೆ, ಹೂಳಲು ಅವಕಾಶ ನೀಡುವ ಅಧಿಕಾರ ತಮಗಿಲ್ಲ ವೆಂಬುದಾಗಿ ಸನ್ಯಾಸಿ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾರೆ.

'ಸೈನಿಕರಿಬ್ಬರಿಗೂ ನಿರಾಸೆಯಾಗುತ್ತದೆ. ದುಃಖವೂ ಆಗುತ್ತದೆ. ಗೆಳೆಯನ ಶವವನ್ನು ಮತ್ತೊಮ್ಮೆ ಹೆಗಲೇರಿಸಿಕೊಂಡು ಅಲ್ಲಿಂದ ಹೊರಡುತ್ತಾರೆ. ಅದನ್ನು ಗಮನಿಸುವ ಸನ್ಯಾಸಿಯ ಮನಸ್ಸು ಕೂಡಾ ಮೃದುವಾಗುತ್ತದೆ. ಇಬ್ಬರೂ ಸೈನಿಕರನ್ನು

ಕರೆದು, ಆವರಣದ ಬೇಲಿಗೆ ಒತ್ತಿಕೊಂಡೇ ಇರುವ ಹೊರಭಾಗದ ನೆಲದಲ್ಲಿ ಶವವನ್ನು ದಫನ ಮಾಡುವಂತೆ ಸಲಹೆ ನೀಡುತ್ತಾರೆ.

'ಸೈನಿಕರು ಹಾಗೆಯೇ ಮಾಡಿ ಮರಳುತ್ತಾರೆ. ಆದರೆ, ಕೆಲವು ದಿನಗಳ ಬಳಿಕ ಅದೇ ದಾರಿಯಲ್ಲಿ ಬಂದಿದ್ದ ಅ ಸೈನಿಕರಿಗೆ, ತಾವು ದಫನ ಮಾಡಿದ್ದ ಗೆಳೆಯನ ಸಮಾಧಿ ಕಾಣಿಸದಾದಾಗ ಗಾಬರಿಯಾಗುತ್ತದೆ. ನೇರವಾಗಿ ಆರಾಧಾನಾಲಯಕ್ಕೆ ಹೋಗಿ ಅದೇ ಹಿರಿಯ ಸನ್ಯಾಸಿಯನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ.

'ಸೈನಿಕರ ಎಲ್ಲ ಮಾತುಗಳನ್ನು ಶಾಂತವಾಗಿಯೇ ಆಲಿಸಿದ ಅವರು, 'ನೀವು ನಿಮ್ಮ ಗೆಳೆಯನ ಶವವನ್ನು ಆರಾಧನಾಲಯದ ಬೇಲಿಯ ಹೊರಗೆ ದಫನ ಮಾಡಿ ಹೋಗಿದ್ದ ರಾತ್ರಿ ನನಗೆ ನಿದ್ರೆಯೇ ಬಂದಿರಲಿಲ್ಲ. ನಡುರಾತ್ರಿಯಲ್ಲಿ ಎದ್ದು ಯೇಸು ಸ್ವಾಮಿಯ ಮಂದಿರಕ್ಕೆ ಹೋಗಿ ಪಾಪನಿವೇದನೆ ಮಾಡಿಕೊಳ್ಳುವವನಂತೆ ಕರ್ತೃವನ್ನು ಪ್ರಾರ್ಥಿಸಿದೆ. ಯೇಸುವು ನನಗೆ ಹೊಸದಾರಿ ತೋರಿಸಿದನು. ಅದರಂತೆ, ಆ ರಾತ್ರಿಯೇ ಹೋಗಿ ನಿಮ್ಮ ಗೆಳೆಯನ ಸಮಾಧಿಯೂ ಆರಾಧನಾಲಯದ ಒಳಗೇ ಬರುವಂತೆ ಆವರಣದ ಬೇಲಿಯನ್ನೇ ವಿಸ್ತರಿಸಿದೆ ಎನ್ನುತ್ತಾರೆ. ಸೈನಿಕರಿಬ್ಬರೂ ಆ ಹಿರಿಯ ಸನ್ಯಾಸಿಯ ದೊಡ್ಡ ಮನಸ್ಸಿಗೆ ಕೃತಜ್ಞತೆ ಸಲ್ಲಿಸಿ ಮರಳುತ್ತಾರೆ.' ಎಂದು ಕತೆಯನ್ನು ಮುಗಿಸಿದ ಅಬ್ದುಲ್ ಆಸ್, ಪ್ರವಾದಿಯವರತ್ತ ನೋಡುತ್ತಾ, 'ತಾವು ಕೂಡಾ ಆ ಹಿರಿಯ ಕ್ರೈಸ್ತ ಸನ್ಯಾಸಿಯಂತೆ, ನನ್ನ ಕುಟುಂಬದ ಒಳಿತಿಗಾಗಿ, ತಾವು ಪ್ರತಿಪಾದಿಸುತ್ತಿರುವ ಧರ್ಮದ ಬೇಲಿಯನ್ನು ವಿಸ್ತರಿಸಬೇಕೆಂದು ಪ್ರಾರ್ಥಿಸುವೆ.'

ಅಬುಲ್ ಆಸರ ಸುಧೀರ್ಘ ಹಾಗೂ ನಿರ್ಭಿಡೆಯ ಮಾತುಗಳಿಂದ ಸಮ್ಮೋಹಿನಿಗೊಂಡವರಂತೆ, ಸಹವರ್ತಿಗಳೆಲ್ಲ ಕಣ್ಣು ಬಾಯಿ ತೆರೆದು ಕುಳಿತುಬಿಟ್ಟಿದ್ದರು. ಪ್ರವಾದಿಯವರೂ ಹಾಗೆಯೇ ಕುಳಿತಿದ್ದರು. ತಮ್ಮ ಅಳಿಯ ಮಾತು ಮುಗಿಸಿ ಬಹಳ ಹೊತ್ತಾದರೂ ಪ್ರತಿಕ್ರಿಯಿಸಿರಲಿಲ್ಲ.

'ಹಾಗಾದರೆ ಝೈನಬಳಿಗೆ ಶುಭವಾರ್ತೆಯಿದೆಯೆಂದು ನಾನು ಭಾವಿಸಬಹುದೆ?' ಅಬುಲ್ ಆಸ್ ಆಸೆಯಿಂದಲೇ ಪ್ರಶ್ನಿಸಿದ್ದರು.

ತಮ್ಮ ಪ್ರೀತಿಯ ಅಳಿಯನ ಮುಖವನ್ನು ನೇರವಾಗಿ ದಿಟ್ಟಿಸಲಾರದೆ ಬೇರೆಲ್ಲೋ ನೋಡುತ್ತಾ, ಜೀವವೇ ಇಲ್ಲದ ಧ್ವನಿಯಲ್ಲಿ ಪ್ರವಾದಿಯವರು ತಣ್ಣಗೆ ಹೇಳಿದ್ದರು, 'ನಾನು ಅಲ್ಲಾಹುವಿನ ಆಜ್ಞಾಧಾರಕನು. ನನ್ನ ಮಗಳ ಹಿತಕ್ಕಾಗಿ ಧಾರ್ಮಿಕ ಬೇಲಿಯನ್ನು ವಿಸ್ತರಿಸಲಾರೆ.'

'ಸರಿ ಹಾಗಾದರೆ.' ಪ್ರವಾದಿಯವರ ಅಳಿಯ ಸೆಟೆದು ನಿಂತಿದ್ದರು. ಎಲ್ಲರಿಗೂ ಅನ್ವಯಿಸುವಂತೆ ನಿರ್ಧಾರದ ಧ್ವನಿಯಲ್ಲೇ ಘೋಷಿಸಿದ್ದರು. 'ಹಾಗಾದರೆ ನನ್ನ ನಿರ್ಧಾರವನ್ನೂ ಕೇಳಿರಿ. ತಮ್ಮ ಸೈನಿಕರ ಒತ್ತೆಸೆರೆಯಿಂದ ನಾನು ಬಿಡುಗಡೆ ಬಯಸು





ವುದಿಲ್ಲ. ಮಕ್ಕಾಗೆ ಮರಳಲು ನಾನು ಆಸೆಪಟ್ಟದ್ದು ಝೈನಬಾಳಿಗಾಗಿ ಮಾತ್ರ. ಆದರೆ, ತಮ್ಮ ಶರತ್ತುಗಳಿಗೊಪ್ಪಿ ಅಲ್ಲಿಗೆ ಹೋದರೆ ನನ್ನ ಪ್ರೀತಿಯ ಹೆಂಡತಿಯನ್ನು ಕಳೆದು ಕೊಳ್ಳುವೆ. ಅವಳಿಲ್ಲದ ಮಕ್ಕಾ ನನಗೆ ಬೇಡ. ನನ್ನನ್ನು ಸೆರೆಮನೆಗೆ ಮರಳಿ ಕಳುಹಿಸಿರಿ. ತಮ್ಮ ಸೈನಿಕರು ಅದೆಷ್ಟು ಚಿತ್ರಹಿಂಸೆ ನೀಡಿದರೂ ಸಹಿಸಿಕೊಳ್ಳಬಲ್ಲೆ. ಕೊಲ್ಲುವು ದಾದರೂ ಕೊಲ್ಲಲಿ. ಅವ್ಯಾವುದೂ ನನ್ನ ಝೈನಬಾಳನ್ನು ತ್ಯಜಿಸುವ ನೋವಿಗೆ ಸಮನಾಗದು.'

ಪ್ರವಾದಿಯವರು ಈಗ ಸ್ವಲ್ಪ ಗಲಿಬಿಲಿಗೊಂಡಂತೆ ಕಂಡರು. ತಲೆವಸ್ತ್ರವನ್ನು ಸೆಳೆದು ಬಿಡಿಸಿದ್ದರು. ನಿಧಾನವಾಗಿ ಅದನ್ನು ಮಡಚಿದ್ದರು. ಮತ್ತೆ ತಲೆಗೆ ಕಟ್ಟಿಕೊಂಡಿದ್ದರು. ಸಭೆಯತ್ತ ಅಸಹಾಯಕರಂತೆ ಕಣ್ಣು ಹಾಯಿಸಿದ್ದರು.

ಇಡೀ ಸಭೆಯೇ ಜೀವ ಕಳೆದುಕೊಂಡಂತಿತ್ತು.

'ಅಲ್ಲಾಹುವಿನ ಅದೇಶವನ್ನೇ ನಾನು ಮೀರಬೇಕೆನ್ನುತ್ತಿರುವೆಯಾ?' ಪ್ರವಾದಿಯವರು ನೋವಿನಿಂದಲೇ ಪಶ್ನಿಸಿದ್ದರು.

'ಇಷ್ಟು ಕಾಲ ಸುಮ್ಮನಿದ್ದ ಅಲ್ಲಾಹು ಈಗೇಕೆ ಈ ರೀತಿ ಆದೇಶಿಸಿದ?' ಉತ್ತರಿಸಲಾಗದ ದೊಡ್ಡ ಪ್ರಶ್ನೆಯನ್ನೇ ಎಸೆದಿದ್ದರು ಪ್ರವಾದಿಯವರ ಅಳಿಯ.

ಇಡೀ ಸಭೆಗೆ ಸಿಡಿಲೆರಗಿದಂತಾಗಿತ್ತು.

ಸ್ವಲ್ಪ ಹೊತ್ತಿಗೆ ಮುನ್ನ, ಬಾಡಿದ ಮುಖಗಳನ್ನು ಹೊತ್ತುಕೊಂಡಿದ್ದ ಸಭಾಸದರೆಲ್ಲ ಈಗ ಕಣ್ಣು ಕೆಂಪು ಮಾಡಿಕೊಂಡುಬಿಟ್ಟಿದ್ದರು. ಪ್ರವಾದಿಯವರನ್ನು ಯಾರಾದರೂ ಹೀಗೂ ಪಶ್ನಿಸುವುದುಂಟೆ?

ಅದುವರೆಗೂ ನನ್ನ ತೋಳನ್ನು ಬಲವಾಗಿ ಹಿಡಿದುಕೊಂಡಿದ್ದ ಪುಟ್ಟ ಒಡತಿ, 'ಬಾ ಅಫೀರಾ. ಇನ್ನು ಮುಂದಾಗುವುದನ್ನು ನಾನು ನೋಡಲಾರೆ' ಎಂದವರೇ, ನನ್ನನ್ನು ಎಳೆದು ಕೊಂಡೇ ಮನೆ ಮೆಟ್ಟಲೇರಿದ್ದರು. ಏನೇ ಆದರೂ ಹೆಂಡತಿಯನ್ನು ತ್ಯಜಿಸುವುದಿಲ್ಲ ಎನ್ನುತ್ತಿರುವ ಆ ಸುಂದರನನ್ನು ಮನಸಾರೆ ಮೆಚ್ಚಿಕೊಳ್ಳುತ್ತಾ, ಅವರಿಗೆ ಮುಂದೆ ಅದ್ಯಾವ ಬಗೆಯ ಭಯಾನಕ ಶಿಕ್ಷೆ ಕಾದಿದೆಯೋ ಎಂಬ ಚಿಂತೆಯಲ್ಲೇ ಮೈಮರೆತಿದ್ದ ನನ್ನ ತುಟಿಗಳ ಸಂದಿಯಿಂದ ನನ್ನ ಅನುಮತಿಯಿಲ್ಲದೇ ಮಾತೊಂದು ಹೊರಜಿಗಿದಿತ್ತು.

'ಅಲ್ಲಾಹು ಅಷ್ಟೊಂದು ಹೃದಯ ಹೀನನೊ?!'

ಮನೆಯ ಮೆಟ್ಟಲ ಮೇಲೆ ನಿಂತಿದ್ದ ಸಣ್ಣ ಒಡತಿ ಒಮ್ಮೆಲೆ ಕಲ್ಲಿನಂತೆ ನಿಂತುಬಿಟ್ಟಿದ್ದರು!

ಅವರ ಕಣ್ಣುಗಳಲ್ಲಿ ಸಿಟ್ಟು ಕೊತಕೊತನೆ ಕುದಿಯುತ್ತಿತ್ತು.

'ಏನಂದೆ ಅಫೀರಾ ನೀನು?' ಸಿಟ್ಟಿನಿಂದಲೇ ಪ್ರಶ್ನಿಸಿದ್ದರು ನನ್ನ ಪ್ರೀತಿಯ ಸಣ್ಣ ಒಡತಿ.

'ಇದ್ದಕ್ಕಿದ್ದಂತೆ ನನ್ನನ್ನು ಬಿಟ್ಟು ಕಾಣದ ಲೋಕಕ್ಕೆ ಹೋದ ನನ್ನ ಗಂಡನ ನೆನಪಾಯಿತು ಒಡತಿ; ಅಷ್ಟೆ.' ಎಂದೆ.

ನಾನು ಸುಳ್ಳು ಹೇಳಿದ್ದೆನೆಂಬುದನ್ನು ತಿಳಿಯದಷ್ಟು ದಡ್ಡಿಯಲ್ಲ ನನ್ನ ಪ್ರೀತಿಯ ಪುಟ್ಟ ಒಡತಿ.

* * *

ಅಬ್ದುಲ್ ಆಸನ ಅಸಹಾಯಕತೆ ನನ್ನನ್ನು ಬಹಳವಾಗಿ ಹಿಂಡಿತ್ತು. ಅವನು ಹೇಳಿದ್ದ ಧರ್ಮದ ಬೇಲಿಯನ್ನು ವಿಸ್ತರಿಸುವ ಕತೆಯಂತೂ ಬಹಳ ಇಷ್ಟವಾಗಿತ್ತು. ಪ್ರೀತಿಗಾಗಿ ಧರ್ಮದ ಬೇಲಿ ಹಾರುವವರ ಬಗ್ಗೆ ಕೇಳಿದ್ದೆ. ಆದರೆ ಇನ್ನೊಬ್ಬರ ಒಳಿತಿಗಾಗಿ ಧರ್ಮದ ಬೇಲಿಯನ್ನು ವಿಸ್ತರಿಸಿಕೊಳ್ಳಲೂ ಸಾಧ್ಯವಿದೆಯೆಂಬ ಮಾತು ನನಗೆ ಹೊಸತು. ಪ್ರವಾದಿಯವರ ಅಳಿಯ ಅಬ್ದುಲ್ ಆಸ್ ಹೇಳಿದ್ದ ಕೊನೆಯೆರಡು ಮಾತುಗಳಂತೂ ಮತ್ತೆ ಮತ್ತೆ ನೆನಪಾಗುತ್ತಿತ್ತು.

ಖುರೈಶರ ಯಾವುದೇ ವಿರೋಧವನ್ನೂ ಲೆಕ್ಕಿಸದೆ, ಹೆಂಡತಿಯನ್ನು ಮನಸಾರೆ ಪ್ರೀತಿಸಿದ, ಕಣ್ಣು ರೆಪ್ಪೆಗಳಂತೆ ಕಾಪಾಡಿದ, ಅವಳನ್ನು ಹೊರತುಪಡಿಸಿ ಇನ್ಯಾವ ಹೆಣ್ಣನ್ನು ಕಣ್ಣೆತ್ತಿಯೂ ನೋಡುವುದಿಲ್ಲವೆಂದು ವಾಗ್ದಾನ ಮಾಡಿದವನನ್ನು ಪ್ರವಾದಿಯವರು ಅಭಿನಂದಿಸುತ್ತಾರೆಂದೇ ನಿರೀಕ್ಷಿಸಿದ್ದೆ. 'ತಮ್ಮ ಸೈನಿಕರ ಒತ್ತೆಸೆರೆಯಿಂದ ಬಿಡುಗಡೆ ಬಯಸುವುದಿಲ್ಲ ನಾನು' ಎನ್ನುತ್ತಿದ್ದಾಗ 'ಶಾಬ್ಬಾಸ್' ಅಬುಲ್ ಆಸ್ ಎಂದು ಕೂಗಿ ಹೇಳಬೇಕೆನ್ನಿಸಿತ್ತು.

ಪಾಪ, ಅಬುಲ್ ಆಸ್ ಮಕ್ಕಾಗೆ ಹಿಂತಿರುಗಲು ಆಸೆಪಟ್ಟದ್ದು ತನ್ನ ಪ್ರಿಯ ಪತ್ನಿಗಾಗಿ ಮಾತ್ರ. ಪ್ರವಾದಿಯವರ ಶರತ್ತುಗಳಿಗೊಪ್ಪಿಕೊಂಡು ಮಕ್ಕಾಕ್ಕೆ ಮರಳಿದರೆ ಅವನು ತನ್ನ ಪ್ರೀತಿಯ ಹೆಂಡತಿಯನ್ನೇ ಕಳೆದುಕೊಂಡು ಬಿಡುತ್ತಿದ್ದ. ಅವಳಿಲ್ಲದ ಮಕ್ಕಾ ಅವನಿಗೆ ನರಕ. ಯಾರೇ ಎಷ್ಟೇ ಹಿಂಸಿಸಿದರೂ

ಮದೀನಾದಲ್ಲೇ ಉಳಿದು ಕೊಂಡು ನೋವು ಗಳನ್ನೆಲ್ಲ ಸಹಿಸಿಕೊಳ್ಳಲು ಸಿದ್ಧನಿದ್ದ ಅವನು. ಗಂಡ ಎಂದರೆ ಅವನಂತಿರಬೇಕು.

ಅದಕ್ಕೇ ಇರಬೇಕು; 'ಅಲ್ಲಾಹು ಅಷ್ಟೊಂದು ಹೃದಯ ಹೀನನೊ' ಎಂದು ಅಫೀರಾ ಗೊಣಗಿಕೊಂಡದ್ದು.





ಅಲ್ಲಾಹು ಅಷ್ಟು ಕಠೋರನಾಗಬಲ್ಲನೆಂಬುದನ್ನು ಊಹಿಸಿಕೊಳ್ಳಲೂ ಕಷ್ಟವಾಗುತ್ತಿತ್ತು.

'ಅರ್ಥವಾಯಿತು' ಎಂದಿದ್ದ ಅರ್ಷದ್.

'ಏನು ನಿನಗೆ ಅರ್ಥವಾದದ್ದೂ?' ನಾನು ಬೇಸರದಿಂದಲೇ ಪ್ರಶ್ನಿಸಿದೆ.

'ನಿನಗೆ ಯಾವುದು ಇಷ್ಟವಾಗಲಿಲ್ಲವೋ ಅದು. ಇರಲಿ. ನಾವೊಂದು ಕೆಲಸ ಮಾಡುವ. ಈ ಪ್ರಶ್ನೆಗಳಿಗೆ ಮಕ್ಕಾದಲ್ಲಿರುವ ಅಬ್ದುಲ್ ಆಸ್'ನ ಪ್ರೀತಿಯ ಪತ್ನಿ ಝೈನಬ್, ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾಳೆಂಬುದನ್ನು ಕಾಣೋಣ, ಬಾ....'

ನನಗೂ ಬಿಡುಗಡೆ ಬೇಕಿತ್ತು.

'ತಯಾರು' ಎಂದೆ.

❐

### ಸ್ವಗತ – ಏಳು

# ಝೈನಬ್ ಬಿಂತಿ ಮುಹಮ್ಮದ್

–೧–

ನಾನು ಬೇಡಬೇಡವೆಂದು ಅದೆಷ್ಟು ಅಂಗಲಾಚಿದ್ದರೂ, ಕುರೈಶ್ ಸರದಾರರ ಒತ್ತಡಕ್ಕೆ ಮಣಿದು, ನನ್ನಬ್ಬನನ್ನೇ ಕೊಲ್ಲಲು ಮದೀನಾಕ್ಕೆ ಹೊರಟ ಕುರೈಶರ ಸೈನ್ಯವನ್ನು ನನ್ನ ಗಂಡ ಅಬುಲ್ ಆಸ್ ಸೇರಿಕೊಂಡಿದ್ದರು.

ಪ್ರವಾದಿ ಮತ್ತವರ ಎಲ್ಲ ಸಂಗಾತಿಗಳನ್ನು ನಿರ್ನಾಮ ಮಾಡಿಯೇ ಬರುತ್ತೇನೆ ಎಂದು ಪ್ರತಿಜ್ಞೆ ಮಾಡಿ ಮದೀನಾಕ್ಕೆ ಹೊರಟಿದ್ದ ಕುರೈಶ್ ಸೇನಾಪತಿ ಅಬೂಜಹಲನ ದೊಡ್ಡ ಸೈನ್ಯ ಅದು. ಆದರೆ ಅಲ್ಲಾಹು ಬೇರೇನನ್ನೋ ನಿರ್ಧರಿಸಿದ್ದ. ಅದ್ಯಾವನೋ ಸಣ್ಣ ಸೈನಿಕನೊಬ್ಬನ ಖಡ್ಗಕ್ಕೆ ಅಬೂಜಹಲ್ ಆಹಾರವಾಗಿಬಿಟ್ಟಿದ್ದ. ಸೇನಾಪತಿಯನ್ನು ಕಳೆದುಕೊಂಡ ಕುರೈಶ್ ಸೈನ್ಯವು ದಿಕ್ಕೆಟ್ಟು ಮಕ್ಕಾದತ್ತ ಮರಳುತ್ತಿದೆಯೆಂಬ ವಾರ್ತೆ ಬೆಳಗ್ಗೆಯೇ ತಲುಪಿತ್ತು.

ನನ್ನ ಗೆಳತಿ ಹಿಂದ್‌ಳ ಅಬ್ಬ ಉತ್ಬಾರವರು ನನ್ನ ತಾತ ಹಂಝಾರ ಈಟಿಗೆ ಬಲಿಯಾಗಿದ್ದರು. ಉಳಿದಂತೆ ಯುದ್ಧದಲ್ಲಿ ಸತ್ತು ಹೋದವರ, ಬಂಧಿಗಳಾದವರ ಸಂಪೂರ್ಣ ವಿವರಗಳು ಇನ್ನೂ ಮಕ್ಕಾ ತಲುಪಿರಲಿಲ್ಲ. ನನ್ನಬ್ಬನ ಪ್ರಥಮ ಶತ್ರು ಅಬೂಜಹಲನ ಸಾವಿಗೆ ಒಳಗೊಳಗೇ ಸಂತಸಪಟ್ಟಿದ್ದೆನಾದರೂ, ನನ್ನ ಗಂಡ ಅಬುಲ್ ಆಸರ ಕ್ಷೇಮ ಸಮಾಚಾರ ತಿಳಿಯದೆ ಆತಂಕಗೊಂಡಿದ್ದೆ.

ಯುದ್ಧದಲ್ಲಿ ಯಾರು ಗೆದ್ದರೂ ನಾನು ಸೋಲುತ್ತಿದ್ದೆ.

ನನ್ನ ಗಂಡ ಗೆದ್ದರೆ ಅಬ್ಬನನ್ನು ಕಳೆದುಕೊಳ್ಳುತ್ತಿದ್ದೆ.





ನನ್ನಬ್ಬ ಗೆದ್ದರೆ ನನ್ನ ಮಕ್ಕಳು ಅವರಬ್ಬನನ್ನು ಕಳೆದುಕೊಂಡು ಅನಾಥರಾಗುತ್ತಿದ್ದರು.

ಎರಡು ಅಲಗಿನ ಖಡ್ಗದ ಮೇಲೆ ನಿಂತಂತಾಗಿತ್ತು.

ಯುದ್ಧದಲ್ಲಿ ನಮ್ಮ ಕುರೈಶರ ಪಡೆಯನ್ನು ಅಬ್ಬನ ಸತ್ಯವಿಶ್ವಾಸಿಗಳ ಪಡೆ ಗೆದ್ದ ಮಾಹಿತಿಯೇನೋ ಸಿಕ್ಕಿತ್ತು. ಆದರೆ, ನನ್ನ ಗಂಡನ ಸ್ಥಿತಿಯೇನಾಗಿದೆಯೆಂಬುದನ್ನು ತಿಳಿಯಲಾಗಿರಲಿಲ್ಲ. ಅವರು ಮರಳಿ ಬಂದೇ ಬರುತ್ತಾರೆಂದು ಒಳಮನಸ್ಸು ಹೇಳುತ್ತಿತ್ತು. ಅವರಿಗಿಷ್ಟದ ಅಡುಗೆ ಕೆಲಸಗಳಲ್ಲಿ ತೊಡಗಿಕೊಂಡಿರುವಂತೆಯೇ, ದಾಸಿ ಮತ್ತೊಂದು ಸುದ್ದಿ ಹೊತ್ತುಕೊಂಡು ಬಂದಿದ್ದಳು. ಅಬೂಜಹಲನ ಮರಣಕ್ಕಿಂತಲೂ, ಕುರೈಶ್ ಗೋತ್ರಕ್ಕಾಗಿರುವ ಅವಮಾನದಿಂದ ಕುಗ್ಗಿಹೋದ ಸರದಾರರುಗಳೆಲ್ಲ ಕಅಬಾ ಮಂದಿರದ ಅಂಗಳದಲ್ಲಿ ಕುರೈಶ್ ಮಹಾನಾಯಕ ಅಬೂಸುಫ್ಯಾನರ ನೇತೃತ್ವದಲ್ಲಿ ಸಭೆ ಸೇರಿ, ಪ್ರತೀಕಾರದ ಯುದ್ಧಕ್ಕೆ ತಯಾರಿ ನಡೆಸುತ್ತಿದ್ದಾರೆಂಬ ಆತಂಕದ ಸುದ್ದಿ ಅದು. ಗಾಬರಿಗೊಂಡ ನಾನು ನನ್ನ ಕೆಲಸಗಳನ್ನೆಲ್ಲ ಅಲ್ಲಿಯೇ ಇಟ್ಟು, ದಾಸಿಯನ್ನು ಕರೆದುಕೊಂಡು ಕಅಬಾ ಮಂದಿರದತ್ತ ಧಾವಿಸಿದೆ.

ನಾನು ನಿರೀಕ್ಷಿಸಿದ್ದಂತೆಯೇ ಗೆಳತಿ ಹಿಂದ್ ಅಲ್ಲಿದ್ದಳು.

ಪ್ರತೀಕಾರದ ಯುದ್ಧಕ್ಕೆ ಹೊರಡುವ ಸೈನ್ಯದಲ್ಲಿ ಮಹಿಳೆಯರನ್ನೂ ಸೇರಿಸಿಕೊಳ್ಳಬೇಕೆಂದು ಒತ್ತಾಯಿಸಲು ಮಹಿಳೆಯರ ದೊಡ್ಡ ದಂಡನ್ನೇ ಕಟ್ಟಿಕೊಂಡು ಬಂದಿದ್ದಳು ಹಿಂದ್. ಕುರೈಶ್ ಮಹಾನಾಯಕನ ಪತ್ನಿಯೆಂಬ ಅಹಂಕಾರ ಒಂದು ಕಡೆಗಿದ್ದರೆ, ಯುದ್ಧದಲ್ಲಿ ತನ್ನ ಅಬ್ಬ ಉತ್ಬಾರವರು ಹತರಾಗಿದ್ದಾರೆ ಎಂಬ ನೋವು ಮತ್ತೊಂದು ಕಡೆ. ಸಭೆ ಸೇರಿದ್ದ ಗಂಡಸರ ನಡುವೆ, ಅತ್ತ ಇತ್ತ ಓಡಾಡುತ್ತಾ ಎಲ್ಲರನ್ನೂ ಪ್ರತೀಕಾರಕ್ಕಾಗಿ ಹುರಿದುಂಬಿಸುತ್ತಿದ್ದಳು.

'ಯುದ್ಧದಲ್ಲಿ ಶತ್ರುಗಳ ಈಟಿಗೆ ಎದೆಕೊಟ್ಟು ಮರಣ ಹೊಂದಿದ ನನ್ನಬ್ಬ ಉತ್ಬಾರನ್ನು ನಿಜವಾದ ವೀರನೆನ್ನುವೆ. ಶತ್ರುಗಳಿಗೆ ಬೆನ್ನು ತೋರಿಸದೆ ವೀರಮರಣವನ್ನಪ್ಪಿದ ಅಬೂಜಹಲರನ್ನು ನಾನು ಕೊಂಡಾಡುವೆ. ಆದರೆ, ನಮ್ಮವರನ್ನು ರಣರಂಗದಲ್ಲಿ ಬಲಿಕೊಟ್ಟು ಮಕ್ಕಾದತ್ತ ಓಡಿಬರುತ್ತಿರುವ ನಮ್ಮ ಸೈನಿಕರನ್ನು ನಿಜವಾದ ಗಂಡಸರಲ್ಲ ಎನ್ನುವೆ. ಇಲ್ಲಿ ಸಭೆ ಸೇರಿದವರಲ್ಲಿ ಯಾರಾದರೂ ಗಂಡಸರು ಇದ್ದರೆ, ಪ್ರತೀಕಾರದ ಯುದ್ಧಕ್ಕೆ ನಮ್ಮನ್ನು ಕರೆದೊಯ್ಯಿರಿ. ನಿಮ್ಮ ಕಣ್ಣೆದುರೇ ನಿಮ್ಮ ಹೆಂಡಂದಿರು ನಿಮಗಿಂತ ಎಷ್ಟು ಬಲಶಾಲಿಗಳು ಎಂಬುದನ್ನು ಕಣ್ಣಾರೆ ಕಾಣಿರಿ' ಎಂದು ಅಬ್ಬರಿಸುತ್ತಿದ್ದಳು.

ಕುರೈಶ್ ಅಧಿನಾಯಕ ಅಬೂಸುಫ್ಯಾನರ ನೇತೃತ್ವದಲ್ಲಿ ಮಂದಿರದ ಎದುರು ಸಭೆ ಸೇರಿದ್ದವರಲ್ಲಿ ಗಂಡನನ್ನು ಕಳೆದುಕೊಂಡ ಹೆಂಡತಿಯಿದ್ದಳು. ಮಗನನ್ನು ಕಳೆದು ಕೊಂಡ ಉಮ್ಮ ಇದ್ದಳು. ಸೋದರನನ್ನು ಕಳೆದುಕೊಂಡ ಸೋದರನಿದ್ದನು, ಅಬ್ಬನನ್ನು

ಕಳೆದುಕೊಂಡ ಮಗನಿದ್ದನು, ಮಗನನ್ನು ಕಳೆದುಕೊಂಡ ಅಬ್ಬನಿದ್ದನು. ಅಬೂಜಹಲನ ಮರಣದಿಂದಾಗಿ ರೊಚ್ಚಿಗೆದ್ದು ಪ್ರತೀಕಾರಕ್ಕೆ ತಹತಹಿಸುತ್ತಿದ್ದ ಮಗ ಇಕ್ರಿಮಾ ಇದ್ದನು.

ಅಬೂಸುಫ್ಯಾನರ ಪತ್ನಿ ಹಿಂದ್'ಳ ಕಿರುಚಾಟಕ್ಕೆ ಯಾರೂ ಎದುರಾಡುತ್ತಿರಲಿಲ್ಲ. ಏನಾದರೂ ಬುದ್ಧಿಮಾತು ಹೇಳ ಹೊರಟರೆ, ಅಂಥವರ ಜನ್ಮವನ್ನು ಸಾರ್ವಜನಿಕ ವಾಗಿಯೇ ಜಾಲಾಡಲೂ ಹೇಸುವವಳಲ್ಲ ಹಿಂದ್. ಅವಳು ಕರೆದುಕೊಂಡು ಬಂದಿದ್ದ ತಂಡದಲ್ಲಿದ್ದ ಇಕ್ರಿಮಾನ ಹೆಂಡತಿ ಉಮ್ಮು ಹಕೀಮ್, ಸಫ್ವಾನರ ಪತ್ನಿ ಬರ್ಝಾ, ವಲೀದರ ಮಗಳು ಫಾತಿಮಾ, ಮುಸ್ಅಬರ ತಾಯಿ ಹನ್ನಾಸ್ ಎಲ್ಲರೂ ನನಗೆ ಪರಿಚಯವಿರುವವರೇ. ಅವರೆಲ್ಲರ ನಾಯಕಿಯಾಗಲು ಹಪಹಪಿಸುತ್ತಿದ್ದಳು ಹಿಂದ್.

ಹೆಚ್ಚು ಕಮ್ಮಿ ನನ್ನದೇ ವಯಸ್ಸಿನ 'ಹಿಂದ್' ಎಲ್ಲರಂಥವಳಲ್ಲ. ಅವಳಂತೆ ಇನ್ನೊಬ್ಬಳಿರಲು ಸಾಧ್ಯವೂ ಇಲ್ಲ. ಅಬೂಸುಫ್ಯಾರನ್ನು ಮದುವೆಯಾಗುವುದಕ್ಕಿಂತ ಮೊದಲು, ಹಬ್ಸ ಬಿನ್ ಮುಘೀರಾರನ್ನು ಮದುವೆಯಾಗಿ ಒಬ್ಬ ಮಗನನ್ನೂ ಹಡೆದಿದ್ದಳು. ಕೆಲವು ದಿನಗಳ ಬಳಿಕ ಗುಣಪಡಿಸಲಾಗದ ಖಾಯಿಲೆಯಿಂದ ಹಬ್ಸ ತೀರಿಕೊಂಡಾಗ, ಪುಟ್ಟ ಮಗು ಅಬಾ'ನನ್ನು ತಂದೆಯ ಕುಟುಂಬದಲ್ಲೇ ಬೆಳೆಸುವ ಯೋಚನೆಯಿಂದ, ನಡು ವಯಸ್ಸನ್ನು ದಾಟಿದ್ದ ಹಬ್ಸನ ಹಿರಿಸೋದರ ಅಲ್ ಫಕಾರ ಹೆಂಡತಿಯಾಗಲು ಸಮ್ಮತಿಸಿದ್ದಳು. ಆದರೆ, ಅವಳ ಬೀಸು ಬೀಸಾದ ನಡತೆಯನ್ನು ಅಲ್ ಫಕಾರ ಶಂಕಿಸಲಾರಂಭಿಸಿದ್ದರು. ಎರಡನೆಯ ಗಂಡನ ವರ್ತನೆಯಿಂದ ಅಸಹನೆಗೊಂಡ ಹಿಂದ್, ಅವರಿಂದಲೂ ಬಿಡುಗಡೆಗೊಂಡು ಮುಂದೆ ಕುರೈಶರ ಮಹಾನಾಯಕ ಅಬೂಸುಫ್ಯಾನರ ಮೂರನೆಯ ಹೆಂಡತಿಯಾಗಿದ್ದಳು.

ಅವಳೆಷ್ಟು ರೂಪವತಿಯೋ ಅದರ ಎರಡು ಪಟ್ಟು ಕ್ರೂರಿ. ಅದಕ್ಕಿಂತಲೂ ಹೆಚ್ಚು ಜಾಣೆ. ತನ್ನ ಚೂಪು ನೋಟದಿಂದಲೇ ಅದೆಷ್ಟೇ ಬಲಶಾಲಿ ಸರದಾರನನ್ನೂ ನೆಲನೋಡುವಂತೆ ಮಾಡಬಲ್ಲ ತುರುಣಿ. ತಾನು ಬಯಸಿದ್ದನ್ನು ಅದು ಹೇಗಾದರೂ ಪಡೆದೇತೀರುವ ಛಲಗಾತಿ. ಹಟಮಾರಿ ಸುಂದರಿ.

ಒಂದು ಕಾಲದಲ್ಲಿ ಪ್ರವಾದಿಯ 'ಏಕದೇವ' ಪ್ರತಿಪಾದನೆಯ ಮೇಲೆ ಮರಳಿನ ಕಣದಷ್ಟೂ ನಂಬಿಕೆಯಿರಿಸದಂತೆ ಮನೆಮನೆ ಅಲೆದು ಮಹಿಳೆಯರನ್ನು ಪ್ರಚೋದಿಸು ತ್ತಿದ್ದವಳು ಅವಳು. ಹಾಗೆಂದು, ಅವಳು ಕಅಬಾ ಮಂದಿರದಲ್ಲಿ ನಡೆಯುತ್ತಿದ್ದ ಬಹುದೇವಾರಾಧನೆಯಲ್ಲೂ ನಂಬಿಕೆ ಇರಿಸಿಕೊಂಡವಳಲ್ಲ. ದೇವರೆಂದರೆ ಅವಳಿಗೆ ಅಸಡ್ಡೆ. ದೇವ ವಿಗ್ರಹಗಳೆಂದರೆ ತಿರಸ್ಕಾರ. ತನ್ನ ಹೊರತಾಗಿ ಬೇರೇನನ್ನೂ ನಂಬಲು ನಿರಾಕರಿಸುತ್ತಿದ್ದವಳು ಹಿಂದ್. ಈ ಎಲ್ಲ ಅತಿರೇಕ ವರ್ತನೆಗಳಿಗೆ ಕಾರಣವಾಗಿದ್ದದ್ದು, ಅವಳು ಕಣ್ಣಾರೆ ಕಂಡಿದ್ದ ಅವಳ ಉಮ್ಮನ ಸಾವು.





ಅಬುಲ್ ಆಸರನ್ನು ನಾನು ಮದುವೆಯಾದ ಆರಂಭದ ದಿನಗಳಲ್ಲಿ ವಾರಕ್ಕೆರಡು ಬಾರಿಯಾದರೂ ಮನೆಗೆ ಬಂದು ಮಾತನಾಡಿಸಿಕೊಂಡು ಹೋಗುತ್ತಿದ್ದವಳು ಈ ಹಿಂದ್. ಹಾಗೊಮ್ಮೆ ಬಂದಿದ್ದವಳು ಅರ್ಧ ಸಿಟ್ಟಿನಿಂದ, ಅರ್ಧ ನೋವಿನಿಂದ ಅವಳ ಉಮ್ಮನ ಸಾವಿನ ಕತೆ ಹೇಳಿದ್ದಳು. ಅವಳ ಅಳುಮುಖವನ್ನು ನಾನು ಕಂಡದ್ದು ಅದೇ ಮೊದಲು ಮತ್ತು ಅದೇ ಕಡೆ.

ಯಾವ ಹಕೀಮರ ಔಷಧಿಯಿಂದಲೂ ಚೇತರಿಸಿಕೊಳ್ಳದಿದ್ದ ಅವಳ ಉಮ್ಮ, ಒಂದು ರಾತ್ರಿಯ ಹೊತ್ತಲ್ಲಿ ಸಾವಿನ ಬಾಗಿಲು ತಟ್ಟುತ್ತಿರುವವರಂತೆ ನರಳಲಾರಂಭಿಸಿದ್ದರು. ಆಗಿನ್ನೂ ಪುಟ್ಟ ಹುಡುಗಿ ಹಿಂದ್. ಅವಳಬ್ಬನ ಜೇಬಿನಲ್ಲಿದ್ದ ಕಅಬಾ ದೇವಮಂದಿರದ ಕೀಲಿ ಕೈಯನ್ನು ಕದ್ದು, ಕತ್ತಲ ರಾತ್ರಿಯಲ್ಲೇ ಕಅಬಾ ದೇವಮಂದಿರಕ್ಕೆ ಓಡಿದ್ದಳಂತೆ. ಹೆಣ್ಣು ಮಕ್ಕಳಿಗೆ ಪ್ರವೇಶವನ್ನು ನಿಷೇಧಿಸಿದ್ದ ಗರ್ಭಗುಡಿಯ ಬಾಗಿಲು ತೆಗೆದು ಒಳಗೆ ಧುಮುಕಿದ್ದಳು. ಮೈ ಕೊರೆಯುತ್ತಿದ್ದ ಚಳಿಯನ್ನೂ ಲೆಕ್ಕಿಸದೆ, ಉಮ್ಮನನ್ನು ಉಳಿಸಿಕೊಡುವಂತೆ ಆ ದೇವ ಮಂದಿರದಲ್ಲಿರುವ ಎಲ್ಲ ದೇವ ದೇವತೆಗಳನ್ನೂ ಪರಿಪರಿಯಾಗಿ ಬೇಡಿಕೊಂಡಿದ್ದಳು. ತಂಪು ನೆಲದಲ್ಲಿ ಹೊರಳಾಡಿ, ಹೊರಳಾಡಿ ಅತ್ತಿದ್ದಳು; ಪ್ರಾರ್ಥಿಸಿದ್ದಳು. ಕಣ್ಣೀರಿನಿಂದಲೇ ಎಲ್ಲ ದೇವತೆಗಳ ಪಾದಗಳನ್ನು ತೊಳೆದಿದ್ದಳು. ಅತ್ತೂ ಅತ್ತೂ ಆಯಾಸದಿಂದ ಅಲ್ಲೇ ನಿದ್ರೆಗೆ ಜಾರಿದ್ದಳು.

ಮುಂಜಾನೆ, ಮಗಳನ್ನು ಹುಡುಕುತ್ತಾ ಅವಳಬ್ಬ ಉತ್ಬಾ ಅಲ್ಲಿಗೆ ಹೋಗಿದ್ದರು. ಪ್ರಜ್ಞೆಯಿಲ್ಲದೆ ಬಿದ್ದುಕೊಂಡಿದ್ದ ಮಗಳನ್ನು ಎತ್ತಿಕೊಂಡು ಹೋಗಿ ತೀರಿಹೋದ ತಾಯಿಯ ಶವದ ಬಳಿ ನೆಲಕ್ಕಿಳಿಸಿದ್ದರು. ಮಗಳ ಹಟದ ಅನುಭವವಿದ್ದ ಅವರಿಗೆ, ಉಮ್ಮ ತೀರಿಹೋಗಿದ್ದಾಳೆಂಬ ಸತ್ಯ ಅರಿವಾದಾಗ ಅವಳು ಕಿರುಚಲಾರಂಭಿಸಿದರೆ ಸಮಾಧಾನಿಸುವುದು ಹೇಗೆ ಎಂಬ ಆತಂಕದಲ್ಲಿದ್ದರೆ, ಉಮ್ಮನ ಶವದ ಬಳಿ ನಿಂತ ಪುಟ್ಟ ಮಗಳ ಕಣ್ಣುಗಳಿಂದ ಒಂದು ಹನಿ ನೀರೂ ಜಾರಿದ್ದಿಲ್ಲವಂತೆ. ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದ ಅವಳು, ಆದೇಶ ಕೊಡುವವಳಂತೆ, 'ಇದನ್ನು ಇಲ್ಲಿಂದ ಎತ್ತಿಕೊಂಡು ಎಲ್ಲಾದರೂ ಹೋಗಿ ಹೂತುಬಿಡಿ' ಎಂದು ಶವದತ್ತ ಬೊಟ್ಟು ಮಾಡಿದ್ದಳಂತೆ!

ಆ ಕ್ಷಣದಿಂದ ಅವಳ ವರ್ತನೆಗಳೇ ಬದಲಾಗಿದ್ದವು.

ಕಅಬಾ ಮಂದಿರದ ಹೆಸರು ಹೇಳಿದರೆ ಉರಿದುಬೀಳುತ್ತಿದ್ದಳು. ದೇವಮಂದಿರದ ದಿಕ್ಕಿಗೆ ಕಣ್ಣೆತ್ತಿ ನೋಡುವುದನ್ನೂ ನಿಲ್ಲಿಸಿದ್ದಳು. ದೈವ, ದೇವರು, ದೇವತೆಗಳೆಲ್ಲ ಬರಿಯ ಸುಳ್ಳು ಕತೆಗಳ ಕಂತೆಗಳು. ಭೂಮಿಯ ಮೇಲೆ ಹುಟ್ಟಿರುವುದೇ ಸುಖ ಅನುಭವಿಸಲು. ಬದುಕಿರುವಷ್ಟು ದಿನ ಏನೇನೆಲ್ಲ ಸುಖಗಳನ್ನು, ಹೇಗೇಗೆಲ್ಲ ಅನುಭವಿಸಲು ಸಾಧ್ಯವೋ ಅವೆಲ್ಲವನ್ನೂ ಅನುಭವಿಸಬೇಕು. ಭೂಮಿಯ ಮೇಲೆ ಹುಟ್ಟಿದ ಬಳಿಕ ಹಾಗೆ

ಮಾಡದವರು ಶತಮೂರ್ಖರು ಎಂದೇ ವಾದಿಸತೊಡಗಿದ್ದಳು.

ಮುಂದೇನಾಗಲಿದೆಯೋ ಎಂಬ ಕುತೂಹಲದಿಂದ ಮಂದಿರದ ಬಳಿ ನಡೆಯುತ್ತಿದ್ದ ಸಭೆಯ ನಡುವೆ ಬಹಳ ಹೊತ್ತು ನಿಂತಿದ್ದೆ.

'ನನ್ನ ಅಬ್ಬನನ್ನು ಕೊಂದವರಾರು?' ಪ್ರಶ್ನಿಸಿದ್ದಳು ಹಿಂದ್.

ಯಾರೂ ಉತ್ತರಿಸಲಿಲ್ಲ.

'ಹಂಝಾ...' ಎಂದರಚಿದ್ದಳು ಹಿಂದ್.

'ಹೇಗೆ ಕೊಂದನಂತೆ?' ಮತ್ತೊಂದು ಪ್ರಶ್ನೆ ಎಸೆದಳು.

'ಬರ್ಚಿ ಎಸೆದು ಕೊಂದನಂತೆ.' ಉತ್ತರವನ್ನೂ ಅವಳೇ ನೀಡಿದಳು,

'ನಮ್ಮ ಬಳಿ ಬರ್ಚಿಗಳಿದ್ದಿರಲಿಲ್ಲವೆ?'

'ಇತ್ತು.'

'ಎಸೆಯುವವರಿದ್ದಿರಲಿಲ್ಲವೆ?'

'ಇದ್ದರು'.

'ಅಂಥವರಿಗೆ ನೀವು ಯುದ್ಧದ ನಾಯಕತ್ವವನ್ನು ಯಾಕೆ ನೀಡುವುದಿಲ್ಲ? ಯಾಕೆಂದರೆ, ಅವರು ನಮ್ಮಂತೆ ಬೆಳ್ಳಗಿರುವುದಿಲ್ಲ. ಮಂದಿರದಲ್ಲಿರುವ ನಿರುಪಯೋಗಿ ಕಲ್ಲುಗಳಂತೆ ಅವರು ಕಪ್ಪಾಗಿರುವರು.'

ಹೀಗೆ, ಪ್ರಶ್ನೆಗಳನ್ನು ಎಸೆಯುತ್ತಲೂ, ಉತ್ತರಗಳನ್ನು ತಾನೇ ನೀಡುತ್ತಲೂ ಎಲ್ಲರನ್ನೂ ದಂಗುಗೊಳಿಸುತ್ತಿದ್ದ ಹಿಂದ್ ಇದ್ದಕ್ಕಿದ್ದಂತೆ, ಹಿಂದಕ್ಕೆ ತಿರುಗಿ 'ಝಮ್ ಝಮ್' ಬಾವಿಯ ದಿಕ್ಕಿಗೆ ನೋಡುತ್ತಾ, 'ವಹ್ಶೀ' ಎಂದು ಜೋರಾಗಿ ಕೂಗಿದಳು.

ಅಲ್ಲಿ ಕುಳಿತಿದ್ದವರೆಲ್ಲ ಅಚ್ಚರಿಯಿಂದ ಏಕಕಾಲದಲ್ಲಿ ಬಾವಿಯ ದಿಕ್ಕಿಗೆ ಕತ್ತು ತಿರುವಿದ್ದರು.

ಬಾವಿಯ ಮೆಟ್ಟಲುಗಳ ಬದಿಯಲ್ಲಿ, ನೆಲದ ಮೇಲೆ ಕುಕ್ಕರುಗಾಲಲ್ಲಿ ಕುಳಿತಿದ್ದ ಆಜಾನುಬಾಹುವೊಬ್ಬ ಎದ್ದು ನಿಂತಂತೆ ಕಾಣಿಸಿತು. ಸಭೆಯಲ್ಲಿ ಕುಳಿತಿದ್ದ ಎಲ್ಲ ವೀರಾಧಿವೀರ ಕುರೈಶ್ ಸರದಾರರೆಲ್ಲರೂ ತಲೆ ಎತ್ತಿಯೇ ನೋಡಬೇಕಾದಷ್ಟು ಎತ್ತರದ ಕಪ್ಪು ಬಣ್ಣದ ಆಕೃತಿಯೊಂದು ಆನೆಯಂತೆ ಗಂಭೀರವಾಗಿ ಹೆಜ್ಜೆ ಬದಲಿಸುತ್ತಾ ಬಂದಿತ್ತಾದರೂ, ಸಭೆಯ ಬಳಿ ತಲುಪುತ್ತಿದ್ದಂತೆ ಸೊಂಟ ಬಾಗಿಸಿ, ಕೈಕಟ್ಟಿ ತಲೆ ತಗ್ಗಿಸಿ ನಿಂತಿತು.

'ಓ! ಈ ಈಟಿ ಗುಲಾಮನಾ...?' ತಾತ್ಸಾರದಿಂದ ಕೆಲವರು ಮುಖ ಸಿಂಡರಿಸಿದ್ದರು. ಆ ಕರಿಯ, ಈಟಿ ಎಸೆಯುವುದರಲ್ಲಿ ನಿಷ್ಣಾತನೆಂದು ಗೊತ್ತಿದ್ದರೂ ಸದ್ದಾಗದಂತೆ ಲೊಚಗುಟ್ಟಿದ್ದರು.

'ತಲೆಯೆತ್ತು ವಹ್ಶೀ ., ತಲೆಯೆತ್ತಿ ಸೆಟೆದು ನಿಲ್ಲು. ಕುರೈಶ್ ಸರದಾರರೆಲ್ಲ ತಲೆಯೆತ್ತಿ ನಿಲ್ಲುವಂತೆ ಮಾಡು.' ಆದೇಶಿಸಿದ್ದಳು ಹಿಂದ್.





ಆದರೆ, ಬೆನ್ನು ಬಾಗಿಸಿ ತಲೆ ತಗ್ಗಿಸಿ ನಿಂತಿದ್ದ ಆ ಕರಿಯ ಮಿಸುಕಾಡಲಿಲ್ಲ. ಗುಲಾಮನೊಬ್ಬನ ಅವಿಧೇಯತೆಗೆ ಹಿಂದ್ ಸಿಟ್ಟಿಗೇಳಬಹುದೆಂದುಕೊಂಡಿದ್ದೆ. ಅಚ್ಚರಿಯಿಂದ ಅವಳ ಮುಖ ನೋಡಿದರೆ, ಅದು ವಿಷಾದದಿಂದ ಮುದುಡಿತ್ತು. ಕುಳಿತಿದ್ದ ಸರದಾರರುಗಳ ನಡುವೆ ಹೆಜ್ಜೆಗಳನ್ನು ತೂರುತ್ತಾ ಹಿಂದ್, ಆ ಕರಿಯನ ಬಳಿಗೆ ಸರಿಯುತ್ತಿದ್ದಾಗ ಮುಂದೇನಾಗಲಿದೆಯೋ ಎಂಬ ಕುತೂಹಲದಿಂದ ಎಲ್ಲರ ಕಣ್ಣುಗಳೂ ಅವಳನ್ನು ಹಿಂಬಾಲಿಸಿದ್ದವು.

ಅರೆ! ಅವಳೇನು ಮಾಡುತ್ತಿದ್ದಾಳೆ!!

ಯಾವ ಹೆಣ್ಣೂ ಸಾರ್ವಜನಿಕವಾಗಿ ಮಾಡಲು ನಾಚುವ ಸಂಗತಿಯೊಂದನ್ನು ಅವಳು ಮಾಡಿದ್ದಳು!

ಆ ಕರಿಯ ಗುಲಾಮನ ಕಣ್ಣಲ್ಲಿ ಕಣ್ಣನ್ನಿಟ್ಟು ಅವನ ಗಲ್ಲವನ್ನು ಎಡಗೈಯಿಂದ ಮೇಲಕ್ಕೆ ಎತ್ತಿ, ಬಲಗೈ ಮುಷ್ಟಿಯಿಂದ ಅವನ ಕಲ್ಲಿನಂತಹ ಹೊಟ್ಟೆಯ ಮೇಲೆ ಬಲವಾಗಿ ಗುದ್ದಿದಾಗ, ವಹ್ಶೀ ಎಂಬ ಕರಿಯ ಗುಲಾಮ ಕಅಬಾ ಮಂದಿರದೆದುರು ಮೊತ್ತ ಮೊದಲ ಬಾರಿಗೆ ತಲೆಯೆತ್ತಿ, ಸೆಟೆದು ನಿಂತಿದ್ದ!

ತಮ್ಮ ಹೆಂಡತಿಯ ಅನಿರೀಕ್ಷಿತ ವರ್ತನೆಯಿಂದ ಮುಜುಗರಕ್ಕೊಳಗಾಗಿದ್ದ ಅಬೂಸುಫ್ಯಾನರು, ತಮ್ಮೆದುರು ಕುಳಿತಿರುವ ಕುರೈಶ್ ಸರದಾರರ ದೃಷ್ಟಿಗಳನ್ನೆದುರಿಸಲಾಗದೆ ನಾಚಿ ತಲೆ ತಗ್ಗಿಸಿ ಕುಳಿತುಬಿಟ್ಟಿದ್ದರು.

ಎಲ್ಲ ಪೂರ್ವ ತಯಾರಿಗಳನ್ನು ಮಾಡಿಕೊಂಡೇ ಬಂದಂತಿದ್ದಳು ಹಿಂದ್. ತನ್ನೆರಡೂ ಕೈಗಳಿಂದ ವಹ್ಶೀಯ ಎರಡೂ ತೋಳುಗಳನ್ನು ಬಲವಾಗಿ ಹಿಡಿದು ಜಗ್ಗಿದ ಹಿಂದ್, 'ನಿನಗೆ ಈ ಗುಲಾಮಗಿರಿಯಿಂದ ಬಿಡುಗಡೆ ಬೇಕಲ್ಲವೆ?' ಎಂದು ಪ್ರಶ್ನಿಸಿದ್ದಳು.

ವಹ್ಶೀಯ ಕಣ್ಣುಗಳು ಅರಳಿದ್ದವು. ಹೌದು ಎಂಬಂತೆ ತಲೆಯಾಡಿಸಿದ್ದ.

'ನಾನು ಹೇಳುವ ಕೆಲಸ ಮಾಡಿದರೆ, ಗುಲಾಮಗಿರಿಯಿಂದ ನಿನ್ನನ್ನು ಬಿಡುಗಡೆಗೊಳಿಸುವ ವಾಗ್ದಾನ ನೀಡುವೆ. ನನ್ನ ವಾಗ್ದಾನವನ್ನು ಕುರೈಶ್ ನಾಯಕನ ಪತ್ನಿಯೊಬ್ಬಳ ವಾಗ್ದಾನವೆಂಬುದನ್ನು ಮರೆಯಬೇಡ.'

ವಹ್ಶೀ ಕಲ್ಲಿನಂತೆಯೇ ನಿಂತುಬಿಟ್ಟಿದ್ದ.

'ನಿನ್ನಿಂದ ಸಾಧ್ಯವೆ?'

'ಆಗಬಹುದು' ಎಂಬಂತೆ ವಹ್ಶೀ ಗೋಣು ಆಡಿಸಿದ್ದ.

'ಬಾಯಿಬಿಟ್ಟು, ಸಾಧ್ಯವಿದೆ ಎಂದು ಹೇಳು. ಇದು ಕುರೈಶ್ ಸರದಾರರ ಸಮಕ್ಷಮದಲ್ಲಿ ನಾವಿಬ್ಬರು ಮಾಡಿಕೊಳ್ಳುವ ಒಪ್ಪಂದ ಎಂಬುದು ನೆನಪಿರಲಿ.'

'ಅದೇನು ಕೆಲಸ ಎಂಬುದನ್ನು ತಿಳಿಸಿರಿ.' ವಹ್ಶೀ ಮೆತ್ತಗೆ ವಿನಂತಿಸಿದ್ದ.

‘ಮುಂದೆ ನಡೆಯಲಿರುವ ಪ್ರತೀಕಾರದ ಯುದ್ಧದಲ್ಲಿ ನೀನು ನನ್ನ ಜೊತೆಗೆ ಇರಬೇಕು. ರಣರಂಗದಲ್ಲಿ ನಾನು ತೋರಿಸುವ ಒಬ್ಬನ ಎದೆಗೆ ಈಟಿ ತೂರಿಸಿ ಅದು ಅವನ ಬೆನ್ನಿನಿಂದ ಇಣುಕುವಂತೆ ಮಾಡಬೇಕು. ಈ ಕೆಲಸ ನಿನ್ನಿಂದ ಸಾಧ್ಯವಾಗುತ್ತದೆ ಎಂದು ನಾನು ನಂಬಿರುವೆ. ಸಾಧ್ಯವಾಗದು ಎಂದು ಹೇಳಬೇಡ ವಹ್ಷೀ..’ ಎನ್ನುತ್ತಾ ಬಂಡೆಗಳಂತೆ ಉಬ್ಬಿದ ಆ ಕರಿಗುಲಾಮನ ಎದೆಗಳ ಮೇಲೆ ಎರಡೂ ಕೈಗಳನ್ನಿರಿಸಿ’ ವಿನಂತಿಸಿದ್ದಳು.

‘ಗುಲಾಮಗಿರಿಯಿಂದ ಬಿಡುಗಡೆ ಸಿಗುವುದಾದರೆ, ಪ್ರಾಣವನ್ನು ಪಣಕ್ಕಿಟ್ಟು ನೀವು ಹೇಳಿದ ಹಾಗೆ ಕೇಳುವೆ.’

ವಹ್ಷೀಯ ಮಾತಿನಲ್ಲಿ ದೃಢತೆ ಇತ್ತಾದರೂ, ಅವನ ಕಣ್ಣುಗಳು ಮತ್ತೆಲ್ಲೋ ನೋಡುತ್ತಿದ್ದವು. ಸ್ವಲ್ಪ ಹೊತ್ತು ಹಾಗೆಯೇ ಕಣ್ಣಾಡಿಸುತ್ತಿದ್ದವನು, ‘ನನ್ನ ಒಡೆಯರ ಅನುಮತಿಯಿದ್ದರೆ ಮಾತ್ರ ಇದು ಸಾಧ್ಯ’ ಎಂದುಬಿಟ್ಟಿದ್ದ!

ವಹ್ಷೀಯ ಶರತ್ತನ್ನು ನಿರೀಕ್ಷಿಸಿದ್ದವಳಂತೆ ಹಿಂದ್‌ಳ ಮುಖದಲ್ಲಿ ಸಣ್ಣ ನಗು ತೇಲಾಡಿತ್ತು.

‘ಸರ್ದಾರ್ ಜುಬೈರ್’ ಸಭೆಯತ್ತ ದಿಟ್ಟಿಸಿದ್ದ ಹಿಂದ್ ಗಟ್ಟಿಸ್ವರದಲ್ಲಿ ಕರೆದಿದ್ದಳು.

ಸಭೆಯ ನಡುವಿನಿಂದ ಎದ್ದು ನಿಂತ ಗಂಭೀರ ಮುಖದ ಮಧ್ಯವಯಸ್ಕರೊಬ್ಬರು ಸಂಕೋಚದಿಂದ ಅತ್ತಿತ್ತ ಕಣ್ಣಾಡಿಸತೊಡಗಿದ್ದರು. ಸರದಾರ ಜುಬೈರ್ ಯಾರೆಂಬುದು ಅಲ್ಲಿ ನೆರೆದಿದ್ದ ಹೆಚ್ಚಿನ ಸರದಾರರುಗಳಿಗೆ ಗೊತ್ತಿತ್ತು. ಕೆಲವು ವರ್ಷಗಳ ಹಿಂದೆ, ಆಯಿಷಾಳ ಜೊತೆಗೆ ಮದುವೆ ಒಪ್ಪಂದ ಮಾಡಿಕೊಂಡಿದ್ದರೂ, ಅವಳಬ್ಬ ಅಬೂಬಕರರ ವಿನಂತಿಯಂತೆ ಮದುವೆಗೆ ಮುನ್ನವೇ ಒಪ್ಪಂದವನ್ನು ಮುರಿದು ಕೊಟ್ಟವರು ಅವರು.

‘ಸರ್ದಾರ್ ಜುಬೈರ್, ನನ್ನ ವಾಗ್ದಾನವನ್ನು ತಾವು ಕೇಳಿಸಿಕೊಂಡಿರಬಹುದಲ್ಲವೆ?’

‘ಹೌದು. ಕೇಳಿಸಿಕೊಂಡಿರುವೆ. ನನಗೆ ಸಮ್ಮತವಿದೆ. ನಿನ್ನ ಮಾತಿನಂತೆ ವಹ್ಷೀ ನಡೆದುಕೊಂಡರೆ ಅವನನ್ನು ಗುಲಾಮಗಿರಿಯಿಂದ ಬಿಡುಗಡೆಗೊಳಿಸುವುದಾಗಿ ಮಾತು ಕೊಡುವೆ.’ ನಿಂತ ಜಾಗದಿಂದಲೇ ಜುಬೈರ್ ಪ್ರಮಾಣ ಮಾಡಿದ್ದರು.

ಹಿಂದ್ ಮಾತು ಮುಂದುವರಿಸಿದ್ದಳು, ‘ಮುಂದಿನ ಪ್ರತೀಕಾರದ ಯುದ್ಧದಲ್ಲಿ ಈಟಿ ಎಸೆಯುವವರ ತಂಡದ ನಾಯಕನನ್ನಾಗಿ ವಹ್ಷೀಯನ್ನು ನೇಮಿಸಲು ಯಾರದ್ದಾದರೂ ವಿರೋಧವಿದ್ದರೆ, ಅವರು ಈ ಸಭೆಯಲ್ಲೇ ತಿಳಿಸಬೇಕು.’

ಯಾರಿಗೂ ಉತ್ತರಿಸಲು ಸಾಧ್ಯವಾಗದಂತಹ ಸವಾಲನ್ನೇ ಎಸೆದಿದ್ದಳು ಹಿಂದ್.

ಕರಿಯ ಗುಲಾಮನೊಬ್ಬನನ್ನು ನಾಯಕನನ್ನಾಗಿ ಮಾಡಿದರೆ, ಮಿಕ್ಕವರು ಆ ತಂಡದಲ್ಲಿ ಸೇರಲು ಹಿಂಜರಿದರೆ ಏನು ಮಾಡುವುದೆಂಬ ಆತಂಕ ಕೆಲವು ಕುರೈಶ್ ಸರದಾರರನ್ನು ಒಳಗೊಳಗೇ ಕಾಡಲಾರಂಭಿಸಿದ್ದಿರಬಹುದು. ಸಭೆಯೊಳಗೆ ಗುಸು





ಗುಸು ಆರಂಭವಾಗಿತ್ತು. ತಮ್ಮ ಹೆಂಡತಿಯ ಆಟಗಳನ್ನೆಲ್ಲ ಮೌನವಾಗಿಯೇ ನೋಡುತ್ತಿದ್ದ ಅಬೂಸುಫ್ಯಾನರು ಮೊದಲ ಬಾರಿಗೆ ಬಾಯಿಬಿಟ್ಟರು.

‘ಈಟಿ ನಿಪುಣ ವಹ್ಷೀಯನ್ನು, ಮುಂದಿನ ಪ್ರತೀಕಾರದ ಯುದ್ಧದಲ್ಲಿ ಈಟಿ ಎಸೆಯುವವರ ತಂಡದ ನೇತಾರನನ್ನಾಗಿ ನೇಮಿಸಲು ಈ ಸಭೆಯ ಸಮ್ಮತಿ ಇದೆ’ ಎಂದುಬಿಟ್ಟಿದ್ದರು.

ನನ್ನ ಎದೆ ತಣ್ಣಗಾಗಿತ್ತು!

ನನ್ನಜ್ಜ ಹಂಝಾರವರ ಎದೆಯೊಳಗೆ ನುಗ್ಗಿದ ಈಟಿಯ ಮೊನೆ ಅವರ ಬೆನ್ನು ಬಗಿದು ಹೊರಗಿಣುಕುವುದನ್ನು ಕಣ್ಣಾರೆ ಕಂಡಂತಾಗಿ ಬೆವರಿದ್ದೆ.

ಅಷ್ಟರಲ್ಲಿ, ಕುದುರೆಯೇರಿ ಬಂದ ಸುದ್ದಿವಾಹಕನೊಬ್ಬ ಅಬೂಸುಫ್ಯಾನರ ಬಳಿಗೆ ಹೋಗಿ ಸಂದೇಶವೊಂದನ್ನು ತಲುಪಿಸಿದ.

ಅದನ್ನು ಎರಡೆರಡು ಬಾರಿ ಓದಿದ ಅಬೂಸುಫ್ಯಾನರು, ಸಭೆಯನ್ನುದ್ದೇಶಿಸಿ ಹೇಳಿದ್ದರು, ‘ಮದೀನಾಕ್ಕೆ ಹೋಗಿರುವ ನಮ್ಮ ಸೈನ್ಯವು ನಾಳೆ ಸಂಜೆಯ ಹೊತ್ತಿಗೆ ಮಕ್ಕಾ ತಲುಪುತ್ತದೆ. ಆದರೆ, ನಮ್ಮ ಸೈನ್ಯದ ಎಂಬತ್ತು ಸೈನಿಕರು, ಶತ್ರುಗಳಿಗೆ ಒತ್ತೆಸೆರೆ ಯಾಳಾಗಿದ್ದಾರೆ. ಸೆರೆಯಾದವರನ್ನು ಬಿಡಿಸಿಕೊಳ್ಳಬಯಸುವವರು ಪ್ರತಿಯೊಬ್ಬ ಕೈದಿಗೂ ನಾಲ್ಕು ಸಾವಿರ ದಿರ್ಹಮ್‌ಗಳಂತೆ ರಕ್ತಪರಿಹಾರ ಧನವೆಂದು ನಮ್ಮ ಶತ್ರುಗಳು ನಿರ್ಧರಿಸಿದ್ದಾರೆ. ಒತ್ತೆಸೆರೆಯಾದವರ ಸರಿಯಾದ ಹೆಸರು ಮತ್ತಿತರ ವಿವರಗಳನ್ನು ಇಂದು ಸಂಜೆ ತಿಳಿಸಲಾಗುತ್ತದೆ.

–೨–

ಹುಟ್ಟಿದ ದಿನದಿಂದ ಮದುವೆಯ ದಿನದವರೆಗೆ ಮಾತ್ರವಲ್ಲ, ಮದುವೆಯ ಬಳಿಕವೂ ಸುಖದಲ್ಲೇ ತಿಂದುಂಡು ಬೆಳೆಯುತ್ತಿರುವವಳು ನಾನು. ನನ್ನ ಮದುವೆ ದಿನಗಳಲ್ಲಿ ನನ್ನಬ್ಬ ಮಕ್ಕಾದ ಪ್ರತಿಷ್ಠಿತ ವರ್ತಕರಾಗಿದ್ದವರು. ಎಲ್ಲರಂಥವರಲ್ಲ ಎಂದು ಮಕ್ಕಾದ ಎಲ್ಲರಿಂದಲೂ ಹೊಗಳಲ್ಪಡುತ್ತಿದ್ದವರು. ಅಬ್ಬನ ಮನೆಯ ಹಿತ್ತಲ ಹಟ್ಟಿಯಲ್ಲಿರುವ ಆಡು, ಕುದುರೆಗಳನ್ನು ನೋಡಿಕೊಳ್ಳಲೆಂದೇ ಆರು ಮಂದಿ ಗುಲಾಮರಿದ್ದರು. ವಿವಿಧ ಬಗೆಯ ಮಾಂಸಗಳನ್ನು ಬೇಯಿಸಲೆಂದೇ ಮತ್ತಿಬ್ಬರು ಗುಲಾಮ ದಾಸಿಯರಿದ್ದರು. ಬಗೆಬಗೆಯ ಮಾಂಸದ ಅಡುಗೆ ಮಾಡುತ್ತಾ, ಮನೆಗೆ ಬರುವ ಅತಿಥಿಗಳಿಗೆಲ್ಲ ಹೊಟ್ಟೆ ಬಿರಿಯುವಷ್ಟು ಬಡಿಸುವುದೊಂದೇ ದಾಸಿಯರ ಕೆಲಸ. ಅದೇ ಸುಖ ಸಂಭ್ರಮ, ಸಡಗರಗಳೊಂದಿಗೆ ರಬೀಆ ಸರದಾರರ ಪುತ್ರ

ಅಬುಲ್ ಅಸರನ್ನು ಮದುವೆಯಾಗಿ ನಗುನಗುತ್ತಾ ಗಂಡನ ಮನೆಗೆ ಬಲುದೊಡ್ಡ ಮೆರವಣಿಗೆಯಲ್ಲಿ ಬಂದಿದ್ದವಳು ನಾನು. ಅಬುಲ್ ಆಸ್'ರಂತಹ ನಿಜವಾದ ಗಂಡಸನ್ನು ನನಗೆ ಗಂಡನಾಗಿ ಕರುಣಿಸಿದ್ದ ಅಲ್ಲಾಹುವಿಗೆ ನಾನು ಬದುಕಿನುದ್ದಕ್ಕೂ ಕೃತಜ್ಞಳೇ. ಆದರೂ, ಅವನೆದುರು ನನ್ನದೊಂದು ತಕರಾರು ಇದೆ. ಹೆಣ್ಣೊಬ್ಬಳನ್ನು ಈ ಬಗೆಯಲ್ಲಿ ಹಿಂಸಿಸುವುದನ್ನು ಅವನು ಇನ್ನಾದರೂ ನಿಲ್ಲಿಸಬೇಕು.

ಆ ಒಂದು ಸುಂದರವಾದ ಬೆಳದಿಂಗಳ ರಾತ್ರಿಯಲ್ಲಿ, 'ಅಬುಲ್ ಆಸ್ ನಿನ್ನನ್ನು ಮದುವೆಯಾಗುತ್ತಾನಂತೆ, ಏನು ಹೇಳುತ್ತೀಯಾ?' ಎಂದು ಮಹಡಿ ಮೇಲಿನ ಛಾವಣಿಯ ಮೇಲೆ ಕರೆದುಕೊಂಡು ಹೋಗಿದ್ದ ನನ್ನಬ್ಬ ಪ್ರಶ್ನಿಸಿದ್ದಾಗ, ನನ್ನ ಹೃದಯದ ರಕ್ತವೆಲ್ಲ ಮುಖವನ್ನು ತುಂಬಿಕೊಂಡು ನನ್ನ ಉಸಿರೇ ನಿಂತಂತಾಗಿತ್ತು.

ನನ್ನ ಉಮ್ಮ ಖದೀಜಾ ಮತ್ತು ಅಬುಲ್ ಆಸರ ಉಮ್ಮ, ಸೋದರಿಯರ ಮಕ್ಕಳು. ವ್ಯಾಪಾರ ವಹಿವಾಟುಗಳಿಗಾಗಿ ಸಿರಿಯಾದತ್ತ ಅಬುಲ್ ಅಸ್ ಹೊರಟರೆಂದರೆ, ನೂರು ಒಂಟೆಗಳ ಜೊತೆಗೆ ಇನ್ನೂರು ಗುಲಾಮರ ದಂಡು ಬೆನ್ನಿಗಿರುತ್ತಿತ್ತು. ಕುರೈಶ್ ಸರದಾರರೆಲ್ಲರ ನಂಬಿಕೆ, ಪ್ರೀತಿ ಅಭಿಮಾನಗಳನ್ನು ಗೆದ್ದ ಅಬುಲ್ ಆಸರನ್ನು ಸತ್ಯಸಂಧ, ಪ್ರಾಮಾಣಿಕ ಇತ್ಯಾದಿ ವಿಶೇಷಣಗಳಿಂದ ವರ್ಣಿಸುತ್ತಿದ್ದವರೆಲ್ಲ, 'ನೋಡಲು ಅವರು ಬಹಳ ಚಂದ' ಎಂಬ ಪದಗಳನ್ನು ಬಳಸದೆ ಮಾತು ಕೊನೆಗೊಳಿಸುತ್ತಿರಲಿಲ್ಲ. ಅಂತಹಾ ಅವರು, ನನ್ನನ್ನು ಮದುವೆಯಾಗಬಯಸುತ್ತಿದ್ದಾರೆಯೆ?

ನನ್ನ ಮುಖದಲ್ಲಿ ಮದುವೆಗೆ ಮುನ್ನವೇ ಕಾಣಿಸತೊಡಗಿದ್ದ ವಿರಹವೇದನೆಯನ್ನು ನೋಡಿ ನಾಚಿದ ಚಂದಿರ ಮೋಡಗಳ ಹೊದಿಕೆಯೊಳಗೆ ಮರೆಯಾಗಿದ್ದ. 'ಯಾವಾಗ ಉಮ್ಮಾ, ನಮ್ಮ ಮದುವೆ...?' ಎಂದೆಲ್ಲ ನಾನು ಗೋಗರೆದು ಯಾಚಿಸುವ ಮುನ್ನವೇ ನಮ್ಮ ಮದುವೆ ನಡೆದು ಹೋಗಿತ್ತು. ಗಂಡನ ಮನೆಗೆ ಹೊರಟು ನಿಂತ ನನ್ನ ಕೊರಳಿಗೆ ಬಂಗಾರದ ಕಂಠೀಹಾರವೊಂದನ್ನು ತೊಡಿಸಿದ ನನ್ನ ಉಮ್ಮ, 'ನಿನಗೆ ಹುಟ್ಟಲಿರುವ ಮಗನ ಹೆಂಡತಿಯಾಗಿ ಬರುವವಳಿಗೆ ಇದನ್ನು ತೊಡಿಸು' ಎಂದು ಹಾರೈಸಿದ್ದರು.

ನನ್ನಬ್ಬ ಪ್ರವಾದಿಯಾಗಿದ್ದಾರೆ ಎಂದು ಗೊತ್ತಾದಾಗ ಸಂತಸದಿಂದ ಕುಣಿದಾಡಿದ್ದೆ. ನಾನೊಬ್ಬಳು ಪ್ರವಾದಿಪುತ್ರಿಯಾಗಿಬಿಟ್ಟೆ ಎಂದು ಹೆಮ್ಮೆಪಟ್ಟಿದ್ದೆ. ಅಬ್ಬನನ್ನು ಕಂಡು ಅಭಿನಂದಿಸಲೆಂದು ತವರಿಗೆ ಓಡಿದ್ದೆ. ಆ ದಿನಗಳಲ್ಲಿ ನನ್ನ ಗಂಡ ಸಿರಿಯಾ ಪ್ರವಾಸದಲ್ಲಿದ್ದರು. ತವರು ಮನೆಯಲ್ಲಿ ಎಲ್ಲರೂ ಅಂತಿಮಸತ್ಯದ ಮೇಲೆ ವಿಶ್ವಾಸವಿಟ್ಟಿದ್ದರು. ನಾನೂ ಅಲ್ಲಾಹುವಿನಲ್ಲಿ ವಿಶ್ವಾಸವಿರಿಸಿದೆ. ಅಂತಿಮಪ್ರವಾದಿಯ ಮೇಲೆ ವಿಶ್ವಾಸ ವಿರಿಸಿದೆ. ಅಲ್ಲಾಹುವಿನ ಎಲ್ಲ ಪ್ರವಾದಿಗಳ ಮೇಲೂ ವಿಶ್ವಾಸವಿರಿಸಿದೆ. ಅಲ್ಲಾಹುವಿನ ಎಲ್ಲ ದೂತರುಗಳ ಮೇಲೆ ವಿಶ್ವಾಸವಿರಿಸಿದೆ. ಅಲ್ಲಾಹುವಿನ ಗ್ರಂಥದಲ್ಲಿ ವಿಶ್ವಾಸವಿರಿಸಿದೆ.





ಅಂತಿಮ ದಿನದಲ್ಲೂ ವಿಶ್ವಾಸವಿರಿಸಿದೆ. ಒಳಿತು ಕೆಡುಕುಗಳ ನಿರ್ಣಾಯಕನು ಅಲ್ಲಾಹು ಒಬ್ಬನೇ ಎಂಬುದಾಗಿ ಮನಃಪೂರ್ವಕವಾಗಿ ಪ್ರಮಾಣ ಮಾಡಿದೆ.

ಸಿರಿಯಾದಿಂದ ನನ್ನ ಗಂಡ ಬಂದ ಮೊದಲ ದಿನವೇ ಇವೆಲ್ಲವನ್ನೂ ಅವರಿಗೆ ತಿಳಿಸಿದೆ. ಮಂಚದ ಮೇಲೆ ಒರಗಿಕೊಂಡಿದ್ದ ಅವರ ವಿಶಾಲವಾದ ಎದೆಯಮೇಲೆ ಕೈಯಾಡಿಸುತ್ತಾ, ನಮ್ಮ ಮನೆಯಲ್ಲಿ ಎಲ್ಲರೂ ಸತ್ಯವಿಶ್ವಾಸಿಗಳಾಗಿರುವರು ಎಂದು ಹೆಮ್ಮೆಯಿಂದಲೇ ಹೇಳಿ ಸಂಭ್ರಮಿಸಿದೆ. ಆದರೆ, ನನ್ನೆಲ್ಲಾ ಮಾತುಗಳನ್ನು ತಾಳ್ಮೆಯಿಂದಲೇ ಆಲಿಸಿದ ಅಬುಲ್ ಆಸ್ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ತಮ್ಮೆದೆಯ ಮೇಲೆ ನಾನಿರಿಸಿದ್ದ ಕೈಯನ್ನು ಮೃದುವಾಗಿ ಸರಿಸಿ, ಮಂಚದಿಂದ ಎದ್ದು ಏನನ್ನೂ ಹೇಳದೆ ಹೊರಗೆ ಹೋಗಿದ್ದರು. ಅವರ ವರ್ತನೆಯಿಂದ ನನ್ನ ಉತ್ಸಾಹವೆಲ್ಲ ಉಡುಗಿ ಹೋಗಿತ್ತು. ಗಾಬರಿಯಿಂದ ಅವರ ಹಿಂದೆಯೇ ನಾನು ಓಡಿದ್ದೆ. ಅಂಗಳದಲ್ಲಿ ನಿಂತಿದ್ದ ಅವರ ಎರಡೂ ತೋಳು ಜಗ್ಗಿ, ಯಾಕೆ ಮಾತಾಡುವುದಿಲ್ಲ ಎಂದು ಮತ್ತೆ ಮತ್ತೆ ಪ್ರಶ್ನಿಸಿದ್ದೆ.

ನನ್ನ ಎರಡೂ ತೋಳುಗಳನ್ನು ಮೆತ್ತಗೆ ಹಿಡಿದುಕೊಂಡು, ನನ್ನ ಕಣ್ಣೊಳಗೆ ಕಣ್ಣು ತೂರಿಸಿ, 'ನನ್ನಲ್ಲಿ ಒಂದು ಮಾತು ಕೇಳಬಹುದಿತ್ತಲ್ಲವೇ ಝೈನಾ..?' ಎಂದು ಪ್ರಶ್ನಿಸಿದಾಗ ಏನು ಹೇಳಬೇಕೆಂದೇ ತಿಳಿಯದೆ ಕಂಗಾಲಾಗಿದ್ದೆ. ಗಳಗಳನೆ ಅಳತೊಡಗಿದ್ದೆ.

ಅದುವರೆಗೆ ನನ್ನನ್ನು ಆ ರೀತಿ ಪ್ರಶ್ನಿಸಿದವರಲ್ಲ ಅವರು. ನಾನು ಅಳುವುದನ್ನೂ ಕಂಡವರೂ ಅಲ್ಲ.

ನನ್ನನ್ನು ಹಾಗೆಯೇ ಆಲಿಂಗಿಸಿ ಎದೆಗೊರಗಿಸಿಕೊಂಡು ನನ್ನ ಕಿವಿಯೊಳಗೇ ಹೇಳಿದ್ದರು, 'ನಿನ್ನಬ್ಬನ ಮೇಲೆ ನೀನು ವಿಶ್ವಾಸವಿರಿಸಿದ್ದನ್ನು ಬಲುದೊಡ್ಡ ಅಪರಾಧವೆಂದು ನಾನು ಆರೋಪಿಸಲಾರೆ. ಆದರೆ, ನಿನ್ನಂತೆ ನಾನು ಮಾಡಲಾರೆ. ಹೆಂಡತಿಯ ತಾಳಕ್ಕೆ ಕುಣಿದು, ಅವಳ ವಯ್ಯಾರಕ್ಕೆ ಮಣಿದು, ಹೆತ್ತು ಸಾಕಿ ಬೆಳೆಸಿದ ಹಿರಿಯರೆಲ್ಲರ ನಂಬಿಕೆಯನ್ನು ತಿರಸ್ಕರಿಸಿದ ಹೆಣ್ಣುಬುರುಕ ಅಬುಲ್ ಆಸ್ ಬರುತ್ತಿದ್ದಾನೆ ನೋಡು' ಎನ್ನುತ್ತಾ ನನ್ನ ಗೆಳೆಯರೇ ನಡುಬೀದಿಯಲ್ಲಿ ನನ್ನತ್ತ ಬೊಟ್ಟು ತೋರುವುದನ್ನು ಸಹಿಸಿಕೊಳ್ಳಲಾರೆ; ನನ್ನನ್ನು ಕ್ಷಮಿಸು.'

ವಿಷಯ ತಿಳಿದ ನನ್ನಬ್ಬನೂ ಅವರನ್ನು ಒತ್ತಾಯಿಸಲಿಲ್ಲ. ಬಹುದೇವಾರಾಧಕರಾದ ಗಂಡನ ಜೊತೆಗೆ ಏಕದೇವಾರಾಧಕಳಾದ ನಾನು ದಾಂಪತ್ಯ ನಡೆಸುವುದನ್ನು ತಪ್ಪೆಂದೂ ಹೇಳಲಿಲ್ಲ. 'ನಿನ್ನ ಗಂಡ ಏನು ಹೇಳುತ್ತಾನೋ ಹಾಗೆ ಕೇಳು' ಎಂದು ಸುಮ್ಮನಾಗಿದ್ದರು.

ಆದರೆ, ಪ್ರವಾದಿಪುತ್ರಿಯಾಗಿರುವ ನನ್ನನ್ನು ತ್ಯಜಿಸುವಂತೆ ಕುರೈಶರೆಲ್ಲ ನನ್ನ ಗಂಡನ ಮೆಲೆ ಒತ್ತಡ ಹಾಕತೊಡಗಿದ್ದರು. ನನ್ನನ್ನು ತ್ಯಜಿಸಿದರೆ, ನನಗಿಂತಲೂ

ಚೆಲುವೆಯಾದ ಹೆಣ್ಣನ್ನು ಹುಡುಕಿ ತಂದು ಮದುವೆ ಮಾಡಿಕೊಡುತ್ತೇವೆಂದು ಭರವಸೆ ನೀಡುತ್ತಿದ್ದರು. ಪುಸಲಾಯಿಸುತ್ತಿದ್ದರು. ಆದರೆ, ನನ್ನನ್ನು ಅತಿಯಾಗಿ ಪ್ರೀತಿಸುತ್ತಿದ್ದ ಅಬುಲ್ ಆಸ್ ಯಾರ ಮಾತಿಗೂ ಕಿವಿಗೊಡಲಿಲ್ಲ. ಕುರೈಶರ ಒತ್ತಡ ದಿನದಿನಕ್ಕೆ ಹೆಚ್ಚಾಗುತ್ತಲೇ ಇತ್ತು. ಮೊದಮೊದಲು ಗೆಳೆತನದ ಸಲುಗೆಯಿಂದಲೇ ಸಲಹೆ ನೀಡುತ್ತಿದ್ದವರು, ದಿನಕಳೆದಂತೆ ರೊಚ್ಚಿಗೆದ್ದು ಆದೇಶಿಸಲು ಆರಂಭಿಸಿದ್ದರು. ಆದರೂ ನನ್ನ ಗಂಡ ನನ್ನನ್ನು ತ್ಯಜಿಸಲಿಲ್ಲ. ಅವರು ಸತ್ಯವಿಶ್ವಾಸಿಯಾಗದಿದ್ದರೂ, ಕುರೈಶರೆಲ್ಲರ ವಿರೋಧಗಳ ನಡುವೆಯೂ ನನ್ನನ್ನು ಜೊತೆಗುಳಿಸಿಕೊಂಡರು. ಗೆಳೆಯರ ಮನಗೆಲ್ಲುವುದಕ್ಕಾಗಿಯೇ ನನ್ನಬ್ಬನ ಮೇಲೆ ಯುದ್ಧಕ್ಕೆ ಹೊರಟ ಅಬೂಜಾಯಿಲನ ಸೈನ್ಯವನ್ನೂ ಸೇರಿಕೊಂಡರು.

ದೇವ ಮಂದಿರದ ಎದುರು ಸಭೆ ನಡೆಸಿದ್ದವರಾರಿಗೂ, ಯುದ್ಧದಲ್ಲಿ ಹತರಾದವರ ಅಥವಾ ಸೆರೆಯಾಳಾಗಿರುವ ಸೈನಿಕರ ಬಗ್ಗೆ ಸರಿಯಾದ ಮಾಹಿತಿಯಿರಲಿಲ್ಲ. ನಾಯಕ ಅಬೂಸುಫ್ಯಾನರು ಹೇಳಿದಂತೆ, ಸಂಜೆಯಾಗುವವರೆಗೂ ಆ ಮಾಹಿತಿಗಳು ತಿಳಿಯುವಂತೆಯೂ ಇರಲಿಲ್ಲ. 'ನನ್ನ ಗಂಡನನ್ನು ಉಳಿಸಿಕೊಡು ಅಲ್ಲಾಹುವೇ' ಎಂದು ಪ್ರಾರ್ಥಿಸುವುದನ್ನು ಬಿಟ್ಟು ನಾನು ಬೇರೇನೂ ಮಾಡುವಂತಿರಲಿಲ್ಲ. ಸಂಜೆಯಾಗುತ್ತಿದ್ದಂತೆ ಎಲ್ಲವೂ ಬಯಲಾಗಿತ್ತು.

ನನ್ನ ಪ್ರಾರ್ಥನೆಯ ಅರ್ಧದಷ್ಟನ್ನು ಮಾತ್ರ ಅಲ್ಲಾಹು ಕರುಣಿಸಿದ್ದ. ನನ್ನ ಗಂಡ ಬದುಕಿದ್ದರು. ಆದರೆ, ನನ್ನಬ್ಬನ ಸೈನಿಕರ ಸೆರೆಯಾಳಾಗಿದ್ದರು. ಒತ್ತೆಯಾಳಾಗಿರುವ ಅವರನ್ನು ಬಿಡಿಸಿಕೊಂಡು ಬರಲು ನಾಲ್ಕು ಸಾವಿರ ದಿರ್ಹಮ್ ಸಲ್ಲಿಸಬೇಕೆಂದು ಘೋಷಿಸಲಾಗಿತ್ತು. ಅಷ್ಟೊಂದು ದೊಡ್ಡಮೊತ್ತವನ್ನು ನಾನೆಲ್ಲಿಂದ ತರುವುದು?

ಅದಾಗಾಲೇ ಸತ್ಯವಿಶ್ವಾಸಿಯಾಗಿರುವ ನನ್ನ ಬಗ್ಗೆ, ಅದುವರೆಗೂ ಸತ್ಯವಿಶ್ವಾಸಿಯಾಗದಿರುವ ನನ್ನ ಗಂಡನ ಬಂಧುಗಳಿಗೆ ಯಾವುದೇ ಪ್ರೀತಿ ವಿಶ್ವಾಸಗಳು ಉಳಿದಿರಲಿಲ್ಲ. ಇರಬೇಕೆಂದು ನಿರೀಕ್ಷಿಸುವುದೂ ಹುಚ್ಚುತನವಾದೀತು. ನನ್ನನ್ನು ತ್ಯಜಿಸಿ ಬೇರೆ ಹೆಣ್ಣನ್ನು ಕಟ್ಟಿಕೊಳ್ಳಲು, ನನ್ನ ಗಂಡನನ್ನು ಒತ್ತಾಯಿಸಿದವರ ಜೊತೆಗೆ ಮುಂಚೂಣಿಯ ಸಾಲಲ್ಲಿ ನಿಂತಿದ್ದವರೇ ಅವರು. ಗಂಡನ ಮನೆಯವರು ಕೈಬಿಟ್ಟ ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ತವರುಮನೆಯವರು ನೆರವಿಗೆ ಧಾವಿಸಿ ಬರುವುದು ಕ್ರಮ. ಆದರೆ, ಆ ಭಾಗ್ಯವನ್ನೂ ನಾನು ಕಳೆದುಕೊಂಡಿದ್ದೆ. ರಕ್ತಪರಿಹಾರದ ಮೊತ್ತ ಸ್ವೀಕರಿಸಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಿರುವವರೂ ನನ್ನ ತವರು ಮನೆಯವರಲ್ಲವೆ?





ಇದ್ದಕ್ಕಿದ್ದಂತೆ ನೆನಪಾದದ್ದು, ಮನೆಯ ಮಂಚದ ತಳದಲ್ಲಿರುವ ಪೆಟ್ಟಿಯಲ್ಲಿರಿಸಿದ್ದ ಆ ಕಂಠೀಹಾರ! ಆ ಹಾರವೊಂದು ನನ್ನ ಬಳಿ ಇರದಿರುತ್ತಿದ್ದರೆ ನಾಲ್ಕು ಸಾವಿರ ದಿರ್ಹಮ್'ಗಳನ್ನು ನಾನೆಲ್ಲಿಂದ ಹೊಂದಿಸಿಕೊಳ್ಳಲು ಸಾಧ್ಯವಿತ್ತು?

ನನ್ನಬ್ಬನನ್ನು ಅಲ್ಲಾಹು ಪ್ರವಾದಿಯನ್ನಾಗಿ ಆರಿಸದಿರುತ್ತಿದ್ದರೆ ನಾವೆಲ್ಲರೂ ಸುಖವಾಗಿದ್ದಿರಬಹುದಿತ್ತು. ಅಬ್ಬ ಪ್ರವಾದಿಯಾದ ಕಾರಣದಿಂದಲೇ ಗಂಡನ ಮನೆ ಸೇರುವ ಮುನ್ನವೇ ನನ್ನಿಬ್ಬರು ತಂಗಿಯಂದಿರು ವಿಚ್ಛೇದಿತರಾದರು. ಆ ಕಾರಣ ದಿಂದಲೇ ಅವರೆಲ್ಲ ಮಕ್ಕಾದಿಂದ ಬಹಿಷ್ಕೃತರಾದರು. ನನ್ನಬ್ಬನ ವಿರುದ್ಧವೇ ಅಬುಲ್ ಆಸ್ ಯುದ್ಧಕ್ಕೆ ಹೋಗಬೇಕಾಯಿತು. ಇದೀಗ ಸೆರೆಯಲ್ಲಿರುವ ಗಂಡನನ್ನು ಬಿಡಿಸಿ ಕೊಳ್ಳಲು, ನನ್ನ ಉಮ್ಮ ನನಗೆ ತೊಡಿಸಿದ್ದ ಕಂಠೀಹಾರವನ್ನೇ ರಕ್ತಪರಿಹಾರವನ್ನಾಗಿ ಸಲ್ಲಿಸಬೇಕಾಗಿ ಬಂತು.

ಅಬುಲ್ ಆಸರಂತಹ ಗಂಡನನ್ನು ನನಗೆ ಜೊತೆಯಾಗಿಸಿದ ಕರುಣಾಳು ಅಲ್ಲಾಹುವೇ, ಈಗ ಕ್ರೂರಿಯಾಗಿ ನನ್ನನ್ನು ಹಿಂಸಿಸಲಾರಂಭಿಸಿದ್ದ. ಅಲ್ಲಾಹುವಿಗೆ ಹೀಗೆಲ್ಲ ಆಟವಾಡಲು ಮನಸ್ಸಾದರೂ ಹೇಗೆ ಬರುತ್ತದೆ? ಒಂದು ಸಣ್ಣ ಗಾಯವನ್ನೂ ತಡೆದುಕೊಳ್ಳುವ ಶಕ್ತಿಯಿಲ್ಲದ ಹೆಣ್ಣೊಬ್ಬಳ ಮೇಲೆ ಹೊಸ ಹೊಸ ಗಾಯಗಳನ್ನು ಮಾಡುತ್ತಿರುವುದಾದರೂ ಯಾಕೆ? ಆ ಕಂಠೀಹಾರವನ್ನು ಉಮ್ಮ ನನಗೆ ತೊಡಿಸುವಂತೆ ಅವನು ಮಾಡಿದ್ದೇ, ನನ್ನ ಗಂಡನ ರಕ್ತಪರಿಹಾರಕ್ಕೆಂದು ಸಲ್ಲಿಸಲು ಎಂದು ನಾನು ಭಾವಿಸಬೇಕೆ?

ಇನ್ನೂರಕ್ಕೂ ಹೆಚ್ಚು ಮೈಲು ದೂರದಲ್ಲಿ ಒತ್ತೆಸೆರೆಯಾಳಾಗಿರುವ ಗಂಡನನ್ನು ಬಿಡಿಸಿಕೊಂಡು ಬರಬೇಕಾದರೆ, ನನ್ನಬ್ಬನ ಬಳಿಗೆ ಈ ಕಂಠೀಹಾರ ತಲುಪಬೇಕು. ಯಾರ ಮೂಲಕ ತಲುಪಿಸುವುದು? ಚಿಂತಿಸುತ್ತಲೇ ಎರಡು ರಾತ್ರಿ ನಿದ್ರೆಗೆಟ್ಟೆ. ನನಗೆ ಪರಿಚಿತರಾಗಿರುವ ಕುರೈಶರಾರೂ ಈ ಕೆಲಸವನ್ನು ಮಾಡಲಾರರು. ನನ್ನಬ್ಬನನ್ನು ಪರಮ ಶತ್ರುವೆಂದೇ ಪರಿಗಣಿಸುವವರು ಅವರು. ನನ್ನಬ್ಬ ಪ್ರತಿಪಾದಿಸುವ ಅಂತಿಮ ಸತ್ಯದ ಮೇಲೆ ಗುಟ್ಟಾಗಿ ವಿಶ್ವಾಸವಿರಿಸಿದವರು ಊರೊಳಗೆ ಇರಬಹುದಾದರೂ ಅವರನ್ನು ಪತ್ತೆ ಹಚ್ಚುವುದು ಸುಲಭದ ಕೆಲಸವಲ್ಲ. ಪತ್ತೆ ಹಚ್ಚಿದರೂ, ಕುರೈಶರ ಭಯದಿಂದ ಸಹಾಯ ಮಾಡಲು ಹಿಂಜರಿದಾರು. ಮಂಚದ ಮೇಲೆ ಬಿದ್ದುಕೊಂಡು, ಮೂರನೆಯ ರಾತ್ರಿಯೂ ಅಳುತ್ತಲೇ ಹೊರಳಾಡುತ್ತಿದ್ದೆ.

ಮಧ್ಯರಾತ್ರಿ ದಾಟಿದ್ದಿರಬಹುದು.

ಹಿತ್ತಲ ಬಾಗಿಲನ್ನು ಯಾರೋ ಮೆತ್ತಗೆ ಬಡಿಯುತ್ತಿರುವ ಸದ್ದು ಕೇಳಿಸಿದಂತಾಗಿತ್ತು. ನನ್ನ ಭ್ರಮೆಯಿರಬಹುದು ಎಂದುಕೊಂಡು, ಆ ಬಗ್ಗೆ ಗಮನ ಕೊಡದೆ ನನ್ನ ಚಿಂತೆಯೊಳಗೇ ಮುಳುಗಿದ್ದೆ. ಸ್ವಲ್ಪ ಹೊತ್ತಿನಲ್ಲಿ ನನ್ನ ಕೋಣೆಯ ಬಾಗಿಲನ್ನು ಜೋರಾಗಿಯೇ ಬಡಿಯುತ್ತಾ ದಾಸಿ ಒಳಗೆ ಕಾಲಿಟ್ಟಿದ್ದಳು. ನಾನು ಗಾಬರಿಯಿಂದ ಎದ್ದು ಕುಳಿತಿದ್ದೆ.

'ಯಾರೋ ಹಿತ್ತಲಬಾಗಿಲು ಬಡಿಯುತ್ತಿದ್ದಾರೆ. ಹೆದರಬೇಡ ಎನ್ನುತ್ತಿದ್ದಾರೆ. ನನಗೆ ಭಯವಾಗುತ್ತದೆ. ನೀವೇ ಬಂದು ಬಾಗಿಲು ತೆರೆಯಿರಿ.' ಒಂದೇ ಉಸಿರಲ್ಲಿ ಬಡಬಡಿಸಿದ್ದಳು ದಾಸಿ.

ಬಲು ದೂರದ ಅಪರಿಚಿತ ಕತ್ತಲ ಕೋಣೆಯೊಳಗೆ ಬಂಧಿಯಾಗಿರುವ ಗಂಡನ ಭವಿಷ್ಯವನ್ನು ಚಿಂತಿಸುತ್ತಾ ಅನುಭವಿಸುವ ಹಿಂಸೆಗಿಂತ ಹೆಚ್ಚಿನ ನೋವನ್ನು, ಬಾಗಿಲು ಮುರಿದು ನುಗ್ಗುವವನು ಇರಿಯುವ ಯಾವ ಆಯುಧದಿಂದಲೂ ಮಾಡಲು ಸಾಧ್ಯವಿಲ್ಲ. ಬಾಗಿಲು ಬಡಿಯುತ್ತಿರುವವರು ಯಾರೆಂಬುದನ್ನೂ ಚಿಂತಿಸದೆ, ಪಕ್ಕದಲ್ಲೇ ಮಲಗಿ ನಿದ್ರಿಸುತ್ತಿದ್ದ ಇಬ್ಬರು ಮಕ್ಕಳಿಗೆ ಎಚ್ಚರವಾಗದಂತೆ ಹೋಗಿ, ಹಿತ್ತಲ ಬಾಗಿಲು ತೆರೆದೆ.

ಮುಂಡಾಸಿನ ವಸ್ತ್ರದಿಂದ ಮುಖವನ್ನು ಪೂರ್ತಿಯಾಗಿ ಮರೆಮಾಡಿಕೊಂಡ ಒಬ್ಬರು ಕಪ್ಪು ಕತ್ತಲೆಯೊಳಗೆ ಕರಗಿದ್ದವರಂತೆ ಮಸುಕಾಗಿ ಕಾಣಿಸಿದ್ದರು. ನಾನು ನಿರೀಕ್ಷಿಸಿದಂತೆ, ನನ್ನನ್ನು ದಬ್ಬಿಕೊಂಡು ಅವರು ಒಳಗೆ ನುಗ್ಗಲಿಲ್ಲ.

'ನಾನು. ಕನ್ ಆನ್. ನಿನ್ನೊಂದಿಗೆ ಮಾತನಾಡುವುದಿದೆ' ಎಂದರು ಅವರು.

ಒಹ್! ನನ್ನ ಗಂಡನ ಸೋದರ ಕನ್ ಆನ್!

'ಬನ್ನಿ. ಒಳಗೆ ಬನ್ನಿ' ಎನ್ನುತ್ತಾ ಹಿಂದಕ್ಕೆ ಸರಿದೆ. ಗಂಡನ ಕುಟುಂಬದವರೆಲ್ಲರ ಅಸಡ್ಡೆಗೆ ಗುರಿಯಾಗಿದ್ದರೂ, ಇವರೊಬ್ಬರು ಮಾತ್ರ ನನ್ನ ಬಗ್ಗೆ ಪ್ರೀತಿ, ಗೌರವಗಳನ್ನು ಉಳಿಸಿಕೊಂಡಿದ್ದವರು. ಆದರೆ, ಅವೆಲ್ಲವೂ ಬಹಳ ಗುಟ್ಟಿನಲ್ಲಿ ಮಾತ್ರ. ನನ್ನ ಸಲುವಾಗಿ ಕುರೈಶರ ವಿರೋಧಗಳನ್ನು, ನನ್ನ ಗಂಡನಷ್ಟು ಧೈರ್ಯದಿಂದ ಎದುರಿಸುವವರಲ್ಲ ಈ ಕನ್ ಆನ್.

ಮೆಟ್ಟಲೇರಿ ಹೊಸಿಲು ದಾಟಿ ಒಳಗೆ ಬಂದವರು, ಒಂದು ಚೀಲವನ್ನು ಅಲ್ಲೇ ನೆಲದ ಮೇಲಿರಿಸಿ, 'ನನ್ನ ಬಳಿ ಕೆಲವು ನಾಣ್ಯಗಳಿವೆ. ಆದರೆ, ಇವಿಷ್ಟೇ ನಾಣ್ಯಗಳಿಂದಲೇ ರಕ್ತಪರಿಹಾರದ ಎಲ್ಲ ಮೊತ್ತವನ್ನು ಸಲ್ಲಿಸಿದಂತಾಗುವುದಿಲ್ಲ. ಯಾರಾದರೊಬ್ಬ ನಂಬಿಗಸ್ತರೊಂದಿಗೆ ಇವಿಷ್ಟು ನಾಣ್ಯಗಳನ್ನು ಕಳುಹಿಸಿ, ಸೆರೆಯಲ್ಲಿರುವವರು ಪ್ರವಾದಿಯವರ ಮಗಳ ಗಂಡ ಎಂಬುದನ್ನು ಆ ಕಾವಲುಭಟರಿಗೆ ಮನದಟ್ಟು ಮಾಡಿದರೆ, ಕರುಣೆಯಿಂದ ಬಿಟ್ಟು ಕಳುಹಿಸಲೂ ಸಾಕು' ಎಂದರು.

ನಾನು ಏನನ್ನೂ ಹೇಳಲಿಲ್ಲ.

ಸ್ವಲ್ಪ ಹೊತ್ತು ಸುಮ್ಮನಿದ್ದ ಕನ್ ಆನ್, ಹೇಳಲೋ ಬೇಡವೋ ಎಂದು ಅನುಮಾನಿಸಿದವರಂತೆ, 'ಜನರೆಲ್ಲ ಮಾತಾಡಿಕೊಳ್ಳುತ್ತಿದ್ದಾರೆ. ಎಷ್ಟು ನಿಜವೋ, ಎಷ್ಟು ಸುಳ್ಳೋ ಗೊತ್ತಿಲ್ಲ. ಮೊನ್ನೆ ಮೊನ್ನೆಯಷ್ಟೇ ಪ್ರವಾದಿಯನ್ನು ಮದುವೆಯಾಗಿ ಹೊಸ ಮನೆ ಸೇರಿಕೊಂಡಿರುವ ಹೊಸ ಮದುಮಗಳು ಆಯಿಷಾರ ಯಾವುದೇ ಮಾತಿಗೂ





ಪ್ರವಾದಿಯವರು ಇಲ್ಲವೆನ್ನುವುದಿಲ್ಲವಂತೆ. ನಾನು ಕೇಳಿಸಿಕೊಂಡ ಮಾತುಗಳು ನಿಜವೇ ಆಗಿದ್ದರೆ, ನಮಗೆ ಒಳಿತೇ ಆಗಬಹುದು. ಹೊಸ ಪ್ರವಾದಿಪತ್ನಿಯನ್ನು ಯಾರಾದರೂ ಗುಟ್ಟಾಗಿ ಭೇಟಿಯಾಗಿ ವಿನಂತಿಸಿದರೆ ನಮ್ಮ ಕೆಲಸ ಸುಲಭವಾಗಬಹುದು. ಪ್ರಯತ್ನಿಸಿ ನೋಡುವುದರಲ್ಲಿ ಕಳೆದುಕೊಳ್ಳುವುದೇನೂ ಇಲ್ಲ' ಎಂದರು.

'ರಕ್ತಪರಿಹಾರದ ಮೊತ್ತಕ್ಕಾಗಿ ನಾನು ಚಿಂತಿಸುತ್ತಿಲ್ಲ.' ನಾನು ಹೇಳಿದೆ, 'ಆ ಮೊತ್ತವನ್ನು ಭರಿಸುವುದಕ್ಕಿಂತ ತುಸು ಹೆಚ್ಚೇ ಮೌಲ್ಯದ ಬಂಗಾರದ ಕಂಠೀಹಾರವೊಂದು ನನ್ನ ಬಳಿ ಇದೆ. ಆದರೆ, ಅದನ್ನು ಅಲ್ಲಿಗೆ ತಲುಪಿಸಿ ನನ್ನ ಗಂಡನನ್ನು ಬಿಡಿಸಿಕೊಂಡು ಬರುವ ಸಜ್ಜನರಿಗಾಗಿ ಹುಡುಕುತ್ತಿದ್ದೆ. ಒಂದು ವೇಳೆ, ನಿಮ್ಮಿಂದ ಈ ಕೆಲಸ ಸಾಧ್ಯವಾಗುವು ದಾದರೆ...' ಎನ್ನುವಷ್ಟರಲ್ಲಿ ಮುಜುಗರವಾಗಿ ಮೌನವಹಿಸಿದೆ. ಸ್ವಲ್ಪ ಹೊತ್ತು ನಮ್ಮಿಬ್ಬರ ನಡುವೆ ಮೌನವೇ ಮಾತಾಡಿತು.

'ಸರಿ. ನನ್ನ ಅಣ್ಣನನ್ನು ಬಂಧನದಿಂದ ಬಿಡಿಸಿಕೊಳ್ಳುವ ಸಲುವಾಗಿ, ನನ್ನ ಬಂಧುಮಿತ್ರರ ಕುಹಕದ ಮಾತುಗಳನ್ನು ಎದುರಿಸಲು ನಾನು ಸಿದ್ಧ' ಎಂದರು ಅವರು.

ತಡಮಾಡಲಿಲ್ಲ ನಾನು. ಒಳಗೆ ಹೋಗಿ ಮಂಚದ ತಳದಲ್ಲಿದ್ದ ಪೆಟ್ಟಿಗೆಯಿಂದ ಆ ಕಂಠೀಹಾರವನ್ನು ಎತ್ತಿಕೊಂಡು ತಂದು, ಅವರು ತಂದಿದ್ದ ನಾಣ್ಯ ತುಂಬಿದ ಚೀಲದ ಜೊತೆಗೇ ಅವರ ಕೈಯಲ್ಲಿರಿಸಿದೆ. 'ನನ್ನ ಗಂಡನನ್ನು ನನಗೆ ತಂದು ಕೊಡಿ' ಎಂದು ದೈನ್ಯದಿಂದ ವಿನಂತಿಸಿದೆ.

ನಾನು ಬಯಸಿದ್ದನ್ನೇ ಅಲ್ಲಾಹು ಕೂಡಾ ಬಯಸಿರುತ್ತಿದ್ದರೆ, ಎಲ್ಲವೂ ಸುಖಾಂತ್ಯವಾಗಬಹುದಿತ್ತು.

ನನ್ನ ಗಂಡನೇನೋ ನನ್ನ ಬಳಿಗೆ ಬಂದಿದ್ದರು. ಬರುವಾಗ ಬರಿಗೈಯಲ್ಲಿ ಬರಲಿಲ್ಲ; ಬಂಗಾರದ ಕಂಠೀಹಾರವನ್ನೂ ಜೊತೆಯಲ್ಲಿ ತಂದಿದ್ದರು. ಅಲ್ಲಿ ಏನೆಲ್ಲ ನಡೆದಿರಬಹುದೆಂಬುದನ್ನು ಊಹಿಸಿದ ನಾನು, ಅದರ ಬಗ್ಗೆ ವಿಶೇಷವಾಗಿ ಕುತೂಹಲ ವ್ಯಕ್ತಪಡಿಸಲಿಲ್ಲ. ಕಂಠೀಹಾರವನ್ನು ಸ್ವೀಕರಿಸದೆಯೇ ನನ್ನ ಗಂಡನನ್ನು ತಮ್ಮ ಒತ್ತೆಸೆರೆಯಿಂದ ನನ್ನಪ್ಪ ಬಿಟ್ಟು ಕಳುಹಿಸಿದ್ದರು ಎಂಬುದಷ್ಟೇ ನಿಜ.

ಆದರೆ, ಮದೀನಾ ತಲುಪಿದ ಕೂಡಲೇ ನನ್ನನ್ನು ಅವರ ಬಳಿಗೆ ಕಳುಹಿಸಿಕೊಡುವಂತೆ, ನನ್ನ ಗಂಡನಿಗೆ ಕರಾರನ್ನೂ ವಿಧಿಸಿದ್ದರು.

ಒಲ್ಲದ ಮನಸ್ಸಿನಿಂದ ಆ ಕರಾರಿಗೆ ನನ್ನ ಗಂಡ ಸಮ್ಮತಿಸಿದ್ದರು ಕೂಡಾ!

ನಾನು ಅಸಹಾಯಕಳಾಗಿದ್ದೆ. ಕಣ್ಣೀರು ಸುರಿಸುವುದಕ್ಕಿಂತ ಹೆಚ್ಚಿನದೇನನ್ನೂ ಮಾಡುವ ಸ್ಥಿತಿಯಲ್ಲಿ ನಾನಿರಲಿಲ್ಲ. ನನ್ನಪ್ಪನ ಎದುರು ನನ್ನ ಗಂಡ ಒಪ್ಪಿಕೊಂಡ ಕರಾರನ್ನು ಪೂರೈಸುವ ಹೊಣೆ, ಹೆಂಡತಿಯಾದ ನನ್ನ ಮೇಲಿತ್ತು. ನನ್ನನ್ನು ತಮ್ಮ

ಜೀವಕ್ಕಿಂತಲೂ ಹೆಚ್ಚು ಪ್ರೀತಿಸುವ ಗಂಡನನ್ನು ತೊರೆದು, ನನ್ನಿಬ್ಬರು ಮಕ್ಕಳನ್ನು ಕರೆದುಕೊಂಡು ಅಬ್ಬನ ಬಳಿಗೆ ನಾನು ಹೋಗಲೇಬೇಕಾಗಿತ್ತು. ಹೋಗದೆ ಬೇರೆ ದಾರಿಯೇ ಇರಲಿಲ್ಲ.

ಪ್ರೀತಿಯ ಗಂಡನನ್ನು ತೊರೆದು ಹೋಗುವ ನೋವು ಒಂದು ಕಡೆ.

ಬಹಳ ದಿನಗಳಿಂದ ಕಾಣದಿದ್ದ ಪ್ರೀತಿಯ ಅಬ್ಬನ ಕೈಗಳಿಗೆ ಮುತ್ತಿಕ್ಕುವ ಆಸೆ ಮತ್ತೊಂದು ಕಡೆ.

ಯಾವುದು ಹೆಚ್ಚು, ಯಾವುದು ಕಡಿಮೆ ಎಂಬುದನ್ನು ನಾನು ನಿರ್ಧರಿಸದವಳಾಗಿದ್ದೆ.

ಯಾಕೆಂದರೆ ಎಲ್ಲವನ್ನೂ ನಿರ್ಧರಿಸುವವನು ಅಲ್ಲಾಹು ಒಬ್ಬನೇ ಆಗಿದ್ದನಲ್ಲವೆ?

ಅಲ್ಲಾಹುವಿನ ಆಟ ಇಷ್ಟಕ್ಕೇ ಮುಗಿದಿರಲಿಲ್ಲ.

ಪುಟ್ಟ ಮಕ್ಕಳನ್ನು ಕಟ್ಟಿಕೊಂಡು ಗಂಡನ ಸೋದರ ಕನ್‌ಆನ್‌ರ ರಕ್ಷಣೆಯಲ್ಲಿ ಕಣ್ಣೀರಿಡುತ್ತಾ ಮದೀನಾಕ್ಕೆ ಸಾಗುತ್ತಿದ್ದ ನನ್ನನ್ನು, ನನ್ನ ಹತ್ತಿರದ ಬಂಧುವೇ ಆಗಿದ್ದ ಹಬ್ಬಾರ್ ಬಿನ್ ಅಸ್ವದ್ ನಡುದಾರಿಯಲ್ಲಿ ತಡೆದು ನಿಲ್ಲಿಸಿದ್ದ. ಮಕ್ಕಾಕ್ಕೆ ಮರಳುವಂತೆ ಒತ್ತಾಯಿಸಿದ್ದ. ಅವನ ಆದೇಶವನ್ನು ನಿರಾಕರಿಸಿದ ನನ್ನನ್ನು ಖಡ್ಗದಿಂದ ತಿವಿದು ಕುದುರೆಯಿಂದ ನೆಲಕ್ಕೆ ಬೀಳಿಸಿದ್ದ. ಆ ಸಂದರ್ಭದಲ್ಲಿ ಕುರೈಶ್ ನಾಯಕ ಅಲ್ಲಿಗೆ ಬಾರದೇ ಇರುತ್ತಿದ್ದರೆ ನಾನು ಬದುಕಿಯೂ ಉಳಿಯುತ್ತಿರಲಿಲ್ಲ.

ನೋವಿನಿಂದ ಕಂಗಾಲಾಗಿದ್ದ ನನ್ನನ್ನು ಕೊನೆಗೂ ಮದೀನಾ ತಲುಪಿಸಿದ್ದ ಅಲ್ಲಾಹು, ಅಷ್ಟರಲ್ಲಾಗಲೇ ಹೊಟ್ಟೆಯಲ್ಲಿ ಬೆಳೆಯುತ್ತಿದ್ದ ನನ್ನ ಮಗುವನ್ನು ನೀರಾಗಿ ಕರಗಿಸಿ ಕೆಳಗೆ ಜಾರಿಸಿದ್ದ.

* * *

*ನನಗೆ ಎಲ್ಲಿಲ್ಲದ ಸಿಟ್ಟು ಬಂದಿತ್ತು.*

*ಯಾವುದೇ ತಪ್ಪು ಮಾಡಿರದಿದ್ದರೂ, 'ಪ್ರವಾದಿಪುತ್ರಿ'ಯೆಂಬ ಒಂದೇ ಕಾರಣಕ್ಕೆ ಝೈನಬರು ಅದ್ಯಾಕೆ ಅಷ್ಟೆಲ್ಲಾ ಹಿಂಸೆಗಳಿಗೆ ಈಡಾಗಬೇಕು? ಅವರು ಸತ್ಯವಿಶ್ವಾಸಿ ಯಾದದ್ದೇ ಅಪರಾಧವಾಗಿಹೋಯಿತೆ? ಸತ್ಯವಿಶ್ವಾಸಿಯಾಗಿರದ ಗಂಡನ ಜೊತೆಗೆ ಬಾಳುವೆ ನಡೆಸಿದ್ದೂ ತಪ್ಪೆ? ಝೈನಬ್ ಒಬ್ಬರು ಮಾತ್ರವಲ್ಲ, ಅವರ ಇಬ್ಬರು ಕಿರಿಯ ಸೋದರಿಯರೂ ಸತ್ಯವಿಶ್ವಾಸಿಯಾದ ಕಾರಣ ದಿಂದಲ್ಲವೇ ಗಂಡಂದಿರಿಂದ ದೂರವಾದದ್ದು? ಎಲ್ಲವನ್ನೂ ಅಲ್ಲಾಹುವಿನ ಆಟ ಎಂದು ಒಪ್ಪಿಕೊಳ್ಳಬೇಕೆ? ಅವನ ಆಟಕ್ಕೆ ಬಳಕೆಯಾಗುತ್ತಿದ್ದವರೆಲ್ಲ ನಿರಪರಾಧಿ ಹೆಂಗಸರು. ಹೆಂಗಸರೆಂದರೆ ಕೇವಲ ಆಟದ ಬೊಂಬೆಗಳೆ?*





*'ಸತ್ಯವಿಶ್ವಾಸಿಯಲ್ಲದ ಗಂಡನೊಂದಿಗೆ ಸತ್ಯವಿಶ್ವಾಸಿಯಾಗಿರುವ ನೀನು ಬಾಳುವೆ ನಡೆಸುವುದು ನಿಷಿದ್ಧ. ಗಂಡನನ್ನು ಬಿಟ್ಟು ಬಾ' ಎಂದು ಮಗಳಿಗೆ ಎಂದೂ ಆದೇಶ ನೀಡಿದ್ದವರಲ್ಲ ಪ್ರವಾದಿ. ಆದರೆ ಈಗ ಇದ್ದಕ್ಕಿದ್ದಂತೆ ತಮ್ಮ ನಿಲುವು ಬದಲಿಸಲು ಕಾರಣವೇನು? ಅಲ್ಲಾಹುವಿನ ಹೊಸ ಆದೇಶವೆ? ತಾನೇ ಆರಿಸಿದ ಪ್ರವಾದಿಯವರ ಅಳಿಯ ಒತ್ತೆಸೆರೆಯಾಗಿರುವ ಅಸಹಾಯಕ ದಿನಗಳಲ್ಲೇ, ಅಲ್ಲಾಹು ಹೊಸದೊಂದು ಆದೇಶ ಪ್ರಕಟಿಸಿ ಪ್ರವಾದಿಯವರನ್ನೂ ಇಕ್ಕಟ್ಟಿಗೆ ಸಿಲುಕಿಸಿದ್ದಾದರೂ ಯಾಕೆ?*

*'ಆಗಿ ಹೋಗಿರುವ ಘಟನೆಗಳಿಗೆ ಈಗ ಪರಿತಪಿಸಿ ಏನು ಪ್ರಯೋಜನ ಗೆಳೆಯಾ?' ಪ್ರಶ್ನೆಗಳ ಗಂಟಿನಿಂದ ಬಿಡಿಸಿಕೊಳ್ಳಲು ನಾನು ಹೆಣಗಾಡುತ್ತಿರುವಂತೆಯೇ ಗೆಳೆಯನ ಧ್ವನಿ ಕೇಳಿಸಿತ್ತು. 'ಭೂಮಿಯ ಮೇಲಿರುವವರು ಇಂಥ ಪ್ರಶ್ನೆಗಳಿಗೆಲ್ಲ ಬೇರೆಯವರಿಂದ ಉತ್ತರ ಗಳನ್ನು ನಿರೀಕ್ಷಿಸಬಾರದು. ಪ್ರತಿಯೊಬ್ಬರೂ ತಮಗಿಷ್ಟವಾದ ಉತ್ತರಗಳನ್ನು ತಮ್ಮೊಳಗೇ ಕಾಣಲು ಯತ್ನಿಸುತ್ತಿರಬೇಕು. ಉತ್ತರ ಸಿಗದಿದ್ದಾಗ ಎಲ್ಲವೂ ಪೂರ್ವನಿರ್ಧಾರಿತವೆಂದು ನಂಬುತ್ತಾ ಸಮಾಧಾನಪಟ್ಟುಕೊಳ್ಳುತ್ತಿರಬೇಕು ಅಷ್ಟೆ' ಎಂದಿದ್ದ ಅರ್ಷದ್.*

*ಈ ರೀತಿಯ ಪಲಾಯನವಾದಿ ಪ್ರವಚನಗಳನ್ನು ತಲೆ ಚಿಟ್ಟುಹಿಡಿಸುವಷ್ಟು ಕೇಳಿಸಿಕೊಂಡಿದ್ದೆ. ಅವುಗಳಲ್ಲೇ ಸಮಾಧಾನಪಟ್ಟುಕೊಳ್ಳುತ್ತಿರುವವರನ್ನೂ, ಸಾಕಷ್ಟು ಯಾಕೆ, ಅಂಥವರ ಸಂಖ್ಯೆಯೇ ಅಧಿಕವಾಗಿರುವುದನ್ನೂ ಗಮನಿಸಿದ್ದೆ. ಆದರೆ, ಇಲ್ಲಿ ವಿನಾಕಾರಣ ಹಿಂಸೆ ಅನುಭವಿಸುತ್ತಿದ್ದವರೇನು ಸಾಮಾನ್ಯರಲ್ಲ. ಸ್ವತಃ ಪ್ರವಾದಿಯವರು ಮತ್ತು ಪ್ರವಾದಿಪುತ್ರಿಯರು. ಇಡೀ ಲೋಕವೇ ಗೌರವಿಸುವ ಮಹಿಳೆಯರು. ಅಂಥವರೂ ಈ ಶಿಕ್ಷೆ ಯಾಕೆ ಅನುಭವಿಸಬೇಕು?*

*'ಇನ್ನೂ ಇದೆ. ನೋಡುತ್ತಿರು ಗೆಳೆಯಾ.., ನಿನ್ನನ್ನೀಗ ನಿನ್ನ ಬಯಕೆಯಂತೆ ಆಯಿಷಾರ ಮುಂದೆಯೇ ನಿಲ್ಲಿಸಲಿರುವೆ. ಅವರ ಬಾಯಿಂದಲೇ ನಿನ್ನ ಪಶ್ನೆಗಳಿಗೆ ಉತ್ತರ ಕಂಡುಕೊಳ್ಳು' ಎಂದ ಅವನು ನನ್ನನ್ನು ಹೊರಡಿಸಿದ್ದ.*

*'ಏನು!!, ನಾವೀಗ ಆಯಿಷಾರನ್ನು ನೋಡಲು ಹೋಗುತ್ತಿದ್ದೇವೆಯೆ?'*

*'ನೋಡಲಲ್ಲ; ಕಾಣಲು.' ಆತ ನಕ್ಕಿದ್ದಿರಬೇಕು.*

❐

## ಸ್ವಗತ – ಎಂಟು

# ಆಯಿಷಾ ಬಿಂತಿ ಅಬೂಬಕರ್

–೧–

‘ಯಾರೇ ಬರಲಿ, ಯಾರೇ ಹೋಗಲಿ, ಪ್ರವಾದಿಯ ಮೊದಲ ಪ್ರೀತಿ ನಿಮಗೇ ಮೀಸಲು!’

ಬೆನ್ನ ಹಿಂದುಗಡೆ ಯಾರೋ ಪಿಸುಗುಟ್ಟಿದಂತೆ ಕೇಳಿಸಿತ್ತು. ಅಚ್ಚರಿಯಿಂದ ಹಿಂತಿರುಗಿ ನೋಡಿದರೆ ಕಾಣಿಸಿದವರು, ಸವತಿಗಿಂತಲೂ ಹೆಚ್ಚಾಗಿ ನನಗೆ ಹಿರಿಯಕ್ಕನೇ ಆಗಿಬಿಟ್ಟಿದ್ದ ಸೌದಾರವರು.

ಸುಮಾರು ಎರಡು ತಿಂಗಳ ಹಿಂದೆ ನಡೆದ ಘಟನೆ ಇದು.

ದಿನದ ಬಹುಭಾಗವನ್ನು ಅನಾರೋಗ್ಯದ ಕಾರಣದಿಂದ ಮಂಚದ ಮೇಲೆಯೇ ಕಳೆಯುತ್ತಿದ್ದ ಪ್ರವಾದಿಪುತ್ರಿ ರುಖಯ್ಯಾರನ್ನು ನೋಡಿಕೊಂಡು ಮನೆಗೆ ಮರಳುತ್ತಿದ್ದೆ. ನೆತ್ತಿಯ ಮೇಲೆ ಸೂರ್ಯ ಬೆಂಕಿ ಸುರಿಯುವ ನಡು ಮಧ್ಯಾಹ್ನದ ಹೊತ್ತು ಅದು. ಮಸೀದಿಯ ಉತ್ತರಕ್ಕೆ, ನನ್ನ ಮನೆಯಿಂದ ಸ್ವಲ್ಪ ದೂರದಲ್ಲಿ ಕಲ್ಲು, ಮಣ್ಣು, ಈಚಲು ಮರದ ಸೋಗೆಗಳು; ಹೀಗೆ, ಮನೆ ಕಟ್ಟಲು ಅಗತ್ಯವಿರುವ ಸಾಮಾಗ್ರಿಗಳನ್ನೆಲ್ಲ ತಂದು ಸುರಿದದ್ದು ಕಾಣಿಸಿತು. ಅವುಗಳ ಪಕ್ಕದಲ್ಲೇ ಒಬ್ಬಾತ ಮಣ್ಣು ಸೋಸುತ್ತಿದ್ದರೆ, ಮತ್ತೊಬ್ಬ ಸೋಗೆಗಳನ್ನು ಸುಲಿದು ಎಲೆಗಳನ್ನು ಚಾಪೆಯಂತೆ ಹೆಣೆಯುತ್ತಿದ್ದ.

ಯಾರಾದರೂ ಇಲ್ಲಿ, ಅದರಲ್ಲೂ ಮಸೀದಿಗೆ ಇಷ್ಟು ಹತ್ತಿರದಲ್ಲಿ ಮನೆ ಕಟ್ಟುತ್ತಿದ್ದಾರೆಯೇ ಎಂಬ ಅನುಮಾನ ಕಾಡಿತು. ಕುತೂಹಲವನ್ನು ತಡೆದುಕೊಳ್ಳಲಾಗದೆ, ಸೋಗೆಗಳನ್ನು ಜೋಡಿಸುತ್ತಿದ್ದ ವೃದ್ಧನನ್ನು ಪ್ರಶ್ನಿಸಿದ್ದೆ, ‘ಇಲ್ಲೇನು, ಮನೆ ಕಟ್ಟಿಸುತ್ತಿದ್ದಾರೆಯೇ?’ ಉತ್ತರಿಸಲು ಅರೆಕ್ಷಣ ತಡವರಿಸಿದ ಅವನು ಕೈಗಳನ್ನು ಸೊಂಟಕ್ಕೆ ಕಟ್ಟಿಕೊಂಡು ಅದೇನೋ ತಪ್ಪು ಮಾಡಿ ಸಿಕ್ಕಿಹಾಕಿಕೊಂಡನಂತೆ ಅತ್ಯಂತ ವಿನಯದಿಂದಲೇ ಹೇಳಿದ್ದು, ‘ಹೌದು ಉಮ್ಮಾ’.





ನನ್ನ ಮನೆಯು ಮಸೀದಿಗೆ ಒತ್ತಿಕೊಂಡೇ ಇದೆಯೆಂಬುದನ್ನೂ ಮರೆತು, ‘ಯಾರಿಗಾಗಿ ಈ ಮನೆ? ಅದೂ ಮಸೀದಿಗೆ ಇಷ್ಟು ಹತ್ತಿರದಲ್ಲಿ?’ ಎಂದು ಅಸಹನೆಯಿಂದಲೇ ಗೊಣಗಿದ್ದೆ. ನನ್ನ ಪ್ರಶ್ನೆಯಲ್ಲಿ ಬೆರೆತಿದ್ದ ಸಿಟ್ಟನ್ನು ಗುರುತಿಸಿದ ಅವನು ತಲೆ ತಗ್ಗಿಸಿ, ‘ನನಗೆ ತಿಳಿಯದು ಉಮ್ಮಾ’ ಎಂದ. ಅಷ್ಟರಲ್ಲಿ ಮಣ್ಣು ಸೋಸುತ್ತಿದ್ದ ಯುವಕ ಎದ್ದು ನಿಂತು, ‘ಇದು ಹೊಸ ಉಮ್ಮಾರಿಗೆ’ ಎಂದಿದ್ದ.

‘ಹೊಸ ಉಮ್ಮಾರಿಗೆ!’

ಸಿಡಿಲೆರಗಿದಂತಾಗಿತ್ತು! ಅಚ್ಚರಿಯಿಂದ ನನ್ನಿಂದ ಮಾತೇ ಹೊರಡಲಿಲ್ಲ.

ಆ ಹೊತ್ತಿಗೆ ಸರಿಯಾಗಿಯೇ ಸೌದಾರ ಧ್ವನಿ ಕೇಳಿಸಿದ್ದು. ಪುಟ್ಟ ಮಗುವಿನಂತೆ ಅವರತ್ತ ಧಾವಿಸಿ ಅವರನ್ನು ಬಲವಾಗಿ ಅಪ್ಪಿಕೊಂಡು, ‘ನಮ್ಮಿಬ್ಬರ ನಡುವೆ ಈಗ ಮೂರನೆಯವರೊಬ್ಬರೂ ಬರುತ್ತಿದ್ದಾರೆಯೇ ಉಮ್ಮಾ?’ ಎನ್ನುತ್ತಿರುವಂತೆಯೇ ಬಿಕ್ಕಳಿಸತೊಡಗಿದ್ದೆ. ನನ್ನ ಎದೆಬಡಿತ ಸೌದಾರವರ ಗಮನಕ್ಕೂ ಬಂದಿದ್ದಿರಬೇಕು. ನನ್ನ ಹಿಡಿತದಿಂದ ನಿಧಾನವಾಗಿ ಬಿಡಿಸಿಕೊಂಡವರು, ತಮ್ಮ ಬೊಗಸೆಯಲ್ಲಿ ನನ್ನ ಮುಖವನ್ನೆತ್ತಿ ಕಣ್ಣೊಳಗೆ ಕಣ್ಣಿಟ್ಟು, ‘ನಿನಗೆ ಅಫೀರಾ ಏನನ್ನೂ ಹೇಳಿರಲಿಲ್ಲವೇ ಉಮ್ಮಾ?’ ಎಂದು ಪ್ರಶ್ನಿಸಿದ್ದರು. ‘ಪ್ರವಾದಿಪತ್ನಿ’ಯಾಗಿರುವ ನನ್ನನ್ನು ಅವರೂ ಕರೆಯುತ್ತಿದ್ದದ್ದು ‘ಉಮ್ಮಾ’ ಎಂದೇ. ಅದು ನಿಯಮವಂತೆ. ನನಗೆ ಬಹಳ ಮುಜುಗರವಾಗುತ್ತಿತ್ತು.

‘ಅಫೀರಾಳಿಗೆ ಗೊತ್ತಿತ್ತೆ?!’ ನನಗೆ ನಂಬಲೂ ಸಾಧ್ಯವಾಗಲಿಲ್ಲ.

ಅಫೀರಾಳನ್ನು ನಾನೆಂದೂ ದಾಸಿಯಂತೆ ನಡೆಸಿಕೊಂಡವಳಲ್ಲ. ಪ್ರವಾದಿಪತ್ನಿಯಾಗುವ ಮೊದಲೂ, ಆನಂತರದ ದಿನಗಳಲ್ಲೂ ನನ್ನ ಸುಖ ದುಃಖಗಳನ್ನು ಅವಳ ಬಳಿ ಹಂಚಿಕೊಂಡಷ್ಟು ಬೇರೆ ಯಾರ ಬಳಿಯೂ ಹೇಳಿಕೊಂಡವಳಲ್ಲ ನಾನು. ಹಂಚಿಕೊಳ್ಳಲಾದರೂ ಯಾರಿದ್ದರು? ಹಾಗಾದರೆ ಅಫೀರಾಳೇಕೆ ಈ ಮುಖ್ಯವಾದ ವಿಷಯವನ್ನೇ ನನ್ನಿಂದ ಮುಚ್ಚಿಟ್ಟಳು?

ಸೌದಾ ನನ್ನನ್ನು ಸಮಾಧಾನಿಸತೊಡಗಿದ್ದರು, ‘ಈ ಕೆಲಸ ಆರಂಭವಾಗಿ ಎರಡು ದಿನಗಳೇ ಆಗಿವೆ. ಮೊನ್ನೆ ಅಫೀರಾ ವಿಚಾರಿಸಿದ್ದಾಗ ಅದ್ಯಾವುದೋ ಗುಂಗಿನಲ್ಲಿದ್ದ ನಾನು, ‘ಉಮ್ಮರ್ ಪುತ್ರಿ ಹಫ್ಸಾಳಿಗೆ’ ಎಂದುಬಿಟ್ಟೆ. ತಕ್ಷಣ ತಪ್ಪಿನ ಅರಿವಾಗಿ, ದಯವಿಟ್ಟು ಈ ವಿಷಯವನ್ನು ನಿಮಗೆ ತಿಳಿಸಬಾರದು ಎಂದು ಎಚ್ಚರಿಸಬೇಕೆಂದು ಬಾಯಿ ತೆರೆದಿದ್ದೆನಾದರೂ, ನಿಮಗೆ ವಿಷಯ ತಿಳಿಸುವ ಜೊತೆಯಲ್ಲಿ ನನ್ನ ಎಚ್ಚರಿಕೆಯ ಮಾತನ್ನೂ ಅವಳು ಸೇರಿಸಿಕೊಳ್ಳಬಹುದೆಂಬ ಅಳುಕಿನಿಂದ ಸುಮ್ಮನಾಗಿದ್ದೆ.

ಆದರೆ, ಅವಳು ನಿಮಗೆ ಇದುವರೆಗೂ ಹೇಳಲೇ ಇಲ್ಲ ಎಂದಾದರೆ, ಅದಕ್ಕೆ ಅವಳದೇ ಆದ ಬಲವಾದ ಕಾರಣವೂ ಇರಬಹುದು. ಕಾರಣವಿಲ್ಲದೆ ಏನನ್ನೂ ಮಾಡುವವಳಲ್ಲ ನಿನ್ನ ಅಫೀರಾ. ಅದೇನು ಕಾರಣ ಎಂದು ಅವಳೇ ಹೇಳಬೇಕು. ನೀವು ಚಿಂತಿಸಬೇಡಿ ಉಮ್ಮಾ. ಹಪ್ಸಾಳೇ ಇರಲಿ ಅಥವಾ ಇನ್ಯಾವಳೇ ಆಗಿರಲಿ, ಯಾರು ಬಂದರೂ ಪ್ರವಾದಿಯವರು ನಿಮ್ಮ ಮೇಲೆ ಇಟ್ಟಿರುವ ಪ್ರೀತಿಯಲ್ಲಿ ಒಂದು ಮರಳಿನ ಕಣದಷ್ಟೂ ಕಡಿಮೆ ಮಾಡಲಾರರು. ನನ್ನ ಈ ಮಾತು ಯಾವಾಗಲೂ ನಿಮ್ಮ ನೆನಪಿನಲ್ಲಿರಲಿ' ಎಂದರು.

'ಆದರೂ, ಪ್ರವಾದಿಯವರು ನನಗೊಂದು ಮಾತೂ...' ನಾನೇನೋ ಹೇಳಬೇಕೆಂದು ಪ್ರಯತ್ನಿಸುತ್ತಿರುವಂತೆಯೇ, ನನ್ನ ಮಾತು ಕತ್ತರಿಸಿದ ಸೌದಾರವರು, 'ಅದನ್ನು ಹ್ಯಾಗೆ ನಿರೀಕ್ಷಿಸುತ್ತೀರಿ ಉಮ್ಮಾ? ಸುತ್ತ ಮುತ್ತ ನಡೆಯುತ್ತಿರುವುದನ್ನು ಸ್ವಲ್ಪ ಗಮನವಿಟ್ಟು ನೋಡಿರಿ. ಯಾವ ಗಂಡು ತಾನೆ ಹೆಂಡತಿಯ ಅನುಮತಿ ಪಡೆದುಕೊಂಡೇ ಮತ್ತೊಬ್ಬಳನ್ನು ಮನೆಗೆ ಕರೆದುಕೊಂಡು ಬರುತ್ತಾನೆ? ನೀವಿನ್ನೂ ಚಿಕ್ಕವರು. ಗಂಡಸರನ್ನು ಅರ್ಥಮಾಡಿಕೊಳ್ಳಲು ಇನ್ನೂ ಕೆಲವು ವರ್ಷಗಳೇ ಬೇಕಾಗಬಹುದು.' ಎಂದವರು ಮಾತು ಮುಂದುವರಿಸಲಾಗದೆ ತಡವರಿಸಿದ್ದರು. ನಾಲ್ಕೈದು ತಿಂಗಳ ಹಿಂದೆ ಅದ್ಯಾವುದೋ ಮಾತಿನ ನಡುವೆ, 'ಪ್ರವಾದಿಪತ್ನಿ ಪಟ್ಟವನ್ನು ನನ್ನಿಂದ ಕಸಿದುಕೊಳ್ಳಬಯಸದ ಯಾವ ಹೆಣ್ಣನ್ನಾದರೂ ಸವತಿಯಾಗಿ ಸ್ವೀಕರಿಸಲು ನಾನು ಸಿದ್ಧನಿದ್ದೇ' ಎಂದದ್ದು ಮಾತ್ರವಲ್ಲ, ತಮ್ಮ ಸರದಿಗೆ ಬರುವ ರಾತ್ರಿಗಳನ್ನೂ ನನಗೆ ಒಪ್ಪಿಸಿದ್ದ ಉದಾರಿ ಅವರು.

ಹೊಸ ಸವತಿಯಾಗಿ ಬರಲಿರುವ ಈ ಹಪ್ಸಾ ಯಾರೆಂಬುದು ನನಗೆ ಗೊತ್ತಿತ್ತು. ನನ್ನ ಸರದಿ ರಾತ್ರಿಗಳನ್ನೂ ಕಿತ್ತುಕೊಳ್ಳಬಲ್ಲಷ್ಟು ರೂಪಸಿ ಅವರು.

ಪ್ರವಾದಿಯವರ ಪರಮ ಗೆಳೆಯ, ಮಹಾ ಪರಾಕ್ರಮಿ ಸರದಾರ ಉಮ್ಮರ್ ಬಿನ್ ಖತ್ತಾಬರ ಮಗಳು ಈ ಹಪ್ಸಾ. ದೈಹಿಕವಾಗಿಯೂ ಪ್ರಭಾವದಲ್ಲಿಯೂ ಉಮ್ಮರ್ ಬಿನ್ ಖತ್ತಾಬರಷ್ಟು ಎತ್ತರಕ್ಕೆ ಬೆಳೆದು ನಿಂತ ಬೇರೊಬ್ಬ ಗಂಡಸನ್ನು ನಾನು ಕಂಡವಳಲ್ಲ. ನನ್ನಬ್ಬ ಅಬೂಬಕರ್ ಆಗಲಿ, ನನ್ನ ಗಂಡ ಪ್ರವಾದಿಯವರೇ ಆಗಿರಲಿ ಉಮ್ಮರರ ಪಕ್ಕದಲ್ಲಿ ನಿಂತರೆ ಸ್ವಲ್ಪ ಕುಳ್ಳಾಗಿಯೇ ಕಾಣಿಸಬಹುದು. ಪ್ರವಾದಿಯ ಆತ್ಮೀಯ ಗೆಳೆಯರಾಗುವ ಮುನ್ನವೇ ವೈಯಕ್ತಿಕವಾಗಿ ಬಲು ದೊಡ್ಡ ವರ್ಚಸ್ಸು ಹೊಂದಿದ್ದವರು ಅವರು. ಪ್ರವಾದಿಯವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡ ಬಳಿಕವಂತೂ ಉಮ್ಮರ್ ಬಿನ್ ಖತ್ತಾಬರ ಎದುರು ಯಾರೂ ಎದೆಸೆಟೆಸಿ ನಿಂತು ಮಾತಾಡುತ್ತಿರಲಿಲ್ಲ. ಉಮ್ಮರರು ಕಾಣಲು ಅದೆಷ್ಟು ಬಿಗುವಾಗಿದ್ದರೋ, ಅವರ ವರ್ತನೆಗಳೆಲ್ಲವೂ ಅದಕ್ಕೆ ತದ್ವಿರುದ್ಧವಂತೆ. ನ್ಯಾಯ ತೀರ್ಮಾನಗಳ ಸಂದರ್ಭಗಳಲ್ಲಿ ಅವರನ್ನು ಮಹಿಳಾ ಪಕ್ಷಪಾತಿಯೆಂದು ಆರೋಪಿಸುವವರೂ ಇದ್ದರು.





ಹಪ್ಸಾರಿಗೆ ಹುಝೈಫಾರ ಪುತ್ರ ಖುನೈಸ್ ರೊಂದಿಗೆ ಮದುವೆಯಾಗಿತ್ತು. ಈಗವರು ವಿಧವೆ. ಏನಿಲ್ಲವೆಂದರೂ ನನಗಿಂತ ಏಳೆಂಟು ವರ್ಷಕ್ಕೆ ದೊಡ್ಡವರು. ಅವರು ಹೇಗಿದ್ದಾರೆ ಎಂಬುದನ್ನು ಹಲವು ಬಾರಿ ಬಲು ಹತ್ತಿರದಿಂದಲೇ ಕಂಡಿದ್ದೆ. ನಾನು ಪ್ರವಾದಿಪತ್ನಿಯೆನ್ನಿಸಿಕೊಳ್ಳುವ ಹಿಂದಿನ ದಿನಗಳಲ್ಲಿ ಹಪ್ಸಾ ನನ್ನತ್ತ ಕಡೆಗಣ್ಣು ಹಾಯಿಸಿದವರೂ ಅಲ್ಲ. ಜೊತೆಯಲ್ಲಿ ನಿಂತರೆ ನಾನವರ ಎದೆಯೆತ್ತರಕ್ಕೂ ಇಲ್ಲ. ನನಗೆ ಹೊಸ ಸವತಿಯಾಗಿ ಬರುವವರ ಅಗಲವಾದ ಭುಜ, ನೀಳ ತೋಳುಗಳು, ಚೂಪು ಕಣ್ಣುಗಳು, ಉದ್ದನೆಯ ಕಾಲುಗಳು, ಬಂಗಾರದ ಬಣ್ಣ ಎಲ್ಲವನ್ನೂ ನೆನಪಿಸಿಕೊಂಡು ನಾನು ನೆಲಕ್ಕಿಳಿದುಹೋಗಿದ್ದೆ. ಆದರೂ ಒಂದು ಸಣ್ಣ ಆಸೆ. ಕನ್ಯೆಯಾಗಿದ್ದುಕೊಂಡು ಪ್ರವಾದಿಪತ್ನಿಯಾಗಿ ಬಂದವಳು ನಾನು. ಅದಾಗಲೇ ಮದುವೆಯಾಗಿ ಗಂಡನನ್ನು ಕಳೆದುಕೊಂಡು ವಿಧವೆಯಾಗಿ ಬರಲಿರುವವರ ಯಾವ ಆಟವೂ ನನ್ನೆದುರು ನಡೆಯಲಾರದೇನೋ ಎಂಬ ಸಣ್ಣ ಆಸೆ ಅದು.

ಮನೆಗೆ ಬಂದಾಗ ಅಫೀರಾ ಅಡುಗೆ ತಯಾರಿಯಲ್ಲಿರುವುದು ಕಾಣಿಸಿತು. ನಾನು ಒಳಗೆ ಬಂದುದನ್ನು ಗಮನಿಸಿಯೂ ಗಮನಿಸದವಳಂತೆ ತನ್ನ ಕೆಲಸದಲ್ಲಿ ಮುಳುಗಿದ್ದಳು. ನನಗೆ ಅವಮಾನವಾದಂತಾಗಿತ್ತು. ಸುಮ್ಮನಿರಲು ಸಾಧ್ಯವೇ ಆಗಲಿಲ್ಲ.

'ದಾರಿಯಲ್ಲಿ ಬರುವಾಗ ಹೊಸ ಮನೆಯೊಂದನ್ನು ಕಟ್ಟುತ್ತಿರುವುದನ್ನು ನೋಡಿದೆ ಅಫೀರಾ. ಯಾರದ್ದೆಂದು ಗೊತ್ತಾಗಲಿಲ್ಲ. ನಿನಗೇನಾದರೂ ಗೊತ್ತೆ?' ಎಂದು ಪ್ರಶ್ನಿಸಿದ್ದೆ.

'ನಿಮಗೆ ಸೌದಾರವರು ಇನ್ನೂ ಹೇಳಲಿಲ್ಲವೆ?' ಆದೇನೂ ದೊಡ್ಡ ವಿಷಯವೇ ಅಲ್ಲವೆಂಬಂತೆ ಸಹಜವಾದ ಧ್ವನಿಯಲ್ಲೇ ಅಫೀರಾ ಪ್ರತಿಕ್ರಿಯಿಸಿದ್ದಳು. ಅವಳ ಉತ್ತರ ನನ್ನ ಬಾಯಿ ಕಟ್ಟಿ ಹಾಕಿತ್ತು. 'ಸೌದಾರವರು ನಿನ್ನ ಬಳಿ ಹೇಳಿದ್ದನ್ನು ನನಗೇಕೆ ತಿಳಿಸಲಿಲ್ಲ' ಎಂದು ನಾನು ಆಕ್ಷೇಪಿಸಬಾರದು ಎನ್ನುವ ಸೂಚನೆಯೂ ಇತ್ತು ಅವಳ ಮಾತಿನಲ್ಲಿ.

'ಆದರೂ ನೀನು ಮಾಡಿದ್ದು ಸರಿಯೇ ಅಫೀರಾ?' ಅಸಹನೆಯಿಂದಲೇ ಪ್ರಶ್ನಿಸಿದ್ದೆ.

'ನಾನೇನು ತಪ್ಪು ಮಾಡಿದೆ ಪುಟ್ಟ ಒಡತಿ?' ಜಗಳಕ್ಕೇ ಸಿದ್ಧವಾದವಳಂತೆ ನನ್ನತ್ತ ಮುಖ ಮಾಡಿ, ಸೊಂಟದ ಮೇಲೆ ಎಡಗೈಯಿಟ್ಟು ನಿಂತಳು ಅಫೀರಾ. ಹೌದಲ್ಲ! ಅವಳೇನು ಮಾಡಿದ್ದಾಳೆ? ಯಾವ ತಪ್ಪು ಮಾಡಿದ್ದಾಳೆ? ತಪ್ಪು ಮಾಡಲು ಹೊರಟವರು ನನ್ನ ಗಂಡ. ಅದ್ಯಾವ ಸಂತಸದ ಸಂಗತಿಯೆಂದು ನನಗಿವಳು ತಿಳಿಸಬೇಕಾಗಿತ್ತು? ಮುಂದಾಗಿಯೇ ತಿಳಿಸಿರುತ್ತಿದ್ದರೆ, ಅದನ್ನು ತಪ್ಪಿಸಲು ನನ್ನಿಂದ ಏನಾದರೂ ಮಾಡಲು ಸಾಧ್ಯವಿತ್ತೆ? ಇಲ್ಲ.

'ನನ್ನ ಗಂಡ ಮಾಡಿದ್ದು ಸರಿಯೆಂದು ಕಾಣಿಸುತ್ತದಾ ಅಫೀರಾ?' ನನ್ನ ಪ್ರಶ್ನೆಯಲ್ಲಿ ಆರೋಪಕ್ಕಿಂತಲೂ ಅಳುವೇ ಹೆಚ್ಚಿದ್ದುದನ್ನು ಅವಳು ಗಮನಿಸಿದಂತಿತ್ತು. ಕೈಯಲ್ಲಿದ್ದ ಪಾತ್ರೆಯನ್ನು ಅಲ್ಲೇ ನೆಲದ ಮೇಲಿರಿಸಿ ನನ್ನ ಬಳಿಗೆ ಬಂದಳು. ಬಾಗಿಲ ಹೊರಗೆ ಕಣ್ಣು

ಹಾಯಿಸಿದವಳು, 'ನಾನೊಂದು ಮಾತು ಹೇಳಿದರೆ ಸಿಟ್ಟಿಗೇಳುತ್ತೀರಾ ನನ್ನ ಮುದ್ದು ಒಡತಿ?' ಎಂದು ಪ್ರಶ್ನಿಸಿದ್ದಳು.

'ನೀನು ಈಗ ಮಾತನಾಡದೆ ಸುಮ್ಮನಿದ್ದರೆ ಸಿಟ್ಟು ಬರುತ್ತದೆ ಅಫೀರಾ. ನಿನಗೆ ಸೌದಾರವರು ಹೇಳಿದ್ದನ್ನು ನನಗೇಕೆ ತಿಳಿಸಲಿಲ್ಲ?' ಎಂದು ಪ್ರಶ್ನಿಸಿದೆ.

ನಾನು ಸಿಟ್ಟಿಗೇಳಬೇಕಾಗಿದ್ದ ಸಂದರ್ಭದಲ್ಲಿ ಅವಳೇ ಸಿಟ್ಟು ಮಾಡಿಕೊಂಡಂತಿತ್ತು.

'ನಿಮ್ಮ ಈ ಪ್ರಶ್ನೆಗೆ ಮೊದಲು ಉತ್ತರಿಸಲಾ ಅಥವಾ ನಾನು ನಿಮಗೆ ಹೇಳಬೇಕೆಂದುಕೊಂಡಿರುವುದನ್ನು ಮೊದಲು ಹೇಳಲಾ?'

ನಾನು ಏನನ್ನೂ ಹೇಳಲಿಲ್ಲ. ತುಟಿಬಿಗಿದು ಮೌನವಹಿಸಿದೆ.

ಅವಳೇ ಸಮಾಧಾನ ಮಾಡುವವಳಂತೆ, 'ನಿಮಗೂ ಗೊತ್ತಿದೆ ನನ್ನ ಮುದ್ದು ಒಡತಿ. ಮದುವೆಯಾಗಿ ನಾಲ್ಕು ವರ್ಷ ತುಂಬುವ ಮೊದಲೇ ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ ಗಂಡನನ್ನು ಕಳೆದುಕೊಂಡವಳು ನಾನು. ನಾನು ಮನಸ್ಸು ಮಾಡಿರುತ್ತಿದ್ದರೆ, ನಾನಂದೇ ಮತ್ತೊಬ್ಬನ ಹೆಂಡತಿಯಾಗಿರಬಹುದಾಗಿತ್ತು. ಆ ಅವಕಾಶ ಇಂದೂ ನನ್ನೆದುರು ತೆರೆದೇ ಇದೆ. ಹೊಸ ಗಂಡನೊಂದಿಗೆ ಸುಖವಾಗಿರುತ್ತಿದ್ದೆನೋ ಇಲ್ಲವೋ ಎಂಬುದು ಆನಂತರದ ಮಾತು. ಅವನು ಇಷ್ಟವಾಗಲಿಲ್ಲವೆಂದರೆ ಅವನನ್ನು ಬಿಟ್ಟು ಮತ್ತೊಬ್ಬನನ್ನು ಕಟ್ಟಿಕೊಂಡು ಎಲ್ಲಾದರೂ ದೂರ ಓಡಿಹೋಗಲೂ ನನಗೆ ಸ್ವಾತಂತ್ರ್ಯವಿದೆ.

'ಆದರೆ, ವಿಳಾಸವೇ ಇಲ್ಲದ ನನ್ನಂತ ಹೆಣ್ಣಿಗೆ ಇರುವ ಸ್ವಾತಂತ್ರ್ಯ ನಿಮಗಿಲ್ಲ ಒಡತಿ. ನಿಮ್ಮಿಂದ ಹಾಗೆ ಮಾಡಲಾಗುವುದಿಲ್ಲ. ಮಾಡುವುದು ಹೋಗಲಿ. ಆ ರೀತಿಯಲ್ಲಿ ಯೋಚಿಸುವುದೂ ಅಪರಾಧವಾದೀತು. ನೀವೀಗ ಸಾಮಾನ್ಯ ಹೆಣ್ಣಲ್ಲ. ನೀವೀಗ ಪ್ರವಾದಿಪತ್ನಿಯೆಂಬ ಎತ್ತರದ ಗೋಪುರದ ಮೇಲೇರಿ ಕುಳಿತಿದ್ದೀರಾ. ಎಲ್ಲರಿಂದಲೂ ಉಮ್ಮಾ ಎಂದು ಕರೆಸಿಕೊಳ್ಳುತ್ತಿದ್ದೀರಾ. ಹಾಗೆ ಕರೆಸಿಕೊಳ್ಳುವುದರಲ್ಲಿ ಒಂದು ಬಗೆಯ ಸಂತೋಷವನ್ನು ಅನುಭವಿಸುತ್ತಿದ್ದೀರಾ. ನೋಡಿ ಒಡತಿ. ಎತ್ತರದ ಜಾಗದಲ್ಲಿರುವವರು ಕೆಳಗೆ ಜಾರಿಬೀಳದಂತೆ ಪ್ರತಿಯೊಂದು ಕ್ಷಣದಲ್ಲೂ ಎಚ್ಚರದಿಂದಿರಲೇಬೇಕು,

'ನೀವೇಕೆ ನನ್ನಂತೆ ಯೋಚಿಸಬಾರದು? ಈಗ ನೋಡಿ, ಪ್ರವಾದಿಯವರು ನಿಮಗೆ ಮತ್ತೊಬ್ಬಳು ಸವತಿಯನ್ನು ತರಲಿದ್ದಾರೆ ನಿಜ. ಅದರಿಂದ ನೀವು ಬೇಸರಗೊಳ್ಳುವುದೂ ಸಹಜವೇ. ಆದರೆ, ಹಫ್ಸಾರನ್ನು ಅವರು ಮದುವೆಯಾಗುತ್ತಿರುವುದು ಅವರ ದೇಹದ ಮೇಲಿನ ಆಸೆಯಿಂದಲ್ಲ, ಅವರಬ್ಬ ಉಮ್ಮರ್ ಬಿನ್ ಖತ್ತಾಬರಂತಹ ಮಹಾ ಶಕ್ತಿಶಾಲಿ ಪರಾಕ್ರಮಿಯೊಬ್ಬರು ತಮಗೆ ಮಾವನಾಗಿ ಬಂದರೆ, ಅವರ ನೇತೃತ್ವದಲ್ಲಿ ಸತ್ಯವಿಶ್ವಾಸಿಗಳನ್ನು ರಕ್ಷಿಸಲು ಸುಲಭವಾಗಬಹುದು ಎಂಬ ಕಾರಣಕ್ಕಿರಬಾರದೇಕೆ? ಅಲ್ಲಾಹು ನಿಮಗೆ ಪ್ರವಾದಿಪತ್ನಿ ಪಟ್ಟವನ್ನು ಕರುಣಿಸಿರುವುದು





ನಿಮ್ಮ ಚಂದದ ಮುಖಕ್ಕಾಗಲೀ ಅಥವಾ ನಿಮ್ಮ ಸುಂದರ ದೇಹಕ್ಕಾಗಲೀ ಅಲ್ಲ; ನಿಮ್ಮ ನಿಷ್ಕಲ್ಮಶ ಹೃದಯಕ್ಕೆ ಮಾತ್ರ ಎಂದುಕೊಂಡು ನಿಮಗೆ ನೀವೇ ಸಮಾಧಾನ ಮಾಡಿಕೊಳ್ಳುವುದು ಜಾಣತನವಲ್ಲವೇ ನನ್ನ ಒಡತಿ?'

ನಾನು ದಿಗ್ಭ್ರಮೆಯಿಂದ ಅಫೀರಾಳನ್ನು ನೋಡುತ್ತಾ ಕುಳಿತುಬಿಟ್ಟಿದ್ದೆ.

ಅವಳು ನನ್ನಂತೆ ಓದಿದವಳಲ್ಲ. ಅಕ್ಷರಗಳ ಜ್ಞಾನ ಅವಳಿಗಿಲ್ಲ. ಉಪದೇಶ ನೀಡುವಂತಹ ಯಾವುದೇ ಗ್ರಂಥ ಓದಿದವಳಲ್ಲ. ನನ್ನಬ್ಬನ ಮನೆಯಲ್ಲಿ ಕುದುರೆ ಪಾಲಕನಾಗಿರುವ ಮುಅತ್ತಲನ ಮಗಳು. ಹಾಗಾದರೆ, ಇವಿಷ್ಟು ಮಾತುಗಳನ್ನು ಅವಳೆಲ್ಲಿಂದ ಕಲಿತಳು? ಮಕ್ಕಾದ ನಾಟ್ಯಾಲಯದ ಹಾಡುಗಾರನೊಬ್ಬನ ಜೊತೆಗೆ ನಾಲ್ಕು ವರ್ಷ ಇದ್ದಳೆಂಬ ಕಾರಣಕ್ಕೆ ಇಷ್ಟೊಂದು ಮಾತುಗಳನ್ನು ಕಲಿಯಲು ಸಾಧ್ಯವೆ? ನನಗೆ ನಂಬಿಕೆಯಾಗಲಿಲ್ಲ. ಅವಳ ಯಾವುದೇ ಮಾತನ್ನು ಸುಲಭವಾಗಿ ತಳ್ಳಿಹಾಕಲೂ ಸಾಧ್ಯವಾಗುವುದಿಲ್ಲ. ಅಫೀರಾ ಹೇಳುವಂತೆ, ಸತ್ಯವಿಶ್ವಾಸಿಗಳನ್ನು ರಕ್ಷಿಸುವ ಸಲುವಾಗಿ, ಉಮ್ಮರರಂತಹ ಸಾಹಸಿಯೊಬ್ಬರ ಸಹಾಯವನ್ನು ಪಡೆಯುವ ತಂತ್ರದ ಭಾಗವಾಗಿ ಪ್ರವಾದಿಯವರು ಈ ಮದುವೆ ಮಾಡಿಕೊಳ್ಳುತ್ತಿದ್ದಾರೆಂದು ನಾನೂ ಯಾಕೆ ನಂಬಬಾರದು?

ಅಫೀರಾಳತ್ತ ಕೃತಜ್ಞತೆಯಿಂದ ನೋಡಿದೆ. ಅವಳು ಸಣ್ಣದಾಗಿ ನಕ್ಕಳು. ನಾನು ನಗಲಿಲ್ಲ.

'ಪ್ರವಾದಿಯವರು ಹಫ್ಸಾರನ್ನು ಮದುವೆಯಾಗುತ್ತಿರುವ ವಿಷಯ ಐದಾರು ದಿನಗಳ ಹಿಂದೆಯೇ ಗೊತ್ತಿತ್ತು ಒಡತಿ.' ಅವಳೀಗ ನನ್ನ ಮೂಲ ಪ್ರಶ್ನೆಗೆ ಉತ್ತರಿಸಲಾರಂಭಿಸಿದ್ದಳು. 'ಸೌದಾರವರು ತಿಳಿಸಿದ್ದ ಬೇಸರದ ಸಂಗತಿಯನ್ನು ಓಡಿ ಬಂದು ನಿಮ್ಮ ಕಿವಿಗೆ ಊದಬಹುದಿತ್ತು. ಅದರಿಂದೇನು ಲಾಭ? ನಿಮ್ಮಿಂದೇನು ಮಾಡಲು ಸಾಧ್ಯವಿತ್ತು? ಸಿಟ್ಟಿನ ಭರದಲ್ಲಿ ಬಹಳವೆಂದರೆ ಪ್ರವಾದಿಯವರನ್ನು ನೇರವಾಗಿ ಪ್ರಶ್ನಿಸಿ ಜಗಳಾಡುತ್ತಿದ್ದಿರಿ. ನಿಮ್ಮನ್ನು ಸಮಾಧಾನಿಸಲು ಅವರು ಏನಾದರೊಂದು ಉತ್ತರವನ್ನು ಹೇಳಲೇ ಬೇಕಾದ ಅನಿರ್ವಾಯತೆಯನ್ನು ಸೃಷ್ಟಿಸುತ್ತಿದ್ದಿರಿ. ನಿಮಗೇ ಗೊತ್ತಿದೆ; ಪ್ರವಾದಿಯವರ ಬಾಯಿಂದ ಸುಳ್ಳು ಬರುವುದಿಲ್ಲ. ನಿಜವನ್ನೇ ಹೇಳಬೇಕಾಗುತ್ತದೆ. ಆಗ ಅವರು, 'ತಮಗೆ ಹಫ್ಸಾರ ಬಗ್ಗೆ ನಿಜವಾಗಿಯೂ ಪ್ರೀತಿಯಿಲ್ಲವೆಂದೂ ಅಂತಿಮಸತ್ಯದ ಪ್ರಸಾರಕ್ಕಾಗಿ ಅವಳಬ್ಬ ಉಮ್ಮರರಂತಹ ಒಬ್ಬ ವೀರಾಧಿವೀರನ ಸಹಾಯ ಬೇಕಾಗಿತ್ತೆಂದೂ, ಅದಕ್ಕಾಗಿ ಮದುವೆಯಾಗುತ್ತಿರುವೆನೆಂದೂ ಹೇಳಬೇಕಾಗುತ್ತದೆ. ಅವರು ಹಾಗೆ ಹೇಳಿದರೆಂಬ ಕಾರಣಕ್ಕೆ ಸಿಟ್ಟಿನ ಬೆಟ್ಟದ ತುತ್ತ ತುದಿಯಲ್ಲಿ ಕುಳಿತು ಚಡಪಡಿಸುತ್ತಿರುವ ನಿಮಗೆ ಸಂಪೂರ್ಣ

ಸಮಾಧಾನವಾದರೂ ಆಗುತ್ತಿತ್ತೆ? ಅದೂ ಇಲ್ಲ. ಆದರೆ, ಮುಂದೊಂದು ದಿನ ಈ ಗುಟ್ಟಿನ ಮಾತು ಹೊರಗೆಲ್ಲಾದರೂ ನುಸುಳಿ ಉಮ್ಮರ್ ಬಿನ್ ಖತ್ತಾಬರ ಕಿವಿಗೆ ಬಿದ್ದರೆ, ಪ್ರವಾದಿಯವರ ಮಾನ ಉಳಿದೀತೆ?

'ಹೀಗೂ ಅರೆಕ್ಷಣ ಯೋಚಿಸಿ ಒಡತಿ. ಹಪ್ಸಾರ ಜಾಗದಲ್ಲಿ ನಿಮ್ಮನ್ನು ಇರಿಸಿಕೊಂಡು ಯೋಚಿಸಿರಿ. ತನ್ನ ಬಗ್ಗೆ ಯಾವುದೇ ಪ್ರೀತಿಯಿಲ್ಲದ ಗಂಡೊಬ್ಬ ಕೇವಲ ತನ್ನ ಧಾರ್ಮಿಕ ಸಾಧನೆಗಳಿಗಾಗಿ ಮದುವೆಯಾಗುತ್ತಿದ್ದಾನೆ ಎಂಬುದು ಗೊತ್ತಾದಾಗ ನಿಮಗೆ ಹೇಗನ್ನಿಸುತ್ತಿತ್ತು? ತನ್ನನ್ನು ಇಷ್ಟಪಡದ ಗಂಡನ ಜೊತೆಗೆ ಹಾಸಿಗೆ ಹಂಚಿಕೊಳ್ಳುವುದರಲ್ಲಿ ಯಾವ ಹೆಣ್ಣು ಸುಖ ಕಾಣುತ್ತಾಳೆ? ಹಪ್ಸಾರಿಗೆ ಈ ಸತ್ಯ ಗೊತ್ತಾದಾಗ ಅವರು ಅದನ್ನು ಯಾವ ರೀತಿಯಲ್ಲಿ ಸ್ವೀಕರಿಸಬಹುದು? ಹಪ್ಸಾರನ್ನು ಪ್ರೀತಿಯಿಂದಲೇ ಸ್ವಾಗತಿಸುವುದರಲ್ಲಿಯೇ ನೀವು ಸಮಾಧಾನ ಕಂಡುಕೊಳ್ಳುವುದು ಒಳ್ಳೆಯದಲ್ಲವೇ ನನ್ನ ಜಾಣ ಒಡತಿ?'

–೨–

ಬದರ್ ಯುದ್ಧದಲ್ಲಿ ಗಾಯಗೊಂಡು ಪ್ರವಾದಿಯವರ ತೊಡೆಯ ಮೇಲೆಯೇ ತಲೆಯಿಟ್ಟು ಮರಣಿಸಿದ ಉಬೈದಾ ಎಂಬ ಸಮರವೀರನ ವಿಧವೆ, ಮೂರು ಮಕ್ಕಳ ತಾಯಿ ಝೈನಬರನ್ನು ಪ್ರವಾದಿಯವರು ಮದುವೆಯಾಗಿ ಕರೆದುಕೊಂಡು ಬಂದಾಗಲೂ ಅಫೀರಾ ಹೇಳಿದ್ದ ಮಾತುಗಳು ನೆನಪಾಗಿದ್ದವು. ಹೊಸ ಪ್ರವಾದಿಪತ್ನಿಯನ್ನು ನಗುತ್ತಲೇ ಸ್ವಾಗತಿಸಿದ್ದೆ.

ಮೂರು ಮಕ್ಕಳ ತಾಯಿಯಾದರೂ ಇನ್ನೂ ಹೊಸ ಮದುವಣಗಿತ್ತಿಯಂತೆ ಕಾಣಿಸುತಿದ್ದ ಝೈನಬರು, ಮೈಕೈ ತುಂಬಿಕೊಂಡಿರುವ ಹೆಣ್ಣು. ಆಕೆಯಿಂದಾಗಿ ನನ್ನ ಸರದಿ ರಾತ್ರಿಗಳು ಮತ್ತೊಂದು ದಿನಕ್ಕೆ ಮುಂದೂಡಲ್ಪಟ್ಟಿದ್ದವು. ಅಫೀರಾ ಎಚ್ಚರಿಸಿದಂತೆ, ನಾನು ಮೌನದ ಮೊರೆಹೋಗಿದ್ದೆ. ಈ ಹೊಸ ಪ್ರವಾದಿಪತ್ನಿ ಝೈನಬರು ನನಗೆ ತೀರಾ ಅಪರಿಚಿತರೇನೂ ಅಲ್ಲ. ಮಕ್ಕಾವನ್ನು ತೊರೆದು ನಾವೆಲ್ಲ ಮದೀನಾ ತಲುಪಿದ ಮೊದಲ ದಿನದಿಂದಲೂ ಪ್ರವಾದಿಪುತ್ರಿ ಫಾತಿಮಾಳನ್ನು ಮಗಳಂತೆ ಲಾಲಿಸುತ್ತಿದ್ದ ಮಾತೃ ಹೃದಯಿ. ಕಷ್ಟದಲ್ಲಿರುವವರಿಗೆ ಸದಾ ಸಹಾಯ ಮಾಡುತ್ತಿದ್ದ ಉದಾರಿ. ಆದ್ದರಿಂದಲೇ ಪ್ರವಾದಿಯವರಿಗೂ ಅವರೆಂದರೆ ಹಿಂದಿನಿಂದಲೂ ಒಂದು ಬಗೆಯ ಪ್ರೀತಿ; ಅನುಕಂಪ. ಪ್ರವಾದಿಯವರು ಅವರನ್ನು ಸಂಬೋಧಿಸುತ್ತಿದ್ದದ್ದೇ, ಬಡವರ ಉಮ್ಮಾ ಎಂದು.

ಎರಡು ದಿನಗಳ ಬಳಿಕ ಅಫೀರಾ ಮತ್ತೊಂದು ಗುಟ್ಟಿನ ಮಾತು ಹೇಳಿದ್ದಳು. ಝೈನಬರು ನನಗೆ ಸವತಿಯಾಗಿ ಬರಲು ಬಲು ಮುಖ್ಯ ಕಾರಣ ಅಲೀಯವರಂತೆ.





ಪ್ರವಾದಿಯವರಿಗೆ ಝೈನಬರನ್ನು ಜೊತೆಯಾಗಿಸಲು ಝೈನಬ್ ಬಡವರ ಬಂಧು ಆಗಿದ್ದುದಾಗಲೀ, ಮದುವೆಗೆ ಮೊದಲು ತನ್ನ ಹೆಂಡತಿ ಫಾತಿಮಾಳ ಬೇಕು ಬೇಡ ಗಳನ್ನು ಒದಗಿಸಿದ ಕರುಣಾಮಯಿ ಎಂಬುದಕ್ಕಾಗಲೀ, ಅವರು ಬಡವರ ಉಮ್ಮಾ ಎಂದು ಪ್ರವಾದಿಯವರಿಂದ ಕರೆಸಿಕೊಂಡುದಕ್ಕಾಗಲೀ ಅಲ್ಲವಂತೆ. ಪ್ರವಾದಿಯವರ ಬಲಗೈ ಆಗಿರುವ ಅಲೀಯವರು ಧರ್ಮಸಂಸ್ಥಾಪನೆಯ ಹೊರತಾಗಿ ಬೇರೇನನ್ನೂ ಯೋಚಿಸುವವರಲ್ಲ. ನಾನು ಅರಿತುಕೊಂಡಂತೆ ಅವರ ಎಲ್ಲ ಕೃತ್ಯಗಳ ಹಿಂದಿರು ವುದೂ ನೂರಕ್ಕೆ ನೂರು ರಾಜಕೀಯ.

ರಾಜಕೀಯ ಕಾರಣಗಳಿಗಾಗಿ ಶತ್ರುಪಕ್ಷದವರ ಜೊತೆಗೆ ವೈವಾಹಿಕ ಸಂಬಂಧ ಬೆಳೆಸಿಕೊಳ್ಳುವುದು ಅರಬರ ಪುರಾತನ ಸಂಪ್ರದಾಯ. ಯೆಹೂದೀ ಜನಾಂಗದ ಬನೀ ಆಮಿರ್ ಬಣದ ನಾಯಕನ ಹತ್ತಿರದ ಬಂಧುವಾಗಿರುವ ಝೈನಬರನ್ನು ಮದುವೆಯಾದರೆ, ಮದೀನಾದ ಮೇಲೆ ಯೆಹೂದೀಯರ ಹಿಡಿತ ತನ್ನಿಂದ ತಾನೆ ಸಡಿಲವಾಗುತ್ತದೆ ಎಂಬುದು ಅಲೀಯವರ ವಾದವಾಗಿತ್ತಂತೆ. ಅಲೀಯವರ ಮಾತಿಗೆ ಯಾವಾಗಲೂ ಬೆಲೆ ಕೊಡುತ್ತಿದ್ದ ಪ್ರವಾದಿಯವರು ಹೆಚ್ಚು ಯೋಚಿಸದೆ ಆ ಮದುವೆಗೆ ಸಮ್ಮತಿಸಿದ್ದರಂತೆ. ಗಂಡನನ್ನು ಕಳೆದುಕೊಂಡು ದಿಕ್ಕಿಲ್ಲದ ಮೂವರು ಮಕ್ಕಳ ಪೋಷಣೆಗೆ ಗಂಡಸೊಬ್ಬನ ನೆರವು ಝೈನಬರಿಗೂ ಬೇಕಾಗಿತ್ತು. ಅದರಲ್ಲೂ ಅನಿರೀಕ್ಷಿತವಾಗಿ ದಕ್ಕಲಿರುವ ಪ್ರವಾದಿಪತ್ನಿ ಎಂಬ ಪಟ್ಟ. ಯಾರಾದರೂ ಯಾಕೆ ನಿರಾಕರಿಸುತ್ತಾರೆ? ಮದುವೆಯೂ ಆಯಿತು.

ಅಫೀರಾ ಊಹಿಸಿದಂತೆಯೇ ಆಗಿತ್ತು. ಝೈನಬರ ಮದುವೆಯಲ್ಲಿ ಭಾಗವಹಿಸಿದ್ದ ಬನೀ ಆಮಿರ್ ನಾಯಕ ಅಬುಬಾರಾ ಎಲ್ಲರಿಗೂ ಕೇಳಿಸುವಂತೆಯೇ ಘೋಷಿಸಿದ್ದರು, 'ಇಂದಿನಿಂದ ನಾವು ಮತ್ತು ಮದೀನಾದ ಮುಸ್ಲಿಮರು ರಕ್ತಸಂಬಂಧಿಗಳು. ಅಂತಿಮ ಸತ್ಯದ ರಕ್ಷಣೆಗಾಗಿ ಯಾವುದೇ ತ್ಯಾಗಕ್ಕೆ ನಾವು ಸಿದ್ಧರಿದ್ದೇವೆ.'

ವಾರವೊಂದರ ಬಳಿಕದ ಒಂದು ಸಂಜೆ ಮಂಕಾಗಿ ಕುಳಿತಿದ್ದ ನನ್ನ ಬಳಿ ಬಂದ ಅಫೀರಾ, 'ಏನಾಯಿತು ಒಡತಿ? ಯಾಕೆ ಸಪ್ಪಗಿದ್ದೀರಾ? ಎಂದು ಪ್ರಶ್ನಿಸಿದ್ದಳು.

'ಏನಿಲ್ಲ ಅಫೀರಾ. ತಲೆಯಲ್ಲಿ ಏನೇನೋ ಯೋಚನೆಗಳು..' ಎಂದು ಮಾತು ನಿಲ್ಲಿಸಿದೆ.

ನನ್ನ ಪಕ್ಕದಲ್ಲೇ ಕುಳಿತ ಅಫೀರಾ, 'ನೀವಿನ್ನೂ ಹದಿನಾಲ್ಕರ ಹೊಸ್ತಿಲು ದಾಟುತ್ತಿರುವ ಹುಡುಗಿ. ಹಾಗಾಗಿ ಈ ರೀತಿ ಅನಗತ್ಯವಾಗಿ ಯೋಚಿಸುತ್ತಿದ್ದೀರಾ. ನಿಜವಾದ ಪ್ರಪಂಚ ಹೇಗಿರುತ್ತದೆ ಎಂಬುದನ್ನು ನೀವಿನ್ನೂ ಕಲಿಯಬೇಕಿದೆ ಒಡತಿ'ಎಂದಳು.

ನಾನು ತುಟಿಬಿಗಿದು ಸುಮ್ಮನೆ ಕುಳಿತಿರುವುದನ್ನು ಗಮನಿಸಿದವಳು, ನನ್ನ ಎಡಗೈಯನ್ನು ತನ್ನ ಎರಡೂ ಕೈಗಳಲ್ಲಿ ಎತ್ತಿಕೊಂಡು ಕಣ್ಣಲ್ಲಿ ಕಣ್ಣು ತೂರಿಸುತ್ತಾ ಪ್ರಶ್ನಿಸಿದ್ದಳು, 'ನಿಮಗೊಂದು ಪ್ರಶ್ನೆಯನ್ನು ಕೇಳುವೆ ಒಡತಿ. ನೀವು ನಿಜ ಹೇಳಬೇಕು. ನಿಮ್ಮ ಬಲಭಾಗದಲ್ಲಿ ಅಲ್ಲಾಹುವಿನ ಸಂದೇಶಗಳನ್ನೂ, ಎಡಭಾಗದಲ್ಲಿ ನಿಮ್ಮ ಗಂಡನನ್ನೂ ನಿಲ್ಲಿಸಿದ್ದಾರೆ ಎಂದೂ ಭಾವಿಸುವ. ಈ ಎರಡು ಆಯ್ಕೆಗಳಲ್ಲಿ ಒಂದನ್ನಷ್ಟೇ ಆರಿಸುವ ಅವಕಾಶವನ್ನು ನಿಮಗೆ ಕೊಟ್ಟರೆ, ಯಾವುದನ್ನು ಆರಿಸಿಕೊಳ್ಳುತ್ತೀರಿ?'

ಅಫೀರಾಳ ಮಾತಿನ ಜಾಲದಲ್ಲಿ ನಾನು ಸಿಕ್ಕಿಹಾಕಿಕೊಂಡಿದ್ದೆ.

ಯಾವುದನ್ನು ಆರಿಸುವುದು? ಅಲ್ಲಾಹುವಿನ ಆದೇಶಗಳನ್ನು ಆರಿಸಿಕೊಂಡರೆ ಗಂಡನನ್ನು ಕಳೆದುಕೊಳ್ಳುವೆ. ಗಂಡನನ್ನು ಆರಿಸಿಕೊಂಡರೆ ಅಲ್ಲಾಹುವಿನ ಸಂದೇಶಗಳನ್ನು ನಿರಾಕರಿಸಿದಂತಾಗುತ್ತದೆ. ಯಾರನ್ನು ಆರಿಸಲಿ? ಯಾರನ್ನು ತಿರಸ್ಕರಿಸಲಿ? ಅಫೀರಾಳ ಎಡಭುಜದ ಮೇಲೆ ಗಲ್ಲ ಇರಿಸಿ ಗಳಗಳನೆ ಅಳಲಾರಂಭಿಸಿದೆ.

ಅಫೀರಾ ಕೂಡಾ ಬಿಕ್ಕಳಿಸುತ್ತಿದ್ದಾಳೆಯೆ?

ಅವಳ ಬಿಕ್ಕಳಿಕೆಯ ನಡುವೆಯೇ ನನ್ನ ಕಿವಿಯನ್ನು ಮುತ್ತಿಡುವಂತೆ ಅವಳ ಮೆತ್ತಗಿನ ಮಾತೂ ಕೇಳಿಸಿತು.

'ಪ್ರೇಮದಲ್ಲಿ ಮತ್ತು ಯುದ್ಧದಲ್ಲಿ, ಏನೇನೂ ಪರಿಚಯವಿಲ್ಲದ ನೆಲೆಯೊಂದರ ಮೇಲೆ ಆಕ್ರಮಿಸುವ ಧಾಳಿಕೋರರಿಗೆ, ಆ ನೆಲೆಯಲ್ಲಿ ಅದಾಗಲೇ ಗಟ್ಟಿಯಾಗಿಯೇ ನೆಲೆಯೂರಿದವರನ್ನು, ಅವರೆಷ್ಟು ಬಲಹೀನರಾಗಿದ್ದರೂ ಸೋಲಿಸುವುದು ಸುಲಭವಲ್ಲ ಒಡತಿ. ಕೊನೆಗೂ ಗೆಲ್ಲುವವರು ನೀವೇ.., ನನ್ನ ಪುಟ್ಟ ಒಡತಿ.'

–೩–

ಆದರೂ ನಾನು ಸೋತಿದ್ದೆ. ಸಂಪೂರ್ಣವಾಗಿ ಬಲಹೀನಳಾಗಿದ್ದೆ. ಪ್ರವಾದಿಯ ಎರಡನೆ ಮಗಳು ರುಖಯ್ಯಾ ಅನಾರೋಗ್ಯದಿಂದ ಮರಣ ಹೊಂದಿದ್ದಳು. ನಾನಂದು ದುಃಖಿಸಿದ್ದೆ. ಉಮ್ಮರ್ ಬಿನ್ ಖತ್ತಾಬರ ಪುತ್ರಿ ಹಫ್ಸಾರನ್ನು ಮದುವೆಯಾಗಿ ಪ್ರವಾದಿಯವರು ಹೊಸಮನೆ ತುಂಬಿಸಿಕೊಂಡಿದ್ದರು. ಅವರ ಮೊದಲ ರಾತ್ರಿಯಂದು ನಾನು ನನ್ನ ಮನೆಯೊಳಗೆ ಒಂಟಿಯಾಗಿ ಕಣ್ಣೀರು ಹಾಕಿದ್ದೆ. ಮೂರು ಮಕ್ಕಳ ಉಮ್ಮರ್ಝೈನಬರು ಸವತಿಯಾಗಿ ಬಂದಾಗಲೂ ಗುಟ್ಟಾಗಿ ಅತ್ತಿದ್ದೆ. ಪ್ರವಾದಿಯ ದೊಡ್ಡಪ್ಪ ಅಬೂತಾಲಿಬರ ಮಗ ಅಲೀಯವರನ್ನು ಮದುವೆಯಾದ ಫಾತಿಮಾ ಗಂಡನ ಮನೆಗೆ ಹೊರಟುನಿಂತ ದಿನ ನನ್ನನ್ನು ಬಲವಾಗಿ ತಬ್ಬಿಕೊಂಡು, 'ನಿನ್ನಷ್ಟು ಸ್ವಾತಂತ್ರ್ಯ ನನಗಿರಬಾರದಿತ್ತೆ ಉಮ್ಮಾ?' ಎಂಬ ಒಗಟನ್ನು ನನ್ನ ಕಿವಿಯೊಳಗೆ ತೂರಿಸಿದಾಗಲಂತೂ ತಬ್ಬಿಬ್ಬಾಗಿ ಅವಳನ್ನು ತಬ್ಬಿಕೊಂಡು ಬಿಕ್ಕಳಿಸಿ ಬಿಕ್ಕಳಿಸಿ ಅತ್ತಿದ್ದೆ. ವರ್ಷದ ಹಿಂದೆ, ಮಕ್ಕಾದ ದೊಡ್ಡ ಪಡೆಯ ಕಪ್ಪು ಯೋಧನೊಬ್ಬನ ಈಟಿಯೇಟಿಗೆ ಹಂಝಾರವರು ನೆಲಕ್ಕುರುಳಿದಾಗ, ತೀರಿಹೋದವರ ಬಗ್ಗೆ ರೋಧಿಸಬಾರದೆಂದು ಬೇರೆಯವರಿಗೆ ಹೇಳುತ್ತಿದ್ದ ಪ್ರವಾದಿಯವರ ಗಡ್ಡದಲ್ಲಿ ನೀರ ಹನಿಗಳು ಜಾರುವುದನ್ನು ಕಂಡು ಜೋರಾಗಿಯೇ ಅತ್ತಿದ್ದೆ.





ಒಂದು ಯುದ್ಧದಲ್ಲಿ ಗೆಲ್ಲುವುದೆಂದರೆ ಪ್ರತೀಕಾರದ ಮತ್ತೊಂದು ಯುದ್ಧಕ್ಕೆ ನೀಡಿದ ಆಹ್ವಾನವೇ ಸರಿ.

ವರ್ಷದ ಹಿಂದೆ ದಾಳಿಯಿಟ್ಟಿದ್ದ ಮಕ್ಕಾದ ಕುರೈಶರ ದೊಡ್ಡ ಸೈನ್ಯವು, 'ಬದರ್' ಬಯಲಿನಲ್ಲಿ ಮದೀನಾದ ರಕ್ಷಣೆಗೆ ನಿಂತ ನಮ್ಮ ಸಣ್ಣ ಸೈನ್ಯದ ವಿರುದ್ಧ ಸೋತಿತ್ತು. ಪ್ರತೀಕಾರಕ್ಕಾಗಿ ತಹತಹಿಸುತ್ತಿದ್ದ ಮಕ್ಕಾದ ಕುರೈಶರು ಅಬೂಸುಫಾನ್ಯರ ಸೇನಾಧಿಪತ್ಯದಲ್ಲಿ ಒಂದೂವರೆ ಸಾವಿರ ಯೋಧರ ಪಡೆಯೊಂದಿಗೆ ಬಂದು, ಮದೀನಾದ ಹೊರಗಿನ 'ಉಹದ್' ಬೆಟ್ಟದಲ್ಲಿ ಬೀಡು ಬಿಟ್ಟ ಸುದ್ದಿ ನಾಲ್ಕು ದಿನಗಳ ಹಿಂದೆಯೇ ತಲುಪಿತ್ತು. ಗೂಢಚಾರರು ತಂದ ಮಾಹಿತಿಯಂತೆ, ಅಬೂಸುಫ್ಯಾನರ ಹೆಂಡತಿ 'ಹಿಂದ್' ತನ್ನ ಜೊತೆಗೆ ಹದಿನೇಳು ಮಹಿಳೆಯರ ನಾಟ್ಯತಂಡವನ್ನು ಕಟ್ಟಿಕೊಂಡು ಸೈನಿಕರನ್ನು ಹುರಿದುಂಬಿಸಲು ಬಂದಿದ್ದಳು. ಬದರ್ ಯುದ್ದದಲ್ಲಿ ಹತರಾದ ಅವಳಬ್ಬ ಉತ್ಬಾರ ಸಾವಿಗೆ ಸೇಡು ತೀರಿಸಿಕೊಳ್ಳಲು ಬಂದವಳಂತೆ ಅವಳು.

ಮಕ್ಕಾದಲ್ಲಿರುವಾಗ ನಾನೂ ಅವಳನ್ನು ಹಲವು ಬಾರಿ ನೋಡಿದ್ದೆ. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡುವಂತೆ ಇದ್ದಳು. ಮಕ್ಕಾದ ಎಲ್ಲ ಹೆಣ್ಣುಗಳ ನಡುವೆ ಆಕೆ ಬೇರೆಯೇ ಆಗಿ ಕಾಣಿಸುತ್ತಿದ್ದಳು. ಮೈಗಂಟಿಕೊಳ್ಳುವ ಅವಳ ಬಿಗಿ ಉಡುಪುಗಳೂ ಹಾಗೆಯೇ; ಬೇರೆ ಹೆಣ್ಣುಗಳ ಕಣ್ಣು ಕುಕ್ಕುವಂತಿದ್ದವು. ಆಸೆಪಡುವಂತಿದ್ದವು.

ಬದರ್ ಯುದ್ಧದ ಬಳಿಕ ಪ್ರವಾದಿಯವರಿಗೆ ಯುದ್ಧಗಳೆಂದರೇನೇ ಜಿಗುಪ್ಸೆ. ಆದರೂ ತಮ್ಮನ್ನು ನಂಬಿ, ಸತ್ಯವಿಶ್ವಾಸಿಗಳಾಗಿರುವ ಮದೀನಾದ ಪ್ರಜೆಗಳನ್ನು ರಕ್ಷಿಸುವ ಹೊಣೆ ಅವರ ಮೇಲಿತ್ತು. ಕತ್ತಿ ಗುರಾಣಿಗಳೊಂದಿಗೆ ಕವಚಧಾರಿಗಳಾಗಿ ಏಳುನೂರು ವಿಶ್ವಾಸಿ ಪಡೆಯೊಂದಿಗೆ ಉಹದ್ ಬೆಟ್ಟದ ದಿಕ್ಕಿಗೆ ಹೊರಟ ಅವರ ಜೊತೆಗೆ ನಾನೂ ಇದ್ದೆ.

ಯುದ್ಧದ ಪ್ರತಿಯೊಂದು ದೃಶ್ಯವೂ ಇಂದೂ ಕಣ್ಣಿಗೆ ಕಟ್ಟಿದಂತಿದೆ.

ಉಹದ್ ತಲುಪಿದ ಬಳಿಕ ತಮ್ಮೊಳಗೇ ಲೆಕ್ಕಾಚಾರ ಹಾಕಿಕೊಂಡ ಪ್ರವಾದಿ, ದೊಡ್ಡ ಬೆಟ್ಟವನ್ನು ಯೋಧರ ಬೆನ್ನಿಗೂ, ಜಬಲ್ ಐನೈನ್ ಎಂಬ ಮತ್ತೊಂದು ಸಣ್ಣ ಬೆಟ್ಟವನ್ನು ಕಣ್ಣೆದುರೂ ಬರುವಂತೆ ಸಮರವ್ಯೂಹ ರಚಿಸಿದ್ದರು. ಬೆಟ್ಟದ ಮೇಲೆ ಐವತ್ತು ಬಿಲ್ಲಾಳುಗಳನ್ನು ನಿಯೋಜಿಸಿ, ಬೆಟ್ಟದ ಬುಡದಲ್ಲಿ ಯೋಧರು ಕೊಲ್ಲಲ್ಪಡುತ್ತಿದ್ದರೂ ಅಥವಾ ಸಮರ ಗೆದ್ದು ನಮ್ಮವರು ಕೊಳ್ಳೆಹೊಡೆಯಲಾರಂಭಿಸಿದರೂ, ಬೆಟ್ಟದ ಮೇಲೆ

ನಿಂತಿರುವ ಬಿಲ್ಲುಗಾರರು ಕೆಳಗಿಳಿಯದೆ, ಆ ದಾರಿಯಲ್ಲಿ ಶತ್ರುಗಳು ನುಗ್ಗದಂತೆ ನೋಡಿಕೊಳ್ಳುವ ಹೊಣೆಯನ್ನು ವಹಿಸಿದ್ದರು.

ಬೆಟ್ಟದ ಆಯಕಟ್ಟಿನ ಜಾಗವೊಂದರಲ್ಲಿ, ಮರದ ಮೇಲೆ ಸಿದ್ಧಪಡಿಸಿದ ಅಟ್ಟಳಿಗೆಯಲ್ಲಿ ಅವರ ಜೊತೆಗೆ ನಾನೂ ಕುಳಿತಿದ್ದೆ. ಅಲ್ಲಿಂದ ಎಲ್ಲವೂ ಕಾಣಿಸುತ್ತಿತ್ತು. ಯುದ್ಧ ಆರಂಭವಾಗಿತ್ತು. ಅಲ್ಲಾಹು ಅಕ್ಬರ್ ಎಂಬ ಧ್ವನಿಗೆ ಬೆಟ್ಟಗಳು ಕಂಪಿಸಿದ್ದವು. ಶತ್ರು ಸೈನ್ಯವನ್ನು ಲೆಕ್ಕಿಸದೆ ಮುನ್ನುಗ್ಗಿದ ಅಲೀಯವರು ಒಬ್ಬನ ತಲೆಯೊಡೆದರೆ, ರಣವೀರ ಹಂಝಾರ ಖಡ್ಗಕ್ಕೆ ಮತ್ತೊಬ್ಬ ಬಲಿಯಾಗಿದ್ದ. ಮೂವರು ಗಾಯಗೊಂಡು ಬಿದ್ದಿದ್ದರು. ಹಾರಿಬಂದ ಈಟಿಯ ಏಟನ್ನು ಪಕ್ಕಕ್ಕೆ ಜಿಗಿದು ತಪ್ಪಿಸಿಕೊಂಡ ಸಅದ್, ಹಂಝಾರತ್ತ ನುಗ್ಗಿದ ಮತ್ತೊಬ್ಬನನ್ನು ತಿವಿದು ಕೆಡವಿದ್ದರು. ತಮ್ಮ ಸೈನಿಕರೆಲ್ಲ ಸಾಯುತ್ತಿರುವುದನ್ನು ಕಾಣುವ ಶತ್ರುಸೇನೆ ದಿಕ್ಕಾಪಾಲಾಗಿತ್ತು.

ನಾವು ಗೆದ್ದೆವು ಎಂದುಕೊಂಡಿದ್ದೆ. ಆದರೆ, ತಾವು ಹೇಳದೆ ಯಾವುದೇ ಕಾರಣಕ್ಕೂ ನಿಂತ ಜಾಗದಿಂದ ಕದಲಬಾರದು ಎಂದಿದ್ದ ಪ್ರವಾದಿಯ ಆದೇಶವನ್ನು ಮರೆತ ಬೆಟ್ಟದ ಮೇಲಿದ್ದ ನಮ್ಮ ಬಿಲ್ಲುಗಾರರ ತಂಡದ ಕೆಲವರು ಸತ್ತುಬಿದ್ದವರನ್ನು ದೋಚುವ ಆಸೆಯಿಂದ ಬೆಟ್ಟದಿಂದ ಇಳಿದು ಬಯಲಿನತ್ತ ಇಳಿದೇಬಿಟ್ಟಿದ್ದರು.

ಸತ್ಯವಿಶ್ವಾಸಿಗಳು ಸೋತದ್ದೇ ಅಲ್ಲಿ.

ಇದನ್ನೇ ನಿರೀಕ್ಷಿಸುತ್ತಿದ್ದಂತಿದ್ದ ಕುರೈಶ್ ಸೈನ್ಯದ ತುಕಡಿಯೊಂದು ಪರ್ವತದ ಉತ್ತರ ದಿಕ್ಕಿನಿಂದ ಮಿಂಚಿನ ವೇಗದಲ್ಲಿ ನುಗ್ಗಿ, ನಮ್ಮ ಬಿಲ್ಲಾಳುಗಳನ್ನೆಲ್ಲ ಕತ್ತರಿಸಿ ಹಾಕಲಾರಂಭಿಸಿದ್ದರು. ಈ ಅನಿರೀಕ್ಷಿತ ಆಕ್ರಮಣದಿಂದ ನಮ್ಮ ಸೇನೆ ಕಂಗೆಟ್ಟಿತ್ತು.

ಅಷ್ಟರಲ್ಲಿ ನಾನು ನಿರೀಕ್ಷಿಸಿರದಿದ್ದ ಒಂದು ಸಂಗತಿ ನಡೆದೇಹೋಗಿತ್ತು!

ಸೇನಾಪತಿ ಅಬೂಸುಫಿಯಾನರ ಹೆಂಡತಿ ಹಿಂದ್, ಕಪ್ಪು ಗುಲಾಮನೊಬ್ಬನ ಎರಡೂ ಭುಜಗಳನ್ನು ಹಿಡಿದು ಏನೋ ಹೇಳುತ್ತಿರುವುದು ಬಲು ದೂರದಿಂದಲೇ ನನ್ನ ಕಣ್ಣಿಗೆ ಬಿದ್ದಿತ್ತು. ಅವನು ನೆಲಕ್ಕೆ ಊರಿ ಹಿಡಿದಿದ್ದ ಏಟಿಯನ್ನು ಎತ್ತಿ, ತನ್ನ ಎಡಗೈಯಿಂದ ಅವನ ಬಲಗೈಯನ್ನು ಸವರುತ್ತಾ, ಬಲಗೈಯಿಂದ ಅವನ ಕಪೋಲ ತಟ್ಟುತ್ತಿದ್ದಳು. ಅಷ್ಟೆ.

ನೋಡು ನೋಡುತ್ತಿರುವಂತೆಯೆ ಈಟಿಯೆತ್ತಿದ ಅವನು, ಎತ್ತಲೋ ಗುರಿಯಿಟ್ಟು ಬಲವಾಗಿ ಎಸೆದಿದ್ದ.

ಮಿಂಚಿನಂತೆ ತೂರಿಬಂದ ಆ ಈಟಿಯು ಹಂಝಾರ ಬೆನ್ನು ನುಗ್ಗಿ ಎದೆಯಿಂದ ಹೊರಗೆ ಇಣುಕಿತ್ತು.





'ಓಹ್! ಯಾ ಅಲ್ಲಾ..!' ನಾನು ಗಟ್ಟಿಯಾಗಿ ಚೀರಿದ್ದೆ.

ಕದನಕಲಿ ಬಲುಪರಾಕ್ರಮಿ ಹಂಝಾ ನೆಲಕ್ಕುರುಳಿದ್ದರು.

ಆ ರಣಸುಂದರಿಗೆ ಅಷ್ಟರಿಂದಲೇ ತೃಪ್ತಿಯಾದಂತಿರಲಿಲ್ಲ. ಕೇಕೆ ಹಾಕಿ ನಗುತ್ತಾ, ಕೈಕಾಲು ಕುಣಿಸುತ್ತಾ ಹಾರಿ ಬಂದವಳು, ತನ್ನ ಸೊಂಟದಲ್ಲಿ ಇರಿಸಿದ್ದ ಚಾಕುವಿನಿಂದ ನೆಲಕ್ಕೊರಗಿದ್ದ ಹಂಝಾರ ಕಿವಿ ಮೂಗುಗಳನ್ನು ಕತ್ತರಿಸಿ, ಹೊಟ್ಟೆ ಬಗೆದು, ಕರುಳು ಎಳೆದು, ಜಗಿದು ಥೂಕ್ಕೆಂದು ಉಗುಳಿದ್ದಳು ಇವೆಲ್ಲವೂ ಮಿಂಚಿನ ವೇಗದಲ್ಲಿ ನಡೆದುಹೋಗಿತ್ತು. ಬದರ್ ಯುದ್ಧದಲ್ಲಿ ಹತರಾದ ತನ್ನಪ್ಪ ಉತ್ಬಾರವರ ಕೊಲೆಯ ಪ್ರತೀಕಾರ ತೀರಿಸಿಕೊಂಡಿದ್ದಳೇ ಅವಳು?

ಅವಳ ಕೃತ್ಯದಿಂದ ನಾನು ಕಂಗಾಲಾಗಿರುವಂತೆಯೇ ಪ್ರವಾದಿಯನ್ನೇ ಹೋಲುತ್ತಿದ್ದ ನಮ್ಮ ಧ್ವಜವಾಹಕನನ್ನು ಇರಿದ ಶತ್ರು ಸೈನಿಕನೊಬ್ಬ, 'ಪ್ರವಾದಿಯನ್ನು ನಾನು ಕೊಂದೇ..' ಎಂದು ಬೊಬ್ಬಿಡುತ್ತಾ ರಣರಂಗದ ನಡುವೆ ಓಡಿದ್ದ. ಅವನ ಮಾತು ನಿಜವೆಂದೇ ನಂಬಿದ ನಮ್ಮ ಸೇನೆಯ ಕೆಲವು ಯೋಧರು ಪ್ರಾಣಭಯದಿಂದ ಮದೀನಾದತ್ತ ಪಲಾಯನ ಮಾಡಿದ್ದರು. ಅಷ್ಟರಲ್ಲಿ ಚಿಮ್ಮಿ ಬಂದ ಕಲ್ಲೊಂದು ನನ್ನ ಪಕ್ಕದಲ್ಲಿ ಕುಳಿತಿದ್ದ ಪ್ರವಾದಿಯ ಕೆಳದವಡೆಗೆ ತಾಗಿ ತುಟಿಯಿಂದ ರಕ್ತ ಚಿಮ್ಮಿದಾಗ ಕಿಟಾರನೆ ಕಿರುಚಿದ್ದೆ ನಾನು. ನಾನೇನು ಮಾಡಬೇಕೆಂದು ನಿರ್ಧರಿಸುವಷ್ಟರಲ್ಲಿ ಹಾರುತ್ತಾ ಬಂದ ಈಟಿಯೊಂದು ಅವರ ತಲೆಗೆ ಬಡಿದಿತ್ತು. ಶಿರಸ್ತ್ರಾಣ ಜಜ್ಜಿ ಅದರ ಕೊಂಡಿಗಳು ಹಣೆಗೆ ಚುಚ್ಚಿದ್ದವು.

ನಾನು ತಡಮಾಡಲಿಲ್ಲ. ಮೇಲುವಸ್ತ್ರವನ್ನು ಕಳಚಿ ಅವರ ಕಣ್ಣು ಮೂಗುಗಳನ್ನು ಒರಸುತ್ತಿರುವಂತೆಯೇ ನನ್ನಿಂದ ಬಿಡಿಸಿಕೊಂಡ ಪ್ರವಾದಿಯವರು, ಅಟ್ಟಳಿಗೆಯಿಂದ ನೆಲಕ್ಕಿಳಿದು ಖಡ್ಗ ಹಿರಿದು ನಿಂತಿದ್ದರು. ಆದರೆ, ಬಾಣದಂತೆ ನುಗ್ಗಿ ಬಂದ ಶತ್ರು ಸೈನಿಕನೊಬ್ಬ ಬೀಸಿದ ಖಡ್ಗದೇಟನ್ನು ತಪ್ಪಿಸಿಕೊಳ್ಳಲು ಹಿಂದಕ್ಕೆ ಜಿಗಿದ ಪ್ರವಾದಿಯವರು ಪಕ್ಕದಲ್ಲೇ ಇದ್ದ ಕಂದಕಕ್ಕೆ ಉರುಳಿದ್ದರು. ಅವಸರದಿಂದ ಅಟ್ಟಳಿಗೆಯಿಂದ ಇಳಿದ ನಾನು ಪ್ರವಾದಿಯ ಬಳಿಗೆ ತಲುಪುವಷ್ಟರಲ್ಲಿ ಧಾವಿಸಿ ಬಂದಿದ್ದ ಉಮ್ಮರ್ ಬಿನ್ ಖತ್ತಾಬರು, ಪ್ರವಾದಿಯವರನ್ನು ಕಂದಕದಿಂದ ಮೇಲೆತ್ತಿ ತಂದು ನೆಲದ ಮೇಲೆ ಮಲಗಿಸಿದ್ದರು.

ನನ್ನ ಹೆಗಲಲ್ಲಿ ತೂಗಿಸಿದ್ದ ಚರ್ಮದ ಚೀಲದಿಂದ ನೀರು ಸುರಿದು ಅವರ ಮುಖ ತೊಳೆದೆ. ದವಡೆಯಿಂದ ಒಸರುತ್ತಿದ್ದ ರಕ್ತವನ್ನು ಮೇಲುವಸ್ತ್ರದಿಂದ ಒರೆಸಿದೆ. ಸಂಗಾತಿಯೊಬ್ಬರು ಖರ್ಜೂರದ ಹಳೆಯ ಚಾಪೆಯ ತುಂಡೊಂದನ್ನ ಉರಿಸಿ ಗಾಯಕ್ಕೆ ಲೇಪ ಹಚ್ಚಿದರು. ನಿಧಾನವಾಗಿ ಎದ್ದು ಕುಳಿತ ಪ್ರವಾದಿಯವರ ನೋಟ

ಪಕ್ಕದಲ್ಲೇ ತಂದು ಮಲಗಿಸಿದ್ದ, ಕಿವಿ ಮೂಗುಗಳಿಲ್ಲದ ದೊಡ್ಡಪ್ಪ ಹಂಝಾರ ದೇಹದತ್ತ ಹರಿದಿತ್ತು. ತಮಗಾದ ಗಾಯಗಳ ನೋವನ್ನೆಲ್ಲ ಮರೆತು ಪುಟ್ಟ ಮಗುವಿನಂತೆ ಬಿಕ್ಕಳಿಸಿದ್ದರು ಪ್ರವಾದಿ.

ಉಹದ್ ಯುದ್ಧದಲ್ಲಿ ಕಂಡ ಭಯಾನಕ ಸಂಗತಿಗಳಲ್ಲಿ ನನ್ನನ್ನು ಬಹಳವಾಗಿ ಕಾಡಿದ್ದವಳು ಆ ಹಿಂದ್ ಎಂಬ ರಣಸುಂದರಿ. ಯುದ್ಧದ ನಡುವೆ ರಣರಂಗದಲ್ಲಿ ಅವಳು ಮಾಡಿದ ಕೃತ್ಯಗಳನ್ನೆಲ್ಲ ಒಂದೊಂದಾಗಿ ಅಫೀರಾಳಿಗೆ ವಿವರಿಸಿದ್ದೆ. ನನ್ನೆಲ್ಲಾ ಮಾತುಗಳನ್ನು ಸಾವಧಾನದಿಂದ ಆಲಿಸಿದ ಅಫೀರಾ, ಅವಳ ಬಗ್ಗೆ ಅಸಹ್ಯಪಡುವ ಬದಲು ಪ್ರಶ್ನಿಸಿದ್ದು, 'ನಿಮಗೇನನ್ನಿಸುತ್ತದೆ ಒಡತಿ, ಅವಳು ಹಾಗೆಲ್ಲ ವರ್ತಿಸಿದ್ದು ತಪ್ಪೆಂದು ಹೇಳುತ್ತೀರಾ?' ಎಂದು.

'ತಪ್ಪಲ್ಲದೆ ಮತ್ತೆ ಸರಿಯೆ?' ಸಹನೆಯಿಂದಲೇ ಪ್ರಶ್ನಿಸಿದ್ದೆ ನಾನು.

'ಯಾಕೆ ಸರಿಯಲ್ಲ? ತಪ್ಪು ಯಾಕೆ?' ಅಫೀರಾಳೂ ಕೆಣಕುವಂತೆಯೇ ಪ್ರಶ್ನಿಸಿದ್ದಳು.

'ಏನು ಹೇಳುತ್ತಿರುವೆ ನೀನು ಅಫೀರಾ? ಯುದ್ಧಭೂಮಿಯಲ್ಲಿ ಅಷ್ಟೆಲ್ಲಾ ಸೈನಿಕರಿದ್ದಾರೆ ಎಂಬುದನ್ನೂ ಮರೆತು, ಅದೂ ತನ್ನ ಗಂಡ ನೋಡುತ್ತಿದ್ದಾರೆ ಎಂಬುದನ್ನೂ ಕಡೆಗಣಿಸಿ, ಅವನ್ಯಾವನೋ ಕರಿಯನ ಕೆನ್ನೆಯನ್ನು ವಯ್ಯಾರದಿಂದ ಸವರಿದ್ದು ಸರಿಯೆನ್ನುವಿಯಾ?'

ಅಫೀರಾ ತೆಳುವಾಗಿ ನಕ್ಕಳು.

'ಅವಳು ಹಾಗೆ ಮಾಡಿದ್ದು ತಪ್ಪೆಂದು ಅವಳ ಗಂಡನಿಗೆ ಅನ್ನಿಸಿದ್ದರೆ ಮಾತ್ರ ಅದು ತಪ್ಪು ಒಡತಿ. ಹಾಗೊಂದು ವೇಳೆ ಹಿಂದ್ ಮಾಡಿದ್ದು ತಪ್ಪು ಎಂದು ಅನ್ನಿಸಿರುತ್ತಿದ್ದರೆ, ಅವಳ ಗಂಡ ಅಬೂಸುಫ್ಯಾನ್ ಅವಳನ್ನು ಅಲ್ಲೇ ಕತ್ತರಿಸಿ ಹಾಕುತ್ತಿದ್ದರು. ಹೆಂಡಂದಿರು ಏನು ಮಾಡಿದರೆ ಸರಿ, ಏನು ಮಾಡಿದರೆ ತಪ್ಪು ಎಂಬುದರ ನಿರ್ಧಾರವಾಗುವುದು, ಅವರವರ ಗಂಡಂದಿರ ತೀರ್ಮಾನದ ಮೇಲೆ ಮಾತ್ರ. ಇದೇ ನಮ್ಮ ಸಂಪ್ರದಾಯ. ಆದರೆ, ನಮ್ಮಂತಹ ಹೆಂಗಸರಿಗೆ ಈ ಹಕ್ಕು ಇಲ್ಲ. ನಮಗೆ ಇಷ್ಟವಾಗದ ಕೆಲಸವನ್ನು ಮಾಡಿದ ಗಂಡನನ್ನು ಪ್ರಶ್ನಿಸುವ ಅಧಿಕಾರ ನಮಗಿದೆಯೆ?' ಅಫೀರಾ ನನ್ನನ್ನೇ ಪ್ರಶ್ನಿಸಿದಾಗ ಉತ್ತರಿಸಲು ಸಾಧ್ಯವಾಗಲಿಲ್ಲ.

ನನ್ನಿಂದ ಯಾವುದೇ ಮಾತು ಬರದಾಗ ಅಫೀರಾಳೇ ಮತ್ತೊಂದು ಪ್ರಶ್ನೆ ಎದುರಿಟ್ಟಿದ್ದಳು. 'ಅವಳ ಗಂಡನ ಮಾತು ಹೋಗಲಿ ಒಡತಿ. ಹಂಝಾರನ್ನು ಕೊಲ್ಲಿಸುವ ಮೂಲಕ, ಆ ಹಿಂದ್ ತನ್ನ ಅಬ್ಬನ ಸಾವಿಗೆ ಪ್ರತೀಕಾರ ತೀರಿಸಿಕೊಂಡದ್ದೂ ತಪ್ಪೆ?'

'ಅದು ಯುದ್ಧ ಅಫೀರಾ. ಅದು ಗಂಡಸರ ವ್ಯವಹಾರ. ನಮ್ಮಂಥ ಹೆಂಗಸರಿಗೇನು ಕೆಲಸವಿದೆ ಅಲ್ಲಿ?' ಸಿಟ್ಟಿನಿಂದಲೇ ಪಶ್ನಿಸಿದ್ದೆ.





'ಹಾಗೆಂದು ನಿಮಗಾರು ಹೇಳಿದರು ಒಡತಿ?' ಸುಲಭದಲ್ಲಿ ಸೋಲುವ ಹೆಣ್ಣಲ್ಲ ಅಫೀರಾ.

'ಯಾರು ಹೇಳಬೇಕು?' ತಾಳ್ಮೆ ತಪ್ಪಿಹೋಗಿತ್ತು ನನಗೆ, 'ಯುದ್ಧದಲ್ಲಿ ಹೆಂಗಸರು ಭಾಗವಹಿಸಿದ್ದನ್ನು ಎಲ್ಲಿಯಾದರೂ ನೋಡಿರುವೆಯ ನೀನು?' ಎಂದಿದ್ದೆ.

'ನಾವು ನೋಡಿದ್ದು ಮಾತ್ರ ನಿಜವೆ?' ಅಫೀರಾಳ ಪ್ರಶ್ನೆ ಅಸಂಬದ್ಧ ಅನ್ನಿಸಿತ್ತು.

'ಅಲ್ಲವೆ ಮತ್ತೇ, ಕಾಣದ್ದು ಹೇಗೆ ನಿಜವಾಗುತ್ತದೆ?' ಎಂದೆ.

ಸ್ವಲ್ಪ ಹೊತ್ತು ನನ್ನ ಮುಖವನ್ನೇ ಎವೆಯಿಕ್ಕದೆ ದಿಟ್ಟಿಸಿದ ಅಫೀರಾ, 'ಹೀಗೆ ಕೇಳಿದೆನೆಂದು ಸಿಟ್ಟು ಮಾಡಿಕೊಳ್ಳಬೇಡಿ ಒಡತಿ. ಅಷ್ಟು ಮಾತ್ರವಲ್ಲ, ಹೀಗೆ ಪ್ರಶ್ನಿಸಿದೆನೆಂದೂ ಯಾರಲ್ಲೂ ಹೇಳಬೇಡಿ. ನೀವು ಹುಟ್ಟುವುದಕ್ಕಿಂತ ಹಿಂದಿನ ದಿನಗಳಲ್ಲಿ ನಾವೆಲ್ಲ, ಪೂಜಿಸುತ್ತಿದ್ದದ್ದು ಕಅಬಾ ಮಂದಿರದಲ್ಲಿರುವ ಕಲ್ಲುದೇವರುಗಳನ್ನು. ಯಾವಾಗ ಪ್ರವಾದಿಯವರು ಆ ಕಲ್ಲುಗಳು ದೇವರಲ್ಲ; ಅಲ್ಲಾಹು ಒಬ್ಬನೇ ದೇವರು. ಅವನಿಗೆ ಆಕಾರವಿರುವುದಿಲ್ಲ ಎಂದು ಹೇಳತೊಡಗಿದರೋ, ಆನಂತರದ ದಿನಗಳಲ್ಲಿ ನಾವೆಲ್ಲ ನಮ್ಮ ನಂಬಿಕೆಗಳನ್ನೇ ಬದಲಿಸಿಕೊಂಡೆವು. ಯಾಕೆಂದರೆ, ಪ್ರವಾದಿಯವರು ಎಂದೂ ಸುಳ್ಳು ಹೇಳುವವರಲ್ಲ ಎಂಬ ವಿಶ್ವಾಸ ನಮಗಿತ್ತು. ಆದರೆ ನಿಮಗೂ, ನನಗೂ ಮಾತ್ರವಲ್ಲ ಪ್ರವಾದಿಯವರಿಗೂ ಗೊತ್ತಿರುವ ಸತ್ಯವೆಂದರೆ; ಅಲ್ಲಾಹುವನ್ನು ನೋಡಿದವರು ಯಾರೂ ಇಲ್ಲ ಎಂಬುದು. ಆದರೂ ಅಲ್ಲಾಹು ಒಬ್ಬನೇ ನಿಜವೆಂದು ನಾವೆಲ್ಲ ವಿಶ್ವಾಸವಿರಿಸಿಲ್ಲವೆ? ಹೀಗಿರುವಾಗ, ಕಾಣದ್ದು ಹೇಗೆ ನಿಜವಾಗಿರುತ್ತದೆ ಎಂಬ ನಿನ್ನ ಮಾತು ಸುಳ್ಳಲ್ಲವೆ?'

ನಾನು ಬೆದರಿದ್ದೆ. ಮೈಯೆಲ್ಲ ಬೆವರಿದ್ದೆ. ಅಫೀರಾಳ ಮೈಯೊಳಗೆ ಸೈತಾನನೇನಾದರೂ ಸೇರಿಕೊಂಡಿರಬಹುದೆ?

ಅವಳ ಮುಖವನ್ನು ನೇರವಾಗಿ ದಿಟ್ಟಿಸಲೂ ಭಯವಾಯಿತು.

'ನನ್ನನ್ನು ಹೆದರಿಸುತ್ತಿದ್ದೀಯಾ ಅಫೀರಾ?' ಅಸಹನೆಯಿಂದಲೇ ಪ್ರಶ್ನಿಸಿದ್ದೆ.

'ಹೆದರಿಸುತ್ತಿಲ್ಲ ಒಡತಿ. ಧೈರ್ಯ ತುಂಬಲು ಯತ್ನಿಸುತ್ತಿರುವೆ.' ಅಫೀರಾ ಸಮಾಧಾನದಿಂದಲೇ ಉತ್ತರಿಸಿದ್ದಳು.

'ಯುದ್ಧಗಳೆಲ್ಲ ಕೇವಲ ಗಂಡಸರಿಗೆ ಮೀಸಲು ಎಂಬ ನಿಮ್ಮ ನಂಬಿಕೆಯೇ ದೊಡ್ಡ ಸುಳ್ಳು. ಗಂಡಸರು ತಮ್ಮ ಅಹಂಕಾರವನ್ನು ಮೆರೆಯುವ ಸಲುವಾಗಿ ಅಂತಹ ಸುಳ್ಳನ್ನು ಹಬ್ಬಿಸಿದ್ದಾರೆ. ಮುಂದೊಂದು ದಿನ ನೀವೂ ಹಿಂದ್'ಳಂತೆ ಎದೆಗೆ, ತೋಳುಗಳಿಗೆ ಕವಚಗಳನ್ನು ಬಿಗಿದು, ತಲೆಯನ್ನು ಶಿರಸ್ತ್ರಾಣದೊಳಗೆ ಹುದುಗಿಸಿ ರಣರಂಗದಲ್ಲಿ ಶತ್ರುಗಳ ವಿರುದ್ಧ ಹೋರಾಡುವ ಸಂದರ್ಭ ಬರುವುದೇ ಇಲ್ಲವೆಂದು ಯಾಕೆ ನಂಬುವಿರಿ? ನೀವಿನ್ನೂ ಚಿಕ್ಕವರು. ನೀವು ಸಾಧಿಸಬೇಕಾದದ್ದು ಬಹಳವಿದೆ. ಮರಣ ಯಾರಿಗೆ ಯಾವಾಗ ಬರುತ್ತದೆಯೆಂಬುದು ಅಲ್ಲಾಹುವಿಗೆ ಮಾತ್ರ ಗೊತ್ತಿರುವ ಗುಟ್ಟು.

ನೀವು ನನ್ನಂತೆ ಸಾಮಾನ್ಯಳಲ್ಲ. ನೀವೊಬ್ಬರು ಪ್ರವಾದಿಪತ್ನಿ. ಅಂತಿಮಸತ್ಯ ಸಂದೇಶಗಳನ್ನು ಹೆಚ್ಚು ಹೆಚ್ಚು ಜನರಿಗೆ ತಲುಪಿಸುವ ಹೊಣೆ ನಿಮ್ಮ ಮೇಲೂ ಇದೆ. ಆಗ ನಿಮಗೆ ಹೊಸ ಹೊಸ ಶತ್ರುಗಳು ಹುಟ್ಟಿಕೊಳ್ಳುತ್ತಾರೆ. ಪ್ರವಾದಿಯವರಿಗಾದಂತೆ ನಿಮ್ಮ ಹತ್ತಿರದ ಬಂಧುಗಳೇ ನಿಮಗೆ ಶತ್ರುಗಳಾಗಿ ಬದಲಾಗಲೂಬಹುದು. ತಲೆಗೂದಲು ಉದ್ದವಾದಂತೆ ಸಿಕ್ಕುಗಳೂ ಹೆಚ್ಚಾಗುತ್ತವೆ ಎಂಬುದನ್ನು ಎಂದೂ ಮರೆಯದಿರಿ.'

ಕಣಿ ಹೇಳಿದಂತಿತ್ತು ಅಫೀರಾಳ ಮಾತುಗಳು.

'ಅದಕ್ಕೆ ನಾನೇನು ಮಾಡಬೇಕಂತೀಯಾ? ನಾಳೆಯಿಂದಲೇ ಕುದುರೆಯೇರಿ ಹಿಂದ್'ಳಂತೆ ಖಡ್ಗ ಬೀಸುವುದನ್ನು ಕಲಿಯಬೇಕಾ?' ಅಸಹನೆಯಿಂದಲೇ ಪ್ರಶ್ನಿಸಿದ್ದೆ.

ಜೋರಾಗಿ ನಕ್ಕಿದ್ದಳು ಅಫೀರಾ.

'ನಾನು ಹೇಳುವ ಮೊದಲೇ ನೀವು ಗ್ರಹಿಸಿಬಿಟ್ಟಿರಿ ಒಡತಿ. ನಾಳೆಯೇ ನಿಮ್ಮಾಸೆಯನ್ನು ಪ್ರವಾದಿಯವರಲ್ಲಿ ಹೇಳಿಬಿಡಿ. ನನ್ನಬ್ಬ ಮುಅತ್ತಲ್ ನಿಮಗೆ ಕುದುರೆ ಸವಾರಿ ಕಲಿಸುತ್ತಾರೆ. ನಿಮ್ಮಕ್ಕ ಸಲ್ಮಾರ ಗಂಡ ಸಮರವೀರ ಝುಬೈರ್ ನಿಮಗೆ ಕತ್ತಿವರಸೆ ಕಲಿಸುತ್ತಾರೆ. ನಾನು ಪ್ರವಾದಿಯವರಲ್ಲಿ ಈಗಾಗಲೇ ಈ ಬಗ್ಗೆ ಮಾತೂ ಆಡಿರುವೆ.'

'ಯಾರಲ್ಲಿ! ನನ್ನ ಪ್ರವಾದಿಯವರಲ್ಲೆ?!!' ನಾನು ದಿಗ್ಭ್ರಮೆಗೊಂಡಿದ್ದೆ.

'ಅಲ್ಲ, ನಮ್ಮ ಪ್ರವಾದಿಯವರಲ್ಲಿ.' ಕಿಲಕಿಲನೆ ನಕ್ಕಿದ್ದಳು ಅಫೀರಾ.

* * *

*ನನಗೆ ಅಫಿರಾ ಹೇಳಿದ ಮಾತೊಂದು ತಲೆತಿನ್ನತೊಡಗಿತ್ತು.*

*'ಹೆಂಡಂದಿರು ಏನು ಮಾಡಿದರೆ ಸರಿ, ಏನು ಮಾಡಿದರೆ ತಪ್ಪು ಎಂಬುದರ ನಿರ್ಧಾರವಾಗುವುದು, ಅವರವರ ಗಂಡಂದಿರ ತೀರ್ಮಾನದ ಮೇಲೆ ಮಾತ್ರ. ಇದೇ ನಮ್ಮ ಸಂಪ್ರದಾಯ' ಎಂತಹ ಮಾತು ಅದು!*

*'ಹೆಣ್ಣಿನೊಂದಿಗೆ ಪ್ರೀತಿಯಿಂದ ಬಾಳಲಾಗದ ಗಂಡಸರು, ತಮ್ಮ ಅಸಹಾಯಕತೆ ಯನ್ನು ಮರೆಮಾಚುವ ಸಲುವಾಗಿ ಈ ಎಲ್ಲ ಧರ್ಮ ಮತ್ತು ಸಂಪ್ರದಾಯಗಳನ್ನು ತಮ್ಮ ಅನುಕೂಲಕ್ಕಾಗಿ ಬರೆದುಕೊಂಡದ್ದು' ಎಂಬುದಾಗಿ ಅದ್ಯಾವಳೋ ಸ್ತ್ರೀವಾದಿಯೊಬ್ಬಳು ಅದ್ಯಾವುದೋ ವೇದಿಕೆ ಯಿಂದ ಹೇಳುತ್ತಿದ್ದದ್ದು ನೆನಪಾಗಿತ್ತು. ಆದರೆ, ಈ ಸ್ತ್ರೀವಾದಿ ಸಿದ್ಧಾಂತದ*





*ಅರಿವು ಆ ಕಾಲದ ಅಫೀರಾಳಿಗೆ ಇದ್ದಿರಲು ಸಾಧ್ಯವಿಲ್ಲ. ಇದು ಆಧುನಿಕ ಕಾಲದ ಪರಿಕಲ್ಪನೆ. ಅಫೀರಾಳೋ, ಆ ಅಂಧಕಾರದ ಕಾಲದ ಯುಗದಲ್ಲಿ ಮಕ್ಕಾದಲ್ಲಿದ್ದ ಕುಡುಕರ ನಾಟ್ಯಾಲಯವೊಂದರಲ್ಲಿ ಹಾಡುಗಾರನೊಬ್ಬನ ಪತ್ನಿಯಾಗಿದ್ದವಳು.*

*'ನಿನಗೆ ನಾಟ್ಯಾಲಯಗಳ ಬಗ್ಗೆ ಒಳ್ಳೆಯ ಅಭಿಪ್ರಾಯಗಳೇ ಇದ್ದಂತಿಲ್ಲವಲ್ಲ?' ಅರ್ಷದ್ ನಕ್ಕಂತೆ ಕೇಳಿಸಿತು.*

*ಯಾವ ಬಗೆಯ ಪ್ರತಿಕ್ರಿಯೆ ನೀಡಬೇಕೆಂಬುದು ಹೊಳೆಯದೆ ಮೌನಕ್ಕೆ ಶರಣಾದೆ.*

*'ನೀನು ಎಂದಾದರೂ ಅಂಥ ಜಾಗಗಳಿಗೆ ಭೇಟಿ ಕೊಟ್ಟದ್ದಿದೆಯೆ?' ಅರ್ಷದ್ ನನ್ನನ್ನು ರೇಗಿಸಲೆಂದೇ ಕೇಳಿದ್ದಿರಬೇಕು.*

*'ನಾನು! ನಾಟ್ಯಾಲಯಕ್ಕೆ ಭೇಟಿ!' ಏನು ಹೇಳುತ್ತಿರುವಿ ನೀನು? ನಾನು ಅಂಥವನೆಂದು ನಿನಗೆ ಅನ್ನಿಸುತ್ತದೆಯ?' ಅಸಹನೆಯಿಂದಲೇ ಪ್ರಶ್ನಿಸಿದ್ದೆ.*

*'ಅಂಥವನು ಎಂದರೆ?' ಅರ್ಷದ್ ತೀಕ್ಷ್ಣವಾಗಿಯೇ ಪ್ರಶ್ನಿಸಿದ್ದ.*

*'ಅಂಥವನು ಎಂದರೇ.., ಎಂದರೆ..., ಏನೆಂದು ಹೇಳಲಿ ಗೆಳೆಯಾ? ನಿನಗೆ ತಿಳಿಯದ ಸಂಗತಿಯಾ ಅದು? ಆ ಅಸಹ್ಯದ ಮಾತನ್ನು ನನ್ನ ಬಾಯಿಂದಲೇ ಯಾಕೆ ಹೊರಡಿಸಲು ಒತ್ತಾಯಿಸುತ್ತಿರುವೆ ನೀನು?' ಬೇಸರ ದಿಂದಲೇ ಹೇಳಿದ್ದೆ.*

*'ಸಿಟ್ಟು ಮಾಡಿಕೊಳ್ಳಬೇಡ ಗೆಳೆಯಾ. ಒಮ್ಮೆಯೂ ಭೇಟಿ ನೀಡದ ಸ್ಥಳವೊಂದರ ಬಗ್ಗೆ ಅದು ಅಸಹ್ಯಕರವಾಗಿಯೇ ಇದ್ದೀತು ಎಂದು ಅಭಿಪ್ರಾಯ ರೂಪಿಸಿಕೊಳ್ಳುವುದು ಸರಿಯಾದ ನಿರ್ಧಾರವೇ ಎಂಬುದಾಗಿತ್ತು ನನ್ನ ಪ್ರಶ್ನೆ.'*

*'ಇದೊಳ್ಳೆಯ ತಮಾಷೆಯಾಯಿತಲ್ಲ. ವೇಶ್ಯಾವಾಟಿಕೆಯು ಸರಿಯೋ ತಪ್ಪೋ ಎಂಬುದನ್ನು ತಿಳಿಯಲು ಅಲ್ಲಿಗೆ ಹೋಗಿಯೇ ಪರಿಶೀಲಿಸಬೇಕೆ?' ಅವನನ್ನು ಮಾತಿನಲ್ಲೇ ಕಟ್ಟಿ ಹಾಕಿ ಗೆಲುವಿನ ನಗು ನಕ್ಕೆ.*

*'ಒಪ್ಪಿದೆ ಗೆಳೆಯಾ.' ಅರ್ಷದ್ ಹೇಳಿದ್ದ, 'ನಿನ್ನಂಥವರೆಲ್ಲ ತರ್ಕಗಳಲ್ಲಿ ಗೆಲ್ಲುವುದು ಹೀಗೆಯೇ. ಪ್ರಶ್ನೆಯೊಂದಕ್ಕೆ ಸರಿಯಾದ ಉತ್ತರ ಹೊಳೆಯದಿದ್ದಾಗ, ಅದಕ್ಕೆ ಸಂವಾದಿಯಾಗಿರುವ ಮತ್ತೊಂದು ಪ್ರಶ್ನೆ ಎಸೆದುಬಿಡುವುದು. ಹೋಗಲಿ ಬಿಡು. ಮುಂದೆ ಹೋಗೋಣವೆ?'*

*'ಹೋಗುವ. ಆದರೆ ಅದಕ್ಕಿಂತ ಮುನ್ನ ನನಗೊಂದು ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕಿದೆ' ಎಂದೆ.*

*'ಅದೇನಪ್ಪ ನಿನ್ನಿಂದಲೂ ಪರಿಹರಿಸಲಾಗದಿರುವ ಹೊಸ ಸಮಸ್ಯೆ?'*

*'ನೋಡು ಗೆಳೆಯಾ. ಬರೆಯುವವರ ಸಂಕಟ ನಿನಗೆ ಅರ್ಥವಾಗಲಾರದು. ಈಗ ನೋಡು, ಪ್ರವಾದಿಯವರ ಮೊದಲ ಮಗಳ ಹೆಸರು ಝೈನಬ್. ಹೊಸದಾಗಿ ಪ್ರವಾದಿ ಪತ್ನಿಯಾಗಿ ಬಂದಿರುವ ಖುಝೂಯ್ಮಾ ಪುತ್ರಿಯ ಹೆಸರೂ ಝೈನಬ್. ಮುಂದೆ ಪ್ರವಾದಿಪತ್ನಿಯಾಗಿ ಬರಲಿರುವ ಜಹಶ್ ಪುತ್ರಿಯ ಹೆಸರು ಕೂಡಾ ಝೈನಬ್.*

*ಇವರಲ್ಲಿ ಯಾವ ಝೈನಬ್ ಯಾರ ಮಗಳು ಎಂಬುದನ್ನು ನೆನಪಿರಿಸಿಕೊಳ್ಳಲೇ ಕಷ್ಟವಾಗುತ್ತಿದೆ. ನನಗೇ ಇಷ್ಟು ಗೊಂದಲವಾಗುತ್ತಿರುವಾಗ ಓದುಗರಿಗೆ ಹೇಗಾಗಬಹುದು? ಇವುಗಳನ್ನೆಲ್ಲ ಓದುಗರಿಗೆ ಅರ್ಥ ಮಾಡಿಸುವುದಾದರೂ ಹೇಗೆ?*

*'ಇಂಥವುಗಳ ಬಗ್ಗೆ ನೀನೂ ತಲೆಕೆಡಿಸಿಕೊಳ್ಳುತ್ತಿ ಎಂದು ನಾನು ಭಾವಿಸಿರಲಿಲ್ಲ. ನಿನಗೆ ನಾನು ಹೇಳಿಕೊಡಬೇಕೆ? ಬರೆಯಲಿರುವ ಕೃತಿಯ ಆರಂಭದಲ್ಲೋ, ಕೊನೆಯಲ್ಲೋ ಇವಿಷ್ಟನ್ನು ಟಿಪ್ಪಣಿಯ ರೂಪದಲ್ಲಿ ಬರೆದುಬಿಟ್ಟರೆ ನಿನ್ನ ಹೊಣೆ ಮುಗಿದುಬಿಡುತ್ತದೆಯಲ್ಲವೆ? ಈಗ ಬಾ.., ನಾವು ಹೊರಡೋಣ. ನಿನಗೆ ಮತ್ತೊಂದು ಮದುವೆ ಕಾಣಿಸುವೆ.'*

*ಅರ್ಷದ್ ನನ್ನನ್ನು ಕರೆದುಕೊಂಡು ಹೊರಟೇಬಿಟ್ಟಿದ್ದ.*

❐



## ಸ್ವಗತ – ಒಂಬತ್ತು

# ಉಮ್ಮು ಸಲಾಮಾ ಬಿಂತಿ ಅಬಿ ಉಮಯ್ಯಾ

–೧–

ನನ್ನ ಎರಡೂ ಕೈಗಳನ್ನು ಹಿಡಿದುಕೊಂಡ ಅಬ್ದುಲ್ಲಾ ನನ್ನ ಕೆನ್ನೆಗಳಲ್ಲಿ ಉರುಳುತ್ತಿದ್ದ ಉರುಟುರುಟು ನೀರಹನಿಗಳನ್ನು ಎಣಿಸುತ್ತಾ ಪ್ರಾರ್ಥಿಸಿದ್ದರು, 'ದಯಮಯನಾದ ಓ ಅಲ್ಲಾಹುವೆ, ನನ್ನ ಹೆಂಡತಿ ಉಮ್ಮು ಸಲಾಮಾಳಿಗೆ, ಅವಳನ್ನು ಎಂದೂ ನೋಯಿಸದ, ಎಂದೂ ಅವಮಾನಿಸದ ನನಗಿಂತಲೂ ಹೆಚ್ಚು ಉತ್ತಮನಾದ ಗಂಡನನ್ನು ಕರುಣಿಸು.'

ನನ್ನ ಗಂಡನ ಪ್ರಾರ್ಥನೆಯನ್ನು ಅಲ್ಲಾಹು ಬಲು ಬೇಗನೆ ಸ್ವೀಕರಿಸಿದ್ದ.

ನಾನು ವಿಧವೆಯಾಗಿದ್ದೆ. ನಮ್ಮಿಬ್ಬರು ಪುಟ್ಟ ಮಕ್ಕಳು ಅನಾಥರಾಗಿದ್ದರು.

ಇದ್ದತ್ ಅವಧಿಯನ್ನು ಪೂರೈಸುತ್ತಿರುವಂತೆಯೇ ನನಗೆ ಮದುವೆ ಪ್ರಸ್ತಾಪಗಳು ಬರತೊಡಗಿದ್ದವು. ಮೊದಲು, ಪ್ರವಾದಿಪತ್ನಿ ಆಯಿಷಾಳ ಅಬ್ಬ ಅಬೂಬಕರರು ಮದುವೆ ಪ್ರಸ್ತಾಪವಿಟ್ಟಿದ್ದರು. 'ನಾನು ನಿನ್ನನ್ನು ಮದುವೆಯಾಗಬಯಸುವೆ; ಸಮ್ಮತಿಸುವೆಯಾ?' ಎಂದು. ನಾನು ನಿರಾಕರಿಸಿದ್ದೆ. 'ಕ್ಷಮೆಯಿರಲಿ. ನನಗೆ ಅಸೂಯೆ ಹೆಚ್ಚು. ಮರಣಿಸಿದ ಗಂಡನನ್ನು ಇನ್ನೂ ಪ್ರೀತಿಸುತ್ತಿರುವ ಹೆಣ್ಣು ಬೇರೆ ಗಂಡಸಿನ ಹೆಂಡತಿಯಾಗಲಾರಳು' ಎಂಬ ಕಾರಣ ನೀಡಿದ್ದೆ.

ಆನಂತರದ ಒಂದು ದಿನ ಪ್ರವಾದಿಪತ್ನಿ ಹಪ್ಸಾರ ಅಬ್ಬ ಸಮರಸೇನಾನಿ ಉಮ್ಮರ್ ಬಿನ್ ಖತ್ತಾಬರು ಮದುವೆ ಪ್ರಸ್ತಾಪವಿಟ್ಟಿದ್ದರು. 'ನಿನ್ನನ್ನು ನಾನು ಮದುವೆಯಾಗ ಬಯಸುವೆ. ಸಮ್ಮತಿಸುವೆಯಾ?' ಎಂದು. ನಾನು ಅವರನ್ನೂ ನಿರಾಕರಿಸಿದ್ದೆ. 'ಕ್ಷಮಿಸಬೇಕು. ಮದುವೆಯ ವಯಸ್ಸನ್ನು ದಾಟಿರುವ ನಲುವತ್ತರ ಮಹಿಳೆ ನಾನು' ಎಂಬ

ಕಾರಣ ಮುಂದಿಟ್ಟಿದ್ದೆ. ಮೂರನೆಯದಾಗಿ ಸ್ವತಃ ಪ್ರವಾದಿಯವರೇ ಮದುವೆ ಪ್ರಸ್ತಾಪ ವಿಟ್ಟಿದ್ದರು. 'ನನ್ನನ್ನು ಮದುವೆಯಾಗುವಿಯಾ?' ನಾನು ಗಲಿಬಿಲಿಗೊಂಡಿದ್ದೆ. ಪ್ರವಾದಿ ಪತ್ನಿ ಎನ್ನಿಸಿಕೊಳ್ಳುವ ಅವಕಾಶ ಎದುರಲ್ಲಿ ನಿಂತು, ಬಾ ಅನ್ನುತ್ತಿತ್ತು. ಆದರೂ ನಿರಾಕರಿಸಿದ್ದೆ.

'ಪ್ರವಾದಿಯವರ ಕ್ಷಮೆಯಿರಲಿ. ನನಗೆ ಅಸೂಯೆ ಜಾಸ್ತಿ. ಮರಣಿಸಿದ ಗಂಡ ಅಬ್ದುಲ್ಲಾರನ್ನು ಇನ್ನೂ ಪ್ರೀತಿಸುತ್ತಿರುವ ನಾನು ಬೇರೊಬ್ಬ ಗಂಡಸಿನ ಹೆಂಡತಿ ಯಾಗಲಾರೆ. ನನಗೆ ಮದುವೆ ವಯಸ್ಸು ದಾಟಿದೆ. ನಲುವತ್ತು ದಾಟಿರುವವಳು ನಾನು. ನನ್ನ ಕುಟುಂಬದಲ್ಲಿ ನಿರ್ಗತಿಕರಾದ ಮಕ್ಕಳೂ ಇದ್ದಾರೆ. ನಿರ್ಧಾರ ತೆಗೆದುಕೊಳ್ಳಬಹುದಾದ ಹಿರಿಯರಾರೂ ನನ್ನ ಕುಟುಂಬದಲ್ಲಿ ಇಲ್ಲ. ಆದ್ದರಿಂದ...'

ನನ್ನ ಮಾತುಗಳನ್ನು ಅರ್ಧದಲ್ಲೇ ತಡೆದ ಪ್ರವಾದಿಯವರೇ ಪ್ರತಿಕ್ರಿಯಿಸಿದ್ದರು, 'ನಿನಗೆ ವಯಸ್ಸಾಗಿದೆ ಎನ್ನುತ್ತಿರುವೆ, ವಯಸ್ಸಾಗಿರುವವಳು ತನಗಿಂತ ಹೆಚ್ಚು ವಯಸ್ಸಾ ಗಿರುವ ಗಂಡನ್ನು ಮದುವೆಯಾಗಲು ನಾಚಿಕೆಪಡಬೇಕಿಲ್ಲ. ನಿರ್ಗತಿಕ ಮಕ್ಕಳ ತಾಯಿ ಎನ್ನುತ್ತಿರುವೆ. ನಿರ್ಗತಿಕರ ಹೊಣೆ ಅಲ್ಲಾಹುವಿನದ್ದು, ಇನ್ನು ಮುಂದೆ ನಿನ್ನ ಕುಟುಂಬ ನನ್ನ ಕುಟುಂಬ. ನಿನಗೆ ಅಸೂಯೆ ಜಾಸ್ತಿ ಅನ್ನುತ್ತಿರುವೆ. ನಿನ್ನೊಳಗಿರುವ ಅಸೂಯೆಯನ್ನು ನಿವಾರಿಸುವಂತೆ ನಾನು ಅಲ್ಲಾಹುವನ್ನು ಪ್ರಾರ್ಥಿಸುವೆ. ನಿರ್ಧಾರ ತೆಗೆದುಕೊಳ್ಳಬಹುದಾದ ಹಿರಿಯರಾರೂ ನಿನ್ನ ಕುಟುಂಬದಲ್ಲಿ ಇಲ್ಲ ಎನ್ನುತ್ತಿರುವೆ. ನಿನ್ನ ಜೊತೆಗೆ ಇರಬಹು ದಾಗಿದ್ದ ಹಿರಿಯರಾರೂ, ನನ್ನ ಮದುವೆ ಪ್ರಸ್ತಾಪವನ್ನು ತಿರಸ್ಕರಿಸುವವರಲ್ಲ.'

ಬಹಳ ಹೊತ್ತು ನಾನು ಗೊಂದಲದಲ್ಲಿ ಮುಳುಗಿದ್ದೆ.

ಪಕ್ಕದಲ್ಲೇ ನಿಂತಿದ್ದ ಮಗ ಸಲಾಮನಿಗೆ ಹೇಳಿದೆ, 'ಮಗೂ, ಅಲ್ಲಾಹುವಿನ ಸಂದೇಶವಾಹಕರ ಜೊತೆಗೆ ನಡೆಯಲಿರುವ ನಿನ್ನ ಉಮ್ಮಾನ ಮದುವೆಗೆ ನೀನೇ ಸಾಕ್ಷಿಯಾಗಿರು.'

ನಾನು 'ಪ್ರವಾದಿಪತ್ನಿ' ಎಂಬ ಗೌರವಕ್ಕೆ ಪಾತ್ರಳಾಗಿದ್ದೆ.

## –೨–

'ನಿಲ್ಲು!'

ಗಂಡಸಿನ ಗಡಸು ಧ್ವನಿ ಕೇಳಿಸಿದಾಗ ಎದೆ ತಣ್ಣಗಾಗಿತ್ತು. ಎರಡು ವರ್ಷಗಳ ಹಿಂದಿನ ನಡು ಮಧ್ಯಾಹ್ನದ ಬಿಸಿಲು ಹೊಳೆಯುವ ಹೊತ್ತು ಅದು. ಬೆಚ್ಚಿ ಹಿಂದಕ್ಕೆ ತಿರುಗಿ ನೋಡಿದರೆ, ನಡುವಯಸ್ಸಿನ ವ್ಯಕ್ತಿಯೊಬ್ಬರು ನಾನು ಪ್ರಯಾಣಿಸುತ್ತಿದ್ದ ಒಂಟೆಯ ಪಕ್ಕದಲ್ಲಿ ನಿಂತಿದ್ದರು. ನಾನವರ ಗುರುತು ಹಿಡಿದಿದ್ದೆ. ಕಅಬಾ ದೇವ ಮಂದಿರದ ಉಸ್ತುವಾರಿಯಾಗಿರುವ ತಲ್ಹಾ ಪುತ್ರ ಉಸ್ಮಾನ್ ಅವರು.





'ಎಲ್ಲಿಗೆ ಹೊರಟಿರುವೆ?' ಪ್ರಶ್ನಿಸಿದ್ದರು ಅವರು.

'ಮದೀನಾಕ್ಕೆ' ಎಂದೆ; ಅಳುಕುತ್ತಾ.

'ಏನು? ಮದೀನಾಕ್ಕೆ! ಒಬ್ಬಳೆ!' ಅವರ ಮಾತಿನಲ್ಲಿ ಆತಂಕವಿದ್ದಂತೆ ಅನ್ನಿಸಿತ್ತು.

ಗಂಡಿನ ಜೊತೆಯಿಲ್ಲದೆ ಹೆಣ್ಣೊಬ್ಬಳು ಅಷ್ಟು ದೂರಕ್ಕೆ ಪ್ರಯಾಣ ಬೆಳೆಸುವುದು ಅಪಾಯವೆಂಬುದು ನನಗೂ ತಿಳಿದಿತ್ತು. ಬೇರೆ ದಾರಿಯಿದ್ದಿರಲಿಲ್ಲ. ಮಡಿಲಲ್ಲಿ ಮಲಗಿದ್ದ ಮಗ ಸಲಾಮ ಎದ್ದು ಕಣ್ಣು ಪಿಳಿ ಪಿಳಿ ಮಾಡುತ್ತಿದ್ದ. ಬೇರೇನೋ ಹೇಳಬೇಕೆಂದು ಯೋಚಿಸುತ್ತಿರುವಂತೆಯೇ ಬಾಯಿಂದ ಮಾತು ತಪ್ಪಿಸಿಕೊಂಡಿತ್ತು. 'ಈ ಮಗು ಜೊತೆಯಲ್ಲಿದೆಯಲ್ಲಾ?' ಎನ್ನುತ್ತಾ ನನ್ನ ಮಡಿಲಲ್ಲಿರುವ ಎರಡು ವರ್ಷದ ಮಗನನ್ನು ತೋರಿಸಿದೆ.'

ನನ್ನ ಮಾತು, ಉಡಾಫೆಯೆಂದು ಅವರಿಗೆ ಅನ್ನಿಸಿದ್ದಿರಬೇಕು. ಯಾಕೆಂದರೆ, ಒಂಟೆಯ ಮೇಲೆ ಎತ್ತರದಲ್ಲಿ ಕುಳಿತಿರುವ ನನ್ನ ಕಣ್ಣುಸಂದಿಗಳಲ್ಲಿ ಜಾರುತ್ತಿದ್ದ ನೀರಬಿಂದುಗಳನ್ನು ಅವರು ಕಾಣಲು ಸಾಧ್ಯವಿದ್ದಿರಲಿಲ್ಲ.

'ಅದು ನನಗೆ ಗೊತ್ತು. ಯಾವ ಗಂಡಿನ ರಕ್ಷಣೆಯಿದೆಯೆಂದು ಅಷ್ಟು ದೂರಕ್ಕೆ ಪ್ರಯಾಣ ಮಾಡುತ್ತಿದ್ದೀಯಾ?' ಸಿಟ್ಟು ಇಣುಕುತ್ತಿತ್ತು ಅವರ ಮಾತಿನಲ್ಲಿ. ಬೆದರಿದ ನಾನು ಉತ್ತರಿಸಲಿಲ್ಲ. ಸುಮ್ಮನಾಗಿದ್ದೆ.

'ನೀನೊಬ್ಬಳೇ ಅಷ್ಟು ದೂರದ ಪ್ರಯಾಣ ಮಾಡುವುದು ಸರಿಯಲ್ಲ. ನಿನ್ನ ಜೊತೆ ಕುಟುಂಬದವರೇಕೆ ಬರಲಿಲ್ಲ?' ಈ ಬಾರಿ ಅವರ ಧ್ವನಿಯಲ್ಲಿ ಸಾಂತ್ವನವಿತ್ತು. ಆಗಲೂ ಮೌನವಹಿಸಿದ್ದೆ ನಾನು.

'ನನ್ನ ಪ್ರಶ್ನೆಗೆ ನೀನಿನ್ನೂ ಉತ್ತರಿಸಿಲ್ಲ.' ಅವರು ಮತ್ತೊಮ್ಮೆ ಪ್ರಶ್ನಿಸಿದ್ದರು.

'ನನ್ನ ಜೊತೆಗಿರುವ ಅಲ್ಲಾಹುವೇ ನನ್ನ ಕುಟುಂಬ' ಎಂದೆ.

ನಾನು ನಿರೀಕ್ಷಿಸಿದ್ದಂತೆಯೇ ಅವರ ಮುಖ ಗಂಟಿಕ್ಕಿಕೊಂಡಿತ್ತು. ಅದು ಅಸಹಜವೇನೂ ಆಗಿದ್ದಿರಲಿಲ್ಲ. ಕಅಬಾ ಮಂದಿರದಲ್ಲಿರುವ ಕಲ್ಲು ಮೂರ್ತಿಗಳ ನಿರ್ವಹಣೆಯ ಹೊಣೆ ಹೊತ್ತುಕೊಂಡಿರುವ ಉಸ್ಮಾನರಿಗೆ, ಪ್ರವಾದಿಯವರು ಬೋಧಿಸುತ್ತಿದ್ದ ಅಂತಿಮಸತ್ಯದ ಮೇಲೆ ವಿಶ್ವಾಸವಿರಲು ಸಾಧ್ಯವಿರಲಿಲ್ಲ. ಅವರೂ ಮಾತಿಗಾಗಿ ತಡವರಿಸುತ್ತಿದ್ದಂತೆ ಕಾಣಿಸಿತು.

ಮುಂದಕ್ಕೆ ಹೊರಡಲು ಸಿದ್ಧಳಾಗಿ ಒಂಟೆಯ ಹೊಟ್ಟೆಗೆ ಮೆತ್ತಗೆ ತುಳಿದೆ. ಒಂಟೆ ಮುಂದಕ್ಕೆ ಸಾಗಲು ಬಲಗಾಲು ಎತ್ತಿತ್ತು.

'ನಿಲ್ಲು ಉಮ್ಮು ಸಲಾಮಾ.' ಈ ಬಾರಿ ವಿನಂತಿಯಿರಲಿಲ್ಲ; ಆದೇಶವಿತ್ತು.

ನನಗರಿವಿಲ್ಲದೆ ಒಂಟೆಯ ಜೀನು ಹಿಡಿದೆಳೆದಿದ್ದೆ. ಒಂಟೆ ನಿಂತುಬಿಟ್ಟಿತು.

ಅವರು ಅತ್ತಿತ್ತ ನೋಡಿದರು. ಸ್ವಲ್ಪ ದೂರದಲ್ಲಿದ್ದ ಖರ್ಜೂರದ ಮರವೊಂದರತ್ತ ಬೊಟ್ಟು ಮಾಡಿ, 'ಆ ಮರದ ಬಳಿಗೆ ಒಂಟೆಯನ್ನು ನಡೆಸು' ಎಂದರು.

ನಿರುಪಾಯಳಾದ ನಾನು ಹಾಗೆಯೇ ಮಾಡಿದೆ. ಒಂಟೆಯನ್ನು ಹಿಂಬಾಲಿಸಿಕೊಂಡು ಮರದ ಬಳಿಗೆ ಬಂದ ಅವರು, 'ಒಂಟೆಯನ್ನು ಕುಳಿತುಕೊಳ್ಳಲು ಹೇಳು' ಎಂದರು. ಹಾಗೆಯೇ ಮಾಡಿದೆ. ತನ್ನ ಹೊಟ್ಟೆಯನ್ನು ನೆಲಕ್ಕೆ ಒರಗಿಸಿದ ಒಂಟೆ ಕುಳಿತಿತು.

'ಇಳಿ' ಎಂದರು. ಮಗನನ್ನು ಎದೆವಚಿಕೊಂಡು ಇಳಿದೆ.

'ನೀನಿಲ್ಲೇ ಸ್ವಲ್ಪ ಹೊತ್ತು ಕುಳಿತಿರು. ಮದೀನಾದವರೆಗೆ ನಿನ್ನ ಜೊತೆಗೆ ಬರಲು ಸಿದ್ಧರಿರುವ ಗಂಡಸು ಯಾರಾದರೂ ಸಿಗುತ್ತಾರೆಯೇ ಎಂದು ವಿಚಾರಿಸಿಕೊಂಡು ಬರುವೆ' ಎಂದವರು, ನಾನವರ ಆದೇಶವನ್ನು ಮೀರಲಾರೆ ಎಂಬ ಭರವಸೆಯಿದ್ದವರಂತೆ, ತಿರುಗಿಯೂ ನೋಡದೆ ದಾಪುಗಾಲು ಹಾಕುತ್ತಾ ಹೋಗಿಬಿಟ್ಟರು.

ನಾನು ಗೊಂದಲದಲ್ಲಿ ಮುಳುಗಿದ್ದೆ.

ಅವಿಶ್ವಾಸಿಯಾಗಿರುವ ಉಸ್ಮಾನರು, ಸತ್ಯವಿಶ್ವಾಸಿಯಾಗಿರುವ ನನಗೆ ಸಹಾಯ ಮಾಡಬಹುದೆಂಬ ವಿಶ್ವಾಸ ನನಗಿರಲಿಲ್ಲ. ಪ್ರಯಾಣದ ಅವಧಿಯಲ್ಲಿ ನನ್ನ ರಕ್ಷಣೆಗೆ ಗಂಡಸೊಬ್ಬನನ್ನು ಕರೆದುಕೊಂಡು ಬರುವೆ ಎಂದು ಹೇಳಿದವರು, ತಮ್ಮ ಜೊತೆಗಾರ ಅವಿಶ್ವಾಸಿಗಳ ತಂಡವನ್ನು ಕರೆದುಕೊಂಡು ಬಂದು ಮದೀನಾಕ್ಕೆ ಹೋಗದಂತೆ ನನ್ನನ್ನು ತಡೆದರೆ ನನ್ನಿಂದೇನು ಮಾಡಲು ಸಾಧ್ಯವಾದೀತು? ವರುಷವೊಂದರ ಹಿಂದೆ ಗಂಡನ ಜೊತೆಗೆ ಮದೀನಾಕ್ಕೆ ಹೊರಟಿದ್ದ ನನ್ನನ್ನು ಹೀಗೆಯೇ ತಡೆದು ನಿಲ್ಲಿಸಿದವರಲ್ಲವೇ ಈ ಅವಿಶ್ವಾಸಿಗಳು?

ಆ ಕರಾಳ ಘಟನೆ ನೆನಪಾಗಿ ಮೈ ಕಂಪಿಸಿತು. ಇವರು ನನ್ನನ್ನು 'ಉಮ್ಮು ಸಲಾಮಾ' ಎಂದು ಸಂಬೋಧಿಸಿದಾಗಲೇ ಖಚಿತವಾಗಿತ್ತು; ಉಸ್ಮಾನರಿಗೆ ನಾನು ಯಾರೆಂಬುದು ಚೆನ್ನಾಗಿ ಗೊತ್ತಿದೆ ಎಂದು.

ನನ್ನ ನಿಜವಾದ ಹೆಸರು ಉಮ್ಮು ಸಲಾಮಾ ಅಲ್ಲ. ಮೂಲ ಹೆಸರು ಹಿಂದ್. ಅಬೂಸುಫ್ಯಾನರ ಹೆಂಡತಿಯೊಬ್ಬಳ ಹೆಸರೂ ಹಿಂದ್ ಎಂದು ಇದ್ದುದರಿಂದ, ಮೊದಲ ಮಗ 'ಸಲಾಮ' ಹುಟ್ಟಿದ ಬಳಿಕ ಎಲ್ಲರೂ ನನ್ನನ್ನು ಉಮ್ಮು ಸಲಾಮಾ ಎಂದೇ ಕರೆಯಲಾರಂಭಿಸಿದ್ದರು. ಉಮ್ಮು ಸಲಾಮಾ ಎಂದರೆ, ಸಲಾಮನ ಉಮ್ಮ ಎಂದರ್ಥ. ನನ್ನಬ್ಬ ಅಬಿ ಉಮಯ್ಯಾ ಬಲು ಸಿರಿವಂತರಾಗಿದ್ದರು. ಕುರೈಶರ ನಡುವೆ ನನ್ನಬ್ಬ ಅದೆಷ್ಟು ಪ್ರಭಾವಿಯಾಗಿದ್ದರೋ ಅಷ್ಟೇ ಉದಾರಿಯೂ ಆಗಿದ್ದರು. ಸಹಾಯ ಯಾಚಿಸಿ ಬಂದ ಯಾರನ್ನೂ ನಿರಾಸೆಗೊಳಿಸಿದವರಲ್ಲ. ಪ್ರಯಾಣದ ತಂಡದಲ್ಲಿ ನನ್ನಬ್ಬ ಇರುತ್ತಾರೆ ಎಂದಾದರೆ, ಉಳಿದ ವರ್ತಕರಾರೂ ಆಹಾರ ಸಾಮಾಗ್ರಿಗಳನ್ನು ಹೊತ್ತುಕೊಂಡು ಬರಲು ಅವಕಾಶವಿರಲಿಲ್ಲ. ಇಡೀ ತಂಡದ ಹಸಿವು ನೀಗಿಸುವ ಹೊಣೆ ಹೊರುತ್ತಿದ್ದವರು ನನ್ನಬ್ಬ. ನನ್ನ ಉಮ್ಮನಂತೂ ಅಬ್ಬನಿಗಿಂತಲೂ ಹೆಚ್ಚು ಹೃದಯವಂತೆ. ಜೊತೆಗಿರುವ





ಎಲ್ಲರ ಹೊಟ್ಟೆ ತುಂಬಿಸಿದ ಬಳಿಕವೇ ಉಣ್ಣುವ ಉಮ್ಮ ಅವರು. ಒಟ್ಟಿನಲ್ಲಿ ನಮ್ಮ ಕುಟುಂಬದವರನ್ನು ಎಲ್ಲರೂ ಗೌರವಾದರಗಳಿಂದಲೇ ಕಾಣುತ್ತಿದ್ದರು.

ಆದರೆ, ಯಾವಾಗ ನನ್ನ ಗಂಡ ಅಬೂಸಲಾಮಾ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೋ, ಆ ಕ್ಷಣದಿಂದ ಇಡೀ ಕುಟುಂಬವೇ ಕುರೈಶರ ಕಣ್ಣುಗಳಿಗೆ ಮುಳ್ಳಾಯಿತು. ಮಕ್ಕಾದ ಪ್ರಸಿದ್ಧ ವರ್ತಕರಲ್ಲೊಬ್ಬರಾಗಿದ್ದ ನನ್ನ ಗಂಡ ಅಬುಸಲಾಮಾರಿಗೆ ಬದುಕೇ ಅಸಹ್ಯವಾಗತೊಡಗಿತ್ತು. ಮುಂದಿನ ದಾರಿ ತಿಳಿಯದೆ ಪರಿತಪಿಸುತ್ತಿದ್ದಾಗ, ಅಬಿಸೀನಿಯಾಕ್ಕೆ ವಲಸೆ ಹೋಗುವಂತೆ ಪ್ರವಾದಿಯವರು ಸಲಹೆ ಮಾಡಿದ್ದರು. ಮಕ್ಕಾದಿಂದ ಅಬಿಸೀನಿಯಾಕ್ಕೆ ವಲಸೆ ಹೊರಟಿದ್ದ ಮೊತ್ತ ಮೊದಲ ಹದಿನೆಂಟು ನಿರಾಶ್ರಿತರ ತಂಡವನ್ನು ನಾವಿಬ್ಬರೂ ಸೇರಿಕೊಂಡೆವು.

ರಾಜ ನಜ್ಜಾಶೀಯವರ ರಕ್ಷಣೆಯಲ್ಲಿ ಅಬಿಸೀನಿಯಾದಲ್ಲಿ ಸುಖವಾಗಿಯೇನೋ ಇದ್ದೆವು. ಕೆಲವು ತಿಂಗಳ ಬಳಿಕ, ಪ್ರವಾದಿಯವರ ಕಡು ವೈರಿಯಾಗಿದ್ದ ಉಮ್ಮರ್ ಬಿನ್ ಖತ್ತಾಬರೂ ಇಸ್ಲಾಮ್ ಸ್ವೀಕರಿಸಿದರೆಂಬ ಸುದ್ದಿ ಅಲ್ಲಿಗೆ ತಲುಪಿತ್ತು. ಆ ಮಹಾವೀರ ಉಮ್ಮರ್ ಬಿನ್ ಖತ್ತಾಬರ ಎದುರು ಕುರೈಶರ ಆಟ ನಡೆಯದು ಎಂಬ ವಿಶ್ವಾಸದಿಂದ ನಾವು ಅಬಿಸೀನಿಯಾದಿಂದ ಮಕ್ಕಾಕ್ಕೆ ಮರಳಿದ್ದೆವು. ಆದರೆ ನಮ್ಮ ನಂಬಿಕೆ ಹುಸಿಯಾಗಿತ್ತು. ಮಕ್ಕಾದಲ್ಲಿ ವಿಶ್ವಾಸಿಗಳ ಬದುಕು ಮತ್ತಷ್ಟು ಚಿಂತಾಜನಕವಾಗಿತ್ತು. ಪುನಃ ಅಬಿಸೀನಿಯಾಕ್ಕೆ ಮರಳುವ ಯೋಚನೆಯಲ್ಲಿದ್ದ ನಮಗೆ, ಮದೀನಾದ ಅಲ್–ಮುನವ್ವರಕ್ಕೆ ವಲಸೆ ಹೋಗಲು ಪ್ರವಾದಿಯವರು ಸಲಹೆ ನೀಡಿದ್ದರು. ನಾವು ಪ್ರವಾದಿಯವರ ಸಲಹೆಯನ್ನು ಎಂದೂ ತಳ್ಳಿ ಹಾಕಿದವರಲ್ಲ. ಒಂಟೆಯೊಂದನ್ನು ಖರೀದಿಸಿ, ವರ್ಷವೂ ಪೂರ್ತಿಯಾಗಿರದಿದ್ದ ಪುಟ್ಟ ಮಗನನ್ನು ಜೊತೆಯಲ್ಲಿರಿಸಿಕೊಂಡು ಮದೀನಾಕ್ಕೆ ಹೊರಟಿದ್ದೆವು. ಆದರೆ, ಮಕ್ಕಾದ ಗಡಿ ದಾಟುವ ಮುನ್ನವೇ ನನ್ನ ತವರಿನ ಕಡೆಯ ಬನೀ ಮಖ್ಝೂಮ್ ತಂಡದವರು ನಮ್ಮನ್ನು ತಡೆದು ನಿಲ್ಲಿಸಿದ್ದರು.

ನನ್ನ ಗಂಡನನ್ನುದ್ದೇಶಿಸಿ, 'ನಿನ್ನನ್ನು ನಾವು ತಡೆಯುವುದಿಲ್ಲ. ನಿನಗಿಷ್ಟಬಂದ ಊರಿಗೆ ನೀನು ಹೋಗಬಹುದು. ಆದರೆ, ನಿನ್ನ ಹೆಂಡತಿ ಮತ್ತು ಮಗನನ್ನು ಕರೆದುಕೊಂಡು ಹೋಗುವ ಹಕ್ಕು ನಿನಗಿಲ್ಲ. ಇವಳು ನಮ್ಮ ಮಗಳು, ಇವಳ ಮಗ ನಮ್ಮ ಮಗ. ನಮ್ಮ ಕಣ್ಣು ತಪ್ಪಿಸಿ ಇವರನ್ನು ಕರೆದುಕೊಂಡು ಹೋಗಲು ಸಾಧ್ಯವಾದೀತು ಎಂದು ಭಾವಿಸಿದ್ದೆಯಾ ಮೂರ್ಖ?' ಎಂದು ಜರೆಯುತ್ತಲೇ ನನ್ನ ಗಂಡನ ಮುಖಕ್ಕೆ ಮುಷ್ಟಿಯಿಂದ ಬಲವಾಗಿ ಗುದ್ದಿ ನೆಲಕ್ಕುರುಳಿಸಿದರು. ನನ್ನ ಮಗನ ಜೊತೆಗೆ ನನ್ನನ್ನೂ ಹಿಡಿದು ಎಳೆದುಕೊಂಡರು. ದೂರದಿಂದ ಈ ಗಲಾಟೆಯನ್ನು ಗಮನಿಸುತ್ತಿದ್ದ ನನ್ನ ಗಂಡನ ಬಂಧುಗಳು ಓಡಿ ಬಂದು ನೆಲಕ್ಕೆ ಉರುಳಿದ್ದ ನನ್ನ

ಗಂಡನನ್ನು ಹಿಡಿದೆತ್ತಿದರು. ನನಗೆ ಸಹಾಯ ಮಾಡಬಹುದೆಂಬ ಆಸೆಯಲ್ಲಿ ನಾನು ಸ್ವಲ್ಪ ನಿರಾಳಳಾಗಿದ್ದರೆ, 'ಅಬುಸಲಾಮ್ ನಮ್ಮ ಮಗ. ಇವರ ಮೇಲೆ ನಿಮಗೆ ಹಕ್ಕಿಲ್ಲ' ಎನ್ನುತ್ತಾ ತಮ್ಮ ಜೊತೆ ಎಳೆದುಕೊಂಡೇ ಹೋಗಿಬಿಟ್ಟರು.

ನೋಡು ನೋಡುತ್ತಿರುವಂತೆಯೇ ಆ ನಿರ್ಜನ ಪ್ರದೇಶದಲ್ಲಿ ನಾನು ಒಂಟಿಯಾಗಿದ್ದೆ. ಮರುದಿನದಿಂದ ಪ್ರತಿ ಮಧ್ಯಾಹ್ನವೂ ಆ ಪ್ರಕರಣ ನಡೆದ ಜಾಗದ ಬಳಿ ಹೋಗಿ, ಸೂರ್ಯಾಸ್ತದವರೆಗೂ ಕಣ್ಣೀರು ಸುರಿಸಿ ಮರಳುತ್ತಿದ್ದೆ. ಒಂದು ವರ್ಷದ ಬಳಿಕದ ಒಂದು ದಿನ ಆ ದಾರಿಯಲ್ಲಿ ಸಾಗುತ್ತಿದ್ದ ಬನೂ ಉಮಯ್ಯಾ ಪಂಗಡದ ಒಬ್ಬರು ನನ್ನ ಬಗ್ಗೆ ಮರುಕಪಟ್ಟು, ನನ್ನ ತವರಿಗೆ ಹೋಗಿ ಹಿರಿಯರನ್ನೆಲ್ಲಾ ಕಂಡು, ಮದೀನಾದಲ್ಲಿರುವ ಗಂಡನ ಬಳಿಗೆ ನನ್ನನ್ನು ಕಳುಹಿಸುವಂತೆ ಮನವೊಲಿಸಿದರು. ಅವರೂ ಒಪ್ಪಿದ್ದರು. ಆದರೆ, ನನ್ನ ಪುಟ್ಟ ಮಗುವನ್ನು ಮಕ್ಕಾದಲ್ಲಿರುವ ಬನೂ ಅಸದ್ ತಂಡದವರ ಬಳಿ ಬಿಟ್ಟು ನಾನು ಮದೀನಾಕ್ಕೆ ತೆರಳಲು ಹೇಗೆ ಸಾಧ್ಯ? ಸಂಧಾನದ ಯತ್ನಗಳು ಮುಂದುವರಿಯಿತು. ಕೊನೆಗೂ ನನ್ನ ಆಸೆ ನೆರವೇರಿತು. ನನ್ನ ಮಗನನ್ನು ನನಗೆ ಒಪ್ಪಿಸಿದರು.

ಅದಷ್ಟು ದೂರದ ಮದೀನಾಕ್ಕೆ ಒಂಟಿಯಾಗಿ, ಅದರಲ್ಲೂ ಒಬ್ಬಳು ಹೆಣ್ಣಾಗಿ ಹೋಗುವುದು ಹೇಗೆ? ಆದರೆ, ಅದೆಷ್ಟು ಸಾಧ್ಯವೋ ಅಷ್ಟು ಬೇಗ ಮಕ್ಕಾವನ್ನು ತೊರೆಯದಿದ್ದರೆ, ನನ್ನ ಮೇಲೆ ಕರುಣೆ ತೋರಿದವರ ಮನಸ್ಸುಗಳು ಬದಲಾಗುವ ಅನುಮಾನಗಳೂ ಕಾಡುತ್ತಿದ್ದವು. ಬಹಷ್ಟು ಯೋಚಿಸಿದ ಬಳಿಕವೇ ಒಂಟಿಯಾಗಿ ತೆರಳಲು ನಿರ್ಧರಿಸಿದ್ದೆ. ನನ್ನ ಮಗನನ್ನು ನನ್ನ ತೊಡೆಯ ಮೇಲೆ ಇರಿಸಿಕೊಂಡು, ಒಂಟೆಯೇರಿ ಮದೀನಾದತ್ತ ಹೊರಟಿದ್ದೆ. ಆದರೆ, ಈ ಬಾರಿಯೂ ಅವಿಶ್ವಾಸಿಯೊಬ್ಬರು ನನ್ನನ್ನು ತಡೆದು ನಿಲ್ಲಿಸಿಬಿಟ್ಟಿದ್ದರು. ನಿರ್ಜನ ಜಾಗದಲ್ಲಿ ನನ್ನನ್ನು ಮಗನ ಜೊತೆಗೆ ಒಂಟಿಯಾಗಿ ಇರುವಂತೆ ಮಾಡಿದ್ದರು.

ಸಾಧ್ಯವಾದಷ್ಟು ವೇಗವಾಗಿ ಒಂಟೆಯನ್ನು ಓಡಿಸಿಕೊಂಡು ಹೋಗಲೆ? ಹಾಗೆ ಹೋದರೂ ಅವಿಶ್ವಾಸಿಗಳ ತಂಡದವರು ಕುದುರೆಗಳಲ್ಲಿ ಹಿಂಬಾಲಿಸಿಕೊಂಡು ಬಂದು ದಾರಿಗಡ್ಡ ನಿಲ್ಲುವ ಸಾಧ್ಯತೆಗಳೂ ಇದ್ದವು. ಯಾವುದನ್ನೂ ನಿರ್ಧರಿಸಲಾಗದೆ ಗೊಂದಲದಲ್ಲಿರುವಂತೆಯೇ ಉಸ್ಮಾನರು ಮರಳಿ ಬಂದಿದ್ದರು. ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ! ಕಅಬಾದ ಕಲ್ಲುದೇವರುಗಳ ರಕ್ಷಕನ ಜೊತೆಗೆ ಪ್ರಯಾಣದ ಚೀಲವೊಂದರ ಹೊರತಾಗಿ ಬೇರಾರೂ ಇರಲಿಲ್ಲ.

ನಾನು ಎದ್ದು ನಿಂತೆ. 'ಒಂಟೆಯೇರು' ಎಂದರು. ಮಗನನ್ನು ಎತ್ತಿಕೊಂಡು ಒಂಟೆಯ ಮೇಲೆ ಕುಳಿತೆ.

ಅವರು ಒಂಟೆಯ ಜೀನನ್ನು ತಮ್ಮ ಎಡಗೈಯಲ್ಲಿ ಹಿಡಿದುಕೊಂಡು ಮುಂದಕ್ಕೆ ನಡೆದರು. ಉಸ್ಮಾನರ ಸಜ್ಜನಿಕೆಗೆ ಮನಸೋತ ಸೂರ್ಯನೂ ತಂಪಾಗಿದ್ದ.





ಸತ್ಯವಿಶ್ವಾಸಿಯಾಗದಿರುವವರಲ್ಲೂ ಹೃದಯವಂತರು ಇರಲು ಸಾಧ್ಯ ಎಂಬುದಕ್ಕೆ ಉಸ್ಮಾನರು ಬಲ್ಲುದೊಡ್ಡ ಸಾಕ್ಷ್ಯವೆಂಬಂತೆ ವರ್ತಿಸುತ್ತಿದ್ದರು. ರಾತ್ರಿ ತಂಗುವ ಪ್ರದೇಶ ಬಂದಾಗಲೆಲ್ಲ ನಾನು ಕುಳಿತಿದ್ದ ಒಂಟೆಯನ್ನು ಬಾಗಿಸಿ ಕುಳ್ಳಿರಿಸಿ ನನಗೆ ಇಳಿಯಲು ಹೇಳುತ್ತಿದ್ದರು. ಒಂಟೆಯನ್ನು ಹತ್ತಿರದ ಮರದ ಕಾಂಡಕ್ಕೆ ಕಟ್ಟುತ್ತಿದ್ದರು. ಸ್ವಲ್ಪ ದೂರದಲ್ಲಿರುವ ಮತ್ತೊಂದು ಮರದ ಬಳಿ ಹೋಗಿ ನಿದ್ರಿಸುತ್ತಿದ್ದರು. ಮರು ಮುಂಜಾನೆ ನಾನು ಹೊರಡಲು ಸಿದ್ಧಳಾಗುತ್ತಿದ್ದಂತೆ ಎದ್ದು ಬರುತ್ತಿದ್ದರು. ನನ್ನನ್ನು ಒಂಟೆಯೇರಿಸಿ ಅದರ ಜೀನು ಹಿಡಿದು ಮುನ್ನಡೆಸುತ್ತಿದ್ದರು. ಮದೀನಾಕ್ಕೆ ಎರಡು ಮೈಲು ದೂರದಲ್ಲಿದ್ದ ಕುಬಾ ತಲುಪುವವರೆಗೂ ಇದು ಅವರ ದಿನಚರಿಯಾಗಿತ್ತು.

ಆ ಪ್ರದೇಶವು ಬನೂ ಅಮ್ರ ಬಿನ್ ಔಫ್‌ರಿಗೆ ಸೇರಿತ್ತು.

ಪ್ರಯಾಣದುದ್ದಕ್ಕೂ ನನ್ನನ್ನು ಒಮ್ಮೆಯಾದರೂ ನೇರವಾಗಿ ನೋಡಿರದಿದ್ದ ಉಸ್ಮಾನರು, ಮೊದಲ ಬಾರಿ ನನ್ನತ್ತ ಪ್ರೀತಿಯಿಂದ ದಿಟ್ಟಿಸಿ ನೋಡುತ್ತಾ, 'ನಿನ್ನ ಗಂಡ ಈ ಹಳ್ಳಿಯಲ್ಲಿದ್ದಾರೆ ಮಗು. ಒಳ್ಳೆಯ ದಿನಗಳು ನಿನಗಾಗಿ ಕಾಯುತ್ತಿವೆ' ಎಂದರು. ನನ್ನ ಮಗನ ತಲೆ ಸವರಿದರು. ಕೆಲವು ನಾಣ್ಯಗಳನ್ನು ಅವನ ಕೈಯಲ್ಲಿರಿಸಿದರು. ಮುಂಡಾಸಿನ ತುದಿಯಿಂದ ತಮ್ಮ ಕಣ್ಣೊರೆಸಿಕೊಂಡು ಮದೀನಾದ ದಾರಿಯಲ್ಲಿ ಹಿಂತಿರುಗಿ ನಡೆದಿದ್ದರು. ನನ್ನಿಂದ ದೂರ, ದೂರವಾಗುತ್ತಿದ್ದ ಆ ಮಹಾನುಭಾವರನ್ನು ಬಹಳ ಹೊತ್ತು ಹಾಗೆಯೇ ನೋಡುತ್ತಾ ನಿಂತಿದ್ದೆ. ಕಣ್ಣಂಚಿನಲ್ಲಿ ಜಾರುತ್ತಿದ್ದ ನೀರಿನಿಂದಲೇ ಅವರಿಗೆ ಕೃತಜ್ಞತೆ ಅರ್ಪಿಸಿದ್ದೆ.

ಮದೀನಾದಲ್ಲಿ ನನ್ನ ಗಂಡ ನನಗೆ ಸಿಕ್ಕಿದ್ದರು. ನನ್ನ ಸಂತೋಷಗಳು ಮರಳಿ ಬಂದಿದ್ದವು. ನನಗೆ ಮಗಳು ಝೈನಬಾ ಹುಟ್ಟಿದ ಬಳಿಕದ ಒಂದು ಸವಿರಾತ್ರಿಯಲ್ಲಿ ನಾನು ತಮಾಷೆಗೆಂದು ಪ್ರಶ್ನಿಸಿದ್ದೆ, 'ಕಣ್ಣೆದುರಿಗಿರುವ ಹೆಂಡತಿಗೆ ಹೊಸಹೊಸ ಹೆಣ್ಣುಗಳನ್ನು ಸವತಿಯರನ್ನಾಗಿ ಪರಿಚಯಿಸುವಲ್ಲಿ ಯಾವುದೇ ರೀತಿಯಲ್ಲಿ ಮುಜುಗರ ಪಡದ ಗಂಡುಗಳು ನಿಮ್ಮ ಕಣ್ಣೆದುರೇ ಇರುವಾಗ, ನಿಮ್ಮ ಕಣ್ಣಿನಿಂದ ಬಲು ದೂರದಲ್ಲಿ ಬಹುಕಾಲ ಇದ್ದ ನನಗೇಕೆ ಅಂತಹ ನೋವಿನ ಉಡುಗೊರೆ ನೀಡಲಿಲ್ಲ?'

'ಅಲ್ಲಾಹು ಅದಕ್ಕೆ ಅವಕಾಶ ಒದಗಿಸಲಿಲ್ಲ. ಹುಡುಕಿ ಹುಡುಕಿ ಸೋತುಬಿಟ್ಟಿದ್ದೆ ನಾನು.' ತಕ್ಷಣವೇ ಉತ್ತರಿಸಿದ್ದರು ಅವರು.

'ಅಂದರೆ!!' ಸ್ವಲ್ಪ ಗಾಬರಿಯೂ ಆಗಿತ್ತು.

'ನಿನಗಿಂತ ಸೌಂದರ್ಯವತಿಯಾದ ಮತ್ತೊಬ್ಬಳನ್ನು ಅಲ್ಲಾಹು ಸೃಷ್ಟಿಸಿದ್ದನ್ನು ನಾನು ಕಾಣಲಿಲ್ಲ.'

ಅವರ ಎದೆಯ ಮೇಲೆ ತಲೆಯಿಟ್ಟು 'ಗೊಳೋ' ಎಂದು ಅತ್ತಿದ್ದೆ.

ಪ್ರವಾದಿಯವರು ಮದೀನಾಕ್ಕೆ ಬರುವುದಕ್ಕಿಂತ ಬಲು ಹಿಂದೆಯೇ ವಲಸೆ ಬಂದಿದ್ದವರು ನಾವು. ಅವರು ಬಂದ ಬಳಿಕ ನಮ್ಮ ಬದುಕಿನ ಗತಿಯೇ ಬದಲಾಯಿತು. ನನ್ನ ಗಂಡ ಪ್ರವಾದಿಯವರ ಬೆಂಗಾವಲು ಪಡೆಗೆ ಸೇರಿಕೊಂಡರು. ನಾವು ಸುಖಬದುಕಿನ ಹೊಸ ಹೊಸ ಮಜಲುಗಳನ್ನು ಅನುಭವಿಸುತ್ತಾ ಸಂತಸದಿಂದಲೇ ಇದ್ದೆವು. ಆದರೆ, ಈ ಸಂತಸದ ಬದುಕು ಹೆಚ್ಚು ದಿನ ಬಾಳಲಿಲ್ಲ. ಪ್ರವಾದಿಯವರು ನೇಮಿಸಿದ್ದ ಗೂಢಚಾರರು ಐದಾರು ತಿಂಗಳುಗಳ ಹಿಂದೆ ಎದೆನಡುಗಿಸುವ ಮಾಹಿತಿಯೊಂದನ್ನು ತಂದಿದ್ದರು.

ಆಗ ಬಂದಿದ್ದ ಮಾಹಿತಿಯಂತೆ, ಸತ್ಯವಿಶ್ವಾಸಿಗಳಾಗಿರುವ ನಮ್ಮನ್ನು ಸರ್ವನಾಶ ಮಾಡಲು ಅಬೂಜಹಲನು, ಬಲು ದೊಡ್ಡ ಸೇನಾಪಡೆಯೊಂದಿಗೆ ಮಕ್ಕಾದಿಂದ ಹೊರಟಿದ್ದು, ಇನ್ನು ಕೆಲವೇ ದಿನಗಳಲ್ಲಿ ಮದೀನಾದ ಗಡಿ ತಲುಪಲಿದ್ದಾನೆ ಎಂಬ ಆತಂಕಕಾರಿ ಮಾಹಿತಿಯಾಗಿತ್ತು ಅದು. ಅವನ ಜೊತೆಯಲ್ಲಿ ವೇಗವಾಗಿ ಓಡಬಲ್ಲ ನೂರು ಕುದುರೆಗಳು, ಹೆಚ್ಚು ಭಾರ ಹೊರಬಲ್ಲ ಏಳು ನೂರು ಒಂಟೆಗಳು, ಕವಚಧಾರಿಗಳಾದ ಒಂಬೈನೂರು ವೀರ ಯೋಧರು, ನೂರು ಹೆಚ್ಚುವರಿ ಯುದ್ಧ ಕವಚಗಳು, ಒಂದನ್ನು ಕಡಿದರೆ ನೂರೈವತ್ತು ಆಳುಗಳಿಗೆ ಮಾಂಸವಾಗಬಲ್ಲಂತಹ ನಲುವತ್ತು ಪ್ರತ್ಯೇಕ ಒಂಟೆಗಳು, ತಿಂಗಳ ಕಾಲ ಕುಡಿದು, ತಿಂದು ತೇಗುವಷ್ಟು ಆಹಾರ ವಸ್ತುಗಳು, ಅವುಗಳನ್ನು ಹೊರಲೆಂದೇ ಪ್ರತ್ಯೇಕವಾದ ನೂರು ಬಲಿಷ್ಠ ಕತ್ತೆಗಳು, ಬಿಳಿ ಸರದಾರರ ಸೇವೆಗೆಂದೇ ಜನ್ಮತಳೆದಿರುವ ಮೂವತ್ತಾರು ಕಟ್ಟುಮಸ್ತಾದ ಕಪ್ಪುಗುಲಾಮರು, ಆಯಾಸವಾದಾಗಾಲೆಲ್ಲ ಕಾಲು ಒತ್ತಲು ನಲುವತ್ತಾರು ದಾಸಿಯರು. ಸಮರಕಲಿಗಳ ಮನರಂಜನೆಗಾಗಿ ದಪ್ಪು ಬಡಿಯುವವರ, ಹಾಡುಗಾರರ, ನರ್ತಕಿಯರ ಹಿಂಡು ಹೀಗೆ ಬಲು ದೊಡ್ಡ ದಂಡೇ ಇದೆಯಂತೆ. ಮತ್ತೆರಡು ದಿನ ಕಳೆಯುವಷ್ಟರಲ್ಲಿ ತಲುಪಿದ ಮಾಹಿತಿಯಂತೆ, ಅಬೂಜಹಲನ ಜೊತೆಗೆ ಕುರೈಶ್ ನಾಯಕರುಗಳಾದ ಯಝೀದರ ಪುತ್ರ ಸಾಯಿಬ, ಖಲಫ್ ಪುತ್ರ ಉಮಯ್ಯ, ಅಮ್ರ್ ಪುತ್ರ ಸುಹೈಲ್, ರಬೀಹಾ ಪುತ್ರ ಶೀಬಾ, ರಬಿಅ ಪುತ್ರ ಉತ್ಬಾ, ಅಬ್ನಾ ಹಜ್ಜಾಜ್. ಅಬುಲ್ ಭಕ್ತರಿ ಮೊದಲಾದವರಿದ್ದು, ಅವರೆಲ್ಲ ಮದೀನಾದಿಂದ ಎಂಬತ್ತು ಮೈಲು ದೂರದ ಬದರ್ ಬಯಲಿನ ನೀರ ಚಿಲುಮೆಯ ಪಕ್ಕದಲ್ಲಿ ಬೀಡುಬಿಟ್ಟಿದ್ದರು.

ಪ್ರವಾದಿಯವರಿಗೆ ಇಕ್ಕಟ್ಟು.. ರಕ್ತಪಾತ ಇಷ್ಟವಿಲ್ಲ. ತಮ್ಮನ್ನು ನಂಬಿರುವ ಸಂಗಾತಿಗಳ ಪ್ರಾಣ ರಕ್ಷಣೆಯಾಗಬೇಕಾದರೆ ಯುದ್ಧವನ್ನು ಎದುರಿಸಲೇಬೇಕು. ಆದರೆ, ಮಕ್ಕಾದಿಂದ ಬಂದಿರುವ ದೊಡ್ಡ ಪಡೆಯನ್ನು ಎದುರಿಸಲು ನನ್ನ ಗಂಡ ಅಬೂಸಲಾಮರನ್ನೂ ಒಳಗೊಂಡಂತೆ ಇರುವ ಒಟ್ಟು ಯೋಧರ ಸಂಖ್ಯೆ ಕೇವಲ





ಮುನ್ನೂರ ಹದಿಮೂರು. ಜೊತೆಗೆರಡು ಕುದುರೆಗಳು. ಒಂದೈವತ್ತರಷ್ಟು ಒಂಟೆಗಳು. ಆತ್ಮರಕ್ಷಣೆಗಾಗಿ ಸೊಂಟದಲ್ಲಿ ತೂಗಿರುವ ಖಡ್ಗಗಳ ಹೊರತಾಗಿ ಬೇರಾವುದೇ ಯುದ್ಧಾಯುಧ ಗಳಿರಲಿಲ್ಲ. ಆದರೂ ಮೈಮೇಲೆ ಎರಗಿರುವ ಆಪತ್ತನ್ನು ನಿವಾರಿಸಿಕೊಳ್ಳುವ ಅನಿವಾ ರ್ಯತೆಯಿತ್ತು. ಪ್ರವಾದಿಯವರು ಕೊನೆಗೂ ಆತ್ಮರಕ್ಷಣೆಗೆ ಖಡ್ಗಗಳನ್ನು ಎತ್ತಿಕೊಳ್ಳುವಂತೆ ಕರೆ ನೀಡಿದರು. ಸತ್ಯವಿಶ್ವಾಸಿಗಳೆಲ್ಲ ಮೊದಲ ಬಾರಿಗೆ ಸೈನಿಕರಾಗಿ ಬದಲಾಗಿದ್ದರು.

ನನ್ನಿಬ್ಬರು ಮಕ್ಕಳನ್ನು ನೆರೆಮನೆಯವರ ರಕ್ಷಣೆಗೆ ಒಪ್ಪಿಸಿ, ನನ್ನ ಗಂಡ ಅಬೂಸಲಾಮರ ಜೊತೆಗೆ ಬದರ್ ಕಣಿವೆಗೆ ನಾನೂ ಹೊರಟುಬಿಟ್ಟೆ. ನಮ್ಮ ಪಡೆ ಬದರ್ ಕಣಿವೆಯನ್ನು ತಲುಪುತ್ತಿರುವಾಗ ಬೆದರಿದ ಸೂರ್ಯ ಅವಿತುಕೊಳ್ಳಲು ನೆಲೆ ಹುಡುಕುತ್ತಿದ್ದ. ಎತ್ತರದ ಗುಡ್ಡದ ಮೇಲೆ ಕಟ್ಟಿದ್ದ ಚಪ್ಪರವೇರಿದ ಪ್ರವಾದಿಯವರು ತಮ್ಮ ಸಹವರ್ತಿ ಅಬೂಬಕರರನ್ನು ಕರೆದು ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಹತ್ತಿರದಲ್ಲಿದ್ದ ಇನ್ನೊಂದು ಮರದ ಮೇಲೆ ಕಟ್ಟಿದ್ದ ಅಟ್ಟಳಿಗೆಯಲ್ಲಿ ಐದಾರು ಹೆಂಗಸರ ಜೊತೆಗೆ ನಾನೂ ಕುಳಿತುಕೊಂಡೆ.

ದೂರದ ಬಯಲಲ್ಲಿ ಶತ್ರು ಸೇನೆ, ಕಪ್ಪು ಕಲ್ಲುಗಳೇ ತೇಲುತ್ತಿರುವ ಸಮುದ್ರದಂತೆ ಕಾಣಿಸುತ್ತಿತ್ತು. ಆ ರಾತ್ರಿ ಅಕಾಶವೇ ಹರಿದು ಬಿದ್ದಂತಹ ಮಳೆ ಸುರಿಯಿತು. ಅಕ್ಕ ಪಕ್ಕದ ಬೆಟ್ಟ, ಗುಡ್ಡಗಳಿಂದ ಧುಮ್ಮಿಕ್ಕಿ ಹರಿದಿಳಿದ ನೀರ ಕಾಲುವೆಗಳು, ಬೆಳಕು ಹರಿಯುವಷ್ಟರಲ್ಲಿ ಶತ್ರುಗಳು ತಂಗಿದ್ದ ಮರಳ ಬಯಲನ್ನು ಕಾಲೂರಿ ನಿಲ್ಲಲೂ ಸಾಧ್ಯವಾಗದಷ್ಟು ರಾಡಿ ತುಂಬಿಸಿ ಕೆಸರಿನ ಕೊಳವನ್ನಾಗಿ ಮಾಡಿತ್ತು. ಅದನ್ನು ಕಂಡಾಗಲೇ ನಮ್ಮ ಸಂಗಾತಿಗಳ ಕಣ್ಣುಗಳಲ್ಲಿ ಗೆಲುವಿನ ಗೆರೆಗಳು ಹೊಳೆಯ ತೊಡಗಿದ್ದವು. ಆ ಕದನದಲ್ಲಿ ಕುರೈಶರ ಸೇನಾಪತಿ ಅಬೂಜಹಲ ಹತನಾಗಿದ್ದನು. ಶತ್ರು ಸೈನ್ಯದ ಹತ್ತಾರು ಯೋಧರ ತಲೆ ಉರುಳಿಸಿದ್ದ ಅಬೂ ಸಲಾಮಾ, ಯಾವುದೇ ಗಾಯವಿಲ್ಲದೆ ಮರಳಿದ್ದರು.

ಆದರೆ, ಮುಂದಿನ ವರ್ಷ ನಡೆದ ಉಹದ್ ಯುದ್ಧದಲ್ಲಿ ಸ್ವತಃ ಪ್ರವಾದಿಯವರೇ ಗಾಯಗೊಂಡಿದ್ದರು. ಅವರ ದೊಡ್ಡಪ್ಪ ಹಂಝಾ ಮರಣಿಸಿದ್ದರು. ನನ್ನ ಗಂಡನ ಕಾಲಿಗೆ ಬಲವಾದ ಗಾಯವಾಗಿತ್ತು. ಹಕೀಮರ ಆರೈಕೆಯಿಂದ ಗಾಯ ಒಣಗುತ್ತಾ ಇನ್ನೇನು ಸಂಪೂರ್ಣವಾಗಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಸಮಾಧಾನಪಟ್ಟು ಕೊಳ್ಳುತ್ತಿರುವಂತೆಯೇ ಗಾಯ ಮತ್ತೊಮ್ಮೆ ಉಲ್ಬಣಿಸಿತ್ತು. ಅವರ ಆರೋಗ್ಯ ಇದ್ದಕ್ಕಿದ್ದಂತೆ ಹದಗೆಟ್ಟಿತ್ತು. ಅಬುಸಲಾಮಾ ಹಾಸಿಗೆಗೇ ಅಂಟಿಕೊಳ್ಳುವಂತಾಗಿತ್ತು. ಒಂದು ಸಂಜೆ ಅವರ ಕಾಲಿಗೆ ಎಣ್ಣೆ ಸವರುತ್ತಿದ್ದಾಗ ಅವರ ಮನಸ್ಸನ್ನು ಗೆಲುವಾಗಿಸಲು ಸುಮ್ಮನೆ ಮಾತನಾಡಿಸುತ್ತಿದ್ದೆ.

‘ಸ್ವರ್ಗಕ್ಕೆ ಅರ್ಹತೆ ಪಡೆದಿರುವ ಗಂಡ ಮರಣಿಸಿದ ಆನಂತರದ ದಿನಗಳಲ್ಲಿ, ಸ್ವರ್ಗಕ್ಕೆ ಅರ್ಹತೆ ಪಡೆಯಬಯಸುವ ಹೆಂಡತಿ, ಬೇರೆ ಗಂಡಸನ್ನು ಮದುವೆಯಾಗ ಬಾರದಂತೆ. ಹಾಗೆ ಮದುವೆ ಮಾಡಿಕೊಳ್ಳದ ಹೆಂಡತಿಗೆ ಸ್ವರ್ಗದಲ್ಲಿ ಅದೇ ಗಂಡನ ಜೊತೆಗೆ ಬಾಳುವ ಅವಕಾಶವನ್ನು ಅಲ್ಲಾಹು ಕರುಣಿಸುತ್ತಾನಂತೆ; ನಿಜವೆ?’

ಅವರೇನೂ ಹೇಳಲಿಲ್ಲ; ನನ್ನ ಮುಖವನ್ನು ದಿಟ್ಟಿಸಿ ನೋಡಿದರು; ಅಷ್ಟೆ. ನಾನೇ ನನ್ನ ಹರಟೆಯ ಮಾತು ಮುಂದುವರಿಸಿದ್ದೆ.

‘ಹಾಗೆಯೇ, ಸ್ವರ್ಗಕ್ಕೆ ಅರ್ಹತೆ ಪಡೆದಿರುವ ಹೆಂಡತಿ ಮರಣಿಸಿದ ಆನಂತರದ ದಿನಗಳಲ್ಲಿ, ಸ್ವರ್ಗಕ್ಕೆ ಅರ್ಹತೆ ಪಡೆಯಬಯಸುವ ಗಂಡ, ಬೇರೆ ಹೆಣ್ಣನ್ನೂ ಮದುವೆ ಯಾಗಬಾರದಂತೆ. ಹಾಗೆ ಮದುವೆ ಮಾಡಿಕೊಳ್ಳದ ಗಂಡನಿಗೆ ಸ್ವರ್ಗದಲ್ಲಿ ಅದೇ ಹೆಂಡತಿಯ ಜೊತೆಗೆ ಬಾಳುವ ಅವಕಾಶವನ್ನು ಅಲ್ಲಾಹು ಕರುಣಿಸುತ್ತಾನಂತೆ; ನಿಜವೇ?’

ಅವರ ಮುಖ ಮುದುಡಿತ್ತು. ಏನೋ ಹೇಳಬೇಕೆಂದು ತುಟಿ ಅಲುಗಿಸಿದವರು ಸುಮ್ಮನಾಗಿದ್ದರು.

‘ನಾವೊಂದು ಪರಸ್ಪರ ಪ್ರತಿಜ್ಞೆ ಮಾಡೋಣವೆ?’ ಎಂದು ಪ್ರಶ್ನಿಸಿದೆ.

ಅವರು ಅದೇನು ಎಂಬಂತೆ ಅಚ್ಚರಿಯಿಂದ ನನ್ನನ್ನು ದಿಟ್ಟಿಸಿದ್ದರು. ನಾನು ಹೇಳಿದ್ದೆ. ‘ನಾವೊಂದು ಪ್ರತಿಜ್ಞೆ ಮಾಡೋಣ. ನಮ್ಮಲ್ಲಿ ಯಾರೇ ಮೊದಲು ಮರಣಿಸಲಿ. ಬದುಕಿ ಉಳಿದವರು ಅವರ ಮರಣದವರೆಗೆ ಮತ್ತೊಂದು ಮದುವೆ ಮಾಡಿಕೊಳ್ಳಬಾರದು’ ಎನ್ನುತ್ತಾ ಅವರ ಬಲಗೈಯನ್ನು ನನ್ನ ಬಲಗೈಯಲ್ಲಿ ಹಿಡಿದುಕೊಂಡು ಅವರ ಎದೆಯ ಮೇಲಿಟ್ಟು ಬಾಗಿ ಅವರ ಎದೆಯ ಮೇಲೆ ತಲೆಯಿಟ್ಟು ಮಲಗಿದೆ.

ನನ್ನ ಮುಖವನ್ನು ಅವರ ಎದೆಯಿಂದ ಎತ್ತಿ ದೂರ ತಳ್ಳಿದ ಅವರು, ‘ಇದುವರೆಗೂ ನೀನು ನನ್ನ ಮಾತು ಮೀರಿದವಳಲ್ಲ. ಈಗ ನೀನು ನನ್ನೆದುರು ಒಂದು ಪ್ರಮಾಣ ಮಾಡಬೇಕು. ನನ್ನ ಮರಣದ ಬಳಿಕ ನೀನು ಬೇರೊಬ್ಬರೊಂದಿಗೆ ಮದುವೆ ಮಾಡಿಕೊಳ್ಳಲೇಬೇಕು. ಇದು ನನ್ನ ಆಜ್ಞೆ’ ಎಂದವರೇ ಎರಡೂ ಕೈಗಳನ್ನು ಆಕಾಶದತ್ತ ಚಾಚಿ, ‘ಓ ಅಲ್ಲಾಹುವೇ. ನನ್ನ ಹೆಂಡತಿ ಉಮ್ಮು ಸಲಾಮಾಳಿಗೆ, ಅವಳನ್ನು ಎಂದೂ ನೋಯಿಸದ ಎಂದೂ ಅವಮಾನಿಸದ ನನಗಿಂತಲೂ ಹೆಚ್ಚು ಉತ್ತಮನಾದ ಗಂಡನನ್ನು ದಯಪಾಲಿಸು’ ಎಂದು ಪ್ರಾರ್ಥಿಸಿದರು.

ಅಷ್ಟರಲ್ಲಿ ಬಾಗಿಲ ಬಳಿ ಯಾರೋ ಕೆಮ್ಮಿದಂತಾಗಿತ್ತು. ಗಡಬಡಿಸಿ ಎದ್ದು ತಲೆಗವಸನ್ನು ಸರಿಪಡಿಸಿಕೊಂಡು ಮುಂಬಾಗಿಲು ತೆರೆದರೆ, ಅಂಗಳದಲ್ಲಿ ಪ್ರವಾದಿ ಯವರು ಕಾಣಿಸಿದ್ದರು. ತೆರೆದ ಬಾಗಿಲನ್ನು ಹಾಗೆಯೇ ಇರಿಸಿ, ನಾನು ಗಾಬರಿಯಿಂದ





ಒಳ ಕೋಣೆಗೆ ಧಾವಿಸಿದ್ದೆ. ಸ್ವಲ್ಪವೇ ಹೊತ್ತಿನಲ್ಲಿ ಅಬೂ ಸಲಾಮಾ ಮಲಗಿದ್ದ ಕೋಣೆಯಿಂದ ಪ್ರವಾದಿಯವರ ಪ್ರಾರ್ಥನೆ ಕೇಳಿಸಿತ್ತು.

‘ಸೃಷ್ಟಿಕರ್ತನಾದ ಅಲ್ಲಾಹುವೇ. ಅಬೂ ಸಲಾಮನನ್ನು ಕ್ಷಮಿಸು.’

ಗಾಬರಿಯಿಂದ ಹೊರಬಂದು ನೋಡಿದರೆ, ಪ್ರವಾದಿಯವರು ನನ್ನ ಗಂಡನ ಕಣ್ಣು ಗಳನ್ನು ಮುಚ್ಚುತ್ತಿರುವುದು ಕಾಣಿಸಿತ್ತು. ಪ್ರವಾದಿಯವರ ಪ್ರಾರ್ಥನೆ ಮುಂದು ವರಿದಿತ್ತು. ಆಕಾಶದತ್ತ ಎರಡೂ ಕೈಗಳನ್ನು ಚಾಚಿದ ಅವರು ಪ್ರಾರ್ಥಿಸುತ್ತಲೇ ಇದ್ದರು, ‘ನಿನ್ನ ಪಕ್ಕದಲ್ಲೇ ಇರುವ ಅದೃಷ್ಟವಂತರ ಸಾಲಿಗೆ ಇವರನ್ನೂ ಸೇರಿಸಿಕೊಳ್ಳು. ಇವರ ಕುಟುಂಬದವರ ಹೊಣೆ ಹೊತ್ತುಕೊಳ್ಳು. ಓ ಜಗತ್ತಿನ ನಿಯಾಮಕನೇ. ಇವರ ಗೋರಿಯನ್ನು ಸಡಿಲಗೊಳಿಸು; ಹಗುರಗೊಳಿಸು.’

ನಾನು ವಿಧವೆಯಾಗಿದ್ದೆ.

ನನ್ನ ಮಕ್ಕಳು ಅನಾಥರಾಗಿದ್ದರು.

ನಾಲ್ಕು ತಿಂಗಳ ಬಳಿಕ ನಾನು ಪ್ರವಾದಿಪತ್ನಿಯಾಗಿದ್ದೆ.

–೩–

‘ಸಣ್ಣ ಒಡತಿ ತಮ್ಮನ್ನು ಕಾಣಬಯಸುತ್ತಾರೆ.’

ಬಾಗಿಲ ಬಳಿ ನೆರಳು ಕಂಡಂತಾಗಿ, ಕತ್ತು ತಿರುಗಿಸಿದರೆ ಬಾಗಿಲ ತುಂಬ ನಗು ಚೆಲ್ಲುತ್ತಾ ಆಯಿಷಾರ ದಾಸಿ ಅಫೀರಾ ನಿಂತಿದ್ದಳು. ‘ಎಲ್ಲಿದ್ದಾರೆ!’ ಎನ್ನುತ್ತಲೇ ಅವಳನ್ನು ಬದಿಗೆ ಸರಿಸಿ ಹೊರಗಿಣುಕಿದೆ. ಅಲ್ಲಿ ಯಾರೂ ಕಾಣಿಸಲಿಲ್ಲ.

‘ಎಲ್ಲಿ ನಿನ್ನ ಸಣ್ಣ ಒಡತಿ?’ ಅಫೀರಾಳ ಭುಜ ಹಿಡಿದು ಪ್ರಶ್ನಿಸಿದ್ದೆ.

‘ಸಣ್ಣ ಒಡತಿ ಬರಲಿಲ್ಲ. ತಮ್ಮ ಸಮಯದ ಅನುಕೂಲ ವಿಚಾರಿಸಿಕೊಂಡು ಬರಲು ನನ್ನನ್ನು ಕಳುಹಿಸಿದರು. ನಾನು ಬಂದೆ’ ಎನ್ನುತ್ತಾ ನಕ್ಕಳು. ಮಧ್ಯಾಹ್ನದ ಹೊತ್ತು ಅದು. ಅಫೀರಾಳ ನಗು ಮನೆಯೊಳಗಿನ ನೆರಳಿನಂತೆ ಹಿತವಾಗಿತ್ತು.

‘ಬಾ ಅಫೀರಾ ಒಳಗೆ’ ಎಂದು ಕರೆದೆ. ಅವಳು ಹೊಸ್ತಿಲು ದಾಟಿ ಎರಡು ಹೆಜ್ಜೆ ಬಂದಳು. ಮುಂದಾಗಿ ವಿಚಾರಿಸಿಕೊಂಡ ಬಳಿಕವೇ ಆಯಿಷಾ ನನ್ನನ್ನು ಕಾಣ ಬಯಸಿದ್ದು ಯಾಕಿದ್ದಿರಬಹುದು ಎಂಬ ಕುತೂಹಲ ಹುಟ್ಟಿದ್ದರೂ ತೋರಗೊಡದೆ, ‘ನಿನ್ನ ಪುಟ್ಟ ಒಡತಿ ಈಗ ಮನೆಯಲ್ಲಿದ್ದಾರೆಯೆ?’ ಎಂದು ಪ್ರಶ್ನಿಸಿದೆ.

‘ಈಗಿಲ್ಲ, ಅವರಕ್ಕ ಅಸ್ಮಾರ ಮನೆಗೆ ಹೋಗಿದ್ದಾರೆ. ಅಲ್ಲಿಂದ ಬಂದ ಬಳಿಕ ನೀವು ಸಮ್ಮತಿಸಿದರೆ ತಮಗೆ ಅನುಕೂಲವಾದ ಹೊತ್ತಲ್ಲಿ ಅವರನ್ನು ಇಲ್ಲಿಗೆ ಕರೆದುಕೊಂಡು ಬರುವೆ’ ಎಂದಳು.

'ಅದೇಕೆ ನಾನೇ ನಿನ್ನ ಪುಟ್ಟ ಒಡತಿಯ ಮನೆಗೆ ಬರಬಾರದು?' ಎಂದೆ ನಗುತ್ತಾ.

'ತಾವು ದೊಡ್ಡವರು. ಸಣ್ಣವರು ದೊಡ್ಡವರನ್ನು ಮಾತನಾಡಿಸಲು ಬಯಸಿದರೆ, ಸಣ್ಣವರೇ ದೊಡ್ಡವರ ಬಳಿಗೆ ಹೋಗಬೇಕು.' ತೀರಾ ಸಹಜವೆಂಬಂತೆ ಹೇಳಿದ್ದಳು ಅಫೀರಾ.

ಆಯಿಷಾರ ಹುಟ್ಟಿನೊಂದಿಗೇ ಅಫೀರಾ ಜೊತೆಗಿರುವುದು ನನಗೆ ತಿಳಿದಿತ್ತು. ಪ್ರವಾದಿಪತ್ನಿಯಾದ ಬಳಿಕ ಇವಳನ್ನೂ ಜೊತೆಯಲ್ಲೇ ಕರೆದುಕೊಂಡು ಬಂದದ್ದೂ ತಿಳಿದಿತ್ತು. ಆದರೆ, ಈಕೆ ಇದಿಷ್ಟು ಚೆನ್ನಾಗಿ ಮಾತನಾಡಬಲ್ಲಳು ಎಂಬುದನ್ನು ನಾನು ಊಹಿಸಿದ್ದಿರಲಿಲ್ಲ. ಇವಳೊಂದಿಗೆ ಸ್ವಲ್ಪ ಹೊತ್ತು ಮಾತನಾಡಬೇಕು ಅನ್ನಿಸಿತ್ತು.

'ಬಾ ಕುಳಿತುಕೋ ಅಫೀರಾ ಎಂದೆ.'

ಅರೆಕ್ಷಣ ಅನುಮಾನಿಸಿದಂತೆ ಅತ್ತಿತ್ತ ನೋಡಿದ ಅವಳು, ಮೂಲೆಯಲ್ಲಿ ಮಡಚಿ ಇರಿಸಿದ್ದ ಚಾಪೆಯತ್ತ ಬೊಟ್ಟು ಮಾಡಿ, 'ಆ ಚಾಪೆಯ ಮೇಲೆ ನಾನು ಕುಳಿತುಕೊಳ್ಳಬಹುದೆ?' ಎಂದು ಪ್ರಶ್ನಿಸಿದಳು.

'ನೀನು ನನ್ನ ಹೃದಯದೊಳಗೆ ಅದಾಗಲೇ ಕುಳಿತುಬಿಟ್ಟಿದ್ದೀಯಾ ಹುಡುಗಿ' ಎಂದು ಹೇಳಬೇಕೆನ್ನಿಸಿದರೂ ಹೇಳದೆ, ನಾನೇ ಮೂಲೆಗೆ ಸರಿದು ಚಾಪೆಯನ್ನು ಎತ್ತಿಕೊಂಡು ಬಂದು ಗೋಡೆಯ ಪಕ್ಕದಲ್ಲಿ ಹಾಸುತ್ತಾ, 'ಕುಳಿತುಕೋ' ಎಂದೆ.

ಅವಳು ಸಂಕೋಚದಿಂದ ಕುಳಿತುಕೊಂಡಳು. ಅಲ್ಲೇ ಪಕ್ಕದಲ್ಲಿ ಇದ್ದ ಮರದ ಕಟ್ಟೆಯ ಮೇಲೆ ನಾನು ಕುಳಿತೆ.

ನನ್ನನ್ನು ಅಳೆಯುವಂತೆ ಕಾಲಿನಿಂದ ಮುಡಿಯವರೆಗೆ ನೋಡಿದ ಅಫೀರಾ, 'ನನಗೆ ಗೊತ್ತಿತ್ತು' ಎಂದವಳು ತುಟಿ ಕಚ್ಚಿಕೊಂಡಳು. ಮಾತು ಮುಂದುವರಿಸಲಿಲ್ಲ. ಈ ಬಾರಿ ನನ್ನಿಂದ ಕುತೂಹಲ ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. 'ಏನು ಗೊತ್ತಿತ್ತು ನಿನಗೆ ಅಫೀರಾ ' ಎಂದು ಪ್ರಶ್ನಿಸಿದೆ.

ಹೇಳಲೇ ಬೇಡವೇ ಎಂದು ಅನುಮಾನಿಸುವವಳಂತೆ ಬೇರೆ ಕಡೆ ನೋಡುತ್ತಾ, 'ಪ್ರವಾದಿಯವರು ಎಂದೂ ತಪ್ಪು ತೀರ್ಮಾನ ಮಾಡುವವರಲ್ಲ ಎಂಬುದಕ್ಕೆ ತಾವು ಇನ್ನೊಂದು ಸಾಕ್ಷಿ' ಒಗಟೊಂದನ್ನು ಮುಂದಿಟ್ಟಿದ್ದಳು. ಅವಳು ಹೇಳಿದ್ದರಲ್ಲಿ ತಪ್ಪಿರಲಿಲ್ಲ ವಾಗಿದ್ದರೂ, ಇದ್ದಕ್ಕಿದ್ದಂತೆ ಪ್ರವಾದಿಯವರ ಹೆಸರನ್ನು ಪ್ರಸ್ತಾಪಿಸಿದಾಗ ಗಲಿಬಿಲಿಗೊಂಡಿದ್ದೆ.

'ಏನು ಹೇಳುತ್ತಿರುವಿ ನೀನು ಅಫೀರಾ. ನಿನ್ನ ಮಾತು ಒಂದೂ ಅರ್ಥವಾಗುತ್ತಿಲ್ಲವಲ್ಲಾ? ಅದೇನೆಂಬುದನ್ನು ಬಿಡಿಸಿ ಹೇಳಬಾರದೆ?' ಎಂದೆ.

ನನ್ನನ್ನು ನೇರವಾಗಿ ದಿಟ್ಟಿಸಿದ ಅವಳು ಮತ್ತೊಂದು ಒಗಟನ್ನು ಎಸೆದಿದ್ದಳು, 'ಹಾಗಾದರೆ ನಾನು ತಿಳಿದುಕೊಂಡದ್ದು ಪೂರ್ತಿ ನಿಜವಲ್ಲ!'

ಅಫೀರಾಳ ಮಾತುಗಳಲ್ಲಿ ಬೆರೆತುಕೊಂಡಿದ್ದ ಒಂದು ಬಗೆಯ ಆಕರ್ಷಣೆ ಅವಳ ವಿರುದ್ಧ ನನ್ನೊಳಗೆ ಮೊಳಕೆಯೊಡೆಯುತ್ತಿರುವ ಸಿಟ್ಟನ್ನು ನಿಯಂತ್ರಿಸಿತ್ತು.





'ಯಾಕೆ? ಪ್ರವಾದಿಯವರೂ ಕೆಲವೊಮ್ಮೆ ತಪ್ಪು ತೀರ್ಮಾನ ಮಾಡುತ್ತಾರೆಯೆ?' ಕುತೂಹಲದಿಂದಲೇ ಪ್ರಶ್ನಿಸಿದ್ದೆ.

ಅವಳ ಮುಖ ಇದ್ದಕ್ಕಿದ್ದ ಹಾಗೆ ಮುದುಡಿತ್ತು. 'ಕ್ಷಮೆಯಿರಲಿ ಉಮ್ಮಾ. ನನ್ನ ಮಾತಿನ ಉದ್ದೇಶ ಅದಲ್ಲ. ನಾನು ಮಾತನಾಡುವುದೇ ಹೀಗೆ. ಪುಟ್ಟ ಒಡತಿಯ ಜೊತೆಗೆ ಸಲಿಗೆಯಿಂದ ಮಾತಾಡುತ್ತಾ ಮಾತಾಡುತ್ತಾ ಅಭ್ಯಾಸವಾಗಿದ್ದ ನನಗೆ, ಹೊಸಬರ ಜೊತೆಗೆ ಹೇಗೆ ಮಾತನಾಡಬೇಕೆಂಬುದನ್ನೂ ತಿಳಿಯದಾದೆ. ನನ್ನನ್ನು ಕ್ಷಮಿಸಿ ಉಮ್ಮಾ' ಎನ್ನುತ್ತಾ ತಲೆ ತಲೆತಗ್ಗಿಸಿದಳು.

'ಇದು ನನ್ನ ಪ್ರಶ್ನೆಗೆ ಉತ್ತರವಲ್ಲ ಅಫೀರಾ.' ನಾನು ದನಿಯೆತ್ತರಿಸಿಯೇ ಪ್ರಶ್ನಿಸಿದ್ದೆ. 'ನೀನು ಏನನ್ನು ಹೇಳಬೇಕೆಂದು ಬಯಸುತ್ತಿದ್ದಿಯೋ ಅದನ್ನು ನೇರವಾಗಿಯೇ ಹೇಳಿಬಿಡು. ಪ್ರವಾದಿಯವರು ಎಂದೂ ತಪ್ಪು ಮಾಡುವುದಿಲ್ಲ ಎಂದೆ ಮೊದಲು. ಆ ಬಳಿಕ, ಹಾಗೆ ತಿಳಿದುಕೊಂಡದ್ದು ಪೂರ್ತಿ ನಿಜವಲ್ಲ ಎಂದೆ. ಏನು ನಿನ್ನ ಮಾತುಗಳ ಅರ್ಥ? ನಾನೇನೆಂದು ತಿಳಿದುಕೊಳ್ಳಬೇಕು?'

'ಅವೆರಡರ ಕಾರಣಗಳೂ ಬೇರೆ ಬೇರೆ ಉಮ್ಮಾ. ಪ್ರವಾದಿಯವರು ಎಂದೂ ತಪ್ಪು ಮಾಡುವವರಲ್ಲ ಎಂಬ ಮಾತನ್ನು ಪ್ರವಾದಿಯವರು ತಮ್ಮನ್ನು ಕರೆದುಕೊಂಡು ಬಂದ ದಿನವೇ ತಮಗೆ ಹೇಳಬೇಕೆಂದುಕೊಂಡಿದ್ದೆ.'

'ಯಾಕೆ ಹಾಗೆಂದುಕೊಂಡಿದ್ದೆ!'

'ಒಬ್ಬರ ಮನಸ್ಸಿನಲ್ಲಿ ಯಾವುದೇ ಬಗೆಯ ಕೆಟ್ಟ ಯೋಚನೆಗಳಿರದಿದ್ದರೆ, ಅವರಿಗೆ ಏನೇನೋ ಅಹಂಕಾರ ಇಲ್ಲದಿದ್ದರೆ, ಅವುಗಳೆಲ್ಲ ಅವರ ಮುಖದಲ್ಲಿ ಪ್ರತಿಫಲಿಸುತ್ತವೆ ಯಂತೆ. ತಮ್ಮನ್ನು ಹಲವು ಬಾರಿ ನಾನು ಗಮನಿಸಿದ್ದೆ. ತಮ್ಮಷ್ಟು ಶಾಂತಮುಖದ ಎರಡು ಮಕ್ಕಳ ತಾಯೊಬ್ಬರನ್ನು ನಾನು ಇದುವರೆಗೂ ಕಂಡಿರಲಿಲ್ಲ; ಅದಕ್ಕೆ...' ಆಕೆ ಮಾತು ಬದಲಿಸುವವಳಂತೆ ಹೇಳಿದ್ದಳು.

'ಮೊದಲ ಭೇಟಿಯಲ್ಲೇ 'ಪ್ರವಾದಿಪತ್ನಿ'ಯೊಬ್ಬರನ್ನು ಇಷ್ಟೊಂದು ಸಲಿಗೆಯಿಂದ ಅವರೆದುರೇ ಹೊಗಳಬಲ್ಲ ದಾಸಿಯನ್ನು ನಾನೂ ಇದುವರೆಗೆ ಕಂಡಿಲ್ಲ' ಎಂದಿದ್ದೆ ನಾದರೂ, ನನ್ನ ಮಾತಿನಲ್ಲಿ ಅಡಗಿಸಿದ್ದ ವ್ಯಂಗ್ಯ ನನಗೇ ಇಷ್ಟವಾಗಲಿಲ್ಲ. 'ತಪ್ಪು ತಿಳಿಯಬೇಡ ಅಫೀರಾ, ನಿನ್ನಂತೆಯೇ ಸಲಿಗೆಯಿಂದ ಮಾತನಾಡುವ ಭರದಲ್ಲಿ ನಿನ್ನನ್ನು ದಾಸಿಯೆಂದುಬಿಟ್ಟೆ' ಎಂದೆ.

ಅಫೀರಾ ಕುಳಿತಲ್ಲಿಂದ ಎದ್ದು ನಿಂತಿದ್ದಳು!

ಹತ್ತಿರ ಬಂದು ನನ್ನ ಬಲಗೈ ಹಿಡಿದು ಮೆತ್ತಗೆ ಅದುಮುತ್ತಾ, 'ಇಂದಿನಿಂದ ನಾನು ನನ್ನ ಪುಟ್ಟ ಒಡತಿಗೆ ಮಾತ್ರವಲ್ಲ. ತಮಗೂ ದಾಸಿಯೇ' ಎಂದಳು.

'ಇಲ್ಲ ಅಫೀರಾ. ನಿನ್ನ ಮಾತು ಸರಿಯಲ್ಲ. ಅವರಿಗೆ ಮಾತ್ರ ನೀನು ದಾಸಿ, ನನಗೆ ನೀನು ಗೆಳತಿ' ಎಂದು ಅವಳ ಕೈ ಅದುಮುತ್ತಾ ಆತ್ಮೀಯವಾಗಿಯೇ ಪ್ರಶ್ನಿಸಿದ್ದೆ, 'ಅದೆಲ್ಲ

ಇರಲಿ ಅಫೀರಾ. ಪ್ರವಾದಿಯವರು ಎಂದೂ ತಪ್ಪು ಮಾಡುವುದಿಲ್ಲ ಎಂದಿಯಲ್ಲ; ಯಾಕೆ?'

ನನ್ನಿಂದ ಬಿಡಿಸಿಕೊಂಡು, ಪಕ್ಕದಲ್ಲೇ ಇದ್ದ ಗೋಡೆಗೊರಗಿ ತೆಳ್ಳಗೆ ನಕ್ಕಳು. 'ನಾನು ತಿಳಿದುಕೊಂಡದ್ದು ಪೂರ್ತಿ ನಿಜವಲ್ಲ ಎಂಬ ನನ್ನ ಎರಡನೆಯ ಮಾತಿಗೆ ತಮ್ಮ ಈ ಪ್ರಶ್ನೆಯೇ ಸಾಕ್ಷಿ' ಎಂದುಬಿಟ್ಟಿದ್ದಳು ಅಫೀರಾ .

ನಾನೆಷ್ಟು ತಡೆದುಕೊಂಡರೂ ತಾಳ್ಮೆ ತಪ್ಪಿಬಿಟ್ಟಿತ್ತು, 'ಇನ್ನೊಬ್ಬರಿಗೆ ಒಳಿತನ್ನು ಬಯಸುವಾಗ ಕೂಡಾ ಅವರ ಸಮಯವನ್ನು ಅನಗತ್ಯವಾಗಿ ವ್ಯರ್ಥ ಮಾಡಬಾರದು ಅಫೀರಾ. ಇದೇ ರೀತಿಯಲ್ಲಿ ನೀನು ಮಾತು ಮುಂದುವರಿಸುವುದಾದರೆ, ನೀನಿಲ್ಲಿಂದ ಹೋಗಬಹುದು.' ಹುಸಿಮುನಿಸು ತೋರಿಸಿದ್ದೆ.

ಆಕೆಯ ಮುಖ ಬಣ್ಣಗೆಡಬಹುದು ಎಂದು ನೀರೀಕ್ಷಿದ್ದ ನಾನೇ ದಂಗಾಗುವಂತೆ, ತುಟಿಯಂಚಿನಲ್ಲಿ ನಗು ಇಣುಕಿಸಿದ ಅವಳು ಹೇಳಿದ್ದಳು, 'ತಾವು ಒಡತಿ. ನಾನು ದಾಸಿ. ನನ್ನನ್ನು ಹೊರಟು ಹೋಗುವಂತೆ ಹೇಳಲು ತಮಗೆ ಹಕ್ಕಿದೆ. ಆದರೆ, ನನ್ನ ಮಾತುಗಳ ಹಿಂದಿರುವ ಕಾರಣವನ್ನು ವಿವರಿಸದೇ ನಾನು ಹೋದರೆ, ತಮ್ಮ ಗೊಂದಲ ಹಾಗೆಯೇ ಉಳಿಯುತ್ತದೆ. ಕೇಳುವ ಆಸಕ್ತಿಯಿದ್ದರೆ ಹೇಳಿ ಹೋಗುವೆ ಕಾರಣ' ಎಂದಳು.

ಅವಳು ನಿಜವನ್ನೇ ಹೇಳಿದ್ದಳು. ಪ್ರವಾದಿಯವರು ಎಂದೂ ತಪ್ಪು ತೀರ್ಮಾನ ಮಾಡುವವರಲ್ಲ ಎಂದು ಮೊದಲು ಹೇಳಿದ್ದ ಅವಳು, ಆ ಬಳಿಕ ತಾನು ಹಾಗೆಂದು ತಿಳಿದುಕೊಂಡದ್ದು ಪೂರ್ತಿ ನಿಜವಲ್ಲ ಎಂದೂ ಹೇಳಿದ್ದಳು. ಪ್ರವಾದಿಯವರ ವಿರುದ್ಧ ಅವಳು ಮಾಡಿರುವ ಈ ಆರೋಪವನ್ನು ಸುಲಭವಾಗಿ ಮರೆತುಬಿಡಲು ಸಾಧ್ಯವಿದ್ದಿರಲಿಲ್ಲ. 'ಅದೇನು ಹೇಳುತ್ತೀಯಾ ಹೇಳು.' ಎಂದೆ ಚುಟುಕಾಗಿ.

'ನಾನು ಮತ್ತೊಮ್ಮೆ ಚಾಪೆಯ ಮೇಲೆ ಕುಳಿತುಕೊಳ್ಳಬಹುದೆ?' ಮುಗುಳುನಕ್ಕಳು ಅಫೀರಾ .

'ಕುಳಿತುಕೊಳ್ಳುತ್ತೀಯೋ, ನರ್ತನ ಮಾಡುತ್ತೀಯೋ.., ಏನು ಬೇಕಾದರೂ ಮಾಡು. ಅದೇನು ಹೇಳುತ್ತೀಯೋ ಅದನ್ನು ಬೇಗ ಹೇಳಿಬಿಡು' ಎಂದೆ. ಅಕೆ ಕುಳಿತುಕೊಂಡಳು.

'ಪ್ರವಾದಿಯವರು ಒಮ್ಮೆಯೂ ತಪ್ಪು ಮಾಡುವವರಲ್ಲ ಎಂದು ಹೇಳಿದ್ದು ಯಾಕೆಂದರೆ.., ಸತ್ಯವಿಶ್ವಾಸಿಗಳ ರಕ್ಷಣೆಗಾಗಿ ಜೀವತೆತ್ತ ಸಾಮಾನ್ಯ ಯೋಧರೊಬ್ಬರನ್ನು ಮರೆಯದೆ ಅವರಿಗೆ ಕೃತಜ್ಞತೆ ಸಲ್ಲಿಸುವವರಂತೆ, ಅನಾಥರಾಗಿದ್ದ ತಮಗೆ ಮತ್ತು ತಮ್ಮಿಬ್ಬರು ಮಕ್ಕಳಿಗೆ ಪ್ರವಾದಿಯವರು ಆಶ್ರಯ ಕೊಟ್ಟ ಕಾರಣಕ್ಕೆ; ಹೋಗಲಿ ಬಿಡಿ ಉಮ್ಮಾ. ಈ ವಿಷಯಗಳನ್ನೇ ಕೆದಕುತ್ತಾ ಕುಳಿತರೆ, ತಾವು ನನ್ನನ್ನು ಮನೆಯಿಂದ ಹೊರಗೆ ದಬ್ಬಬಹುದು. ಆಗ ನಾನು ಹೇಳಿದ್ದ, ನನ್ನ ನಂಬಿಕೆ ಪೂರ್ತಿ ನಿಜವಲ್ಲ ಎಂಬ ಮಾತನ್ನು ಸಮರ್ಥಿಸಿಕೊಳ್ಳಲು ನನಗೆ ಅವಕಾಶವೇ ಸಿಗಲಾರದು. ತಮ್ಮ ಗೊಂದಲ ಹಾಗೆಯೇ ಉಳಿದುಬಿಡುತ್ತದೆ. ಆದ್ದರಿಂದ, ತಾವು ಕೇಳಿದ್ದ ಮೊದಲ ಪ್ರಶ್ನೆಗೆ ಮೊದಲು ಉತ್ತರಿಸುವೆ.





'ತಮ್ಮ ಬಗ್ಗೆ ಬೇರೆಯವರು ಮಾತನಾಡಿಕೊಳ್ಳುತ್ತಿರುವುದನ್ನು ನಾನು ಕೇಳಿಸಿಕೊಂಡಿರುವೆ. ತಾವು ಬಲು ದೊಡ್ಡ ಜ್ಞಾನಿಯಂತೆ. ತಮಗೆ ಅಗಾದ ನೆನಪಿನ ಶಕ್ತಿ ಇದೆಯೆಂತೆ. ಪ್ರವಾದಿಯವರು ಇದುವರೆಗೆ ಬೋಧಿಸಿರುವ ಅಂತಿಮಸತ್ಯದ ಸಂದೇಶಗಳೆಲ್ಲವೂ ತಮಗೆ ಕಂಠಪಾಟವಾಗಿದೆಯಂತೆ. ಯಾರಾದರೊಬ್ಬರು ಅದೆಷ್ಟು ದೊಡ್ಡ ಸಮಸ್ಯೆಯನ್ನು ಹೊತ್ತುಕೊಂಡು ತಮ್ಮ ಬಳಿ ಬಂದರೂ, ತಾವು ನೀಡುವ ಸಲಹೆಗಳಿಂದ ಸಮಾಧಾನಪಟ್ಟುಕೊಂಡು ನೆಮ್ಮದಿಯಿಂದ ಮರಳುವವರಂತೆ.

'ತಮ್ಮ ಬಗೆಗಿನ ಈ ಎಲ್ಲ ಹೊಗಳಿಕೆಯ ಮಾತುಗಳನ್ನೂ ನಾನು ಪೂರ್ತಿಯಾಗಿ ನಿಜವೆಂದೇ ನಂಬಿಕೊಂಡಿದ್ದೆ. ಆದರೆ ತಾವು...? ನನ್ನ ಸಣ್ಣ ಮಾತೊಂದಕ್ಕೆ ಅಸಹನೆಪಟ್ಟು, ನಿನ್ನ ಮಾತು ಅರ್ಥವಾಗುತ್ತಿಲ್ಲವಲ್ಲಾ ಎಂದಿರಲ್ಲವೆ? ಆ ನಿಮ್ಮ ಮಾತಿಗೆ ಪ್ರತಿಕ್ರಿಯೆಯೆಂಬಂತೆ ತಮಾಷೆಯಾಗಿ ನಾನು ಆ ಮಾತು ಹೇಳಿದ್ದು. ತಾವು ನನ್ನ ಮಾತನ್ನು ತಪ್ಪಾಗಿ ಅರ್ಥ ಮಾಡಿಕೊಂಡಿರಿ. ಪ್ರವಾದಿಯ ವಿರುದ್ಧ ನಾನು ಆರೋಪಿಸುತ್ತಿರುವೆ ಎಂದು ಭಾವಿಸಿದಿರಿ. ವಿಶ್ವಾಸಿಗಳಾದ ನಾವು ಪ್ರವಾದಿಯವರ ವಿರುದ್ಧ ಆರೋಪಿಸಲು ಸಾಧ್ಯವೆ ಉಮ್ಮಾ? ಹೆಚ್ಚು ತಿಳಿದವರು ಕಡಿಮೆ ಕೋಪಗೊಳ್ಳುತ್ತಾರೆಂಬುದೇ ನನ್ನ ನಂಬಿಕೆಯಾಗಿತ್ತು. ತಪ್ಪು ತಿದ್ದಿಕೊಳ್ಳಲೆ?

ದಿಗ್ಭ್ರಮೆಯಾಗಿತ್ತು ನನಗೆ! ನನ್ನ ಅರ್ಧದಷ್ಟು ವಯಸ್ಸಾಗಿರಬಹುದಾದ ಈ ದಾಸಿಯ ಬಾಯಿಂದಲೇ ಇಂತಹ ಮಾತುಗಳೂ ಬರಬಲ್ಲುದು ಎಂಬುದನ್ನು ನಂಬಲೇ ಕಷ್ಟವಾಗುತ್ತಿತ್ತು. ಕುಳಿತಲ್ಲಿಂದ ಎದ್ದು ಎರಡು ಹೆಜ್ಜೆ ಮುಂದೆ ನಡೆದ ನಾನು ಚಾಪೆಯ ಮೇಲೆ ಕುಳಿತುಕೊಳ್ಳಲು ಕಾಲುಗಳನ್ನು ಮಡಚುತ್ತಿರುವಂತೆಯೇ ಅವಳು ಎದ್ದು ನಿಲ್ಲಲು ಯತ್ನಿಸಿದ್ದಳು. ಅವಳ ಭುಜ ಹಿಡಿದು ಜಗ್ಗುತ್ತಾ, 'ನನ್ನಂಥ ದಡ್ಡಿಯ ಜೊತೆಗೆ ಕುಳಿತುಕೊಳ್ಳಲು ನಾಚಿಕೆಯಾಗುತ್ತದೆಯಾ ಅಫೀರಾ' ಎಂದೆ.

ಅವಳು ತಲೆತಗ್ಗಿಸಿ ಕುಳಿತಳು.

'ನೀನು ನಿಜವಾಗಿಯೂ ಬುದ್ಧಿವಂತೆ ಅಫೀರಾ. ಇಂದಿನಿಂದ ನೀನು ನನ್ನ ಅಂತರಂಗದ ಗೆಳತಿ' ಎಂದೆ.

'ತಮ್ಮ ದೊಡ್ಡ ಮನಸ್ಸಿಗೆ ನಾನು ಕೃತಜ್ಞಳು ಉಮ್ಮಾ' ಎಂದ ಅಫೀರಾ , 'ನನ್ನ ಪುಟ್ಟ ಒಡತಿಯನ್ನು ಸಂಜೆಯ ಹೊತ್ತಲ್ಲಿ ಕರೆದುಕೊಂಡು ಬರಲೆ?' ಎಂದು ಪ್ರಶ್ನಿಸಿದಳು.

'ಈವತ್ತು ಬೇಡ ಅಫೀರಾ. ನಾಳೆ ಬೆಳಗ್ಗೆ ಇದೇ ಹೊತ್ತಿಗೆ ಕರೆದುಕೊಂಡು ಬಂದು ಬಿಡು. ಈವತ್ತು ರಾತ್ರಿ ಪ್ರವಾದಿಯವರು ಬರುತ್ತಿದ್ದಾರೆ. ಅವರಿಗಿಷ್ಟದ, ಒಂಟೆಯ ತೋಳಿನ ಮಾಂಸದ ಅಡುಗೆ ಮಾಡುವ ತಯಾರಿಯಲ್ಲಿರುವೆ ನಾನು' ಎಂದೆ ಸಹಜವಾಗಿ.

'ತಮಗೆ ಯಾವ ಅಡುಗೆ ಇಷ್ಟ?' ತಟ್ಟನೆ ಪ್ರಶ್ನಿಸಿದ್ದಳು ಅಫೀರಾ.

'ಪ್ರವಾದಿಯವರಿಗೆ ಯಾವುದು ಇಷ್ಟವೋ ಅದು ನನಗೂ ಇಷ್ಟ.'

'ತಮಗೆ ಇಷ್ಟವಾದದ್ದು ಅವರಿಗೆ ಇಷ್ಟವಾಗಲಾರದು ಅದು ಹೇಗೆ ನಿರ್ಧರಿಸಿಬಿಟ್ಟಿರಿ ತಾವು?' ಅಫೀರಾ ನಗುತ್ತಾ ಪ್ರಶ್ನಿಸಿದ್ದಳಾದರೂ, ಅವಳ ಪ್ರಶ್ನೆ ಉದ್ಧಟತನದ್ದು ಅನ್ನಿಸಿತ್ತು. ಆದರೆ, ಅಗತ್ಯವಿಲ್ಲದ ಯಾವುದೇ ಮಾತನ್ನು ಅಫೀರಾ ಆಡುವವಳಲ್ಲ ಎಂಬುದನ್ನು ಇದುವರೆಗಿನ ಮಾತುಕತೆಗಳಿಂದಲೇ ಅರ್ಥಮಾಡಿಕೊಂಡಿದ್ದೆ. 'ಇಷ್ಟಪಡದೆ ಏನು ಅಫೀರಾ? ಪ್ರವಾದಿಯವರು ಎಂದಾದರೂ ಯಾರದಾದರೂ ಮನಸ್ಸನ್ನು ನೋಯಿಸುತ್ತಾರೆಯೆ? ಯಾವ ಅಡುಗೆ ಮಾಡಿ ಬಡಿಸಿದರೂ ಸ್ವೀಕರಿಸುವುದಿಲ್ಲವೆ?'

'ಪ್ರವಾದಿಯವರು ಯಾರ ಮನಸ್ಸನ್ನೂ ನೋಯಿಸುವುದಿಲ್ಲ ಎಂಬ ತಮ್ಮ ಮಾತು ಅಂತಿಮಸತ್ಯದಷ್ಟೇ ನಿಜ ಉಮ್ಮಾ. ತಾವು ತಿಳಿದವರು; ಬಹಳ ತಿಳಿದವರು. ನನಗೆ ತಾವು ನಿಜವನ್ನೇ ಹೇಳಬೇಕು. ತಾನಿಷ್ಟಪಡುವ ಅಡುಗೆಯನ್ನು ತನ್ನ ಗಂಡನೂ ಇಷ್ಟಪಡಬೇಕು ಎಂಬುದಾಗಿ ಹೆಂಡತಿಗೆ ಒಮ್ಮೆಯಾದರೂ ಅನ್ನಿಸುವುದೇ ಇಲ್ಲವೆ? ತಾವೇ ಹೇಳಿ; ಯಾವ ಗಂಡು ಮನೆಯ ಹೊರಗಿನ ತನ್ನ ಕೆಲಸಗಳನ್ನು ಅವನ ಹೆಂಡತಿಯ ಇಷ್ಟದಂತೆ ಮಾಡುತ್ತಾನೆ? ಹೀಗಿರುವಾಗ, ಮನೆಯೊಳಗಿನ ಅಡುಗೆ ಕೆಲಸಗಳಲ್ಲಾದರೂ ಹೆಂಡತಿಗೆ ಆಯ್ಕೆಯ ಹಕ್ಕು ಇರಬೇಕೇ ಬೇಡವೆ?'

ಅಫೀರಾಳ ನಿರರ್ಗಳ ಮಾತುಗಳನ್ನು ಅಚ್ಚರಿಯಿಂದ ಕೇಳಿಸಿಕೊಳ್ಳುತ್ತಿದ್ದ ನಾನು, ಮಾತುಗಳ ಕೊನೆಯನ್ನು ಅವಳು ಪ್ರಶ್ನೆಯೊಂದಿಗೆ ಮುಗಿಸಿದಾಗ ಮಾತಿಗಾಗಿ ತಡಕಾಡಿದ್ದೆ.

ನನ್ನ ಮೌನವನ್ನು ಗಮನಿಸಿದ ಅಫೀರಾ, 'ತಮಗೆ ಸಣ್ಣ ಕತೆಯೊಂದನ್ನು ಹೇಳುತ್ತೇನೆ ಉಮ್ಮಾ. ಈ ಕತೆಯನ್ನು ನನಗೆ ಹೇಳಿದ್ದವರು ತೀರಿಹೋದ ನನ್ನ ಗಂಡ. ಆ ಕತೆ ನನಗೆ ತುಂಬಾ ಇಷ್ಟ. ಪೂರ್ತಿ ಕತೆ ಕೇಳಿದ ಬಳಿಕ, ನಾನೇನನ್ನು ಹೇಳಬಯಸುತ್ತೇನೆಂಬುದು ತಮಗೂ ತಿಳಿದೀತು.

'ಒಂದೂರಿನಲ್ಲಿ ಒಬ್ಬ ರಾಜನಿದ್ದ. ಆ ರಾಜನ ಸೈನಿಕರು ಒಂದು ದಿನ, ಶತ್ರುರಾಜ್ಯದ ರಾಜಕುಮಾರನೊಬ್ಬನನ್ನು ಸೆರೆಹಿಡಿದು ಆಸ್ಥಾನಕ್ಕೆ ಕರೆತರುತ್ತಾರೆ. ಆ ರಾಜ ಬಯಸಿರುತ್ತಿದ್ದರೆ ರಾಜಕುಮಾರನನ್ನು ನೇಣಿಗೇರಿಸಬಹುದಾಗಿತ್ತು. ಆದರೆ ರಾಜಕುಮಾರನ ಎಳೆಯ ವಯಸ್ಸು, ಅವನ ಮುಖದಲ್ಲಿ ಹೊಳೆಯುತ್ತಿದ್ದ ತೇಜಸ್ಸನ್ನು ಗಮನಿಸಿದ ರಾಜನು ಒಂದು ಶರತ್ತಿನೊಂದಿಗೆ ಬಿಡುಗಡೆಗೊಳಿಸುತ್ತಾನೆ. ಆ ಶರತ್ತಿನಂತೆ, ರಾಜನು ಕೇಳುವ ಪ್ರಶ್ನೆಯೊಂದಕ್ಕೆ ರಾಜಕುಮಾರನು ಒಂದು ವರ್ಷದ ಅವಧಿಯೊಳಗೆ ಉತ್ತರಿಸಬೇಕಾಗಿತ್ತು. ರಾಜಕುಮಾರನು ಸರಿಯಾದ ಉತ್ತರ ನೀಡದಿದ್ದರೆ, ಮತ್ತೊಮ್ಮೆ ಸೆರೆಹಿಡಿದು ಗಲ್ಲಿಗೇರಿಸಲಿದ್ದನು.





'ರಾಜನು ಕೇಳಿದ ಪ್ರಶ್ನೆ ಹೀಗಿತ್ತು: 'ಹೆಂಡತಿಯೊಬ್ಬಳು ಗಂಡನಿಂದ ನಿಜವಾಗಿಯೂ ಬಯಸುವುದು ಏನನ್ನು?'

'ಆಗಿನ್ನೂ ಮದುವೆಯಾಗಿರದಿದ್ದ ರಾಜಕುಮಾರನಿಗೆ ಆ ಪ್ರಶ್ನೆಗೆ ಉತ್ತರಿಸುವುದು ಬಲು ಸುಲಭ ಅನ್ನಿಸಿತ್ತು. 'ತನ್ನ ಗಂಡನ ಪ್ರೀತಿಯನ್ನಲ್ಲದೆ ಹೆಂಡತಿಯೊಬ್ಬಳು ಮತ್ತೇನನ್ನು ಬಯಸಬಹುದು?' ತಕ್ಷಣವೇ ಉತ್ತರಿಸಬೇಕೆಂದುಕೊಂಡರೂ ತಡೆದು ಕೊಂಡಿದ್ದ. ಒಂದು ವೇಳೆ ತನ್ನ ಉತ್ತರ ತಪ್ಪಾಗಿದ್ದರೆ ಇಂದೇ ನೇಣಿಗೇರಬೇಕಾದೀತು. ಉತ್ತರಿಸಲು ಹೇಗೂ ಒಂದು ವರ್ಷದ ಅವಧಿಯಿದೆ. ತನ್ನ ರಾಜ್ಯಕ್ಕೆ ಮರಳಿ, ಅಲ್ಲಿ ಈಗಾಗಲೇ ಮದುವೆಯಾಗಿರುವವರ ಜೊತೆಗೆ ಚರ್ಚಿಸಿ ನಿರ್ಧರಿಸುವುದೇ ಜಾಣತನವೆಂದು, ತನ್ನ ರಾಜ್ಯಕ್ಕೆ ಮರಳುತ್ತಾನೆ.

'ತನ್ನ ರಾಜ್ಯದಲ್ಲಿರುವ ಬುದ್ಧಿವಂತರನ್ನೆಲ್ಲಾ ಸಂಪರ್ಕಿಸಿ ಇದೇ ಪ್ರಶ್ನೆಯನ್ನು ಮುಂದಿಡುತ್ತಾನೆ. ಅರ್ಚಕರು, ನ್ಯಾಯಾಧೀಶರುಗಳು, ಗೆಳೆಯರು, ಗೆಳೆಯರ ಪತ್ನಿಯರು, ಹೀಗೆ ಎಲ್ಲರನ್ನೂ ಪ್ರಶ್ನಿಸುತ್ತಾನೆ. ಗೆಳೆಯರ ಪತ್ನಿಯರೆಲ್ಲ, ರಾಜಕುಮಾರನು ತರ್ಕಿಸಿದ್ದಂತೆಯೇ ತಮ್ಮ ಗಂಡನ ಪ್ರಾಮಾಣಿಕ ಪ್ರೀತಿಯನ್ನಲ್ಲದೆ ಬೇರೇನನ್ನೂ ಬಯಸುವುದಿಲ್ಲ ಎಂದು ಹೇಳಿದ್ದರೆ, ಬಹಳಷ್ಟು ಮಂದಿ ಬಗೆಬಗೆಯ ಉತ್ತರ ನೀಡಿದ್ದರು. ಸರಿಯಾದ ಉತ್ತರವನ್ನು ನಿರ್ಧರಿಸಲಾಗದೆ ರಾಜಕುಮಾರ ಗೊಂದಲಗೊಳ್ಳುತ್ತಾನೆ.

'ಹೀಗಿರುವಾಗ, ಶತ್ರುರಾಜನ ಆಡಳಿತದಲ್ಲಿ ಪ್ರಭಾವಿ ಅಧಿಕಾರಿಯೂ ಆಗಿದ್ದ ರಾಜಕುಮಾರನ ಆತ್ಮೀಯ ಗೆಳೆಯನೊಬ್ಬ, ಬೇರೆ ರಾಜ್ಯದಲ್ಲಿರುವ ಕುಪ್ರಸಿದ್ಧ ಮಾಟಗಾತಿಯೊಬ್ಬಳನ್ನು ಭೇಟಿಯಾಗಿ ಸರಿಯಾದ ಉತ್ತರವನ್ನು ಪಡೆದುಕೊಳ್ಳುವಂತೆ ಸಲಹೆ ನೀಡುತ್ತಾನೆ. ಅದೆಂತಹಾ ಸಂದೇಹಗಳಿಗೂ ಚಿಟಿಕೆ ಹಾರಿಸುವುದರಲ್ಲಿ ಉತ್ತರಿಸಲು ಶಕ್ತಳಾಗಿದ್ದವಳು ಆ ಮಾಟಗಾತಿ. ಆದರೆ, ತಾನು ನೀಡುವ ಉತ್ತರಕ್ಕೆ ಪ್ರತಿಯಾಗಿ ಬಲು ದೊಡ್ಡ ಮೊತ್ತವನ್ನು ನಿರೀಕ್ಷಿಸುತ್ತಿದ್ದಳು. ರಾಜಕುಮಾರನಿಗೆ ಹಣದ ಸಮಸ್ಯೆಯಿರಲಿಲ್ಲ. ಆದರೂ, ಸಣ್ಣ ಪ್ರಶ್ನೆಯೊಂದರ ಉತ್ತರಕ್ಕಾಗಿ ಮಾಟಗಾತಿಯೊಬ್ಬಳ ಎದುರು ಕೈಕಟ್ಟಿ ನಿಲ್ಲಲು ಹಿಂದೇಟು ಹಾಕುತ್ತಾನೆ. ಆದರೆ, ಶತ್ರುರಾಜನು ವಿಧಿಸಿದ ಸಮಯದ ಗಡಿ ಹತ್ತಿರವಾಗುತ್ತಿದ್ದಂತೆ ರಾಜಕುಮಾರನ ಪೇಚಾಟ ಹೆಚ್ಚಾಗುತ್ತದೆ. ನಿರುಪಾಯನಾಗಿ ಒಂದು ದಿನ ಆ ಮಾಟಗಾತಿಯ ಮನೆಗೆ ಹೋಗುತ್ತಾನೆ.

'ನಿನ್ನ ಪ್ರಶ್ನೆಗೆ ನಾನು ಉತ್ತರಿಸುವೆ. ಆದರೆ, ಉತ್ತರಕ್ಕೆ ಪ್ರತಿಯಾಗಿ ನನ್ನ ಮಾತೊಂದನ್ನು ನಡೆಸಿಕೊಡಬೇಕಾಗುತ್ತದೆ' ಎಂದು ಆ ಮಾಟಗಾತಿ ಶರತ್ತೊಂದನ್ನು ವಿಧಿಸುತ್ತಾಳೆ. ಆಕೆಯ ಹಣದಾಹದ ಅರಿವಿದ್ದ ರಾಜಕುಮಾರನು, ಹೆಚ್ಚು ಯೋಚಿಸದೆ ಆಕೆಯ ಶರತ್ತಿಗೆ ಸಮ್ಮತಿಸುತ್ತಾನೆ. ಆದರೆ ಶರತ್ತು ಕೇಳಿದಾಗ ಬೆಚ್ಚಿಬೀಳುತ್ತಾನೆ.

'ನನ್ನನ್ನು ಮದುವೆಯಾಗುವಂತೆ. ನಿನ್ನನ್ನು ನನ್ನ ಬಳಿಗೆ ಕಳುಹಿಸಿರುವ ನಿನ್ನ ಗೆಳೆಯನನ್ನು ನೀನು ಮನವೊಲಿಸಬೇಕು' ಎನ್ನುತ್ತಾಳೆ ಆ ಮಾಯಾವಿ.

ಅದಾಗಲೇ ಮುದಿಯಾಗಿರುವ ಬೆಳ್ಳಿ ಕೂದಲಿನ, ಹಳದಿ ಕೋರೆ ಹಲ್ಲುಗಳ, ಕೆಂಪು ಕಣ್ಣುಗಳ, ಇದ್ದಲಿನ ಬಣ್ಣದ, ದುರ್ನಾತ ಬೀರುತ್ತಿರುವ, ಅಸಹ್ಯ ನೋಟದ ಆ ಮಾಟಗಾತಿಯನ್ನು ಮದುವೆಯಾಗುವಂತೆ ತನ್ನ ಗೆಳೆಯನನ್ನು ಒಲಿಸುವ ಬದಲು, ಗಲ್ಲಿಗೇರುವುದೇ ಒಳ್ಳೆಯದು ಎಂದು ನಿರ್ಧರಿಸಿದ ರಾಜಕುಮಾರ ಮರಳುತ್ತಾನೆ.

ಆದರೆ, ಈ ವಿಷಯ ತಿಳಿದ ಆ ಅಧಿಕಾರಿ ಗೆಳೆಯನು, ರಾಜಕುಮಾರನ ಔದಾರ್ಯವನ್ನು ಮೆಚ್ಚಿಕೊಳ್ಳುತ್ತಾನೆ. ರಾಜಕುಮಾರನ ಸಾವಿಗೆ ಹೋಲಿಸಿದರೆ ತನ್ನ ತ್ಯಾಗ ದೊಡ್ಡದಲ್ಲ ಎಂದು ನಿರ್ಧರಿಸಿ ಮಾಟಗಾತಿಯನ್ನು ಮದುವೆಯಾಗಲು ಸಮ್ಮತಿಸುತ್ತಾನೆ. ಮದುವೆ ಒಪ್ಪಂದ ಪ್ರಕಟವಾಗುತ್ತದೆ. ರಾಜಕುಮಾರನ ಪ್ರಶ್ನೆಗೆ ಮಾಟಗಾತಿಯು ಹೀಗೆ ಉತ್ತರಿಸುತ್ತಾಳೆ: 'ಹೆಂಡತಿಯೊಬ್ಬಳು ತನ್ನ ಗಂಡನಿಂದ ನಿಜವಾಗಿ ಬಯಸುವುದು; ತನ್ನನ್ನು ತಾನೇ ಆಳುವ ಹಕ್ಕನ್ನು.'

'ಶತ್ರುರಾಜನಿಗೆ ಸುದ್ದಿ ತಲುಪುತ್ತದೆ. ಮಾಟಗಾತಿಯ ಉತ್ತರದಿಂದ ಸಂಪ್ರೀತ ನಾಗುವ ಅವನು, ತಾನು ವಿಧಿಸಿದ್ದ ಶರತ್ತಿನಿಂದ ರಾಜಕುಮಾರನನ್ನು ಬಿಡುಗಡೆ ಮಾಡುತ್ತಾನೆ. ರಾಜಕುಮಾರನ ಪ್ರಿಯಮಿತ್ರ ಅಧಿಕಾರಿ ಹಾಗೂ ಮಾಟಗಾತಿಯ ಮದುವೆ ವಿಜೃಂಭಣೆಯಿಂದ ನಡೆಯುತ್ತದೆ.

ಮೊದಲ ರಾತ್ರಿಯ ಬೀಭತ್ಸ ದೃಶ್ಯವನ್ನು ಕಲ್ಪಿಸಿಕೊಂಡು, ಅಂಜುತ್ತಾ, ಅಳುಕುತ್ತಾ ಭಯದಿಂದ ಮಲಗುವ ಕೋಣೆಯನ್ನು ಪ್ರವೇಶಿಸಿದ ಆ ಅಧಿಕಾರಿ ಗೆಳೆಯನು, ಮಿಂಚು ಹೊಡೆಸಿಕೊಂಡವನಂತೆ ನಿಂತುಬಿಡುತ್ತಾನೆ.

ಸ್ವರ್ಗಲೋಕದಿಂದ ಇಳಿದು ಬಂದಂತಿರುವ ಅತ್ಯಂತ ಸುಂದರಿಯೊಬ್ಬಳು ಮುಗುಳು ನಗುತ್ತಾ ಮಂಚದ ಮೇಲೆ ಕುಳಿತಿದ್ದಾಳೆ!

'ಇದು ಹೇಗೆ ಸಾಧ್ಯವಾಯಿತು!!?' ಅಧಿಕಾರಿ ಗಾಬರಿಯಿಂದ ಪ್ರಶ್ನಿಸಿದ್ದ.

'ಗೆಳೆಯನನ್ನು ರಕ್ಷಿಸಲು ನನ್ನಂಥ ಕುರೂಪಿ ಮಾಟಗಾತಿಯನ್ನು ಮದುವೆಯಾಗಲು ಸಿದ್ಧರಾದ ತಮ್ಮನ್ನು ಗೌರವಿಸುವ ಸಲುವಾಗಿ, ದಿನವೊಂದರ ಅರ್ಧ ಭಾಗದಲ್ಲಿ ಸುಂದರಿಯಾಗಿಯೂ, ಅರ್ಧ ಭಾಗದಲ್ಲಿ ಕುರೂಪಿಯಾಗಿಯೂ ಬದಲಾಗುತ್ತಿರಲು ನಿರ್ಧರಿಸಿರುವೆ' ಎಂದು ಮಾಟವಾಗಿ ನಕ್ಕ ಆ ಮಾಯಗಾತಿ, 'ಯಾವ ಹೊತ್ತಿನಲ್ಲಿ ಯಾವ ರೂಪದಲ್ಲಿ ನಾನು ಇರಬೇಕು ಎಂಬ ಆಯ್ಕೆಯನ್ನು ತಮಗೆ ಬಿಟ್ಟಿರುವೆ.' ಎನ್ನುತ್ತಾಳೆ.

ರಾಜನ ಆಸ್ಥಾನದಲ್ಲಿ ಪ್ರಭಾವಿ ಅಧಿಕಾರಿಯಾಗಿದ್ದವನಿಗೆ ಉಭಯಸಂಕಟ. ಅತ್ಯಂತ ಸುಂದರಿಯೊಬ್ಬಳ ಜೊತೆಗೆ ಹಗಲು ಹೊತ್ತಲ್ಲಿ ಜಂಭದಿಂದ ಉಳಿದವರ ಎದುರು ಓಡಾಡುವುದನ್ನು ಆರಿಸಿಕೊಂಡರೆ, ರಾತ್ರಿಯ ಏಕಾಂತದಲ್ಲಿ





ವಿಕಾರರೂಪಿಯ ಜೊತೆಗೆ ಏಗಬೇಕಾಗುತ್ತದೆ. ರಾತ್ರಿ ಹೊತ್ತಲ್ಲಿ ಸ್ವರ್ಗಸುಂದರಿಯ ಜೊತೆಗೆ ವಿಹರಿಸಲು ಬಯಸಿದರೆ, ಹಗಲು ಹೊತ್ತಲ್ಲಿ ಗೆಳೆಯರ ಅವಮಾನ ಸಹಿಸಿಕೊಳ್ಳಬೇಕಾಗುತ್ತದೆ. ಯಾವುದನ್ನು ಆಯ್ಕೆ ಮಾಡುವುದು ಎಂಬುದನ್ನು ನಿರ್ಧರಿಸಲಾಗದ ಅಧಿಕಾರಿ, 'ಆಯ್ಕೆ ನಿನ್ನದು' ಎಂದುಬಿಡುತ್ತಾನೆ.

ಬೆಳದಿಂಗಳಂತೆ ನಗು ಚೆಲ್ಲಿದ ಅವಳು ಮಂಚದಿಂದ ಎದ್ದು ಅಧಿಕಾರಿಯತ್ತ ಎರಡು ಹೆಜ್ಜೆ ಇರಿಸಿಸುತ್ತಾಳೆ. 'ಬದುಕಿನ ಬಹಳ ಪ್ರಮುಖ ಸಂದರ್ಭವೊಂದರಲ್ಲೂ ಹೆಂಡತಿಯೊಬ್ಬಳಿಗೆ, ಆಯ್ಕೆಯ ಹಕ್ಕನ್ನು ನೀಡಿದ ತಮ್ಮ ಔದಾರ್ಯಕ್ಕೆ ಮನಸೋತಿರುವ ನಾನು ಹಗಲಲ್ಲೂ, ರಾತ್ರಿಯಲ್ಲೂ ಹೀಗೆಯೇ ಸುಂದರಿಯಾಗಿಯೇ ಇರಲು ನಿರ್ಧರಿಸಿರುವೆ' ಎನ್ನುತ್ತಾ ಹಾಲಿನ ಬಟ್ಟಲನ್ನು ಎತ್ತಿಕೊಳ್ಳುತ್ತಾಳೆ ಆ ಸುಂದರಿ.

ಅಫೀರಾ ಹೇಳುತ್ತಿದ್ದ ಕತೆಯ ಪ್ರತಿಯೊಂದು ಪದವನ್ನೂ ಕಿವಿಯಾನಿಸಿ ಆಲಿಸುತ್ತಾ ಬೇರೆಯೇ ಲೋಕದಲ್ಲಿ ವಿಹರಿಸುತ್ತಿದ್ದ ನನಗೆ, 'ಕತೆ ಮುಗಿಯಿತು ಉಮ್ಮಾ' ಎನ್ನುತ್ತಾ ಅಫೀರಾ ನನ್ನ ಭುಜ ಹಿಡಿದು ಅಲುಗಾಡಿಸಿದಾಗಲೇ ಎಚ್ಚರವಾದದ್ದು.

ಅಫೀರಾ ಕುಳಿತಲ್ಲಿಂದ ಎದ್ದು ನಿಂತಳು. ನಾನೂ ನಿಂತೆ,

ನನಗೆ ವಂದಿಸಿ ಹೊರಟುನಿಂತ ಅಫೀರಾಳ ಎರಡೂ ಭುಜಗಳ ಮೇಲೆ ನನ್ನ ಎರಡೂ ಕೈಗಳನ್ನಿರಿಸಿ ನಾನು ಪ್ರಶ್ನಿಸಿದ್ದೆ, 'ಈ ಕತೆಯನ್ನು ಹೇಳಿದ್ದ ನಿನ್ನ ಗಂಡ ಏನು ಕೆಲಸ ಮಾಡುತ್ತಿದ್ದರು ಅಫೀರಾ ?'

'ಮಕ್ಕಾದ ನಾಟ್ಯಾಲಯದಲ್ಲಿ ಕುಡುಕರನ್ನು ರಂಜಿಸುವ ಹಾಡುಗಾರರಾಗಿ ಕೆಲಸ ಮಾಡುತ್ತಿದ್ದವರು ಅವರು.'

ಅಫೀರಾ ಯಾವುದೇ ಅಳುಕಿಲ್ಲದೆ ಹೇಳಿದ್ದಳು.

* * *

*ಅಫೀರಾ ಹೇಳಿದ ಕತೆಯ ಗುಂಗಿನಲ್ಲೇ ಇದ್ದ ನನ್ನನ್ನು ತಟ್ಟಿ ಎಬ್ಬಿಸುವವನಂತೆ ಅರ್ಷದ್ ಪ್ರಶ್ನಿಸಿದ್ದ, 'ಮುಂದಕ್ಕೆ ಹೋಗೋಣವೆ?.' ಬೆಚ್ಚಿಬಿದ್ದ ನಾನು, 'ಆ ದಾಸಿ ಹೇಳಿದ್ದ ಕತೆ ಎಷ್ಟು ಚೆನ್ನಾಗಿದೆ; ಅಲ್ವೇ ಅರ್ಷದ್ ?' ಎಂದಿದ್ದೆ.*

*'ಕತೆಗಳೆಲ್ಲವೂ ಚೆನ್ನಾಗಿಯೇ ಅನ್ನಿಸುತ್ತದೆ ಗೆಳೆಯಾ. ಯಾಕೆಂದರೆ ಅವೆಲ್ಲ ಬೇರೆಯವರ ಕತೆಗಳು. ಆದರೆ, ಅವು ನಮ್ಮ ಬದುಕಿನಲ್ಲೇ ಘಟಿಸಿದಾಗ ಮಾತ್ರ ನಾವು ಇದ್ದಕ್ಕಿದ್ದಂತೆ ಗಂಡಸರಾಗಿಬಿಡುತ್ತೇವೆ.*

*'ಈ ಚರ್ಚೆಯನ್ನು ಮತ್ತೊಮ್ಮೆ ಮಾಡೋಣ. ಈಗ ನಾವು ಮೂರನೆಯ ಪ್ರವಾದಿ ಪತ್ನಿಯನ್ನಲ್ಲ, ಮೂರನೆಯ ಪ್ರವಾದಿಪುತ್ರಿ ಕುಲ್ಸೂಮರನ್ನು ಕಾಣಲು ಹೋಗೋಣ. ಅಲ್ಲಿ ನಿನ್ನ ಈ ಪಶ್ನೆಗೆ ಉತ್ತರ ದೊರೆತರೂ ದೊರಕೀತು ಎಂದ ಅರ್ಷದ್.*

*ನಾನು ಹೊರಡಲು ಸಿದ್ಧನಾದೆ.*

❐



## ಸ್ವಗತ – ಹತ್ತು

# ಕುಲ್ಸೂಮ್ ಬಿಂತಿ ಮುಹಮ್ಮದ್

–೧–

'ನನ್ನ ಪ್ರಶ್ನೆಗೆ ಮೊದಲು ಉತ್ತರಿಸು.'

ಸಿಟ್ಟೇ ಬಂದಿತ್ತು ನನಗೆ. ನಡು ಮಧ್ಯಾಹ್ನದ ಹೊತ್ತಲ್ಲಿ ಬಾಗಿಲು ಬಡಿದ ಸದ್ದು ಕೇಳಿಸಿದಾಗ ಅಚ್ಚರಿಯಾಗಿತ್ತು. ಯಾರಿರಬಹುದು ಎಂಬ ಕುತೂಹಲದಲ್ಲೇ ಬಾಗಿಲು ತೆರೆದರೆ, ಅಂಗಳದಲ್ಲಿ ಎಳೆಮೀಸೆಯ ಹುಡುಗನೊಬ್ಬ ನಿಂತು ನನ್ನತ್ತ ಕಣ್ಣು ಪಿಳಿ ಪಿಳಿ ಮಾಡುತ್ತಿರುವುದು ಕಾಣಿಸಿತ್ತು. ಈ ಹಿಂದೆ ಎಂದೂ ಅವನನ್ನು ಕಂಡವಳಲ್ಲ ನಾನು.

'ಉಸ್ಮಾನರು ಮನೆಯಲ್ಲಿಲ್ಲ' ಎಂದಿದ್ದೆ ಚುರುಕಾಗಿ.

'ನನಗೆ ಗೊತ್ತಿದೆ.' ತಣ್ಣಗೆ ಪ್ರತಿಕ್ರಿಯಿಸಿದ್ದ ಅವನು.

'ಅವರಿಲ್ಲವೆಂಬುದು ಗೊತ್ತಿದ್ದೂ ಯಾಕೆ ಬಂದೆ?' ಅಚ್ಚರಿಯಾಗಿತ್ತು ನನಗೆ.

ಅವನು ಉತ್ತರಿಸಲು ಹಿಂಜರಿಯುತ್ತಿದ್ದಂತೆ ಅನ್ನಿಸಿತು.

'ನನ್ನ ಪ್ರಶ್ನೆಗೆ ಮೊದಲು ಉತ್ತರಿಸು.' ಅಸಹನೆಯಾಗಿತ್ತು ನನಗೆ.

'ನಾನು ತಮ್ಮ ಬಳಿಗೇ ಬಂದವನು ಉಮ್ಮಾ.' ಅವನು ನನ್ನನ್ನು ಉಮ್ಮಾ ಎಂದು ಕರೆದ ಬಳಿಕ ಅಸಹನೆ ಕರಗತೊಡಗಿತ್ತು. ಹಣದ ಸಹಾಯ ಬಯಸಿ ಬಂದಿರಬಹುದೇ ಅಂಬ ಅನುಮಾನವೂ ಮೂಡಿತ್ತು.

'ಯಾಕೆ?'

'ತಮ್ಮ ಸಹಾಯ ಬೇಕಾಗಿತ್ತು.' ನನ್ನ ಊಹೆ ನಿಜವಾಗಿತ್ತು.

'ಗಂಡನ ಅನುಮತಿಯಿಲ್ಲದೆ ಯಾವ ಹೆಣ್ಣೂ ಹಣದ ಸಹಾಯ ಮಾಡಲಾರಳು ಎಂಬುದು ನಿನಗೆ ಗೊತ್ತಿಲ್ಲವೆ? ಹಸಿವಾಗಿದ್ದರೆ ಹೇಳು. ಮನೆಯಲ್ಲಿ ಏನಾದರೂ

ಆಹಾರ ಇದ್ದರೆ ಕೊಡಬಲ್ಲೆ. ಅಲ್ಲೇ ಇರು, ನಾನು ಒಳಗೆ ಹೋಗಿ ನೋಡಿಕೊಂಡು ಬರುವೆ' ಎಂದೆ.'

'ಸ್ವಲ್ಪ ನಿಲ್ಲಿ ಉಮ್ಮಾ..'

ಅವನ ಎಳಸು ಧ್ವನಿ ಕೇಳಿ ಕನಿಕರಗೊಂಡ ನಾನು, 'ಇನ್ನೇನು ಬೇಕು?' ಎಂದು ಮೆತ್ತಗಿನ ಸ್ವರದಲ್ಲೇ ಪ್ರಶ್ನಿಸಿದ್ದೆ.

'ನನಗೆ ತಮ್ಮ ರಕ್ಷಣೆ ಬೇಕು.' ಆತನ ಧ್ವನಿಯಲ್ಲಿ ಯಾಚನೆಯಿತ್ತು.

ನಾನು ದಂಗಾಗಿದ್ದೆ! ಏನು ಹೇಳುತ್ತಿದ್ದಾನೆ ಈ ಹುಡುಗ? 'ನನ್ನಿಂದ ರಕ್ಷಣೆಯಾ? ನಾನೊಬ್ಬಳು ಹೆಣ್ಣು. ನಿನಗೇನು ರಕ್ಷಣೆ ಕೊಡಬಲ್ಲೆ? ಉಸ್ಮಾನರು ಮನೆಯಲ್ಲಿರುವಾಗ ಬಂದರೆ ಅವರು ರಕ್ಷಣೆ ಕೊಡಬಹುದು. ರಕ್ಷಣೆ ಬಯಸಿ ಬಂದವರಿಗೆ ಅವರೆಂದೂ ಇಲ್ಲವೆನ್ನುವುದಿಲ್ಲ; ಈಗ ಹೋಗು' ಎಂದಿದ್ದೆನಾದರೂ ತಕ್ಷಣ ಮನಸ್ಸು ಬದಲಿಸಿ, 'ನೀನು ಸ್ವಲ್ಪ ಹೊತ್ತು ಅಂಗಳದಲ್ಲೇ ಕುಳಿತಿರು. ನನ್ನ ಗಂಡನಿಗೆ ಹೇಳಿ ಕಳುಹಿಸುವೆ. ಅವರು ಬಂದಾಗ ನಿನಗೇನು ಬೇಕು ಎಂಬುದನ್ನು ಅವರಲ್ಲೇ ಹೇಳಿಕೊಳ್ಳು' ಎಂದೆ.

ಅವನು ಅಂಗಳದಲ್ಲಿ ಕುಳಿತುದನ್ನು ಕಂಡ ನಾನು ಪಕ್ಕದ ಮನೆಯ ಹುಡುಗನೊಬ್ಬನನ್ನು ಕರೆದು, ಗಂಡನ ಮಂಡಿಯಿದ್ದ ಸಂತೆಪೇಟೆಗೆ ಕಳುಹಿಸಿದೆ. ಅವನು ಹೋದ ಬಳಿಕ ಅಂಗಳದಲ್ಲಿ ಕುಳಿತಿರುವ ಹುಡುಗನನ್ನು ದಿಟ್ಟಿಸಿ ನೋಡಿದೆ. ಅವನೇನೂ ನಿರ್ಗತಿಕನಂತೆ ಕಾಣಿಸಲಿಲ್ಲ. ಉಳ್ಳವರ ಮನೆಯ ಹುಡುಗನಂತೆ ಉತ್ತಮವಾದ ಉಡುಪು ಧರಿಸಿದ್ದರೂ, ಬಹಳ ಕೊಳೆಯಾಗಿರುವಂತೆ ಕಾಣಿಸಿತು.

'ಎಲ್ಲಿಂದ ಬರುತ್ತಿರುವೆ ನೀನು?' ಸಾಂತ್ವನದ ಸ್ವರದಿಂದಲೇ ಪ್ರಶ್ನಿಸಿದ್ದೆ.

ಹೇಳಬೇಕೇ ಬೇಡವೇ ಎಂದು ಅನುಮಾನಿಸಿದವನಂತೆ ಸ್ವಲ್ಪ ಹೊತ್ತು ತುಟಿಬಿಗಿದು ಕುಳಿತಿದ್ದ ಅವನು ಮೆತ್ತಗೆ, ಅದೇನೋ ಅಪರಾಧ ಮಾಡಿದ್ದವನಂತೆ ಹೇಳಿದ್ದ, 'ಮಕ್ಕಾದಿಂದ'.

'ಅಲ್ಲಿಂದ ಯಾರ ಜೊತೆಗೆ ಬಂದೆ? ಇಲ್ಲಿ ಯಾರಾದರೂ ಬಂಧುಗಳಿರುವರೆ?' ನನಗೆ ಕುತೂಹಲವೆನ್ನಿಸಿತ್ತು.

'ಇದ್ದಾರೆ' ಎಂದವನ ಕಣ್ಣುಗಳಲ್ಲಿ ಮೊದಲ ಬಾರಿಗೆ ಬೆಳಕು ಮೂಡಿತ್ತು.

'ಹೌದಾ! ಹಾಗಾದರೆ, ಅವರ ಮನೆಗೆ ಹೋಗದೆ ಇಲ್ಲಿಗೇಕೆ ಬಂದೆ?' ಎಂದೇನೋ ಕೇಳಿಬಿಟ್ಟಿದ್ದೆ; ಹಾಗೆ ಕೇಳಬಾರದೆನ್ನಿಸಿತ್ತು.

'ಇದೇ ಅವರ ಮನೆ' ಅವನು ಹೇಳಿದ್ದ.

'ಇದೇ ಅವರ ಮನೆಯಾ!' ನಾನು ಗಾಬರಿಗೊಂಡಿದ್ದೆ.

'ಉಸ್ಮಾನರು ನನಗೆ ಸೋದರ ಸಂಬಂಧಿಯಾಗುತ್ತಾರೆ' ಎಂದಿದ್ದ ಅವನು.

'ನಿನ್ನ ಮಾತು ನಿಜವೆ! ಮೊದಲೇ ಯಾಕೆ ಹೇಳಲಿಲ್ಲ?'

ಅವನು ಉತ್ತರಿಸಲಿಲ್ಲ.





'ಮೊದಲೇ ಹೇಳಿರುತ್ತಿದ್ದಲ್ಲಿ, ಈ ಬಿಸಿಲಲ್ಲಿ ನಿನ್ನನ್ನು ಅಂಗಳದಲ್ಲಿ ಹೀಗೆ ಒಣಗಿಸುತ್ತಿರಲಿಲ್ಲ' ಎಂದು ನಕ್ಕೆ.

'ಕಳೆದ ಒಂದು ತಿಂಗಳಿನಿಂದ ನಾನು ಬಿಸಿಲಲ್ಲೇ ಒಣಗುತ್ತಿದ್ದವನು' ಹುಡುಗ ವಿಷಾದದಿಂದಲೇ ಹೇಳಿದ್ದ.

'ರಕ್ಷಣೆ ಬೇಕು ಎಂದೆಯಲ್ಲ; ಯಾರಿಂದ ರಕ್ಷಣೆ?' ಎಂದು ಪ್ರಶ್ನಿಸಿದೆ.

'ನನ್ನ ಬಂಧುಗಳಿಂದ..' ಎಂದವನು, 'ಹಾಗಲ್ಲ, ನನ್ನ ಬಂಧುಗಳಿಂದ ನನ್ನನ್ನು ನಾನೇ ರಕ್ಷಿಸಿಕೊಳ್ಳಬೇಕಾಗಿದೆ' ಎನ್ನುತ್ತಾ ಮಾತು ತಿದ್ದಿಕೊಂಡಿದ್ದ.

'ನಿನಗೆ ತೊಂದರೆ ಕೊಡುತ್ತಿರುವ ನಿನ್ನ ಬಂಧುಗಳು ಮಕ್ಕಾದಲ್ಲಿರುವರೆ? ಅಥವಾ ಮದೀನಾಕ್ಕೂ ಬಂದಿದ್ದಾರೆಯೆ?' ಎಂದು ಪ್ರಶ್ನಿಸಿದಾಗ, 'ಮಕ್ಕಾದಲ್ಲಿಯೂ ಇದ್ದಾರೆ. ಒಂದಿಬ್ಬರು ನನ್ನನ್ನು ಹುಡುಕಿಕೊಂಡು ಮಾರುವೇಷದಲ್ಲಿ ಇಲ್ಲಿಗೂ ಬಂದಿದ್ದಾರೆ' ಎಂದವನು ಒಮ್ಮೆಲೆ ಎದ್ದು ನಿಂತುಬಿಟ್ಟಿದ್ದ. ದೂರದ ರಸ್ತೆಯತ್ತ ದಿಟ್ಟಿಸಿ ನೋಡತೊಡಗಿದ್ದ. ಅವನ ವರ್ತನೆಗೆ ಕಾರಣವಿತ್ತು, ನಾನು ಕಳುಹಿಸಿದ್ದ ಹುಡುಗನ ಜೊತೆಯಲ್ಲಿ ನನ್ನ ಗಂಡ ಉಸ್ಮಾನರು ಬರುವುದು ಕಾಣಿಸಿತ್ತು. ಅವನಿಗೆ ಅದೇನನ್ನಿಸಿತೋ; ಅತ್ತಿತ್ತ ನೋಡಿದನು ಅಂಗಳದ ಎಡಭಾಗದಲ್ಲಿದ್ದ ಸಣ್ಣದೊಂದು ಗುಡಿಸಲೊಳಗೆ ನುಗ್ಗಿ, ಅಲ್ಲಿ ಪೇರಿಸಿಟ್ಟಿದ್ದ ಒಣಗಿದ ಒಂಟೆಚರ್ಮಗಳ ನಡುವೆ ಅವಿತುಕೊಂಡುಬಿಟ್ಟ.

ಮದುವೆಯಾದ ದಿನದಿಂದಲೂ ಅದುವರೆಗೂ ಗಂಡನನ್ನು ಮಧ್ಯಾಹ್ನದ ಹೊತ್ತಲ್ಲಿ ಮನೆಗೆ ಕರೆಸಿಕೊಂಡವಳಲ್ಲ ನಾನು. ಅವರೂ ಗಾಬರಿಯಲ್ಲಿದ್ದರು. ಮುಖದಲ್ಲಿ ಆತಂಕ ಎದ್ದು ಕಾಣಿಸುತ್ತಿತ್ತು. ಅಂಗಳಕ್ಕೆ ಕಾಲಿರಿಸುವಂತೆಯೇ ಪ್ರಶ್ನಿಸಿದ್ದರು, 'ಏನಾಯಿತು ಕುಲ್ಸೂಮ್? ಮೈ ಹುಷಾರೇನಾದರೂ...'

'ಇಲ್ಲ, ಇಲ್ಲ. ಅಲ್ಲಾಹುವಿನ ದಯೆಯಿಂದ ನಾನು ಆರೋಗ್ಯವಾಗಿಯೇ ಇದ್ದೇನೆ. ನಾನು ಕರೆಸಿದ್ದು ಬೇರೊಂದು ಕಾರಣಕ್ಕೆ. ಒಳಗೆ ಬನ್ನಿ, ಹೇಳುವೆ' ಎಂದೆ.

ಅವರು ಒಳಗೆ ಬಂದು ಕುಳಿತುಕೊಂಡ ಬಳಿಕ, ಹುಡುಗನೊಬ್ಬ ಬಾಗಿಲು ತಟ್ಟಿದ ಸದ್ದಿನಿಂದಾರಂಭಿಸಿ, ಅವನ ಜೊತೆ ನಡೆಸಿದ ಮಾತುಕತೆಗಳನ್ನೆಲ್ಲ ವಿವರಿಸಿದೆ. ಎಲ್ಲವನ್ನೂ ಶಾಂತವಾಗಿಯೇ ಆಲಿಸಿದ ಅವರು, 'ಅವನು ಯಾರೆಂಬುದು ನನಗೆ ಗೊತ್ತಾಯಿತು. ಅವನು ನನ್ನ ಬಂಧು ಎಂಬುದು ಸುಳ್ಳೂ ಅಲ್ಲ. ಆದರೆ, ನಮ್ಮ ಬಂಧುಗಳಾರೂ ಈಗ ಅವನ ಬಂಧುಗಳಾಗಿ ಉಳಿದಿಲ್ಲ. ಅವನಿಗೆ ಆಶ್ರಯ ನೀಡಬೇಕೆಂಬ ಆಸೆ ನನಗಿದ್ದರೂ, ಅದನ್ನು ನಿರ್ಧರಿಸುವ ಅಧಿಕಾರ ನನಗಿಲ್ಲ. ಅವನು ಆ ಗುಡಿಸಲಲ್ಲಿ ಸ್ವಲ್ಪ ಹೊತ್ತು ಮರೆಯಲ್ಲೇ ಇರಲಿ. ಹಸಿವು ಎಂದು ಕೇಳಿದರೆ ಏನನ್ನಾದರೂ ಕೊಟ್ಟುಬಿಡು. ನಾನು ಪ್ರವಾದಿಯವರ ಬಳಿಗೆ ಹೋಗಿ ಎಲ್ಲವನ್ನೂ

ವಿವರಿಸಿ ಅವರ ಸಲಹೆ ಕೇಳುವೆ. ಅವರು ಏನನ್ನು ಹೇಳುತ್ತಾರೋ ಹಾಗೆಯೇ ಮಾಡುವೆ' ಎಂದವರೇ ಹೊರಟು ಹೋದರು.

ಅವರು ಹೋಗಿ ಸ್ವಲ್ಪ ಹೊತ್ತಾದ ಬಳಿಕ, ಬಿಸಿ ಮಾಡಿ ಆರಿಸಿದ ಹಾಲಿನ ಪಾತ್ರೆಯೊಂದನ್ನು ಎರಡು ರೊಟ್ಟಿಗಳ ಸಹಿತ ದಾಸಿಗೆ ಕೊಡುತ್ತಾ, 'ಇದನ್ನು ಗುಡಿಸಲ ಬಾಗಿಲ ಬಳಿ ಇರಿಸಿ, ತಿನ್ನಲು ಹೇಳು. ಬೇರೇನೂ ಮಾತನಾಡದಿರು' ಎಂದೆ. ಅವಳು ಹಾಗೆಯೇ ಮಾಡಿ ಹೊಸ್ತಿಲು ದಾಟಿ ಒಳಗೆ ಹೆಜ್ಜೆಯಿಡುತ್ತಿರುವಂತೆಯೇ ಅಂಗಳದಲ್ಲಿ ಗದ್ದಲ ಕೇಳಿಸಿತ್ತು. ಆತಂಕದಿಂದ ಹೊರಗೆ ಇಣುಕಿದರೆ, ಐದಾರು ಜನರ ಗುಂಪೊಂದು ಅಲ್ಲಿ ಕಾಣಿಸಿತು. ನನ್ನನ್ನು ಕಂಡ ಅವರು ಅರೆಕ್ಷಣ ಗಲಿಬಿಲಿಗೊಂಡರೂ, ನನಗೆ ವಂದಿಸಿ, 'ನಮ್ಮ ಶತ್ರುಗಳ ಗುಂಪಿನ ಒಬ್ಬ ಹುಡುಗನೊಬ್ಬ ಈ ದಾರಿಯಲ್ಲಿ ಬಂದದ್ದನ್ನು ಗಮನಿಸಿರುವಿರಾ?' ಎಂದು ವಿನಯದಿಂದಲೇ ವಿಚಾರಿಸಿದ್ದರು.

ಹಾಗೆ ವಿನಯದಿಂದ ವಿಚಾರಿಸಿದವರೆಲ್ಲರ ಸೊಂಟಗಳಲ್ಲೂ ಹರಿತವಾದ ಖಡ್ಗಗಳು ಜೋತಾಡುತ್ತಿರುವುದನ್ನು ಕಂಡಾಗ ಎದೆ ನಡುಗಿತ್ತು. ಏನು ಹೇಳಬೇಕೆಂದೇ ಗೊತ್ತಾಗಲಿಲ್ಲ. ಸುಳ್ಳು ಹೇಳಿದರೆ, ಹುಡುಗ ಬದುಕಿಕೊಳ್ಳುತ್ತಾನೆ. ಸತ್ಯ ಗೊತ್ತಾದರೆ, ಅವನನ್ನು ಅಂಗಳದಲ್ಲೇ ಕಡಿದು ಎಸೆಯುತ್ತಾರೆ. ಪ್ರವಾದಿಪುತ್ರಿಯಾಗಿರುವ ನಾನು ಸುಳ್ಳು ಹೇಳಬಾರದು. ನಿಜವನ್ನೇ ಹೇಳಿದೆ, 'ಹುಡುಗನೊಬ್ಬ ಬಂದಿರುತ್ತಾನೆ. ಅವನು ಬಂದಿರುವುದು ನನ್ನ ಗಂಡನಿಗೂ ಈಗಷ್ಟೇ ತಿಳಿಸಿರುವೆ, ಹುಡುಗನನ್ನು ಏನು ಮಾಡಬೇಕು ಎಂಬ ಬಗ್ಗೆ ಸಲಹೆ ಪಡೆಯಲು ಅವರು ಪ್ರವಾದಿಯ ಬಳಿಗೆ ಹೋಗಿದ್ದಾರೆ. ರಕ್ಷಣೆ ಯಾಚಿಸಿ ನನ್ನ ಗಂಡನ ಬಳಿಗೆ ಬಂದಿರುವ ಹುಡುಗನನ್ನು ಅವರು ಅಥವಾ ಪ್ರವಾದಿಯವರು ಹೇಳುವವರೆಗೂ ನಿಮಗೊಪ್ಪಿಸುವ ಅಧಿಕಾರ ನನಗಿಲ್ಲ. ಆದ್ದರಿಂದ ನೀವೆಲ್ಲ ಪ್ರವಾದಿಯವರ ಬಳಿಗೆ ಹೋಗಿ ಅವರ ಸಲಹೆ ಪಡೆಯಿರಿ' ಎಂದೆ.

ಸಿಟ್ಟಿನಿಂದ ಕೊತ ಕೊತ ಕುದಿಯುತ್ತಿದ್ದ ಅವರಿಗೆ ನನ್ನ ಮಾತು ಸಮಾಧಾನ ತಂದಿರದಿದ್ದರೂ, ನನ್ನ ಅಬ್ಬನ ಮತ್ತು ನನ್ನ ಗಂಡನ ಹೆಸರನ್ನು ಹೇಳಿದ್ದರಿಂದ ನಿರುಪಾಯರಾಗಿ ಮರಳಿ ಹೋಗಿದ್ದರು.

ಕೆಲವೇ ಹೊತ್ತಿನಲ್ಲಿ ಬಂದ ಉಸ್ಮಾನರು, ಗುಡಿಸಲಿನಲ್ಲಿದ್ದ ಹುಡುಗನನ್ನು ಮನೆಯೊಳಗೆ ಕರೆದುಕೊಂಡು ಬಂದಿದ್ದರು.

'ನಿನಗೆ ಮೂರು ದಿನಗಳ ಕಾಲವಷ್ಟೇ ರಕ್ಷಣೆ ನೀಡಲು ಪ್ರವಾದಿಯವರು ಸಲಹೆ ನೀಡಿರುವರು. ನಿನಗೊಂದು ಒಂಟೆಯನ್ನು ಕೊಡಿಸುವೆ. ಇಂದು ಕತ್ತಲಾಗುತ್ತಿರು





ವಂತೆಯೇ ಇಲ್ಲಿಂದ ಹೊರಟುಬಿಡು. ಇದಕ್ಕಿಂತ ಹೆಚ್ಚು ನಿನಗೆ ಸಹಾಯ ಮಾಡಲು ನನಗೆ ಅನುಮತಿಯಿಲ್ಲ' ಎಂದುಬಿಟ್ಟಿದ್ದರು.

## –೨–

ಉಸ್ಮಾನರು ಯಾರೊಂದಿಗೂ ಅಷ್ಟೊಂದು ನಿಷ್ಠುರವಾಗಿ ವರ್ತಿಸಿದ್ದವರಲ್ಲ. ಅವರಷ್ಟು ಕರುಣಾಮಯಿಯಾದ ಗಂಡಸನ್ನು ನಾನು ನೋಡಿದ್ದೇ ಇಲ್ಲವೆನ್ನಬೇಕು. ನಾನವರ ಹೆಂಡತಿಯಾಗುವ ಮುನ್ನವೇ ಅವರನ್ನು ಬಲು ಹತ್ತಿರದಿಂದ ಕಂಡರಿತವಳು ನಾನು. ಅವರು ಯಾರೆಂಬುದು ನನ್ನ ಮದುವೆಗೆ ಮೊದಲೇ ನನಗೆ ಚೆನ್ನಾಗಿ ಗೊತ್ತಿತ್ತು.

ಅದಕ್ಕೆ ಕಾರಣ; ತೀರಿಹೋದ ನನ್ನಕ್ಕ ರುಖಯ್ಯಾ. ಅವಳ ಗಂಡನಾಗಿದ್ದವರು ಈ ಉಸ್ಮಾನರು.

ನಾನು ಉಸ್ಮಾನರನ್ನು ಮದುವೆಯಾಗುವವಳಿದ್ದೇನೆ ಎಂಬುದಾಗಿ, ಚಿಕ್ಕಮ್ಮ ಸೌದಾರವರು ಹೇಳುವವರೆಗೂ ನಾನು ಆ ಯೋಚನೆಯನ್ನೂ ಮಾಡಿದವಳಲ್ಲ. 'ಉಸ್ಮಾನ್ ಜೊತೆಗೆ ನಿನಗೆ ಮದುವೆ ಮಾಡಿಸಲು ಪ್ರವಾದಿಯವರು ಯೋಚಿಸುತ್ತಿದ್ದಾರೆ. ನಿನಗೆ ಸಮ್ಮತಿಯಿದೆಯಾ ಮಗಳೆ?' ಎಂದು ಚಿಕ್ಕಮ್ಮ ಪ್ರಶ್ನಿಸಿದ್ದಾಗ ನಾನು ಮೊದಲು ಗಲಿಬಿಲಿಗೊಂಡಿದ್ದೆ. ಉಸ್ಮಾನರಂತಹ ಗಂಡ ಸಿಗಲು ಅದೃಷ್ಟವಿರಬೇಕು. ಹೆಂಡತಿಯೊಬ್ಬಳನ್ನು ಎಷ್ಟು ಪ್ರೀತಿಸಬೇಕು ಎಂಬುದನ್ನು ಅವರಿಂದ ಕಲಿಯಬೇಕು.

ಅಕ್ಕ ರುಖಯ್ಯಾ ತೀರಿಕೊಂಡದ್ದು 'ಬದರ್ ಯುದ್ಧ' ನಡೆಯುತ್ತಿದ್ದ ದಿನಗಳಲ್ಲಿ.

ಯುದ್ಧದಲ್ಲಿ ತೊಡಗಿಕೊಂಡಿದ್ದ ಕಾರಣದಿಂದ ಅಕ್ಕನ ಅಂತಿಮ ವಿಧಿಗಳಲ್ಲೂ ಪ್ರವಾದಿಯವರು ಭಾಗವಹಿಸಿದ್ದಿರಲಿಲ್ಲ. ಯುದ್ಧ ತಯಾರಿಯ ದಿನಗಳಲ್ಲೇ ಹೊಟ್ಟೆ ನೋವಿನಿಂದ ಚಾಪೆಗೇ ಅಂಟಿಕೊಂಡಿದ್ದಳು ರುಖಯ್ಯಾ. ಅವಳನ್ನು ಬದುಕಿಸಿ ಕೊಡುವಂತೆ ನಾವು ಮಾಡಿದ ಯಾವುದೇ ಪ್ರಾರ್ಥನೆಯನ್ನೂ ಅಲ್ಲಾಹು ಸ್ವೀಕರಿಸಿದ್ದಿರಲಿಲ್ಲ. ಬೇರೆ ಬೇರೆ ಹಕೀಮರ ಔಷಧಿಗಳೂ ಫಲ ಕೊಟ್ಟಿರಲಿಲ್ಲ. ರಾತ್ರಿ ಹಗಲೆನ್ನದೆ ರುಖಯ್ಯಾಳ ಪಕ್ಕದಲ್ಲೇ ಕುಳಿತು ಉಪಚರಿಸುತ್ತಿದ್ದ ಉಸ್ಮಾನರಿಗೆ ನನ್ನಬ್ಬ ಬದರ್ ಯುದ್ಧದಲ್ಲಿ ಭಾಗವಹಿಸುವುದರಿಂದಲೂ ವಿನಾಯಿತಿ ನೀಡಿದ್ದರು. ಯುದ್ಧದ ಗೆಲುವಿನ ಗೌರವದಲ್ಲಿ ಸಮಪಾಲು ನೀಡುವುದಾಗಿ ವಾಗ್ದಾನವನ್ನೂ ನೀಡಿದ್ದರು.

ಮದೀನಾದ ಪರಿಸರದಲ್ಲೇ ಅತ್ಯಂತ ಸೌಂದರ್ಯವತಿಯೆಂಬ ಹೆಗ್ಗಳಿಕೆಗೆ ಪಾತ್ರಳಾಗಿದ್ದವಳು ನನ್ನಕ್ಕ ರುಖಯ್ಯಾ. ಆದರೆ ಗುಣವಾಗಲಾರದ ಖಾಯಿಲೆಯಿಂದ

ಅವಳ ಮುಖದಲ್ಲಿದ್ದ ಹೊಳಪು ದಿನೇ ದಿನೇ ಕಳೆಗುಂದತೊಡಗಿತ್ತು. ಕೊನೆಗೂ ಒಂದು ದಿನ ಈ ಲೋಕದ ಬದುಕಿನಿಂದ ಮತ್ತು ಆ ಮೂಲಕ ಅನುಭವಿಸುತ್ತಿದ್ದ ಹಿಂಸೆಯಿಂದ ನನ್ನಕ್ಕ ಬಿಡುಗಡೆ ಪಡೆದಿದ್ದಳು. ಪ್ರವಾದಿಯವರ ಹೆಣ್ಣು ಮಕ್ಕಳಲ್ಲಿ ಮೊತ್ತಮೊದಲು ತೀರಿಕೊಂಡ ನನ್ನಕ್ಕ ರುಖಿಯ್ಯಾಳನ್ನು ನನಗಿಂತ ಹೆಚ್ಚು ಅದೃಷ್ಟವಂತಳೆಂದು ಭಾವಿಸಬೇಕೋ ಅಥವಾ ದುರದೃಷ್ಟೆಯೆಂದು ನಂಬಬೇಕೋ ಎಂಬುದನ್ನು ನಿರ್ಧರಿಸಲು ನಾನು ಅಸಮರ್ಥಳಾಗಿದ್ದೆ.

ಯಾಕೆಂದರೆ, ನಮ್ಮಿಬ್ಬರ ಅದೃಷ್ಟ ಹಾಗೂ ದುರದೃಷ್ಟದ ದಿನಗಳು ಒಟ್ಟೊಟ್ಟಿಗೆ ಆರಂಭವಾಗಿದ್ದವು; ಒಟ್ಟೊಟ್ಟಿಗೇ ಮುಂದುವರಿದಿದ್ದವು.

ಮದುವೆಯೆಂದರೆ ನಿಜವಾಗಿಯೂ ಏನೆಂಬುದನ್ನು ಅರಿಯುವ ಮುನ್ನವೇ ನಾವಿಬ್ಬರೂ ಒಂದೇ ದಿನ ಗಂಡಂದಿರಿಂದ ವಿಚ್ಛೇದಿತರಾಗಿದ್ದೆವು. ಅಬ್ಬನ ದೊಡ್ಡಪ್ಪನ ಮಕ್ಕಳನ್ನೇ ನಾವು ಮದುವೆಯಾಗಿದ್ದದ್ದು. ಅಬೂಲಹಬರ ಹಿರಿಯ ಮಗ ಉತ್ಬಾನನ್ನು ರುಖಿಯ್ಯಾ ಮದುವೆಯಾಗಿದ್ದರೆ, ಕಿರಿಯವನಾಗಿದ್ದ ಉತೈಬಾನನ್ನು ನಾನು ಮದುವೆಯಾಗಿದ್ದೆ. ಆದರೆ, ಗಂಡಂದಿರ ಮನೆಗೆ ನಾವು ಹೆಜ್ಜೆಯೂರುವ ಮುನ್ನವೇ ನಾವು ಗಂಡಂದಿರಿಂದ ಮರಳಿ ಕೂಡಲಾಗದಷ್ಟು ದೂರಕ್ಕೆ ದಬ್ಬಲ್ಪಟ್ಟಿದ್ದೆವು. ಈ ಒಂದು ಸಂಗತಿಯಲ್ಲಿ ಮಾತ್ರ ನಾವಿಬ್ಬರೂ ಸಮಾನ ದುಃಖಿಗಳಾಗಿದ್ದೆವು.

ಈ ನಮ್ಮ ನೋವಿಗೆ ಕಾರಣ ನಾವಲ್ಲ. ನಮ್ಮ ಅಬ್ಬನನ್ನು ಪ್ರವಾದಿಯನ್ನಾಗಿ ಘೋಷಿಸಿದ್ದ ಅಲ್ಲಾಹು ಕಾರಣ.

ಮುಂದೆ ಕೆಲವೇ ತಿಂಗಳಲ್ಲಿ ರುಖಿಯ್ಯಾ, ಬಲು ಸಿರಿವಂತ ಪ್ರಭಾವೀ ಕುರೈಶ್ ಸರದಾರ ಅಫ್ಫಾರ ಮಗ ರೂಪವಂತ ಉಸ್ಮಾನರನ್ನು ಮದುವೆಯಾದಾಗ ಅವಳು ನನಗಿಂತಲೂ ಹೆಚ್ಚು ಅದೃಷ್ಟವಂತೆ ಅನ್ನಿಸಿತ್ತು. ಆದರೆ, ಮಕ್ಕಾದ ಅವಿಶ್ವಾಸಿಗಳು, ಅವರಿಬ್ಬರ ಬದುಕನ್ನೇ ನರಕವನ್ನಾಗಿಸಿ ಅಬಿಸೀನಿಯಾಕ್ಕೆ ವಲಸೆ ಹೋಗುವಂತೆ ಮಾಡಿದಾಗ, ತಂದೆಯ ಜೊತೆಗೇ ಉಳಿದುಕೊಂಡಿದ್ದ ನಾನೇ ಹೆಚ್ಚು ಸುಖಿಯೆಂದುಕೊಂಡಿದ್ದೆ. ಅದರೆ, ವರ್ಷದ ಬಳಿಕ ಅಬಿಸೀನಿಯಾದಿಂದ ಮರಳಿದ ಅವರಿಗೆ ಅಬ್ದುಲ್ಲಾ ಎಂಬ ಮುದ್ದಾದ ಮಗ ಹುಟ್ಟಿದಾಗ ಅಕ್ಕನೇ ನನಗಿಂತ ಹೆಚ್ಚು ಸುಖಿಯೆಂದುಕೊಂಡಿದ್ದೆ. ಮುಂದೆ ಮಕ್ಕಾದ ಕುರೈಶರ ಉಪಟಳದಿಂದ ಬೇಸತ್ತ ಪ್ರವಾದಿಯವರು ಮದೀನಾಕ್ಕೆ ವಲಸೆ ಹೋದಾಗ ನಾವಿಬ್ಬರೂ ಮತ್ತೊಮ್ಮೆ ಸಮಾನ ದುಃಖಿಗಳಾಗಿದ್ದೆವು. ಕೆಲಕಾಲದ ಬಳಿಕ ನಾವೆಲ್ಲ ಮದೀನಾ ತಲುಪಿದ್ದೆವು.

ಮಕ್ಕಾದಿಂದ ತಮ್ಮ ಸಂಪತ್ತನ್ನೆಲ್ಲ ಜೊತೆಗೇ ಒಂಟೆಗಳ ಮೇಲೆ ಹೇರಿಕೊಂಡೇ ಬಂದಿದ್ದ ಉಸ್ಮಾನರು ಮದೀನಾದಲ್ಲಿ ದೊಡ್ಡ ಮನೆ ಖರೀದಿಸಿ ಬದುಕು ಮುಂದುವರಿಸಿದ್ದರು. ನಮ್ಮಂತೆ ಮದೀನಾದ ಅನ್ಸಾರಿಗಳ ನೆರವು ಅವರಿಗೆ





ಬೇಕಾಗಿದ್ದಿರಲಿಲ್ಲ. ನಮಗಿಂತ ಮೊದಲೇ ಬಂದು ಮದೀನಾದಲ್ಲಿ ನೆಲಸಿದ್ದ ಮುಸ್ಲಿಮರು ಸಣ್ಣ ಪುಟ್ಟ ಕೃಷಿ ಕೆಲಸಗಳಲ್ಲೇ ತಮ್ಮ ಜೀವನ ಕಟ್ಟಿಕೊಂಡಿದ್ದರು. ಮದೀನಾದಲ್ಲಿರುವ ಯೆಹೂದೀಯರಿಗೆ ಸೆಡ್ಡುಹೊಡೆದು ವ್ಯಾಪಾರ ವ್ಯವಹಾರಗಳನ್ನು ನಡೆಸುವ ಚಾಕಚಕ್ಯತೆಗಳೂ ಅವರಲ್ಲಿರಲಿಲ್ಲ. ವ್ಯಾಪಾರ ವಹಿವಾಟುಗಳಲ್ಲಿ ಬಲು ಜಾಣರಾಗಿದ್ದ ಯೆಹೂದೀಯರು ಮಿಕ್ಕವರಿಗೆ ಆ ಅವಕಾಶವನ್ನೂ ಬಿಟ್ಟುಕೊಡು ತ್ತಿರಲಿಲ್ಲ. ಆದರೆ, ಅದಾಗಲೇ ವ್ಯಾಪಾರದ ಎಲ್ಲ ಪಟ್ಟುಗಳನ್ನೂ ಕಲಿತೇ ಮದೀನಾಕ್ಕೆ ವಲಸೆ ಬಂದಿದ್ದ ಉಸ್ಮಾನರು, ಎದುರಾದ ಎಲ್ಲ ಅಡೆತಡೆಗಳನ್ನೂ ತಮ್ಮ ಅನುಭವದ ಬಲದಿಂದ ಜಯಿಸಿ, ಕೆಲವೇ ತಿಂಗಳುಗಳಲ್ಲಿ ಮದೀನಾದ ಪಸಿದ್ಧ ವರ್ತಕರಲ್ಲೊಬ್ಬರೆನ್ನಿಸಿಕೊಂಡಿದ್ದರು. ಅವರಷ್ಟು ಸುಖವಾಗಿ ಬದುಕು ನಡೆಸುತ್ತಿರುವ ದಂಪತಿಯೇ ಮದೀನಾದಲ್ಲಿ ಬೇರಿಲ್ಲ ಎಂದು ಜನರಾಡಿಕೊಳ್ಳುತ್ತಿರುವಾಗ, ನನಗಿಂತ ನನ್ನಕ್ಕನೇ ಹೆಚ್ಚು ಅದೃಷ್ಟವಂತಳು ಅನ್ನಿಸಿತ್ತು.

ಆದರೆ, ಸಾಕಿದ ಕೋಳಿಯೊಂದು ಕಚ್ಚಿದ ಸಣ್ಣ ಕಾರಣದಿಂದ ಅವಳ ಮುದ್ದಾದ ಮಗು ತೀರಿಕೊಂಡಾಗ ನಾವಿಬ್ಬರೂ ಸಮಾನವಾಗಿ ದುಃಖಿಸಿದ್ದೆವು. ಮಗುವನ್ನು ಕಳೆದುಕೊಂಡ ನೋವಿನಿಂದ ರುಖಿಯ್ಯಾ ಚಾಪೆ ಹಿಡಿದಾಗ, ಅಕ್ಕನಿಗಿಂತ ನಾನೇ ಹೆಚ್ಚು ದುಃಖಿಸಿದ್ದೆ. ಅಕ್ಕ ತೀರಿಕೊಂಡಾಗ ನನ್ನಂತೆ ದುಃಖಿಸಲು ಅವಳೇ ಇರಲಿಲ್ಲ. ಅಕ್ಕನ ಮರಣದ ಬಳಿಕ ಪ್ರವಾದಿಯವರ ಸಲಹೆಯಂತೆ ನಾನು ಉಸ್ಮಾನರನ್ನು ಮದುವೆಯಾಗಿದ್ದೆ. ಅವರ ಜೊತೆಗೆ ಮದುವೆಯಾದಾಗ ನಾನು ಸಂತಸಪಟ್ಟಿದ್ದೆ. ರುಖಿಯ್ಯಾ ಬದುಕಿರುತ್ತಿದ್ದರೆ ಏನು ಮಾಡುತ್ತಿದ್ದಳು?

–೩–

ಅನಿರೀಕ್ಷಿತವಾಗಿ ಮನೆಗೆ ಬಂದಿದ್ದ ಆ ಅಸಹಾಯಕ ಹುಡುಗ, ನಾನು ಕಟ್ಟಿ ಕೊಟ್ಟಿದ್ದ ಬುತ್ತಿಯನ್ನೆತ್ತಿಕೊಂಡು ಒಂಟೆಯೇರಿ ದೂರವಾಗುತ್ತಿರುವ ದೃಶ್ಯವನ್ನು ಮರೆಯಲು ಹಲವು ದಿನಗಳೇ ಬೇಕಾದವು. ಅವನ ಗತಿಯೇನಾಗಿರಬಹುದೆಂಬ ಚಿಂತೆಯನ್ನು ಮರೆಯುವ ಮುನ್ನವೇ, ಅದಕ್ಕಿಂತಲೂ ದೊಡ್ಡ ಚಿಂತೆಯ ಮೂಟೆಯನ್ನೆತ್ತಿಕೊಂಡು ಬಂದವರಂತೆ ಮುಖ ಮುದುಡಿಸಿಕೊಂಡಿದ್ದ ಆಯಿಷಾ, ಮನೆ ಹೊಸ್ತಿಲ ಮೇಲೆ ಅಫೀರಾಳ ಜೊತೆಗೆ ಕಾಣಿಸಿದಾಗ ಗಾಬರಿಯಾಗಿತ್ತು. ಸಂಜೆಯ ಸೂರ್ಯ ಬೆಟ್ಟಗಳಾಚೆ ಅಡಗಿಕೊಳ್ಳಲು ಸಿದ್ಧತೆ ನಡೆಸುತ್ತಿದ್ದ ಹೊತ್ತು ಅದು.

'ಬನ್ನಿ ಚಿಕ್ಕಮ್ಮಾ' ಎಂದೆ.

ಬಾಲ್ಯದಲ್ಲಿ ಜೊತೆಯಲ್ಲಿ ಆಟವಾಡಿಕೊಂಡು ಬೆಳೆದಿದ್ದ ನನಗಿಂತಲೂ ಸುಮಾರು ಹತ್ತು ಹನ್ನೆರಡು ವರ್ಷಕ್ಕೂ ಚಿಕ್ಕವರಾಗಿದ್ದ ಈ ಪುಟ್ಟ ಸುಂದರಿ ಆಯಿಷಾ ನನಗೀಗ ಚಿಕ್ಕಮ್ಮ. ಮೂರನೆಯ ಪ್ರವಾದಿಪತ್ನಿ ಎಂದು ಕರೆಸಿಕೊಳ್ಳುತ್ತಿರುವ ಅವರು ನನಗೆ 'ಉಮ್ಮಾ' ಕೂಡಾ.

ಭಾರವಾದ ಹೆಜ್ಜೆಯನ್ನು ಪ್ರಯಾಸದಿಂದ ಎತ್ತಿಕೊಂಡವರಂತೆ ಚಿಕ್ಕಮ್ಮ ಹೊಸಿಲು ದಾಟಿ ಒಳಬರುತ್ತಿರುವಾಗ ವಾಲಿದಂತಾಗಿ ಅಫೀರಾಳ ತೋಳಿಗೆ ಆತುಕೊಂಡಿದ್ದರು. ಅದನ್ನು ಕಂಡ ನಾನು ಗಡಬಡಿಸಿ ಬಾಗಿಲತ್ತ ಧಾವಿಸಿದೆ. ಹತ್ತಿರ ಹೋಗಿ ಅವರ ಕೈಹಿಡಿದು 'ಏನಾಯಿತು ಚಿಕ್ಕಮ್ಮಾ, ಯಾಕೆ ಹೀಗಿದ್ದೀರಿ?' ಎನ್ನುತ್ತಾ ಚಾಪೆಯ ಮೇಲೆ ಕುಳ್ಳಿರಿಸಿದೆ.

ಅಫೀರಾ ಗೋಡೆಗೊರಗಿ ನಿಂತುಕೊಂಡಳು. ಅವಳತ್ತ ತಿರುಗಿ, 'ಏನಾಯಿತೇ ಅಫೀರಾ ಎಂದು ಕಣ್ಣುಗಳಲ್ಲೇ ಪ್ರಶ್ನಿಸಿದಾಗ, ಅವಳು ಉತ್ತರಿಸುವ ಬದಲು, ಚಾಪೆಯ ಮೇಲೆ ಮೊಣಕಾಲುಗಳ ನಡುವೆ ಮುಖ ಅಡಗಿಸಿ ಮುದುಡಿ ಕುಳಿತಿದ್ದ ಚಿಕ್ಕಮ್ಮನತ್ತ ಅಸಹಾಯಕಳಾಗಿ ದಿಟ್ಟಿಸಿದ್ದಳು.

'ಬೆಳಗ್ಗೆ ಝೈದ್ ಬಂದಿದ್ದರು.' ಮೊಣಕಾಲುಗಳ ಸಂದಿಯಲ್ಲಿ ಹುದುಗಿಸಿಕೊಂಡಿದ್ದ ಮುಖವನ್ನು ಎತ್ತದೆಯೇ ಹೇಳಿದ್ದರು ಚಿಕ್ಕಮ್ಮ.

ನನಗೆ ಚಿಕ್ಕಮ್ಮನ ಮಾತಿನ ತಲೆಬುಡ ಅರ್ಥವಾಗಲಿಲ್ಲ. ಝೈದ್ ಬಂದರೆ ಏನಾಯಿತು? ನನಗಿಂತ ಸುಮಾರು ಇಪ್ಪತ್ತು ವರ್ಷಕ್ಕೂ ಹೆಚ್ಚು ಹಿರಿಯರಾಗಿದ್ದ, ಬಾಲ್ಯದಲ್ಲಿ ನನ್ನನ್ನು ಎತ್ತಿಕೊಂಡು ಮುದ್ದಾಡುತ್ತಿದ್ದ ನನ್ನಣ್ಣ ಝೈದ್, ಅವರು ನನ್ನ ಒಡಹುಟ್ಟಿದ ಅಣ್ಣನಲ್ಲವೆಂಬುದು ದೊಡ್ಡವಳಾದ ಅನಂತರವೇ ಗೊತ್ತಾದದ್ದು. ಒಂದು ದಿನ ಉಮ್ಮನೇ ಎಲ್ಲವನ್ನೂ ನನಗೆ ವಿವರಿಸಿದ್ದರು.

ಕ್ರೈಸ್ತ ಧರ್ಮಾವಲಂಬಿ ಹಾರಿಸ್ ಬಿನ್ ಶರಾಹಿಲ್ ಮಗನಾಗಿದ್ದ ಝೈದರನ್ನು ಪುಟ್ಟ ಬಾಲಕನಾಗಿದ್ದಾಗ ಅಪಹರಿಸಿದ್ದ ಕೈಸ್ ಗೋತ್ರದವರು, ಹಿಬಾಶಾ ಗುಲಾಮರ ಸಂತೆಯಲ್ಲಿ ಮಾರಾಟಕ್ಕಿಟ್ಟಿದ್ದರಂತೆ. ಬೇರಾವುದೋ ಕೆಲಸದ ಮೇಲೆ ಗೆಳೆಯರೊಂದಿಗೆ ಸಂತೆಗೆ ಹೋಗಿದ್ದ ನನ್ನ ಉಮ್ಮ ಖದೀಜಾರ ದೂರದ ಸಂಬಂಧಿ ಹಿಝಾಮ್ ಎಂಬವರು ಆ ಕಂದುವರ್ಣದ, ಏನೇನೂ ಚಂದವಿಲ್ಲದ ಹುಡುಗನನ್ನು ಖರೀದಿಸಿ ನನ್ನ ಉಮ್ಮನಿಗೆ ಉಡುಗೊರೆಯಾಗಿ ನೀಡಿದ್ದರು. ಮುಂದೆ ಕೆಲ ಕಾಲದ ಆನಂತರದಲ್ಲಿ ಖದೀಜಾರನ್ನು ಮದುವೆಯಾಗಿದ್ದ ನನ್ನಬ್ಬ, ಆ ಹುಡುಗನನ್ನು ಗುಲಾಮಗಿರಿಯಿಂದ ಬಿಡುಗಡೆಗೊಳಿಸಿ ಹೆತ್ತವರಿಗೆ ಸುದ್ದಿ ಮುಟ್ಟಿಸಿದ್ದರು. ಸಂತೋಷದಿಂದ ಅವರೂ ಓಡೋಡಿ ಬಂದಿದ್ದರು. 'ತಾವು ಕೇಳಿದಷ್ಟು ಬಂಗಾರ





ಕೊಡಲು ಸಿದ್ಧರಿರುವೆವು; ತಮ್ಮ ಪ್ರೀತಿಯ ಪುತ್ರನನ್ನು ಬಿಟ್ಟುಬಿಡಿ' ಎಂದು ಬಗೆಬಗೆಯಾಗಿ ಬೇಡಿಕೊಂಡಿದ್ದರು. ಅಬ್ಬ ಕೂಡಾ ಅಡ್ಡಿಪಡಿಸಿದ್ದಿರಲಿಲ್ಲ. ಆದರೆ, ಮಗನಂತೆ ಸಾಕಿ ಸಲಹುತ್ತಿರುವ ನನ್ನಬ್ಬನನ್ನು ತೊರೆದು, ಹೆತ್ತವರ ಜೊತೆಗೆ ಹೋಗಲು ಝೈದ್ ನಿರಾಕರಿಸಿದ್ದರು. ಆನಂತರದ ಒಂದು ದಿನ, ಆ ಹುಡುಗನನ್ನು ಕರೆದುಕೊಂಡು ಕಅಬಾ ದೇವಮಂದಿರಕ್ಕೆ ಹೋಗಿದ್ದ ನನ್ನಬ್ಬ, ಊರ ಹಿರಿಯರೆದುರು ಸಂಪ್ರದಾಯದಂತೆ ಹುಡುಗನನ್ನು 'ದತ್ತುಪುತ್ರ'ನನ್ನಾಗಿ ಸ್ವೀಕರಿಸುವ ಪ್ರಮಾಣ ಮಾಡಿದ್ದರು. ಅಬ್ಬನ ಎಲ್ಲ ಕಷ್ಟ ಸುಖಗಳಲ್ಲೂ ಜೊತೆಗಿರುತ್ತಿದ್ದ ಈ ದೊಡ್ಡಣ್ಣ ಝೈದ್ ಅಬ್ಬನ ಬಲಗೈಯಾಗಿಯೇ ಬೆಳೆದಿದ್ದರು.

ಈ ಗುಟ್ಟನ್ನು ಈಗ ತಿಳಿದುಕೊಂಡ ಚಿಕ್ಕಮ್ಮ 'ನನಗೇಕೆ ಇವನ್ನೆಲ್ಲ ಮುಂಚೆಯೇ ತಿಳಿಸಲಿಲ್ಲ?' ಎಂದು ಪ್ರಶ್ನಿಸಲು ಬಂದಿರಬಹುದೆ? ಎಂದು ಯೋಚಿಸುತ್ತಿರು ವಂತೆಯೇ ನನ್ನ ಯೋಚನೆಯ ಬಗ್ಗೆ ನನಗೇ ನಾಚಿಕೆಯೆನ್ನಿಸಿತು. ಆಯಿಷಾ ಚಿಕ್ಕಮ್ಮ ಇಷ್ಟು ಸಣ್ಣದಾಗಿ ಯೋಚಿಸುವವರಲ್ಲ. ಬೇರೇನೋ ಕಾರಣವಿರಬಹುದು. ಏನಿರ ಬಹುದು? ಮುದುಡಿದ ಮುಖದ ಕಾರಣವನ್ನು ಮನಸ್ಸಿನೊಳಗೇ ಲೆಕ್ಕಹಾಕುತ್ತಿರು ವಂತೆಯೇ, ನನ್ನ ಊಹೆಯನ್ನು ಸಮರ್ಥಿಸುವವಳಂತೆ ಅಫೀರಾ, 'ಪ್ರವಾದಿಯವರು ಇನ್ನೊಬ್ಬರನ್ನು ಮದುವೆಯಾಗುವವರಿದ್ದಾರೆ.' ಮದುವೆಗೆ ಹೇಳಿಕೆ ನೀಡುವವಳಂತೆ ತಿಳಿಸಿದ್ದಳು.

ಮೊದಲ ಪ್ರವಾದಿಪತ್ನಿಯ ಗೌರವ ಪಡೆದ ನನ್ನ ಉಮ್ಮ ಖದೀಜಾರನ್ನು ಹೊರತುಪಡಿಸಿದರೆ ಮಿಕ್ಕ ಮದುವೆಗಳಿಗೆಲ್ಲ ಅವುಗಳದ್ದೇ ಆದ ಕಾರಣಗಳಿದ್ದವು. ಪ್ರಮುಖ ಕಾರಣ; ಧರ್ಮರಕ್ಷಣೆಗೆ ಅಗತ್ಯವಿರುವ ಗೆಳೆಯರನ್ನು ಸಂಪಾದಿಸುವ ರಾಜಕೀಯ ತಂತ್ರಗಾರಿಕೆ. ಆಯಿಷಾ ಚಿಕ್ಕಮ್ಮನನ್ನು ಹೊರತುಪಡಿಸಿದರೆ ಮಿಕ್ಕವರೆಲ್ಲರೂ ಗಂಡಂದಿರನ್ನು ಕಳೆದುಕೊಂಡ, ಮಕ್ಕಳಿರುವ ಅಸಹಾಯಕ ವಿಧವೆಯರು. ಈಗ ಮತ್ತೊಂದು ಮದುವೆಯಾಗಹೊರಟದ್ದು ಯಾರನ್ನಿರಬಹುದು?

'ಯಾರನ್ನು ಮದುವೆಯಾಗುತ್ತಾರಂತೆ?' ಅದೇನೂ ದೊಡ್ಡ ಸಂಗತಿಯೆಂದು ನನಗನ್ನಿಸುವುದಿಲ್ಲ ಎಂಬುದನ್ನು ಧ್ವನಿಸುವಂತೆಯೇ ಪ್ರಶ್ನಿಸಿದ್ದೆ.

ಅಫೀರಾ ಉತ್ತರಿಸಲು ಹಿಂದೇಟು ಹಾಕುತ್ತಿರುವಂತೆ ಭಾಸವಾಯಿತು.

ಚಿಕ್ಕಮ್ಮನನ್ನೇ ಪ್ರಶ್ನಿಸಿದೆ, 'ಯಾರನ್ನು ಅಂತೆ?'

ಅವರೂ ಉತ್ತರಿಸಲು ಹಿಂದುಮುಂದು ನೋಡಿದರು.

'ಯಾರ ಮಗಳನ್ನು?' ನಾನು ಇಬ್ಬರನ್ನೂ ಅನ್ವಯಿಸುವಂತೆ ಪ್ರಶ್ನಿಸಿದ್ದೆ.

'ಮಗಳನ್ನಲ್ಲ; ಹೆಂಡತಿಯನ್ನು' ಬಲುದೊಡ್ಡ ಗುಟ್ಟಿನ ಬಾಗಿಲು ತೆರೆಯುವವಳಂತೆ ಹೇಳಿದ್ದಳು ಅಫೀರಾ.

ನಾನು ಅವಾಕ್ಕಾಗಿದ್ದೆ! ಏನು ಹೇಳುತ್ತಿದ್ದಾಳೆ ಈ ಅಫೀರಾ?

'ನಿನ್ನ ಪ್ರತಿಯೊಂದು ಮಾತಿನಲ್ಲೂ ಒಗಟು ಕಾಣಿಸುತ್ತದೆ ಅಫೀರಾ. ಒಗಟು ಬಿಡಿಸುವಷ್ಟು ವ್ಯವಧಾನ ನನಗಿಲ್ಲ. ಮನೆಯಲ್ಲಿ ಕೈಕಾಲು ಬೀಳುವಷ್ಟು ಕೆಲಸಗಳು ಬಿದ್ದಿವೆ. ಚಿಕ್ಕಮ್ಮನನ್ನು ಕರೆದುಕೊಂಡು ಇಲ್ಲಿಗೆ ಬಂದದ್ದೇಕೆ ಎಂಬುದನ್ನು ನೇರವಾಗಿಯೇ ಹೇಳು' ಸಿಟ್ಟು ಅಭಿನಯಿಸುತ್ತಲೇ ಹೇಳಿದ್ದೆ.

'ಪ್ರವಾದಿಯವರು ತಮ್ಮ ದತ್ತುಪುತ್ರ ಝೈದರ ಹೆಂಡತಿ ಝೈನಬರನ್ನು ಮದುವೆಯಾಗುತ್ತಾರಂತೆ' ಅಫೀರಾ ತಣ್ಣಗೆ ಹೇಳಿದ್ದಳು. ಕಅಬಾ ಮಂದಿರವೇ ಜರಿದುಬಿದ್ದಂತಾಗಿತ್ತು!

'ತಲೆಕೆಟ್ಟಿದೆಯೇ ನಿನಗೆ ಅಫೀರಾ!! ಏನು ಹೇಳುತ್ತಿರುವಿ ಎಂಬ ಜ್ಞಾನವಾದರೂ ಇದೆಯಾ ನಿನಗೆ?' ಗಟ್ಟಿಯಾಗಿಯೇ ಕಿರುಚಿದ್ದೆ. ಕಾಲುಗಳು ಶಕ್ತಿಯನ್ನೇ ಕಳೆದುಕೊಂಡಿದ್ದವು. ಚಿಕ್ಕಮ್ಮನ ಪಕ್ಕದಲ್ಲಿ ಚಾಪೆಯ ಮೇಲೆ ಕುಸಿದು ಕುಳಿತ ನಾನು, ಅವರ ಎರಡೂ ಭುಜಗಳನ್ನು ಹಿಡಿದುಕೊಂಡು ಅಲುಗಾಡಿಸುತ್ತಾ ಪ್ರಶ್ನಿಸಿದೆ, 'ಏನು ಚಿಕ್ಕಮ್ಮ ಇದೆಲ್ಲಾ? ಅಫೀರಾ ಹೇಳುತ್ತಿರುವುದು ನಿಜವೆ? ಝೈದ್ ಜೊತೆಗೆ ಬಾಳುತ್ತಿರುವ ಝೈನಬಳನ್ನು ನನ್ನ ಅಬ್ಬ ಮದುವೆಯಾಗುತ್ತಿದ್ದಾರೆಯೆ?'

'ಝೈನಬರಿಗೆ ಮೊದಲು ಝೈದ್ ವಿಚ್ಛೇದನ ಕೊಡುತ್ತಾರಂತೆ. ಆನಂತರ ಪ್ರವಾದಿಯವರು ಅವರನ್ನು ಮದುವೆಯಾಗುತ್ತಾರಂತೆ.' ಈ ಬಾರಿಯೂ ಉತ್ತರಿಸಿದ್ದವಳು ಅಫೀರಾಳೇ.

'ಈ ಹಸಿ ಹಸಿ ಸುಳ್ಳುಗಳನ್ನೆಲ್ಲ ನಿಮಗೆ ಹೇಳಿದವರು ಯಾರು ಅಫೀರಾ?' ನನ್ನ ಧ್ವನಿ ನಡುಗುತ್ತಿತ್ತು.

'ಬೇರೆ ಯಾರೂ ಹೇಳಿದ್ದಲ್ಲ; ನನ್ನ ಒಡತಿ ಕಿವಿಯಾರೆ ಕೇಳಿಸಿಕೊಂಡ ಸತ್ಯ ಇದು.' ಅಫೀರಾ ಸಮಜಾಯಿಸಿ ನೀಡಿದ್ದಳು.

'ಕಿವಿಯಾರೆ ಕೇಳಿಸಿದ್ದು ಸರಿ; ಒಪ್ಪಿದೆ. ಹೇಳಿದವರಿಗೆ ಯಾರೂ ಹೆಸರನ್ನೇ ಇಟ್ಟಿರಲಿಲ್ಲವೇ ಅಫೀರಾ?'

'ಪ್ರವಾದಿಯವರು' ಅಳುಕುತ್ತಾ ಹೇಳಿದ್ದಳು ಅಫೀರಾ. 'ಸಣ್ಣ ಒಡತಿಯ ಎದುರಲ್ಲೇ ಪ್ರವಾದಿ ಮತ್ತು ಝೈದರ ನಡುವೆ ನಡೆದ ಮಾತುಗಳು ಅವು.'

'ಏನು!' ಚಿಕ್ಕಮ್ಮನ ಕಣ್ಣೆದುರೇ ನಡೆದ ಮಾತುಗಳಾ!' ನನಗೆ ನಂಬಿಕೆಯೇ ಆಗಿರಲಿಲ್ಲ.

'ಹಾಗಾಗಲು ಸಾಧ್ಯವಿಲ್ಲ ಅಫೀರಾ, ಮಗನ ಹೆಂಡತಿಯನ್ನು ಅಬ್ಬ ಮದುವೆಯಾಗಲು ಸಾಧ್ಯವೇ? ಅಲ್ಲಾಹುವಿನಿಂದ ತಮಗೆ ಕಾಲ ಕಾಲಕ್ಕೆ ದೊರೆಯುವ ಸಂದೇಶಗಳನ್ನು, ಮೊದಲು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಬಳಿಕವೇ ಇತರರಿಗೆ ಹಂಚಿಕೊಂಡು ಮಾದರಿಯಾಗಿ ಬದುಕುತ್ತಿರುವ ನನ್ನ ಅಬ್ಬನಿಂದ ಈ ತಪ್ಪು ನಡೆಯಲು ಸಾಧ್ಯವೇ? ಇಲ್ಲ; ನಾನು ನಂಬುವುದಿಲ್ಲ. ಇದಕ್ಕೆ ಝೈನಬ್ ಸಮ್ಮತಿಸಿದ್ದಾರೆಯೇ?





ನನ್ನಬ್ಬನ ಸೋದರ ಸಂಬಂಧಿ ಜಹಶ್ ಮಗಳು ಝೈನಬ್. ನಾವೆಲ್ಲ ಮಕ್ಕಾದಲ್ಲಿದ್ದ ದಿನಗಳಲ್ಲೇ ಗಂಡನನ್ನು ಕಳೆದುಕೊಂಡಿದ್ದ ಅವರು ತನ್ನ ಸೋದರ ಅಬ್ದುಲ್ಲಾರ ಆಶ್ರಯದಲ್ಲೇ ಬದುಕು ಮುಂದುವರಿಸಿದ್ದರು. ಯಾರೆಷ್ಟು ಒತ್ತಾಯಿಸಿದರೂ ಮತ್ತೊಂದು ಮದುವೆಗೆ ಸಮ್ಮತಿಸುತ್ತಿದ್ದಿರಲಿಲ್ಲ. ಸರಿ ಸುಮಾರು ಮೂರು ವರ್ಷಗಳ ಕಾಲ ಒಂಟಿ ಜೀವನಕ್ಕೇ ಒಗ್ಗಿಕೊಂಡಿದ್ದರು. ನಾವೆಲ್ಲ ಮಕ್ಕಾ ತೊರೆದು ಮದೀನಾ ತಲುಪಿದ ಬಳಿಕದ ದಿನಗಳಲ್ಲಿ, ಪ್ರವಾದಿಯವರ ಒತ್ತಾಯಕ್ಕೆ ಕಟ್ಟುಬಿದ್ದು ಕೊನೆಗೂ ದೊಡ್ಡಣ್ಣ ಝೈದರ ಹೆಂಡತಿಯಾಗಲು ಸಮ್ಮತಿಸಿದ್ದರು.

ಪ್ರಭಾವಶಾಲಿ ಕುರೈಶ್ ಮನೆತನದಲ್ಲಿ ಬೆಳೆದು ಬಂದವರು ಝೈನಬರು. ಆದರೆ, ದೊಡ್ಡಣ್ಣ ಹಾಗಲ್ಲ. ಒಂದು ಕಾಲದಲ್ಲಿ ಗುಲಾಮರ ಸಂತೆಯಲ್ಲಿ ಮಾರಾಟದ ವಸ್ತುವಾಗಿದ್ದವರು. ನಮ್ಮ ಮನೆತನದ ಬಳುವಳಿಯಾಗಿದ್ದ ಬಣ್ಣವೂ ಅವರಿಗಿರಲಿಲ್ಲ. ಕಂದು ಬಣ್ಣದ ದೊಡ್ಡ ದೇಹದ ದೊಡ್ಡಣ್ಣ ಅದಾಗಲೇ ನಲುವತ್ತೈದು ದಾಟಿದ್ದರು. ಒತ್ತಾಯಕ್ಕೆ ಮದುವೆಯಾಗಿದ್ದುದರಿಂದಲೇ ಇರಬಹುದು, ಅವರ ಸಂಸಾರದಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಮಾತುಗಳು ಮದೀನಾದ ಹೆಂಗಸರ ನಡುವೆ ಗುಸುಗುಸು ಮಾಡುತ್ತಿದ್ದವು. ಅಲ್ಲಾಹುವಿನ ಸೃಷ್ಟಿಯಲ್ಲಿ ಮೇಲು ಕೀಳು ಎಂಬುದಿಲ್ಲ ಎಂಬುದನ್ನು ಮಿಕ್ಕವರಿಗೆ ತೋರಿಸುವ ಸಲುವಾಗಿಯೇ, ಝೈದರನ್ನು ಮದುವೆಯಾಗುವಂತೆ ಪ್ರವಾದಿಯವರು ಝೈನಬಳನ್ನು ಒತ್ತಾಯಿಸಿದ್ದರು ಎಂಬ ಮಾತುಗಳೂ ಹರಿದಾಡುತ್ತಿದ್ದವು.

'ಅಲ್ಲಾಹು ಮತ್ತು ಅವನ ಸಂದೇಶವಾಹಕರು ತೀರ್ಮಾನಿಸಿದ ಸಂಗತಿಯೊಂದನ್ನು ಸತ್ಯವಿಶ್ವಾಸಿಯಾಗಿರುವ ಗಂಡೇ ಆಗಲಿ ಹೆಣ್ಣೇ ಆಗಲಿ ಅಕ್ಷರಶಃ ಪಾಲಿಸಲೇಬೇಕು. ತಪ್ಪಿದವರು ತಪ್ಪಿತಸ್ಥರು' ಎಂಬ ಪ್ರವಾದಿ ಸಂದೇಶವೂ ಇದನ್ನೇ ಸಮರ್ಥಿಸುತ್ತಿತ್ತು. ಮದುವೆಯಾದ ಬಳಿಕ ನಮ್ಮ ಮನೆಗೆ ಆಗಾಗ್ಗೆ ಬಂದು ನಮ್ಮ ಕುಶಲ ವಿಚಾರಿಸಿಕೊಂಡು ಹೋಗುತ್ತಿದ್ದ ಝೈನಬರ ಜೊತೆಗೆ ಹರಟುವುದೆಂದರೆ ನಮಗೆಲ್ಲ ಬಲು ಇಷ್ಟ. ಅಬ್ಬ ಕೂಡಾ ಕೆಲವೊಮ್ಮೆ ನಮ್ಮ ಹರಟೆಯಲ್ಲಿ ಸೇರಿಕೊಳ್ಳುವುದಿತ್ತು. ಅವರ ಜೊತೆಗೆ ಜಗಳಾಡುವುದರಲ್ಲೂ ನಮಗೊಂದು ಬಗೆಗೆ ಖುಷಿ ಇರುತ್ತಿತ್ತು.

ಮುಖಮುದುಡಿಸಿಕೊಂಡು ಬಂದಿದ್ದ ಚಿಕ್ಕಮ್ಮ ಕಣ್ಣೀರಿಡುತ್ತಾ ಮರಳಿದ ಬಳಿಕ ನಾನು ಕಣ್ಣೀರಿಟ್ಟಿದ್ದೆ. ಚಿಕ್ಕಮ್ಮನ ಬಾಯಿಯಿಂದ ಸುಳ್ಳು ಬರಲಾರದು. ಆದರೆ, ಚಿಕ್ಕಮ್ಮ ಮನೆಯೊಳಗೆ ಇದ್ದಾರೆ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳದೆ ಅಬ್ಬ ಮತ್ತು ದೊಡ್ಡಣ್ಣ ಆ ಮಾತುಗಳನ್ನೆಲ್ಲ ಆಡಲು ಸಾಧ್ಯವೇ ಎಂಬುದನ್ನು ನಂಬಲು ಮನಸ್ಸು ಹಿಂಜರಿಯುತ್ತಿತ್ತು.

ಚಿಕ್ಕಮ್ಮನ ಮನೆಯಲ್ಲಿ ನಡೆದದ್ದು ಇಷ್ಟು:

ದೊಡ್ಡಣ್ಣ ಝೈದರನ್ನು ಹುಡುಕಿಕೊಂಡು ಬೆಳಗಿನ ಹೊತ್ತಲ್ಲಿ ಅವರ ಮನೆಗೆ ಹೋಗಿದ್ದ ನನ್ನ ಅಬ್ಬ, ಮುಚ್ಚಿದ್ದ ಮುಂಬಾಗಿಲು ಬಡಿದಿದ್ದರಂತೆ. ತನ್ನ ಗಂಡ ಬಂದಿರಬಹುದೆಂಬ ಯೋಚನೆಯಿಂದ ಝೈನಬ್ ತಮ್ಮ ಅಸ್ತವ್ಯಸ್ತವಾದ ಉಡುಪನ್ನು ಅವಸರವಸರವಾಗಿ ಮೈಮೇಲೆ ಎಳೆದುಕೊಂಡು ಬಾಗಿಲು ತೆರೆದರೆ, ಬಾಗಿಲಿಗಡ್ಡವಾಗಿ ನನ್ನ ಅಬ್ಬ ಅಂದರೆ ಅವರ ಮಾವ ಕಾಣಿಸಿದ್ದರು. ಅನಿರೀಕ್ಷಿತ ಅತಿಥಿಯನ್ನು ಕಂಡು ಗಲಿಬಿಲಿಗೊಂಡ ಝೈನಬ್, ಏನು ಮಾಡಬೇಕೆಂಬುದನ್ನೂ ಮರೆತು ಕಲ್ಲಿನಂತೆ ನಿಂತುಬಿಟ್ಟಿದ್ದರು. 'ಝೈದ್ ಬಂದಾಗ ನನ್ನನ್ನು ಕಾಣಲು ಹೇಳು' ಎಂದಷ್ಟೇ ಹೇಳಿದ್ದ ನನ್ನಬ್ಬ ಮರಳಿದ್ದರು.

ಮಧ್ಯಾಹ್ನ ಗಂಡ ಮನೆಗೆ ಬಂದಾಗ ಝೈನಬರು, ನಡೆದುದ್ದನ್ನೆಲ್ಲ ಅವರಿಗೆ ವಿವರಿಸಿ ಹೇಳಿದ್ದರು. ಹೆಂಡತಿಯ ಮಾತನ್ನು ಆಲಿಸಿದ ದೊಡ್ಡಣ್ಣ ಒಂದು ಮಾತೂ ಆಡದೆ ಅಲ್ಲಿಂದ ನೇರವಾಗಿ ಚಿಕ್ಕಮ್ಮನ ಮನೆಗೆ ಹೋಗಿದ್ದರು. ಆಗ ಮನೆಯಲ್ಲಿ ಪ್ರವಾದಿಯವರೂ ಇದ್ದರು. ಮಗನ ಅನಿರೀಕ್ಷಿತ ಆಗಮನದಿಂದ ಪ್ರವಾದಿಯವರೂ ವಿಚಲಿತರಾಗಿದ್ದರು.

'ಯಾಕೆ ಬಂದೆ ಮಗನೇ' ಎಂದು ಪ್ರೀತಿಯಿಂದಲೇ ಪ್ರಶ್ನಿಸಿದ್ದರಾದರೂ ಅವರ ಧ್ವನಿ ಎಂದಿನಂತಿಲ್ಲ ಎಂದು ಚಿಕ್ಕಮ್ಮನಿಗೆ ಭಾಸವಾಗಿತ್ತಂತೆ. ಚಿಕ್ಕಮ್ಮನತ್ತ ಕ್ಷಮಾ ಯಾಚನೆಯ ನೋಟ ಬೀರಿದ ದೊಡ್ಡಣ್ಣ, ಚಾಪೆಯ ಮೇಲೆ ಕುಳಿತಿದ್ದ ಪ್ರವಾದಿಯವರ ಎದುರು ಮೊಣಕಾಲಲ್ಲಿ ಕುಳಿತು, 'ನಿಮ್ಮೊಂದಿಗೆ ಬಹಳ ಮುಖ್ಯವಾದ ವಿಷಯವೊಂದನ್ನು ಪ್ರಸ್ತಾಪಿಸಬೇಕಾಗಿದೆ' ಎಂದಿದ್ದರು. ಪ್ರವಾದಿಯವರು ತಮ್ಮ ಪ್ರೀತಿಯ ಮಗನ ಕೈಹಿಡಿದು ಸವರುತ್ತಾ, 'ಅದೇನು ಮುಖ್ಯವಾದ ವಿಷಯ? ಹೇಳು' ಎಂದು ಪ್ರಶ್ನಿಸಿದ್ದರು.

'ಈವತ್ತು ಮಧ್ಯಾಹ್ನ ನಮ್ಮ ಮನೆಯಲ್ಲಿ ಏನಾಯಿತು ಎಂಬುದು ತಮಗೆ ಗೊತ್ತಿದೆ' ಎಂದ ದೊಡ್ಡಣ್ಣ, ದೂರದಲ್ಲಿ ನಿಂತು ಗಮನಿಸುತ್ತಿದ್ದ ಚಿಕ್ಕಮ್ಮನವರನ್ನು ಅರೆಕ್ಷಣ ದಿಟ್ಟಿಸಿ, 'ಬಹಳ ದಿನಗಳ ಹಿಂದೆಯೇ ಇದನ್ನು ನಿಮಗೆ ಹೇಳಬೇಕಿತ್ತು' ಎಂದಿದ್ದರು.

'ಏನನ್ನು ಹೇಳಬೇಕಿತ್ತು?'

'ಝೈನಬ್ ನನ್ನ ಜೊತೆಗೆ ಹೆಂಡತಿಯಂತೆ ವರ್ತಿಸುತ್ತಲೇ ಇಲ್ಲ. ಅವಳನ್ನು ಸಣ್ಣ ಮಗು ಇದ್ದಾಗಲೇ ನೋಡಿದವರು ನೀವು. ನೀವು ಎಂದರೆ ಅವಳಿಗೆ ಪ್ರಾಣ. ಯಾವಾಗಲೂ ನಿಮ್ಮ ಗುಣಗಾನ ಮಾಡುತ್ತಲೇ ಇರುತ್ತಾಳೆ.'

'ಅದರಲ್ಲಿ ತಪ್ಪೇನಿದೆ ಝೈದ್? ನಿನ್ನ ಬಗ್ಗೆ ನನ್ನ ಮಕ್ಕಳು ಗುಣಗಾನ ಮಾಡುವುದಿಲ್ಲವೆ? ನಿನ್ನನ್ನು ತೆಗಳುವವರು ಯಾರಿದ್ದಾರೆ ಹೇಳು?





'ನನ್ನನ್ನು ಹೊಗಳುವವರು ಹೊಗಳುವ ಕಾರಣಕ್ಕೂ ತಮ್ಮನ್ನು ಝೈನಬ್ ಹೊಗಳುವ ಕಾರಣಕ್ಕೂ ಬಹಳ ವ್ಯತ್ಯಾಸಗಳನ್ನು ನಾನು ಗುರುತಿಸಿರುವೆ. ಅವಳಿಗೆ ನನ್ನ ಜೊತೆಗೆ ಬಾಳು ಮುಂದುವರಿಸಲು ಇಷ್ಟವಿಲ್ಲ. ಅವಳು ನನಗಿಂತ ನಿಮ್ಮನ್ನು ಹೆಚ್ಚು ಇಷ್ಟಪಡುತ್ತಾಳೆ. ತಮಗೆ ಗೊತ್ತಿದೆ. ನಾನು ನನ್ನ ಕುಟುಂಬಕ್ಕಿಂತಲೂ ಹೆಚ್ಚಾಗಿ ತಮ್ಮನ್ನು ಪ್ರೀತಿಸುತ್ತಿರುವೆ. ನನ್ನ ಹೆತ್ತ ಅಬ್ಬನಿಗಿಂತಲೂ ಹೆಚ್ಚು ನಿಮ್ಮನ್ನು ಗೌರವಿಸುತ್ತಿರುವೆ. ನನಗೆ ಮಾತು ಕೊಡಿ. ನಾನು ಅವಳಿಗೆ ತಲಾಕ್ ಹೇಳಲು ನಿರ್ಧರಿಸಿದ್ದೇನೆ. ಅವಳ ಮುಂದಿನ ಬದುಕು ಅಲ್ಲಾಹು ಮತ್ತು ಅವನ ಪ್ರವಾದಿಯಾಗಿರುವ ತಮ್ಮ ಕೈಯಲ್ಲಿದೆ' ಎನ್ನುತ್ತಾ ಚಿಕ್ಕ ಮಗುವಿನಂತೆ ಅಳತೊಡಗಿದ್ದರು.

ಸ್ವಲ್ಪ ಹೊತ್ತು ಅಬ್ಬ ಮಾತೇ ಆಡಿರಲಿಲ್ಲವಂತೆ. ಒಮ್ಮೆ ತಮ್ಮ ಪ್ರೀತಿಯ ಮಗನತ್ತ, ಮತ್ತೊಮ್ಮೆ ತಮ್ಮ ಪ್ರೀತಿಯ ಹೆಂಡತಿಯತ್ತ ಕಣ್ಣು ಹಾಯಿಸುತ್ತಾ ಸುಮ್ಮನೆ ಕುಳಿತಿದ್ದರಂತೆ.

ಬಹಳ ಹೊತ್ತಿನ ಬಳಿಕ ನಿರ್ಧಾರದ ಧ್ವನಿಯಲ್ಲಿ ಅಬ್ಬ, 'ನೀನು ತಪ್ಪು ಮಾಡುತ್ತಿರುವೆ ಝೈದ್. ನಿನ್ನ ಹಾಗೆ ನಾನು ತಪ್ಪು ಮಾಡಲಾರೆ. ನೀನು ನನ್ನ ಮಗ. ಅವಳು ನಿನ್ನ ಹೆಂಡತಿ. ಮಗನ ಹೆಂಡತಿಯನ್ನು ಮದುವೆಯಾಗುವುದನ್ನು ಅಲ್ಲಾಹು ಅನುಮತಿಸುವುದಿಲ್ಲ' ಎನ್ನುತ್ತಾ ಝೈದರ ವಿನಂತಿಯನ್ನು ತಿರಸ್ಕರಿಸಿದ್ದರು.

ಆದರೂ ಚಿಕ್ಕಮ್ಮ ಪುಟ್ಟ ಮಗುವಿನಂತೆ ಅಳುತ್ತಾ ನಮ್ಮ ಮನೆಗೆ ಬಂದಿದ್ದರು!

–೩–

ಎಲ್ಲರೂ ಕಾತರದಿಂದ ಕಾಯುತ್ತಿದ್ದ ಆ ದಿನ ಬಂದೇಬಿಟ್ಟಿತು.

ಪ್ರವಾದಿಯವರು ತಮ್ಮ ಸಹವರ್ತಿಗಳ ಸಭೆ ಕರೆದಿದ್ದರು. ಮಸೀದಿಯ ಅಂಗಳದಲ್ಲಿ ಕಾಲಿಡಲೂ ಸಾಧ್ಯವಿರದಷ್ಟು ಜನರೂ ಜೊತೆಯಾಗಿದ್ದರು. ಎಲ್ಲರ ಮುಖಗಳಲ್ಲೂ ಹತ್ತಾರು ಪ್ರಶ್ನೆಗಳು ಪ್ರತಿಫಲಿಸುತ್ತಿದ್ದವು. ಮಗನಿಂದ ತಲಾಕ್ ಪಡೆದ ಹೆಣ್ಣನ್ನು ಮಗನ ಅಬ್ಬನೇ ಮದುವೆಯಾಗಬಹುದೆ? ತಲಾಕ್ ಕೊಡುತ್ತಿರುವನ ಹೆಂಡತಿಯನ್ನು ಮದುವೆಯಾಗಲಿರುವ ಅಬ್ಬನಿಗೆ ದತ್ತುಮಗನು ರಕ್ತ ಸಂಬಂಧಿಯಲ್ಲ ನಿಜ. ಆದರೆ, ಕಅಬಾ ಮಂದಿರದಲ್ಲಿ ಹತ್ತಾರು ಹಿರಿಯರ ಎದುರು ಪ್ರವಾದಿಯವರು ಪ್ರಮಾಣ ಮಾಡಿ ಸ್ವೀಕರಿಸಲಾದ ದತ್ತು ಪುತ್ರನಲ್ಲವೇ ಝೈದ್?

ಆದರೆ, ಝೈದರನ್ನು ಝೈದ್ ಬಿನ್ ಹಾರಿಸ್ ಎಂದು ಸಂಬೋಧಿಸಲಾಗುತ್ತಿತ್ತೇ ಹೊರತು ಝೈದ್ ಬಿನ್ ಮುಹಮ್ಮದ್ ಎಂದಲ್ಲ. ಕುರೈಶ್ ಸಂಪ್ರದಾಯದಂತೆ ಬೇರೆಯವರ ದತ್ತುಪುತ್ರನಾದ ಬಳಿಕವೂ ಅವರನ್ನು ಗುರುತಿಸುತ್ತಿದ್ದದ್ದು, ಹೆತ್ತಬ್ಬನ

ಹೆಸರಿನಲ್ಲೇ ವಿನಃ ದತ್ತು ಪಡೆದವರ ಹೆಸರಲ್ಲಿ ಅಲ್ಲ. ಹಾಗಾದರೆ, ದತ್ತುಪುತ್ರ ಸ್ವಂತಪುತ್ರನಲ್ಲ ಎಂಬ ಅರ್ಥವೆ?

ಆದರೆ, ಚಾಲ್ತಿಯಲ್ಲಿರುವ ಕುರೈಶ್ ಸಂಪ್ರದಾಯದಂತೆ ಇದುವರೆಗೂ ಇಂತಹ ಮದುವೆ ನಡೆದದ್ದು ಇಲ್ಲ. ಎಲ್ಲರಿಗೂ ಮಾದರಿಯಾಗಿರುವ ಪ್ರವಾದಿಯವರು, ನಡೆದುಬಂದ ಸಂಪ್ರದಾಯವನ್ನು ಮುರಿಯುವರೆ? ಅವರು ಹಾಗೆ ಮಾಡುವವರಲ್ಲ. ಹಾಗಾದರೆ ಈ ಸಮಸ್ಯೆಗೆ ಕೊನೆ ಏನು?

ಪ್ರವಾದಿಯವರು ಝೈದರನ್ನು ಅದೆಷ್ಟು ಬಗೆಯಲ್ಲಿ ಒತ್ತಾಯಿಸಿದರೂ, ಹಲವು ಬಗೆಯಲ್ಲಿ ಬುದ್ಧಿ ಹೇಳಿದ್ದರೂ, ಅವರು ತನ್ನ ನಿರ್ಧಾರದಿಂದ ಹಿಂದೆ ಸರಿಯುವ ಯಾವುದೇ ಸೂಚನೆಯನ್ನು ನೀಡಿದ್ದು ಇನ್ನೂ ಸುದ್ದಿಯಾಗಿಲ್ಲ. ಅಂತೆಯೇ, ಝೈದರಿಂದ ತಲಾಕ್ ಪಡೆದ ಬಳಿಕ ಝೈನಬರು ಪ್ರವಾದಿಯನ್ನು ಮದುವೆಯಾಗಲು ಸಮ್ಮತಿಸಿದ್ದಾರೆಯೆ? ಅವರ ನಿಲುವು ಏನಿರಬಹುದೆಂಬುದೂ ಯಾರಿಗೂ ಗೊತ್ತಿಲ್ಲ. ಆದರೆ, ಎಲ್ಲರಂಥವರಲ್ಲ ಎಂದು ಎಲ್ಲರಿಂದಲೂ ಹೊಗಳಿಸಿಕೊಂಡಿದ್ದ ಕಾರಣಕ್ಕಲ್ಲವೇ ಅಲ್ಲಾಹು ನನ್ನಬ್ಬನನ್ನೇ ಅಂತ್ಯಪ್ರವಾದಿಯನ್ನಾಗಿ ಆರಿಸಿದ್ದು? ಆಂತಹ ನಿರ್ಮಲ ಹೃದಯದ ವ್ಯಕ್ತಿಯೋರ್ವನಿಂದ, ಚಾಲ್ತಿಯಲ್ಲಿರುವ ಪುರಾತನ ಸಂಪ್ರದಾಯವೊಂದನ್ನು ಮುರಿಯಲು ಅಲ್ಲಾಹು ಹೇಳುವನೆ?

ಆದರೆ, ಇದುವರೆಗೂ ಪ್ರವಾದಿಯ ಮೂಲಕ ಅಲ್ಲಾಹು ನೀಡಿದ್ದ ಸಂದೇಶಗಳಲ್ಲಿ ಇಂತಹ ಸಂದರ್ಭಗಳಲ್ಲಿ ಏನು ಮಾಡಬೇಕು ಎಂಬ ಆದೇಶವೇ ಪ್ರಕಟವಾಗಿಲ್ಲ. ಈಗ ಯಾರಿಗೂ ಉತ್ತರಿಸಲು ಸಾಧ್ಯವಾಗದ ಸವಾಲೊಂದು ಎದುರಾಗಿತ್ತು. ಹಾಗಾದರೆ, ಇದರ ಕೊನೆ ಎಲ್ಲಿಗೆ ತಲುಪಬಹುದು? ಎಲ್ಲರ ಕಣ್ಣುಗಳೂ ಮಸೀದಿಯ ಮೆಟ್ಟಲುಗಳ ಮೇಲೆ ನಿಂತಿದ್ದ ಪ್ರವಾದಿಯವರತ್ತ ನೆಟ್ಟಿತ್ತು.

ಮಸೀದಿಯ ಮೆಟ್ಟಲುಗಳ ಎಡಕ್ಕಿದ್ದ ಚಿಕ್ಕಮ್ಮನ ಮನೆಯ ಜಗಲಿಯಲ್ಲಿ, ನನ್ನ ಬಲಗೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ನಿಂತಿದ್ದ ಆಯಿಷಾರ ಬೆರಳುಗಳು ನಡುಗುತ್ತಿರುವುದು ನನ್ನ ಅನುಭವಕ್ಕೆ ಬಂದಿತ್ತು. ನನ್ನ ಪಕ್ಕದಲ್ಲೇ ನಿಂತಿದ್ದ ಅಫೀರಾ ಪ್ರವಾದಿಯವರತ್ತವೇ ದೃಷ್ಟಿ ನೆಟ್ಟಿದ್ದಳು. ಸ್ವಲ್ಪವೇ ಹೊತ್ತಿನಲ್ಲಿ ನಿಧಾನವಾಗಿ ನಡೆದು ಕೊಂಡು ಬಂದ ಸೌದಾ ಚಿಕ್ಕಮ್ಮನೂ ನಮ್ಮ ಜೊತೆಗೆ ನಿಂತರು. ಇನ್ನುಳಿದ ಪ್ರವಾದಿ ಪತ್ನಿಯರೆಲ್ಲ, ಮಸೀದಿಯ ಮೆಟ್ಟಲ ಮೇಲೆ ಪ್ರವಾದಿಯ ಪಕ್ಕದಲ್ಲೇ, 'ತಾವು ಯಾವ ತೀರ್ಮಾನ ತೆಗೆದುಕೊಂಡರೂ ನಾವಿದ್ದೇವೆ ಜೊತೆಯಲ್ಲಿ' ಎಂದು ಭರವಸೆ ನೀಡುವವರಂತೆ ನಿಂತಿದ್ದರು. ಪ್ರವಾದಿಯವರ ಬೆನ್ನ ಹಿಂದೆ ಆಯಿಷಾ ಚಿಕ್ಕಮ್ಮನ ಅಬ್ಬ ಅಬೂಬಕರ್, ಅವರ ಪಕ್ಕದಲ್ಲಿ ಅಫ್ಸಾ ಚಿಕ್ಕಮ್ಮನ ಅಬ್ಬ ಉಮ್ಮರ್ ಬಿನ್ ಖತ್ತಾಬರು





ನಿಂತಿದ್ದರು. ಮೆಟ್ಟಲುಗಳ ಕೆಳಗಿನ ಹಿಂದಿನ ಸಾಲಲ್ಲಿ, ಎಲ್ಲದಕ್ಕೂ ಕಾರಣರಾಗಿದ್ದ ದೊಡ್ಡಣ್ಣ ಝೈದ್ ತಲೆ ತಗ್ಗಿಸಿ ನಿಂತಿದ್ದರು.

ಇಡೀ ಸಭೆಯನ್ನು ಅಳೆಯುವವರಂತೆ ಕಣ್ಣು ಹಾಯಿಸಿದ ಪ್ರವಾದಿಯವರು, ನನ್ನ ಬೆನ್ನ ಹಿಂದೆ ಅವಿತಿದ್ದ ತಮ್ಮ ಪ್ರೀತಿಯ ಪತ್ನಿಯತ್ತ ಕಣ್ಣು ಹಾಯಿಸಿದ್ದರು. 'ನೀನೂ ನನ್ನ ಜೊತೆಗೆ ಬೆಂಬಲವಾಗಿ ಬಂದು ನಿಲ್ಲು' ಎಂಬುದಾಗಿ ಕಣ್ಣಲ್ಲೇ ಸೂಚಿಸುತ್ತಿರುವಂತೆ ಅನ್ನಿಸಿತ್ತು. ನಾನು ಚಿಕ್ಕಮ್ಮನತ್ತ ತಿರುಗಿ. 'ನೀವು ಮಸೀದಿಯ ಮೆಟ್ಟಲ ಮೇಲೆ ಪ್ರವಾದಿಯವರ ಪಕ್ಕದಲ್ಲೇ ಹೋಗಿ ನಿಲ್ಲಬೇಕಂತೆ' ಎಂದೆ. ಚಿಕ್ಕಮ್ಮ ಮಿಸುಕಾಡಲಿಲ್ಲ. ನಾನೂ ಸುಮ್ಮನಾದೆ.

'ಎಲ್ಲರಿಗೂ ಅಲ್ಲಾಹುವಿನ ದಯೆಯಿರಲಿ' ಬಲಗೈಯೆತ್ತಿ ಪ್ರವಾದಿ ಮಾತು ಆರಂಭಿಸುವ ಸೂಚನೆ ನೀಡಿದಾಗ, ಇಡೀ ಸಭೆಯೇ ಸ್ಥಬ್ಧವಾಗಿತ್ತು.

'ನಿನ್ನೆ ರಾತ್ರಿ ಅಲ್ಲಾಹು ಹೊಸ ಸಂದೇಶವೊಂದನ್ನು ಪ್ರಕಟಿಸಿರುತ್ತಾನೆ!'

ಇಡೀ ಸಭೆ, ಉಸಿರಾಟವನ್ನೇ ಮರೆತು ಪ್ರವಾದಿಯವರು ಪ್ರಕಟಿಸಲಿರುವ ಹೊಸ ಸಂದೇಶವನ್ನು ಕೇಳಲು ಕಿವಿಯಾನಿಸಿತ್ತು.

'ಅಲ್ಲಾಹುವಿಗೆ ಅಂಜಿರಿ. ಧಿಕ್ಕಾರಿಗಳನ್ನು ಮತ್ತು ಕಪಟಿಗಳನ್ನು ಅನುಸರಿಸಬೇಡಿರಿ. ಅಲ್ಲಾಹು ಖಂಡಿತವಾಗಿಯೂ ಎಲ್ಲವನ್ನೂ ಬಲ್ಲ ಯುಕ್ತಿವಂತನಾಗಿರುವನು. ದಿವ್ಯವಾಣಿಯ ಮೂಲಕ ನಿಮ್ಮೊಡೆಯನ ಕಡೆಯಿಂದ ನಿಮಗೆ ನೀಡಲಾಗುವುದನ್ನು ಅನುಸರಿಸಿರಿ. ನೀವು ಮಾಡುವ ಎಲ್ಲ ಕಾರ್ಯಗಳ ಅರಿವೂ ಅಲ್ಲಾಹುವಿಗಿರುತ್ತದೆ. ನೀವು ಅಲ್ಲಾಹುವಿನಲ್ಲಿ ಭರವಸೆಯಿಡಿರಿ. ಕಾರ್ಯ ಸಾಧನೆಗಾಗಿ ಅಲ್ಲಾಹುವೇ ಸಾಕು. ಅಲ್ಲಾಹು ಯಾರ ಎದೆಯಲ್ಲೂ ಎರಡು ಹೃದಯಗಳನ್ನು ಇಟ್ಟಿರುವುದಿಲ್ಲ. ನೀವು ತಾಯಿಯೆಂದು ಕರೆದ ಮಾತ್ರಕ್ಕೆ ನಿಮ್ಮ ಪತ್ನಿಯರು ನಿಮಗೆ ತಾಯಿಯಾಗುವುದಿಲ್ಲ. ನೀವು ಪುತ್ರರೆಂದು ಕರೆದ ಮಾತ್ರಕ್ಕೆ ಅವರು ನಿಮಗೆ ಪುತ್ರರಾಗುವುದಿಲ್ಲ. ಇವೆಲ್ಲಾ ಕೇವಲ ನಿಮ್ಮ ಬಾಯಿಯ ಮಾತುಗಳು. ಅಲ್ಲಾಹು ಸತ್ಯವಾಗಿರುವುದನ್ನೇ ಹೇಳುತ್ತಾನೆ ಮತ್ತು ಸರಿಯಾದ ದಾರಿಯನ್ನೇ ತೋರುತ್ತಾನೆ. ನೀವು ದತ್ತುಸಂತತಿಯನ್ನು ಅವರ ತಂದೆಯರ ಹೆಸರಿನಿಂದಲೇ ಕರೆಯಿರಿ. ಅಲ್ಲಾಹುವಿನ ದೃಷ್ಟಿಯಲ್ಲಿ ಅದುವೇ ಹೆಚ್ಚು ನ್ಯಾಯೋಚಿತ. ಅವರ ತಂದೆ ಯಾರೆಂಬುದು ನಿಮಗೆ ತಿಳಿದಿರದಿದ್ದರೂ ಅವರು ಧರ್ಮದಲ್ಲಿ ನಿಮಗೆ ಸೋದರರು ಮತ್ತು ನಿಮ್ಮ ಸಂಗಾತಿಗಳಾಗುತ್ತಾರೆ. ಅಪ್ಪಿ ತಪ್ಪಿ ನಿಮ್ಮಿಂದ ಪ್ರಮಾದವೇನಾದರೂ ಸಂಭವಿಸಿದ್ದರೆ ಅದಕ್ಕೆ ನೀವು ಹೊಣೆಗಾರರಲ್ಲ. ಅದರೆ, ನೀವು ಮನಃಪೂರ್ವಕ ಮಾಡುವ ತಪ್ಪುಗಳಿಗೆ ಮಾತ್ರ ನೀವೇ ಹೊಣೆಗಾರರು. ಅಲ್ಲಾಹು ಸದಾ ಕ್ಷಮಿಸುವನೂ ಕರುಣೆ ತೋರುವವನೂ ಆಗಿದ್ದಾನೆ. ಅಲ್ಲಾಹು ಬಹಳಷ್ಟು ಅನುಗ್ರಹಿಸಿರುವ ಹಾಗೂ ಎಲ್ಲರ ಔದಾರ್ಯಗಳಿಗೂ ಪಾತ್ರನಾಗಿರುವ

ಝೈದರೊಡನೆ ನೀವು, ನಿನ್ನ ಪತ್ನಿಯನ್ನು ನಿನ್ನ ಬಳಿಯೇ ತಡೆದಿಟ್ಟುಕೋ ಮತ್ತು ಅಲ್ಲಾಹುವಿಗೆ ಅಂಜುತ್ತಿರು ಎಂದು ಹೇಳುತ್ತಿದ್ದಾಗ ನೀವು ಮನಸ್ಸಿನಲ್ಲಿದ್ದ ಒಂದು ವಿಷಯವನ್ನು ಅಡಗಿಸಿಟ್ಟಿರಿ. ಅಲ್ಲಾಹು ಅದನ್ನು ಬಹಿರಂಗಗೊಳಿಸಲು ಬಯಸಿದ್ದನು. ನೀವು ಜನರಿಗೆ ಅಂಜಿದಿರಿ. ನಿಜವಾಗಿ ಅಲ್ಲಾಹು ಅಂಜಿಕೆಗೆ ಹೆಚ್ಚು ಅರ್ಹನು. ಕೊನೆಗೆ ಝೈದ್ ಪತ್ನಿಯನ್ನು ವಿಚ್ಛೇದಿಸಿದಾಗ, ನಾವು ನಿಮ್ಮ ಜೊತೆಗೆ ಆಕೆಯ ವಿವಾಹ ಮಾಡಿಸಿದೆವು. ತಮ್ಮ ದತ್ತು ಪುತ್ರರು ಪತ್ನಿಯನ್ನು ವಿಚ್ಛೇದಿಸಿದ ಪತ್ನಿಯರ ವಿಷಯದಲ್ಲಿ, ವಿಶ್ವಾಸಿಗಳಿಗೆ ಯಾವುದೇ ಅಡೆತಡೆ ಇರಬಾರದು ಎಂಬುದೇ ಇದರ ಉದ್ದೇಶವಾಗಿತ್ತು. ಅಲ್ಲಾಹು ತನ್ನ ಆದೇಶವನ್ನು ಅನುಷ್ಠಾನ ಮಾಡಿಯೇಬಿಡುತ್ತಾನೆ.'

'ಓ ನನ್ನ ಪ್ರವಾದಿಯೇ....' ಪ್ರವಾದಿಯವರು ತಮ್ಮ ಸಂದೇಶವನ್ನು ಕೊನೆಗೊಳಿಸುತ್ತಿರುವಂತೆಯೇ, ನನ್ನಣ್ಣ ಝೈದ್ ಇಡೀ ಮದೀನಾ ಪಟ್ಟಣವೇ ಅದುರುವಷ್ಟು ಗಟ್ಟಿಯಾಗಿ ಕೂಗಿದ್ದರು.

ಇಡೀ ಸಭೆಯ ದೃಷ್ಟಿ ಅವರತ್ತ ತಿರುಗಿತ್ತು. ಝೈದ್ ಗಟ್ಟಿಯಾಗಿ ಕೂಗಿ ಹೇಳುತ್ತಿದ್ದರು, 'ಓ ನನ್ನ ಪ್ರವಾದಿಯೇ, ಇದುವರೆಗೂ ತಾವು ನನಗೆ ಮಗನ ಸ್ಥಾನ ನೀಡಿದ್ದಿರಿ. ತಮಗೆ ನಾನು ಕೃತಜ್ಞನು. ಆದರೆ, ಅಲ್ಲಾಹು ತನ್ನ ದಿವ್ಯವಾಣಿಯ ಮೂಲಕ ನನ್ನಿಂದ ಆ ಸ್ಥಾನವನ್ನು ಕಿತ್ತುಕೊಂಡನು. ಆದರೆ, ನಾನು ಅವನಿಗೂ ಕೃತಜ್ಞನು. ಯಾಕೆಂದರೆ, ಅವನು ತಮ್ಮನ್ನು ಹೊರತಾಗಿ ಇದುವರೆಗೂ ಯಾರಿಗೂ ನೀಡಿರದಿದ್ದ ಮಹೋನ್ನತ ಗೌರವವೊಂದನ್ನು ನನಗೆ ಕರುಣಿಸಿದ್ದಾನೆ. ತಮ್ಮನ್ನು ಹೊರತಾಗಿ ಭೂಮಿಯ ಮೇಲಿರುವ ಯಾವನೇ ವಿಶ್ವಾಸಿಗೆ ಇದುವರೆಗೂ ದೊರೆಯದಿದ್ದ ಗೌರವ ಇದು.'

ಸಭೆಯಲ್ಲಿ ಗುಸುಗುಸು ಆರಂಭವಾಗಿತ್ತು. ಝೈದ್ ಏನು ಹೇಳುತ್ತಿದ್ದಾರೆ!!

'ಹೇಳು ಝೈದ್, ಎಲ್ಲರಿಗೂ ವಿವರಿಸಿ ಹೇಳು. ಅದ್ಯಾವ ಮಹತ್ವದ ಸ್ಥಾನವನ್ನು ಅಲ್ಲಾಹು ನಿನಗೆ ಕರುಣಿಸಿರುವನೆಂಬುದನ್ನು ಎಲ್ಲರಿಗೂ ತಿಳಿಯವಂತೆ ಹೇಳು.' ಅಬ್ಬ ಹೇಳಿದ್ದರು.

ಸಭೆಯಲ್ಲಿ ಮತ್ತೊಮ್ಮೆ ಗುಸುಗುಸು ಶುರುವಾಯಿತು. ಎಲ್ಲರಿಗೂ ಕುತೂಹಲ. ಪ್ರವಾದಿಗಳಿಗಷ್ಟೇ ಅನುಗ್ರಹಿಸಿದ್ದ ಸ್ಥಾನವನ್ನು ಅಲ್ಲಾಹು ಝೈದರಿಗೂ ಕರುಣಿಸಿದನೆ? ಅವರು ಹೇಳುತ್ತಿರುವುದು ನಿಜವೆ?

ಮಸೀದಿಯ ಎಡ ಭಾಗದಲ್ಲಿ ಗುಂಪಿನ ಹಿಂದೆ ಮುದುಡಿ ನಿಂತಿದ್ದ ಅಣ್ಣ ಝೈದ್, ತನ್ನೆದುರು ಭುಜಕ್ಕೆ ಭುಜ ಒತ್ತಿಕೊಂಡೇ ನಿಂತಿದ್ದವರ ನಡುವೆ ತೂರಿಕೊಂಡು ಬಂದು ಅಬ್ಬನ ಪಕ್ಕದಲ್ಲಿ ನಿಂತರು. ಇಡೀ ಸಭೆಯನ್ನು ಓದುವವರಂತೆ ಸುತ್ತಲೂ ದಿಟ್ಟಿಸಿದರು. ಬಳಿಕ ಹೆಮ್ಮೆಯ ಧ್ವನಿಯಲ್ಲೇ ಹೇಳತೊಡಗಿದರು.





'ಓ ನನ್ನ ಪ್ರಿಯ ಸಂಗಾತಿಗಳೇ, ಈ ಗುಲಾಮನ ಮಾತುಗಳನ್ನು ಕಿವಿಗೊಟ್ಟು ಕೇಳಿರಿ. ಇಂದು ಮುಂಜಾನೆಯವರೆಗೂ ನಾನು ಪ್ರವಾದಿಯವರ ಮಗನಾಗಿದ್ದೆ. ಅವರ ನಂಬುಗೆಯ ಅಂಗರಕ್ಷಕನಾಗಿದ್ದೆ. ಇನ್ನು ಮುಂದೆಯೂ ಅವರ ಅಂಗರಕ್ಷನಾಗಿರುವೆ. ಆದರೆ, ಅವರ ಮಗನಾಗಿ ಅಲ್ಲ; ಕೇವಲ ಒಬ್ಬ ಗುಲಾಮನಾಗಿ ಮಾತ್ರ.'

ಝೈದರತ್ತ ಕಣ್ಣು ನೆಟ್ಟಿದ್ದ ಅಬ್ಬ, ಇದ್ದಕ್ಕಿದ್ದಂತೆ ತಮ್ಮ ಬಲಗೈಯೆತ್ತಿದ್ದರು. ಅದನ್ನು ಗಮನಿಸಿ ಗಲಿಬಿಲಿಗೊಂಡ ಝೈದ್ ತನ್ನ ಮಾತು ನಿಲ್ಲಿಸಿ ಅಬ್ಬನತ್ತ ನೋಡಿದರು.

'ನಿನ್ನ ಬಾಲ್ಯದಲ್ಲೇ ಗುಲಾಮಗಿರಿಯಿಂದ ನಾನು ಮುಕ್ತಗೊಳಿಸಿದ್ದನ್ನು ಮರೆತೆಯಾ ಝೈದ್? ನೀನೀಗ ನನ್ನ ಮಗನಲ್ಲ ಎಂಬುದಷ್ಟೇ ನಿಜ. ಆದರೆ, ನೀನು ಗುಲಾಮ ಎಂಬುದು ನಿಜವಲ್ಲ. ನಮ್ಮೆಲ್ಲರಂತೆ ನೀನೂ ಸ್ವತಂತ್ರನು.' ಅಬ್ಬ ಹೇಳಿದ್ದರು.

ತಪ್ಪು ಮಾಡಿದವನಂತೆ ತಲೆತಗ್ಗಿಸಿ ಅಬ್ಬನತ್ತ ಕ್ಷಮಾಯಾಚನೆಯ ನೋಟ ಬೀರಿದ ಝೈದ್, ಮೆತ್ತನೆಯ ಧ್ವನಿಯಲ್ಲಿ, 'ಸಂತೋಷದ ಭರದಲ್ಲಿ ತಮ್ಮ ಕರುಣೆಯನ್ನು ಮರೆತುಹೋದ ನನ್ನನ್ನು ಮನ್ನಿಸಿರಿ' ಎಂದರು.

'ನಿನ್ನ ಸಂತೋಷಕ್ಕೆ ಏನು ಕಾರಣವೆಂಬುದನ್ನು ಮೊದಲು ಹೇಳು ಝೈದ್' ಅಬ್ಬ ಮತ್ತೊಮ್ಮೆ ನೆನಪಿಸಿದ್ದರು.

'ಓ ನನ್ನ ಸಂಗಾತಿಗಳೇ, ಅಲ್ಲಾಹುವಿಗೆ ಕೃತಜ್ಞನಾಗಿರಿ. ಅವನ ಕರುಣೆಯು ಅಗಾಧವಾದದ್ದು. ಭೂಮಿಯ ಮೇಲೆ ಈಗ ಬದುಕುತ್ತಿರುವ ಸತ್ಯವಿಶ್ವಾಸಿಗಳಲ್ಲಿ, ಪ್ರವಾದಿಯವರನ್ನು ಹೊರತುಪಡಿಸಿ ಯಾವನೇ ಒಬ್ಬ ಸತ್ಯವಿಶ್ವಾಸಿಯ ಹೆಸರನ್ನು ಅಲ್ಲಾಹು ತನ್ನ ದಿವ್ಯಗ್ರಂಥದಲ್ಲಿ ದಾಖಲಿಸಿದ್ದನ್ನು ಕೇಳಿದ್ದೀರಾ? ಓದಿದ್ದೀರಾ? ಕಂಡಿದ್ದೀರಾ? ಇಲ್ಲ; ಖಂಡಿತವಾಗಿಯೂ ಇಲ್ಲ. ಆದರೆ, ಅಲ್ಲಾಹು ಸತ್ಯವಿಶ್ವಾಸಿಯಾಗಿರುವ ನನ್ನ ಹೆಸರನ್ನು ಇಂದು ದಿವ್ಯಗ್ರಂಥದಲ್ಲಿ ದಾಖಲಿಸಿದನು. ಅದಕ್ಕಾಗಿ ನಾನು ಅವನಿಗೆ ಕೃತಜ್ಞನು. ಇದಕ್ಕೆ ಕಾರಣರಾದ ಪ್ರವಾದಿಯವರಿಗೂ ನಾನು ಕೃತಜ್ಞನು. ಎಲ್ಲರೂ ಕೇಳಿರಿ. ಎಲ್ಲಿಯವರೆಗೆ ಅಲ್ಲಾಹುವಿನ ದಿವ್ಯವಾಣಿಗಳನ್ನು ಸತ್ಯವಿಶ್ವಾಸಿಗಳು ಪಠಿಸುತ್ತಿರುತ್ತಾರೋ ಅಲ್ಲಿಯವರೆಗೂ ಸತ್ಯವಿಶ್ವಾಸಿಯಾದ ನನ್ನ ಹೆಸರನ್ನೂ ನೆನಪಿಸಿಕೊಳ್ಳುತ್ತಾರೆ.

ಸೇರಿದ್ದವರೆಲ್ಲರ ಬಾಯಿ ಕಟ್ಟಿದಂತಾಗಿತ್ತು.

ಝೈದ್ ಹೇಳಿದ ಮಾತುಗಳೆಲ್ಲ ಅಕ್ಷರಶಃ ನಿಜವಾಗಿತ್ತು!

ಅಲ್ಲಾಹು ಅದುವರೆಗೆ ತನ್ನ ದಿವ್ಯವಾಣಿಯಲ್ಲಿ ಭೂಮಿಯ ಮೇಲೆ ಬದುಕುತ್ತಿರುವ ಮನುಷ್ಯರುಗಳಲ್ಲಿ, ಪ್ರವಾದಿಯವರನ್ನು ಹೊರತುಪಡಿಸಿ ಯಾವನೇ ಒಬ್ಬನೇ ಒಬ್ಬ ಸತ್ಯವಿಶ್ವಾಸಿಯ ಹೆಸರನ್ನು ತನ್ನ ದಿವ್ಯಗ್ರಂಥದಲ್ಲಿ ಉಲ್ಲೇಖಿಸಿದ್ದಿರಲಿಲ್ಲ. ಇದೀಗ ಝೈದ್ ಹೆಸರನ್ನು ಅಲ್ಲಾಹು ತನ್ನ ದಿವ್ಯವಾಣಿಯಲ್ಲಿ ದಾಖಲಿಸಿ ಗೌರವಿಸಿದ್ದ. ಎಲ್ಲರೂ

ಅಭಿಮಾನದಿಂದ ನನ್ನಣ್ಣ ಝೈದರತ್ತ ಕಣ್ಣು ಬಿಟ್ಟು ನೋಡುತ್ತಿದ್ದರು.

'ಕೊನೆಯದಾಗಿ ಒಂದು ಮಾತು....' ಎಂದ ಝೈದ್, ಎಲ್ಲರನ್ನೂ ಪರೀಕ್ಷಿಸುವವರಂತೆ ದಿಟ್ಟಿಸಿದ್ದರು; ಬಳಿಕ ಹೇಳಿದ್ದರು, 'ನಾನು ಇನ್ನೂ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಇದುವರೆಗೂ ನನ್ನ ಹೆಂಡತಿಯಾಗಿದ್ದ ಝೈನಬ್ ಇನ್ನು ಮುಂದೆ ನನ್ನ ಹೆಂಡತಿ ಅಲ್ಲ. ಅಂತೆಯೇ, ಇದುವರೆಗೂ ನನ್ನ ಅಬ್ಬನಾಗಿದ್ದ ಪ್ರವಾದಿಯವರು ಇನ್ನು ಮುಂದೆ ನನ್ನ ಅಬ್ಬ ಅಲ್ಲ. ಆದ್ದರಿಂದ ಪ್ರವಾದಿಯವರು, ಅವರ ಮಗನಲ್ಲದ ನಾನು ವಿಚ್ಛೇದಿಸುವ ಝೈನಬಳನ್ನು ಮದುವೆಯಾಗುವುದನ್ನು ಪ್ರಶ್ನಿಸುವ ಅಧಿಕಾರವು ಸತ್ಯವಿಶ್ವಾಸಿಗಳಾಗಿರುವ ಯಾರಿಗೂ ಇರುವುದಿಲ್ಲ.'

ಇಡೀ ಸಭೆಯೇ ದಿಗ್ಭ್ರಮೆಗೊಂಡಿತ್ತು!

ಎಲ್ಲರ ಪ್ರಶ್ನೆಗಳಿಗೂ ಝೈದರ ಮಾತುಗಳು ಉತ್ತರ ನೀಡಿದ್ದವು.

'ಹುಂ..! ಬಲುದೊಡ್ಡ ಸಂಕಟವೊಂದರಿಂದ ತನ್ನ ಸಂದೇಶವಾಹಕನನ್ನು ಪಾರು ಮಾಡಲು, ಅಲ್ಲಾಹು ಹೊಸದೊಂದು ಸಂದೇಶವನ್ನೇ ಇಳಿಸಿಯೇಬಿಟ್ಟನಲ್ಲಾ!'

ಅಫೀರಾ ಸಲ್ಪ ಗಟ್ಟಿಯಾಗಿಯೇ ಉದ್ಗರಿಸಿದಾಗ, ನನಗೆ ನಿಂತಲ್ಲೇ ಕುಸಿದು ಬೀಳುವಂತಾಗಿತ್ತು.

* * *

*ಹಾಗಾದರೆ ಪ್ರವಾದಿಯ ಮೂಲಕ ಅಂತಿಮ ಸತ್ಯವನ್ನು ಪ್ರಕಟಿಸಿದ ಧರ್ಮ ಗ್ರಂಥದಲ್ಲಿ ಪ್ರವಾದಿಯವರ ಸಮಕಾಲೀನರಾದ ಬೇರಾವನೇ ಒಬ್ಬ ಸತ್ಯವಿಶ್ವಾಸಿಯ ಹೆಸರನ್ನೂ ಉಲ್ಲೇಖಿಸಲಾಗಿಲ್ಲವೆ? ಪ್ರವಾದಿಯವರಿಗಷ್ಟೇ ನೀಡಿದ್ದ ಆ ಗೌರವವನ್ನು, ಒಂದು ಕಾಲದಲ್ಲಿ ಹಿಶಾಬಾದ ಗುಲಾಮರ ಸಂತೆಯಲ್ಲಿ ಮಾರಾಟಕ್ಕಿಡಲ್ಪಟ್ಟಿದ್ದ ಸಾಮಾನ್ಯನೊಬ್ಬನಿಗೆ ನೀಡಲು ಅಲ್ಲಾಹುವನ್ನು ಪ್ರೇರೇಪಿಸಿದ್ದ ಕಾರಣವಾದರೂ ಏನಿರಬಹುದು?*

*'ನೀನಿನ್ನೂ ಕುರಾನು ಓದಿಯೇ ಇಲ್ಲವೆ?' ಅರ್ಷದ್ ಪ್ರಶ್ನಿಸಿದಾಗ ನಾನು ಬೆಚ್ಚಿಬಿದ್ದಿದ್ದೆ!*

*'ಯಾಕಿಲ್ಲ? ಹಲವು ಬಾರಿ ಓದಿದ್ದೆನಲ್ಲಾ? ಯಾಕೆ ಈ ಪ್ರಶ್ನೆ?' ತಡವರಿಸದೆಯೇ ಉತ್ತರಿಸಿದ್ದೆ.*

*ನೀನು ಹೇಳುತ್ತಿರುವ ಆ ಗುಲಾಮನ ಹೆಸರನ್ನು ಅಲ್ಲಿ ಗಮನಿಸಿರುವೆಯಾ?'*

*'ಹೌದು, ಗಮನಿಸಿದ್ದೇನೆ.'*





*'ಮತ್ಯಾರ ಹೆಸರನ್ನು ಓದಿರುವ ನೆನಪಿದೆ?'*

*'ಪ್ರವಾದಿ ಮುಹಮ್ಮದರ ಹೆಸರನ್ನು ಮೂರು ಅಥವಾ ನಾಲ್ಕು ಬಾರಿ ದಾಖಲಾಗಿದೆ ಎಂಬ ನೆನಪು.'*

*'ನಿನ್ನ ನೆನಪಿನ ಶಕ್ತಿಯನ್ನು ಅಭಿನಂದಿಸುವೆ. ಪ್ರವಾದಿಯವರ ಹೆಸರನ್ನು ಸರಿಯಾಗಿ ನಾಲ್ಕು ಬಾರಿ ಅಲ್ಲಾಹು ತನ್ನ ದಿವ್ಯಗ್ರಂಥದಲ್ಲಿ ದಾಖಲಿಸಿದ್ದನು. ಅದಿರಲಿ, ಪ್ರವಾದಿ ಮತ್ತು ಝೈದರನ್ನು ಹೊರತುಪಡಿಸಿ ಬೇರೆ ಯಾರ ಹೆಸರನ್ನಾದರೂ ಓದಿದ ನೆನಪಿದೆ ನಿನಗೆ?'*

*ನೆನಪಿಸಿಕೊಳ್ಳಲು ಯತ್ನಿಸಿದೆ. ಹೌದು! ಪ್ರವಾದಿಯವರ ದೊಡ್ಡಪ್ಪ ಅಬೂಲಹಬರ ಹೆಸರನ್ನೂ ಒಂದು ಬಾರಿ ಓದಿದ್ದ ನೆನಪಾಗಿತ್ತು. ಹಾಗಾದರೆ, ಪ್ರವಾದಿಯವರನ್ನು*

*ಹೊರತುಪಡಿಸಿ ತನ್ನ ಹೆಸರನ್ನು ಮಾತ್ರ ಉಲ್ಲೇಖಿಸಲಾಗಿದೆ ಎಂದು ಸುಳ್ಳು ಹೇಳಿ, ಅಲ್ಲಿ ನೆರೆದಿದ್ದವರನ್ನೆಲ್ಲ ಝೈದ್ ಮೂರ್ಖರನ್ನಾಗಿ ಮಾಡಿದ್ದರೆ? ಗೆಳೆಯನನ್ನು ಪ್ರಶ್ನಿಸಬೇಕು ಎಂದುಕೊಳ್ಳುವಷ್ಟರಲ್ಲಿ, ಅರ್ಷದ್ ಹೇಳಿದ್ದ.*

*'ಇಲ್ಲ ಗೆಳೆಯಾ, ಝೈದ್ ಸುಳ್ಳು ಹೇಳಿರಲಿಲ್ಲ. ಅವನು ಹೇಳಿದ್ದು ಸತ್ಯವಿಶ್ವಾಸಿಯಾಗಿರುವ ಯಾರ ಹೆಸರನ್ನೂ ಸೇರಿಸಿಲ್ಲ ಎಂದು. ಪ್ರವಾದಿಯವರ ದೊಡ್ಡಪ್ಪ ಅಬೂಲಹಬ್ ಸತ್ಯವಿಶ್ವಾಸಿಯಾಗಿರಲಿಲ್ಲ; ಅವಿಶ್ವಾಸಿಯಾಗಿದ್ದರು. ಸತ್ಯವಿಶ್ವಾಸಿಗಳನ್ನು ವಿರೋಧಿಸುತ್ತಿದ್ದರು. 'ಪ್ರಜ್ವಲಿಸಿ ಜ್ವಾಲೆಯುಗುಳುವ ಕೆಂಡದ ರಾಶಿಯನ್ನು ಅವನು ಪ್ರವೇಶಿಸಲಿರುವನು' ಎಂಬುದನ್ನು ಹೇಳುವಾಗಲಷ್ಟೇ ಅಲ್ಲಾಹು ಅವರ ಹೆಸರನ್ನು ದಿವ್ಯವಾಣಿಯಲ್ಲಿ ದಾಖಲಿಸಿದ್ದನೇ ಹೊರತು, ಅದು ಅವರಿಗೆ ಕರುಣಿಸಿದ್ದ ಗೌರವವಾಗಿದ್ದಿರಲಿಲ್ಲ.*

*'ಝೈದರಿಗೆ ಅಷ್ಟೊಂದು ದೊಡ್ಡ ಗೌರವವನ್ನು ಕರುಣಿಸಲು ಅಲ್ಲಾಹುವಿಗೆ ಪ್ರತ್ಯೇಕ ಕಾರಣವೇನಾದರೂ ......'*

*'ಕಾರಣಕರ್ತನಿಗೆ ಕಾರಣಗಳ ಅಗತ್ಯವಿರುವುದಿಲ್ಲ.' ತಟ್ಟನೆ ಹೇಳಿದ್ದ ಗೆಳೆಯ.*

*ಇಂಥ ಪ್ರಶ್ನೆಗಳನ್ನು ಇನ್ನೊಮ್ಮೆ ಕೇಳದಿರು ಎಂದು ಎಚ್ಚರಿಸುವಂತಿತ್ತು ಅವನ ಮಾತಿನ ವರಸೆ.*

*ನಾನು ಮೌನದ ಮೊರೆಹೋಗಿದ್ದೆ. ಬಹಳ ಹೊತ್ತು ಈ ಬಗ್ಗೆ ಏನನ್ನೂ ಯೋಚಿಸಲೇಬಾರದೆಂಬ ಹಟಕ್ಕೆ ಬಿದ್ದವನಂತೆ, ನನ್ನ ಮನೆ, ನನ್ನ ಹೆಂಡತಿ ಮಕ್ಕಳ ಬಗ್ಗೆ ಯೋಚಿಸಲಾರಂಭಿಸಿದೆ. ನನ್ನ ಹೆಂಡತಿ ನಿದ್ರೆ ಮುಗಿಸಿ ಎದ್ದಿರಬಹುದೆ?*

*'ಆ ಯೋಚನೆಯನ್ನು ಬಿಟ್ಟುಬಿಡು ಗೆಳೆಯಾ. ನಿನ್ನನ್ನು ಮನೆಗೆ ನಾನು ತಲುಪಿಸುವವರೆಗೂ ಅವಳಿಗೆ ಎಚ್ಚರವಾಗುವುದಿಲ್ಲ.' ಎಂದಿದ್ದ.*

*'ಮುಂದೆ ನಮ್ಮ ಪ್ರಯಾಣ ಎಲ್ಲಿಗೆಂದು ನಿರ್ಧರಿಸಿರುವೆ?' ಪ್ರಶ್ನಿಸಿದೆ.*

*‘ಮದೀನಾದ ರಕ್ಷಣೆಗೆಂದು ಪ್ರವಾದಿಯವರು ನಿರ್ಮಿಸಿದ್ದ ಆಳವಾದ ಕಂದಕವನ್ನು ಕಣ್ಣಾರೆ ಕಾಣುವ ಬಯಕೆಯಿದೆಯೆ?’*

*‘ಇದುವರೆಗೂ ನೀನು ಕಾಣಿಸಿದ್ದು ನನ್ನ ಪ್ರೀತಿಯ ಆಯಿಷಾ ಉಮ್ಮಾರನ್ನು ಪ್ರವಾದಿಯ ಪ್ರೀತಿಯಿಂದ ದೂರವಿಡುತ್ತಿರುವ ಕಂದಕಗಳನ್ನು ಮಾತ್ರವಲ್ಲವೆ? ಸರಿ, ಇನ್ನೊಂದು ಕಂದಕವನ್ನೂ ಕಾಣಿಸಿಬಿಡು’ ನಾನು ಸಿಟ್ಟಿನಿಂದಲೇ ಹೇಳಿದ್ದೆ.*

*ಅರ್ಷದ್ ನಕ್ಕಿದ್ದಿರಬಹುದು.*

❐



## ಸ್ವಗತ – ಹನ್ನೊಂದು

## ಆಯಿಷಾ ಬಿಂತಿ ಅಬೂಬಕರ್

–೧–

ಈ ರಾತ್ರಿ ನನ್ನದು.

ಪಶ್ಚಿಮದ ಬೆಟ್ಟಗಳಾಚೆ ಸೂರ್ಯ ಅಡಗುತ್ತಿರುವಂತೆಯೇ ಬೆಳದಿಂಗಳಂತೆ ನಗು ಹಂಚುತ್ತಾ ಅವರು ಬರಲಿದ್ದರು.

ಅವರಿಗಿಷ್ಟದ ಖರ್ಜೂರವನ್ನು ಸಣ್ಣ ಸಣ್ಣ ಹೋಳುಗಳನ್ನಾಗಿ ಮಾಡಿ, ಮೇಕೆಯ ಹಾಲಿನಲ್ಲಿ ಸೇರಿಸಿ ಚೆನ್ನಾಗಿ ಅರೆದು, ಬೇಯಿಸಿದ ಕರ್ಬೂಜವನ್ನು ಬೆರೆಸಿ ಪಾಯಸ ತಯಾರಿಸುವ ಕೆಲಸದಲ್ಲಿ ಮುಳುಗಿದ್ದೆ. ರಾತ್ರಿಯೆಲ್ಲ ನಡುಗಿಸಿದ್ದ ಚಳಿಯನ್ನೆಲ್ಲ ಮರೆಸುವಂತಿದ್ದ ಏರು ಮಧ್ಯಾಹ್ನದ ಹೊತ್ತು ಅದು. ಅಷ್ಟರಲ್ಲಿ ನನ್ನ ಸವತಿಯರಾದ ಹಪ್ಸಾ ಮತ್ತು ಉಮ್ಮು ಸಲಾಮಾ ಇದ್ದಕ್ಕಿದ್ದಂತೆ ಮನೆಯೊಳಗೆ ನುಗ್ಗಿ ಬಂದಿದ್ದರು!

ಕುದಿಯುತ್ತಿದ್ದ ಪಾಯಸವನ್ನು ಸೌಟಿನಲ್ಲಿ ತಿರುಗಿಸುತ್ತಾ ಹದಬರಿಸುತ್ತಿದ್ದ ನನಗೆ, ಅವರಿಬ್ಬರನ್ನು ಜೊತೆಯಲ್ಲಿ ಕಂಡಾಗ ಏನು ಮಾಡಬೇಕೆಂದೇ ಹೊಳೆಯಲಿಲ್ಲ. ಬಂದವರಿಗೆ ಕುಳಿತುಕೊಳ್ಳಲು ಚಾಪೆ ಹಾಸಿ ಸ್ವಾಗತ ಕೋರಲು ಹೊರಟರೆ, ಪಾಯಸದ ಕುದಿ ಹದತಪ್ಪುವ ಸಾಧ್ಯತೆಯಿತ್ತು. ಅವರನ್ನು ಸರಿಯಾಗಿ ಸ್ವಾಗತಿಸದೆ ನನ್ನ ಕೆಲಸವನ್ನೇ ಮುಂದುವರಿಸಿದರೆ ಅವರಿಗೆ ಬೇಸರವಾಗಬಹುದಿತ್ತು.

ಉಮ್ಮು ಸಲಾಮಾ ಒಬ್ಬರೇ ಬಂದಿದ್ದರೆ ಹೆಚ್ಚು ಆತಂಕವಾಗುವಾಗುತ್ತಿರಲಿಲ್ಲ; ನಾಲ್ಕೈದು ಸಲ ಬಂದು ಕುಶಲ ವಿಚಾರಿಸಿಕೊಂಡು ಹೋಗಿದ್ದವರು ಅವರು. ಆದರೆ ಹಪ್ಸಾ ಹಾಗಲ್ಲ. ಒಮ್ಮೆಯೂ ನನ್ನ ಮನೆಗೆ ಕಾಲಿಟ್ಟವರಲ್ಲ. ‘ಮನೆಗೊಮ್ಮೆ ಬಂದು ಹೋಗು’ ಎಂದು ಕಾಟಾಚಾರಕ್ಕಾದರೂ ನನ್ನನ್ನು ಆಹ್ವಾನಿಸಿದವರೂ ಅಲ್ಲ. ಹೊರಗೆಲ್ಲಾದರೂ ಕಣ್ಣಿಗೆ ಬಿದ್ದರೆ ಅವರ ಚೂಪು ಕಣ್ಣುಗಳನ್ನು ಎದುರಿಸಲಾಗದೆ

ಬೇರೆತ್ತಲೋ ನೋಡುವವಳಂತೆ ನಟಿಸುತ್ತಿದ್ದ ನನಗೆ, ಮನೆಗೆ ಬರುವುದಿಲ್ಲವೇ ಎಂದು ಅವರನ್ನು ಕೇಳುವ ಧೈರ್ಯವೂ ಇರಲಿಲ್ಲ. ಅಷ್ಟರಲ್ಲಿ ನಾನು ನಿರೀಕ್ಷಿಸಿದ್ದಿರದ ಸಂಗತಿಯೊಂದನ್ನು ಹಫ್ಸಾ ಮಾಡಿಬಿಟ್ಟಿದ್ದರು.

‘ನೀವು ನಿಧಾನವಾಗಿ ನಿಮ್ಮ ಕೆಲಸ ಮುಗಿಸಿ ಬನ್ನಿ ಉಮ್ಮಾ. ಕೆಲಸ ಮುಗಿಸುವ ವರೆಗೆ ಕಾಯುತ್ತಾ ನಾವಂತೂ ಇಲ್ಲೇ ಇರುವವರು’ ಎನ್ನುತ್ತಲೇ ಗೋಡೆಗೊರಗಿಸಿದ್ದ ಚಾಪೆಯನ್ನು ಎಳೆದುಕೊಂಡು ಹಾಸಿ ಅದರ ಮೇಲೆ ಕುಳಿತುಕೊಂಡೇಬಿಟ್ಟಿದ್ದರು! ‘ಅಫೀರಾ ಎಲ್ಲಿ? ಕಾಣಿಸುತ್ತಿಲ್ಲವಲ್ಲ?’ ಎಂದು ಪ್ರಶ್ನಿಸುತ್ತಾ ಉಮ್ಮು ಸಲಾಮಾ ಕೂಡಾ ಹಫ್ಸಾರ ಪಕ್ಕದಲ್ಲಿ ಕುಳಿತುಕೊಂಡರು.

‘ಇನ್ನು ಸ್ವಲ್ಪವೇ ಹೊತ್ತು. ಇದನ್ನೊಂದು ಸಲ ಒಲೆಯಿಂದ ಇಳಿಸಿಬಿಡುತ್ತೇನೆ. ಅರ್ಧದಲ್ಲಿ ನಿಲ್ಲಿಸಿದರೆ ಹಾಳಾಗುತ್ತದೆ’ ಎನ್ನುತ್ತಾ ಅವರತ್ತ ಕಣ್ಣು ಹಾಯಿಸಿದ ನಾನು ಮತ್ತೆ ನನ್ನ ಕೆಲಸದಲ್ಲಿ ಮುಳುಗಿದೆ. ಈ ಕರ್ಬೂಜದ ಪಾಯಸ ತಯಾರಿಯಲ್ಲಿ ನನಗೆ ಹೆಚ್ಚು ಅನುಭವವೂ ಇರಲಿಲ್ಲ. ಕಡಿಮೆ ಕಾದರೆ ರುಚಿಗಟ್ಟುವುದಿಲ್ಲ, ಹೆಚ್ಚು ಕಾದರೆ ಹೊಗೆವಾಸನೆ ಬರುತ್ತದೆ ಎನ್ನುತ್ತಿದ್ದಳು ಅಫೀರಾ. ಅವಳಿರುತ್ತಿದ್ದರೆ ಈ ಕಷ್ಟವಿರಲಿಲ್ಲ. ಸೌಟಿನಿಂದ ಎರಡು ಹನಿ ಎಡ ಅಂಗೈಗೆ ಸುರಿದು ರುಚಿ ನೋಡಿದೆ. ಸರಿ ಇದೆ ಅನ್ನಿಸಿತ್ತು.

‘ಬೆಳಗ್ಗೆಯೇ ಬಂದಿದ್ದಳು. ಆದರೆ ತಡೆದುಕೊಳ್ಳಲಾಗದಷ್ಟು ತಲೆಸಿಡಿತ ಅವಳನ್ನು ಬಾಧಿಸುತ್ತಿತ್ತು. ಇಲ್ಲೇ ಮಲಗಿಕೊಳ್ಳು ಎಂದೆ. ಅವಳು ಸಮ್ಮತಿಸಲಿಲ್ಲ. ಮಧ್ಯಾಹ್ನದ ಹೊತ್ತಿಗೆ ಬರುತ್ತೇನೆ ಎಂದು ಹೇಳಿ ಮನೆಗೆ ಹೋದಳು, ಈಗ ಬರಬಹುದು’ ಎಂದೆ. ಒಲೆಯಿಂದ ಪಾತ್ರೆಯನ್ನು ಇಳಿಸಿ ಕೈ ಒರಸಿಕೊಂಡು, ತಪ್ಪೊಪ್ಪಿಕೊಳ್ಳುವವಳಂತೆ ಅವರಿಬ್ಬರ ಎದುರು ನಿಂತೆ. ‘ಕ್ಷಮಿಸಬೇಕು’ ಎಂದೂ ಹೇಳಿದೆ.

‘ನಾನಾದರೂ ಹಾಗೆಯೇ ಮಾಡುತ್ತಿದ್ದೆ.’ ಹಫ್ಸಾ ಹೇಳಿದ್ದರು, ‘ಪ್ರವಾದಿಯವರು ಬರಲಿರುವ ಸರದಿಯ ದಿನ ಬೇರೆ ಯಾರು ಬಂದರೂ ನನಗೆ ಸಿಟ್ಟು ಬರುತ್ತದೆ. ಆದರೆ, ನಮಗೆ ಬೇರೆ ದಾರಿಯಿದ್ದಿರಲಿಲ್ಲ’ ಎಂದವರು, ಉಮ್ಮು ಸಲಾಮರತ್ತ ನೋಡಿ, ಅನುಮತಿ ಪಡೆದುಕೊಂಡವರಂತೆ ತಲೆಯಾಡಿಸಿ, ‘ನಮ್ಮ ಸರದಿಯ ರಾತ್ರಿಗಳು ಸುಖವಾಗಿಸುವ ಸಲುವಾಗಿ ನಾವೆಲ್ಲ ಖಡ್ಗ ಎತ್ತುವ ದಿನ ಬಹಳ ದೂರವೇನೂ ಇಲ್ಲ ಉಮ್ಮಾ.’ ಎಂದರು.

ಸಿಡಿಲು ಬಡಿದಂತಾಗಿತ್ತು ನನಗೆ!

ಈ ಸವತಿ ಏನು ಹೇಳುತ್ತಿದ್ದಾರೆ? ಅಫೀರಾ ಹೇಳುತ್ತಿದ್ದ ಖಡ್ಗ ಎತ್ತುವ ದಿನಗಳು ಬಂದೇಬಿಟ್ಟಿದೆಯೆ?

ಮಹಾವೀರ ಉಮ್ಮರ್ ಬಿನ್ ಖತ್ತಾಬರ ಮಗಳು ಹಫ್ಸಾ ಕುದುರೆ ಸವಾರಿಯನ್ನೂ ಕಲಿತಿದ್ದಾರೆ ಎಂದು ಯಾರೋ ಹೇಳಿದ್ದನ್ನು ಕೇಳಿಸಿಕೊಂಡಿದ್ದೆ. ಆದರೆ, ಖಡ್ಗವರಸೆಯೂ





ಅವರಿಗೆ ಗೊತ್ತು ಎಂಬುದು ನನಗೆ ಗೊತ್ತಿರಲಿಲ್ಲ. ಉಮ್ಮು ಸಲಾಮಾರಿಗೆ ಅವೊಂದೂ ಗೊತ್ತಿರುವ ಸಾಧ್ಯತೆಗಳು ಕಡಿಮೆ. ಎಲ್ಲರೂ ಅವರನ್ನು ಓರ್ವ ಜ್ಞಾನಿಯೆಂದೇ ಗೌರವಿಸುತ್ತಿದ್ದರು. ಪ್ರತಿಯೊಂದು ಪದವನ್ನೂ ಅಳೆದು ತೂಗಿ ಮಾತನಾಡುವ ಉಮ್ಮು ಸಲಾಮಾರ ಬಾಯಿಯಿಂದ ಯಾರ ಬಗ್ಗೆಯೂ ಕೆಟ್ಟ ಮಾತು ಬರುವುದಿಲ್ಲ. ಆದರೆ, ಈ ಹಫ್ಸಾ ಹಾಗಲ್ಲ. ಮೆತ್ತಗೆ ಮಾತನಾಡುವುದೇ ಗೊತ್ತಿದ್ದಂತಿಲ್ಲ. ನನ್ನ ಮನೆಯ ಪಕ್ಕದಲ್ಲೇ ಇದ್ದದ್ದು ಹಫ್ಸಾರ ಮನೆ. ಅವರು ಮನೆಯೊಳಗೆ ಇದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿಯಲು ಕಣ್ಣುಗಳ ಅಗತ್ಯವಿರಲಿಲ್ಲ; ಕಿವಿಗಳನ್ನು ತೆರೆದಿಟ್ಟರೆ ಸಾಕು.

‘ನಾವೀಗ ಮತ್ತೊಂದು ಯುದ್ಧವನ್ನು ಎದುರಿಸಬೇಕಾಗಿದೆ.’ ಮೊತ್ತ ಮೊದಲ ಬಾರಿಗೆ ಉಮ್ಮು ಸಲಾಮಾರ ಬಾಯಿಯಿಂದ ಹೊರಟಿದ್ದ ಆತಂಕದ ಮಾತು ಕೇಳಿಸಿಕೊಂಡಿದ್ದೆ. ಅವರಿಬ್ಬರ ಎದುರು ನೆಲದಲ್ಲೇ ಕುಳಿತುಕೊಂಡ ನಾನು, ‘ನೀವು ಏನು ಹೇಳುತ್ತಿದ್ದೀರಿ ಎಂಬುದೇ ನನಗೆ ತಿಳಿಯಲಾಗಲಿಲ್ಲ’ ಎಂದೆ.

‘ನಿನ್ನೆ ಮಧ್ಯಾಹ್ನದ ಹೊತ್ತಲ್ಲಿ ನೀವು ಮನೆಯಲ್ಲಿ ಇದ್ದಿರಲಿಲ್ಲವೆ?’ ಉಮ್ಮು ಸಲಾಮಾ ಪ್ರಶ್ನಿಸಿದ್ದರು.

‘ಮಧ್ಯಾಹ್ನ..? ನೆನಪಿಸಿಕೊಂಡು ಹೇಳಿದೆ, ‘ಹೌದು ಇರಲಿಲ್ಲ; ಅಕ್ಕನನ್ನು ನೋಡದೆ ಬಹಳ ದಿನಗಳಾಗಿದ್ದವು. ಅಫೀರಾಳನ್ನು ಜೊತೆಗಿರಿಸಿಕೊಂಡು ಅಸ್ಮಾಳ ಮನೆಗೆ ಹೋಗಿದ್ದೆ. ಬರುವಾಗ ರಾತ್ರಿಯಾಗಿತ್ತು’ ಎಂದೆ.

‘ನಿನ್ನೆ ಮಧ್ಯಾಹ್ನ ಪ್ರವಾದಿಯವರು ಮಸೀದಿಯೊಳಗೆ ತಮ್ಮ ಸಹವರ್ತಿಗಳ ಸಭೆ ಕರೆದಿದ್ದಿರು. ಮಸೀದಿಯ ಒಳಗೆ ಮಾತ್ರವಲ್ಲ, ಹೊರಗೆ ಕೂಡಾ ಜನರು ತುಂಬಿಕೊಂಡಿದ್ದರು’ ಉಮ್ಮು ಸಲಾಮಾ ವಿವರಿಸಲಾರಂಭಿಸಿದ್ದರು. ‘ನಿಮ್ಮ ಅಬ್ಬ ಅಬೂಬಕರರು ಮತ್ತು ಪ್ರವಾದಿಯವರ ಮೆತ್ತಗೆ ಮಾತಾಡುತ್ತಿದ್ದ ಧ್ವನಿ ನಮ್ಮ ಮನೆಯೊಳಗೂ ನುಗ್ಗುತ್ತಿತ್ತು. ಕುತೂಹಲದಿಂದ ಹೊರಗೆ ಬಂದು ಜಗಲಿಯಲ್ಲಿ ನಿಂತುಕೊಂಡೆ. ಸಹವರ್ತಿಗಳೆಲ್ಲ ಆಡುತ್ತಿದ್ದ ಮಾತುಗಳನ್ನು ಆಲಿಸುತ್ತಿದ್ದಂತೆ ನಿಧಾನವಾಗಿ ಎದೆನಡುಕ ಶುರುವಿಟ್ಟುಕೊಂಡಿತ್ತು. ಮಕ್ಕಾದವರು ಮತ್ತೊಮ್ಮೆ ಧಾಳಿ ಮಾಡಲಿದ್ದಾರೆಯೆ? ಮತ್ತೊಂದು ಯುದ್ಧವನ್ನು ಎದುರಿಸಬೇಕಾಗಿದೆಯೆ? ಹೆದರುತ್ತಲೇ ಸಭೆಯ ಮಾತುಗಳಿಗೆ ಕಿವಿಯಾನಿಸಿದಾಗ ನನ್ನ ಭಯ ನಿಜವಾಗಿತ್ತು.

‘ನಿನ್ನ ಅಬ್ಬ ಹೇಳುತ್ತಿದ್ದರು, ‘ನಾಲ್ಕೈದು ತಿಂಗಳ ಹಿಂದೆಯಷ್ಟೇ ನಡೆದಿದ್ದ ಉಹದ್ ಯುದ್ದದಲ್ಲಿ ನಮ್ಮೆಲ್ಲರ ಪ್ರೀತಿಯ ಹಂಝಾರನ್ನು ಕಳೆದುಕೊಂಡಿದ್ದೇವೆ. ಇನ್ನೊಂದು ಯುದ್ಧವನ್ನು ಎದುರಿಸುವಷ್ಟು ಯುದ್ಧಾಯುಧಗಳೇ ನಮ್ಮ ಬಳಿ ಇಲ್ಲ. ಪ್ರವಾದಿಯವರ ಮೇಲಿನ ವಿಶ್ವಾಸದಿಂದ ಜೀವದ ಹಂಗುತೊರೆದು ಯುದ್ಧಭೂಮಿಯಲ್ಲಿ

ನಮಗೆ ನೆರವಾಗುತ್ತಿರುವ ಅನ್ಸಾರ್‌'ಗಳೂ ನಿಗದಿತ ಸಂಪಾದನೆಯಿಲ್ಲದೆ ಸೋತಿದ್ದಾರೆ. ಚಳಿಗಾಲ ಬೇರೆ. ಬಯಲಲ್ಲಿ ನಿಂತು ಯುದ್ಧ ಮಾಡುವುದು ಸುಲಭವಲ್ಲ..., ಅವರು ಇನ್ನೇನೋ ಹೇಳಲು ಹೊರಟಿದ್ದರು.

ಅಷ್ಟರಲ್ಲಿ ಅಲೀಯವರ ಧ್ವನಿ ಕೇಳಿಸಿತ್ತು. 'ನನ್ನದೊಂದು ನಿವೇದನೆಯಿದೆ' ಎಂದೇ ಮಾತು ಆರಂಭಿಸಿದ ಅಲೀ ಹೇಳತೊಡಗಿದ್ದರು. 'ನಮ್ಮೆದುರು ಈಗ ಬೇರೆ ಯಾವ ದಾರಿ ಉಳಿದಿದೆ? ನಾನಂದೇ ಎಲ್ಲರಿಗೂ ಸಾರಿ ಸಾರಿ ಹೇಳಿದ್ದೆ; ಆ ಯೆಹೂದೀ ಯರನ್ನು ಯಾವುದೇ ಕಾರಣಕ್ಕೂ ನಂಬಲಾಗದು ಎಂದು. ಈಗ ನೋಡಿ, ನಾನು ಹೇಳಿದಂತೆಯೇ ಆಗಿದೆ. ಪ್ರವಾದಿಯವರೊಂದಿಗೆ ಮಾಡಿಕೊಂಡಿರುವ ಎಲ್ಲ ಒಡಂಬಡಿಕೆಗಳನ್ನೂ ಮುರಿದು, ನಮ್ಮ ವಿರುದ್ಧ ಮತ್ತೊಂದು ಯುದ್ಧಕ್ಕೆ ಹೊಂಚು ಹಾಕುತ್ತಿರುವ ಮಕ್ಕಾದವರೊಂದಿಗೆ ಈ ವಿಶ್ವಾಸಘಾತುಕರಾದ ಯೆಹೂದೀಯರೂ ಸೇರಿಕೊಂಡಿದ್ದಾರೆ.'

'ಸಭೆಯಲ್ಲಿದ್ದ ಮತ್ತೊಬ್ಬರು ಏನೋ ಹೇಳಬಯಸಿದ್ದು ಪ್ರವಾದಿಯವರ ಗಮನಕ್ಕೆ ಬಂದಿರಬೇಕು. ಅವರು ಮತ್ತೊಮ್ಮೆ ಕೈಯೆತ್ತಿ ಸನ್ನೆ ಮಾಡಿದ್ದರು. ಹೊಸಬರೊಬ್ಬರ ಸ್ವರ ಕೇಳಿಸತೊಡಗಿತ್ತು.

'ಅಲೀಯವರು ಹೇಳುವಂತೆ ಪ್ರವಾದಿಯವರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಯನ್ನು ಯೆಹೂದೀಯರು ಏಕಪಕ್ಷೀಯವಾಗಿ ಮುರಿದುಕೊಂಡದ್ದು ಖಂಡಿತವಾಗಿಯೂ ತಪ್ಪು. ಆದರೆ, ಅದಕ್ಕೆ ಅವರಿಗಿರಬಹುದಾದ ಕಾರಣಗಳನ್ನೂ ನಾವು ಅರ್ಥ ಮಾಡಿಕೊಳ್ಳಬೇಕು. ನನ್ನ ಯೆಹೂದೀ ಗೆಳೆಯನೊಬ್ಬ ಹೇಳಿದ್ದ ಕೆಲವು ಮಾತುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುವೆ. ದಯವಿಟ್ಟು ಆಲಿಸಬೇಕು' ಎಂದ ಅವರು ಸ್ವಲ್ಪ ಹೊತ್ತು ಸುಮ್ಮನಾಗಿದ್ದರು. ಮಾತು ಮುಂದುವರಿಸಲು ಪ್ರವಾದಿಯವರಿಂದ ಅನುಮತಿ ಯಾಚಿಸುತ್ತಿದ್ದಿರಬಹುದು. ಸ್ವಲ್ಪ ಹೊತ್ತಿನ ಬಳಿಕ ಅವರ ಮಾತುಗಳು ಕೇಳಿಸತೊಡಗಿತ್ತು.

'ಯೆಹೂದೀಯರ ಮಣ್ಣಿಗೆ ನಾವು ಹೆಜ್ಜೆಯಿರಿಸಿದಾಗ ನಮ್ಮ ಬಳಿ ಕಣ್ಣೀರು ಅಲ್ಲದೆ ಬೇರೇನಿತ್ತು? ಆದರೆ ಈಗ ಏನಾಗಿದೆ? ಈ ಸಣ್ಣ ಅವಧಿಯಲ್ಲೇ ಮದೀನಾದ ವ್ಯಾಪಾರ ವಹಿವಾಟುಗಳ ಮೇಲೆ ನಾವು ಸಂಪೂರ್ಣ ಹಿಡಿತ ಸಾಧಿಸಿಬಿಟ್ಟಿದ್ದೇವೆ. ನಿರ್ಗತಿಕರಂತೆ ಅವರ ಊರಿಗೆ ಕಾಲಿರಿಸಿದ್ದ ನಮ್ಮಲ್ಲಿ ಕೆಲವರು ಅವರ ಯಜಮಾನನಂತೆ ವರ್ತಿಸತೊಡಗಿದರೆ, ಅವರೆಲ್ಲ ಬಾಯಿ ಮುಚ್ಚಿಕೊಂಡಿರಬೇಕೆಂದು ನಾವು ನಿರೀಕ್ಷಿಸುವುದೂ ಅಷ್ಟು ಸರಿಯಲ್ಲ.

'ನನಗೆ ಸಿಕ್ಕಿದ ಮಾಹಿತಿಯಂತೆ ಯೆಹೂದೀಯರು ಒಂದೆರಡು ತಿಂಗಳುಗಳ ಹಿಂದೆಯೇ ಮಕ್ಕಾದಲ್ಲಿರುವ ಅಬೂಸುಫ್ಯಾನರ ಬಳಿಗೆ ತಮ್ಮ ಗೂಢಚಾರರನ್ನು ಕಳುಹಿಸಿದ್ದರು. ಹಾಗೆಂದು ಯೆಹೂದೀಯರು ಈಗ ನಮ್ಮ ಜೊತೆಗಿಲ್ಲವೆಂದು





ಕೊರಗುತ್ತಾ ಕುಳಿತರೆ ನಾವೆಲ್ಲ ನಿರ್ನಾಮವಾಗುತ್ತೇವೆ. ಆದರೆ, ಅಲ್ಲಾಹು ನಮ್ಮ ಕೈಬಿಡುವುದಿಲ್ಲ ಎಂಬ ನಂಬಿಕೆ ನನಗಿದೆ; ನಮಗೆಲ್ಲರಿಗೂ ಇರಲೇಬೇಕು. ಈಗ ಎದುರಾಗಿರುವ ಯುದ್ಧವನ್ನು ಗೆಲ್ಲಲು ಏನಾದರೂ ಹೊಸದಾರಿ ಇದೆಯೇ ಎಂಬುದನ್ನು ಹುಡುಕಬೇಕೇ ವಿನಃ ಯೆಹೂದೀಯರು ನಮಗೆ ಮೋಸ ಮಾಡಿದರು ಎಂದು ಪರಿತಪಿಸುತ್ತಾ ಕುಳಿತುಕೊಂಡರೆ ಯಾವ ಪ್ರಯೋಜನವೂ ಇಲ್ಲ.'

'ನಾನೊಂದು ಸಲಹೆ ನೀಡಬಹುದೆ?'

ಮತ್ತೊಬ್ಬ ಹಿರಿಯರು ಏನನ್ನೋ ಹೇಳಲು ಹೊರಟಿದ್ದರು. ಅವರ ಗುರುತು ನನಗಿತ್ತು. ಅವರು ಇರಾನಿನ ಮತಪಂಡಿತರಾದ ಸಲ್ಮಾನ್ ಫಾರ್ಸಿ ಎಂಬುದು ನನಗೆ ಮಾತ್ರವಲ್ಲ, ಸಭೆಯಲ್ಲಿದ್ದವರಿಗೆಲ್ಲರಿಗೂ ತಿಳಿದಿತ್ತು; ಇಡೀ ಸಭೆಯೇ ಮೌನವಾಗಿತ್ತು. ಅವರು ಹೇಳತೊಡಗಿದ್ದರು, 'ಸಂಗಾತಿಯ ಮಾತುಗಳಿಗೆ ನನ್ನ ಸಹಮತವಿದೆ. ನಮ್ಮ ಜೊತೆಗೆ ನಮ್ಮ ಅಲ್ಲಾಹು ಇದ್ದಾನೆ ಎಂಬ ಅಚಲ ನಂಬಿಕೆಯಿಂದಲೇ ನಾವು ಯುದ್ಧವನ್ನು ಎದುರಿಸಬೇಕು. ಕುರೈಶರ ಮಿತ್ರರೆಲ್ಲ ಜೊತೆಯಾದರೆ ಅವರ ಸೈನ್ಯದ ಶಕ್ತಿ ಮೂರು ಸಾವಿರ ದಾಟಬಹುದು. ಯೆಹೂದೀಯರೂ ಕುರೈಶರೊಂದಿಗೆ ಸೇರಿ ಕೊಂಡಿದ್ದಾರೆಂಬುದು ಗೊತ್ತಾದರೆ, ಅರೇಬಿಯಾದ ಇತರ ಶತ್ರು ಗೋತ್ರಗಳೂ ಮಕ್ಕಾದವರ ಬೆಂಬಲಕ್ಕೆ ನಿಲ್ಲಬಹುದು. ಇನ್ನು ಸ್ಥಳೀಯರೂ ಶತ್ರುಗಳಿಗೆ ಸಹಕಾರ ನೀಡಿದರೆ, ನಾಲ್ಕೂ ದಿಕ್ಕುಗಳಿಂದಲೂ ಸುಲಭವಾಗಿ ನಮ್ಮ ಮೇಲೆ ಅವರು ಆಕ್ರಮಿಸಬಹುದು.

'ನನ್ನಲ್ಲೊಂದು ಪರಿಹಾರದ ಸೂತ್ರವಿದೆ. ತಾವೆಲ್ಲ ಬಯಸಿದರೆ ಅದನ್ನು ಪರಿಶೀಲಿಸ ಬಹುದು. ಮದೀನಾದ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ದಟ್ಟವಾದ ಖರ್ಜೂರದ ತೋಟಗಳಿದ್ದು, ಆ ಮೂಲಕ ದೊಡ್ಡ ಸೇನೆ ನುಗ್ಗುವುದು ಸುಲಭವಲ್ಲ. ಪಶ್ಚಿಮದಲ್ಲಿ ನಮ್ಮನ್ನು ಗೋಡೆಯಂತೆ ರಕ್ಷಿಸುತ್ತಿರುವ ಪರ್ವತಗಳಿವೆ. ಆಕ್ರಮಣಕಾರರಿಗೂ ಈ ಸತ್ಯ ಗೊತ್ತೇ ಇರುತ್ತದೆ. ಮದೀನಾವನ್ನು ಗೆಲ್ಲಬೇಕಾದರೆ ಸೇನೆಯನ್ನು ಅವರು ಉತ್ತರ ದಿಕ್ಕಿನಿಂದಲೇ ನುಗ್ಗಿಸಬೇಕಾಗುತ್ತದೆ.

'ಇರಾನೀಯರು ಇಂತಹ ಸಂದರ್ಭ ಎದುರಾದಾಗಲೆಲ್ಲ, ಹೆದ್ದಾರಿಗಳಲ್ಲಿ ಕಂದಕಗಳನ್ನು ತೋಡಿ ತಮ್ಮನ್ನು ರಕ್ಷಿಸಿಕೊಳ್ಳುವುದನ್ನು ನಾನು ಕಂಡಿರುವೆ. ನಾವೂ ಉತ್ತರ ದಿಕ್ಕಿನ ಹೆದ್ದಾರಿಯಲ್ಲಿ ದೊಡ್ಡದಾದ ಕಂದಕವನ್ನು ತೋಡಿದರೆ ಹೇಗೇ ಎಂಬುದನ್ನು ಪ್ರವಾದಿಯವರು ಪರಿಶೀಲಿಸಬೇಕೆಂದು ವಿನಂತಿಸುವೆ.'

'ಕಂದಕ ತೋಡುವ ಸಲಹೆಯನ್ನು ನಾನು ಒಪ್ಪಿರುವೆ. ನಾವೆಲ್ಲ ನಾಳೆಯಿಂದಲೇ ಆ ಕೆಲಸ ಮಾಡೋಣ' ಎಂದು ಗಟ್ಟಿಯಾಗಿ ಹೇಳಿದ ಪ್ರವಾದಿಯವರು ಎದ್ದು ನಿಂತುಬಿಟ್ಟಿದ್ದರು.

ಸಭೆ ಬರ್ಖಾಸ್ತು ಆಗಿತ್ತು. ತಲೆಗೊಂದರಂತೆ ಮಾತನಾಡಿಕೊಳ್ಳುತ್ತಾ ಭಾರವಾದ ಹೆಜ್ಜೆಗಳೊಂದಿಗೆ ಸೇರಿದ್ದವರೆಲ್ಲ ನಾಲ್ಕೂ ದಿಕ್ಕುಗಳಿಗೆ ಚದುರಿದ್ದರು.

ಸಭೆಯಲ್ಲಿ ನಡೆದಿದ್ದ ಮಾತುಗಳನ್ನೆಲ್ಲವನ್ನೂ ನೆನಪಿರಿಸಿಕೊಂಡ ಉಮ್ಮು ಸಲಾಮಾರ ನೆನಪಿನ ಶಕ್ತಿಗೆ ಬೆರಗಾಗಿದ್ದೆ. ಅವರು ಹೇಳುತ್ತಿದ್ದ ಪ್ರತಿಯೊಂದು ಪದವನ್ನೂ ನಾನು ಉಸಿರಾಡುವುದನ್ನೇ ಮರೆತು ಕೇಳಿಸಿಕೊಳ್ಳುತ್ತಿದ್ದೆ. ಇನ್ನೊಬ್ಬರ ಮಾತುಗಳನ್ನು ನಡುವೆಯೇ ಕತ್ತರಿಸಿ, ಮಾತು ತೂರಿಸುವುದರಲ್ಲೇ ಸುಖ ಅನುಭವಿಸು ವುದನ್ನು ಅಭ್ಯಾಸ ಮಾಡಿಕೊಂಡಿದ್ದ ಹಫ್ಸಾ ಕೂಡಾ ತುಟಿ ಬಿಚ್ಚದಿರುವುದು ನನ್ನನ್ನು ಇನ್ನಷ್ಟು ಆತಂಕಕ್ಕೆ ತಳ್ಳಿತ್ತು. ನನ್ನ ಬಲಗೈ ಅಪ್ಸಾರ ಎಡಗೈಯನ್ನು ಬಲವಾಗಿಯೇ ಹಿಡಿದುಕೊಂಡಿತ್ತು. ಅವರ ಕೈಬೆರಳುಗಳು ನವಿರಾಗಿ ನಡುಗುತ್ತಿದ್ದವು.

ನನ್ನ ಕೈಯನ್ನು ಮೃದುವಾಗಿ ಸವರುತ್ತಾ, ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ ಹಫ್ಸಾ, 'ನಮ್ಮ ಗಂಡಸರೆಲ್ಲ ಕಂದಕ ತೋಡುತ್ತಾ ಕಷ್ಟಪಡುತ್ತಿರುವ ಹೊತ್ತಿನಲ್ಲಿ ನಾವು ಹೆಂಗಸರು ಮನೆಯೊಳಗೆ ಒಲೆಯ ಮುಂದೆ ಕುಳಿತಿರುವುದು ಸರಿಯಲ್ಲ ಎಂಬುದು ಉಮ್ಮು ಸಲಾಮಾರ ಅಭಿಪ್ರಾಯ. ಹಾಗೆಂದು ನಾವು ಕಂದಕದಲ್ಲಿ ಇಳಿದು ಮಣ್ಣು ಹೊರಬೇಕಾಗಿಲ್ಲ. ಅಲ್ಲಿ ಕೆಲಸ ಮಾಡಲಿರುವ ಗಂಡಸರಿಗೆ ಕುಡಿಯುವ ನೀರನ್ನಾದರೂ ಹಂಚುವ ಕೆಲಸಗಳನ್ನು ನಾವು ಹೆಂಗಸರು ಮಾಡಬೇಕೆಂಬುದು ಇವರ ಸಲಹೆ. ನೀವೂ ನಮ್ಮ ಜೊತೆಗೆ ಬರಲು ಸಾಧ್ಯವೆ?'

'ಸಾಧ್ಯವೇ ಎಂದು ಯಾಕೆ ಕೇಳುತ್ತೀರಿ ಉಮ್ಮಾ? ಖಂಡಿತವಾಗಿ ನಾನು ನಿಮ್ಮ ಜೊತೆಗೆ ಬರುವೆ' ಎಂದಿದ್ದೆ ತಟ್ಟನೆ. ಅದರ ಜೊತೆಗೇ, 'ಪ್ರವಾದಿಯವರಿಗೆ ಇಂದು ರಾತ್ರಿಯೇ ಹೇಳಿ ಅನುಮತಿ ಪಡೆದುಕೊಳ್ಳುತ್ತೇನೆ' ಎಂಬ ಮಾತನ್ನೂ ಸೇರಿಸಿದ್ದೆ.

'ಹಾಗಾದರೆ ನಾವಿನ್ನು ಹೊರಡುತ್ತೇವೆ. ಸಂಜೆಯವರೆಗೆ ಅದೆಷ್ಟು ಸಾಧ್ಯವೋ ಅಷ್ಟೂ ಮನೆಗಳಿಗೆ ಹೋಗಿ ಅಲ್ಲಿರುವ ಹೆಂಗಸರನ್ನು ನಮ್ಮ ಜೊತೆಗೆ ಬರುವಂತೆ ಒತ್ತಾಯಿಸಬೇಕಿದೆ' ಎನ್ನುತ್ತಾ ಹಫ್ಸಾ ಎದ್ದು ನಿಂತರು. ಉಮ್ಮು ಸಲಾಮಾ ಕೂಡಾ ಎದ್ದು ಹೊರಡಲು ಸಿದ್ಧರಾದರು.

'ಸ್ವಲ್ಪ ಹಾಲನ್ನಾದರೂ ಕುಡಿದು ಹೋಗಿ' ಎನ್ನುತ್ತಾ ನಾನು ಹಾಲಿನ ತಟ್ಟೆ ಎತ್ತಿಕೊಳ್ಳಲು ಹೊರಟೆ.

'ಬೇಡ. ಈಗ ಬೇಡ. ನಮ್ಮ ಮದೀನಾವನ್ನು ನುಂಗಲು ಬರುತ್ತಿರುವ ಸೈತಾನ ರುಗಳನ್ನು ಓಡಿಸಿದ ಬಳಿಕ, ನಾವೆಲ್ಲ ಜೊತೆ ಸೇರಿ ಹಾಲು ಕಾಯಿಸಿ ಕುಡಿಯೋಣ' ಎಂದು ಹಫ್ಸಾ ಹೇಳುತ್ತಿದ್ದಾಗ, ಇದುವರೆಗೂ ನಾನು ತಿಳಿದುಕೊಂಡಿದ್ದ ಹಫ್ಸಾ ಇವರೇ ಅಥವಾ ಆ ಹಫ್ಸಾ ಎಂಬವರು ಬೇರೆಯೇ ಒಬ್ಬರು ಇದ್ದಾರೆಯೇ ಎಂದು ಅನುಮಾನಿಸುವಂತಾಗಿತ್ತು.





–೨–

'ಧರ್ಮ ರಕ್ಷಣೆಗೆ ಯುದ್ಧವಲ್ಲದೆ ಬೇರೆ ಮಾರ್ಗವೇ ಇಲ್ಲವೆ?' ಊಟ ಮುಗಿಸಿ ಚಾಪೆಯಲ್ಲಿ ಮಲಗಿಕೊಂಡಿದ್ದ ಪ್ರವಾದಿಯವರ ಕಾಲುಗಳನ್ನು ಒತ್ತುತ್ತಿದ್ದ ನಾನು ಪ್ರಶ್ನಿಸಿದ್ದೆ. 'ಏನಂದೀ!' ಎಂದು ಪ್ರಶ್ನಿಸಿದ್ದ ಪ್ರವಾದಿಯರು ನನ್ನನ್ನು ಹೊಸದಾಗಿ ಕಾಣುತ್ತಿರುವವರಂತೆ ನೋಡಿದ್ದರು. ನಾನೇದರೂ ತಪ್ಪು ಮಾತು ಆಡಿಬಿಟ್ಟೆನೆ? ಎಂದು ಗಲಿಬಿಲಿಗೊಂಡಿದ್ದೆ.

'ಅದೆಷ್ಟು ಬೇಗ ಬೆಳೆದು ದೊಡ್ಡವಳಾಗಿಬಿಟ್ಟೆ ನೀನು!' ಎಂದ ಪ್ರವಾದಿ, 'ಕೆಲವು ದಿನ ಗಳಿಂದ ಇದೇ ಪ್ರಶ್ನೆ ನನ್ನನ್ನೂ ಕೊರೆಯುತ್ತಿದೆ ಆಯಿಷಾ. ಆದರೆ ನಾನು ಅಸಹಾಯಕ. ಅಲ್ಲಾಹುವಿನ ಅಂತಿಮಸತ್ಯವನ್ನು ಸಂದೇಶಗಳ ಮೂಲಕ ಎಲ್ಲರಿಗೂ ತಲುಪಿಸುವ ಹೊಣೆಗಾರಿಗೆ ನನ್ನ ಮೇಲಿದೆ. ಯಾರ ವಿರುದ್ಧವೂ ಯುದ್ಧ ಘೋಷಿಸುವ ಅಧಿಕಾರ ಸತ್ಯವಿಶ್ವಾಸಿಗಳಾಗಿರುವ ನಮಗಿಲ್ಲ. ಆದರೆ, ನಮ್ಮ ವಿರುದ್ಧ ಆಕ್ರಮಿಸಿದವರನ್ನು ಎದುರಿಸದೆ ನೇರವಾಗಿ ಶರಣಾಗುವಂತೆಯೂ ಅಲ್ಲಾಹು ಆದೇಶಿಸಿಲ್ಲ.'

'ನಮ್ಮ ಬಳಿ ಯುದ್ಧಕ್ಕೆ ಅಗತ್ಯದ ಆಯುಧಗಳೇ ಇಲ್ಲವೆಂದು ಯಾರೋ ಹೇಳುತ್ತಿರುವುದನ್ನು ಕೇಳಿಸಿಕೊಂಡೆ.' ನಾನು ಹೇಳಿದೆ.

'ಯಾರು ಹೇಳಿದರು ಇಲ್ಲವೆಂದು? ನಮ್ಮ ಜೊತೆಗೆ ಅಲ್ಲಾಹುವೇ ಇರುವಾಗ ಬೇರೆ ಆಯುಧಗಳು ಬೇಕು ಎಂದು ನಿನಗನ್ನಿಸುತ್ತಿದೆಯಾ?'

ನಾನು ಉತ್ತರಿಸಲು ಪ್ರಯತ್ನಿಸಲಿಲ್ಲ. ಎದ್ದು ಅವರ ಪಕ್ಕದಲ್ಲಿ ಕುಳಿತು ಅವರ ತೋಳಿನ ಮೇಲೆ ಕೈಯಾಡಿಸುತ್ತಾ, 'ಮದೀನಾದ ಹೆದ್ದಾರಿಯಲ್ಲಿ ಕಂದಕ ತೋಡುವ ಕೆಲಸ ನಾಳೆಯಿಂದಲೇ ಶುರುವಾಗುತ್ತದಂತೆ. ಗಂಡಸರೆಲ್ಲ ಬಿಸಿಲಲ್ಲಿ ಕಂದಕದಲ್ಲಿ ಬೆವರಿಳಿಸುತ್ತಿರುವಾಗ, ನಾವು ಹೆಂಗಸರು ಮನೆಯೊಳಗೆ ಒಲೆಗಳ ಎದುರು ಕುಳಿತುಕೊಂಡಿರುವುದು ಸರಿಯೆಂದು ನಿಮಗನ್ನಿಸುತ್ತಿದೆಯಾ?' ಎಂದು ಪ್ರಶ್ನಿಸಿದೆ.

'ಅಂ..!' ಎಂದು ಉದ್ಗರಿಸಿದ ಪ್ರವಾದಿಯವರು ಸ್ವಲ್ಪ ಹೊತ್ತು ಮೌನವಾದರು. ಆನಂತರ ಅವರ ತೋಳಿನ ಮೇಲೆ ಚಲಿಸುತ್ತಿದ್ದ ನನ್ನ ಎಡಗೈಯನ್ನು ಹಿಡಿದು ಕೊಂಡವರು, 'ನಿನ್ನ ಈ ಮೃದುವಾದ ಕೈಗಳನ್ನು ಕಂದಕ ತೋಡಲೆಂದು ಅಲ್ಲಾಹು ಸೃಷ್ಟಿಸಿದ್ದಾನೆಂದು ನನಗೆ ಅನ್ನಿಸುತ್ತಿಲ್ಲ ಆಯಿಷಾ' ಎಂದು ತೆಳುವಾಗಿ ನಕ್ಕರು.

'ಕಂದಕ ತೋಡುವ ಶಕ್ತಿ ನಮ್ಮ ಕೈಗಳಿಗೆ ಇಲ್ಲವೆಂಬುದು ನನಗೂ ಗೊತ್ತಿದೆ. ಉಮ್ಮು ಸಲಾಮಾರ ಸಲಹೆಯಂತೆ, ನಾಳೆ ಕಂದಕ ತೋಡುವ ಕೆಲಸ ಮಾಡಲಿರುವ ಗಂಡಸರಿಗೆ ನೀರು ಹಂಚುವ ಕೆಲಸಕ್ಕೆ ನಾನೂ ಬರುವೆ ಎಂದು ಮಾತು ಕೊಟ್ಟಿರುವೆ. ನಾನು ಹೋಗಬಹುದೆ?'

ಅವರು ಉತ್ತರಿಸದಿದ್ದಾಗ ಅವರಿಗೆ ನಾನು ಹೊರಗೆ ಹೋಗುವುದು ಇಷ್ಟವಿಲ್ಲವೇನೋ ಎಂಬ ಅನುಮಾನ ಮೂಡಿತ್ತು.

'ಹೋಗುವುದು ಬೇಡವೆ?'

'ನಿನ್ನ ಜೊತೆಗೆ ನಾನೂ ಬಂದರೆ, ನಿನಗೆ ಸಲಹೆ ನೀಡಿರುವ ಉಮ್ಮಾನಿಗೆ ಸಿಟ್ಟು ಬರಬಹುದೆ? ಎಂದ ಪ್ರವಾದಿಯವರು ನನ್ನನ್ನು ಅವರ ಎದೆಯ ಮೇಲೆ ಎಳೆದುಕೊಂಡರು.

–೩–

ಮರುದಿನದಿಂದಲೇ ಒಂದೂವರೆ ಆಳು ಆಳ, ಎರಡೂವರೆ ಆಳು ಅಗಲ ಮತ್ತು ಸುಮಾರು ಒಂದು ಮೈಲುಗಿಂತಲೂ ಹೆಚ್ಚು ಉದ್ದದ ಬೃಹತ್ ಕಂದಕ ಅಗೆಯುವ ಕೆಲಸ ಶುರುವಾಗಿತ್ತು.

'ನಾವು ತೋಡುತ್ತಿರುವುದು ಶತ್ರುಗಳ ಗೋರಿಯನ್ನು' ಎಂದು ಹಾಡುತ್ತಾ ಸುಮಾರು ಮುನ್ನೂರಷ್ಟು ಗಟ್ಟಿಮುಟ್ಟಾದ ಗಂಡಸರು ಬಿಸಿಲಿನ ಬೇಗೆಯನ್ನೇ ಮರೆತವರಂತೆ ಉತ್ಸಾಹದಿಂದ ನೆಲಬಗೆಯುತ್ತಿದ್ದರು. ನಾವು ಸುಮಾರು ನಲುವತ್ತರಷ್ಟು ಹೆಂಗಸರು, ಬಾವಿಗಳಿಂದ ನೀರು ಸೇದಿ, ಕಂದಕದ ಪಕ್ಕದಲ್ಲೇ ಇರಿಸಲಾಗಿದ್ದ ಮರದ ಗುಡಾಣಗಳಿಗೆ ತುಂಬುತ್ತಿದ್ದೆವು. ಕೈಕಾಲು ಆಡಿಸಲು ಶಕ್ತಿಯುಳ್ಳ ಮಕ್ಕಳು, ಗುಡಾಣಗಳಿಂದ ಸಣ್ಣ ಸಣ್ಣ ಪಾತ್ರೆಗಳಲ್ಲಿ ನೀರು ತುಂಬಿಸಿಕೊಂಡು ಕಂದಕದೊಳಗೆ ಇಳಿದು, ಬಾಯಾರಿದವರಿಗೆ ನೀರು ಹಂಚಿ ಬರುತ್ತಿದ್ದರು.

ನನ್ನ ಸವತಿಯರಲ್ಲಿ ಎಲ್ಲರಿಗೂ ಹಿರಿಯರಾಗಿದ್ದ ಸೌದಾ, ಮೊದಲ ದಿನ ಬೆಳಗ್ಗೆಯೇ ನಮ್ಮ ಜೊತೆಗೆ ಬಂದಿದ್ದರಾದರೂ ಸ್ವಲ್ಪವೇ ಹೊತ್ತಿನಲ್ಲಿ ಆಯಾಸಗೊಂಡು ಮರಳಿದ್ದರು. ಅವರ ಅಸಹಾಯಕತೆ ನನಗೂ ಅರ್ಥವಾಗಿತ್ತು. ಆದರೆ, ಕಂದಕದ ಕೆಲಸ ಆರಂಭವಾಗಿ ಹತ್ತು ದಿನಗಳು ಕಳೆದರೂ ಪ್ರವಾದಿಯವರ ಅಳಿಯ ಅಲೀಯವರ ಹೆಂಡತಿ ಫಾತಿಮಕ್ಕ ಒಂದು ದಿನವೂ ಕಾಣಿಸದಿದ್ದಾಗ ಅನುಮಾನವಾಗಿತ್ತು. ಕಂದಕ ತೋಡುವಲ್ಲಿ ಅಲೀಯವರಂತೂ ಮೇಲ್ವಿಚಾರಕರಂತೆಯೇ ವರ್ತಿಸುತ್ತಿದ್ದರೂ, ಫಾತಿಮಕ್ಕ ಮಾತ್ರ ಒಂದು ದಿನವೂ ಬಂದಿರಲಿಲ್ಲ. ಫಾತಿಮಕ್ಕನ ಗೈರುಹಾಜರಿಗೆ ಕಾರಣವೇನಿದ್ದಿರಬಹುದು? ಮೈ ಹುಷಾರಿಲ್ಲವೆ? ಯಾರಲ್ಲಿ ವಿಚಾರಿಸುವುದು?

ಹನ್ನೆರಡನೇ ದಿನವಿದ್ದಿರಬಹುದು ಅದು.

ಸೂರ್ಯ ನೆತ್ತಿಗೇರುತ್ತಿರುವಂತೆಯೇ ನಾವು ಹೆಂಗಸರೆಲ್ಲ ಬುತ್ತಿ ಹೊತ್ತುಕೊಂಡು ಬರಲೆಂದು ಮನೆಯ ಕಡೆ ಹೊರಟಿದ್ದೆವು. ನನ್ನ ಪಕ್ಕದಲ್ಲೇ ನನ್ನ ಹೊಚ್ಚ ಹೊಸ ಸವತಿ





ಝೈನಬರು ಹೆಜ್ಜೆ ಹಾಕುತ್ತಿದ್ದರು. ಅವರ ಜೊತೆಗೆ ನಾನು ಹೆಚ್ಚು ಮಾತನಾಡಿದವಳಲ್ಲ. ಅವರೂ ಹಾಗೆಯೇ. ಕಂಡಾಗ ವಂದನೆ ಹೇಳಿ ಮುಖವರಳಿಸುತ್ತಿದ್ದರು; ಅಷ್ಟೆ. ನನ್ನ ಪಕ್ಕದಲ್ಲೇ ಕಾಲೆಳೆಯುತ್ತಿರುವ ಅವರೊಂದಿಗೆ ಮಾತನಾಡಲು ಇದೊಂದು ಅವಕಾಶವೆಂದು ಯೋಚಿಸಿದ ನಾನು, 'ಈ ಕಂದಕ ನಮ್ಮನ್ನು ರಕ್ಷಿಸಬಲ್ಲುದೆ?' ಎಂದು ಪ್ರಶ್ನಿಸಿದ್ದೆ. ನನಗವರ ಉತ್ತರ ಬೇಕಿದ್ದಿರಲಿಲ್ಲ. ನಮ್ಮನ್ನು ರಕ್ಷಿಸುವವನು ಅಲ್ಲಾಹು ಎಂಬುದು ನನಗೆ ಗೊತ್ತಿತ್ತು. 'ಈ ನಂಬಿಕೆಯಿಲ್ಲದಿದ್ದರೆ ಪ್ರವಾದಿಯವರು ಈ ಕೆಲಸಕ್ಕೆ ಕೈ ಹಾಕುತ್ತಿದ್ದರೆ?' ಝೈನಬರು ಮರುಪ್ರಶ್ನೆಯನ್ನೇ ಉತ್ತರವನ್ನಾಗಿಸಿದ್ದರು.

'ಫಾತಿಮಕ್ಕ ಒಂದು ದಿನವೂ ಕಾಣಿಸಲಿಲ್ಲ; ಅವರಿಗೆ ಮೈ ಹುಷಾರಿಲ್ಲವೆ?' ಎಂದು ಪ್ರಶ್ನಿಸಿದೆ.

ನಡೆಯುವುದನ್ನು ನಿಲ್ಲಿಸಿ ನನ್ನತ್ತ ತಿರುಗಿದ ಅವರು, 'ನಿಮ್ಮ ಮೂಲ ಪ್ರಶ್ನೆ ಇದೇ ಆಗಿತ್ತಲ್ಲವೆ?' ಎಂದು ಪ್ರಶ್ನಿಸಿದವರು, ನನ್ನ ತೋಳು ಹಿಡಿದು, 'ಇದು ನನ್ನ ಪ್ರಶ್ನೆಯೂ ಆಗಿದೆ ಉಮ್ಮಾ' ಎಂದು ನಕ್ಕರು.

'ಯಾಕಿರಬಹುದು?' ನಾನು ಪುನಃ ಅದೇ ಪ್ರಶ್ನೆಯನ್ನು ಕೇಳಿದ್ದೆ.

'ಅಲೀಯವರು ಬೇಡವೆಂದರಂತೆ'

'ಅಲೀಯವರು ಬೇಡವೆಂದು ತಡೆದರೆ! ಯಾಕೆ? ನಾವೆಲ್ಲ ಬರಲಿಲ್ಲವೆ?'

'ನಮಗೆಲ್ಲ ನಮ್ಮ ಗಂಡ ಅನುಮತಿಸಿದ್ದರು; ಅದಕ್ಕಾಗಿ ಬಂದೆವು. ಫಾತಿಮಾಳಿಗೆ ಅವಳ ಗಂಡನಿಂದ ಅನುಮತಿ ಸಿಗಲಿಲ್ಲ; ಹಾಗಾಗಿ ಅವಳು ಬರಲಿಲ್ಲ. ಇದರಲ್ಲಿ ಫಾತಿಮಾಳ ತಪ್ಪೇನು ಇಲ್ಲ' ಎಂದರು ಝೈನಬ್.

'ಹಾಗಾದರೆ ಅಲೀಯವರು ತಪ್ಪು ಮಾಡಿದರೆ?'

'ಅವರೊಬ್ಬರೇ ಉತ್ತರಿಸಬೇಕಾದ ಪ್ರಶ್ನೆ ಇದು. ಬೇರೆಯವರ ಸಂಸಾರದ ಬಗ್ಗೆ ಪ್ರಶ್ನೆಗಳನ್ನು ಕೇಳದಿರುವುದೇ ಒಳ್ಳೆಯದಲ್ಲವೆ?'

ನಾನು ಸುಮ್ಮನಾಗಿದ್ದೆ.

ಕಂದಕ ತೋಡುವ ಕೆಲಸ ಮುಗಿಯುತ್ತಿರುವಂತೆ ಕೆಲಸದ ವೇಗವೂ ಕಡಿಮೆಯಾಗುತ್ತಿತ್ತು. ಗುದ್ದಲಿ ಹಿಡಿದವರ ರಟ್ಟೆಗಳು ನೋಯುತ್ತಿದ್ದಿರಬಹುದು.

ಇನ್ನೆರಡು ದಿನಗಳಲ್ಲಿ ಕಂದಕದ ಕೆಲಸಗಳು ಮುಗಿಯಲಿದ್ದವು. ನೀರಿನ ಗುಡಾಣದ ಬಳಿ ಕುಳಿತಿದ್ದ ನನ್ನೆದುರೇ ಅಲೀ ಬಂದು ನಿಂತುಬಿಟ್ಟಿದ್ದರು! ಗಡಬಡಿಸಿ ಎದ್ದ ನಾನು ಪಾತ್ರೆಯೊಂದರಲ್ಲಿ ನೀರು ತುಂಬಿಸಿ ಅವರಿಗೆ ನೀಡಿದೆ.

ನೀರಿನ ಪಾತ್ರೆಯನ್ನು ನನ್ನಿಂದ ಎತ್ತಿಕೊಳ್ಳುತ್ತಿರುವಂತೆಯೇ ಅವರು ಹೇಳಿದ್ದರು, 'ರಣಭೂಮಿಯಿರುವುದು ಗಂಡಸರಿಗೆ ಮಾತ್ರ ಎಂದುಕೊಂಡಿದ್ದೆ ಉಮ್ಮಾ.' ಅವರ ನಗುವಿನಲ್ಲಿ ಕೊಂಕು ಕಾಣಿಸಿತ್ತು.

ನನಗಿಂತ ಸುಮಾರು ಹತ್ತು ವರ್ಷಕ್ಕಾದರೂ ದೊಡ್ಡವರು ಅವರು. ಅವರು ಸಮರಾಂಗಣದಲ್ಲಿ ಇದ್ದಾರೆಂದು ಗೊತ್ತಾದರೆ ಸಾಕು; ಶತ್ರು ಸೈನ್ಯದ ಕೈಕಾಲುಗಳು ನಡುಗುತ್ತಿದ್ದುವಂತೆ. ಈ ಹಿಂದೆ ನಡೆದಿದ್ದ ಎರಡೂ ಯುದ್ಧಗಳಲ್ಲಿ ಸತ್ಯವಿಶ್ವಾಸಿಗಳ ಗೆಲುವಿಗೆ ಪ್ರಮುಖ ಕಾರಣವೇ ಅವರಂತೆ. ಪ್ರವಾದಿಯವರ ಬಲಗೈಯಂತೆ ಇತ್ಯಾದಿ ಇತ್ಯಾದಿ ಬಹಳಷ್ಟು ಮಾತುಗಳನ್ನು ಕೇಳಿಸಿಕೊಂಡಿದ್ದೆ.

ಪ್ರವಾದಿಯವರ ದೊಡ್ಡಪ್ಪ ಅಬೂತಾಲಿಬರ ಮಗ ಅಲೀ.

ಸೌದಾರವರು ಒಮ್ಮೆ ಎಲ್ಲವನ್ನೂ ವಿವರಿಸಿ ಹೇಳಿದ್ದರು. ಹಿಂದೊಮ್ಮೆ ಮಕ್ಕಾವನ್ನು ಕರಾಳ ಬರಗಾಲವೊಂದು ನುಂಗಿ ಹಾಕಿತ್ತಂತೆ. ಆ ದಿನಗಳಲ್ಲಿ ದೊಡ್ಡ ದೊಡ್ಡ ವರ್ತಕರುಗಳೇ ತಲೆ ಮೇಲೆ ಕೈ ಹೊತ್ತು ಕುಳಿತಿದ್ದರಂತೆ. ವ್ಯಾಪಾರ ವಹಿವಾಟುಗಳೆಲ್ಲ ನಿಂತುಹೋಗಿದ್ದವಂತೆ. ಜೂಜು ಕಟ್ಟೆಗಳೆಲ್ಲ ಬಾಗಿಲು ಮುಚ್ಚಿದ್ದವು. ಮದ್ಯದಂಗಡಿಗಳೆಲ್ಲ ಆರಿ ಹೋಗಿದ್ದವು. ನರ್ತಕಿಯರೆಲ್ಲ ಉಪವಾಸ ಬಿದ್ದಿದ್ದರು. ಮೊದಲ ಪ್ರವಾದಿಪತ್ನಿ ಖದೀಜಾರ ಬಳಿ ಇದ್ದ ಸಂಪತ್ತಿನ ಕಾರಣದಿಂದ ಬರಗಾಲವು ಪ್ರವಾದಿಯವರನ್ನು ಅಷ್ಟೊಂದು ಹಿಂಸಿಸಿರಲಿಲ್ಲ. ಆಗ ಅವರು ಪ್ರವಾದಿಯಾಗಿದ್ದಿರಲೂ ಇಲ್ಲ. ಅದೇ ದಿನಗಳಲ್ಲಿ ಅಲೀಯವರ ಮನೆಯಲ್ಲಿ ರೊಟ್ಟಿಗೂ ತತ್ವಾರವಾಗಿತ್ತು. ದೊಡ್ಡಪ್ಪನವರ ಅಸಹಾಯಕತೆಯನ್ನು ಅರ್ಥ ಮಾಡಿಕೊಂಡಿದ್ದ ಪ್ರವಾದಿಯವರು, ತಮ್ಮ ಚಿಕ್ಕಪ್ಪ ಬನೀ ಹಾಶಿಮ್ ಮನೆತನದ ಅಬ್ಬಾಸರನ್ನು ಕಂಡು ವಿಷಯ ಪ್ರಸ್ತಾಪಿಸಿದಾಗ ಅವರೂ ಸಹಾಯ ಮಾಡಲು ಮುಂದೆ ಬಂದರಂತೆ. ಇಬ್ಬರೂ ಆಬೂತಾಲಿಬರ ಒಬ್ಬೊಬ್ಬ ಮಗನ ಪಾಲನೆಯ ಹೊಣೆ ಹೊತ್ತುಕೊಳ್ಳುವುದೆಂದು ತೀರ್ಮಾನಿಸಿದ್ದರು. ಅಬೂತಾಲಿಬರ ಸಮ್ಮತಿಯೊಂದಿಗೆ ಜಾಫರ್ ಎಂಬ ಹುಡುಗನನ್ನು ಅಬ್ಬಾಸರೂ, ಅಲೀಯವರನ್ನು ಪ್ರವಾದಿಯವರೂ ತಮ್ಮೊಂದಿಗೆ ಕರೆದುಕೊಂಡು ಹೋಗಿ, ಆ ಮುದಿ ಜೀವದ ಸಂಕಟಕ್ಕೆ ನೆರವಾಗಿದ್ದರಂತೆ. ಅದೇ ಬಡ ಹುಡುಗ ಅಲೀ, ಈಗ ಬೆಳೆದು ಎಲ್ಲರನ್ನೂ ಮೀರಿಸುವ ಸಮರಕಲಿಯಾಗಿದ್ದರು. ಪ್ರವಾದಿಯವರ ಬಲಗೈಯಾಗಿದ್ದರು.

ನಾನೀಗ ಪ್ರವಾದಿಪತ್ನಿ. ಅಲೀಯವರು ವಯಸ್ಸಿನಲ್ಲಿ ನನಗಿಂತ ದೊಡ್ಡವರಿರಬಹುದು. ಆದರೆ, ನಾನು ಅವರಿಗೆ ಉಮ್ಮಾ. ನನ್ನನ್ನವರು ಗೌರವಿಸಲೇಬೇಕು; ಕೊಂಕು ಮಾತು ಆಡಬಾರದು. ಜೋರಾಗಿ ಉಸಿರೆಳೆದುಕೊಂಡು, ಧೈರ್ಯವಹಿಸಿ ಕೇಳಿಯೇ ಬಿಟ್ಟೆ, 'ರಣರಂಗವು ಗಂಡಸರಿಗೆ ಮಾತ್ರ ಮೀಸಲಿರಿಸಿದ ಆಟದ ಬಯಲು ಎಂಬುದಾಗಿ ಮೊನ್ನೆ ಮೊನ್ನೆಯವರೆಗೂ ನಾನು ಭಾವಿಸಿದ್ದೆ. ಆದರೆ, ಗಂಡಸರು ಕೈಸೋತಾಗ ಅವರ ಹೆಂಗಸರು ಕೈಜೋಡಿಸಲೇಬಾರದು ಎಂಬುದಾಗಿ ಅಲ್ಲಾಹು ಇದುವರೆಗೂ ಆದೇಶಿಸಿಲ್ಲ.'

ನೀರು ಗಂಟಲಲ್ಲಿ ಸಿಕ್ಕಿಹಾಕಿಕೊಂಡವರಂತೆ ಅವರು ಒಮ್ಮೆಲೆ ಕೆಮ್ಮಿದ್ದರು.





ಅವರ ಕಣ್ಣುಗೊಂಬೆಗಳು ಬೆಂಕಿಯ ಉಂಡೆಗಳಂತಾಗಿದ್ದವು. ಎರಡು ಬಾರಿ ಕರ್ಕಶವಾಗಿ ಕೆಮ್ಮಿದ ಬಳಿಕ ತುಟಿಗಳನ್ನು ಒರಸಿಕೊಂಡ ಅವರು ಸಿಟ್ಟಿನಿಂದ ಕುದಿಯುತ್ತಿರುವಂತೆ ಅನ್ನಿಸಿತ್ತು.

'ಹೆಂಗಸರು ತಮ್ಮ ಗೌರವವನ್ನು ರಕ್ಷಿಸಿಕೊಳ್ಳುವುದನ್ನು ಮೊದಲು ಕಲಿಯಬೇಕು.' ಅಲೀಯವರ ಧ್ವನಿಯಲ್ಲಿ ಎಚ್ಚರಿಕೆಯಿತ್ತು. 'ಹೆಂಗಸರೂ ರಣರಂಗದಲ್ಲಿ ಖಡ್ಗ ಝುಳಪಿಸಲಾರಂಭಿಸಿದರೆ, ಅವರ ಗೌರವವನ್ನು ರಕ್ಷಿಸುತ್ತಿರುವ ಮುಖಪರದೆಗಳು ತರಗೆಲೆಗಳಂತೆ ಹಾರಿಹೋಗುತ್ತವೆ. ಪ್ರವಾದಿಪತ್ನಿಯರ ಮತ್ತು ಪ್ರವಾದಿಪುತ್ರಿಯರ ಗೌರವಗಳು ಗಾಳಿಯಲ್ಲಿ ಹಾರಾಡುವುದನ್ನು ನಾನು ಸಹಿಸಿಕೊಳ್ಳಲಾರೆ.'

ನನ್ನ ಮುಖವನ್ನು ನಾನೇ ಪರಚಿಕೊಳ್ಳುವಂತಾಗಿತ್ತು. ನನಗರಿವಿಲ್ಲದೆಯೇ ತಲೆಯ ಮೇಲಿದ್ದ ಮುಖಪರದೆಯನ್ನು ಮುಖದಮೇಲೆ ಎಳೆದುಕೊಂಡಿದ್ದೆ. ಆದರೆ, ಅವರ 'ಉಮ್ಮಾ'ರಲ್ಲಿ ನಾನೂ ಒಬ್ಬಳು ಎಂಬುದನ್ನೂ ಕಡೆಗಣಿಸಿ, ಕೈಯಲ್ಲಿದ್ದ ಪಾತ್ರೆಯನ್ನು ನೀರಿನ ಗುಡಾಣಕ್ಕೆಸೆದು, ಬಿಲ್ಲಿನಿಂದ ಚಿಮ್ಮಿದ ಬಾಣದಂತೆ ಹೊರಟು ಹೋಗಿದ್ದರು ಅಲೀ.

ಫಾತಿಮಕ್ಕ ಯಾಕೆ ಬರಲಿಲ್ಲವೆಂಬುದನ್ನು ಬೇರೆ ಯಾರಲ್ಲೂ ವಿಚಾರಿಸಬೇಕಾಗಿದ್ದಿರಲಿಲ್ಲ!

–೩–

ಕಳೆದ ಮಧ್ಯರಾತ್ರಿಯಲ್ಲಿ ಸಿಡಿಲು ಗುಡುಗುಗಳ ಸಹಿತ ಆಕಾಶವೇ ಮುರಿದುಬಿದ್ದಂತೆ ಮಳೆ ಸುರಿದಿತ್ತು.

ಸಾಮಾನ್ಯವಾಗಿ ಚಳಿ ಹಿಡಿಸುವ ದಿನಗಳಲ್ಲಿ ಇಷ್ಟೊಂದು ಭಯಾನಕವಾದ ಮಳೆ ಸುರಿದುದ್ದನ್ನು ಕಂಡವಳಲ್ಲ ನಾನು. ನಾವು ತೋಡಿದ್ದ ಕಂದಕವು ನೀರು ತುಂಬಿದ ಕೊಳವಾಗಿದ್ದಿರಬಹುದು. ಕಂದಕ ತೋಡುವ ಕೆಲಸಗಳು ಮುಗಿದ ಮರುದಿನದಿಂದ ನಮಗೆ, ಹೆಂಗಸರಿಗೂ ಸಣ್ಣ ಪುಟ್ಟ ಮಕ್ಕಳಿಗೂ ಅಲ್ಲಿಗೆ ಹೋಗಲು ಅನುಮತಿಯಿರಲಿಲ್ಲ. ಒಂಟೆ, ಕುದುರೆಗಳ ದಂಡಿನೊಂದಿಗೆ ಕಂದಕ ದಾಟಿ ಏಕಾಏಕಿ ಮದೀನಾದ ಮೇಲೆ ಮುತ್ತಿಗೆಯನ್ನೂ ಹಾಕಲಾಗದೆ, ಸಣ್ಣ ಸಣ್ಣ ಗುಂಪುಗಳಲ್ಲಿ ಕಂದಕ ದಾಟಲು ಯತ್ನಿಸಿದ ಯೋಧರ ಶವಗಳನ್ನೂ ಕಾಣಲಾಗದೆ ಕುರೈಶರು ಗೊಂದಲಕ್ಕೀಡಾಗಿದ್ದರು. ಅದಾಗಲೇ ಹತ್ತು ಹನ್ನೆರಡು ದಿನಗಳು ದಾಟಿದ್ದವು. ಇಂದು ರಾತ್ರಿಯೂ ನಿನ್ನೆಯಂತೆಯೇ ಧಾರಾಕಾರವಾಗಿ ಮಳೆ ಸುರಿಯಬಹುದೆಂಬ ಆತಂಕದಲ್ಲೇ ಮಲಗಿಕೊಂಡಿದ್ದೆ.

ರಾತ್ರಿಯ ಎರಡನೆಯ ಜಾವವೂ ದಾಟಿ ಬಹಳ ಹೊತ್ತಾಗಿದ್ದಿರಬಹುದಾದರೂ ನಿದ್ರೆಯೆಂಬುದು ನನ್ನ ವಿರುದ್ಧ ಮುನಿಸಿಕೊಂಡಿತ್ತು. ಒಂದು ವೇಳೆ ಈ ಯುದ್ಧದಲ್ಲಿ ನಾವು ಸೋತರೆ, ಮುಂದೆ ಏನಾಗಬಹುದೆಂಬುನ್ನು ಯೋಚಿಸುತ್ತಿರುವಾಗ ಮೈಕೊರೆಯುವ ಚಳಿಯಲ್ಲೂ ಮೈಬೆವರುತ್ತಿತ್ತು. ಸ್ವಲ್ಪವೇ ಹೊತ್ತಿನಲ್ಲಿ ಸೂರ್ಯನೂ ಕಣ್ಣು ತೆರೆಯಬಹುದು. ಅರೆಮಂಪರಿನಲ್ಲಿದ್ದ ನನಗೆ ಬಾಗಿಲ ಬಳಿ ಯಾರೋ ಮಾತನಾಡುತ್ತಿರುವಂತೆ ಕೇಳಿಸಿದಾಗ ಬೆಚ್ಚಿಬಿದ್ದಿದ್ದೆ.

ಶತ್ರುಸೈನ್ಯವು ಮನೆಯ ಬಾಗಿಲವರೆಗೂ ಬಂದುಬಿಟ್ಟಿತೆ!

ರೆಪ್ಪೆ ತೆರೆಯಲು ಹಿಂಜರಿದೆ. ಮಸೀದಿಗೆ ಅಂಟಿಕೊಂಡಿರುವ ಮನೆ ನನ್ನದು. ಬಾಗಿಲ ಹೊರಗಿನಿಂದ ಗಂಡಸರ ಪಿಸು ಪಿಸು ಮಾತುಗಳು ಕೇಳಿಸುತ್ತಿದ್ದವೇ ಹೊರತು, ಅಳುವ ಅಥವಾ ಚೀರಾಡುವ ಸದ್ದು ಕೇಳಿಸುತ್ತಿರಲಿಲ್ಲ. ಹಾಗಾದರೆ ಇನ್ನೂ ಧಾಳಿ ನಡೆದಿಲ್ಲ. ನಿಧಾನವಾಗಿ ಕಣ್ಣು ತೆರೆದೆ. ಎದ್ದು ಕುಳಿತೆ. ಕುಳಿತಲ್ಲಿಂದಲೇ ಬಾಗಿಲ ತಳದ ಸಂದಿಯಿಂದ ಸೂರ್ಯನ ಬೆಳಕು ಇಣುಕುತ್ತಿದೆಯೇ ಎಂದು ನೋಡಿದೆ. ಇಲ್ಲ, ಇನ್ನೂ ಹಗಲಾಗಿಲ್ಲ. ಕಿಟಕಿಯ ಸಂದಿಯಲ್ಲಾದರೂ ಬೆಳಕು ಕಾಣಿಸುತ್ತದೆಯೇ ಎಂದು ದಿಟ್ಟಿಸಿದೆ. ಅದೂ ಇಲ್ಲ; ಹೊರಗಿನ್ನೂ ಕತ್ತಲಿತ್ತು. ಹಾಗಾದರೆ, ಈ ಕತ್ತಲೆಯ ರಾತ್ರಿಯಲ್ಲಿ ಮಸೀದಿಯೊಳಗೆ ಜೋರು ಜೋರಾಗಿ ಮಾತನಾಡುತ್ತಿರುವವರು ಯಾರಿರಬಹುದು? ನಿಧಾನವಾಗಿ ಎದ್ದು ಬಾಗಿಲತ್ತ ಕಾಲೆಳೆದೆ.

ಮನೆಬಾಗಿಲು ತೆರೆದರೆ ಮಸೀದಿಯಲ್ಲಿ ನಡೆಯುವ ಎಲ್ಲವೂ ಕಾಣಿಸುತ್ತದೆ. ಆದರೆ, ಬಾಗಿಲು ತೆರೆಯಲು ಅಳುಕಿದೆ. ಬಾಗಿಲ ಸೆರೆಯಲ್ಲಿ ಕಿವಿಯಿಟ್ಟು ಆಲಿಸಿದೆ. ಮಾತನಾಡುತ್ತಿರುವವರಲ್ಲಿ ಪ್ರವಾದಿಯವರೂ ಇದ್ದಾರೆ ಅನ್ನಿಸಿತು. ಧೈರ್ಯಬಂತು. ಮುಸುಕೆಳೆದುಕೊಂಡು, ಬಾಗಿಲನ್ನು ಸದ್ದಾಗದಂತೆ ಸ್ವಲ್ಪವೇ ತೆರೆದೆ. ಏಳೆಂಟು ಸಹವರ್ತಿಗಳೊಂದಿಗೆ ಪ್ರವಾದಿಯವರು ಸಭೆ ನಡೆಸುತ್ತಿರುವುದು ಕಾಣಿಸಿತ್ತು!. ಮಧ್ಯರಾತ್ರಿಯಲ್ಲಿ ಅವರು ಸಭೆ ಸೇರಿಸಿದ್ದಿರಬೇಕಾದರೆ ಬಲವಾದ ಕಾರಣವೇ ಇರಬೇಕು. ಅರೆತೆರೆದ ಬಾಗಿಲ ನಡುವೆ ಕತ್ತು ತೂರಿ ನೋಡತೊಡಗಿದೆ.

ನನಗೆ ಅರ್ಥವಾದದ್ದು ಇಷ್ಟು:

ಪ್ರವಾದಿಯವರು ಸೂಚಿಸಿದ ಒಡೆದು ಆಳುವ ತಂತ್ರದಂತೆ, ನುಐಮ್ ಎಂಬ ಚಾಣಾಕ್ಷ ಬೇಹುಗಾರನೊಬ್ಬ ಹಿಂದಿನ ದಿನದ ರಾತ್ರಿಯಲ್ಲಿ ಮದೀನಾದ ಕೆಲವು ಯೆಹೂದೀ ನಾಯಕರನ್ನು ಗುಪ್ತವಾಗಿ ಭೇಟಿಯಾಗಿದ್ದ. ಒಂದುವೇಳೆ ಯುದ್ಧದಲ್ಲಿ ಸೋತು ಕುರೈಶರು ಮಕ್ಕಾಕ್ಕೆ ಮರಳಿದರೆ, ಮದೀನಾದ ಯೆಹೂದೀಯರು ಎದುರಿಸ ಬೇಕಾದ ಶೋಚನೀಯ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿ ಅವರನ್ನು





ಹೆದರಿಸಿದ್ದ. ಕಂದಕ ತೋಡುತ್ತಿರುವ ದಿನಗಳಲ್ಲೇ ಈ ಅನುಮಾನದ ವಾಸನೆಯನ್ನು ಗ್ರಹಿಸಿದ್ದ ಯೆಹೂದೀಯರು ನುಐಮನ ಮಾತಿನಿಂದ ಮತ್ತಷ್ಟು ದಿಕ್ಕೆಟ್ಟಿದ್ದರು. ಹಾಗಾದರೆ ತಾವೇನು ಮಾಡಬೇಕು ಎಂಬುದನ್ನು ತಿಳಿಸಿರಿ ಎಂದು ದುಂಬಾಲು ಬಿದ್ದಾಗ, ಪರಿಹಾರವನ್ನು ನುಐಮನೇ ಸೂಚಿಸಿದ್ದ!.

ಅದರಂತೆ, 'ಯುದ್ಧ ಮುಗಿಯುವವರೆಗೂ ಕುರೈಶರು ಇಪ್ಪತ್ತು ಯೋಧರನ್ನು ಯೆಹೂದೀಯರ ಒತ್ತೆಯಾಳಾಗಿ ಇರಿಸಬೇಕು. ಮಕ್ಕಾದವರು ಗೆದ್ದರೆ, ಒತ್ತೆಯಾಳು ಗಳನ್ನು ಬಿಡಿಸಿಕೊಂಡು ಹೋಗಬಹುದು. ಸೋತರೆ, ಒತ್ತೆಯಾಳುಗಳನ್ನು ಪ್ರವಾದಿಯವರ ಎದುರೇ ತಲೆ ಕತ್ತರಿಸಲಾಗುವುದು' ಎಂಬ ಒಕ್ಕಣೆಯ ಸಂದೇಶವನ್ನು ಯೆಹೂದೀ ನಾಯಕರು ಕುರೈಶ್ ಸರದಾರರಿಗೆ ಕಳಿಸಬೇಕು, ಎಂಬ ಸಲಹೆ ನೀಡಿದ್ದ. ನುಐಮನ ಮಾತಿಗೆ ಮರುಳಾದ ಯೆಹೂದೀ ನಾಯಕರು, ಹಾಗೆಯೇ ಬರೆದ ಸಂದೇಶವನ್ನು ಆ ರಾತ್ರಿಯೇ ಮಕ್ಕಾದ ಸರದಾರರಿಗೆ ರವಾನಿಸಿದ್ದರು.

ಈ ತಂತ್ರದಲ್ಲಿ ನುಐಮನು ನಿಭಾಯಿಸಬೇಕಾದ ಮತ್ತೊಂದು ಹಂತವೂ ಇತ್ತು.

ಅದರಂತೆ, ಅದೇ ರಾತ್ರಿಯಲ್ಲೇ ಕಂದಕ್ ಕಣಿವೆಯ ಇನ್ನೊಂದು ಭಾಗದಲ್ಲಿ ಬೀಡು ಬಿಟ್ಟಿದ್ದ ಮಕ್ಕಾದ ಸರ್ದಾರರ ಬಳಿಗೆ ಹೋಗಿದ್ದ. ಮಕ್ಕಾದ ಸೈನಿಕರಿಗೆ ಚಳಿಗಾಲದ ದಿನಗಳಲ್ಲಿ ಮದೀನಾದ ನೆಲದಲ್ಲಿ ಹೆಚ್ಚು ದಿನಗಳ ಕಾಲ ಹೋರಾಟ ಮಾಡಲು ಪ್ರಯಾಸವಾಗುತ್ತದೆಯೆಂದೂ, ಮರುದಿನವೇ ಮದೀನಾದ ಮೇಲೆ ಅಂತಿಮ ಧಾಳಿ ನಡೆಸದಿದ್ದರೆ ಸೋಲು ಕಟ್ಟಿಟ್ಟ ಬುತ್ತಿ ಎಂದೂ ಕುರೈಶರನ್ನು ಬೆದರಿಸಿದ್ದ. ಮದೀನಾದ ಹೆದ್ದಾರಿಯ ಅಡ್ಡಲಾಗಿ ತೋಡಲಾಗಿದ್ದ ಮಹಾಕಂದಕವನ್ನು ಕಂಡಾಗಲೇ ಈ ಅನುಮಾನ ಅವರನ್ನೂ ಕಾಡಿತ್ತು. ಮಾತ್ರವಲ್ಲ, ಕುರೈಶ್ ಸೈನಿಕರಿಗಾಗಿ ತಯಾರಿಸ ಲಾಗುತ್ತಿದ್ದ ಅಡುಗೆಯೆಲ್ಲವೂ ಆಗಾಗ್ಗೆ ಸುರಿಯುತ್ತಿದ್ದ ಮಳೆಗೆ ನೀರಾಗುತ್ತಿದ್ದವು. ರಾತ್ರಿ ಬೀಸುವ ಚಳಿಗಾಳಿಗೆ ಸೈನಿಕರ ಡೇರೆಗಳೆಲ್ಲ ಹಾರಿಹೋಗುತ್ತಿದ್ದವು. ಯುದ್ಧಕ್ಕೆ ಆರಿಸಿ ಕೊಂಡ ವೇಳೆಯೇ ಸರಿಯಾದದ್ದಲ್ಲ ಎಂಬುದು ಮೊದಲ ದಿನವೇ ಅವರಿಗರಿ ವಾಗಿತ್ತು. ಈ ಗೊಂದಲದಲ್ಲೇ ಇದ್ದ ಕುರೈಶರು, ನುಐಮನ ಮಾತಿನಿಂದ ಮತ್ತಷ್ಟು ಅಧೀರರಾಗಿ ಅಂತಿಮ ಯುದ್ಧಕ್ಕೆ ಮರುದಿನವೇ ಕರೆ ಕೊಡಲು ನಿರ್ಧರಿಸಿದ್ದರು.

ಕುರೈಶರ ಜೊತೆಗೆ ಮದೀನಾದ ಯೆಹೂದೀಯರು ಈ ಹಿಂದೆ ಗುಟ್ಟಾಗಿ ಮಾಡಿ ಕೊಂಡಿರುವ ಒಡಂಬಡಿಕೆಯಂತೆ, ಅಂತಿಮ ಯುದ್ಧಕ್ಕೆ ಮೊದಲು ಮದೀನಾದ ಒಳಗೆಯೇ ದಂಗೆಯೇಳಬೇಕಾಗಿತ್ತು. ದಂಗೆಯೇಳದಿದ್ದರೆ ಪ್ರವಾದಿಯವರ ಸೇನೆಯನ್ನು ಸೋಲಿಸಲು ಸಾಧ್ಯವಿಲ್ಲ. ಇವನ್ನೆಲ್ಲ ಚಿಂತಿಸಿದ ಕುರೈಶರು, ನುಐಮನ ಸಲಹೆಯಂತೆ, 'ನಾಳೆ ಸೂರ್ಯೋದಯದೊಂದಿಗೇ ಮದೀನಾದೊಳಗೆ

ದಂಗೆಯೇಳಬೇಕು' ಎಂಬ ಗುಪ್ತ ಸಂದೇಶವನ್ನು ಆ ನಡುರಾತ್ರಿಯಲ್ಲೇ ಮದೀನಾದಲ್ಲಿರುವ ಯೆಹೂದೀ ನಾಯಕರಿಗೆ ರವಾನಿಸಿಬಿಟ್ಟಿದ್ದರು.

ಅದೇ ಹೊತ್ತಿಗೆ ಸರಿಯಾಗಿ, ಯೆಹೂದೀಯರು ರವಾವಿನಿಸಿದ್ದ ಒತ್ತೆಯಾಳುಗಳನ್ನು ವಶಕ್ಕೊಪ್ಪಿಸಬೇಕೆಂಬ ಶರತ್ತುಗಳನ್ನು ವಿಧಿಸಿದ್ದ ಸಂದೇಶಪತ್ರವೂ ಕುರೈಶರನ್ನು ತಲುಪಿತ್ತು. ಮಹಾ ಸ್ವಾಭಿಮಾನಿಗಳಾದ ಕುರೈಶರು ಸಿಟ್ಟಿಗೆದ್ದು, ಆ ಶರತ್ತನ್ನು ಖಂಡತುಂಡವಾಗಿ ತಿರಸ್ಕರಿಸಿ ಮರುಸಂದೇಶ ಕಳಿಸಿದ್ದರು. ಆದರೆ, ತಮ್ಮ ಶರತ್ತಿಗೆ ಕುರೈಶರು ಸಮ್ಮತಿಸುವವರೆಗೂ ಮದೀನಾದೊಳಗೆ ದಂಗೆಯೇಳುವುದಿಲ್ಲವೆಂದು ಯೆಹೂದೀಯರೂ ಮತ್ತೊಂದು ಸಂದೇಶ ರವಾನೆ ಮಾಡಿದ್ದರು. ಗೆಳೆಯರ ನಡುವೆ ವಿರುದ್ಧ ದಿಕ್ಕುಗಳಲ್ಲಿ ಓಡಾಡುತ್ತಿರುವ ಈ ಸಂಧಾನಪತ್ರಗಳ ಓಟಗಳನ್ನೇ ಮುಳುಗಿಸುವಂತೆ, ಆ ರಾತ್ರಿಯ ಮೂರನೇ ಜಾವದಲ್ಲಿ ಮಿಂಚು ಗುಡುಗುಗಳೊಂದಿಗೆ ಸುರಿದ ಭೀಕರವಾದ ಮಳೆಯು, ಕುರೈಶ್ ಸೈನಿಕರ ಬಹುಪಾಲು ಡೇರೆಗಳನ್ನು ಹರಿದು ಚಿಂದಿ ಮಾಡಿ, ತರಗೆಲೆಗಳಂತೆ ಹಾರಿಸಿತ್ತು.

ಮರುದಿನದ ಮುಂಜಾನೆಯಿಂದ ಸಂಜೆಯರೆಗೂ ಕಂದಕದ ವಿರುದ್ಧ ದಿಕ್ಕಿನಿಂದ ಯಾವುದೇ ಚಲನವಲನಗಳು ಗೋಚರಿಸಿದ್ದಿರಲಿಲ್ಲ.

ಪ್ರವಾದಿಯವರ ತಂತ್ರವನ್ನು ಸಮರ್ಪಕವಾಗಿ ನಿಭಾಯಿಸಿ ಗೆದ್ದ ಬೇಹುಗಾರ ನುಐಮನನ್ನು ಅಭಿನಂದಿಸುವ ಸಲುವಾಗಿಯೇ ಪ್ರವಾದಿಯವರು ಸಂಜೆಯ ಹೊತ್ತಿಗೆ, ಆರಿಸಿದ ಕೆಲವು ಸಂಗಾತಿಗಳ ಸಭೆ ಕರೆದಿದ್ದರು. ಆದರೆ, ಮಕ್ಕಾದವರ ಜೊತೆಗೆ ಆತ್ಮೀಯ ಗೆಳೆಯನಂತೆ ಹಗಲಿಡೀ ಓಡಾಡುತ್ತಿದ್ದ ನುಐಮ, ಅವರ ಕಣ್ಣು ತಪ್ಪಿಸಿ ಕಂದಕ ದಾಟಿ ಬರುವಾಗ ಮಧ್ಯರಾತ್ರಿ ಕಳೆದಿತ್ತು. ಅಷ್ಟು ಮಾತ್ರವಲ್ಲ. ಸೂರ್ಯ ಕಣ್ಣುಬಿಡುವ ಮುನ್ನವೇ ಅವನು ಮತ್ತೊಮ್ಮೆ ಕಂದಕ ಹಾದು ಕುರೈಶರ ನಾಯಕರ ನಡುವೆ ಕಾಣಿಸಿಕೊಳ್ಳಬೇಕಾದ ಅನಿರ್ವಾಯತೆಯೂ ಇತ್ತು.

'ಸತ್ಯನಿಷೇಧಕರತ್ತ ಅಲ್ಲಾಹು ಕಣ್ಣೆತ್ತಿಯೂ ನೋಡನು.' ಸಭೆ ಮುಗಿಸುತ್ತಿರುವವರಂತೆ ಪ್ರವಾದಿಯವರು ಹೇಳುತ್ತಿರುವುದು ಕೇಳಿಸಿತ್ತು, 'ಅವರು ನಿರಾಸೆಯಿಂದ ಮರಳಿ ಹೋದರು. ವಿಶ್ವಾಸಿಗಳ ಪರವಾಗಿ ಯುದ್ಧ ಮಾಡಲು ಅಲ್ಲಾಹು ಒಬ್ಬನೇ ಸಾಕು.'

ಕುರೈಶರ ದೊಡ್ಡ ಸೈನ್ಯವನ್ನು ಸುಲಭವಾಗಿ ಸೋಲಿಸಿದ್ದ ನನ್ನ ಗಂಡನ ಚಾಣಾಕ್ಷತನವನ್ನು ಮೆಚ್ಚಿಕೊಳ್ಳುತ್ತಾ, ಬಾಗಿಲು ಮುಚ್ಚಿಕೊಂಡು ಚಾಪೆಯಲ್ಲಿ ಅಡ್ಡಾದೆ. ನೆಮ್ಮದಿಯಿಂದ ನಿದ್ರಿಸಿದೆ.

* * *





*ಅದೆಷ್ಟು ತಡೆದುಕೊಂಡರೂ, ಉಕ್ಕಿಬರುತ್ತಿದ್ದ ನಗುವನ್ನು ತಡೆದುಕೊಳ್ಳಲು ನನ್ನಿಂದ ಸಾಧ್ಯವೇ ಆಗಿದ್ದಿರಲಿಲ್ಲ. ತಮ್ಮ ರಾಜಕೀಯ ಲಾಭಕ್ಕಾಗಿ, ಮುಸ್ಲಿಮರು ಹಾಗೂ ಮುಸ್ಲಿಮೇತರರನ್ನು ಒಡೆದು ಆಳುವ ತಂತ್ರಗಾರಿಕೆಯನ್ನು ಮೊತ್ತಮೊದಲು ಅನುಷ್ಠಾನಕ್ಕೆ ತಂದವರು ಬ್ರಿಟಿಷರು ಎಂದೇ ಇದುವರೆಗೂ ನಾನು ತಿಳಿದುಕೊಂಡಿದ್ದೆ. ಆದರೆ, ಈ ಸಮರತಂತ್ರವನ್ನು ಏಳನೆಯ ಶತಮಾನದ ಅರಬರಿಂದ ಬ್ರಿಟಿಷರು ಕದ್ದಿದ್ದರು ಎಂಬ ಗುಟ್ಟನ್ನು ಯಾವ ಚರಿತ್ರಕಾರರೂ ಬಹಿರಂಗಪಡಿಸಿದ್ದಿಲ್ಲ.*

*'ಅದ್ಯಾಕೆ ನಗುತ್ತಿರುವೆ?' ಅರ್ಷದ್ ಪ್ರಶ್ನಿಸಿದ್ದ.*

*ನನ್ನ ಗೆಳೆಯನಿಗೆ ನಾನು ಯೋಚಿಸುತ್ತಿರುವುದು ಏನೆಂಬುದು ಮೊತ್ತಮೊದಲ ಬಾರಿಗೆ ಅರ್ಥವಾಗಿದ್ದಿರಲಿಲ್ಲ!*

*'ಏನಿಲ್ಲ, ಏನೋ ನೆನಪಾಗಿ ನಕ್ಕೆ' ಎಂದು ಸುಮ್ಮನಾಗಿದ್ದೆ.*

*'ಇಲ್ಲ, ಇಲ್ಲ. ನಗುವಿನ ಕಾರಣವನ್ನು ನೀನು ಹೇಳಲೇಬೇಕು. ಇಲ್ಲದಿದ್ದರೆ... , ಇಲ್ಲದಿದ್ದರೇ..., ನಾನು...., ಈ ಕ್ಷಣವೇ ನಿನ್ನನ್ನು, ನಿನ್ನ ಮನೆಗೆ ಎತ್ತಿಕೊಂಡು ಹೋಗಿ ತಳ್ಳಿಬಿಡುವೆ' ಬೆದರಿಸುವವಂತೆ ಅರ್ಷದ್ ಹೇಳಿದ್ದನಾದರೂ, ಅವನ ಮಾತಿನಲ್ಲಿ, 'ದಯವಿಟ್ಟು ಹೇಳು ಮಾರಾಯಾ' ಎಂಬ ಬೇಡಿಕೆ ಅಡಗಿದ್ದುದನ್ನು, ನಾನು ಗುರುತಿಸಿದ್ದೆ.*

*'ಅಂತಹಾ ವಿಶೇಷ ಕಾರಣವೇನೂ ಇಲ್ಲ ಗೆಳೆಯಾ..' ಎಂದು ಮಾತು ಆರಂಭಿಸಿದ ನಾನು, ನಗುವಿನ ಕಾರಣವನ್ನು ವಿವರಿಸಿದಾಗ, ಅವನೂ ಜೋರಾಗಿ ನಕ್ಕಂತೆ ಕೇಳಿಸಿತ್ತು.*

*'ಈ ವಿಷಯ ನನಗೆ ಗೊತ್ತೇ ಇರಲಿಲ್ಲ ನೋಡು. ನಿನ್ನ ಊರಿನ ಬಗ್ಗೆ ನಾನಿನ್ನು ಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕಾಗಿದೆ' ಎಂದವನು, 'ನಿನ್ನ ಊರಿನಲ್ಲಿ ನಿನ್ನಂಥವರೇ ಹೆಚ್ಚಿದ್ದಾರಾ?' ಎಂದು ಪ್ರಶ್ನಿಸಿದ್ದ.*

*ನಾನು ಗಲಿಬಿಲಿಗೊಂಡಿದ್ದೆ. 'ಹಾಗೆಂದರೆ ಏನು? ನನಗರ್ಥವಾಗಲಿಲ್ಲ' ಎಂದೆ. ನಿಜವಾಗಿಯೂ ನನಗೆ ಅವನ ಪ್ರಶ್ನೆ ಅರ್ಥವಾಗಿದ್ದಿರಲಿಲ್ಲ.*

*'ನಿನ್ನಂಥವರು ಎಂದರೇ..., ನಿನ್ನ ಹಾಗೆ ಪ್ರತಿಯೊಂದನ್ನೂ ಅನುಮಾನದಿಂದ ಕಾಣುವವರು, ಪ್ರಶ್ನಿಸುವವರು.'*

*'ಎಲ್ಲರೂ ನನ್ನ ಹಾಗೆ ಯಾಕೆ ಕಾಣಬೇಕು? ಪ್ರಶ್ನಿಸಬೇಕು? ಎಲ್ಲರೂ ಅವರವರ ದೃಷ್ಟಿಕೋನದಿಂದಲೇ ಅವರಿಗಿಷ್ಟವಾದುದನ್ನು ಕಾಣುತ್ತಾರೆ, ಅವರಿಗಿಷ್ಟವಾಗ ದಿರುವುದನ್ನು ಮಾತ್ರ ಪ್ರಶ್ನಿಸುತ್ತಾರೆ' ಎಂದೆ.*

*'ದೃಷ್ಟಿಕೋನವೆಂದರೆ?' ಅವನು ಮತ್ತೊಂದು ಪ್ರಶ್ನೆ ಎಸೆದಿದ್ದ. ಅವನಿಗೆ ನಿಜವಾಗಿಯೂ ಅರ್ಥವಾಗಿರಲಿಲ್ಲವೆ, ಅಥವಾ ನನ್ನನ್ನು ಕೆಣಕಲು ಪ್ರಶ್ನಿಸುತ್ತಿ*

*ದ್ದಾನೆಯೇ ಎಂಬ ಅನುಮಾನವೂ ಮೂಡಿತ್ತು. ನನ್ನ ಅನುಮಾನವನ್ನು ಅವನೂ ಗ್ರಹಿಸಿಬಿಟ್ಟಿದ್ದ.*

*'ಖಂಡಿತವಾಗಿಯೂ ನಿನ್ನನ್ನು ಕೆಣಕುವ ಉದ್ದೇಶ ನನಗಿಲ್ಲ. ನೀನು ಹೇಳಿರುವ 'ದೃಷ್ಟಿಕೋನ' ಎಂದರೆ ಏನೆಂಬುದೇ ನನಗೆ ತಿಳಿಯಲಿಲ್ಲ' ಎಂದ.*

*'ದೃಷ್ಟಿಕೋನ ಎಂದರೇ..., ಎಂದರೇ.., ಅದೇ..' ನಾನು ತಡವರಿಸಿದ್ದೆ. 'ಅದೇ.., ತಾನು ತಿಳಿದುಕೊಂಡಿರುವುದಷ್ಟೇ ಸತ್ಯವೆಂದು ನಂಬುತ್ತಾ, ಅದಕ್ಕೆ ವಿರುದ್ಧವಾಗಿ ಪ್ರಕಟವಾಗುವ ಎಲ್ಲವನ್ನೂ ಪ್ರಶ್ನಿಸುವುದು. ಉದಾಹರರಣೆಗೆ...' ಎನ್ನುತ್ತಿದ್ದಂತೆ ಮಾತು ಮುಂದುವರಿಸುವುದು ಬೇಡವೆನ್ನಿಸಿ ಸುಮ್ಮನಾದೆ.*

*'ಏನು ಉದಾಹರಣೆಗೆ..?' ನನ್ನ ಬಾಯಿ ಬಿಡಿಸಲು ಹಟತೊಟ್ಟವನಂತೆ ಪ್ರಶ್ನಿಸಿದ್ದ ಅರ್ಷದ್.*

*'ನೀನು ನನಗೆ ಈಗ ಕಾಣಿಸುತ್ತಿರುವ ಸಂಗತಿಗಳನ್ನೆಲ್ಲ ಬರೆದು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತೇನಲ್ಲ. ಆನಂತರದ ದಿನಗಳಲ್ಲಿ ಅದನ್ನೋದಿದವರಿಂದ ಬರಲಿರುವ ಪ್ರತಿಕ್ರಿಯೆಗಳನ್ನು ನೀನು ಗಮನಿಸಿದರೆ, ನಾನೀಗ ಹೇಳಲು ಅಳುಕುವ ಉದಾಹರಣೆಗಳು ಹೇಗಿರುತ್ತವೆ ಎಂಬುದು ಅರ್ಥವಾಗಬಹುದು' ಎಂದಷ್ಟೇ ಹೇಳಿದೆ, ವಾದ ಮುಂದುವರಿಸಲು ಇಷ್ಟವಿಲ್ಲದವನಂತೆ.*

*'ಸರಿ,. ಹಾಗೆಯೇ ಮಾಡುವೆ. ಈಗ ನಮ್ಮ ಪ್ರಯಾಣ ಮುಂದುವರಿಸೋಣವೇ?' ಎಂದು ಕೇಳಿದ.*

*'ಇನ್ನೂ ಒಂದು ಕಂದಕವನ್ನು ಕಾಣಿಸಲಿರುವೆಯಾ?' ತಮಾಷೆಯ ಸ್ವರದಲ್ಲೇ ಪ್ರಶ್ನಿಸಿದ್ದೆ.*

*'ನೀನೇ ಅದರ ಆಳವನ್ನು ಕಾಣುವೆಯಂತೆ, ಬಾ...' ಎಂದ.*

❐



## ಸ್ವಗತ – ಹನ್ನೆರಡು

## ಉಮ್ಮು ರುಮಾನ್ ಬಿಂತಿ ಅಲ್‌ಅಮೀರ್

–೧–

'ನೀನು ಬಹಳ ದೊಡ್ಡ ತಪ್ಪು ಮಾಡಿಬಿಟ್ಟೆ ಆಯಿಷಾ!'

ಮಗಳ ಜೊತೆಗೆ ನನ್ನ ಮನೆಯಂಗಳದಲ್ಲಿ ಕಾಣಿಸಿಕೊಂಡ ಅಫೀರಾಳ ಹೆಗಲಲ್ಲಿದ್ದ ದೊಡ್ಡ ಚೀಲವನ್ನು ಕಂಡಾಗ, ನನ್ನ ಬಾಯಿಯಿಂದ ಮಾತು ತಪ್ಪಿಸಿಕೊಂಡಿತ್ತು. ಸಿಡಿಲು ಬಡಿಸಿಕೊಂಡವರಂತೆ ಇಬ್ಬರೂ ಅಂಗಳದಲ್ಲೇ ಕಲ್ಲಾಗಿದ್ದರು.

'ಬನ್ನಿ ಒಳಗೆ' ತಪ್ಪು ತಿದ್ದಿಕೊಳ್ಳುವವಳಂತೆ ಹೇಳಿದ್ದೆ. ಆಯಿಷಾ ಕದಲಲಿಲ್ಲ.

'ನೀವೂ ನನ್ನನ್ನು ನಂಬಲಿಲ್ಲವೇ ಉಮ್ಮಾ..!?' ಆಯಿಷಾಳ ಪ್ರಶ್ನೆಯಲ್ಲಿ ಸಿಟ್ಟು ಬೆರೆತಿತ್ತು. ಕಣ್ಣುಗಳು ಕೆಂಪಾಗಿದ್ದವು.

'ಮತ್ತಿನ್ನೇನು? ಪ್ರವಾದಿಪತ್ನಿ ಅನ್ನಿಸಿಕೊಂಡವರು, ಚೀಲ ಎತ್ತಿಕೊಂಡು ಏಕಾಯೇಕಿ ಗಂಡನ ಮನೆ ತೊರೆದು ಬಂದರೆ ನಾನು ಬೇರೇನು ಹೇಳಬೇಕು?

ಆಯಿಷಾ ತನ್ನ ಬೆನ್ನ ಹಿಂದೆ ನಿಂತಿದ್ದ ಅಫೀರಾಳ ಮುಖ ನೋಡಿದ್ದಳು. ಅಫೀರಾಳ ಮುಖದಲ್ಲಿ ಮಡುಗಟ್ಟಿದ್ದ ಆತಂಕ ಸ್ವಲ್ಪ ಕಡಿಮೆಯಾದಂತೆ ಕಾಣಿಸಿದಾಗ ನನಗೆ ಅವರಿಬ್ಬರ ವರ್ತನೆಯೇ ಅರ್ಥವಾಗಿದ್ದಿರಲಿಲ್ಲ.

'ಹಾಗಾದರೆ ನೀವು ಆಕ್ಷೇಪಿಸಿದ್ದು, ಸಣ್ಣ ಒಡತಿ ಗಂಡನ ಮನೆಗೆ ತೊರೆದದ್ದನ್ನು ಮಾತ್ರ, ಅಲ್ವಾ ದೊಡ್ಡ ಒಡತಿ?' ಅಫೀರಾ ಹೇಳಿದ್ದಳು.

'ಏನು ನಿನ್ನ ಮಾತಿನ ಅರ್ಥ? ಹೇಳದೆ, ಕೇಳದೆ ಗಂಡನ ಮನೆಬಿಟ್ಟು ಬರುವುದು ಸರಿಯೆಂದು ಹೇಳುವಿಯಾ?' ಅಸಹನೆಯಿಂದಲೇ ಪ್ರಶ್ನಿಸಿದ್ದೆ.

'ಗಂಡನ ಮನೆಬಿಟ್ಟು ಬರುವುದು ತಪ್ಪೆಂಬುದನ್ನು ನಾನೂ ಒಪ್ಪುವೆ ಉಮ್ಮ. ಆದರೆ ಈ ದಿನ ನಾನು ಮಾಡುತ್ತಿರುವ ತಪ್ಪನ್ನು ಅಲ್ಲಾಹು ಕ್ಷಮಿಸುತ್ತಾನೆಂಬ ನಂಬಿಕೆ

ನನಗಿದೆ.' ಆಯಿಷಾ ಹೇಳುತ್ತಿರುವಂತೆಯೇ ನಡುವೆ ಬಾಯಿ ಹಾಕಿದ್ದ ಅಫೀರಾ, 'ನಾನು ಹೆದರಿಬಿಟ್ಟಿದ್ದೆ ದೊಡ್ಡ ಒಡತೀ. ನಮ್ಮನ್ನು ಕಂಡ ಕೂಡಲೇ, ನೀನು ಬಹಳ ದೊಡ್ಡ ತಪ್ಪು ಮಾಡಿಬಿಟ್ಟೆ ಆಯಿಷಾ ಎಂದಿರಲ್ಲ. ಅದನ್ನು ಕೇಳಿಸಿಕೊಂಡಾಗ ನನ್ನ ಉಸಿರೇ ಹೋದಂತಾಗಿತ್ತು. ಸಣ್ಣ ಒಡತಿಯ ಬಗ್ಗೆ ಊರೊಳಗೆ ಸುದ್ದಿಯಾಗುತ್ತಿರುವ ಅಸಹ್ಯ ಕತೆಗಳನ್ನು ನೀವು ಕೂಡಾ ನಂಬಿಬಿಟ್ಟಿದ್ದೀರಾ ಎಂದು ಭಾವಿಸಿದ್ದೆ. ನಾನಂತೂ, ಕಠಾರಿಯಿಂದ ಎದೆಗೆ ತಿವಿದು ಸಾಯೋಣ ಎಂದೇ ನಿರ್ಧರಿಸಿದ್ದೆ. ಸಣ್ಣ ಒಡತಿಯೂ ಹಾಗೆಯೇ ಯೋಚಿಸಿದ್ದಿರಬಹುದು' ಎಂದಿದ್ದಳು ಅಫೀರಾ.

'ಓ ಅಲ್ಲಾಹುವೇ..!, ಏನು ಹೇಳುತ್ತಿದ್ದೀ ಅಫೀರಾ ನೀನು? ನನ್ನ ಕೆಟ್ಟ ಕನಸುಗಳಲ್ಲೂ ನನ್ನ ಮಗಳ ಬಗ್ಗೆ ಹಾಗೆಲ್ಲ ಕಲ್ಪಿಸಿಕೊಳ್ಳುವವಳಾ ನಾನು?' ನಾವು ಮೂವರೂ ನಿಂತಿರುವುದು ಮನೆಯಂಗಳದಲ್ಲಿ ಎಂಬುದನ್ನೂ ಮರೆತು ಏರು ಧ್ವನಿಯಲ್ಲೇ ಪ್ರಶ್ನಿಸಿದ್ದೆ. ತಕ್ಷಣ ಎಚ್ಚೆತ್ತುಕೊಂಡು, 'ಒಳಗೆ ಬನ್ನಿ. ಏನಿದ್ದರೂ ಅಲ್ಲಿ ಮಾತಾಡುವ' ಎಂದ ನಾನು, ಕಣ್ಣೀರಿನ ಗೊಂಬೆಯಂತೆ ನಿಂತಿದ್ದ ಮಗಳನ್ನು ಅಪ್ಪಿಕೊಂಡೇ ಒಳಗೆ ಕರೆದುಕೊಂಡು ಹೋಗಿದ್ದೆ.

ಆಯಿಷಾಳ ವಿರುದ್ಧ ಕೆಟ್ಟ ಕೆಟ್ಟದ್ದಾಗಿ ಕತೆ ಕಟ್ಟಿ, ಅವಳ ಮಾನವನ್ನು ಸಂತೆಯಲ್ಲಿ ಗುಟ್ಟಾಗಿ ಹರಡುತ್ತಿದ್ದ ಕೆಲವರಿದ್ದರು. ಹಸ್ಸಾನ್ ಎಂಬ ಕವಿಯಂತೂ, ಆ ಸುಳ್ಳಿನ ಕತೆಗೆ ಚಂದದ ಕವಿತೆಯ ರೂಪ ಕೊಟ್ಟದ್ದಲ್ಲದೆ, ನಾಲ್ಕು ರಸ್ತೆಗಳು ಸೇರುವಲ್ಲಿ ಗಟ್ಟಿಯಾಗಿ ಹಾಡುತ್ತಿದ್ದಾನೆಂದು, ಸ್ವತಃ ಆಯಿಷಾಳ ಅಬ್ಬನೇ ಕೆಲವು ದಿನಗಳ ಹಿಂದೆ ಬಹಳ ನೋವಿನಿಂದಲೇ ಹೇಳಿದ್ದರು.

ಪ್ರವಾದಿಯವರ ನಂಬುಗೆಯ ಸಹವರ್ತಿ ಸಫ್ವಾನ್, ಆ ಕವಿಯನ್ನು ಕೊಲ್ಲ ಹೊರಟಿದ್ದನೆಂಬ ಸುದ್ದಿಯನ್ನು ಕೇಳಿದಾಗಲಂತೂ ಪ್ರವಾದಿಯವರ ಮುಖವನ್ನು ನೋಡಲಾಗುತ್ತಿರಲಿಲ್ಲವಂತೆ. ಯಾಕೆಂದರೆ, ಕೊಲ್ಲಹೊರಟ ಆರೋಪ ಹೊತ್ತವನು ಪ್ರವಾದಿಯ ನಂಬುಗೆಯ ಬಂಟ ಸಫ್ವಾನ್. ಪ್ರವಾದಿಯವರ ಬಹುಕಾಲದ ಕಿರಿಯ ಸಹವರ್ತಿ. ಸತ್ಯವಿಶ್ವಾಸಿಗಳ ಯುದ್ಧಾಯುಧಗಳ ಗೋದಾಮುಗಳನ್ನು ಕಾಪಾಡುವ ಹೊಣೆ ಹೊತ್ತಿರುವ ಹಿತೈಷಿ. ಆ ಕೊಳಕು ಕವಿಯನ್ನು ಸಫ್ವಾನ್ ಕೊಲ್ಲಲೆತ್ನಿಸಿದ್ದು ಕೂಡಾ ಪ್ರವಾದಿ ಕುಟುಂಬದ ಮಾನ ಕಾಪಾಡುವ ಏಕೈಕ ಉದ್ದೇಶದಿಂದಲೇ. ಆ ಕುಕವಿಯನ್ನು ನಡುಬೀದಿಯಲ್ಲಿ ಹೊರಳಿಸಿ, ಹೊರಳಿಸಿ ಸಫ್ವಾನ್ ಒದೆಯುತ್ತಿದ್ದಾಗ, ಅಲ್ಲಿಗೆ ಬಂದಿದ್ದ ಸಾಬಿತ್ ಎಂಬ ಯೋಧ, ಸಫ್ವಾನನನ್ನು ಬಲವಾಗಿ ಹಿಡಿದುಕೊಂಡು ಕವಿಯನ್ನು ಕಾಪಾಡಿದ್ದ. ಇಲ್ಲದಿರುತ್ತಿದ್ದರೆ, ನಿರಾಯುಧನಾಗಿದ್ದ ಒಬ್ಬ ನಾಗರಿಕನನ್ನು ಕೊಂದ ಆರೋಪದಿಂದ ಸಫ್ವಾನ್ ತಪ್ಪಿಸಿಕೊಳ್ಳಲು ಸಾಧ್ಯವೇ ಇದ್ದಿರಲಿಲ್ಲ.





ಆಯಿಷಾಳ ಅಬ್ಬ ಒಮ್ಮೆ ಬಿಕ್ಕಳಿಸುತ್ತಲೇ ಹೇಳಿದ್ದರು, 'ಬಾಲ್ಯದಲ್ಲಿ ನಮ್ಮ ಮನೆಯಲ್ಲಿಯೇ ತಿಂದುಂಡು, ಆಯಿಷಾಳ ಜೊತೆಗೇ ಆಟವಾಡುತ್ತಾ ನಮ್ಮ ಮನೆಮಗನಂತೆಯೇ ಬೆಳೆದ ಹುಡುಗನ ವಿರುದ್ಧ ಅದೊಂದೇ ಆರೋಪವಾಗಿರುತ್ತಿದ್ದರೆ, ಎದೆಗಟ್ಟಿ ಮಾಡಿಕೊಂಡು ನೋವು ನುಂಗಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಆದರೆ, ಆರೋಪ ಅದಷ್ಟೇ ಅಲ್ಲವಲ್ಲಾ..?'

ಆಯಿಷಾಳ ಅಬ್ಬನ ನೋವು ನನಗರ್ಥವಾಗಿತ್ತು.

ಆ ಕೆಟ್ಟ ಕವಿ ಹಾಡುತ್ತಿದ್ದ ಕವಿತೆಯ ವಸ್ತು ವ್ಯಭಿಚಾರ.

ವ್ಯಭಿಚಾರದ ಆರೋಪಕ್ಕೆ ಗುರಿಯಾಗಿದ್ದ ಹೆಣ್ಣು, ನನ್ನ ಮಗಳು ಆಯಿಷಾ.

ಗಂಡು, ಆಯಿಷಾಳ ಬಾಲ್ಯದ ಒಡನಾಡಿ ಹಾಗೂ ನಮ್ಮ ಮನೆಮಗ ಸಫ್ವಾನ್.

ಆ ಅನೈತಿಕ ಕತೆಯನ್ನು ಮೊತ್ತ ಮೊದಲು ಸುದ್ದಿ ಮಾಡಿದ್ದವನು ಸಾಮಾನ್ಯನೇನೂ ಅಲ್ಲ.

ಮೊನ್ನೆ ಮೊನ್ನೆಯಷ್ಟೇ ಸತ್ಯವಿಶ್ವಾಸಿಯಾಗಿ ಪ್ರಮಾಣ ಮಾಡಿದ್ದ ಅಬ್ದುಲ್ಲಾ ಎಂಬ ಖಝ್ರಜ್ ಗೋತ್ರದ ಸರದಾರ. ಮದೀನಾಕ್ಕೆ ಪ್ರವಾದಿಯವರು ವಲಸೆ ಬಾರದಿರುತ್ತಿದ್ದರೆ, ತನ್ನ ಖಝ್ರಜ್ ಗೋತ್ರದ ಜೊತೆಗೆ ಶತ್ರುವಾಗಿರುವ ಔಸ್ ಗೋತ್ರಕ್ಕೂ ಅವನೇ ನಾಯಕನಾಗಿಬಿಡುತ್ತಿದ್ದನಂತೆ. ತನ್ನ ಪಟ್ಟಾಭಿಷೇಕಕ್ಕೆಂದು ವಜ್ರ ಖಚಿತ ಬಂಗಾರದ ಕಿರೀಟವೊಂದನ್ನು ಸಿರಿಯಾದಿಂದ ತರಿಸಿಯೂ ಇದ್ದನಂತೆ. ತನಗೆ ರಾಜನಾಗುವ ಅವಕಾಶವನ್ನು ತಪ್ಪಿಸಿದ್ದ ಪ್ರವಾದಿಯವರ ವಿರುದ್ಧ ತನಗಿರುವ ಅಸಮಾಧಾನಗಳನ್ನು ಅಪ್ತವಲಯದಲ್ಲಿ ಗುಟ್ಟಾಗಿಯೂ ಹೇಳಿಕೊಳ್ಳುತ್ತಿದ್ದನಂತೆ.

ಪ್ರವಾದಿಯ ವಿರುದ್ಧ ಜನರನ್ನು ಎತ್ತಿಕಟ್ಟುವ ಯಾವುದೇ ಸಣ್ಣ ಅವಕಾಶವನ್ನೂ ಬಿಟ್ಟುಕೊಡದ ಅವನು, ಇದೀಗ ನನ್ನ ಮಗಳ ನಡತೆಯನ್ನೇ ಅಪಮಾನಿಸುವ ಕೆಟ್ಟ ಕತೆಯೊಂದನ್ನು ಕಟ್ಟಿ ಹರಿಯಬಿಟ್ಟಿದ್ದ. ಅಬ್ದುಲ್ಲಾನ ನೀಚ ಬುದ್ಧಿಗೆ ಸಿಟ್ಟಿಗೆದ್ದ ಉಮ್ಮರ್ ಬಿನ್ ಖತ್ತಾಬರು, ಅಬ್ದುಲ್ಲಾನನ್ನು ಕತ್ತರಿಸಿ ಎಸೆಯಲು ಪ್ರವಾದಿಯವರ ಅನುಮತಿ ಯಾಚಿಸಿಯೂ ಇದ್ದರು. ಅಷ್ಟೇ ಯಾಕೆ. ಅಬ್ದುಲ್ಲಾನ ಸ್ವಂತ ಮಗನೂ ತನ್ನ ಅಬ್ಬನ ವಿರುದ್ಧ ತಿರುಗಿಬಿದ್ದಿದ್ದ. 'ನನ್ನ ಹೊರತು ಬೇರೆಯವನೊಬ್ಬ ನನ್ನ ತಂದೆಯನ್ನು ಕೊಂದು ರಸ್ತೆಯಲ್ಲಿ ಓಡಾಡುವುದನ್ನು ನಾನು ಸಹಿಸಿಕೊಳ್ಳಲಾರೆ. ಪ್ರವಾದಿಯವರು ಅನುಮತಿಸಿದರೆ ನಾನೇ ಅಬ್ಬನ ತಲೆ ಕಡಿದು ಎಸೆಯುವೆ' ಎಂಬ ಮಾತನ್ನು ಬಹಿರಂಗವಾಗಿಯೇ ಹೇಳುತ್ತಿದ್ದನಂತೆ. ಆದರೆ, ಸಂಗಾತಿಗಳೆಲ್ಲರ ಸಲಹೆಗಳನ್ನು ಸ್ಪಷ್ಟವಾಗಿಯೇ ತಳ್ಳಿ ಹಾಕಿದ್ದ ಪ್ರವಾದಿಯವರು, 'ಅಬ್ದುಲ್ಲಾ ಈಗ ನಮ್ಮ ಸಹವರ್ತಿಯಾಗಿದ್ದಾನೆ. ನಮ್ಮವರ ಜೊತೆ ಸೌಜನ್ಯದಿಂದಲೇ ವರ್ತಿಸಬೇಕಾದದ್ದು ನಮ್ಮ ಧರ್ಮ. ಸಹವರ್ತಿಯೊಬ್ಬನನ್ನು ಪ್ರವಾದಿಯವರೇ ಕೊಲ್ಲಿಸಿದರು ಎಂಬ

ಅಪವಾದವನ್ನು ನಾನು ಹೊರಬೇಕೆ?' ಎಂದು ಪ್ರಶ್ನಿಸಿ ಎಲ್ಲರನ್ನೂ ನಿಯಂತ್ರಿಸಿದ್ದರು.

ಅಬ್ದುಲ್ಲಾ ಹೇಳುತ್ತಿದ್ದ ಅಂತೆ ಕಂತೆಗಳನ್ನು ನಂಬಲೇಬಾರದು ಎಂದು ನಿರ್ಧರಿಸಿದ್ದ ಸತ್ಯವಿಶ್ವಾಸಿಗಳು ಕೂಡಾ ನನ್ನ ಮಗಳ ವಿರುದ್ಧ ಅನುಮಾನ ಹುಟ್ಟಿಸುವಂತಹ ಘಟನೆ ಅದಾಗಿತ್ತು. ಪ್ರಯಾಣ ಹೊರಟಿದ್ದ ಪ್ರವಾದಿಯವರೊಂದಿಗೆ, ನನ್ನ ಮಗಳನ್ನು ಹೊತ್ತಿದ್ದ ಮೇನೆಯೂ ಹೋಗಿದ್ದುದನ್ನು ಎಲ್ಲರೂ ಕಣ್ಣಾರೆ ಕಂಡಿದ್ದರು. ಅದೇ ಮೇನೆಯು ಪ್ರವಾದಿಯವರ ಜೊತೆಗೇ ಮರಳಿ ಬಂದುದನ್ನೂ ಗಮನಿಸಿದ್ದರು. ಹಾಗಾದರೆ, ಮರುದಿನದ ಸೂರ್ಯ ನೆತ್ತಿ ಸುಡುತ್ತಿರುವ ಹೊತ್ತಲ್ಲಿ, ಸಫ್ವಾನ್ ಕರೆದುಕೊಂಡು ಬಂದಿದ್ದ ಒಂಟೆಯ ಮೇಲೆ ಕುಳಿತುಕೊಂಡು ಆಯಿಷಾ ಬಂದದ್ದಾರೂ ಹೇಗೆ?

ಹಾಗಾದರೆ, ಅದಾಗಲೇ ಬಂದಿದ್ದ ಮೇನೆಯಲ್ಲಿ ಇದ್ದವರು ಯಾರು?

ಹಾಗಾದರೆ, ಆ ಮೇನೆಯಲ್ಲಿ ಪ್ರವಾದಿಪತ್ನಿ ಇದ್ದಿರಲಿಲ್ಲವೆ?

ಹಾಗಾದರೆ, ಅಬ್ದುಲ್ಲಾ ಹೊರಿಸುತ್ತಿರುವ ಆರೋಪಗಳು ಸತ್ಯವೆ?

ಹಾಗಿಲ್ಲವಾಗಿರುತ್ತಿದ್ದರೆ, ಘಟನೆ ನಡೆದು ತಿಂಗಳಾಗುತ್ತಾ ಬಂದರೂ ಪ್ರವಾದಿಯವರೇಕೆ ಬಾಯಿಬಿಡುವುದಿಲ್ಲ?

ಹಾಗಾದರೆ, ಪ್ರವಾದಿಪತ್ನಿ ನಿಜವಾಗಿಯೂ ಸಫ್ವಾನನ ಜೊತೆಗೆ ಒಂದು ರಾತ್ರಿಯನ್ನು ಕಳೆದಿದ್ದರೆ?

'ಪ್ರವಾದಿಪತ್ನಿ' ಅನ್ನಿಸಿಕೊಂಡ ಬಳಿಕವೂ ಅವರು ಅಷ್ಟು ದೊಡ್ಡ ತಪ್ಪು ಮಾಡಿಬಿಟ್ಟರೆ?

ಯಾರಿಗಾದರೂ ಅನುಮಾನ ಮೂಡಿಸುವಂತಹ ಘಟನೆ ಅದು. ಆದ್ದರಿಂದಲೇ, ಮೊದಮೊದಲೆಲ್ಲ ಸಣ್ಣ ಗುಸು ಗುಸು ಆಗಿದ್ದ ವದಂತಿಯು, ದಿನದಿಂದ ದಿನಕ್ಕೆ ತಲೆ ಬಾಲ ಸೇರಿಸಿಕೊಂಡು ಬೆಳೆಯುತ್ತಾ ಪೇಟೆತುಂಬಾ ಹರಡಿದ್ದವು.

## –೨–

ಕಣ್ಣೀರಿಡುತ್ತಾ ಆಯಿಷಾ ವಿವರಿಸಿದ್ದ ನಿಜಮಾತುಗಳ ಮತ್ತು ಪೇಟೆಯಲ್ಲಿ ಹಳಸುತ್ತಿರುವ ಸುಳ್ಳುಮಾತುಗಳ ನಡುವೆ ಹೆಚ್ಚಿನ ವ್ಯತ್ಯಾಸಗಳೇನೂ ಕಾಣಿಸಿದ್ದಿರಲಿಲ್ಲ!

ಪ್ರವಾದಿಯವರ ಬೆನ್ನ ಹಿಂದೆ ನನ್ನ ಮಗಳನ್ನು ಹೊತ್ತ ಮೇನೆ ಹೋಗಿದ್ದದ್ದೂ ಸುಳ್ಳಲ್ಲ. ಅದೇ ಮೇನೆಯು ಪ್ರವಾದಿಯವರ ಜೊತೆಗೆ ಮರಳಿ ಬಂದದ್ದೂ ಸುಳ್ಳಲ್ಲ. ಮೂರನೆಯ ದಿನ, ಲಗಾಮು ಹಿಡಿದುಕೊಂಡು ಬರುತ್ತಿರುವ ಸಫ್ವಾನ್ ಜೊತೆಗಿದ್ದ





ಒಂಟೆಯ ಮೇಲೆ ನನ್ನ ಮಗಳು ಕಾಣಿಸಿದ್ದೂ ಸುಳ್ಳಲ್ಲ. ಒಂದು ರಾತ್ರಿಯ ಅವಧಿಯಲ್ಲಿ ನನ್ನ ಮಗಳು ಸಫ್ವಾನನ ಜೊತೆಗಿದ್ದದ್ದೂ ಸುಳ್ಳಲ್ಲ. ಘಟನೆ ನಡೆದು ತಿಂಗಳಾಗುತ್ತಾ ಬಂದಿದ್ದರೂ ಪ್ರವಾದಿಯವರು ಈ ಬಗ್ಗೆ ಚಕಾರವೆತ್ತದಿರುವುದೂ ಸುಳ್ಳಲ್ಲ.

ಆದರೆ, ನಾನು ನಂಬಲು ಹಿಂದೆ ಮುಂದೆ ನೋಡಿದ್ದ ಸತ್ಯವೆಂದರೆ, ಆಯಿಷಾಳನ್ನು ಪ್ರವಾದಿಯವರು ವಿಚ್ಛೇದಿಸಲಿದ್ದಾರಂತೆ ಎಂಬ ವಾರ್ತೆ ನಿಧಾನವಾಗಿ ಚಿಗುರುತ್ತಿರುವಂತೆಯೇ, ನನ್ನ ಮಗಳ ವಿರುದ್ಧ ಅಸೂಯೆಪಡುತ್ತಿರುವ ಪ್ರವಾದಿಪತ್ನಿ ಝೈನಬ್, ಎಲ್ಲರಿಗೂ ಅಚ್ಚರಿಯಾಗುವಂತೆ ನನ್ನ ಮಗಳ ಬೆಂಬಲಕ್ಕೆ ನಿಂತುಬಿಟ್ಟದ್ದು!

ಬಹಳ ರೂಪವತಿಯಾಗಿರುವ ಝೈನಬರಿಗೆ ಮೂಗಿನ ಮೇಲೆಯೇ ಸಿಟ್ಟು. ಮಿಕ್ಕವರನ್ನೆಲ್ಲ ಅವರವರ ಕುಟುಂಬದವರು ಪ್ರವಾದಿಯವರಿಗೆ ಮದುವೆ ಮಾಡಿಕೊಟ್ಟಿದ್ದರೆ, ತನ್ನೊಬ್ಬಳನ್ನು ಮಾತ್ರ ಸ್ವತಃ ಅಲ್ಲಾಹುವೇ ಮದುವೆ ಮಾಡಿಸಿದ್ದನು ಎಂಬ ಜಂಭವೂ ಅವರಿಗಿತ್ತು. ಅವರೇ ಅದನ್ನು ಬಾಯಿಬಿಟ್ಟು ಎಲ್ಲರಲ್ಲೂ ಹೇಳಿಕೊಳ್ಳುತ್ತಿದ್ದರು.

'ಅಲ್ಲಾಹುವಿನ ಕಣ್ಣುಗಳಲ್ಲಿ ಎಲ್ಲರೂ ಸಮಾನರು' ಎನ್ನುತ್ತಿದ್ದ ಪ್ರವಾದಿಯವರ ಮಾತನ್ನು ಸುಳ್ಳು ಮಾಡಬಾರದೆಂಬ ಒಂದೇ ಕಾರಣಕ್ಕೆ, ಪ್ರತಿಷ್ಠಿತ ಕುರೈಶ್ ಕುಟುಂಬದಲ್ಲಿ ಹುಟ್ಟಿ ಸುಖವಾಗಿ ತಿಂದುಂಡು ಬೆಳೆದಿದ್ದ ಝೈನಬ್, ಗುಲಾಮರ ಮಾರುಕಟ್ಟೆಯಲ್ಲಿ ಬಿಕರಿಗಿಡಲಾಗಿದ್ದ ಗುಲಾಮ ಝೈದನನ್ನು ಮದುವೆಯಾಗಿದ್ದದ್ದು ಎಂಬುದು ಎಲ್ಲರಿಗೂ ಗೊತ್ತಿರುವ ಗುಟ್ಟು. ಸೋದರ ಅಬ್ದುಲ್ಲಾರೊಂದಿಗೆ ಮಕ್ಕಾ ತೊರೆದು ಮದೀನಾಕ್ಕೆ ಬಂದಿದ್ದರು. ಒಂಟೆ ಚರ್ಮವನ್ನು ಹದಮಾಡುವುದನ್ನು ಮಕ್ಕಾದಲ್ಲಿರುವಾಗಲೇ ಕರಗತ ಮಾಡಿಕೊಂಡಿದ್ದ ಅವರು, ಮದೀನಾದಲ್ಲೂ ಆ ಕೆಲಸವನ್ನು ಮುಂದುವರಿಸಿದ್ದರು. ಸಾಕಷ್ಟು ಆದಾಯವೂ ಅವರಿಗಿತ್ತು. ಹಾಗೆ ನೋಡಿದರೆ, ಸಣ್ಣ ಗುಡಿಸಲೊಂದರಲ್ಲಿ ಬದುಕುವುದನ್ನು ಅವರು ಕಲಿತದ್ದೇ ಪ್ರವಾದಿಪತ್ನಿಯಾದ ಬಳಿಕ.

ನನ್ನ ಮಗಳನ್ನು ಕಂಡರೆ ಝೈನಬರಿಗೆ ಹೊಟ್ಟೆಯುರಿ. ಅದಕ್ಕೆ ಕಾರಣ; ಎಲ್ಲ ಪತ್ನಿಯರಿಗಿಂತ ಕಿರಿಯಳಾಗಿರುವ ಆಯಿಷಾಳನ್ನು ಪ್ರವಾದಿಯವರು ಮಿಕ್ಕವರಿಗಿಂತ ಹೆಚ್ಚು ಪ್ರೀತಿಸುತ್ತಿದ್ದಾರೆ ಎಂಬ ಅನುಮಾನ ಅವರಿಗೆ. ಅವಕಾಶ ಸಿಕ್ಕಾಗಲೆಲ್ಲ ನನ್ನ ಮಗಳನ್ನು ಮೂದಲಿಸುತ್ತಿದ್ದ ಝೈನಬ್, ಪ್ರವಾದಿಯವರ ಸಮ್ಮುಖದಲ್ಲೂ ಹಾಗೆ ಮಾಡಲೂ ಹಿಂಜರಿಯುತ್ತಿರಲಿಲ್ಲವಂತೆ.

ಅಫೀರಾ ಹೇಳಿದ್ದನ್ನೇ ನಂಬುವುದಾದರೆ, ನಾಲ್ಕೈದು ತಿಂಗಳ ಹಿಂದೊಮ್ಮೆ ಪ್ರವಾದಿಯವರ ಎದುರಲ್ಲೇ, ನನ್ನ ಮಗಳನ್ನು ಬಹಳ ಕೆಟ್ಟ ಕೆಟ್ಟ ಮಾತುಗಳಿಂದ ಝೈನಬ್ ಅವಮಾನಿಸಿದ್ದರಂತೆ. ಆದರೆ ಆಯಿಷಾ ಎಲ್ಲವನ್ನೂ ಮೌನವಾಗಿಯೇ ಸಹಿಸಿಕೊಂಡಿದ್ದಳಂತೆ. ಪ್ರವಾದಿಯವರು ಝೈನಬರನ್ನು ಗದರಿಸಬಹುದು ಎಂದು ಅಫೀರಾ ನಿರೀಕ್ಷಿಸುತ್ತಿದ್ದರೆ, ಅವರು ಆಯಿಷಾಳತ್ತ ಕಣ್ಣು ಹಾಯಿಸಿ, 'ನೀನು ನನ್ನ

ಜೀವದ ಗೆಳೆಯನ ಮಗಳು ಎಂಬುದನ್ನು ಮತ್ತೊಮ್ಮೆ ನಿರೂಪಿಸಿದೆ ಆಯಿಷಾ' ಎಂದಷ್ಟೇ ಹೇಳಿ ನಕ್ಕುಬಿಟ್ಟಿದ್ದರಂತೆ.

ಬೇರೆ ಯಾರು ಹೇಳಿದ್ದರೂ ನಾನು ನಂಬುತ್ತಿರಲಿಲ್ಲ; ಆದರೆ, ಹೇಳಿದ್ದವರು ಸ್ವತಃ ಆಯಿಷಾಳ ಅಬ್ಬ. ಆಯಿಷಾಳ ಅಬ್ಬ ಇರುವುದೇ ಹಾಗೆ; ತಮ್ಮ ವಿರುದ್ಧ ಯಾರೂ ಏನೇ ಹೇಳುತ್ತಿರಲಿ, ಸುಮ್ಮನೆ ನಕ್ಕುಬಿಡುತ್ತಿದ್ದರು. ತಮ್ಮ ವಿರುದ್ಧ ಹಾಗೆಲ್ಲ ಮಾತಾಡುತ್ತಿರುವವರಿಗೆ ಅಲ್ಲಾಹುವೇ ಹಾಗೆ ಮಾಡಲು ಅದೇಶಿಸಿದ್ದಿರಬಹುದು ಎಂದು ನಂಬುವ ಸಜ್ಜನ.

ಎರಡು ವಾರಗಳ ಹಿಂದೆ ಮಸೀದಿಯೊಳಗೆ ಪ್ರವಾದಿಯವರು ತಮ್ಮ ಸಹವರ್ತಿಗಳ ಜೊತೆಗೆ ಸಭೆ ನಡೆಸುತ್ತಿದ್ದರಂತೆ. ಆಯಿಷಾಳ ಅಬ್ಬ ಕೂಡಾ ಅಲ್ಲಿದ್ದರು. ಯಾವುದೋ ವಿಷಯದ ಬಗ್ಗೆ ಗಂಭೀರ ಚರ್ಚೆ ನಡೆಸುತ್ತಿದ್ದಾಗ, ಝೈನಬ್ ಏಕಾಯೇಕಿ ಅಲ್ಲಿಗೆ ಬಂದಿದ್ದರಂತೆ. ಗಲಿಬಿಲಿಗೊಂಡ ಪ್ರವಾದಿಯವರು, ತಮ್ಮ ಹೆಂಡತಿಯತ್ತ ಮಂದಹಾಸ ಬೀರುತ್ತಾ, 'ಈ ಹೊತ್ತಿನಲ್ಲಿ ನಿನ್ನನ್ನು ಇಲ್ಲಿಗೆ ಬರುವಂತೆ ಮಾಡಿದ ಕಾರಣವನ್ನು ಕೇಳಬಹುದೆ?' ಎಂದು ಪ್ರಶ್ನಿಸಿದ್ದರಂತೆ.

'ಅನುಮತಿಯಿಲ್ಲದೆ ಬಂದಿರುವುದಕ್ಕೆ ಕ್ಷಮೆಯಾಚಿಸುವೆ' ಎಂದ ಝೈನಬ್, ಅಲ್ಲಿ ಸೇರಿದ್ದ ಸಹವರ್ತಿಗಳನ್ನೆಲ್ಲಾ ಅಳೆದು ತೂಗುವವಳಂತೆ ದಿಟ್ಟಿಸಿ, 'ತಮ್ಮೆಲ್ಲರಿಂದಲೂ ಕ್ಷಮೆಯಾಚಿಸುವೆ. ಊರಲ್ಲೆಲ್ಲಾ ಹಬ್ಬುತ್ತಿರುವ ಹೊಸದೊಂದು ವದಂತಿಯನ್ನು ಕೇಳಿಸಿಕೊಂಡಾಗ, ಪ್ರವಾದಿಪತ್ನಿಯಾಗಿರುವ ನಾನು ಸುಮ್ಮನಿರುವುದು ಸರಿಯಲ್ಲ ಎಂದು ಭಾವಿಸಿ ಇಲ್ಲಿಗೆ ಬಂದಿರುವೆ' ಎಂದಾಗ ಎಲ್ಲರಿಗೂ ಅಚ್ಚರಿಯಾಗಿತ್ತು.

'ಅದೇನು ನೀನು ಕೇಳಿಸಿಕೊಂಡ ಹೊಸ ವದಂತಿ?' ಪ್ರವಾದಿಯವರಿಗೂ ಕುತೂಹಲವಾಗಿದ್ದಿರಬೇಕು.

'ನಾನು ಆಯಿಷಾ ಉಮ್ಮಾರನ್ನು ಇಷ್ಟಪಡುತ್ತಿಲ್ಲ ಎಂದೇ ಜನರಾಡಿಕೊಳ್ಳುತ್ತಿರುವುದು ನನಗೆ ಗೊತ್ತಿದೆ. ಅದಕ್ಕೆ ಅವರದ್ದೇ ಆದ ಕಾರಣಗಳೂ ಇರಬಹುದು. ನಾನು ಅವರನ್ನು ಖಂಡಿತವಾಗಿಯೂ ದ್ವೇಷಿಸುತ್ತಿಲ್ಲ. ಇದು ಸತ್ಯ. ಅವರು ಸಣ್ಣ ವಯಸ್ಸಿನಲ್ಲೇ ಪ್ರವಾದಿಪತ್ನಿಯೆಂಬ ಬಲುದೊಡ್ಡ ಗೌರವಕ್ಕೆ ಪಾತ್ರರಾದವರು. ಅವರಿಗೆ ನನ್ನ ಅರ್ಧದಷ್ಟೂ ವಯಸ್ಸಾಗಿಲ್ಲ. ಅವರಿಗೆ ಅನುಭವ ಕಮ್ಮಿ ಇರಬಹುದು. ಆದರೆ, ಅವರು ಪ್ರೀತಿಸುತ್ತಿರುವುದು ತಮ್ಮನ್ನು ಮತ್ತು ತಮ್ಮನ್ನು ಮಾತ್ರ. ಇನ್ನೂ ಹೇಳಬೇಕೆಂದರೆ, ಪ್ರವಾದಿಪತ್ನಿಯರಲ್ಲಿ ತಮ್ಮನ್ನು ಯಾರು ಹೆಚ್ಚು ಪ್ರೀತಿಸುತ್ತಿದ್ದಾರೆಂದು ಅಲ್ಲಾಹುವನ್ನೇ ಪ್ರಶ್ನಿಸಿದರೆ, ಅರೆಕ್ಷಣವೂ ಯೋಚಿಸದೆ ಅಲ್ಲಾಹು ಆಯಿಷಾರ ಹೆಸರನ್ನು ಹೇಳುತ್ತಾನೆ. ಆದರೆ, ಈಗ ಎಲ್ಲರೂ ಅವರನ್ನು ಅನುಮಾನಿಸಲಾರಂಭಿಸಿದ್ದಾರೆ. ಅವರ ಹೆಸರನ್ನು ಸಫ್ವಾನನಂತಹ ಅಮಾಯಕ ಯೋಧನ ಜೊತೆಯಲ್ಲಿ ತಳುಕುಹಾಕುತ್ತಿದ್ದಾರೆ. ಈ





ನಡುವೆ ಮತ್ತೊಂದು ಸುದ್ದಿ ಹರಡುತ್ತಿದೆ. ತಾವು ಆಯಿಷಾರನ್ನು ವಿಚ್ಛೇದಿಸಲು ಯೋಚಿಸುತ್ತಿದ್ದೀರಿ ಎಂಬ ಘೋರ ಸುದ್ದಿ ಅದು.'

ಎಲ್ಲರೂ ತೆರೆದ ಬಾಯಿಯನ್ನು ತೆರೆದೇ ಇಟ್ಟುಕೊಂಡು ಝೈನಬರ ಮಾತುಗಳನ್ನು ಆಲಿಸುತ್ತಿದ್ದರೆ, ಪ್ರವಾದಿಯವರು ಮಾತ್ರ ಮಂದಹಾಸ ಬೀರುತ್ತಲೇ, 'ನಾನು ಯೋಚಿಸುತ್ತಿರುವುದೂ ಉಳಿದವರಿಗೆ ತಿಳಿಯುತ್ತದೆಯೆ?' ಪ್ರಶ್ನಿಸಿದ್ದರಂತೆ.

ಅಲ್ಲೇ ಇದ್ದ ಅಲೀ, 'ಪ್ರವಾದಿಯವರು ದಯವಿಟ್ಟು ನನ್ನ ಮಾತೊಂದನ್ನು ಆಲಿಸಬೇಕು' ಎಂದು ವಿನಯದಿಂದಲೇ ಅನುಮತಿ ಯಾಚಿಸಿದ್ದನಂತೆ. ಅಚ್ಚರಿಗೊಂಡ ಇಡೀ ಸಭೆಯೇ ಅವನ ಮುಂದಿನ ಮಾತುಗಳಿಗಾಗಿ ಕಾತರಿಸಿತ್ತು.

'ಪ್ರವಾದಿಯವರು ಏನನ್ನು ಯೋಚಿಸುತ್ತಿದ್ದಾರೆಂಬುದು ಜನರ ನಡುವೆ ಸುದ್ದಿಯಾಗುತ್ತಿದೆಯೋ, ಅದು ಎಲ್ಲರ ಅಂತರಂಗದ ಬಯಕೆಯೂ ಆಗಿದೆ. ಆ ಬಯಕೆಯನ್ನು ನಿಜಗೊಳಿಸುವುದೊಂದೇ ತಮ್ಮ ಬಳಿ ಉಳಿದಿರುವ ದಾರಿ. ಹಾಗೆ ತಾವು ಮಾಡಿದ್ದರೆ ಮಾತ್ರ ಮದೀನಾದ ಜನರು ತಮ್ಮ ಮೇಲೆ ಇರಿಸಿರುವ ವಿಶ್ವಾಸವನ್ನು ಉಳಿಸಿಕೊಳ್ಳುತ್ತಾರೆ' ಎಂದುಬಿಟ್ಟಿದ್ದ!

ಅವನ ಮಾತಿನಲ್ಲಿ ಸೂಕ್ಷ್ಮವಾಗಿ ಹುದುಗಿದ ಎಚ್ಚರಿಕೆಯೂ ಇತ್ತು!

ಪ್ರವಾದಿಯವರು ಮಾತ್ರವಲ್ಲ, ಅಲ್ಲಿ ಸೇರಿದ್ದ ಸಹವರ್ತಿಗಳೆಲ್ಲ ಅಲೀಯ ಮಾತಿನಿಂದ ದಿಗ್ಭ್ರಮೆಗೊಂಡಿದ್ದರು!

ಅಲೀಯ ಮಾತಿಗೆ ಪ್ರವಾದಿಯವರು ಯಾವ ಬಗೆಯ ಪ್ರತಿಕ್ರಿಯೆ ನೀಡಲಿದ್ದಾರೆಂಬುದೇ ಎಲ್ಲರ ಮುಂದೆ ಒಗಟಿನಂತೆ ಕುಣಿದಿರಬಹುದು. ಆಯಿಷಾಳ ಅಬ್ಬನಿಗಂತೂ ಕರುಳೇ ಬಾಯಿಗೆ ಬಂದಂದಾಗಿತ್ತಂತೆ. ತಾನೇಕೆ ಇಲ್ಲಿಗೆ ಬಂದು, ಇಷ್ಟು ಗಂಭೀರವಾದ ಸಮಸ್ಯೆಯನ್ನು ಮುಂದಿಟ್ಟೆನೋ ಎಂದು ಪರಿತಪಿಸುವಂತೆ, ಝೈನಬರ ಮುಖವೂ ಕಪ್ಪಿಟ್ಟಿತ್ತಂತೆ.

ಪ್ರವಾದಿಯವರು ತಮ್ಮ ಅಳಿಯ ಅಲೀಯತ್ತ ನೋಡುತ್ತಾ ಅಲ್ಲಾಹುವಿನ ಸಂದೇಶವನ್ನು ಸಾರುವವರಂತೆ, ಗಂಭೀರ ಧ್ವನಿಯಲ್ಲಿ ಹೇಳಿದ್ದರು. 'ಸತ್ಯವಿಶ್ವಾಸಿಗಳ ನಡುವೆ ಅಶ್ಲೀಲತೆ ಹರಡುವವನು ಇಹಪರದಲ್ಲಿ ವೇದನಾಯುಕ್ತ ಶಿಕ್ಷೆಗೆ ಅರ್ಹನಾಗುವನು. ಶೀಲವಂತೆ ಮಹಿಳೆಯ ವಿರುದ್ಧ ವ್ಯಭಿಚಾರದ ಆರೋಪಗಳನ್ನು ಮಾಡುವವರು, ತಮ್ಮ ಆರೋಪಕ್ಕೆ ಪೂರಕವಾಗಿ ನಾಲ್ಕು ಸಾಕ್ಷಿಗಳನ್ನು ಹಾಜರುಪಡಿಸಬೇಕು. ಸಮರ್ಪಕ ಸಾಕ್ಷಿಗಳಿಲ್ಲದೆ ಆರೋಪಿಸುವವನೂ ಅಪರಾಧಿಯಾಗುವನು.'

ಅಲೀಯ ಬಾಯಿ ಕಟ್ಟಿತ್ತು.

ಝೈನಬರ ಮುಖದಲ್ಲಿ ಗೆಲುವಿನ ನಗು ಮೊಳಕೆಯೊಡದಿತ್ತು.

ನನ್ನ ಮಗಳಿಗೆ ಈ ಘಟನೆಯ ವರದಿ ಒಪ್ಪಿಸಿದವಳೂ ಸ್ವತಃ ಝೈನಬರೇ ಅಂತೆ. ಎಲ್ಲವನ್ನೂ ಶಾಂತವಾಗಿ ಆಲಿಸಿದ ಬಳಿಕ, ಕೃತಜ್ಞತೆ ಹೇಳಲೂ ಸಾಧ್ಯವಾಗದೆ ಸಂಕೋಚದಿಂದ ನಿಂತಿದ್ದ ನನ್ನ ಮಗಳ ಬೆನ್ನು ಸವರುತ್ತಾ ಝೈನಬ್ ಹೇಳಿದ್ದು, 'ಅಲ್ಲಾಹು ಮೆಚ್ಚುವಂತಹ ಕೆಲಸವನ್ನು ನಾನು ಮಾಡಿದ್ದೇನೆಯೇ ಹೊರತು, ನಿಮ್ಮನ್ನು ಮೆಚ್ಚಿಸಲು ಅಲ್ಲ ಉಮ್ಮಾ. ಪ್ರವಾದಿಪತ್ನಿಯರ ನಡತೆಯನ್ನೇ ಜನರು ಶಂಕಿಸಲಾರಂಭಿಸಿದರೆ, ನನ್ನ ಮಾನವೇನಾಗಬೇಕು!

–೩–

ಆದರೆ, ನನ್ನ ಮಗಳನ್ನು ಹಿಂಸಿಸುತ್ತಿದ್ದ ಸಂಗತಿ ಬೇರೆಯೇ ಇತ್ತು.

ಊರಲ್ಲೆಲ್ಲ ಇಷ್ಟೆಲ್ಲಾ ಗುಲ್ಲಾಗುತ್ತಿದ್ದರೂ, ಪ್ರವಾದಿಯವರು ಒಮ್ಮೆಯಾದರೂ, 'ಇದೆಲ್ಲ ಏನು ಆಯಿಷಾ?' ಎಂದು ಪ್ರಶ್ನಿಸಿರುತ್ತಿದ್ದರೆ, ಅಷ್ಟೇ ಸಾಕಾಗುತ್ತಿತ್ತು ಅವಳಿಗೆ. ಪ್ರಯಾಣದಿಂದ ಮರಳಿ ಬರುವ ದಾರಿಯಲ್ಲಿ ನಿಜವಾಗಿ ನಡೆದದ್ದು ಏನು ಎಂಬುದನ್ನು ಎಳೆಯೆಳೆಯಾಗಿ ವಿವರಿಸಿ ಹೇಳಲು ಅವಕಾಶವಾದರೂ ದೊರೆಯುತ್ತಿತ್ತು. ಆದರೆ ಅವರು ಕೇಳಲಿಲ್ಲ; ಅದೇ ಸಿಟ್ಟಿನಿಂದ ಇವಳೂ ಹೇಳಲಿಲ್ಲ.

ಈ ಎಲ್ಲದಕ್ಕೂ ಕಾರಣವಾಗಿದ್ದದ್ದು ಆಯಿಷಾಳ ಕೊರಳಲ್ಲಿದ್ದ ಒಂದು ಹಾರ.

ಅವಳ ಕೊರಳಿನಿಂದ ಜಾರಿ ಬಿದ್ದಿದ್ದ ಆ ಹಾರ, ಆಕೆಯ ಮಾನವನ್ನು ಮದೀನಾ ಪೇಟೆಯಲ್ಲಿ ಹರಾಜಿಗಿಟ್ಟಿತ್ತು!

ಪ್ರಯಾಣದಿಂದ ಮರಳುವ ದಾರಿಯಲ್ಲಿ, ಮದೀನಾದ ಹೊರಗಣ ಪ್ರದೇಶವೊಂದರಲ್ಲಿ ತಂಗುವವರೆಗೂ ಎಲ್ಲವೂ ಸರಿಯಾಗಿಯೇ ಇತ್ತಂತೆ. ಎಲ್ಲ ಆರಂಭವಾದದ್ದು ಅಲ್ಲಿಂದಲೇ.

ರಾತ್ರಿಯ ಕೊನೆಯ ಜಾವದಲ್ಲೇ ಎಚ್ಚರಗೊಂಡಿದ್ದ ಸೇನೆ ಮದೀನಾದತ್ತ ಹೊರಡುವ ತಯಾರಿ ನಡೆಸಿತ್ತು. ತಡವಾಗಿ ನಿದ್ರೆಯಿಂದ ಎದ್ದಿದ್ದ ಆಯಿಷಾಳಿಗೆ ತನ್ನ ಕೊರಳಲ್ಲಿ ಸದಾ ತೂಗುತ್ತಿದ್ದ ಹಾರ ಇಲ್ಲವೆಂಬುದು ಅರಿವಿಗೆ ಬಂದಿತ್ತು. ಸುತ್ತಮುತ್ತ ಹುಡುಕಿದ್ದಳು. ಇಲ್ಲ; ಎಲ್ಲಿಯೂ ಇಲ್ಲ. ಹಾಗಾದರೆ, ಯಾವಾಗಲೂ ಎದೆಗೊತ್ತಿಕೊಂಡೇ ಇದ್ದ ಆ ಹಾರ ಎಲ್ಲಿ ಕಳಚಿ ಬಿದ್ದು ಹೋಗಿದ್ದಿರಬಹುದು? ಯೋಚಿಸುತ್ತಿದ್ದಂತೆ ಮಗಳಿಗೆ ನೆನಪಾಗಿದ್ದದ್ದು, ಆ ಸುಂದರ ಘಳಿಗೆ!

ಗಂಡನ ಜೊತೆಯಲ್ಲಿ ಓಟದ ಸ್ಪರ್ಧೆಯಲ್ಲಿ ಪಾಲುಗೊಂಡ ಆ ರಸಘಳಿಗೆ!





ಮದುವೆಯಾದ ಆರಂಭದ ದಿನಗಳಲ್ಲಿ ಆಯಿಷಾಳ ಜೊತೆಗೆ ಓಟದ ಸ್ಪರ್ಧೆ ನಡೆಸಿ ಗೆಲ್ಲುವುದೇ ಪ್ರವಾದಿಯವರಿಗೊಂದು ಆಟವಾಗಿತ್ತು. ಯಾವಾಗಲೂ ಗೊಂಬೆಗಳ ಜೊತೆಯಲ್ಲೇ ಆಟವಾಡುತ್ತಾ ಬೆಳೆದ ಆಯಿಷಾ, ಬಾಲ್ಯದಿಂದಲೇ ಒಳ್ಳೆಯ ಓಟಗಾರ್ತಿ. ಆಗೆಲ್ಲ ತನ್ನ ಓರಗೆಯವರೊಂದಿಗೆ, ತನಗಿಂತ ಒಂದೆರಡು ವರ್ಷ ದೊಡ್ಡ ವಯಸ್ಸಿನ ಮಕ್ಕಳನ್ನೂ ಹಿಂದಿಕ್ಕಿ ಓಡಬಲ್ಲ ಗಟ್ಟಿಗಿತ್ತಿ ಅವಳು. ಓಡುವ ಆಟದಲ್ಲಿ ಅವಳನ್ನು ಮೊತ್ತ ಮೊದಲಬಾರಿಗೆ ಸೋಲಿಸಿದವರೇ ಪ್ರವಾದಿಯವರು. ಆ ವಿಷಯವನ್ನು ಆಯಿಷಾಳೇ ಬಹಳ ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಿದ್ದಳು.

ಅಂದು ಕೂಡಾ ಅದೇ ಆಗಿತ್ತು.

ಇಬ್ಬರೂ ಓಡಿದ್ದರು. ನಿರೀಕ್ಷೆಯಂತೆ ಆಯಿಷಾ ಸೋತಿದ್ದಳು. ಆ ರೋಮಾಂಚನದ ಓಟವನ್ನು ನೆನಪಿಸಿಕೊಳ್ಳುತ್ತಾ ನಿದ್ರಿಸಿದ್ದ ಆಯಿಷಾಳಿಗೆ ಬೆಳಗಾಗುವಾಗ ಬಹಳ ತಡವಾಗಿತ್ತು. ಇನ್ನೂ ಸರಿಯಾಗಿ ಬೆಳಕಾಗಿರಲಿಲ್ಲ. ಆ ಕತ್ತಲಲ್ಲೇ ಓಟದ ಜಾಗಕ್ಕೆ ಓಡಿ ಹೋಗಿ ಹುಡುಕಿದ್ದವಳಿಗೆ ಹಾರವೇನೋ ಸಿಕ್ಕಿತ್ತು. ಆದರೆ, ಮರಳಿ ಬರುವಷ್ಟರಲ್ಲಿ, ಅವಳನ್ನು ಹೊತ್ತು ತಂದಿದ್ದ ಮೇನೆಯ ಜೊತೆಗೆ ಇಡೀ ತಂಡವೇ ಹೊರಟು ಹೋಗಿತ್ತು!

ಸಾಮಾನ್ಯವಾಗಿ ಪ್ರಯಾಣ ಹೊರಡುವ ಮೊದಲೇ ಆಯಿಷಾ ಮೇನೆಯ ಒಳಗೆ ಸೇರಿಕೊಳ್ಳುವುದು ವಾಡಿಕೆ. ಸೇವಕರು ಅದನ್ನು ಎತ್ತಿ ಒಂಟೆಯ ಮೇಲೆ ಇರಿಸಿದ ಬಳಿಕ ಪ್ರಯಾಣ ಮುಂದುವರಿಯುತ್ತಿತ್ತು. ಅಂದೂ ಹಾಗೆಯೇ ಮಾಡಿದ್ದಿರಬಹುದು. 'ಪ್ರವಾದಿಪತ್ನಿ' ಪಲ್ಲಕ್ಕಿಯ ಒಳಗೆ ಇರಬಹುದೆಂದೇ ಭಾವಿಸಿದ ಸೇವಕರು ಅದನ್ನೆತ್ತಿ ಒಂಟೆಯ ಮೇಲೆ ಇರಿಸಿಕೊಂಡು ಪ್ರಯಾಣ ಮುಂದುವರಿಸಿದ್ದಿರಬಹುದು. ಅವಳ ತೂಕವಾದರೂ ಏನು ಮಹಾ? ಅವಳಿದ್ದರೂ, ಇಲ್ಲದಿದ್ದರೂ ಮೇನೆಯ ತೂಕದಲ್ಲಿ ಬಹಳ ವ್ಯತ್ಯಾಸವೇನೂ ಆಗುತ್ತಿರಲಿಲ್ಲ.

ಸ್ವಲ್ಪ ದೂರ ಹೋದ ಬಳಿಕ ಅನುಮಾನ ಬಂದು ಮೇನೆಯ ಪರದೆ ಸರಿಸಿ ತಾನಿಲ್ಲದನ್ನು ಕಂಡು ಗಾಬರಿಯಾಗಿ ಮರಳಿ ಬರಬಹುದೆಂದೇ ಆಯಿಷಾ ಭಾವಿಸಿದ್ದೂ ಸುಳ್ಳಾಗಿತ್ತು. ಏನು ಮಾಡಬೇಕೆಂಬುದನ್ನೂ ಯೋಚಿಸಲು ಸಾಧ್ಯವಾಗದೆ ಆಯಿಷಾ ಅಳುತ್ತಲೇ, ತನ್ನ ಬಟ್ಟೆಯ ಗಂಟಿಗೆ ಒರಗಿ ಆ ನಿರ್ಜನ ಮರಳುಗಾಡಿನಲ್ಲೇ ಕುಳಿತುಬಿಟ್ಟಿದ್ದಳು. ಬಹಳ ಹೊತ್ತು ಅಳುತ್ತಿದ್ದವಳು ಆಯಾಸದಿಂದ ಅಲ್ಲೇ ನಿದ್ರೆಗೆ ಜಾರಿಬಿಟ್ಟಿದ್ದಳು.

ಅವಳಿಗೆ ಮತ್ತೆ ಎಚ್ಚರವಾದದ್ದು, 'ಪ್ರವಾದಿಪತ್ನಿ ಉಳಿದುಹೋದರಲ್ಲ!' ಎಂಬ ಉದ್ಗಾರ ಕೇಳಿಸಿದ್ದಾಗಲೇ.

ಗಡಬಡಿಸಿ ಎದ್ದು ಕುಳಿತವಳಿಗೆ ಕಾಣಿಸಿದ್ದು ಬಾಲ್ಯದ ಗೆಳೆಯ ಸಫ್ವಾನ್.

ಬಾಲ್ಯದಿಂದಲೂ ತಲೆ ತಗ್ಗಿಸಿಕೊಂಡೇ ನಡೆಯುವುದನ್ನು ಅಭ್ಯಾಸ ಮಾಡಿಕೊಂಡಿದ್ದ ಸಫ್ವಾನನಿಗೆ ತಕ್ಕುದಾದ ಕೆಲಸವನ್ನೇ ವಹಿಸಲಾಗಿತ್ತು. ಯುದ್ಧಾಯುಧಗಳ

ಕಾವಲಿನ ಹೊಣೆಯ ಜೊತೆಯಲ್ಲೇ, ಪ್ರಯಾಣದ ನಡುವೆ ತಂಗುವ ಸೇನೆಯು ಗುಡಾರ ಕಿತ್ತು ಹೊರಡುವ ಅವಸರದಲ್ಲಿ ಮರೆತು ಹೋಗಿರಬಹುದಾದ ಮುಖ್ಯ ವಸ್ತುಗಳನ್ನು ಎತ್ತಿಕೊಂಡು ಶಿಬಿರಕ್ಕೆ ತರುವ ಜವಾಬ್ದಾರಿಯನ್ನೂ ಅವನಿಗೆ ಕೊಡಲಾಗಿತ್ತು.

ಈ ಬಾರಿ ಅವನ ಜವಾಬ್ದಾರಿ ಬಲು ದೊಡ್ಡದೇ ಅಗಿತ್ತು. ಸೇನೆಯು ಮರೆತು ಬಿಟ್ಟು ಹೋಗಿರುವ ವಸ್ತು ಬಲು ಅಮೂಲ್ಯವಾಗಿತ್ತು.

ಆಯಿಷಾಳ ಅಸಹಾಯಕತೆಯನ್ನು ಸಫ್ವಾನ್ ಸರಿಯಾಗಿಯೇ ಊಹಿಸಿದ್ದ.

ಮತ್ತೊಬ್ಬರ ಜೊತೆ ಮಾತನಾಡುವಾಗಲೂ ತಲೆ ಎತ್ತಿ ನೋಡುವ ಅಭ್ಯಾಸವಿಲ್ಲದ ಸಫ್ವಾನ್, ತನ್ನ ಬಾಲ್ಯದ ಸಂಗಾತಿ ಆಯಿಷಾ, 'ಪ್ರವಾದಿಪತ್ನಿ'ಯಾದ ಬಳಿಕವಂತೂ ಸರಿಯಾಗಿ ಮಾತನಾಡಿಸಿದವನೂ ಅಲ್ಲ. ಆಯಿಷಾಳೇ ಕರೆದು ಮಾತನಾಡಿಸಿದರೂ, ತಲೆಯೆತ್ತಿ ಉತ್ತರಿಸುವವನಲ್ಲ. ತಾನು ಪ್ರಯಾಣಿಸುತ್ತಿದ್ದ ಒಂಟೆಯನ್ನು ಆಯಿಷಾಳ ಬಳಿಗೆ ಕರೆತಂದು ಅದನ್ನು ಕುಳ್ಳಿರಿಸಿ, 'ಒಂಟೆಯ ಮೇಲೆ ಕುಳಿತುಕೊಳ್ಳಿರಿ ಉಮ್ಮಾ' ಎಂದಷ್ಟೇ ಸಪ್ವಾನ್ ಹೇಳಿದ್ದು.

ಸಫ್ವಾನನನ್ನು ಅಲ್ಲಾಹುವೇ ಕಳುಹಿಸಿರಬೇಕೆಂದು ಭಾವಿಸಿದ ಆಯಿಷಾ, ಅಲ್ಲಾಹುವಿಗೆ ಕೃತಜ್ಞತೆ ಅರ್ಪಿಸಿದ್ದಳು. ಮರುಮಾತಿಲ್ಲದೆ ಒಂಟೆಯೇರಿದ್ದಳು. ಒಂಟೆಯ ಲಗಾಮು ಹಿಡಿದುಕೊಂಡ ಸಫ್ವಾನ್, ಪ್ರವಾದಿಪತ್ನಿಯನ್ನು ಕರೆದುಕೊಂಡು ಮದೀನಾದ ದಾರಿಯಲ್ಲಿ ದಾಪುಗಾಲು ಹಾಕಿದ್ದ. ದಿನದ ಸೂರ್ಯ ಪಶ್ಚಿಮದ ಬೆಟ್ಟಗಳಾಚೆ ಇಳಿಯುತ್ತಿದ್ದಂತೆ, ದಾರಿ ನಡುವಿನ ಸಣ್ಣ ಹಳ್ಳಿಯೊಂದರ ಮನೆಯವರನ್ನು ವಿನಂತಿಸಿ ಪ್ರವಾದಿಪತ್ನಿ'ಗೆ ಉಳಕೊಳ್ಳುವ ವ್ಯವಸ್ಥೆಯನ್ನೂ ಮಾಡಿದ್ದ. ಮರುದಿನ ಸೂರ್ಯೋದಯದೊಂದಿಗೇ ಅವಳನ್ನು ಒಂಟೆಯೇರಿಸಿ ಕ್ಷೇಮವಾಗಿ ತಲುಪಬೇಕಾಗಿರುವಲ್ಲಿ ತಲುಪಿಸಿದ್ದ.

ನಡೆದದ್ದು ಇಷ್ಟು ಮಾತ್ರ. ಅದರೆ, ತಿಂಗಳೊಳಗೆ ಯಾವುದು ಆಗಬಾರದಿತ್ತೋ, ಅದು ಆಗಿತ್ತು. ಪ್ರವಾದಿಪತ್ನಿಯು ಕುದುರೆಪಾಲಕನ ಮಗನ ಜೊತೆಗೆ ಒಂದು ರಾತ್ರಿ ಕಳೆದು ಬಂದಳು ಎಂಬ ಅಸಹ್ಯಕರ ಸುದ್ದಿ, ಮದೀನಾದ ಎಲ್ಲರ ತುಟಿಗಳನ್ನೂ ರಂಗೇರಿಸಿತ್ತು.

ತನ್ನ ಮೇಲೆ ಎರಗಿದ ಅಪವಾದಕ್ಕಿಂತಲೂ ಆಯಿಷಾ ಹೆಚ್ಚು ದುಃಖಿತಳಾದದ್ದು, ನಿಜವಾಗಿ ನಡೆದದ್ದು ಏನು ಎಂಬುದನ್ನು ತನ್ನ ಗಂಡ ವಿಚಾರಿಸದಿದ್ದಾಗ. ಅದೇ ನೋವಿನಿಂದ ಕಂಗೆಟ್ಟ ಆಯಿಷಾ ಸರಿಯಾಗಿ ಆಹಾರವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಅವಳನ್ನು ಸಮಾಧಾನಿಸುವ ಅಫೀರಾಳ ಎಲ್ಲ ಪ್ರಯತ್ನಗಳೂ ಸೋತುಹೋಗಿದ್ದವು. ಮಗಳ ಆರೋಗ್ಯ ದಿನದಿಂದ ದಿನಕ್ಕೆ ಹದಗೆಡುತ್ತಿತ್ತು. ಖಾಯಿಲೆ ಬಿದ್ದ ಬಳಿಕವೂ ಪ್ರವಾದಿಯವರು ತನ್ನನ್ನು ಕಡೆಗಣಿಸಿದಾಗ ಸಿಟ್ಟಿಗೆದ್ದ ಆಯಿಷಾ, ತನ್ನ ವಸ್ತ್ರದ ಗಂಟಿನೊಂದಿಗೆ ಅಫೀರಾಳನ್ನು ಕರೆದುಕೊಂಡು ನಮ್ಮ ಮನೆಗೆ ಬಂದಿದ್ದಳು.





ವಾರ ಕಳೆಯುವಷ್ಟರಲ್ಲಿ, ಊರೊಳಗೆ ಮತ್ತೊಂದು ಸುದ್ದಿ ಹರಿದಾಡಲಾರಂಭಿಸಿತ್ತು.

ಪ್ರವಾದಿಯವರು ವಿಚ್ಛೇದಿಸಿದ ಆಯಿಷಾ ತಮ್ಮ ಪ್ರವಾದಿಪತ್ನಿಯೆಂಬ ಕಿರೀಟವನ್ನು ಕಳಚಿಟ್ಟು ತವರುಮನೆ ಸೇರಿದ್ದಾರೆಂಬ ಸುದ್ದಿ ಅದು.

ಹೆಂಡತಿಯೊಂದಿಗೆ ಚರ್ಚಿಸಲು ಸಂಕೋಚಪಟ್ಟಿದ್ದ ಪ್ರವಾದಿಯವರು, ತನ್ನ ಅಳಿಯಂದಿರಾದ ಅಲೀ ಮತ್ತು ಉಸ್ಮಾನರನ್ನು ಕರೆಸಿಕೊಂಡು ಸಲಹೆ ಕೇಳಿದ್ದರು. 'ತಮ್ಮ ಪತ್ನಿಯವರ ಕುರಿತು ಕೆಟ್ಟದನ್ನು ನಾವು ಯೋಚಿಸಲಾರೆವು' ಎಂದು ಉಸ್ಮಾನರು ಹೊಣೆಯಿಂದ ಜಾರಿಕೊಂಡಿದ್ದರು. ಅಲೀ ಮಾತ್ರ, 'ಚಿಂತಿಸಬೇಡಿರಿ. ತಾವು ಬಯಸಿದರೆ ಆಯಿಷಾರ ಜಾಗದಲ್ಲಿ ಬೇರೊಬ್ಬರನ್ನು ವಿವಾಹವಾಗಿರಿ. ಅಥವಾ ಅವರನ್ನು ವಿಚಾರಣೆಗೆ ಗುರಿಪಡಿಸುವುದಾದರೆ ಅದನ್ನೂ ಮಾಡಿರಿ' ಎಂದಿದ್ದ.

ಸಂದಿಗ್ಧದಲ್ಲಿ ಸಿಲುಕಿದ ಪ್ರವಾದಿಯವರು ಮಸ್ಜಿದುನಬವಿಯಲ್ಲಿ ಸಂಗಾತಿಗಳ ಸಭೆ ಕರೆದು ತನ್ನ ಗೊಂದಲವನ್ನು ತೋಡಿಕೊಂಡು, ತಾವೇನು ಮಾಡಬೇಕೆಂಬುದನ್ನು ನೀವೇ ನಿರ್ಧರಿಸಿರಿ ಎಂದುಬಿಟ್ಟಿದ್ದರು.

ಸಹವರ್ತಿಗಳೆಲ್ಲ ತಲೆಗೊಂದರಂತೆ ಸಲಹೆ ಕೊಟ್ಟು ಪ್ರವಾದಿಯವರನ್ನು ಮತ್ತಷ್ಟು ಗೊಂದಲಕ್ಕೆ ಕೆಡವಿದ್ದರು.

ಔಸ್ ಗೋತ್ರದ ಸರದಾರ ಉಸೈದನಂತೂ, 'ಸುಳ್ಳು ವದಂತಿ ಹಬ್ಬಿಸಿದವರು ನಮ್ಮ ಗೋತ್ರಕ್ಕೆ ಸೇರಿರುತ್ತಿದ್ದರೆ, ಈಗಾಗಲೇ ಅವನ ತಲೆ ಕತ್ತರಿಸಿ ತಮ್ಮ ಕಾಲ ಬಳಿ ಇರಿಸುತ್ತಿದ್ದೆ' ಎಂದು ಅಬ್ಬರಿಸಿದ್ದ. 'ಆದರೆ, ಅವನು ಖಝ್ರುಜ್ ಗೋತ್ರಕ್ಕೆ ಸೇರಿದವನು. ತಾವು ಹೂಂ..' ಎಂದರೆ ಅವನು ಯಾವ ಗೋತ್ರವೆಂಬುದನ್ನೂ ನೋಡಲಾರೆ, ಹಾಂ..' ಎಂದು ಹಲ್ಲು ಕಡಿದಿದ್ದ.

'ಅದು ಸಾಧ್ಯವಿಲ್ಲ..!' ಖಝ್ರುಜ್ ಗೋತ್ರದ ಸರದಾರ ಸಅದ್ ಸವಾಲು ಎಸೆಯುವಂತೆ ಹೇಳಿದ್ದ, 'ನಮ್ಮ ಗೋತ್ರದವರ ಮೈ ಮುಟ್ಟುವುದು ನಿನ್ನಿಂದಾಗುವ ಕೆಲಸವಲ್ಲ.' ಆಗ ಕೆರಳಿದ ಉಸೈದ್, ತಾನು ಕುಳಿತಿರುವುದು ಮಸೀದಿಯೊಳಗೆ ಎಂಬುದನ್ನೂ ಮರೆತು ಜಗಳಕ್ಕೇ ಸಿದ್ಧನಾಗಿದ್ದ, 'ನೀನು ಕಪಟ ಮುಸ್ಲಿಮನನ್ನು ಸಮರ್ಥಿಸುತ್ತಿದ್ದೀಯಾ' ಎಂದು ಮೂದಲಿಸಿದ್ದ.

ಇವನ್ನೆಲ್ಲ ಅಲ್ಲೇ ಕುಳಿತು ನೋಡುತ್ತಿದ್ದ ಅಬ್ದುಲ್ಲಾ ಒಳಗೊಳಗೇ ಸಂಭ್ರಮಿಸಿದ್ದಿರಬಹುದು.

ಆಯಿಷಾಳ ಅಬ್ಬ ಹೇಳುತ್ತಿದ್ದರು. 'ಅಬ್ದುಲ್ಲಾ ಎಸೆದ ಒಂದೇ ಕಲ್ಲಿಗೆ ಎರಡು ಹಣ್ಣುಗಳು ಬಿದ್ದಿದ್ದವು. ಪ್ರವಾದಿಪತ್ನಿಯ ಮಾನ ಒಂದು ಕಡೆಗೆ ಹರಾಜಾಗುತ್ತಿದ್ದರೆ, ಮತ್ತೊಂದು ಕಡೆಗೆ ಔಸ್ ಮತ್ತು ಖಝ್ರುಜ್ ಗೋತ್ರಗಳ ನಡುವೆ ಮತ್ತೊಮ್ಮೆ ಬಿರುಕು

ಉಂಟಾಗಿತ್ತು. ಈ ಬಿರುಕು ಮುಂದುವರಿದು ಯುದ್ಧಕ್ಕೆ ಕಾರಣವಾದರೆ, ಎರಡೂ ಗೋತ್ರಗಳ ಸರದಾರರ ನಡುವೆ ಮತ್ತೊಮ್ಮೆ ಶಾಂತಿ ಸಂಧಾನ ನಡೆಸಿ, ಇತ್ತಂಡಗಳಿಗೂ ತಾನೊಬ್ಬನೇ ನಾಯಕನಾಗುವ ತಂತ್ರ ಅವನದ್ದು. ಪೆಟ್ಟಿಗೆಯಲ್ಲಿ ಭದ್ರವಾಗಿರಿಸಿರುವ ಚಿನ್ನದ ಕಿರೀಟಕ್ಕೂ ಹೊಳಪು ಬಂದೀತು ಎಂಬ ದೂರದ ಆಸೆ ಅವನಿಗೆ.'

'ಇವೆಲ್ಲ ಪ್ರವಾದಿಯವರಿಗೆ ಗೊತ್ತೇ ಆಗುವುದಿಲ್ಲವೆ?' ನಾನೇ ಪ್ರಶ್ನಿಸಿದ್ದೆ.

'ಅವರಿಗೆ ಎಲ್ಲವೂ ಗೊತ್ತಿರುತ್ತವೆ. ಆದರೆ, ಅವರು ಅಸಹಾಯಕರಾಗಿದ್ದರು. ಬೇರೆಯವರ ಸಂಸಾರದ ಬಿರುಕಿನ ಕತೆಯಾಗಿದ್ದರೆ, ಅವರು ಇಷ್ಟರಲ್ಲೇ ಅವರನ್ನು ಕರೆಸಿ ಸರಿಪಡಿಸುತ್ತಿದ್ದರು. ಈಗ ಅಪವಾದ ಬಂದಿರುವುದು, ಅವರದೇ ಹೆಂಡತಿಯ ಮೇಲೆ ಅಲ್ವಾ?'

'ಹಾಗಾದರೆ ಇದಕ್ಕೆ ಕೊನೆಯೇ ಇಲ್ಲವೆ?' ನಾನು ಅಸಹನೆಯಿಂದಲೇ ಪ್ರಶ್ನಿಸಿದ್ದೆ.

ಹೇಳದೆ ಕೇಳದೆ ಗಂಡನ ಮನೆಯಿಂದ ಬಂದು ನಮ್ಮ ಮನೆಸೇರಿದ್ದ ಮಗಳ ಆರೋಗ್ಯ ದಿನದಿಂದ ದಿನಕ್ಕೆ ಕುಸಿಯುತ್ತಿತ್ತು. ಅವಳ ಬಾಡಿದ ಮುಖವನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲಾಹುವೊಬ್ಬನೇ ಇದಕ್ಕೆ ಪರಿಹಾರ ಕೊಡಬಲ್ಲವನಾಗಿದ್ದ. ಪ್ರಾರ್ಥಿಸುವುದನ್ನು ಬಿಟ್ಟು ನಾನು ಬೇರೇನು ಮಾಡಲು ಸಾಧ್ಯ ನನ್ನಿಂದ? ಕೊನೆಗೂ ಅಲ್ಲಾಹು ನನ್ನ ಪ್ರಾರ್ಥನೆಗೆ ಕಿವಿಗೊಟ್ಟಿದ್ದ.

ಇದಾದ ಒಂದು ತಿಂಗಳ ಬಳಿಕದ ಮುಸ್ಸಂಜೆಯ ಹೊತ್ತಲ್ಲಿ, ಪ್ರವಾದಿಯವರೇ ನಮ್ಮ ಮನೆಗೆ ಬಂದಿದ್ದರು!

ಮನೆಯಲ್ಲಿ ಆಯಿಷಾಳ ಅಬ್ಬ ಕೂಡಾ ಇದ್ದರು. ಬಾಗಿಲು ತೆರೆದವರೇ ಅವರು.

ಒಳಗೆ ಬಂದ ಪ್ರವಾದಿಯವರು ನೇರವಾಗಿ ಆಯಿಷಾ ಮಲಗಿದ್ದ ಕೋಣೆಗೆ ಹೋಗಿದ್ದರು.

'ಓ ಅಲ್ಲಾಹುವೇ, ಅವರಿಬ್ಬರನ್ನು ಮತ್ತೆ ಜೊತೆಗೂಡಿಸು' ಎಂದು ಪ್ರಾರ್ಥಿಸುತ್ತಾ ನಾನು ಕೋಣೆಯ ಹೊರಗೆಯೇ ನಿಂತಿದ್ದೆ. ಆಯಿಷಾಳ ಅಬ್ಬ ಕೂಡಾ ನನ್ನ ಹತ್ತಿರ ಬಂದು ನಿಂತಿದ್ದರು.

ಆಯಿಷಾಳ ಪಕ್ಕದಲ್ಲಿ ಮಂಚದ ಮೇಲೆ ಕುಳಿತ ಪ್ರವಾದಿಯವರು, 'ಆಯಿಷಾ, ಅಲ್ಲಾಹು ನಿನ್ನ ನಿಜವನ್ನು ಬಲು ಬೇಗನೆ ಜಗತ್ತಿಗೆ ತಿಳಿಸಲಿರುವನು. ಒಂದು ವೇಳೆ ನಿನ್ನಿಂದ ತಪ್ಪಾಗಿದ್ದರೂ ಅಲ್ಲಾಹು ಕ್ಷಮಿಸುವನು. ನೀನು ಒಂದು ಬಾರಿ ಅಲ್ಲಾಹುವಿನಿಂದ ಕ್ಷಮೆ ಯಾಚಿಸು. ಮಾಡಿದ ತಪ್ಪಿಗೆ ಪಶ್ಚಾತ್ತಾಪದಿಂದ ಕ್ಷಮೆ ಬೇಡುವವನಿಗೆ ಅಲ್ಲಾಹು ಇಲ್ಲವೆನ್ನುವುದಿಲ್ಲ' ಎಂದಿದ್ದರು.





ಆಯಿಷಾ ಒಮ್ಮೆಲೆ ಜೋರಾಗಿ ಸ್ವರವೆಬ್ಬಿಸಿ ಅಳಲು ಶುರು ಮಾಡಿದಾಗ ನನಗೆ ಕೈಕಾಲುಗಳೇ ಸ್ವಾಧೀನ ತಪ್ಪಿದಂತಾಗಿತ್ತು. ನಾನು ಆಯಿಷಾಳ ಅಬ್ಬನ ಮುಖ ನೋಡಿದೆ. ಅವರು ನೀನು ಸುಮ್ಮನಿರು ಎಂಬಂತೆ ಕಣ್ಸನ್ನೆ ಮಾಡಿದ್ದರು. ಬಹಳ ಹೊತ್ತು ಅಳುತ್ತಲೇ ಇದ್ದ ಆಯಿಷಾ, ಬಿಕ್ಕಳಿಸುತ್ತಲೇ ಬಾಗಿಲ ಬಳಿ ನಿಂತಿದ್ದ ನಮ್ಮತ್ತ ನೋಡಿ, 'ನೀವಾದರೂ ಇವರಿಗೆ ಹೇಳಿ' ಎಂದಿದ್ದಳು. ನಾವು ಏನನ್ನು ಹೇಳಲು ಸಾಧ್ಯ? ಪ್ರವಾದಿಯವರು ಬಹಳ ಸ್ಪಷ್ಟವಾಗಿಯೇ ಹೇಳಿಬಿಟ್ಟಿದ್ದರು. 'ಅಲ್ಲಾಹುವಿನಲ್ಲಿ ಒಮ್ಮೆ ಕ್ಷಮೆ ಬೇಡು. ಇದುವರೆಗೆ ನಡೆದ ಎಲ್ಲವನ್ನೂ ಮರೆತು ನಾನು ನಿನ್ನನ್ನು ಕರೆದುಕೊಂಡು ಹೋಗುವೆ' ಎಂದು. ಮಗಳು ಅಷ್ಟಾದರೂ ಮಾಡಬಾರದೆ?

ಆಯಿಷಾಳ ಅಬ್ಬನಿಗಂತೂ ಚಿತ್ರಹಿಂಸೆಯಾಗಿದ್ದಿರಬಹುದು. ತಪ್ಪು ಮಾಡಿದ್ದರಲ್ಲವೆ ಕ್ಷಮೆ ಯಾಚಿಸುವುದು? ಒಂದು ಕಡೆ ಪ್ರೀತಿಯ ಮಗಳು ಅಂಗಲಾಚುತ್ತಿದ್ದರೆ, ಮತ್ತೊಂದು ಕಡೆ ಬಾಲ್ಯದ ಗೆಳೆಯ ಅನುಮಾನಿಸುತ್ತಿದ್ದಾರೆ. ಅಲ್ಲಾಹುವಿನ ಹೊರತು ತನ್ನ ಸಹಾಯಕ್ಕೆ ಯಾರೂ ಬರಲಾರರು ಎಂಬುದು ಆಯಿಷಾಳಿಗೂ ಖಾತರಿಯಾಗಿದ್ದಿರಬೇಕು. ಅಳುವುದನ್ನೂ ನಿಲ್ಲಿಸಿ, ತಲೆತಗ್ಗಿಸಿ ಕುಳಿತುಬಿಟ್ಟಿದ್ದಳು.

ಬಹಳ ಹೊತ್ತು ಕಣ್ಣು ಮುಚ್ಚಿ ಕುಳಿತಿದ್ದ ಪ್ರವಾದಿಯವರು ಕಣ್ಣು ತೆರೆದಾಗ ಅವರ ಕಣ್ಣುಗಳಲ್ಲಿ ಮಿಂಚು ಹೊಳೆಯುತ್ತಿತ್ತು!

ಅವರಿಗೆ ಅಲ್ಲಾಹುವಿನಿಂದ ಸಂದೇಶಗಳು ಬಂದಾಗಲೆಲ್ಲ ಅವರ ಮುಖದಲ್ಲಿ ಈ ರೀತಿ ಮಿಂಚು ಕಾಣಿಸುತ್ತಿತ್ತು.

'ಆಯಿಷಾ, ಅಲ್ಲಾಹು ಹೇಳಿರುವನು. ನೀನು ನಿರ್ದೋಷಿ' ಎಂದಿದ್ದರು ಪ್ರವಾದಿ.

ನಾವಿಬ್ಬರೂ ಸಂಭ್ರಮದಿಂದ ಹಿಗ್ಗಿದ್ದೆವು. ಒಂದು ಹೆಜ್ಜೆಯನ್ನು ಕೋಣೆಯೊಳಗೆ ಇರಿಸುತ್ತಾ ನಾನು ಹೇಳಿದೆ, 'ಈಗ ಹೇಳು ಆಯಿಷಾ. ನಿನ್ನ ನಿಜವನ್ನು ಒಪ್ಪಿಕೊಂಡ ಪ್ರವಾದಿಯವರಿಗೆ ನಿನ್ನ ಕೃತಜ್ಞತೆಗಳನ್ನು ಹೇಳು.'

ಅವಳು ನನ್ನತ್ತ ಸ್ವಲ್ಪ ಹೊತ್ತು ನೋಡುತ್ತಲೇ ಇದ್ದಳು. ಆದರೆ ಏನನ್ನೂ ಹೇಳಲಿಲ್ಲ. ನನ್ನ ಮಾತಿಗೂ ಪ್ರತಿಕ್ರಿಯಿಸಿರಲಿಲ್ಲ. ನನ್ನ ಸಲಹೆಯಂತೆ, ಪ್ರವಾದಿಯವರ ಕ್ಷಮೆಯನ್ನೂ ಯಾಚಿಸಲಿಲ್ಲ.

'ಯಾಕೆ ಮಗಳೆ ಹೀಗೆ ಮಾಡುತ್ತಿದ್ದೀಯಾ? ನಿನ್ನಿಂದ ಏನೂ ತಪ್ಪಾಗಿಲ್ಲ ಎಂದು ಅವರೇ ಹೇಳಿದರಲ್ಲವೆ? ಅವರಿಗೆ ಕೃತಜ್ಞತೆ ಸಲ್ಲಿಸಲು ನಿನಗೇನು ತೊಂದರೆ?'

'ಉಮ್ಮಾ..' ಆಯಿಷಾ ಗಂಭೀರವಾಗಿಯೇ ಪ್ರತಿಕ್ರಿಯಿಸಿದ್ದಳು, 'ನನ್ನನ್ನು ನಿರ್ದೋಷಿ ಎಂದು ಅಲ್ಲಾಹು ಹೇಳುವವರೆಗೆ ನನ್ನ ಗಂಡನೂ ನನ್ನನ್ನು ನಂಬಿರಲಿಲ್ಲ.

ನನ್ನನ್ನು ಹೆತ್ತು ಸಾಕಿದ ನೀವೂ ಅನುಮಾನಿಸಿದಿರಿ. ಆದ್ದರಿಂದ, ನಿಜವನ್ನು ಪ್ರಕಟಿಸಿದ ಅಲ್ಲಾಹುವಿಗಲ್ಲದೆ ಬೇರೆಯವರಿಗೆ ನಾನೇಕೆ ಕೃತಜ್ಞತೆ ಹೇಳಬೇಕು?'

* * *

*'ಶಾಬ್ಬಾಸ್ ಉಮ್ಮಾ..!' ನನ್ನರಿವಿಗೆ ಬರುವ ಮುನ್ನವೇ ನನ್ನ ಬಾಯಿಯಿಂದ ಅಭಿನಂದನೆಯ ಮಾತು ಹೊರಬಿದ್ದಿತ್ತು.*

*'ನಿಜ ಗೆಳೆಯಾ' ಆಯಿಷಾರವರ ನಿರ್ಧಾರ ಅಭಿನಂದನಾರ್ಹವೇ. ಪ್ರವಾದಿ ಯವರು ಕೂಡಾ ಮನಸ್ಸಿನೊಳಗೆ ನಿನ್ನಂತೆಯೇ ಅಭಿನಂದಿಸಿದ್ದಿರ ಬಹುದೆಂದು ಅನ್ನಿಸುವುದಿಲ್ಲವೆ?' ತಡಮಾಡದೆ ಅರ್ಷದ್ ನನ್ನನ್ನು ಅಭಿನಂದಿಸಿದ್ದ.*

*ನನಗೆ ಉತ್ತರ ಹೊಳೆಯಲಿಲ್ಲ.*

*ಪ್ರವಾದಿಯವರ ವರ್ತನೆಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭಸಾಧ್ಯವಲ್ಲ ಅನ್ನಿಸಿತ್ತು. ಅವರ ಸಂಸಾರದಲ್ಲಿ ಉಂಟಾಗಿದ್ದ ಬಿರುಕನ್ನು ಮರುಜೋಡಿಸಲು ಅಲ್ಲಾಹುವೇ ತನ್ನ ಹೊಸ ಸಂದೇಶವೊಂದನ್ನು ಪ್ರಕಟಿಸಬೇಕಾಯಿತು. ಅದು ಸರಿ; ಅದನ್ನು ಪ್ರಶ್ನೆ ಮಾಡಬಾರದು. ಮಾಡುವುದಿಲ್ಲ.*

*ಆದರೆ, ಯಾರಿಂದಲೋ ಕೇಳಿಸಿಕೊಂಡ ವದಂತಿಯನ್ನು ನಿಜವೆಂದೇ ನಂಬಿ, ಹಾಡು ಬರೆದು ನಡುಪೇಟೆಯಲ್ಲಿ ಹಾಡಿದವನಿಗೆ ಶಿಕ್ಷೆಯಿಲ್ಲವೆ? ಹಾಗೆಯೇ ಕಾನೂನನ್ನು ಕೈಗೆ ತೆಗೆದುಕೊಂಡು, ಅದೇ ಕವಿಯನ್ನು ನಡು ರಸ್ತೆಯಲ್ಲಿ ಎರ್ರಾಬಿರ್ರಿ ಹೊಡೆದಿದ್ದ ಸಫ್ವಾನನಿಗೂ ಶಿಕ್ಷೆಯಾಗಬೇಕಲ್ಲವೆ?*

*'ನಿನ್ನ ತರ್ಕ ಸರಿಯಾಗಿದೆ ಗೆಳೆಯಾ.' ನನ್ನ ಯೋಚನೆಯನ್ನು ಗ್ರಹಿಸಿದ್ದ ಗೆಳೆಯ ಹೇಳತೊಡಗಿದ್ದ'*

*'ಅವರಿಬ್ಬರಿಗೂ ಅವರವರ ಅಪರಾಧಕ್ಕೆ ತಕ್ಕಂತೆ ಶಿಕ್ಷೆಯಾಗಿತ್ತು ಎಂಬುದನ್ನು ಆಯಿಷಾರ ಉಮ್ಮಾ ಹೇಳಿದ್ದಿರಲಿಲ್ಲ; ಅಷ್ಟೆ. ಅವರಿಬ್ಬರೂ ತಪ್ಪಿತಸ್ತರೇ. ಒಬ್ಬರು ಬಡಪಾಯಿ ಕವಿ. ಮತ್ತೊಬ್ಬರು ತಮ್ಮ ಪ್ರೀತಿಯ ಸಹವರ್ತಿ.*

*ನ್ಯಾಯ ತೀರ್ಮಾನದ ಹೊಣೆ ಪ್ರವಾದಿ ಯವರ ಮೇಲಿತ್ತು. ಅದನ್ನವರು .ಸಮರ್ಪಕವಾಗಿ ನಿಭಾಯಿಸಿಯೂ ಇದ್ದರು.*





*ಪ್ರವಾದಿಯವರು ಆಗ ಹೇಳಿದ್ದು ಇಷ್ಟೆ:*

*'ಸುಳ್ಳು ಆರೋಪಗಳನ್ನು ಮಾಡುವವರೂ ನಿಮ್ಮೊಳಗಿನವರೇ. ಸುಳ್ಳು ಆರೋಪ ಗಳನ್ನು ಹರಡುವವರೂ ಅದರ ಪಾಪಕ್ಕೆ ಪಾಲುದಾರರು. ಪ್ರಮುಖ ಪಾಲು ವಹಿಸಿ ಕೊಂಡವನಿಗೆ ಮಹಾ ಯಾತನೆಯಿದೆ. ಸಮರ್ಪಕ ಸಾಕ್ಷಿಗಳಿರದ ಸುಳ್ಳು ಆರೋಪ ಗಳನ್ನು ಆಲಿಸುವವರು, ಆರೋಪಗಳನ್ನು ಸಾಕ್ಷಿ ಸಹಿತ ಸಾಬೀತುಪಡಿಸಿರಿ ಎಂದು ಹೇಳಬೇಕಿತ್ತು. ಆದರೆ ಮದೀನಾದ ಜನತೆ ಆರೋಪಗಳನ್ನು ಆಸ್ವಾದಿಸಿದ್ದರೇ ಹೊರತು, ಸಾಕ್ಷಿ ತನ್ನಿರಿ ಎನ್ನಲಿಲ್ಲ. ಸಾಕ್ಷಿಗಳನ್ನು ಒದಗಿಸಲಾರದವರು ಸುಳ್ಳುಗಾರರು. ಒಂದು ನಾಲಿಗೆಯು ಇನ್ನೊಂದು ನಾಲಿಗೆಯಿಂದ ಸುಳ್ಳನ್ನು ಎತ್ತಿಕೊಂಡು ಹೊರಟಾಗ, ನಿಮ್ಮ ಬಾಯಿಂದಲೂ ಅದೇ ಸುಳ್ಳು ಹರಡುವುದನ್ನು ಸಣ್ಣ ಸಂಗತಿಯೆಂದು ಭಾವಿಸುವಿರಾ? ಅಲ್ಲಾಹು ಇದನ್ನು ಬಹಳ ಗಂಭೀರ ಸಂಗತಿಯೆಂದು ನಿರ್ಧರಿಸಿರುವನು. ಅವನು ಕರುಣಾಮಯಿ ಅಲ್ಲದಿರುತ್ತಿದ್ದರೆ, ಈ ವ್ಯಭಿಚಾರದ ಆರೋಪವು ಹಲವು ಕೆಟ್ಟ ಪರಿಣಾಮಗಳಿಗೆ ಕಾರಣವಾಗುತ್ತಿತ್ತು. ಶೀಲವಂತೆ ಮಹಿಳೆಯ ವಿರುದ್ಧ ವ್ಯಭಿಚಾರದ ಆರೋಪಗಳನ್ನು ಮಾಡುವವರು, ತಮ್ಮ ಆರೋಪಕ್ಕೆ ಪೂರಕವಾಗಿ ನಾಲ್ಕು ಸಾಕ್ಷಿ ಗಳನ್ನು ಹಾಜರು ಪಡಿಸಬೇಕು. ಈ ಪ್ರಕರಣದಲ್ಲಿ ಹಸ್ಸಾನರೂ ತಪ್ಪು ಮಾಡಿರುವರು. ಆದ್ದರಿಂದ ಅವರಿಗೆ ಎಂಬತ್ತು ಛಡಿಯೇಟುಗಳ ಶಿಕ್ಷೆಯಿದೆ. ಅಂತೆಯೇ ಪ್ರಕರಣವನ್ನು ನ್ಯಾಯಾಲಯದ ಗಮನಕ್ಕೆ ತಾರದೆ, ಕಾನೂನನ್ನು ಕೈಗೆ ತೆಗೆದುಕೊಂಡಿರುವ ಸಫ್ವಾನನೂ ತಪ್ಪಿತಸ್ಥನೇ. ಆದ್ದರಿಂದ ಸಫ್ವಾನನು ಸಭೆ ನಿರ್ಧರಿಸುವ ಪರಿಹಾರಧನವನ್ನು ಹಸ್ಸಾನರಿಗೆ ಒಪ್ಪಿಸಬೇಕು.'*

*ನಾನು ಪ್ರತಿಕ್ರಿಯಿಸಲಿಲ್ಲ.*

*ಯಾಕೆ ಪ್ರತಿಕ್ರಿಯಿಸಲಿಲ್ಲ ಎಂದು ಅವನೂ ವಿಚಾರಿಸಲಿಲ್ಲ.*

*'ಈಗ ನಾವು ಹೊರಡೋಣ. ನಮ್ಮ ಸಫ್ವಾನನ ಅಕ್ಕ ಏನು ಮಾಡುತ್ತಿದ್ದಾಳೆಂದು ಕಾಣೋಣ, ಬಾ..' ಎಂದ ಅರ್ಷದ್.*

*ನಾವು ಹೊರಟೆವು.*

❐

## ಸ್ವಗತ – ಹದಿಮೂರು

# ಅಫೀರಾ ಬಿಂತಿ ಮುಅತ್ತಲ್

–೧–

ಮಸೀದಿಯಿಂದ ಮದೀನಾ ಮಾರುಕಟ್ಟೆಗೆ ಅಷ್ಟೇನು ದೂರ ಇಲ್ಲ. ಬಹಳವೆಂದರೆ ಒಂದು ಮೈಲಿ. ಬಳಸು ದಾರಿಯಲ್ಲಿ ಒಂದಷ್ಟು ಹೆಚ್ಚು ಹೆಜ್ಜೆ ಬದಲಿಸಿದರೆ ನನ್ನಬ್ಬ ಮುಅತ್ತಲ್ ಮನೆ ಸಿಗುತ್ತದೆ. ಅಬ್ಬ ಕೆಲವು ದಿನಗಳಿಂದ ಬೆನ್ನುನೋವು ಎಂದು ಮಲಗಿಕೊಂಡಿದ್ದರು. ಅಬ್ಬನನ್ನು ಕಾಣುವ ನೆವದಲ್ಲಿ, ಉಮ್ಮನನ್ನೂ ಮಾತನಾಡಿಸಿ ಕೊಂಡು ಹೋದರಾಯಿತೆಂದು ಬೆಳ್ಳಂಬೆಳಗ್ಗೆಯೇ ಚೀಲದೊಂದಿಗೆ ಹೊರಟಿದ್ದೆ. ದೊಡ್ಡ ಒಡೆಯ ಅಬೂಬಕರರ ಮನೆಗೆ ಕೆಲಸಕ್ಕೆ ಹೋಗುವುದನ್ನು ಅಬ್ಬ ತಾತ್ಕಾಲಿಕವಾಗಿ ನಿಲ್ಲಿಸಿದ್ದರು. ಆದರೆ ಕರುಣಾಳುವಾದ ದೊಡ್ಡ ಒಡೆಯರು ವಾರದ ಕೂಲಿಯನ್ನು ಕಡಿತ ಮಾಡದೆ ಪ್ರತಿ ಶುಕ್ರವಾರ ಸಂಜೆ ಉಮ್ಮನ ಮೂಲಕ ಕಳುಹಿಸಿಕೊಡುತ್ತಿದ್ದರು.

ನಾನು ಅಬ್ಬನ ಮನೆಯೊಳಗಿದ್ದ ಹೊತ್ತಲ್ಲೇ, ಅನಿರೀಕ್ಷಿತವಾಗಿ ಸೋದರ ಸಫ್ವಾನ್ ಬಂದುಬಿಟ್ಟಿದ್ದ. ಅವನನ್ನು ನೋಡದೆ ಬಹಳ ದಿನಗಳಾಗಿದ್ದವು. ಸಫ್ವಾನ್ ಮೈಕೈ ತುಂಬಿಕೊಂಡು ಬಹಳ ಸುಂದರ ಯುವಕನಂತೆ ಕಾಣಿಸುತ್ತಿದ್ದ. ಅವನನ್ನು ಕಂಡ ನಾನು, ಅಬ್ಬನ ಬೆನ್ನುನೋವು ಹೇಗಿದೆಯೆಂದು ವಿಚಾರಿಸುವುದನ್ನೂ ಮರೆತು ಎಲ್ಲರನ್ನೂ ಎಂಬಂತೆ ಪ್ರಶ್ನಿಸಿದ್ದೆ, 'ಈ ಚಂದದ ತರುಣನನ್ನು ಯಾವಳಾದರೂ ಸುಂದರಿ ಇನ್ನೂ ಹೊತ್ತುಕೊಂಡು ಹೋಗಿಲ್ಲವೆ?'

'ನಮಗೆ ಸಿಕ್ಕರಲ್ಲವೆ ಇವನು ಬೇರೆಯವರಿಗೆ ಸಿಗುವುದು?' ಎಂದ ಉಮ್ಮ, 'ಅವನು ಯಾವಾಗ ಎಲ್ಲಿರುತ್ತಾನೆ ಎಂಬುದು ಅವನಿಗೆ ಗೊತ್ತಿದೆಯಾ ಕೇಳು? ಯಾವ ದಿನದಲ್ಲಿ ಇವನನ್ನು ಪ್ರವಾದಿಯವರು ನಮ್ಮ ಯುದ್ಧಾಯುಧಗಳನ್ನು ಕಾಪಾಡುವ ಜವಾಬ್ದಾರಿ ವಹಿಸಿದ್ದರೋ, ಅಂದಿನಿಂದ ಇವನಿಗೆ ಬೇರೆ ಪ್ರಪಂಚವೇ ಮರೆತುಹೋಗಿದೆ.'

'ಇವನ ಕುತ್ತಿಗೆಗೆ ಒಂದು ಹೆಣ್ಣನ್ನು ಕಟ್ಟಿಬಿಟ್ಟರೆ ಎಲ್ಲ ಸರಿಯಾಗುತ್ತದೆ ಎಂಬುದು ನನಗೂ ಗೊತ್ತಿದೆ ಇವಳೇ. ಇವನು ಒಪ್ಪಬೇಕಲ್ಲ?' ಅಬ್ಬ ಕೂಡಾ ಧ್ವನಿಕೂಡಿಸಿದ್ದರು. 'ಬುದ್ಧಿ ಹೇಳಿದ ದೊಡ್ಡ ಒಡೆಯರ ಮಾತಿಗೂ ಇವನು ಬಗ್ಗುವುದಿಲ್ಲ. ಅವನ ಮನಸ್ಸಿನಲ್ಲಿ ಏನಿದೆಯೋ ಎಂಬುದನ್ನು ಅಲ್ಲಾಹುವೇ ಹೇಳಬೇಕು.'

'ಏನಿದೆಯೋ ಅಲ್ಲ ಅಬ್ಬಾ...; ಯಾವಳಿದ್ದಾಳೆಯೋ ಎಂದು ಕೇಳಿ.' ಜೋರಾಗಿ ನಗುತ್ತಾ ತಮ್ಮನನ್ನು ರೇಗಿಸಿದ್ದೆ.

ನನ್ನನ್ನು ತಿನ್ನುವಂತೆ ದಿಟ್ಟಿಸಿದ್ದ ಅಣ್ಣ, 'ಏನೇ, ಬಾರೀ ಹಾರಾಡ್ತಾ ಇದ್ದೀಯಲ್ಲ. ನಾನು ತೋರಿಸುವ ಹುಡುಗಿಯನ್ನು ಕರೆದುಕೊಂಡು ಬಂದು ಮದುವೆ ಮಾಡಿಸಿ ಕೊಡುವ ಧೈರ್ಯ ನಿನಗಿದೆಯಾ?' ಸವಾಲು ಹಾಕುವವನಂತೆ ಪ್ರಶ್ನಿಸಿದ್ದ. 'ಇದ್ದರೆ ಹೇಳು. ಈಗಲೇ ನಿನ್ನೊಂದಿಗೆ ಬಂದು ಅ ಹುಡುಗಿಯನ್ನು ತೋರಿಸುವೆ. ಅವಳೂ ಹೂಂ.., ಎಂದರೆ ನಾಳೆಯೇ ಮದುವೆಯಾಗುವೆ. ಇದೆಯಾ ಧೈರ್ಯ?'

ಅವನ ಮಾತಿನ ಧಾಟಿಯಿಂದ ನಾನು ಹೆದರಿದ್ದೆ. ನನ್ನೊಂದಿಗೆ ಬಂದು ಅವನು ಯಾರನ್ನು ತೋರಿಸಬಹುದು?' ಆದರೂ ಸೋಲೊಪ್ಪಲು ಸಿದ್ಧಳಿಲ್ಲದವಳಂತೆ, 'ಯಾರು ಆ ಹೆಣ್ಣು ಎಂಬುದನ್ನು ಮೊದಲು ಹೇಳು. ನನ್ನೊಬ್ಬಳಿಂದ ಸಾಧ್ಯವಾಗ ದಿದ್ದರೆ ಪ್ರವಾದಿಯವರ ಸಹಾಯ ಪಡೆಯುವೆ' ಎಂದೆ.

ಏನನ್ನೋ ಹೇಳಹೊರಟ ಅಣ್ಣನನ್ನು, ಸುಮ್ಮನಿರು ಎಂಬಂತೆ ಉಮ್ಮ ಕಣ್ಸನ್ನೆ ಮಾಡಿದಂತೆ ಭಾಸವಾಯಿತು. ಅಣ್ಣ ಇದ್ದಕ್ಕಿದ್ದಂತೆ ಮೌನವಹಿಸಿದ್ದ.

'ಯಾಕಣ್ಣ ಮಾತನಾಡುವುದಿಲ್ಲ?' ನಾನೇ ಪ್ರಶ್ನಿಸಿದೆ.

'ಅವನನ್ನು ಅವನ ಪಾಲಿಗೆ ಬಿಟ್ಟುಬಿಡ್ತಿಯಾ ಇಲ್ವಾ?' ಉಮ್ಮ ಸಿಟ್ಟಿನಿಂದಲೇ ಹೇಳಿದಂತಿತ್ತು. 'ನನ್ನ ಮಗನೇನು ಮುದುಕನಾಗಿಲ್ಲ. ಮೊನ್ನೆ ಮೊನ್ನೆಯವರೆಗೂ ಆಡಿ ಕೊಂಡಿದ್ದ ಹುಡುಗ. ಈಗೇನೋ ದೊಡ್ಡದೊಂದು ಜವಾಬ್ದಾರಿ ಸಿಕ್ಕಿದೆ. ಒಂದೆರಡು ವರ್ಷ ಕೆಲಸ ಮಾಡಲಿ. ನನ್ನ ಮಗನನ್ನು ಮದುವೆಯಾಗಲಿರುವ ಅದೃಷ್ಟವಂತೆ ಯೊಬ್ಬಳು ಇಲ್ಲೆಲ್ಲೋ ಓಡಾಡುತ್ತಿರುವುದಂತೂ ಸತ್ಯ. ಅಲ್ಲಾಹು ಬಯಸಿದ ದಿನದಲ್ಲಿ ಅವಳೇ ನನ್ನ ಮಗನನ್ನು ಹುಡುಕಿಕೊಂಡು ಬರುತ್ತಾಳೆ. ನೀನೀಗ ಸುಮ್ಮನಿರು' ಎಂದಿದ್ದರು. ಉಮ್ಮನ ಮಾತಿನಲ್ಲಿ ಏನಾದರೂ ರಹಸ್ಯ ಅಡಗಿದೆಯೇ ಎಂದು ಯೋಚಿಸುತ್ತಾ, ಅವರಿಂದ ಬೀಳ್ಕೊಂಡು ಪೇಟೆಗೆ ತಲುಪುವಷ್ಟರಲ್ಲಿ ಸೂರ್ಯ ಜೋರಾಗಿಯೇ ಬಿಸಿಲು ಹಂಚುತ್ತಿದ್ದ.

ದಿನವೂ ಪೇಟೆಗೆ ಬಂದು ಹೋಗುವವಳು ನಾನಲ್ಲ. ಬರುವುದಕ್ಕೆ ಕಾರಣ ವಾದರೂ ಬೇಕಲ್ಲಾ? ನನ್ನ ಮನೆಯಲ್ಲಿ ಮತ್ತು ಒಡತಿಯ ಮನೆಯಲ್ಲಿ ನಾನೇ

ಬೇಯಿಸುತ್ತಿರುವ ಆಹಾರಗಳಲ್ಲಿ ಅಂಥಹಾ ವ್ಯತ್ಯಾಸವೇನೂ ಇಲ್ಲ. ಸಣ್ಣ ಒಡತಿ ಮಾತ್ರವಲ್ಲ, ಎಲ್ಲ ಪ್ರವಾದಿಪತ್ನಿಯರ ಮನೆಗಳ ಪಾಡೂ ಇದುವೆ. ತಮ್ಮ ಬಟ್ಟೆಯ ಅಂಗಡಿಯಲ್ಲಿ ಒಳ್ಳೆಯ ವ್ಯಾಪಾರವಾಗುತ್ತಿದ್ದರೂ, ದೊಡ್ಡ ಒಡೆಯರಾದ ಅಬೂಬಕರರ ಮನೆಯ ಒಲೆಯ ಗತಿಯೂ ಬೇರೆಯಲ್ಲ. ಅಗತ್ಯಕ್ಕಿಂತ ಹೆಚ್ಚು ದೊರೆತ ಸಂಪಾದನೆಯನ್ನು ಬಡವರಿಗೆ ಹಂಚುತ್ತಾ, ಪ್ರವಾದಿಯವರಂತೆಯೇ ಸರಳವಾಗಿ ಬದುಕುವ ಉದಾರಿ ಅವರು. ಇದ್ದುದರಲ್ಲಿ ಮೂರನೇ ಪ್ರವಾದಿಪುತ್ರಿ ಕುಲ್ಸೂಮರೇ ಅದೃಷ್ಟವಂತರು. ತೀರಿಹೋದ ಅವರಕ್ಕ ರುಖಯ್ಯಾರ ಗಂಡ ಉಸ್ಮಾನರನ್ನು ಕುಲ್ಸೂಮರೇ ಮದುವೆಯಾದ ಆನಂತರದ ದಿನಗಳಲ್ಲಿ, ಅವರ ಮನೆಯಲ್ಲಿ ಮೂರೂ ಹೊತ್ತು ಮಾಂಸ ಬೇಯುತ್ತಿರುವುದನ್ನು ನಾನೇ ಕಂಡಿದ್ದೆ.

ಸಣ್ಣ ಒಡತಿಯ ಮನೆಗೆ ನಾಲ್ಕು ದಿನಗಳಿಗೆ ಬೇಕಾಗುವಷ್ಟು ಸಾಮಾನುಗಳನ್ನು ಖರೀದಿಸಿ, ಚೀಲವನ್ನೆತ್ತಿಕೊಳ್ಳುತ್ತಿರುವಂತೆಯೇ, ಪಕ್ಕದ ಅಂಗಡಿಯಲ್ಲಿ ಹಪ್ಸಾ ಮತ್ತು ಝೈನಬರು ಜೊತೆಯಾಗಿರುವುದನ್ನು ಕಂಡೆ. ಇನ್ನು ಅವರ ಕಣ್ಣಿಗೆ ಬಿದ್ದರೆ, ಅವರು ಖರೀದಿಸಿದ ಸಾಮಾನುಗಳನ್ನೂ ನಾನೇ ಎತ್ತಿಕೊಂಡು ಒಂದು ಮೈಲು ನಡೆಯಬೇಕು ಎಂಬುದನ್ನು ಅನುಭವದಿಂದ ಕಲಿತಿದ್ದ ನಾನು, ಅವಸರವಸರವಾಗಿ ಚೀಲವನ್ನು ಎತ್ತಿಕೊಂಡು ಅಂಗಡಿಯಿಂದ ಹೊರಬಂದಿದ್ದರೂ, ಅದೃಷ್ಟ ಕೈಕೊಟ್ಟಿತ್ತು.

'ಅಫೀರಾ..' ಅಪ್ಸಾ ಕರೆದೇಬಿಟ್ಟಿದ್ದರು.

ಅನಿವಾರ್ಯವಾಗಿ ಅವರತ್ತ ನೋಡಿದ ನಾನು, ಆಗ ತಾನೇ ಗಮನಿಸಿದವಳಂತೆ, 'ಓಹೋ.. ನೀವೂ ಬಂದಿದ್ದೀರಾ?' ಎನ್ನುತ್ತಾ ಅವರ ಬಳಿಗೆ ಹೋಗಿ, 'ಹೇಳಿರುತ್ತಿದ್ದರೆ, ನಾನೇ ತಂದು ಕೊಡುತ್ತಿದ್ದೆನಲ್ಲಾ? ನೀವೇಕೆ ಇಷ್ಟು ದೂರ ಬಂದಿರಿ? ಕೊಡಿ ಇಲ್ಲಿ' ಎಂದು ಅವರ ಕೈಗಳಲ್ಲಿದ್ದ ಎರಡೂ ಚೀಲಗಳನ್ನೆತ್ತಿಕೊಳ್ಳಲು ಕೈ ಚಾಚಿದೆ.

'ಪರವಾಗಿಲ್ಲ ಬಿಡು ಅಫೀರಾ. ಇದೇನೂ ಭಾರವಿಲ್ಲ' ಎಂದ ಝೈನಬರು ತನ್ನ ಮಾತಿಗೆ ಸಾಕ್ಷಿ ಒದಗಿಸುವವರಂತೆ, ತಮ್ಮ ಚೀಲವನ್ನು ಎಡಗೈಯ ಎರಡೇ ಬೆರಳುಗಳಲ್ಲಿ ಎತ್ತಿ ಹಿಡಿದಿದ್ದರು. 'ನೀವು ಕೊಡಿ ಉಮ್ಮಾ' ಎಂದು ಹಪ್ಸಾರತ್ತ ಕೈಚಾಚಿದರೆ, ಅವರೂ, 'ನೀನು ಆಯಿಷಾರಿಗೆ ಮಾತ್ರ ದಾಸಿ, ನಮಗೆ ನೀನು ಗೆಳತಿ' ಎಂದು ಬಿಟ್ಟಿದ್ದರು. ಈ ಇಬ್ಬರು ಉಮ್ಮಾಗಳ ಅನಿರೀಕ್ಷಿತ ವರ್ತನೆಗಳಿಂದ ಅಚ್ಚರಿಯೇ ಆಗಿತ್ತು.

'ಅಷ್ಟು ಹಗುರವಾಗಿದ್ದರೆ, ನನ್ನ ಚೀಲವನ್ನೂ ಎತ್ತಿಕೊಂಡು ಈ ನಿಮ್ಮ ಹೊಸ ಗೆಳತಿಗೆ ಸಹಾಯಮಾಡಿರಿ' ಎಂದು ಹೇಳಬೇಕೆನ್ನಿಸಿದ್ದರೂ ಸುಮ್ಮನಾಗಿದ್ದೆ. ಅವರಿಬ್ಬರ ಬೆನ್ನ ಹಿಂದೆಯೇ ಮನೆಯ ದಿಕ್ಕಿಗೆ ಕಾಲೆಳೆಯತೊಡಗಿದೆ.





ಅವರಿಬ್ಬರೂ ಪರಸ್ಪರ ಮಾತು ಬದಲಿಸಿಕೊಳ್ಳುತ್ತಲೇ ಹೆಜ್ಜೆ ಹಾಕುತ್ತಿದ್ದರು.

'ಕಂದಕಯುದ್ಧ'ಕ್ಕೆ ಮೊದಲು ಭಯಪಟ್ಟದ್ದು, ಕಂದಕ ತೋಡುತ್ತಿರುವಲ್ಲಿಗೆ ಹೋಗಿ ಕೆಲಸ ಮಾಡಿ ಆಯಾಸಗೊಂಡ ಗಂಡಸರಿಗೆ ನೀರು ಹಂಚಿದ್ದು, ಕಂದಕದ ಆಳ ಕಂಡು ಬೆದರಿದ ಶತ್ರುಸೇನೆಯು ಮದೀನಾದೊಳಗೆ ನುಗ್ಗಲು ಅಳುಕಿ ಬಂದ ಹಾಗೆಯೇ ಮರಳಿದ್ದು, ಮದೀನಾದ ಮೇಲೆ ಪದೇ ಪದೇ ಯುದ್ಧ ಸಾರಿದರೂ, ಗೆಲ್ಲಲಾರದ ಮಕ್ಕಾದವರನ್ನು ನೆಚ್ಚಿಕೊಂಡಿದ್ದ ಅರೇಬಿಯಾದ ಇತರ ಗೋತ್ರಗಳು ಒಂದೊಂದಾಗಿ, ಪ್ರವಾದಿಯವರ ಗೆಳೆತನ ಬಯಸಿ ಸಂಧಾನಕಾರರನ್ನು ಕಳುಹಿಸುತ್ತಿರುವುದು..., ಹೀಗೆ ಒಂದೊಂದಾಗಿ ನೆನಪಿಸಿಕೊಂಡು ಪರಸ್ಪರ ನಗು ಹಂಚಿಕೊಳ್ಳುತ್ತಿದ್ದರು.

ಮಾರುಕಟ್ಟೆಯ ಉತ್ತರ ದಿಕ್ಕಿನಲ್ಲಿರುವ ಮಾಂಸದ ಅಂಗಡಿಯೇ ಕೊನೆಯದು. ಆ ಬಳಿಕ ಸಿಗುವ ಬಯಲು ದಾರಿಯಲ್ಲೇ ನಾವು ಸಾಗಬೇಕು. ಬಯಲುದಾರಿಗೆ ಕಾಲಿರಿಸುತ್ತಿದ್ದಂತೆಯೇ ಅವರಿಬ್ಬರೂ ಗಕ್ಕನೆ ನಿಂತುಬಿಟ್ಟಿದ್ದರು!

ಮದೀನಾವನ್ನು ಮೊನ್ನೆ ಮೊನ್ನೆಯೆಂಬಂತೆ ರಕ್ಷಿಸಿದ್ದ ಕಂದಕವನ್ನೇ ಹೋಲುವ ಆದರೆ, ಗಾತ್ರದಲ್ಲಿ ಅದಕ್ಕೆ ನೂರು ಪಟ್ಟಾದರೂ ಸಣ್ಣದಿರಬಹುದಾದ ಸಣ್ಣ ಕಂದಕವೊಂದು ರಸ್ತೆಯ ಪಕ್ಕದಲ್ಲೇ ಇತ್ತು. ಪ್ರವಾದಿಯವರೊಂದಿಗೆ ಮಾಡಿಕೊಂಡಿದ್ದ ಶಾಂತಿ ಒಪ್ಪಂದವನ್ನು ಮುರಿದು ಮಕ್ಕಾದವರ ಜೊತೆಗೆ ಸೇರಿ, ಪ್ರವಾದಿಯವರನ್ನು ಕೊಲ್ಲಲು ಸಂಚು ಹೂಡಿದ್ದ ಬಲು ದೊಡ್ಡ ಸಂಖ್ಯೆಯ ಯೆಹೂದೀಯರನ್ನು ತಂಡತಂಡವಾಗಿ ಎಳೆದುಕೊಂಡು ಬಂದು, ಅವರ ತಲೆಗಳನ್ನು ಸಾರ್ವಜನಿಕವಾಗಿ ಕತ್ತರಿಸಿ ಇದೇ ಕಂದಕದ ಆಳಕ್ಕೆ ಎಸೆದು ಮಣ್ಣರಾಶಿಯಲ್ಲಿ ಮುಚ್ಚಲಾಗಿತ್ತು.

'ಆ ಘಟನೆಯನ್ನು ನೋಡಿದ ನನಗೆ ಕೆಲವು ದಿನ ನಿದ್ರೆ ಮಾಡಲೂ ಭಯವಾಗುತ್ತಿತ್ತು.' ಹಪ್ಸಾ ಲೊಚಗುಟ್ಟಿದ್ದರು.

'ಯುದ್ಧ ಕೈದಿಗಳಿಗೆ ಈ ರೀತಿಯಲ್ಲಿ ಶಿಕ್ಷೆ ಕೊಡುತ್ತಾರೆಂದೇನೋ ಕೇಳಿದ್ದೆ. ಕಣ್ಣಾರೆ ನೋಡಿರಲಿಲ್ಲ. ಅದೂ..., ನಮ್ಮ ಪ್ರವಾದಿಯವರ ಕಣ್ಣೆದುರಿಗೇ..ಅಬ್ಬಾ..!' ಎಂದಿದ್ದರು ಹಪ್ಸಾ.

'ಇದರಲ್ಲಿ ಪ್ರವಾದಿಯವರದ್ದು ಏನು ತಪ್ಪಿತ್ತು ಉಮ್ಮಾ?' ಆ ಘೋರ ಶಿಕ್ಷೆಯ ವಿಧಾನವನ್ನು ಸಮರ್ಥಿಸಿಕೊಳ್ಳುವವರಂತೆ ಝೈನಬ್ ಪ್ರಶ್ನಿಸಿದ್ದರು. 'ಪ್ರವಾದಿಯವರೇನು ತಾವಾಗಿಯೇ ಆ ಶಿಕ್ಷೆಯನ್ನು ಪ್ರಕಟಿಸಿದ್ದರೆ? ಇಲ್ಲ. ಒಪ್ಪಂದವನ್ನು ಮುರಿದು ವಿಶ್ವಾಸದ್ರೋಹ ಎಸಗಿದ್ದವರು ಅವರು; ಯೆಹೂದೀಯರು. ಆದರೂ, ತಪ್ಪು ಮಾಡಿದವರನ್ನು ಶಿಕ್ಷಿಸುವ ಹೊಣೆಯನ್ನು ಪ್ರವಾದಿಯವರು ಅವರಲ್ಲೊಬ್ಬರಿಗೇ ನೀಡಿರಲಿಲ್ಲವೆ? ಹಾಗೆ ತೀರ್ಪು ನೀಡಲು ಅಧಿಕಾರ ಪಡೆದ ಮುಆಝರ ಮಗ ಸಅದ್ ನಮ್ಮ ಜನಾಂಗದವರೇನೂ ಅಲ್ಲವಲ್ಲಾ? ಯೆಹೂದೀಯರ ಮಿತ್ರರಾದ ಔಸ್ ಜನಾಂಗದವರು. ಸತ್ಯವಿಶ್ವಾಸಿಗಳ ಕಾನೂನಿನಂತೆ ಅವರೂ ಶಿಕ್ಷೆ ಪ್ರಕಟಿಸಲಿಲ್ಲವಲ್ಲ?

ಯೆಹೂದೀಯರ ತೌರಾತ್ ಧರ್ಮಗ್ರಂಥದಲ್ಲಿ ಯಾವ ತಪ್ಪಿಗೆ ಯಾವ ಶಿಕ್ಷೆ ಎಂದು ಬರೆದಿತ್ತೋ, ಅದರಂತೆಯೇ ತೀರ್ಪು ಕೊಟ್ಟರು; ಅದರಲ್ಲಿ ನಮ್ಮ ಪ್ರವಾದಿಯವರದ್ದು ಏನು ತಪ್ಪಿದೆ?' ಅದೇನೂ ದೊಡ್ಡ ವಿಷಯವೇ ಅಲ್ಲ ಎಂಬಂತೆ ಝೈನಬರು ಸಮಜಾಯಿಸಿ ಕೊಟ್ಟಿದ್ದರು. ಅದು ನಿಜವೂ ಆಗಿತ್ತು.

ಇನ್ನೇನು, ಮಸೀದಿಯ ರಸ್ತೆಗೆ ಕಾಲಿಡುತ್ತಿದ್ದೇವೆ ಎಂದುಕೊಳ್ಳುತ್ತಿರುವ ಹೊತ್ತಿಗೆ ಸರಿಯಾಗಿ, ಝೈನಬರ ಸೋದರ ಸಂಬಂಧಿಯೊಬ್ಬರು ಎದುರಾಗಿದ್ದರು. ಝೈನಬರನ್ನು ನಮ್ಮಿಂದ ಸ್ವಲ್ಪ ದೂರಕ್ಕೆ ಕರೆದುಕೊಂಡು ಹೋದವರು, ಎರಡೂ ಕೈಗಳನ್ನು ಅತ್ತಿತ್ತ ಆಡಿಸುತ್ತಾ ಝೈನಬರಿಗೆ ಏನನ್ನೋ ವಿವರಿಸತೊಡಗಿದಾಗ ನನಗೆ ಗಲಿಬಿಲಿಯಾಗಿತ್ತು. ನಡು ರಸ್ತೆಯಲ್ಲಿ ನಿಂತಿರುವ ನಮಗಿಬ್ಬರಿಗೂ ತಿಳಿಯಬಾರದಂತಹ ಆ ಗುಟ್ಟು ಏನಿರಬಹುದು? ನಾನು ಹಫ್ಸಾರ ಮುಖ ನೋಡಿದೆ. ಅವರೂ ನನ್ನಂತೆಯೇ ಗೊಂದಲದಲ್ಲಿರುವಂತೆ ಅನ್ನಿಸಿತು.

ಸೋದರ ಸಂಬಂಧಿಯನ್ನು ಕಳುಹಿಸಿಕೊಟ್ಟು ನಮ್ಮತ್ತ ಬರುತ್ತಿರುವ ಝೈನಬರ ಮುಖದಲ್ಲಿ ನಗು ಮಾಯವಾಗಿರುವುದನ್ನು ಗಮನಿಸಿದ್ದೆ. ಹತ್ತಿರ ಬಂದವರೇ ನನ್ನತ್ತ ನೋಡುತ್ತಾ ಪ್ರಶ್ನಿಸಿದ್ದರು, 'ನಿನ್ನ ಒಡತಿ ಈಗ ಮನೆಯಲ್ಲಿದ್ದಾರೆಯೆ?'

'ಹೌದು. ಇದ್ದಾರೆ' ಎಂದೆ. ಯಾಕೆ? ಎಂದು ದಾಸಿಯಾಗಿರುವ ನಾನು ಪ್ರಶ್ನಿಸಬಾರದು. ಹಫ್ಸಾರತ್ತ ತಿರುಗಿದ ಝೈನಬರು ಅವಸರವಸರವಾಗಿ ಹೇಳಿದ್ದರು, 'ನಾವೀಗ ಮೊದಲು ಆಯಿಷಾರ ಮನೆಗೆ ಹೋಗಬೇಕು. ಈವತ್ತೊಂದು ದಿನ ಅಡುಗೆ ಮಾಡದೆ ಉಪವಾಸ ಮಲಗಿದರೆ ಅನಾಹುತವೇನೂ ಆಗುವುದಿಲ್ಲ.'

ಮತ್ತೊಂದು ಅನಾಹುತ ಮೈಮೇಲೆ ಬೀಳಲು ಹೊಂಚು ಹಾಕುತ್ತಿದೆ ಎಂಬುದಂತೂ ಖಂಡಿತವಾಗಿತ್ತು. ಮನೆ ಹತ್ತಿರವಾಗುತ್ತಿದ್ದಂತೆ ನನ್ನ ಚಡಪಡಿಕೆಯೂ ಹೆಚ್ಚುತ್ತಿತ್ತು.

ಒಡತಿ ಮನೆಯಲ್ಲೇ ಇದ್ದರು.

ನನ್ನ ಜೊತೆಯಲ್ಲಿ ಇಬ್ಬರು ಅತಿಥಿಗಳನ್ನು ಅನಿರೀಕ್ಷಿತವಾಗಿ ಕಂಡಾಗ ಅವರ ಮುಖದಲ್ಲಿ ಅಚ್ಚರಿಯ ಗೆರೆಗಳೇನೂ ಮೂಡಿದ್ದಿರಲಿಲ್ಲ. ಅಷ್ಟು ಮಾತ್ರವಲ್ಲ, ಒಡತಿಯ ಸಣ್ಣ ಮನೆಯೊಳಗೆ ನಾವು ಮೂವರು ನುಸುಳಿಕೊಂಡ ಬಳಿಕವೂ, ಒಡತಿಯ ಪ್ರತಿಯೊಂದು ಮಾತಿನಲ್ಲೂ, ವರ್ತನೆಯಲ್ಲೂ ಹೊಸದನ್ನೇ ಕಾಣಲಾರಂಭಿಸಿದ್ದೆ. ಅಪರೂಪಕ್ಕೆ ಬಂದವರನ್ನು, ಮುಖ್ಯವಾಗಿ ಝೈನಬರಂತೂ ಅದೇ ಮೊದಲು, ಯಾಕೆ ಬಂದಿರಿ ಎಂದೂ ಪ್ರಶ್ನಿಸಿದ್ದಿರಲಿಲ್ಲ. ಒಟ್ಟಿಗೆ ಬರಲು ಕಾರಣವೇನೆಂಬುದನ್ನೂ ವಿಚಾರಿಸಿದ್ದಿರಲಿಲ್ಲ. ಇಬ್ಬರನ್ನೂ ಪ್ರೀತಿಯಿಂದಲೇ ಸ್ವಾಗತಿಸಿ ಚಾಪೆ ಹಾಸಿ ಕುಳ್ಳಿರಿಸಿದ್ದರು.





ಒಲೆಮೇಲಿದ್ದ ಹಾಲನ್ನು ಎರಡು ಪುಟ್ಟ ಮಣ್ಣಿನ ಪಾತ್ರೆಗಳಿಗೆ ಸುರಿಯುತ್ತಾ, 'ಜೇನು ಬೆರೆಸಲೇನೂ' ಎಂದು ಸಹಜ ಧ್ವನಿಯಲ್ಲೇ ಪ್ರಶ್ನಿಸಿದ್ದರು.

ಕಂದಕ ಯುದ್ಧದ ಬಳಿಕ, ಮುಂದಿನ ಬದುಕು ಸುಖಮಯವಾಗಿರುತ್ತದೆಂದು ನನ್ನಂತೆಯೇ ಸಣ್ಣ ಒಡತಿಯೂ ನಂಬಿದ್ದರು. ಹಾಗೆಂದು ಬಾಯಿಬಿಟ್ಟು ಕೆಲವು ಸಲ ಹೇಳಿಯೂ ಇದ್ದರು. ಆದರೆ, ತನ್ನ ಸೋದರ ಸಂಬಂಧಿಯಿಂದ ಬೀಳ್ಕೊಂಡು ಬಾಡಿದ ಮುಖ ಹೊತ್ತುಕೊಂಡು ಬಂದಿದ್ದ ಝೈನಬರು, ಒಡತಿಯ ನಂಬಿಕೆಯನ್ನೇ ಹುಸಿಗೊಳಿಸುವಂತಹ ಸುದ್ದಿಯನ್ನು ಪುಟ್ಟ ಮನೆಯ ಈಚಲುಸೋಗೆ ಮಾಡುಗಳೆಲ್ಲ ನಡುಗುವಂತೆ ಸ್ಫೋಟಿಸಿದ್ದರು!

ಆದರೆ, ಝೈನಬರ ಮಾತುಗಳೆಲ್ಲ ಮುಗಿಯುವವರೆಗೂ ತುಟಿ ಎರಡು ಮಾಡದೆ ಆಲಿಸುತ್ತಿದ್ದ ಒಡತಿ, 'ಓ.. ಇಷ್ಟೇನಾ? ನಾನೇನೋ ಅಂದುಕೊಂಡಿದ್ದೆ. ಇದರಲ್ಲಿ ಹೊಸದೇನಿದೆ?' ಎಂದುಬಿಟ್ಟಾಗ ದಿಗ್ಭ್ರಮೆಗೊಂಡ ಝೈನಬರು, ಪಕ್ಕದಲ್ಲೇ ಕುಳಿತಿದ್ದ ಹಫ್ಸಾರತ್ತ ಕಣ್ಣು ಹಾಯಿಸಿ, ನಾವಿಲ್ಲಿಗೆ ಬಂದು ತಪ್ಪು ಮಾಡಿಬಿಟ್ಟೆವೆ? ಎಂಬಂತೆ ದಿಟ್ಟಿಸಿದ್ದರು. ಹಫ್ಸಾರಿಗೂ ಈ ಮಾಹಿತಿ ಹೊಸದು.

ಒಡತಿಯ ಮಾತಿನಲ್ಲಿ ಯಾವುದೇ ಕೃತಕವನ್ನು ಗುರುತಿಸಲು ಸೋತ ನಾನು, ಹಾಗಾದರೆ ಒಡತಿಗೆ ಈ ವಿಷಯ ಮೊದಲೇ ಗೊತ್ತಾಗಿದ್ದಿರಬಹುದೆ? ಎಂಬ ಅನುಮಾನವೂ ಹುಟ್ಟಿತ್ತು. ಉಳಿದ ವಿಷಯಗಳು ಏನೇ ಇರಲಿ, ಆ ಕ್ಷಣದಲ್ಲಿ ನಾನು ಒಡತಿಯನ್ನು ಮನಸಾರೆ ಮೆಚ್ಚಿಕೊಂಡು ಹೆಮ್ಮೆಯಿಂದ ನೋಡಿದ್ದೆ.

ಝೈನಬರೇನೋ, 'ನಿಮಗೆ ಅಚ್ಚರಿಯಾಗಬಹುದು' ಎಂಬ ಮಾತಿನಿಂದಲೇ ಶುರು ಮಾಡಿದ್ದರು. ತಾವಿಬ್ಬರು ಅನಿರೀಕ್ಷಿತವಾಗಿ ಬಂದಿರುವ ಕಾರಣವನ್ನು ನಿಧಾನವಾಗಿ ವಿವರಿಸಿದ್ದರು.

ಮದೀನಾದ ಮೇಲೆ ಧಾಳಿ ನಡೆಸಲು 'ಬನೂ–ಅಲ್–ಮುಸ್ತಲಿಕ್' ಜನಾಂಗದ ಯೋಧರು ಮಕ್ಕಾ ಪಟ್ಟಣಕ್ಕೆ ಸಮೀಪದ ಕಡಲತಡಿಯ 'ಅಲ್–ಮುರೈಸೀ' ಎಂಬಲ್ಲಿ ವಾರದ ಹಿಂದೆಯೇ ಸಿದ್ಧತೆ ನಡೆಸುತ್ತಿದ್ದರಂತೆ. ಗುಪ್ತಚಾರರ ಮೂಲಕ ಇದನ್ನರಿತ ಪ್ರವಾದಿಯವರು ಆರಿಸಿದ ಇನ್ನೂರು ಯೋಧರನ್ನು ಅಲೀಯವರ ನೇತೃತ್ವದಲ್ಲಿ ಅಲ್ಲಿಗೆ ಕಳುಹಿಸಿದ್ದರು. ಯಾರಿಗೂ ಅನುಮಾನ ಬರದಂತೆ ಬೇರೆ ಬೇರೆ ದಾರಿಗಳಲ್ಲಿ ಬಿಡಿ ಬಿಡಿಯಾಗಿ ಹೋಗಿದ್ದ ಯೋಧರು, ಕತ್ತಲಾಗುತ್ತಿರುವಂತೆಯೇ ನಿಗದಿಯಾದ ಜಾಗದಲ್ಲಿ ಜೊತೆಯಾಗಿದ್ದರು. ಮಧ್ಯರಾತ್ರಿಯವರೆಗೂ ಸುಮ್ಮನಿದ್ದು, ನಿದ್ರೆಗೆ ಜಾರಿದ್ದ ಶತ್ರುಗಳ ಮೇಲೆ ಏಕಾಯೇಕಿ ಎರಗಿದ್ದರು. ಒಂದಿಬ್ಬರು ಕಾವಲುಭಟರು ಆರಂಭದಲ್ಲೇ ನೆಲಕ್ಕುರುಳಿದುದನ್ನು ಹೊರತುಪಡಿಸಿದರೆ, ಹೆಚ್ಚಿನ ಸಾವು ನೋವುಗಳಾಗುವ ಮುನ್ನವೇ ಶತ್ರುಸೇನೆ ಶರಣಾಗಿತ್ತು. ಶತ್ರುಸೇನೆಯ ಒಬ್ಬನೇ ಒಬ್ಬ ತಪ್ಪಿಸಿಕೊಳ್ಳಲು

ಆಸ್ಪದ ಕೊಡದೆ, ಎಲ್ಲರನ್ನೂ ಸೆರೆಹಿಡಿಯಲಾಗಿತ್ತು. ಒತ್ತೆಯಾಳಾಗಿ ಶರಣಾದ ಯೋಧಕುಟುಂಬಗಳನ್ನು, ಒಂಟೆ, ಕುದುರೆ ಜಾನುವಾರುಗಳೊಂದಿಗೆ ಕರೆದುಕೊಂಡು ಬರುತ್ತಿರುವ ನಮ್ಮ ಸೇನೆಯು, ಇಂದು ರಾತ್ರಿ ಅಥವಾ ನಾಳೆ ಬೆಳಗ್ಗೆ ಮದೀನಾ ತಲುಪಲಿದ್ದವು.

ಇವಿಷ್ಟು ಮಾಹಿತಿಗಳಲ್ಲಿ ನಾವು ದುಃಖಿಸುವಂತದ್ದೇನೂ ಇರಲಿಲ್ಲ. ಸಂತೋಷದ ಸುದ್ದಿಯೇ ಆಗಿತ್ತು. ಆದರೆ, ಮುಂದಿನ ಮಾತುಗಳು ಯಾವಳೇ ಹೆಂಡತಿಗೂ ಸಂತೋಷವನ್ನು ತರುವಂಥದ್ದು ಆಗಿದ್ದಿರಲಿಲ್ಲ.

ನಮ್ಮ ಸೈನಿಕರು ಒತ್ತೆಯಾಳಾಗಿ ಕರೆದುಕೊಂಡು ಬರುತ್ತಿರುವವರಲ್ಲಿ, 'ಬನೂ-ಅಲ್-ಮುಸ್ತಲಿಕ್' ಜನಾಂಗದ ನಾಯಕ, ಅಲ್ ಹಾರಿಸ್ ಮಗಳಾಗಿರುವ ಇಪ್ಪತ್ತು ವರ್ಷ ವಯಸ್ಸಿನ ಚೆಲುವೆ 'ಜುವೈರಿಯಾ'ಳೂ ಇದ್ದಾಳೆ ಎಂಬುದನ್ನು ಝೈನಬರು ಒತ್ತಿ ಒತ್ತಿ ಹೇಳುತ್ತಿದ್ದಾಗಲೇ ನನಗೆ ಎಲ್ಲವೂ ಅರ್ಥವಾಗಿತ್ತು.

ಒಡತಿಯ ಮನೆಯಲ್ಲಿ ತಮ್ಮ ನೋವನ್ನು ಹಂಚಿಕೊಳ್ಳಲು ಬಂದಿದ್ದ ಅವರಿಬ್ಬರೂ, ಕೆಲವೇ ಕೆಲವು ತಿಂಗಳುಗಳ ಹಿಂದೆ ನನ್ನ ಒಡತಿಗೆ ಅಂತಹುದೇ ನೋವನ್ನು ಕೊಟ್ಟಿದ್ದವರೇ. ಆ ದಿನಗಳಲ್ಲಿ ಒಡತಿಯ ನೋವನ್ನು ಹಂಚಿಕೊಳ್ಳಲು ಜೊತೆಗಿದ್ದವಳು ನಾನೊಬ್ಬಳು ಮಾತ್ರ. ಝೈನಬರ ಮಾತಿಗೆ ನನ್ನ ಒಡತಿಯ ಪ್ರತಿಕ್ರಿಯೆ ಏನಿದ್ದಿರ ಬಹುದು ಎಂಬ ಚಿಂತೆ ನನಗೂ ಇತ್ತು. ಆದರೆ ಸಣ್ಣ ಒಡತಿ, 'ಇಷ್ಟೇನಾ?' ಎಂದು ಅತಿಥಿಗಳಿಬ್ಬರ ಸಂಕಟವನ್ನು ತಾತ್ಸಾರ ಮಾಡಿದಾಗ, ಅತಿಥಿಗಳಿಬ್ಬರ ಎದುರು ಇರಿಸಿದ್ದ ಹಾಲಿನ ಎರಡೂ ಲೋಟಗಳನೆತ್ತಿಕೊಂಡು ಗಟಗಟನೆ ಕುಡಿದುಬಿಡಬೇಕೆನ್ನಿಸಿತ್ತು.

ನಾನು ಒಡತಿಯ ಮುಖವನ್ನು ಓದುವಂತೆ ನೋಡಿದ್ದೆ. ಅವರ ಕಣ್ಣುಗಳಲ್ಲಿ ಆತಂಕದ ಯಾವ ಭಾವವೂ ಕಾಣಿಸಲಿಲ್ಲ. ಆ ಬಗೆಯ ನಿರ್ಲಿಪ್ತ ಮುಖವನ್ನು ಎರಡನೇ ಪ್ರವಾದಿಪತ್ನಿ ಸೌಧಾರವರಲ್ಲಿ ಕಂಡಿದ್ದೆ. ಇಷ್ಟೂ ದಿನಗಳಲ್ಲಿ ಅನುಭವಿಸಿದ್ದ ನೋವುಗಳೆಲ್ಲ ಒಟ್ಟು ಸೇರಿ ಸಣ್ಣ ಒಡತಿಯ ಹೃದಯವನ್ನು ಕಲ್ಲು ಮಾಡಿದ್ದಿರಬಹುದೆ? ಅಥವಾ.., ಅಥವಾ... ನಾನು ಅನುಮಾನಿಸಿದ್ದಂತೆ ಈ ಮಾಹಿತಿಗಳನ್ನೆಲ್ಲ ಈ ಮೊದಲೇ ಯಾರಾದರೂ ತಲುಪಿಸಿದ್ದಿರಬಹುದೆ? ತಲುಪಿಸುವುದಾದರೂ ಯಾವಾಗ? ಎಷ್ಟು ಹೊತ್ತಿಗೆ? ನಿನ್ನೆ ಸಂಜೆಯವರೆಗೂ ಒಡತಿಯ ಜೊತೆಯಲ್ಲೇ ನಾನಿದ್ದೆನಲ್ಲ? ನಾನು ಮನೆಗೆ ಹೋದ ನಂತರ ಪ್ರವಾದಿಯವರನ್ನು ಬಿಟ್ಟರೆ ಬೇರಾರೂ ಬಂದಿರಲು ಸಾಧ್ಯವಿದ್ದಿರಲಿಲ್ಲ.

ಹೊತ್ತು ಮಾಸುವ ಮುನ್ನವೇ ಕೆಲಸಗಳನ್ನೆಲ್ಲ ಮುಗಿಸಿ ಅಲ್ಲಿಂದ ಹೊರಟು ನನ್ನ ಮನೆ ಸೇರಿಕೊಂಡಿದ್ದೆ. ಹಾಗಾದರೆ, ಪ್ರವಾದಿಯವರೇ ಎಲ್ಲವನ್ನೂ ವಿವರಿಸಿ





ಒಡತಿಯನ್ನು ಮುಂದಾಗಿಯೇ ಸಮಾಧಾನಗೊಳಿಸಿದ್ದಿರಬಹುದೆ? ಛೇ! ಇರಲಾರದು. ಅವರಿಗೂ ಎಲ್ಲ ಸಂಗತಿಗಳು ತಿಳಿದಿರಲು ಸಾಧ್ಯವಿದ್ದಿರಲಿಲ್ಲ. ಬಹಳವೆಂದರೆ, 'ನಮ್ಮ ಯೋಧರು ಒತ್ತೆಯಾಳುಗಳನ್ನೆಲ್ಲ ಹೆಡೆಮುರಿ ಕಟ್ಟಿ ಕರೆದು ತರುತ್ತಿದ್ದು, ನಾಳೆ ಬೆಳಗ್ಗೆ ಮದೀನಾ ತಲುಪಬಹುದು' ಎಂಬ ಮಾಹಿತಿಯನ್ನೇನೋ ಗೂಢಚಾರರು ವರದಿ ಮಾಡಲು ಸಾಧ್ಯ. ಅದಲ್ಲದೆ, ಬರುವ ಒತ್ತೆಯಾಳುಗಳಲ್ಲಿ ಒಬ್ಬಳು ಇಪ್ಪತ್ತರ ಯುವತಿ ಇದ್ದಾಳೆಂದೂ, ಅಕೆ ಬಹಳ ರೂಪಸಿಯೆಂದೂ, ಅವಳ ಹೆಸರು ಜುವೈರಿಯಾ ಎಂದೂ, ಅವಳಬ್ಬನೇ 'ಬನೂ-ಅಲ್-ಮುಸ್ತಲಿಕ್' ನಾಯಕ ಅಲ್ ಹಾರಿಸ್ ಎಂದೂ ಗೂಢಚಾರರಾದರೂ ಯಾಕೆ ತಿಳಿಸುತ್ತಾರೆ?

ಅತಿಥಿಗಳಿಬ್ಬರೂ ಗಂಟಿಕ್ಕಿದ ಮುಖದಿಂದ ಹೊರಟುಹೋದ ಬಳಿಕ ಬಾಗಿಲು ಮುಚ್ಚಿಕೊಂಡ ಒಡತಿ ಗೋಡೆಗೊರಗಿ ಜೀವವೇ ಇಲ್ಲದವರಂತೆ ಕುಸಿದು ಕುಳಿತುಕೊಂಡುಬಿಟ್ಟಿದ್ದರು. ನನಗಿದು ಅನಿರೀಕ್ಷಿತವಾಗಿತ್ತು. ಗಡಬಡಿಸಿ ಹತ್ತಿರ ಹೋಗಿ ಕುಳಿತುಕೊಂಡ ನಾನು, ಅವರ ತಲೆಯನ್ನು ತೊಡೆಯ ಮೇಲೇರಿಸಿಕೊಂಡು ಬೆನ್ನು ನೇವರಿಸತೊಡಗಿದೆ. ಹುಟ್ಟಿನ ದಿನದಿಂದಲೇ ಸಣ್ಣ ಒಡತಿಯನ್ನು ಎತ್ತಿ ಆಡಿಸಿದವಳು ನಾನು. ಅವರ ಉಮ್ಮನಿಗೂ ಹೇಳಲಾಗದ ಅದೆಷ್ಟೋ ಸಂಗತಿಗಳನ್ನು ನನ್ನೆದುರು ಹೇಳಿಕೊಳ್ಳುತ್ತಿದ್ದವರು ಈ ಪುಟ್ಟ ಒಡತಿ.

ಹಾಗಾದರೆ, ತಮ್ಮ ಗಂಡ ಮತ್ತೊಬ್ಬಳನ್ನು ಮದುವೆಯಾಗಲಿದ್ದಾರೆ ಎಂಬ ನೋವನ್ನು ಹಂಚಿಕೊಳ್ಳಲು ಬಂದಿದ್ದ ಝೈನಬರನ್ನು, ಈ ಹಿಂದೆ ನನ್ನ ಗಂಡ ನಿಮ್ಮನ್ನು ಮದುವೆಯಾದಾಗಲೂ ಇದೇ ರೀತಿಯ ನೋವನ್ನು ತಾನೂ ಅನುಭವಿಸಿದ್ದೆ ಎಂಬುದನ್ನು ಉಪಾಯವಾಗಿ ತಿಳಿಸಿ ಸೇಡು ತೀರಿಸಿಕೊಂಡರೇ ನನ್ನ ಪುಟ್ಟ ಒಡತಿ?

ಸಣ್ಣ ಒಡತಿಯನ್ನು ಮೆಚ್ಚಿಕೊಳ್ಳಬೇಕೋ, ಸಂತೈಸಬೇಕೋ ಎಂಬುದನ್ನು ತಿಳಿಯಲಾರದಾಗಿದ್ದೆ.

**-೨-**

ಸಣ್ಣ ಒಡತಿಯ ಮನೆಯ ಕೆಲಸಗಳನ್ನೆಲ್ಲ ಮುಗಿಸಿ, ಮನೆಗೆ ಹೋಗುವ ಬದಲಾಗಿ ನೇರವಾಗಿ ದೊಡ್ಡ ಒಡೆಯರ ಮನೆಯ ದಾರಿ ಹಿಡಿದೆ. ಅವರ ಮನೆಗೆ ಹೋಗದೆ ಬಹಳ ದಿನಗಳಾಗಿದ್ದವು. ನನ್ನ ಉಮ್ಮ ಅಲ್ಲಿದ್ದರೂ ಇರಬಹುದೆಂಬ ಸಣ್ಣ ಆಸೆಯೂ ಇತ್ತು. ಅವರಿದ್ದರೆ, ಎಲ್ಲವನ್ನೂ ತಿಳಿಸಿ, ಸಣ್ಣ ಒಡತಿಯನ್ನು ಸಮಾಧಾನಗೊಳಿಸುವ ಬಗ್ಗೆ ಸಲಹೆ ಪಡೆಯಬಹುದೆಂಬುದು ನನ್ನ ಯೋಚನೆಯಾಗಿತ್ತು. ಆದರೆ, ಬೆನ್ನು

ನೋವಿನಿಂದ ಅಬ್ಬ ಮಲಗಿಕೊಂಡ ಬಳಿಕ, ದೊಡ್ಡ ಒಡೆಯರ ಮನೆಯಿಂದ ಉಮ್ಮ ಬೇಗನೆ ಮನೆಗೆ ಮರಳುತ್ತಿರುತ್ತಾರೆ ಎಂಬುದನ್ನೂ ಮರೆತುಬಿಟ್ಟಿದ್ದೆ.

ದೂರದಿಂದಲೇ ನನ್ನನ್ನು ಕಂಡ ದೊಡ್ಡ ಒಡತಿ, ಅಂಗಳದಿಂದಲೇ ಕೂಗಿದ್ದರು, 'ನಾವು ಇನ್ನೂ ಭೂಮಿಯ ಮೇಲೆಯೇ ಇದ್ದೇವೆ ಎಂಬುದನ್ನು ನೀನು ಮರೆತೇ ಬಿಟ್ಟಿದ್ದಿ ಅಂದುಕೊಂಡಿದ್ದೆ ಅಫೀರಾ..' ಎಂಬ ಮಾತಿನ ಮೂಲಕವೇ ಸ್ವಾಗತಿಸಿದ್ದರು.

ನಾನು ಅಂಗಳಕ್ಕೆ ಕಾಲಿರಿಸುತ್ತಿದ್ದಂತೆಯೇ ನನ್ನ ಮುಖ ಬಾಡಿರುವುದನ್ನು ಅವರು ಗಮನಿಸಿದಂತಿತ್ತು. 'ಏನು ಅಫೀರಾ, ಮೈ ಹುಷಾರಿಲ್ಲವೆ? ಬಾ ಒಳಗೆ' ಎನ್ನುತ್ತಾ ನನ್ನನ್ನು ಕರೆದುಕೊಂಡು ಒಳಗೆ ಹೋಗಿದ್ದರು. ನನ್ನ ಉಮ್ಮನಂತೆಯೇ ನನ್ನನ್ನು ಪ್ರೀತಿಸುತ್ತಿರುವ ದೊಡ್ಡ ಒಡತಿಯ ಮಾತುಗಳಿಗೆ ನಾನು ಕರಗಿಬಿಟ್ಟಿದ್ದೆ. ಕಣ್ಣುಗಳಲ್ಲಿ ನೀರು ಒಸರುತ್ತಿರುವುದನ್ನು ಅಡಗಿಸಿಕೊಳ್ಳಲಾರದವಳಾಗಿದ್ದೆ. ಅಡುಗೆ ಮನೆಯ ಗೋಡೆಗೊರಗಿ ಕುಳಿತು, ಉಮ್ಮ ಇರುತ್ತಿದ್ದರೆ ಏನೆಲ್ಲ ಹೇಳುತ್ತಿದ್ದೆನೋ, ಅವೆಲ್ಲವನ್ನೂ ದೊಡ್ಡ ಒಡತಿಗೆ ಅಳುತ್ತಲೇ ತಿಳಿಸಿಬಿಟ್ಟೆ.

ದೊಡ್ಡ ಒಡತಿ ಬಹಳ ಹೊತ್ತು ಮಾತೇ ಆಡಲಿಲ್ಲ. ನನ್ನ ಕಣ್ಣು ತಪ್ಪಿಸಿ ಎತ್ತಲೋ ದೃಷ್ಟಿ ನೆಡಲು ಪ್ರಯತ್ನಿಸಿದ್ದರು. ಬಳಿಕ ಎಚ್ಚೆತ್ತವರಂತೆ, 'ನೀನು ಈವತ್ತು ಇಲ್ಲೇ ಇದ್ದುದನ್ನು ತಿಂದುಕೊಂಡು ಹೋಗು ಅಫೀರಾ. ನಮಗೆ, ಹೆಂಗಸರಿಗೆ ಕಷ್ಟಗಳು ತಪ್ಪುವುದೇ ಇಲ್ಲ. ಈ ಒಂದು ದಿನವಾದರೂ ನಿನ್ನ ಮನೆಯಲ್ಲಿ ಒಲೆ ಉರಿಸುವ ಕಷ್ಟವಾದರೂ ತಪ್ಪಲಿ' ಎಂದರು.

ನಾನು ಏನನ್ನೂ ಹೇಳದಿದ್ದಾಗ, ಅವರೇ ಮಾತಿಗೆ ತೊಡಗಿದ್ದರು. 'ನೋಡು ಅಫೀರಾ. ಅಲ್ಲಾಹು ನಮ್ಮನ್ನು ಭೂಮಿಗೆ ಕಳುಹಿಸುವಾಗಲೇ ಇವೆಲ್ಲವನ್ನೂ ನಿರ್ಧರಿಸಿರುತ್ತಾನೆ. ಅವನ ಅನುಮತಿಯಿಲ್ಲದೆ ಯಾವುದೂ ನಡೆಯುವುದಿಲ್ಲ. ಅವನು ಆದೇಶಿಸದೆ ಇರುವುದನ್ನು ನಮ್ಮ ಪ್ರವಾದಿಯವರು ಮಾಡುವುದೂ ಇಲ್ಲ. ನಾನು, ನೀನು, ನಿನ್ನ ಉಮ್ಮ, ನನ್ನ ಗಂಡ, ನಮ್ಮ ಮಕ್ಕಳು ಹೀಗೆ ಭೂಮಿಯ ಮೇಲೆ ನಕ್ಷತ್ರಗಳಂತೆ ಲೆಕ್ಕಕ್ಕೆ ಸಿಗದಷ್ಟು ಮನುಷ್ಯರು ಇರುತ್ತಾರೆ. ಆದರೆ ಅಲ್ಲಾಹು ಎಲ್ಲರನ್ನೂ ತನ್ನ ಪ್ರವಾದಿಯನ್ನಾಗಿ ಆರಿಸುವುದಿಲ್ಲ. ಇಡೀ ಭೂಮಿಯ ಮೇಲೆ ತನ್ನ ಅಂತ್ಯ ಪ್ರವಾದಿಯನ್ನಾಗಿ ಅವನು ಆರಿಸಿದ್ದು ಒಬ್ಬರನ್ನು ಮಾತ್ರ. ಪ್ರವಾದಿಪತ್ನಿಯರಾಗುವ ಭಾಗ್ಯ ಆರಿಸಿದ ಕೆಲವರಿಗಷ್ಟೇ ಸಿಗುತ್ತದೆ. ಎಷ್ಟು ಹೆಣ್ಣುಗಳಿಗೆ ಪ್ರವಾದಿಪತ್ನಿ ಗೌರವವನ್ನು ಕೊಡಬೇಕು, ಯಾರಿಗೆಲ್ಲ ಕರುಣಿಸಬೇಕೆಂಬುದನ್ನೆಲ್ಲ ಅಲ್ಲಾಹು ಮೊದಲೇ ನಿರ್ಧರಿಸಿರುತ್ತಾನೆ. ಇವಕ್ಕೆಲ್ಲ ಅಲ್ಲಾಹುವಿಗೆ ಅವನದೇ ಆದ ಕಾರಣಗಳಿರಬಹುದು. ಆ ಕಾರಣಗಳು ನಮ್ಮಂಥವರಿಗೆ ಅರ್ಥವೂ ಆಗಲಾರದು.





'ನಾಳೆ ನಿನ್ನ ಪುಟ್ಟ ಒಡತಿಗೆ ಹೇಳು; ಅಲ್ಲಾಹುವಿನ ನಿರ್ಧಾರಗಳನ್ನು ಪ್ರಶ್ನಿಸುವ ಅಧಿಕಾರ ಅವಳಿಗಿಲ್ಲವೆಂದು. ಪ್ರವಾದಿಪತ್ನಿಯಾಗಿರುವ ಅವಳು ಈಗ ನನ್ನಂತೆ, ನಿನ್ನಂತೆ ಯೋಚಿಸಲೂಬಾರದು. ಬಣ್ಣ ಬಣ್ಣದ ಬಿಲ್ಲು ಆಕಾಶದಲ್ಲಿ ಕಾಣಿಸುವುದು ಮಳೆ ಬರುತ್ತಿರುವಾಗ ಮಾತ್ರ. ಈ ಸತ್ಯವನ್ನು ಅವಳು ಅರ್ಥಮಾಡಿಕೊಂಡ ದಿನ ಮಾತ್ರ ಅವಳಿಗೆ ನೆಮ್ಮದಿ ಸಿಗುತ್ತದೆ. ನಮ್ಮ ಹಾಗೆ ಅವಳೂ ಚಿಂತೆ ಮಾಡತೊಡಗಿದರೆ, ಅವಳಿಗೂ ನಮಗೂ ಏನು ವ್ಯತ್ಯಾಸ ಉಳಿದೀತು?'

ದೊಡ್ಡ ಒಡತಿ ನನಗೆ ಗೊತ್ತಿಲ್ಲದಿರುವ ಏನನ್ನೂ ಹೇಳಿರಲಿಲ್ಲ. ಇವೆಲ್ಲವೂ ನನ್ನ ಪುಟ್ಟ ಒಡತಿಗೂ ಗೊತ್ತಿರುವ ಸತ್ಯಗಳೇ.

ನಾವು ಮಾತನಾಡುತ್ತಿರುವಂತೆಯೇ, 'ಏನೇ ಅಫೀರಾ..., ಮನೆಗೆ ಬರುವುದನ್ನೇ ನಿಲ್ಲಿಸಿಬಿಟ್ಟಿದ್ದೀಯಾ?' ಎಂದು ದೊಡ್ಡದಾಗಿ ನಗುತ್ತಾ ದೊಡ್ಡ ಒಡೆಯರು ಅಡುಗೆ ಮನೆಯೊಳಗೇ ಬಂದಿದ್ದರು. ನಾನು ಗಡಬಡಿಸಿ ಎದ್ದುನಿಂತಿದ್ದೆ.

'ಅಬ್ಬನ ಬೆನ್ನು ನೋವು ಹೇಗಿದೆ?' ಅವರು ಮತ್ತೊಂದು ಪ್ರಶ್ನೆ ಎಸೆದಿದ್ದರು.

'ಪರವಾಗಿಲ್ಲ; ಸ್ವಲ್ಪ ಗುಣವಿದೆ. ಇನ್ನೊಂದು ಹತ್ತು ದಿನದಲ್ಲಿ ಇಲ್ಲಿಗೆ ಕೆಲಸಕ್ಕೆ ಬಂದಾರು' ಎಂದೆ.

'ನಾನು ಅದನ್ನು ನಿನ್ನಲ್ಲಿ ವಿಚಾರಿಸಿದೆನಾ?' ಅವರು ಪ್ರಶ್ನಿಸಿದಾಗ ನಾನು ತಲೆ ತಗ್ಗಿಸಿದ್ದೆ.

'ಮುಅತ್ತಲ್ ಇನ್ನು ಒಂದು ವರ್ಷ ಕೆಲಸಕ್ಕೆ ಬರದಿದ್ದರೂ ನಾನು ಯಾಕೆ ಎಂದು ಪಶ್ನಿಸುವವನಲ್ಲ ಎಂಬುದು ನಿನಗೆ ಗೊತ್ತಿಲ್ಲವೇನೇ ಅಫೀರಾ?' ಎತ್ತರದ ಧ್ವನಿಯಲ್ಲೇ ಹೇಳಿದಾಗ, ನನಗೆ ಅವರ ಔದಾರ್ಯವನ್ನು ಕಂಡು ಅಳುವೇ ಬಂದುಬಿಟ್ಟಿತ್ತು.

ನಾನು ಊಟ ಮಾಡಿ ಹೊರಡುತ್ತಿರುವಂತೆಯೇ ದೊಡ್ಡ ಒಡೆಯರು ಹೇಳಿದ್ದರು. 'ನೀನಿವತ್ತು ಇಲ್ಲಿಗೆ ಬಾರದಿರುತ್ತಿದ್ದರೆ, ನಾಳೆ ನಾನೇ ಬಂದು ನಿನ್ನನ್ನು ಕಾಣುವವನಿದ್ದೆ' ಎಂದಾಗ ನಾನು ಗಾಬರಿಗೊಂಡಿದ್ದೆ. ಆದರೆ, ಯಾಕೆ ಎಂದು ಕೇಳಬಾರದು ಎಂಬ ಕಾರಣಕ್ಕೆ ಸುಮ್ಮನಾಗಿದ್ದೆ.

'ಗಾಬರಿಯಾಗದಿರು ಅಫೀರಾ. ಪ್ರವಾದಿಯವರು ನಾಳೆ ಮಧ್ಯಾಹ್ನದ ನಮಾಜಿನ ಹೊತ್ತಿಗೆ ಮಸೀದಿಗೆ ಬರಲು ಹೇಳಿಕಳುಹಿಸಿದ್ದಾರೆ. ನಮ್ಮ ಯೋಧರಿಗೆಲ್ಲ ನಾಳೆ ಹಬ್ಬದ ದಿನ. ಅವರು ಸೆರೆಹಿಡಿದುಕೊಂಡು ಬರುತ್ತಿರುವ ಒತ್ತೆಯಾಳುಗಳ ತಂಡದಲ್ಲಿರುವ ಹೆಣ್ಣುಮಕ್ಕಳ ಮೈಮೇಲೆ ಎರಡು ದೊಡ್ಡ ಒಂಟೆಗಳು ಹೊರುವಷ್ಟು ಬಂಗಾರದ ಆಭರಣಗಳಿವೆಯಂತೆ. ಅವನ್ನೆಲ್ಲ ಯೋಧರ ನಡುವೆ ಹಂಚುವಾಗ ನಾಲ್ಕು ಜನ ಸಾಕ್ಷಿಗಳು ಬೇಕಲ್ಲ?' ಎಂದು ಜೋರಾಗಿ ನಕ್ಕರು.

ನಾನು ದೊಡ್ಡ ಒಡತಿಯ ಮುಖ ನೋಡಿದೆ.

ಅವರು ನನ್ನ ಮುಖ ನೋಡಿದರು.

–೩–

ಮಗಳ ಕುಶಲ ವಿಚಾರಿಸಲೆಂದು ದೊಡ್ಡ ಒಡತಿ ಬರುವುದೇ ಅಪರೂಪ.

ನನಗೆ ನೆನಪಿರುವಂತೆ, ನಾವೆಲ್ಲ ಮದೀನಾ ತಲುಪಿದ ಬಳಿಕದ ವರ್ಷಗಳಲ್ಲಿ ಅವರು ಬಂದದ್ದು ನಾಲ್ಕೋ ಅಥವಾ ಐದು ಬಾರಿ; ಅಷ್ಟೆ. ಮಗಳು ಪ್ರವಾದಿಪತ್ನಿ ಪಟ್ಟಕ್ಕೇರಿದ ಆರಂಭದ ದಿನಗಳಲ್ಲಿ ಒಂದೆರಡು ಬಾರಿ ಬಂದು ಹೋಗಿದ್ದವರು, ಆನಂತರ ಬರುತ್ತಿದ್ದದ್ದು ಮಗಳಿಗೆ ಮೈ ಹುಷಾರಿಲ್ಲ ಎಂದು ಸುದ್ದಿ ತಲುಪಿದರೆ ಮಾತ್ರ. ಸಣ್ಣ ಒಡತಿಯೂ ಹಾಗೆಯೇ, ವರ್ಷಕ್ಕೆ ಎರಡೋ, ಮೂರು ಬಾರಿ ತವರಿಗೆ ಹೋದರೆ ಅದೇ ಹೆಚ್ಚು.

ಇಂದು ಮುಂಜಾನೆ ಸಣ್ಣ ಒಡತಿಯ ಮನೆಗೆ ನಾನು ಕಾಲಿರಿಸಿದಾಗ ಅಲ್ಲಿ ದೊಡ್ಡ ಒಡತಿಯೂ ಇದ್ದರು. ನನಗೆ ಅಚ್ಚರಿಯೇನೂ ಆಗಲಿಲ್ಲ. ಅವರ ಕಣ್ಣುಗಳಲ್ಲಿ ಒಡೆಯುತ್ತಿದ್ದ ನೀರ ಗುಳ್ಳೆಗಳು ಅವರ ಅನಿರೀಕ್ಷಿತ ಆಗಮನದ ಕಾರಣಗಳನ್ನು ಹೇಳುತ್ತಿದ್ದವು. ದೊಡ್ಡ ಒಡತಿಗೆ ವಂದಿಸಿದ ನಾನು, ಅನಗತ್ಯ ಮಾತಿಗಿಳಿಯದೆ ಕೆಲಸ ಆರಂಭಿಸಿದ್ದೆ.

'ನಾನು ಹೊರಟೆ ಮಗಳೇ..., ಹೇಳಿದ್ದೆಲ್ಲ ನೆನಪಿರಲಿ. ನನ್ನ ಮೇಲೆ ಪ್ರೀತಿಯಿದ್ದರೆ, ಅಲ್ಲಾಹು ನನಗೆ ಕರುಣಿಸಿರುವ ಪ್ರವಾದಿಪತ್ನಿಯ ಉಮ್ಮ ಎಂಬ ಗೌರವಕ್ಕೆ ಕಲೆಯಾಗ ದಂತೆ ನೋಡಿಕೊಳ್ಳು' ಎಂದ ದೊಡ್ಡ ಒಡತಿ, ಪಕ್ಕದಲ್ಲೇ ಇದ್ದ ನನ್ನ ಬೆನ್ನು ಸವರಿ ಹೊರಟುಹೋಗಿದ್ದರು. ನಾನು ಸಣ್ಣ ಒಡತಿಯನ್ನು ಮಾತಿಗೆಳೆಯದೆ ನನ್ನ ಕೆಲಸದಲ್ಲಿ ಮುಳುಗಿದೆ.

ಸಣ್ಣ ಒಡತಿ ಹೊಸ್ತಿಲ ಬಳಿ ಕುಳಿತು ಆಕಾಶ ನೋಡತೊಡಗಿದ್ದರು. ಮಧ್ಯಾಹ್ನದ ನಮಾಜಿನ ಕರೆ ಬರುವವರೆಗೂ ಅವರು ಕಲ್ಲಿನಂತೆ ಹಾಗೆಯೇ ಕುಳಿತಿದ್ದಳು. ನಮಾಜು ಮುಗಿಸಿದ ಬಳಿಕ, ಅವರು ಮತ್ತದೇ ಜಾಗ ಸೇರಿಕೊಂಡಾಗ, ನನಗೆ ಅಯ್ಯೋ ಅನ್ನಿಸಿತ್ತು.

ದೊಡ್ಡ ಒಡೆಯರು ಹೇಳಿದ್ದು ಬರಿಯ ತಮಾಷೆಯ ಮಾತುಗಳಾಗಿದ್ದಿರಲಿಲ್ಲ. ಮನೆಯ ಹೊರಗೆ ಗದ್ದಲ ಕೇಳಿಸಿದಾಗ, ಒಡತಿಯನ್ನು ಬದಿಗೆ ಸರಿಸಿ ಅಂಗಳಕ್ಕಿಳಿದೆ. ಒತ್ತೆಸೆರೆಯಾಳಾಗಿದ್ದ ಗಂಡಸರನ್ನೆಲ್ಲ ಬೇರೆ ಬೇರೆ ಮನೆಗಳಲ್ಲಿ ಬಂಧಿಸಿಟ್ಟಿದ್ದ ನಮ್ಮ ಯೋಧರು, ಸುಮಾರು ಮೂವತ್ತರಷ್ಟು ಹೆಂಗಸರು ಮತ್ತು ಮಕ್ಕಳನ್ನು ಕರೆದುಕೊಂಡು ಬಂದು ಅಂಗಳವನ್ನು ಬೇಯಿಸುತ್ತಿದ್ದ ಸುಡುಬಿಸಿಲಲ್ಲಿ ನಿಲ್ಲಿಸಿದ್ದರು. ಅವರ ಕಾವಲಿಗೆಂದು ಬಂದವರಲ್ಲಿ ಸೋದರ ಸಫ್ವಾನ್ ಕೂಡಾ ಇದ್ದನು. ಪ್ರವಾದಿಯವರು ಇನ್ನೂ ಬಂದಿರಲಿಲ್ಲ. ಒತ್ತೆಯಾಳಾಗಿ ಬಂದಿರುವ ಪ್ರತಿಯೊಬ್ಬಳ ಕೈ, ಕೊರಳುಗಳಲ್ಲಿದ್ದ ಬಂಗಾರದ ಆಭರಣಗಳು ಬಿಸಿಲಿಗೆ ಫಳ ಫಳನೆ ಹೊಳೆಯುತ್ತಿದ್ದವು.





ತಲೆ ತಗ್ಗಿಸಿ ನಿಂತಿರುವವರ ನಡುವೆ 'ಜುವೈರಿಯಾ' ಯಾರಿರಬಹುದು? ಎಂಬ ಕುತೂಹಲದಿಂದ ಒಬ್ಬೊಬ್ಬರನ್ನೇ ಅಳೆಯುತ್ತಾ ಕಣ್ಣು ಹಾಯಿಸಿದೆ. ಹೆಚ್ಚಿನ ತರುಣಿಯರೆಲ್ಲ ಸುಖವಾಗಿ ತಿಂದುಂಡು ಮೈಕೈತುಂಬಿಕೊಂಡು ಬೆಳೆದು ನಿಂತ ಸುಂದರಿಯರೇ. ಅವರಲ್ಲಿ ಝೈನಬರು ಹೇಳಿದ್ದ ರೂಪಸಿ ಯಾರಾಗಿದ್ದಿರಬಹುದು?

ನಾನು ಗೊಂದಲದಲ್ಲಿರುವಂತೆಯೇ ಸಣ್ಣ ಒಡತಿಯೂ ಹೊರಗೆ ಬಂದಿದ್ದರು.

ನಾನು ಹೋಗಿ ಅವರ ಪಕ್ಕದಲ್ಲಿ ನಿಂತೆ. ಅವರೂ ಹೊಸ ಸವತಿಯನ್ನು ಹುಡುಕುತ್ತಿದ್ದರು!

ಇದ್ದಕ್ಕಿದ್ದಂತೆ ಹೊಸದೊಂದು ಅನುಮಾನ ಕಾಡತೊಡಗಿತ್ತು. ನಿನ್ನೆ ಝೈನಬರು, ಒತ್ತೆಯಾಳಾಗಿ ಬರುತ್ತಿರುವವರಲ್ಲಿ 'ಜುವೈರಿಯಾ' ಎಂಬ ಚಂದದ ಹುಡುಗಿಯೂ ಇರುವಳು ಎಂದಿದ್ದರೇ ವಿನಃ, ಪ್ರವಾದಿಯವರು ಅವಳನ್ನು ಮದುವೆಯಾಗಲಿದ್ದಾ ರೆಂದೇನೂ ಹೇಳಿದ್ದಿರಲಿಲ್ಲ. ಜುವೈರಿಯಾ ಬಹಳ ಸುಂದರಿಯಾಗಿರುವುದರಿಂದ, ಅವಳನ್ನು ಪ್ರವಾದಿಯವರು ಮದುವೆಯಾಗಲೂಬಹುದೆಂಬ ಆತಂಕವನ್ನಷ್ಟೇ ಪ್ರಕಟಿಸಿದ್ದರು. ಝೈನಬರ ಮಾತು ಸುಳ್ಳಾಗಿಹೋದರೆ, ನನ್ನ ಒಡತಿಯ ಸಮಸ್ಯೆಯೂ ಪರಿಹಾರವಾಗಿಬಿಡುತ್ತಿತ್ತು.

ಒಡತಿಯನ್ನು ಪಕ್ಕಕ್ಕೆ ಕರೆದು ಅವರ ಕೈ ಹಿಡಿದು, ನನ್ನ ಅನುಮಾನವನ್ನು ಹೇಳಲೆಂದು ಬಾಯಿ ತೆರೆಯುತ್ತಿರುವಂತೆಯೇ, ಗುಂಪಿನ ಮಧ್ಯದಿಂದ ತೂರಿಕೊಂಡು ಎದುರು ಬಂದ ಸುಮಾರು ಇಪ್ಪತ್ತರ ಯುವತಿಯೊಬ್ಬಳು ನನ್ನತ್ತ ಕೈಚಾಚುತ್ತಾ, ಹತ್ತಿರ ಬರುವಂತೆ ಸನ್ನೆ ಮಾಡುತ್ತಿದ್ದಳು!

ಇದ್ಯಾರಪ್ಪಾ! ಎಂದು ಅಚ್ಚರಿಯಿಂದ ಅವಳನ್ನು ಸರಿಯಾಗಿ ನೋಡಿದೆ.

ಮಿಂಚು ಹೊಡೆದಂತಾಗಿತ್ತು.

ಅವಳಷ್ಟು ಚಂದದ ಯುವತಿಯನ್ನು ನಾನು ಕಂಡಿದ್ದವಳೇ ಅಲ್ಲ.

'ಅವಳೇ ನೋಡು, ನೀನು ಹುಡುಕುತ್ತಿರುವ 'ಜುವೈರಿಯಾ' ಸಣ್ಣ ಒಡತಿ ಹೇಳಿದಾಗ, ನಾನು ಅವರತ್ತ ನೋಡಿದೆ. ಚಂದದ ತರುಣಿಯನ್ನು ಕಂಡ ಖುಷಿ ಅವರ ಮುಖದಲ್ಲಿರಲಿಲ್ಲ; ಬದಲಿಗೆ ಅಸೂಯೆಯ ಗೆರೆಗಳು ಅವರ ಹಣೆಯಲ್ಲಿ ಮೂಡುತ್ತಿದ್ದವು.

ಅಷ್ಟರಲ್ಲಿ ದೊಡ್ಡ ಒಡೆಯರ ಜೊತೆಗೆ ಪ್ರವಾದಿಯವರು ಬಂದರು.

ಜೊತೆಯಲ್ಲಿ ಪ್ರವಾದಿಪತ್ನಿ ಹಫ್ಸಾರ ಅಬ್ಬ ಉಮ್ಮರ್ ಬಿನ್ ಖತ್ತಾಬ್ ಮತ್ತು ಪ್ರವಾದಿಪುತ್ರಿ ಕುಲ್ಸೂಮರ ಗಂಡ ಉಸ್ಮಾನ್ ಕೂಡಾ ಇದ್ದರು.

ಸುಡುಬಿಸಿಲಿಗೆ ನಿಂತಿದ್ದ ಹೆಂಗಸರು ಮತ್ತು ಮಕ್ಕಳತ್ತ ಅನುಕಂಪದ ನೋಟ

ಬೀರಿದ ಪ್ರವಾದಿಯವರು, ಸಫ್ವಾನನನ್ನು ಸನ್ನೆ ಮಾಡಿ ಕರೆದರು. ಬಂಧಿಗಳನ್ನೆಲ್ಲ ಮಸೀದಿಯ ಪಶ್ಚಿಮ ಗೋಡೆಯ ಪಕ್ಕದಲ್ಲಿರುವ ನೆರಳಿನಲ್ಲಿ ನಿಲ್ಲಿಸುವಂತೆ ಅದೇಶಿಸಿದರು. ಬಳಿಕ, ಸಣ್ಣ ಒಡತಿಯನ್ನು ಕಂಡು ಕಣ್ಣರಳಿಸುತ್ತಾ ಹತ್ತಿರ ಬಂದು, 'ನಿನ್ನ ಜೊತೆಯಲ್ಲಿ ಸ್ವಲ್ಪ ಮಾತನಾಡುವುದಿದೆ ಆಯಿಷಾ. ಮನೆಯೊಳಗೆ ಹೋಗೋಣ' ಎನ್ನುತ್ತಾ ಪಕ್ಕದಲ್ಲೇ ಇದ್ದ ಮನೆಯೊಳಗೆ ಹೋದರು. ಸಣ್ಣ ಒಡತಿ ಅವರನ್ನು ಹಿಂಬಾಲಿಸಿದರು.

ಮಸೀದಿಯ ನೆರಳಲ್ಲಿ ನಿಂತಿದ್ದ ಜುವೈರಿಯಾಳತ್ತ ಕಣ್ಣು ಹಾಯಿಸಿದೆ. ಅವಳೂ ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದಳು. ಅವಳು ನನ್ನನ್ನು ಕರೆದದ್ದು ನೆನಪಾಯಿತು. ಹತ್ತಿರ ಹೋದೆ.

'ಪ್ರವಾದಿಯವರ ಜೊತೆಗೆ ಮಾತನಾಡುವ ಒಂದು ಅವಕಾಶವನ್ನು ನನಗೆ ನೀನು ಕಲ್ಪಿಸಬಲ್ಲೆಯಾ?' ಆಕೆಯ ಸ್ವರವೂ ಅವಳಂತೆಯೇ ಆಕರ್ಷಕ.

'ಯಾಕೆ?' ಎಂದೆ.

'ನನ್ನ ಹೆಸರು ಜುವೈರಿಯಾ. ಅಲ್ ಹಾರಿತ್‌ರವರು ಮಗಳು. ನನ್ನ ಗಂಡ ಮುಸ್ತಫಾ ಯುದ್ಧದಲ್ಲಿ ಮರಣಿಸಿದರು. ನಾನೀಗ ವಿಧವೆ. ಬನೂ–ಅಲ್–ಮುಸ್ತಲಿಕ್ ನಾಯಕನ ಮಗಳಾಗಿರುವ ನನ್ನಿಂದ, ಬಹಳ ದೊಡ್ಡ ಪರಿಹಾರಧನವನ್ನು ನಿಮ್ಮ ಯೋಧರು ವಸೂಲು ಮಾಡಲಿದ್ದಾರೆಂಬುದನ್ನು ಅವರ ಮಾತುಗಳಿಂದಲೇ ತಿಳಿದುಕೊಂಡಿರುವೆ. ಆದರೆ, ನಮ್ಮ ಬಳಿ ಇದ್ದ ಸೊತ್ತುಗಳನ್ನೆಲ್ಲ ನಿಮ್ಮ ಯೋಧರು ಈಗಾಗಲೇ ವಶಪಡಿಸಿ ಕೊಂಡಿದ್ದಾರೆ. ನನ್ನ ಮೈಮೇಲೆ ಇರುವ ಆಭರಣಗಳಿಗಿಂತ ಹೆಚ್ಚಿನದೇನನ್ನೂ ನೀಡುವ ಸ್ಥಿತಿಯಲ್ಲಿ ನಾನಿಲ್ಲ. ಇವುಗಳನ್ನಷ್ಟೇ ಸ್ವೀಕರಿಸಿ ನನ್ನನ್ನು ಬಿಡುಗಡೆ ಮಾಡುವಂತೆ ಪ್ರವಾದಿಯವರಲ್ಲಿ ಪ್ರಾರ್ಥಿಸುವ ಅವಕಾಶ ಮಾಡಿಕೊಡಬಲ್ಲೆಯಾ?' ಯಾರನ್ನೂ ಸಮ್ಮೋಹನಿಗೊಳಿಸುವಂತಹ ಧ್ವನಿ ಅವಳದ್ದು.

'ನಾನೊಬ್ಬಳು ದಾಸಿ. ನನ್ನ ಶಕ್ತಿಗಿಂತ ಬಹಳ ಹೆಚ್ಚಿನದನ್ನು ನನ್ನಿಂದ ನಿರೀಕ್ಷಿಸುತ್ತಿರುವೆ ನೀನು' ಎಂದೆ, ಅಸಹಾಯಕಳಂತೆ.

'ನೀನು ಸಾಮಾನ್ಯ ದಾಸಿಯಲ್ಲವೆಂಬುದನ್ನು, ನಿನ್ನ ಒಡತಿಯ ಜೊತೆಗೆ ಮಾತನಾಡುತ್ತಿದ್ದಾಗಲೇ ನಾನು ಗ್ರಹಿಸಿರುವೆ. ಯಾವಳೇ ದಾಸಿ, ಒಡತಿಯ ಕೈ ಹಿಡಿದೆಳೆದು ಮಾತನಾಡುವುದಿಲ್ಲ' ಎನ್ನುತ್ತಾ ಆಕೆ ನನ್ನನ್ನು, 'ಸಿಕ್ಕಿಬಿದ್ದೆ ಕಳ್ಳೀ..' ಎಂಬಂತೆ ದಿಟ್ಟಿಸಿದ್ದಳು. ಏನೆಂದು ಉತ್ತರಿಸಬೇಕೆಂಬುದೇ ಹೊಳೆಯಲಿಲ್ಲ.

'ನಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದ ಕಾವಲು ಯೋಧರಲ್ಲಿ ಸುಂದರನಾದ ತರುಣನೊಬ್ಬ, ನಿನಗೆ ಬಹಳ ಹತ್ತಿರದವನಿರಬೇಕು ಎಂದು ಊಹಿಸಿರುವೆ. ಅವನನ್ನು ನೀನು ಕಣ್ಣರಳಿಸಿ ನೋಡುತ್ತಿದ್ದಾಗಲೇ ಗಮನಿಸಿದ್ದೆ. ಅವನೇನಾಗಬೇಕು ನಿನಗೆ?'





'ನನ್ನ ಕಿರಿಯ ಸೋದರ ಅವನು' ಹೆಮ್ಮೆಯಿಂದಲೇ ಉತ್ತರಿಸಿದ್ದೆ.

'ಒಳ್ಳೆಯದೇ ಆಯಿತು. ದಯವಿಟ್ಟು ನಿನ್ನ ಸೋದರನ ಬಳಿ ಹೋಗಿ ನನ್ನ ಆಸೆಯನ್ನು ತಿಳಿಸು. ನಮ್ಮನ್ನು ಕರೆದುಕೊಂಡು ಬರುತ್ತಿರುವಾಗ ಅವನನ್ನು ಮಾತನಾಡಿಸಲು ಬಹಳ ಪ್ರಯತ್ನಿಸಿದೆ. ಆದರೆ, ಅವನು ಯಾರನ್ನೂ ತಲೆಯೆತ್ತಿ ನೋಡುತ್ತಿರಲಿಲ್ಲ. ಸರಿಯಾಗಿ ದಿಟ್ಟಿಸಿ ನೋಡಿದ್ದು ನಿನ್ನನ್ನು ಮಾತ್ರ.

'ಅವನಿಂದ ಈ ಕೆಲಸ ಆಗಲಾರದು. ಪ್ರವಾದಿಯವರ ಎದುರಲ್ಲೂ ಅವನು ತಲೆ ತಗ್ಗಿಸಿ ನಿಲ್ಲುತ್ತಾನೆಯೇ ವಿನಃ ಬಾಯಿಬಿಡಲಾರನು. ಅವರು ಆದೇಶಿಸಿದ್ದನ್ನಷ್ಟೇ ಮಾಡುವವನು ನನ್ನ ಸೋದರ.'

ಅರೆಕ್ಷಣ ಸುಮ್ಮನಿದ್ದ ಅವಳು, 'ಹಾಗಾದರೆ, ನಿನ್ನ ಒಡತಿಯ ಮನೆಯೊಳಗೆ ನನ್ನನ್ನು ಕರೆದುಕೊಂಡು ಹೋಗಬಲ್ಲೆಯಾ? ನಿನ್ನ ಒಡತಿಯೂ ಪ್ರವಾದಿಯವರಂತೆ ಬಹಳ ಕರುಣಾಳು ಎಂದು ಕೇಳಿರುವೆ. ವಿಧವೆಯಾಗಿರುವ ನನಗೆ ಇಷ್ಟು ಸಣ್ಣ ಸಹಾಯವನ್ನೂ ಮಾಡಲಾರೆಯಾ ಅಕ್ಕಾ?' ಆಕೆ ನನ್ನನ್ನು ಅಕ್ಕಾ ಎಂದು ಕರೆದು ಎದೆಯನ್ನೇ ಕಲಕಿದ್ದಳು. ಜೊತೆಗೆ, ನಾನೂ ಒಬ್ಬಳು ವಿಧವೆ ಎಂಬುದನ್ನೂ ನೆನಪಿಸಿದ್ದಳು.

ಆ ಹೊತ್ತಿಗೆ ಸರಿಯಾಗಿ 'ಅಫೀರಾ...' ಎಂದು ದೊಡ್ಡ ಒಡೆಯರು ಕರೆದಿದ್ದರು.

'ಬದುಕಿದೆಯಾ ಬಡಜೀವವೇ, ಎಂದುಕೊಳ್ಳುತ್ತಾ ದೊಡ್ಡದೊಂದು ಸಂಕಟದಿಂದ ಪಾರಾದವಳಂತೆ ಅವರತ್ತ ಧಾವಿಸಿದ್ದೆ.

'ಅವಳೇಕೆ ಅಳುತ್ತಿದ್ದಾಳೆ?' ಅವರೂ ನನ್ನ ಸಂಕಟವನ್ನು ಹೆಚ್ಚಿಸುವಂತಹ ಪ್ರಶ್ನೆಯನ್ನೇ ಕೇಳಿದ್ದರು.

ಹೇಳಿದೆ.

ಅವರು ಮೊದಲೇ ಬಲು ಉದಾರಿ. ಇನ್ನೊಬ್ಬರ ಕಷ್ಟವನ್ನು ಕಂಡಾಗ, ಕಷ್ಟ ಅನುಭವಿಸುತ್ತಿರುವವರಿಗಿಂತ ಹೆಚ್ಚು ಮರುಗುವ ಜೀವ. 'ಅಷ್ಟೇನಾ? ಅವಳನ್ನು ಕರೆದುಕೊಂಡು ಬಾ, ನನ್ನಿಂದಾಗುವ ಪ್ರಯತ್ನವನ್ನು ಮಾಡುವೆ. ಅಲ್ಲಾಹು ಮೆಚ್ಚುವ ಕೆಲಸವಿದು. ಪ್ರವಾದಿಯವರಲ್ಲಿ ಅವಳು ಏನನ್ನು ಬೇಡಿಕೊಳ್ಳುತ್ತಾಳೋ ಬೇಡಿಕೊಳ್ಳಲಿ. ನಿರ್ಧರಿಸುವ ಅಧಿಕಾರ ಪ್ರವಾದಿಯವರಿಗೆ ಸೇರಿದ್ದು.'

ದೊಡ್ಡ ಒಡೆಯರ ಆದೇಶವನ್ನು ನಾನು ಪಾಲಿಸಲೇಬೇಕಿತ್ತು; ಪಾಲಿಸಿದೆ.

ಜುವೈರಿಯಾಳನ್ನು ಕರೆದುಕೊಂಡು ಮನೆಯೊಳಗೆ ಕಾಲಿರಿಸುತ್ತಿದ್ದಾಗ, ಪ್ರವಾದಿಯವರ ಪಕ್ಕದಲ್ಲೇ ಕುಳಿತಿದ್ದ ಸಣ್ಣ ಒಡತಿಯ ಕಣ್ಣುಗಳಲ್ಲಿ ಸಾವಿರ ಪ್ರಶ್ನೆಗಳು ಕುಣಿಯುತ್ತಿರುವುದನ್ನು ಗಮನಿಸಿದ್ದೆ. ನಮ್ಮ ಬೆನ್ನ ಹಿಂದೆಯೇ ಅವರ ಅಬ್ಬನೂ ಒಳಬಂದಾಗ, ನನ್ನ ಅಸಹಾಯಕತೆ ಅವರಿಗೂ ಅರ್ಥವಾಗಿದ್ದಿರಬಹುದು. ಅಬ್ಬನನ್ನು ಕಂಡಕೂಡಲೇ ಎದ್ದುನಿಂತಿದ್ದರು.

'ಓ ಅಲ್ಲಾಹುವಿನ ಪ್ರವಾದಿಯೇ..' ಎಂಬ ಮಾತಿನ ಮೂಲಕವೇ ಜುವೈರಿಯಾ ತನ್ನ ಕಷ್ಟಗಳನ್ನು ನಿವೇದಿಸಿಕೊಂಡಿದ್ದಳು. ಅದನ್ನು ಕಡೆಗಣ್ಣಿನಿಂದ ಗಮನಿಸುತ್ತಿದ್ದ ಒಡತಿಯ ಕಣ್ಣುಗಳು ನಿಧಾನವಾಗಿ ಕರಗುತ್ತಿರುವುದನ್ನು ಕಂಡಾಗ ನನಗೆ ಕರುಳು ಕಿತ್ತು ಬರುವಂತಾಗಿತ್ತು.

'ನೀನು ಕುಳಿತುಕೊಳ್ಳು.' ಪ್ರವಾದಿಯವರು ಹೇಳಿದಾಗ, ಜುವೈರಿಯಾ ಅವರೆದುರು ಮೊಣಕಾಲು ಮಡಚಿ ಕುಳಿತಳು.

'ನೀನು ಈಗ ಬೇಡಿರುವುದಕ್ಕಿಂತ ಹೆಚ್ಚಿನದೇನನ್ನಾದರೂ ಬಯಸುತ್ತಿರುವೆಯಾ?' ಪ್ರವಾದಿ ಪ್ರಶ್ನಿಸಿದ್ದರು.

'ಓ ಸತ್ಯವಿಶ್ವಾಸಿಗಳ ಪ್ರವಾದಿಯೇ...' ಪ್ರವಾದಿಯವರು ನೀಡಿದ್ದ ಆಶ್ವಾಸನೆಯಿಂದ ಸಂತುಷ್ಟಳಾಗಿದ್ದ ಜುವೈರಿಯಾ, ಸಂಬೋಧನೆಯ ಧಾಟಿಯನ್ನೇ ಬದಲಿಸಿಕೊಂಡು, ತಾನು ಸತ್ಯವಿಶ್ವಾಸಿಯಾಗಲಿರುವ ಮುನ್ಸೂಚನೆಯನ್ನೇ ನೀಡಿದ್ದಳು!

'ತಮ್ಮಿಂದ ಇದನ್ನಲ್ಲದೆ, ಹೆಚ್ಚಿನದೇನನ್ನು ಬೇಡಲು ಅರ್ಹಳಿರುವೆ ನಾನು?' ಒಗಟಿನಂತೆಯೇ ಪಶ್ನಿಸಿದ್ದಳು ಜುವೈರಿಯಾ.

ಅದುವರೆಗೂ ಪ್ರವಾದಿಯವರ ಮುಖವನ್ನೇ ದಿಟ್ಟಿಸುತ್ತಾ, ಅಬ್ಬನ ಪಕ್ಕದಲ್ಲಿ ಗೋಡೆಗೊರಗಿ ನಿಂತಿದ್ದ ನನ್ನ ಸಣ್ಣ ಒಡತಿ, ನಿಧಾನವಾಗಿ ನಡೆದು ಜುವೈರಿಯಾಳ ಪಕ್ಕದಲ್ಲಿ ಕುಳಿತಾಗ ನನಗೆ ಗಾಬರಿಯಾಗಿತ್ತು. ಜುವೈರಿಯಾಳ ವಿರುದ್ಧದ ದ್ವೇಷದಿಂದ ಏನಾದರೂ ಅನಾಹುತ ಮಾಡಿಬಿಡುತ್ತಾಳೋ ಎಂದು ಆತಂಕಗೊಂಡಿದ್ದೆ!

ಆದರೆ, ಅಲ್ಲಿ ನಡೆದದ್ದೇ ಬೇರೆ.

'ನಿನ್ನ ಅಬ್ಬ ನಮ್ಮ ವಿರುದ್ಧ ಸೋತಿರಬಹುದು.' ಹೊಸ ಸಂದೇಶವೊಂದನ್ನು ಪ್ರಕಟಿಸುತ್ತಿರುವವಳಂತೆ ಗಂಭೀರವಾದ ಧ್ವನಿಯಲ್ಲಿ ನನ್ನ ಪುಟ್ಟ ಒಡತಿ ಹೇಳುತ್ತಿದ್ದಳು, 'ಅಲ್ಲಾಹುವಿನ ಕರುಣೆ ಅಪಾರ. ಅವನು ನಿನಗಾಗಿ ಬಲು ದೊಡ್ಡ ಬಹುಮಾನವೊಂದನ್ನು ನಿಗದಿಗೊಳಿಸಿರುತ್ತಾನೆ. ಆ ಮಹತ್ತರವಾದ ಪ್ರವಾದಿಪತ್ನಿಯೆಂಬ ಬಹುಮಾನವನ್ನು ಕೃತಜ್ಞತೆಯಿಂದ ಸ್ವೀಕರಿಸು. ಹಾಗೆ ಮಾಡುವುದರಿಂದ ನೀನು ಮಾತ್ರವಲ್ಲ, ನಿನ್ನ ಜೊತೆಗೆ ಒತ್ತೆಸೆರೆಯಾಳಾಗಿರುವ ಎಲ್ಲ ಸೋದರಿಯರೂ, ಎಲ್ಲ ಯೋಧರೂ ಯಾವುದೇ ರಕ್ತಪರಿಹಾರದ ಹಂಗಿಲ್ಲದೆ ಬಂಧಮುಕ್ತರಾಗುವರು. ನಮ್ಮ ಶತ್ರು ಕುರೈಶರ ಗೆಳೆಯರಾಗಿರುವ ನೀವೆಲ್ಲ ನಮ್ಮ ಗೆಳೆಯರಾಗುವಿರಿ. ಸತ್ಯವಿಶ್ವಾಸಿಗಳನ್ನು ರಕ್ಷಿಸುವ ನಮ್ಮ ಹೋರಾಟದಲ್ಲಿ ಜೊತೆಯಾಗುವಿರಿ.'

ಇನ್ನೂ ಹದಿನೈದರ ಹೊಸ್ತಿಲಲ್ಲಿರುವ ಸಣ್ಣ ಒಡತಿಯ ಮಾತುಗಳನ್ನು ಮೂಕ ವಿಸ್ಮಿತಳಾಗಿ ಆಲಿಸುತ್ತಿದ್ದ, ಇಪ್ಪತ್ತರ ಹೊಸಿಲು ದಾಟಿದ 'ಪ್ರವಾದಿಪತ್ನಿ'ಯಾಗಲಿರುವ ಹೆಣ್ಣಿನ ಕಣ್ಣುಗಳಲ್ಲಿ ಕೃತಜ್ಞತೆಯ ಮೊಗ್ಗುಗಳು ನಿಧಾನವಾಗಿ ಅರಳಲಾರಂಭಿಸಿದ್ದವು.





ನನ್ನ ಕಣ್ಣು, ಕಿವಿಗಳನ್ನು ನಂಬಲಾಗಲಿಲ್ಲ!

ಮುಂಜಾನೆ ಬಂದುಹೋಗಿದ್ದ ದೊಡ್ಡ ಒಡತಿಗೆ, ಪ್ರವಾದಿಪತ್ನಿಯ ಉಮ್ಮ ಎಂಬ ಗೌರವವನ್ನು ಉಳಿಸಿಕೊಟ್ಟಿದ್ದರು ನನ್ನ ಪುಟ್ಟ ಒಡತಿ.

–೪–

ಕೆಲವು ತಿಂಗಳುಗಳ ಬಳಿಕ ನಡೆದ, ಖೈಬರ್ ಯುದ್ಧದಲ್ಲಿ ಒತ್ತೆಸೆರೆಯಾಳಾದ ಸಫಿಯ್ಯಾರನ್ನು ಪ್ರವಾದಿಯವರು ಮದುವೆಯಾಗಿ ಕರೆದುಕೊಂಡು ಬಂದಾಗಲೂ, ಸಣ್ಣ ಒಡತಿ ಬಾಯಿಗೆ ಬೀಗ ಜಡಿದು ಕುಳಿತಿದ್ದರು. ಆದರೆ, ಝೈನಬರು ಮಾತ್ರ ತನ್ನ ಅಸಹನೆಯನ್ನು ಬಹಿರಂಗವಾಗಿಯೇ ಪ್ರಕಟಿಸಿದ್ದರು. ಪಾಪ! ಅದರಲ್ಲಿ ಸಫಿಯ್ಯಾರ ಯಾವ ತಪ್ಪೂ ಇದ್ದಿರಲಿಲ್ಲ.

ಪ್ರವಾದಿಯವರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಯನ್ನು ಮುರಿದು, ಕಂದಕ ಯುದ್ಧದಲ್ಲಿ ಮಕ್ಕಾದವರ ಜೊತೆ ಕೈಜೋಡಿಸಿ ಸೋತಿದ್ದ ನದೀರ್ ಗೋತ್ರದ ಯೆಹೂದೀಯರು, ಜೀವಭಯದಿಂದ ಮದೀನಾದ ಉತ್ತರಕ್ಕೆ ನೂರೈವತ್ತು ಮೈಲಿಗಳಷ್ಟು ದೂರದ ಖೈಬರ್ ಕಣಿವೆಯಲ್ಲಿರುವ ತಮ್ಮ ಬಂಧುಗಳ ಆಶ್ರಯದಲ್ಲಿ ಅವಿತುಕೊಂಡಿದ್ದರು. ಮಾತ್ರವಲ್ಲ, ಮಿಕ್ಕುಳಿದ ಎಲ್ಲ ಯೆಹೂದೀ ಗೆಳೆಯ ಗೋತ್ರಗಳನ್ನು ಜೊತೆಗೂಡಿಸಿಕೊಂಡು, ಮದೀನಾದ ಮೇಲೆ ಬಲವಾದ ಧಾಳಿ ನಡೆಸಲೂ ಹೊಂಚು ಹಾಕುತ್ತಿದ್ದರು. ಗೂಢಚಾರರ ಮೂಲಕ ಈ ಎಲ್ಲ ಮಾಹಿತಿಗಳೂ ಪ್ರವಾದಿಯವರಿಗೆ ತಲುಪಿದ್ದವು.

ಶತ್ರುಸೇನೆ ಮದೀನಾವನ್ನು ತಲುಪುವ ಮೊದಲೇ ತಡೆಯದಿದ್ದರೆ, ಮದೀನಾದ ಅಮಾಯಕ ನಾಗರಿಕರ ಪ್ರಾಣಕ್ಕೂ ಕುತ್ತುಬರುವುದೆಂಬ ಯೋಚನೆಯಿಂದ ಪ್ರವಾದಿಯವರು ಸುಮಾರು ಎಂಟುನೂರು ಯೋಧರೊಂದಿಗೆ ಖೈಬರ್ ಕಣಿವೆಯತ್ತ ಧಾವಿಸಿದ್ದರು.

ಬಲವಾಗಿ ನಿರ್ಮಿಸಲಾಗಿದ್ದ ಆರು ಕಲ್ಲಿನ ಕೋಟೆಗಳ ಮರೆಯಿಂದಲೇ ಚಿಮ್ಮಿ ಬರುತ್ತಿದ್ದ ಬಾಣಗಳ ಮಳೆಯನ್ನು ಎದುರಿಸಿ ನಡೆಸಿದ ಇಪ್ಪತ್ತು ದಿನಗಳ ಹೋರಾಟದಲ್ಲಿ, ಆ ಎಲ್ಲ ಕೋಟೆಗಳೂ ನಮ್ಮವರ ವಶವಾಗಿದ್ದವು. ಹಲವು ಯೆಹೂದೀ ನಾಯಕರು ಹತರಾಗಿದ್ದರು. ಹಲವಾರು ಯೋಧರು, ಯೋಧ ಕುಟುಂಬಗಳು ಒತ್ತೆಸೆರೆಯಾಳಾಗಿದ್ದರು. ತಮ್ಮ ಕೋಟೆಯ ರಕ್ಷಣಾಬಾಗಿಲೇ ಕವುಚಿ ಮಲಗಿರುವುದನ್ನು ಕಂಡ ಯೆಹೂದೀಯರು ಹತಾಶರಾಗಿ ಪ್ರವಾದಿಯವರಿಗೆ ಸಂಧಾನದ ಸಂದೇಶ ರವಾನಿಸಿದ್ದರು.

ಸಂಧಾನದ ಮಾತುಗಳು ಆರಂಭವಾಗುತ್ತವೆ.

ಅಲ್ಲಿ ನೆಲೆಸಿರುವ ಯೆಹೂದೀಯರು, ತಮ್ಮ ವಾರ್ಷಿಕ ಆದಾಯದ ಅರ್ಧ ಪಾಲನ್ನು ಸತ್ಯವಿಶ್ವಾಸಿಗಳಿಗೆ ಕಪ್ಪವಾಗಿ ಸಲ್ಲಿಸಬೇಕೆಂಬ ನಿಬಂಧನೆಯೊಂದಿಗೆ ಒಡಂಬಡಿಕೆಯೂ ಆಗುತ್ತದೆ.

ಒತ್ತೆ ಸೆರೆಯಾಳಾಗಿದ್ದವರಲ್ಲಿ, ಹತರಾಗಿದ್ದ ಬನೂ ನದೀರ್ ಗೋತ್ರದ ನಾಯಕ ಹುವಯ್ಯಾರ ಮಗಳು, ಇಪ್ಪತ್ತರ ವಯಸ್ಸಿನ ಸಫಿಯ್ಯಾ ಕೂಡ ಇದ್ದಳು. ಅವಳಿಗೆ ಅದಾಗಲೇ ಎರಡು ಮದುವೆಗಳಾಗಿದ್ದವು. ಮೊದಲು ಸಲಾಂ ಬಿನ್ ಮಿಶ್ಕಾಮ್ ಎಂಬವನ ಜೊತೆ ಮದುವೆಯಾಗಿ, ಆತನಿಂದ ವಿಚ್ಛೇದನಗೊಂಡ ಬಳಿಕ ಬನೂ ನದೀರ್ ಜನಾಂಗದ ಕೋಶಾಧಿಕಾರಿ ಕಿನಾನ ಬಿನ್ ಅಲ್ ರಬೀ ಎಂಬವನನ್ನು ಮದುವೆಯಾಗಿದ್ದರೂ ಸಂಸಾರದಲ್ಲಿ ಹೊಂದಾಣಿಕೆಯಾಗಿದ್ದಿರಲಿಲ್ಲವಂತೆ. ಅವಳಿಗೊಂದು ರಾತ್ರಿ ಬಿದ್ದ ಕನಸಿನಲ್ಲಿ, ಆಗಸದಿಂದಿಳಿದು ಬಂದ ಚಂದ್ರ ಅವಳ ತೊಡೆಯಲ್ಲಿ ಮಲಗಿಕೊಂಡಿದ್ದನಂತೆ. ಅದನ್ನು ಹಾಗೆಯೇ ಗಂಡನಿಗೂ ತಿಳಿಸಿ ಬಿಟ್ಟಿದ್ದಳು. ತನ್ನ ಹೆಂಡತಿ ಗುಟ್ಟಾಗಿ ಪ್ರವಾದಿಯವರನ್ನೇ ಪ್ರೀತಿಸುತ್ತಿದ್ದಾಳೆಂದು ಅರ್ಥ ಕಲ್ಪಿಸಿ ಸಿಟ್ಟಿಗೆದ್ದ ಕಿನಾನಾ, ಅವಳ ಮುಖಕ್ಕೆ ಬಲವಾಗಿ ಹೊಡೆದಿದ್ದನಂತೆ. ಖೈಬರ್ ಯುದ್ಧದಲ್ಲಿ ಆ ಕಿನಾನಾನೂ ಹತನಾಗಿದ್ದ.

ನನ್ನ ಗುರುತಿನ ಸೈನಿಕನೊಬ್ಬ ಆ ದಿನ ಅಲ್ಲಿ ಏನೆಲ್ಲ ನಡೆಯಿತು ಎಂಬುದನ್ನು ವೀರಾವೇಷದಿಂದಲೇ ವಿವರಿಸಿದ್ದ. ಸೆರೆಸಿಕ್ಕ ಶತ್ರುಸೇನೆಯ ಮಹಿಳೆಯರನ್ನು, ಸೆರೆಹಿಡಿದ ಯೋಧರೇ ಮದುವೆಯಾಗುವುದು ಯುದ್ಧ ನಿಯಮಗಳಲ್ಲೊಂದು. ಅಂತೆಯೇ, ಸಫಿಯಾಳನ್ನು ಮದುವೆಯಾಗಲು ಅನುಮತಿ ನೀಡುವಂತೆ ಸೈನಿಕನೊಬ್ಬ ಪ್ರವಾದಿಯವರನ್ನು ಯಾಚಿಸಿದಾಗ, ಅವರೂ 'ಹೂಂ' ಎಂದಿದ್ದರಂತೆ.

ಆದರೆ, ಅಲ್ಲೇ ಇದ್ದ ಅಲೀಯವರು ಅದನ್ನು ನಯವಾಗಿಯೇ ವಿರೋಧಿಸಿದ್ದರಂತೆ.

'ಪ್ರವಾದಿಯವರು ದಯವಿಟ್ಟು ನನ್ನ ಮಾತನ್ನು ಆಲಿಸಬೇಕು.' ಎಂದು ವಿನಯದಿಂದಲೇ ಮಾತು ಆರಂಭಿಸಿದ್ದರಾದರೂ, ಅವರ ಮಾತು ಒತ್ತಾಯದಂತೆಯೇ ಇತ್ತಂತೆ.

'ಬನೂ ನದೀರ್ ಗೋತ್ರದ ಗೌರವಾನ್ವಿತ ನಾಯಕ ಹುವಯ್ಯಾರ ಮಗಳನ್ನು ಸಾಮಾನ್ಯ ಸೈನಿಕನೊಬ್ಬನಿಗೆ ಮದುವೆ ಮಾಡಿಸುವುದು ಸಮಂಜಸವಲ್ಲ ಎಂಬುದು ನನ್ನ ಅಭಿಪ್ರಾಯ. ಅರಮನೆಯ ಸುಖದಲ್ಲಿ ಬೆಳೆದವಳು ಅವಳು. ಇದೀಗ ಅವಳು ತನ್ನ ಹೆತ್ತವರನ್ನು, ತನ್ನ ಕುಟುಂಬವನ್ನು, ತನ್ನ ಗೆಳೆಯ ಗೆಳತಿಯರನ್ನು, ತನ್ನ ದೇಶವನ್ನು ಕಳೆದುಕೊಂಡಿರುವಳು. ಅವಳಿಗೆ ತನ್ನವರೆಂಬವರು ಯಾರೂ ಈಗ ಉಳಿದಿಲ್ಲ. ಅವಳೀಗ ನಿರ್ಗತಿಕಳು. ನಾನು ಅರಿತಂತೆ ಸತ್ಯವಿಶ್ವಾಸಿಯಾಗಲು ಆಕೆ ಸಿದ್ಧಳಿರುವಳು. ಆದ್ದರಿಂದ ಪ್ರವಾದಿಯವರೇ ಸಫಿಯ್ಯಾಳನ್ನು ಮದುವೆ ಮಾಡಿ





ಕೊಳ್ಳುವುದು ಸೂಕ್ತ ಎಂಬುದು ನನ್ನ ಪ್ರಾರ್ಥನೆ. ಅಷ್ಟು ಮಾತ್ರವೇ ಅಲ್ಲ, ಯೆಹೂದೀ ಗೋತ್ರದ ಸಫಿಯ್ಯಾಳನ್ನು ನಮ್ಮ ಪ್ರವಾದಿಯವರು ಮದುವೆಯಾದರೆ, ಮಿಕ್ಕುಳಿದ ಯೆಹೂದೀ ಗೋತ್ರಗಳೂ ನಮ್ಮ ಗೆಳೆತನಕ್ಕೆ ಖಂಡಿತವಾಗಿಯೂ ಕೈಚಾಚುತ್ತವೆ. ಯುದ್ಧವಿಲ್ಲದೆಯೇ ನಾವು ಎಲ್ಲ ಯೆಹೂದೀಯರನ್ನು ಗೆಲ್ಲುವಲ್ಲಿ ಇದೊಂದು ಉತ್ತಮ ರಾಜಕೀಯ ತಂತ್ರವೂ ಆಗುವುದು' ಎಂದಿದ್ದರಂತೆ.

ಅಲೀಯವರ ಚಾಣಾಕ್ಷ ಮಾತುಗಳನ್ನು ಸಹವರ್ತಿಗಳೆಲ್ಲರೂ ಸರ್ವಾನುಮತದಿಂದ ಅನುಮೋದಿಸಿದ್ದರಂತೆ. ಅವರೆಲ್ಲರ ಒತ್ತಾಯಕ್ಕೆ ಇಲ್ಲವೆನ್ನಲಾಗದೆ ಪ್ರವಾದಿಯವರೂ ಕೊನೆಯಲ್ಲಿ ತಮ್ಮ ಸಮ್ಮತಿಯನ್ನು ಸೂಚಿಸಿದ್ದರಂತೆ. ಸಫಿಯ್ಯಾಳಿಗೆ ಅಂತಿಮಸತ್ಯವನ್ನು ಬೋಧಿಸಿದ ಬಳಿಕ ಪ್ರವಾದಿಯವರು ಆಕೆಗೆ, 'ಪ್ರವಾದಿಪತ್ನಿ' ಎಂಬ ಗೌರವವನ್ನು ನೀಡಿದ್ದರು.

ಆದರೆ, ಸಫಿಯ್ಯಾರಿಗೆ ಪ್ರವಾದಿಪತ್ನಿ ಅನ್ನಿಸಿಕೊಳ್ಳುವ ಯೋಗ್ಯತೆಯೇ ಇಲ್ಲ ಎಂಬುದು ಝೈನಬರ ವಾದ. ಅದಕ್ಕೆ ಝೈನಬರು ನೀಡುತ್ತಿದ್ದ ಕಾರಣ, ಆಕೆ ಯೆಹೂದೀಯೊಬ್ಬಳ ಮಗಳು ಎಂಬುದು.

ಸಣ್ಣ ಒಡತಿ ಪ್ರತಿಷ್ಠಿತ ವಂಶಸ್ಥಳು ಮಾತ್ರವಲ್ಲ, ಪ್ರವಾದಿಯವರ ಸಂಗಾತಿಗಳಲ್ಲಿ ಮೊತ್ತ ಮೊದಲ ಗೌರವಕ್ಕೆ ಪಾತ್ರರಾದ ಬಾಲ್ಯದ ಗೆಳೆಯ ಅಬೂಬಕರರ ಮಗಳು. ಸಣ್ಣ ಒಡತಿಯನ್ನು ಪ್ರವಾದಿಯವರ 'ಪ್ರಿಯಪತ್ನಿ' ಎಂದು ಊರವರೆಲ್ಲ ಕೊಂಡಾಡುತ್ತಿರುವುದನ್ನು ಝೈನಬರಿಗೆ ಸಹಿಸಿಕೊಳ್ಳಲಾಗುತ್ತಿರಲಿಲ್ಲ.

ಅಚ್ಚರಿಯ ಸಂಗತಿಯೆಂದರೆ, ಯಾವ ಜುವೈರಿಯಾ ತಮಗೆ ಸವತಿಯಾಗಿ ಬರಲಿದ್ದಾರೆಂಬುದನ್ನು ಅರಿತು, ಹಫ್ಸಾರನ್ನು ಕರೆದುಕೊಂಡು, ಸಣ್ಣ ಒಡತಿಯ ಮನೆಗೆ ಬಂದು ತನ್ನ ನೋವನ್ನೆಲ್ಲ ಹಂಚಿಕೊಂಡಿದ್ದರೋ, ಅದೇ ಜುವೈರಿಯಾ ಮುಂದಿನ ಕೆಲವೇ ದಿನಗಳಲ್ಲಿ ಝೈನಬರ ಅಂತರಂಗದ ಗೆಳತಿಯಾಗಿಬಿಟ್ಟಿದ್ದರು! ಅಷ್ಟು ಮಾತ್ರವೇ ಅಲ್ಲ. ಮೊದಮೊದಲೆಲ್ಲ ಝೈನಬರಿಂದ ಒತ್ತೆಯಾಳು ಎಂದೇ ಮೂದಲಿಕೆಗೆ ಗುರಿಯಾಗುತ್ತಿದ್ದ ಸಫಿಯ್ಯಾರು ಕೂಡಾ, ದಿನಕಳೆದಂತೆ ಝೈನಬರ ನೆರಳಾಗಿಬಿಟ್ಟಿದ್ದರು!

* * *

*'ಮುಂದಕ್ಕೆ ಸಾಗೋಣವೆ?' ಅರ್ಷದ್ ಪ್ರಶ್ನಿಸಿದ್ದ.*

*ಗೆಳೆಯ ಪ್ರಶ್ನಿಸಿದಾಗ ಮಂಕಾಗಿ ನಿಂತಿದ್ದ ನಾನು, 'ಹೂಂ' ಎಂದುಬಿಟ್ಟಿದ್ದೆ.*

*'ಏನೂ ಪ್ರಶ್ನೆಗಳಿಲ್ಲವೆ?'*

*'ಒಂದು ಪ್ರಶ್ನೆಯಿದೆ ಗೆಳೆಯಾ. ಪ್ರವಾದಿಯವರ ಎಲ್ಲ ಮದುವೆಗಳ ಹಿಂದೆಯೂ ಅವರ ಅಳಿಯ ಅಲೀಯವರ ತಂತ್ರವಿದ್ದಂತೆ ಕಾಣಿಸುತ್ತಿದೆ. ಅವನ್ನೆಲ್ಲ ಕೇವಲ ರಾಜಕೀಯ ಕಾರಣಕ್ಕೆ ಅವರು ಮಾಡುತ್ತಿದ್ದರೋ, ಅಥವಾ ಆ ಮದುವೆ ತಂತ್ರಗಳ ಮರೆಯಲ್ಲಿ, ನನ್ನ ಪ್ರೀತಿಯ ಉಮ್ಮಾ ಆಯಿಷಾರನ್ನು ನೋಯಿಸುವ ಕುತಂತ್ರವೂ ಇರಬಹುದೆ? ನನಗಂತೂ ಅನುಮಾನವಿದೆ. ಒಂದು ಪ್ರಕರಣದಲ್ಲಂತೂ ಅವರು, ಆಯಿಷಾರನ್ನು ವಿಚ್ಛೇದಿಸಿಬಿಡಿ ಯೆಂದು ಪ್ರವಾದಿಯವರಿಗೆ ಸಲಹೆ ನೀಡುವ ಮಟ್ಟಕ್ಕೂ ಹೋಗಿದ್ದರು. ಯಾಕಿದ್ದಿರಬಹುದು? ಆಯಿಷಾರನ್ನು ಪ್ರವಾದಿಯವರು ಮದುವೆಯಾಗಿರುವುದೇ ಅವರಿಗೆ ಇಷ್ಟವಿದ್ದಿರಲಿಲ್ಲವೆ?*

*ಪ್ರವಾದಿಯವರು ತಮ್ಮ ಬಾಲ್ಯದ ಗೆಳೆಯನಾಗಿರುವ ಆಯಿಷಾರ ಅಬ್ಬ ಅಬೂಬಕರರನ್ನು ತಮ್ಮ ಅಂತರಂಗದ ಗೆಳೆಯನಂತೆ ಕಾಣುತ್ತಾ, ಯಾವಾಗಲೂ ತಮ್ಮ ಬಗಲಲ್ಲೇ ಇರಿಸಿಕೊಳ್ಳುತ್ತಿರುವ ಬಗ್ಗೆ ಅಲೀಯವರಿಗೆ ಅಸಹನೆಯಿತ್ತೆ? ಮುಂದೆಂದಾದರೊಂದು ದಿನ ಪ್ರವಾದಿಯವರ ಉತ್ತರಾಧಿಕಾರಿ ಯಾರೆಂಬ ಪ್ರಶ್ನೆ ಎದುರಾದಾಗ, ಅಬೂಬಕರರು ತನಗೆ ಮಗ್ಗುಲ ಮುಳ್ಳಾಗಬಹುದೆಂಬ ಅಸೂಯೆ ಇದ್ದಿರಬಹುದೆ? ಆ ಸಿಟ್ಟನ್ನು ಆಯಿಷಾರನ್ನು ಹಿಂಸಿಸುವ ಮೂಲಕ ತೀರಿಸಿಕೊಳ್ಳುತ್ತಿದ್ದಾರೆಯೆ?'*

*'ನಿನಗೆ ಎಲ್ಲದರಲ್ಲೂ ಆತುರ ಜಾಸ್ತಿ ಗೆಳೆಯಾ. ನಿನ್ನೆಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಗುವ ಸಂದರ್ಭಗಳು ಬಹಳ ಹತ್ತಿರದಲ್ಲಿವೆ. ಸ್ವಲ್ಪ ತಾಳ್ಮೆವಹಿಸು. ನಾವೀಗ ಇಲ್ಲಿಂದ ಬಲುದೂರದಲ್ಲಿರುವ ಅಬಿಸೀನಿಯಾಕ್ಕೆ ಹೋಗಿ ಬರುವ, ಬಾ..' ಎಂದ ಅರ್ಷದ್.*

*ನಾವು ಹೊರಟೆವು.*

❐



## ಸ್ವಗತ – ಹದಿನಾಲ್ಕು

## ರಮ್ಲ ಬಿಂತಿ ಅಬೂಸುಫ್ಯಾನ್

–೧–

ಮದುವೆಯಾದ ಆರು ವರ್ಷಗಳ ಬಳಿಕ ಗಂಡನ ಮುಖವನ್ನು ಕಾಣಲಿರುವ ಜಗತ್ತಿನ ಮೊತ್ತಮೊದಲ ಮದುವಣಗಿತ್ತಿ ನಾನು!

ಎರಡು ಪುಟ್ಟ ಹಾಯಿ ದೋಣಿಗಳಲ್ಲಿ ನಾವು ಮೂವತ್ತು ನಿರಾಶ್ರಿತ ಕುಟುಂಬಗಳು. ಸುಮಾರು ಹನ್ನೆರಡು ವರ್ಷಗಳಷ್ಟು ಕಾಲ ನಮ್ಮನ್ನು ಮಗುವಿನಂತೆ ನೋಡಿಕೊಂಡಿದ್ದ ಆಫ್ರಿಕಾದ ಅಬಿಸೀನಿಯಾಕ್ಕೆ ಮತ್ತು ಆ ದೇಶದ ಮಹಾರಾಜ ನಜ್ಜಾಶೀಯವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಾ ನಮ್ಮ ಜನ್ಮಭೂಮಿಗೆ ಮರಳುತ್ತಿದ್ದೆವು.

ನಮ್ಮಲ್ಲಿ ಕೆಲವರಿಗೆ ಮಕ್ಕಾದಲ್ಲಿ ಬಂಧುಗಳಿದ್ದರೆ, ಕೆಲವರಿಗೆ ಮದೀನಾದಲ್ಲಿ. ನನಗೆ ಎರಡೂ ಕಡೆಗಳಲ್ಲೂ ಬಂಧುಗಳಿದ್ದರು.

ಮಕ್ಕಾದಲ್ಲಿ ಜನ್ಮ ಕೊಟ್ಟ ಅಬ್ಬ ಅಬೂಸುಫ್ಯಾನರು. ಮದೀನಾದಲ್ಲಿ ನನ್ನ ಗಂಡ ಪ್ರವಾದಿಯವರು.

ಅಲ್ಲಾಹುವಿನ ಉದ್ದೇಶವೇ ಅರ್ಥವಾಗುವುದಿಲ್ಲ. ಆರು ವರ್ಷಗಳಷ್ಟು ಹಿಂದೆಯೇ ಪ್ರವಾದಿಪತ್ನಿ ಎಂಬ ಬಲುದೊಡ್ಡ ಗೌರವವನ್ನು ಅನುಗ್ರಹಿಸಿದ್ದವನೂ ಅವನೇ, ಕಳೆದ ಹನ್ನೆರಡು ವರ್ಷಗಳಿಂದಲೂ ಪ್ರವಾದಿಯವರ ಮುಖವನ್ನು ನನ್ನಿಂದ ಅಡಗಿಸಿಟ್ಟಿದ್ದವನೂ ಅವನೇ.

ಮಕ್ಕಾದ ಕುರೈಶ್ ಗೋತ್ರದ ಸರದಾರರೆಲ್ಲರ ನಾಯಕ ನನ್ನಬ್ಬ.

ಆದರೆ, ಮದುವೆಯಾಗುತ್ತಲೇ ನಾನು ಅವರ ಕಣ್ಣಿಗೆ ಮುಳ್ಳಾಗಿದ್ದೆ.

ಇದಕ್ಕೆ ಅವರಿಗಿದ್ದ ಕಾರಣ; ನನ್ನ ಗಂಡ ಉಬೈದುಲ್ಲಾರೊಂದಿಗೆ ನಾನೂ ಸತ್ಯವಿಶ್ವಾಸಿಯಾದದ್ದು.

ಆ ಕಾರಣದಿಂದ ಮಕ್ಕಾದಲ್ಲಿ ಬದುಕು ಮುಂದುವರಿಸಲು ಸಾಧ್ಯವೇ ಆಗದಂತಹ ಭಯಾನಕ ಸ್ಥಿತಿಗೆ ತಲುಪಿದ್ದೆವು. ಯಾವುದೇ ಕ್ಷಣದಲ್ಲೂ ನನ್ನಬ್ಬನ ಪಡೆಯ ಖಡ್ಗಗಳಿಗೆ ನಾವಿಬ್ಬರೂ ಬಲಿಯಾಗುವ ಅಪಾಯವಿತ್ತು. ಇದನ್ನರಿತ ಪ್ರವಾದಿಯವರು ನಮ್ಮಿಬ್ಬರನ್ನೂ ಅಬಿಸೀನಿಯಾಕ್ಕೆ ವಲಸೆ ಹೋಗಲು ಸಲಹೆ ನೀಡಿದ್ದರು. ತೋಳಗಳಂತೆ ಕೊಲ್ಲಲು ಹೊಂಚುಹಾಕುತ್ತಿದ್ದ ಅಬ್ಬನ ಗೂಂಡಾ ಪಡೆಯ ಕಣ್ಣುತಪ್ಪಿಸಿ ಸಾವಿರಾರು ಮೈಲಿ ದೂರದ ಊರಿಗೆ ಬಂದು ಜೀವ ಉಳಿಸಿಕೊಂಡಿದ್ದೆವು.

ಅವೆಲ್ಲವನ್ನೂ ನೆನಪಿಸಿಕೊಂಡರೆ ಕೆಟ್ಟ ಕನಸನ್ನು ಕಂಡವಳಂತೆ ಬೆಚ್ಚಿಬೀಳುತ್ತಿದ್ದೆ. ಪ್ರವಾದಿಯವರ ಮೇಲೆ ಅಭಿಮಾನವಿರಿಸಿದ್ದ ಅಬಿಸೀನಿಯಾದ ಮಹಾರಾಜ ನಜ್ಜಾಶೀಯವರು ನಮ್ಮನ್ನು ಪ್ರೀತಿಯಿಂದಲೇ ಸ್ವಾಗತಿಸಿದ್ದರು. ಹನ್ನೆರಡು ವರ್ಷಗಳಿಂದಲೂ ಕಣ್ಣುರೆಪ್ಪೆಗಳಂತೆ ಕಾಪಾಡಿದ್ದರು.

'ನಾಳೆ ಸಂಜೆಯ ಹೊತ್ತಿಗೆ ಅರಮನೆಗೆ ಬಂದು ಕಾಣುವಂತೆ ಮಹಾರಾಜರು ಹೇಳಿಕೆ ಕಳುಹಿಸಿದ್ದಾರೆ' ಎಂದು ದಾಸಿ ಹೇಳಿದ್ದಾಗ ಗಾಬರಿಯೇ ಆಗಿತ್ತು.

ಆರು ವರ್ಷಗಳ ಹಿಂದಿನ ಮಾತು ಅದು. ಗಂಡ ಉಬೈದುಲ್ಲಾ ತೀರಿಕೊಂಡು ಆರೇಳು ತಿಂಗಳಾಗಿದ್ದಿರಬಹುದು. ಮಕ್ಕಾದಿಂದ ಬಹಿಷ್ಕೃತರಾಗಿ ಸಾವಿರಾರು ಮೈಲಿ ದೂರದ ಈ ಊರಲ್ಲಿ ನೆಲೆಸಿದ ನನಗೆ, ಈ ರೀತಿಯಲ್ಲಿ ಎಂದೂ ಮಹಾರಾಜರು ಹೇಳಿಕೆ ಕಳುಹಿಸಿದವರಲ್ಲ. ಆರಂಭದ ದಿನಗಳಲ್ಲಿ ಒಂದೆರಡು ಸಲ ಅರಮನೆಗೆ ಹೋಗಿ ಬಂದಿರುವುದನ್ನು ಮರೆತರೆ, ಆ ನಂತರದ ದಿನಗಳಲ್ಲಿ ಮಹಾರಾಜರನ್ನು ವರ್ಷದಲ್ಲಿ ಒಂದೆರಡು ಬಾರಿ ದೂರದಿಂದ ಕಂಡಿದ್ದರೆ ಅದೇ ಹೆಚ್ಚು. ಅವರನ್ನು ಆಗಾಗ್ಗೆ ಕಂಡು ಸಹಾಯ ಬೇಡುವ ಅಗತ್ಯವೂ ಬೀಳದಂತೆ ನಮ್ಮ ಅಗತ್ಯಗಳನ್ನು ಪೂರೈಸುತ್ತಿದ್ದ ಬಲುದೊಡ್ಡ ಔದಾರ್ಯ ಅವರದ್ದು.

ಅರಮನೆಗೆ ಕಾಲಿರಿಸದೆ ಏನಿಲ್ಲವೆಂದರೂ ಹತ್ತಿರ ಹತ್ತಿರ ವರ್ಷವೇ ಆಗಿತ್ತು. ಅದರಲ್ಲಿ, ನಾಲ್ಕು ತಿಂಗಳ ನನ್ನ ಇದ್ದತ್ ಅವಧಿಯೂ ಸೇರಿತ್ತು. ನನ್ನ ಗಂಡನನ್ನು ಕೊಂದದ್ದು ಶತ್ರುಮನುಷ್ಯರಲ್ಲ. ಮನುಷ್ಯರ ಶತ್ರುಗಳಾದ ಕುಡಿತ. ಮದ್ಯ ಕುಡಿಯ ಬೇಕು ಎಂಬೊಂದೇ ಉದ್ದೇಶದಿಂದ ಕ್ರೈಸ್ತರಾಗಿ ಮತಾಂತರವಾಗಿದ್ದರು ಉಬೈದುಲ್ಲಾ. ಸತ್ಯವಿಶ್ವಾಸಿನಿಯಾಗಿರುವ ನಾನು ಅವರೊಂದಿಗೆ ಸಂಸಾರ ಮುಂದುವರಿಸು ವಂತೆಯೂ ಇರಲಿಲ್ಲ. ಎರಡು ವರ್ಷದ ಮಗಳು ಹಬೀಬಾಳನ್ನು ಕರೆದುಕೊಂಡು ಗಂಡನಿಂದ ದೂರವಾಗಿದ್ದೆ. ಅದೇ ಕೊರಗಿನಿಂದ ಉಬೈದುಲ್ಲಾ ಕುಡಿದೂ ಕುಡಿದೂ ತೀರಿಕೊಂಡಿದ್ದರು. ಯಾವನೇ ಗಂಡಿನ ಆಸರೆಯಿಲ್ಲದ ನಾನು ಒಂಟಿಯಾಗಿದ್ದೆ.

ಸಂಜೆಯಾಗುತ್ತಿದ್ದಂತೆಯೇ ಇದ್ದುದರಲ್ಲಿ ಒಳ್ಳೆಯ ಉಡುಪು ಧರಿಸಿಕೊಂಡು ಅರಮನೆಗೆ ಹೋಗಿದ್ದೆ.





ಅರಮನೆಯ ಬಾಗಿಲಲ್ಲೇ ಗುರುತಿಸಿದ್ದ ಕಾವಲುಭಟರು, ನನ್ನನ್ನು ನೇರವಾಗಿ ನಜ್ಜಾಶೀ ಮಹಾರಾಜರ ಖಾಸಗಿ ಕೋಣೆಗೆ ಕರೆದುಕೊಂಡು ಹೋದಾಗ ಗಲಿಬಿಲಿಯಾಗಿತ್ತು. ಮಹಾರಾಜರಿಗೆ ವಂದಿಸಿದ ನಾನು, 'ನನ್ನನ್ನು ಬರಹೇಳಿದರಂತೆ?' ಎಂದಿದ್ದೆ.

'ಹೌದು. ಹೇಗಿದ್ದೀಯಾ ರಮ್ಲ?' ಪ್ರೀತಿಯಿಂದಲೇ ಸ್ವಾಗತಿಸಿದ್ದ ಮಹಾರಾಜರು, 'ನಿನ್ನ ಗಂಡ ತೀರಿಹೋದದ್ದು ತಿಳಿದು ಬಹಳ ನೋವಾಯಿತು. ಎಲ್ಲವೂ ದೇವನ ಇಚ್ಛೆ. ನಾವೆಲ್ಲ ಅವನ ಆಟದ ಗೊಂಬೆಗಳು' ಎಂದ ಮಹಾರಾಜರು ನನ್ನ ಮುಖವನ್ನು ಸ್ವಲ್ಪ ಹೊತ್ತು ಹೊಸದಾಗಿ ಅಳೆಯುವವರಂತೆ ದಿಟ್ಟಿಸಿದ್ದರು. ಮುಜುಗರದಿಂದ ನಾನು ತಲೆ ಬಾಗಿಸಿದ್ದೆ.

'ಮುಂದೇನು ಮಾಡಬೇಕೆಂದು ಯೋಚಿಸಿರುವೆ?' ಇದ್ದಕ್ಕಿದ್ದಂತೆ ಪ್ರಶ್ನಿಸಿದ್ದರು.

ಮುಂದೇನು ಮಾಡಬೇಕೆಂಬುದನ್ನು ನಾನು ಯೋಚಿಸಿದ್ದಿರಲೇ ಇಲ್ಲ. ಸರಕಾರದ ವತಿಯಿಂದ ಸಿಗುತ್ತಿದ್ದ ಸಣ್ಣ ಮೊತ್ತವೇ ನನಗೆ ಆಧಾರ. ಆದರೆ, ಅದೊಂದನ್ನೇ ನಂಬಿ ಕೊಂಡು, ಹೆಚ್ಚು ಕಾಲ ಬದುಕು ಮುಂದುವರಿಸಲಾಗುವುದಿಲ್ಲವೆಂಬ ಅಳುಕೂ ಇತ್ತು. ಸೊಂಟದೆತ್ತರ ಬೆಳೆದಿರುವ ಮಗಳು, ಕೆಲವೇ ವರ್ಷಗಳಲ್ಲಿ ಕುತ್ತಿಗೆಗೆ ಬರುವವಳಿದ್ದಳು.

'ನನ್ನ ದೇಶದಲ್ಲೇ ಉಳಿಯಬಯಸುತ್ತೀಯಾದರೆ ನಿನ್ನನ್ನು ಪಾಲಿಸುವ ಹೊಣೆಯನ್ನು ಸರಕಾರ ವಹಿಸಿಕೊಳ್ಳುವುದು. ಅಥವಾ ಮಕ್ಕಾಕ್ಕೆ ನೀನು ಮರಳುವು ದಾದರೂ ಅದಕ್ಕೆ ಬೇಕಾದ ಏರ್ಪಾಡು ಮಾಡುವುದು. ನಿನ್ನ ನಿರ್ಧಾರ ಏನು?'

ಅವರ ನೇರ ಪ್ರಶ್ನೆಗೆ ನಾನು ಗಲಿಬಿಲಿಗೊಂಡಿದ್ದೆ. ಮಾತು ಮರೆತವರಂತೆ ಸುಮ್ಮನೆ ನಿಂತುಬಿಟ್ಟೆ.

'ಇನ್ನೊಂದು ಮದುವೆಯಾಗುವ ಯೋಚನೆಯೇನಾದರೂ ಇದೆಯೆ?'

ನಾನು ಬೆಚ್ಚಿಬಿದ್ದಿದ್ದೆ! ನನಗೆ ಇನ್ನೊಂದು ಮದುವೆಯೆ? ಬದುಕಿನಲ್ಲಿ ಎದುರಾದ ಸುಖ ದುಃಖಗಳನ್ನು, ಅದು ಇದ್ದಹಾಗಿನ ಸ್ಥಿತಿಯಲ್ಲಿಯೇ ಎದುರಿಸುತ್ತಾ ಜೀವನದ ಅರ್ಧ ಭಾಗವನ್ನು ಕಳೆದುಕೊಂಡದ್ದಾಗಿದೆ. ಇನ್ನೆಷ್ಟು ದಿನಗಳ ಬದುಕನ್ನು ಅಲ್ಲಾಹು ಬರೆದಿರುತ್ತಾನೆ?

'ಯಾರಾದರೂ ನಿನ್ನನ್ನು ಮದುವೆಯಾಗಬಯಸಿ ಪ್ರಸ್ತಾಪ ಕಳುಹಿಸಿದರೆ, ಸಮ್ಮತಿಸುವೆಯಾ?' ಮಹಾರಾಜರು ಮತ್ತೊಂದು ಪ್ರಶ್ನೆ ಎಸೆದಿದ್ದರು.

'ಇಲ್ಲ; ಖಂಡಿತವಾಗಿಯೂ ಇಲ್ಲ.' ಅಗತ್ಯಕ್ಕಿಂತ ಹೆಚ್ಚು ಎತ್ತರದ ಧ್ವನಿಯಲ್ಲೇ ಹೇಳಿದ್ದೆ.

ತಕ್ಷಣ, ನಾನೀಗ ಮಹಾರಾಜರ ಎದುರು ನಿಂತಿರುವೆನೆಂಬುದು ನೆನಪಾಗಿ, ದನಿ ತಗ್ಗಿಸಿ ಹೇಳಿದೆ, 'ಮಹಾರಾಜರು ದಯವಿಟ್ಟು ಮನ್ನಿಸಬೇಕು. ಮದುವೆಯ ವಯಸ್ಸನ್ನು ನಾನು ಬಲು ಹಿಂದೆಯೇ ದಾಟಿರುವೆ. ಸಂಸಾರದ ಕಷ್ಟಸುಖಗಳನ್ನು ಸಾಕಷ್ಟು ಅನುಭವಿಸಿರುವೆ. ಇನ್ನೊಂದು ಮದುವೆಯ ಬಗ್ಗೆ ನಾನು ಯೋಚಿಸಲಾರೆ. ಒಂದು

ಮಾತನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಬಯಸುವೆ. ತೀರಿಹೋದ ನನ್ನ ಗಂಡ ಮತಾಂತರವಾಗಿದ್ದಿರಬಹುದು. ಕುಡಿತಕ್ಕೆ ದಾಸನಾಗಿದ್ದಿರ ಬಹುದು. ಅದರೂ ಹೇಳುವೆ. ಅವರು ನನ್ನನ್ನು ಮನಸಾರೆ ಪ್ರೀತಿಸುತ್ತಿದ್ದರು. ಬೇರೆ ಹೆಣ್ಣುಗಳತ್ತ ಒಮ್ಮೆಯೂ ಕಣ್ಣೆತ್ತಿ ನೋಡಿದವರಲ್ಲ. ಹೆಂಡತಿಯೊಬ್ಬಳು ಹೆಮ್ಮೆ ಪಡುವಷ್ಟು ಒಳ್ಳೆಯ ಗಂಡನಾಗಿದ್ದರು ಉಬೈದುಲ್ಲಾ. ತೀರಿಹೋಗಿರುವ ಅವರಷ್ಟು ಒಳ್ಳೆಯ ಗಂಡಸು ಇನ್ನೊಬ್ಬನಿರಲಾರ ಎಂಬುದು ನನ್ನ ಗಟ್ಟಿ ನಂಬಿಕೆ. ಅವರ ನೆನಪಿನಲ್ಲೇ ಉಳಿದ ದಿನಗಳನ್ನು ಬದುಕುವ ನಿರ್ಧಾರ ಮಾಡಿರುವೆ.'

ಮಹಾರಾಜರೇನೂ ಸಿಟ್ಟಿಗೆದ್ದಿರಲಿಲ್ಲ. ನನ್ನನ್ನು ಅಭಿನಂದಿಸುವಂತೆಯೇ ಕಣ್ಣರಳಿಸಿ ನೋಡಿದ್ದರು.

'ನಿನ್ನಂತಹ ಪತ್ನಿಯನ್ನು ಪಡೆದಿದ್ದ ಉಬೈದುಲ್ಲಾ ನಿಜವಾಗಿಯೂ ಅದೃಷ್ಟವಂತನು. ಅಷ್ಟೇ ಬೇಗ ನಿನ್ನನ್ನು ಕಳೆದುಕೊಂಡ ಅವನು ದುರದೃಷ್ಟವಂತನೂ ಹೌದು.' ಎಂದವರು, ಮಾತು ನಿಲ್ಲಿಸಿ ಜೋರಾಗಿ ನನ್ನ ಕಣ್ಣುಗಳಲ್ಲಿ ಕಣ್ಣು ತೂರಿಸಿ, 'ಉಬೈದುಲ್ಲಾನಿಗಿಂತಲೂ ಒಳ್ಳೆಯ ಗಂಡಸೊಬ್ಬ ನಿನ್ನ ಜೊತೆಯಾಗಲು ಬಯಸಿದರೆ ಸಮ್ಮತಿಸುವೆಯಾ?'

'ಅಂ..!'

ನಾಡಿನ ದೊರೆಯ ಪ್ರಶ್ನೆಯಲ್ಲಿ ದುರುದ್ದೇಶವೇನಾದರೂ ಅವಿತಿರಬಹುದೆ? ನೇರವಾಗಿ ಅವರನ್ನು ದಿಟ್ಟಿಸಲೂ ಅಸಹ್ಯವೆನ್ನಿಸಿತ್ತು.

'ನೀನು ನನ್ನ ಮಾತಿಗೆ ಉತ್ತರಿಸಲಿಲ್ಲ.' ಅವರಿಗೆ ಸಿಟ್ಟು ಬಂದಿರಬಹುದೆ?

'ಇಲ್ಲ..., ಖಂಡಿತವಾಗಿಯೂ ಇಲ್ಲ. ಉಬೈದುಲ್ಲಾರಿಂತ ಒಳ್ಳೆಯ ಗಂಡನನ್ನು, ಈ ಭೂಮಿಯ ಮೇಲೆ ಅಲ್ಲಾಹು ಸೃಷ್ಟಿಸಿರುತ್ತಾನೆಂಬುದನ್ನು ನಾನು ನಂಬಲಾರೆ...' ಸ್ವಲ್ಪ ಒರಟಾಗಿಯೇ ಹೇಳಿದ್ದೆ.

'ನಿನ್ನ ನಂಬಿಕೆ ಸುಳ್ಳು ರಮ್ಲ ...' ನಜ್ಜಾಶೀಯವರು ಜೋರಾಗಿ ನಕ್ಕಿದ್ದರು.

ನಾನು ನಗಲಿಲ್ಲ.

ನನ್ನ ನಂಬಿಕೆಗಳ ಬಗ್ಗೆಯೇ ನಂಬಿಕೆ ಕಳೆದುಹೋಗಿತ್ತು. ನನ್ನಬ್ಬ ಅಬೂಸುಫ್ಯಾನರನ್ನು ಗೌರವಿಸುವಷ್ಟೇ ಮಹಾರಾಜರನ್ನೂ ಗೌರವಿಸುತ್ತಾ ಬರುತ್ತಿದ್ದವಳು ನಾನು. ನನ್ನ ಬಗ್ಗೆ ಇಷ್ಟೊಂದು ಕೀಳಾಗಿ ಅವರು ಯೋಚಿಸಬಹುದೆಂಬ ಕಲ್ಪನೆಯೂ ನನಗಿರಲಿಲ್ಲ. ಮಹಾರಾಜರ ಮುಖ ನೋಡಲೂ ಇಷ್ಟವಾಗಲಿಲ್ಲ.

'ನಾನು ಮಕ್ಕಾಕ್ಕೆ ಮರಳಲು ನಿರ್ಧರಿಸಿರುವೆ' ಹೆಚ್ಚು ಯೋಚಿಸದೆಯೇ ಹೇಳಿದ್ದೆ.

ಆ ಕ್ಷಣದಲ್ಲಿ ನನಗೆ ಹೊಳೆದ ನಿರ್ಧಾರ ಅದು. ಅಲ್ಲಿ ಹೋಗಿ ಏನು ಮಾಡುವು ದೆಂಬುದು ಗೊತ್ತಿರಲಿಲ್ಲ. ನನ್ನಬ್ಬ ಅಬೂಸುಫ್ಯಾನರ ಆಶ್ರಯಕ್ಕೆ ಮರಳುವುದಂತೂ





ಆಗದ ಮಾತು. ಆದರೆ, ಈ ದೊರೆಯ ಕಣ್ಣೆದುರು ಮರ್ಯಾದೆಯಿಂದ ಬದುಕುವುದು, ಇನ್ನು ಮುಂದೆ ಸಾಧ್ಯವಾಗದೆಂಬ ತೀರ್ಮಾನಕ್ಕೆ ಬಂದುಬಿಟ್ಟಿದ್ದೆ.

'ನೀನು ಮರಳಿ ಮಕ್ಕಾಕ್ಕೆ ಹೋಗುವುದನ್ನು ನಾನೂ ಬಯಸುತ್ತಿರುವೆ.' ಮಹಾರಾಜರು ಇನ್ನೂ ಜೋರಾಗಿ ನಕ್ಕಿದ್ದರು.

ನನಗವರ ಮಾತೇ ಅರ್ಥವಾಗಲಿಲ್ಲ. ಒಮ್ಮೆ, ಬೇರೊಬ್ಬ ಗಂಡಿಗೆ ಜೊತೆಯಾಗುವೆಯಾ ಎಂದು ಪ್ರಶ್ನಿಸುತ್ತಾರೆ. ಮತ್ತೊಮ್ಮೆ ಮಕ್ಕಾಕ್ಕೆ ಮರಳಿ ಹೋಗುವೆಯಾ ಎನ್ನುತ್ತಿದ್ದಾರೆ. ಅವರ ಉದ್ದೇಶವಾದರೂ ಏನಿದ್ದಿರಬಹುದು?

ಅವರು ನನ್ನನ್ನು ಪರೀಕ್ಷಿಸುವವರಂತೆ ದಿಟ್ಟಿಸಿ ನೋಡುತ್ತಿದ್ದರು. ಅವರ ತುಟಿಗಳ ಸಂದಿಯಲ್ಲಿ ಇಣುಕುತ್ತಿದ್ದ ತೆಳುವಾದ ನಗು ನನ್ನನ್ನು ಅಣಕಿಸುತ್ತಿತ್ತು.

'ತೀರಿಹೋಗಿರುವ ನಿನ್ನ ಗಂಡ ಉಬೈದುಲ್ಲಾ ಮತ್ತು ಪ್ರವಾದಿಯವರನ್ನು ನಿನ್ನೆದುರು ತಂದು ನಿಲ್ಲಿಸಿದರೆ, ಅವರಿಬ್ಬರಲ್ಲಿ ಯಾರನ್ನು ಹೆಚ್ಚು ಒಳ್ಳೆಯವರೆನ್ನುವೆ?' ಒಗಟಿನಂತೆ ಪ್ರಶ್ನಿಸಿದ್ದರು.

'ಏನು ನಿಮ್ಮ ಮಾತಿಗೆ ಅರ್ಥ? ಯಾರಿಗೆ ಯಾರನ್ನು ಹೋಲಿಸುತ್ತಿದ್ದೀರಾ ತಾವು?'

ಮೊದಲಬಾರಿಗೆ ತಲೆಯೆತ್ತಿ ಅವರನ್ನು ನೇರವಾಗಿ ದಿಟ್ಟಿಸುತ್ತಾ ಪ್ರಶ್ನಿಸಿದ್ದೆ. ಮಹಾರಾಜನಾದರೇನಾಯಿತು? ಒಂಟಿ ಹೆಣ್ಣೊಬ್ಬಳನ್ನು ಈ ಬಗೆಯಲ್ಲಿ ಹಿಂಸಿಸುವುದೆ? ಸಿಟ್ಟಿನಿಂದ ಕುದಿಯತೊಡಗಿದ್ದೆ.

'ನಿನ್ನ ಅಸಹಾಯಕತೆಯನ್ನು ಅರಿತ ಪ್ರವಾದಿಯವರು ನಿನ್ನನ್ನು ಮದುವೆಯಾಗ ಬಯಸಿ ಪ್ರಸ್ತಾಪ ಕಳುಹಿಸಿದ್ದಾರೆ.'

'ಏನು!!!' ಪ್ರವಾದಿಯವರೂ...ನನ್ನನ್ನೂ...?

ನಾನು ಪ್ರವಾದಿಪತ್ನಿಯವರಲ್ಲೊಬ್ಬಳಾಗಲಿರುವೆನೆ?'

ಕನಸು ಕಾಣುತ್ತಿದ್ದೇನೆಯೆ?

ಅಬ್ಬನಂತಹ ಮಹಾರಾಜರನ್ನು ಅನಗತ್ಯವಾಗಿ ಅನುಮಾನಿಸಿದ್ದ ನನ್ನನ್ನು ಅಲ್ಲಾಹು ಎಂದೂ ಕ್ಷಮಿಸಲಾರ ಎಂಬ ಹತಾಶೆಯಿಂದ ಗಳಗಳನೆ ಅಳತೊಡಗಿದ್ದೆ. ನೀವಾದರೂ ಕ್ಷಮಿಸಬಲ್ಲಿರಾ ಎಂಬ ಆಸೆಯಿಂದ ಮಹಾರಾಜರತ್ತ ಪಶ್ಚಾತ್ತಾಪದ ನೋಟ ಬೀರಿದರೆ, ಅವರ ಮುಖದಲ್ಲಿ ಅದೇ ಮಂದಹಾಸ ಬೆಳಗುತ್ತಿತ್ತು.

ನನ್ನ ಮರುಮದುವೆ ಬಗ್ಗೆ ನನಗಿಂತಲೂ ಮಹಾರಾಜರೇ ಹೆಚ್ಚು ಅವಸರದಲ್ಲಿ ದ್ದಂತಿತ್ತು. ಮರುದಿನ ಮುಂಜಾನೆಯೇ ಮಹಾರಾಜರ ಸಂದೇಶವನ್ನು ಹೊತ್ತು ಕೊಂಡು ಮಹಿಳೆಯೊಬ್ಬರು ಮನೆಗೆ ಬಂದಿದ್ದರು. ನನ್ನ ಮದುವೆ ನೆರವೇರುವ

ಸಂದರ್ಭದಲ್ಲಿ, ರಕ್ಷಕರ ಸ್ಥಾನವನ್ನು ತುಂಬಬಲ್ಲ ಹಿರಿಯರೊಬ್ಬರ ಹೆಸರನ್ನು ಸೂಚಿಸುವಂತೆ ಮಹಾರಾಜರ ಆದೇಶವಾಗಿತ್ತು. ನಾನು ತಡಮಾಡಲಿಲ್ಲ.

ಮಗಳನ್ನು ಕರೆದುಕೊಂಡು ಅದೇ ದಿನ ಬೆಳಗ್ಗೆ, ನನ್ನ ಹಿತೈಷಿಗಳಲ್ಲಿ ಒಬ್ಬರಾದ ಖಾಲಿದ್ ಅವರ ಮನೆಗೆ ಹೋದೆ. ಸಾಮಾನ್ಯವಾಗಿ ತಿಂಗಳಿಗೆರಡು ಬಾರಿಯಾದರೂ ಮನೆಯವರೆಗೆ ಬಂದು ಕುಶಲ ವಿಚಾರಿಸಿಕೊಂಡು ಹೋಗುತ್ತಿದ್ದ ಹಿರಿಯರು ಅವರು. ಮನೆಯಂಗಳದಲ್ಲಿ ನಾನು ಅನಿರೀಕ್ಷಿತವಾಗಿ ಕಾಣಿಸಿಕೊಂಡಾಗ, ಅವರಿಗೆ ಬಹಳ ಸಂತೋಷವಾಗಿತ್ತು ಎಂಬುದನ್ನು ಅವರ ಕಣ್ಣುಗಳ ಹೊಳಪೇ ವಿವರಿಸುತ್ತಿದ್ದವು. ನಾನು ಬಂದಿರುವುದನ್ನು ಮೆಟ್ಟಲ ಬಳಿಯಿಂದಲೇ ಕೂಗಿ ತಮ್ಮ ಹೆಂಡತಿಗೆ ತಿಳಿಸಿದ್ದರು. ನಾನು ಬಂದಿರುವ ಕಾರಣವನ್ನು ಹೇಳಿದಾಗಲಂತೂ ಅವರ ಸಂತಸಕ್ಕೆ ಪಾರವೇ ಇರಲಿಲ್ಲ.

'ಮಹಾರಾಜರು ಯಾವ ದಿನದಂದು ಮದುವೆ ಏರ್ಪಾಡು ನಡೆಸಲಿದ್ದಾರೆ ಎಂಬ ಮಾಹಿತಿಯನ್ನು ಕಳುಹಿಸಿದರೆ ಸಾಕು. ನಾನು ನೇರವಾಗಿ ಅರಮನೆಗೇ ಬಂದು ಬಿಡುವೆ. ಇದಕ್ಕಿಂತ ಖುಷಿಯ ಜವಾಬ್ದಾರಿ ನನಗೆ ಇನ್ನೊಮ್ಮೆ ಸಿಗಲಾರದು' ಎನ್ನುತ್ತಾ ಸಂಭ್ರಮಿಸಿದ್ದರು ಅವರು.

ನಾನು ಅರಮನೆಯಿಂದ ಮರಳಿದ ನಾಲ್ಕನೇ ದಿನದಂದೇ, ಮಹಾರಾಜರು ನನ್ನ ಮತ್ತು ಪ್ರವಾದಿಯವರ ನಡುವೆ ಮದುವೆಯ ಏರ್ಪಾಡು ಮಾಡಿದ್ದರು. ನನ್ನ ರಕ್ಷಕರಾಗಿ ಖಾಲಿದ್ ಅವರು ಬಂದಿದ್ದರೆ, ಪ್ರವಾದಿಯವರ ಪರವಾಗಿ ಅವರ ದೊಡ್ಡಪ್ಪ ಅಬೂತಾಲಿಬರ ಮೂರನೆಯ ಮಗ ಜಫರ್ ಬಂದಿದ್ದರು. ಪ್ರವಾದಿಯವರ ಸಂದೇಶದಲ್ಲಿ ವಿಶ್ವಾಸವಿರಿಸಿ, ಸತ್ಯವಿಶ್ವಾಸಿಯಾದ ಆರಂಭದ ಕೆಲವೇ ಕುರೈಶರಲ್ಲಿ ಜಅಫರ್ ಕೂಡಾ ಒಬ್ಬರು. ಆ ಕಾರಣದಿಂದಲೇ ಮಕ್ಕಾದಿಂದ ಬಹಿಷ್ಕೃತರಾಗಿ, ಪ್ರವಾದಿಯವರ ಸಲಹೆಯಂತೆ ಅಬಿಸೀನಿಯಾಕ್ಕೆ ಬಂದು ನನ್ನಂತೆಯೇ ಬದುಕು ಮುಂದುವರಿಸಿದ್ದವರು.

ಅರಮನೆಯ ಹೊರಗಿನ ಕೋಣೆಯೊಂದರಲ್ಲಿ ಕುಳಿತ ನಾನು, ಅಂಗಳದಲ್ಲಿ ನಡೆಯುತ್ತಿರುವ ನಿಕಾಹದ ವಿಧಿಗಳನ್ನು ಆಲಿಸುತ್ತಿದ್ದೆ. ಮಕ್ಕಾದಿಂದ ನನ್ನಂತೆ ನಿರಾಶ್ರಿತರಾಗಿ ಬಂದಿದ್ದವರಲ್ಲಿ ಬಹಳಷ್ಟು ಮಂದಿ ಅಂಗಳದಲ್ಲಿ ಸೇರಿದ್ದರು.

ಅಲ್ಲಾಹುವಿನ ಪ್ರಾರ್ಥನೆಯೊಂದಿಗೆ ನಿಕಾಹ್ ವಿಧಿಗಳು ಆರಂಭವಾಗಿದ್ದವು. ಸ್ವತಃ ಮಹಾರಾಜರೇ ಪ್ರಾರ್ಥನೆಯ ನೇತೃತ್ವ ವಹಿಸಿದ್ದರು. 'ರಮ್ಲರನ್ನು ಮದುವೆಯಾಗ ಬಯಸಿ ಪ್ರವಾದಿಯವರು ಕೆಲವು ದಿನಗಳ ಹಿಂದೆಯೇ ಮದೀನಾದಿಂದ ಉಮಯ್ಯಾ ಪುತ್ರ ಅಮ್ರ್ ಮೂಲಕ ಪ್ರಸ್ತಾಪವನ್ನು ಕಳುಹಿಸಿದ್ದರು.' ಮಹಾರಾಜರು ನನ್ನ





ಮದುವೆಯ ಹೊಣೆಯನ್ನು ಹೊತ್ತಿರುವ ಕಾರಣವನ್ನು ಅತಿಥಿಗಳಿಗೆ ವಿವರಿಸುತ್ತಿದ್ದರು. 'ಅದರಂತೆ ರಮ್ಲರನ್ನು ಕರೆಸಿಕೊಂಡು ಅವರ ಅಭಿಪ್ರಾಯವನ್ನು ವಿಚಾರಿಸಿರುವೆ. ಈ ಮದುವೆ ಪ್ರಸ್ತಾಪವನ್ನು ರಮ್ಲ ಸಂತೋಷದಿಂದ ಒಪ್ಪಿಕೊಂಡಿರುವರು. ನಿಕಾಹ್ ನಿಯಮದಂತೆ, ನಾಲ್ಕು ನೂರು ದಿನಾರ್'ಗಳ ವಧುದಕ್ಷಿಣೆಯನ್ನು ಪ್ರವಾದಿಯವರ ಪರವಾಗಿ ನಾನೇ ನೀಡುತ್ತಿರುವೆ. ಹೆಣ್ಣಿನ ರಕ್ಷಕರಾಗಲು ಒಪ್ಪಿಕೊಂಡು ಬಂದಿರುವ ಖಾಲಿದ್ ಅವರು, ಈ ವಧುದಕ್ಷಿಣೆಯನ್ನು ರಮ್ಲರಿಗೆ ಒಪ್ಪಿಸಿ, ಅವರ ಅಧಿಕೃತ ಸಮ್ಮತಿಯನ್ನು ಪಡೆದುಕೊಂಡು ಬರಬೇಕೆಂದು ಹೇಳುವೆ.'

ವಧುದಕ್ಷಿಣೆಯೊಂದಿಗೆ ಕೋಣೆಯೊಳಗೆ ಬಂದ ಖಾಲಿದ್ ಅವರು, 'ಅಬೂಸುಫಿಯಾನರ ಮಗಳಾಗಿರುವ ನೀನು ರಮ್ಲ, ನಾಲ್ಕು ನೂರು ಬಂಗಾರದ ದೀನಾರುಗಳ ಮೆಹರ್'ಗೆ ಪ್ರತಿಯಾಗಿ, ಅಬ್ದುಲ್ಲಾ ಎಂಬವರ ಮಗನಾದ ಮುಹಮ್ಮದರನ್ನು ಮದುವೆಯಾಗಲು ಸಮ್ಮತಿಸುವೆಯಾ?' ಎಂದು ಪ್ರಶ್ನಿಸಿದಾಗ, ನಾನು 'ಸಮ್ಮತಿಸುವೆ' ಎಂದು ಸಂತಸದಿಂದಲೇ ಪ್ರಮಾಣ ಮಾಡಿದ್ದೆ. ಕೆಲವೇ ಹೊತ್ತಿನಲ್ಲಿ ನಿಕಾಹ ಸಂಬಂಧಿತ ಪ್ರತಿಜ್ಞಾವಿಧಿಗಳು ಮುಗಿದಿದ್ದವು. ನಾನೂ ಒಬ್ಬಳು 'ಪ್ರವಾದಿಪತ್ನಿ' ಯೆನ್ನಿಸಿಕೊಂಡಿದ್ದೆ!

ಕಳೆದ ಹನ್ನೆರಡು ವರ್ಷಗಳಿಂದಲೂ ನಾನು ಪ್ರವಾದಿಯವರನ್ನು ಕಂಡದ್ದಿಲ್ಲ.

ಎಂದಾದರೊಮ್ಮೆ ಅರೇಬಿಯಾದಿಂದ ಬರುವ ನಿರಾಶ್ರಿತರು ಅಥವಾ ಪ್ರಯಾಣಿಕರು ಹೊತ್ತು ತರುವ ಮಾಹಿತಿಗಳು, ಪ್ರವಾದಿಯವರು ಆರೋಗ್ಯದಲ್ಲಿದ್ದಾರೆ ಎಂಬುದನ್ನೇನೋ ಖಚಿತಪಡಿಸುತ್ತಿದ್ದವು. ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋದ ಆನಂತರದ ದಿನಗಳಲ್ಲಿ, ಪ್ರವಾದಿಯವರನ್ನು ಬೆಂಬಲಿಸುವ ಸತ್ಯವಿಶ್ವಾಸಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ ಹಾಗೂ ಮದೀನಾದೊಳಗೆ ನುಗ್ಗಿ ಅವರನ್ನು ಕೊಲ್ಲಲು ಯತ್ನಿಸಿದ್ದ ಮಕ್ಕಾದವರ ಎಲ್ಲ ಸಂಚುಗಳೂ ವಿಫಲವಾಗಿವೆ ಎಂಬ ಮಾತುಗಳನ್ನು ಆಲಿಸುವಾಗ ಬಹಳ ಹಿತವಾಗುತ್ತಿತ್ತು.

ನನ್ನ ಗಂಡ ಉಬೈದುಲ್ಲಾರ ಸೋದರಿ ಝೈನಬರನ್ನು ಪ್ರವಾದಿಯವರು ಮದುವೆ ಯಾದರಂತೆ ಎಂಬ ಸುದ್ದಿ ತಲುಪಿದ ಕೆಲವು ದಿನಗಳವರೆಗೂ ನಾನದನ್ನು ನಂಬಿರಲೇ ಇಲ್ಲ. ಯಾಕೆಂದರೆ, ಝೈನಬರಿಗೆ ಆ ಹಿಂದೆಯೇ ಝೈದ್ ಎಂಬವರ ಜೊತೆಗೆ ಮದುವೆಯಾಗಿದ್ದದ್ದು ನನಗೆ ತಿಳಿದಿತ್ತು. ಹಾಗಾದರೆ, ಝೈದ್ ತೀರಿಕೊಂಡರೆ? ಅಥವಾ ಝೈನಬರಿಗೆ ತಲಾಕ್ ಕೊಟ್ಟರೆ? ನಿಜ ಸಂಗತಿ ತಿಳಿಯುವಷ್ಟರಲ್ಲಿ ತಿಂಗಳುಗಳೇ ದಾಟಿದ್ದವು.

ಎಲ್ಲಕ್ಕಿಂತಲೂ ಹೆಚ್ಚು ತೃಪ್ತಿಯನ್ನುಂಟುಮಾಡಿದ್ದ ವಾರ್ತೆಯೆಂದರೆ, ಪ್ರವಾದಿಯವರ ಮೊದಲ ಶತ್ರು ಅಬೂಜಹಲನು ಯುದ್ಧಭೂಮಿಯಲ್ಲೇ ಹತನಾದದ್ದು. ಆದರೆ, ಅವನ ಜಾಗವನ್ನು ಈಗ ನನ್ನಬ್ಬನವರೇ ನಿಭಾಯಿಸುತ್ತಿರುವುದು ಸಂತಸದ ಸಂಗತಿಯಾಗಿದ್ದಿರಲಿಲ್ಲ. ರಾತ್ರಿಯೆಲ್ಲ ಹೊಸ ಗಂಡನದ್ದೇ ಯೋಚನೆಗಳು. ಪ್ರವಾದಿಯವರು ನನ್ನನ್ನು ಮದುವೆಯಾಗಬಯಸಿದ್ದು, ಮಹಾರಾಜರು ಹೇಳಿದಂತೆ, ನನ್ನ ಅಸಹಾಯಕತೆಯ ಬಗ್ಗೆ ಇದ್ದ ಅನುಕಂಪದಿಂದ ಮಾತ್ರವೆ? ಬೇರೇನೂ ಇದ್ದಿರಲಾರದೆ?

ಕಳೆದ ಆರು ವರ್ಷಗಳಲ್ಲೂ ಇದೇ ಗೊಂದಲಗಳೊಂದಿಗೇ ಬದುಕಿದ್ದೆ.

ಸುಮಾರು ಇಪ್ಪತ್ತು ದಿನಗಳ ಪ್ರಯಾಣದುದ್ದಕ್ಕೂ ನನ್ನ ಬೇಕು ಬೇಡಗಳನ್ನು ನೋಡಿಕೊಳ್ಳುತ್ತಿದ್ದ, ಮಹಾರಾಜರ ದಾಸಿ ಶುರಾಹ್ಬಿಲ್ ನನ್ನನ್ನು ಮಕ್ಕಾಕ್ಕೆ ಕರೆದುಕೊಂಡು ಹೋಗದೆ, ನೇರವಾಗಿ ಮದೀನಾದಲ್ಲಿದ್ದ ಪ್ರವಾದಿಪುತ್ರಿ ಉಮ್ಮು ಕುಲ್ಸೂಮರ ಮನೆಗೆ ತಂದುಬಿಟ್ಟಿದ್ದಳು. ಬಾಲ್ಯದಲ್ಲಿ ನನ್ನ ಜೊತೆ ಆಟವಾಡಿಕೊಂಡು ಬೆಳೆದಿದ್ದ ಉಮ್ಮು ಕುಲ್ಸೂಮ್, ಈಗ ಆ ದೊಡ್ಡ ಮನೆಯ ಒಡತಿ. ನಾನು ಬರಲಿರುವ ಸಂಗತಿ ಅವಳಿಗೆ ಮೊದಲೇ ತಿಳಿದಂತಿತ್ತು. ನನ್ನನ್ನು ಕಂಡವಳೇ ಸಂತಸದಿಂದ ಓಡಿಬಂದು ಬಲವಾಗಿ ತಬ್ಬಿಕೊಂಡು ಸಂತಸದ ಕಣ್ಣೀರು ಹಾಕಿದ್ದಳು.

ನಾಲ್ವರು ಪ್ರವಾದಿಪುತ್ರಿಯರಲ್ಲಿ ಉಮ್ಮು ಕುಲ್ಸೂಮಳೇ ಹೆಚ್ಚು ಅದೃಷ್ಟವಂತೆ. ಗಂಡ ಉಸ್ಮಾನರಂತೂ ಮದೀನಾದ ಸಿರಿವಂತ ವರ್ತಕರಲ್ಲೊಬ್ಬರಾಗಿ ಬೆಳೆದಿದ್ದರು. ಉಮ್ಮು ಕುಲ್ಸೂಮಳ ಸೇವೆಗೆಂದೇ ಇಬ್ಬರು ಗುಲಾಮ ದಾಸಿಯರಿದ್ದರು. ನನ್ನನ್ನು ಅಬಿಸೀನಿಯಾದಿಂದ ಕರೆದುಕೊಂಡು ಬಂದಿದ್ದ ದಾಸಿ ಶುರಾಹ್ಬಿಲ್, ತನ್ನೂರಿಗೆ ಮರಳುವ ಬಗ್ಗೆ ಪ್ರಸ್ತಾಪಿಸಿದ್ದಾಗ ಉಮ್ಮು ಕುಲ್ಸೂಮ್ ತಡೆದಿದ್ದಳು. 'ಪ್ರವಾದಿಯವರು ನಿನ್ನ ಒಡತಿಯನ್ನು ಮನೆತುಂಬಿಸಿಕೊಳ್ಳುವ ಸಮಾರಂಭವನ್ನು ಕಾಣದೆ ನೀನು ಹೋದರೆ, ನಿನ್ನ ದೊರೆಗೂ ಬೇಸರವಾಗಬಹುದು. ಮುಂದಿನವಾರವೇ ಮದುವೆ ಸಮಾರಂಭ ನಡೆಸಲು ಉಸ್ಮಾನರು ತೀರ್ಮಾನಿಸಿದ್ದಾರೆ' ಎಂದಿದ್ದಳು.

–೨–

ಮದುವೆಗೆ ಎರಡು ದಿನಗಳಿದ್ದಾಗ, ಝೈನಬರ ದಾಸಿಯೊಬ್ಬಳು ಬಂದಿದ್ದಳು. 'ಸಂಜೆಗೆ ಒಡತಿ ಇಲ್ಲಿಗೆ ಬಂದು ಹೋಗುತ್ತಾರಂತೆ. ಸೋದರನ ಪತ್ನಿಯಾಗಿದ್ದವರನ್ನು ನೋಡದೆ ಬಹುಕಾಲವಾಗಿದೆಯಂತೆ' ಎಂಬ ಮಾಹಿತಿ ನೀಡಿ ಹೋಗಿದ್ದಳು.





ಅಕೆ ತಂದಿದ್ದ ಸಂದೇಶದಲ್ಲಿ, ಸೋದರನ ಪತ್ನಿಯಾಗಿದ್ದವರನ್ನು ನೋಡಲು ಬರುತ್ತಿದ್ದೇನೆ ಎಂಬ ಮಾತುಗಳಿತ್ತೇ ಹೊರತು, ಪ್ರವಾದಿಪತ್ನಿಯನ್ನು ಕಾಣಲು ಬರುತ್ತಾರಂತೆ ಎಂಬ ಸೂಚನೆಯಿರಲಿಲ್ಲ! ಆ ರೀತಿಯಲ್ಲೇ ಹೇಳಲು ಝೈನಬರು ದಾಸಿಗೆ ಸೂಚಿಸಿದ್ದಿರಬಹುದೆ? ಅಥವಾ ಅದು ದಾಸಿಯ ಬಾಯಿತಪ್ಪಿನಿಂದ ಬಂದ ಮಾತಿದ್ದಿರಬಹುದೆ ಅದು?

ಝೈನಬ್ ಮತ್ತು ಆಯಿಷಾರ ನಡುವೆ ಸಣ್ಣಪುಟ್ಟ ಮನಸ್ತಾಪಗಳು ನಡೆಯುತ್ತಿವೆ, ಎಂಬುದನ್ನು ಸ್ವತಃ ಉಮ್ಮು ಕುಲ್ಸೂಮಳೇ ಹೇಳುತ್ತಾ ನಕ್ಕಿದ್ದಳು. ಅದೇ ರೀತಿಯಲ್ಲಿ, ನಾನು ಪ್ರವಾದಿಪತ್ನಿಯಾಗುವುದೂ ಝೈನಬರಿಗೆ ಇಷ್ಟವಿಲ್ಲವೆ? ನನ್ನ ಚಿಂತೆಯನ್ನು ಉಮ್ಮು ಕುಲ್ಸೂಮಳಿಗೆ ತಿಳಿಸಿದಾಗ ಅವಳೂ ನಕ್ಕಿದ್ದಳು. 'ನಿಮಗೆ ಈ ಅನುಮಾನ ಯಾಕೆ ಬಂತು? ಝೈನಬರ ಸೋದರನ ಪತ್ನಿಯಾಗಿದ್ದವರು ನೀವು ಎಂಬುದು ಸುಳ್ಳೇನೂ ಅಲ್ಲವಲ್ಲಾ?' ಎಂದು ಮರುಪ್ರಶ್ನೆ ಎಸೆದಿದ್ದಳು.

'ಈಗ ನಾನೂ ಒಬ್ಬಳು ಪ್ರವಾದಿಪತ್ನಿಯಲ್ಲವೆ ಉಮ್ಮು ಕುಲ್ಸೂಮ್?' ಅಸಹನೆಯಿಂದಲೇ ಪ್ರಶ್ನಿಸಿದ್ದೆ. 'ನನ್ನ ಗಂಡ ಉಬೈದುಲ್ಲಾ ತೀರಿಕೊಂಡ ಬಳಿಕ ಯಾರನ್ನೂ ಮದುವೆಯಾಗುವುದಿಲ್ಲವೆಂದು ನಿರ್ಧರಿಸಿದ್ದವಳು ನಾನು. ಆದರೆ, ಸ್ವತಃ ಪ್ರವಾದಿಯವರೇ ಮದುವೆ ಪ್ರಸ್ತಾಪವನ್ನು ಕಳುಹಿಸಿದಾಗ ನನ್ನೆಲ್ಲಾ ನಿರ್ಧಾರಗಳನ್ನು ಮುರಿದು ಎಸೆಯಲಿಲ್ಲವೆ? ಯಾಕೆ ಹೇಳು? ಪ್ರವಾದಿಪತ್ನಿ ಎಂಬ ದೊಡ್ಡ ಗೌರವ ಪಡೆಯಲು. ನನ್ನ ಆಸೆ ತಪ್ಪಾ?'

'ತಪ್ಪಲ್ಲ, ಖಂಡಿತವಾಗಿಯೂ ತಪ್ಪಲ್ಲ. ಯಾವ ಹೆಣ್ಣೂ ಆಸೆಪಡುವ ಬಲುದೊಡ್ಡ ಗೌರವ ಅದು. ಆದರೆ, ಆ ದಾಸಿಗೆ ಝೈನಬರೇ ಹಾಗೆಯೇ ಹೇಳಿಬರಲು ಸೂಚನೆ ನೀಡಿರಬಹುದೆಂದು ಅನಗತ್ಯವಾಗಿ ಚಿಂತಿಸುತ್ತಿದ್ದೀರಾ. ಸಂಜೆ ಝೈನಬರೇ ಇಲ್ಲಿಗೆ ಬಂದಾಗ ನಿಮ್ಮ ಅನುಮಾನ ನಿವಾರಣೆ ಆಗಲೂಬಹುದು' ಎಂದು ಸಮಾಧಾನಿಸಿದ್ದಳು. ಸಂಜೆ ಝೈನಬರು ಬಂದಾಗ, ಉಮ್ಮು ಕುಲ್ಸೂಮ್ ಹೇಳಿದ್ದ ಮಾತೇ ನಿಜವಾಗಿತ್ತು. ನನ್ನನ್ನು ಪ್ರೀತಿಯಿಂದ ತಬ್ಬಿಕೊಂಡು ಅಭಿನಂದಿಸಿದ ಝೈನಬರು, ನಾವೆಲ್ಲ ಜೊತೆಯಾಗಿ ಕಳೆದಿದ್ದ ಬಾಲ್ಯದ ದಿನಗಳನ್ನು ಒಂದೊಂದಾಗಿ ನೆನಪಿಸಿಕೊಂಡು, ನಕ್ಕಿದ್ದೇ ನಕ್ಕಿದ್ದು. ಝೈನಬರನ್ನು ಅನಗತ್ಯವಾಗಿ ಸಂಶಯಿಸಿದ ನನ್ನ ಬಗ್ಗೆ, ನನಗೇ ಸಿಟ್ಟು ಬಂದಿತ್ತು.

ಮನೆಯಂಗಳದಲ್ಲಿ ಹಾಕಿದ್ದ ಚಪ್ಪರದಲ್ಲಿ ಸಂಜೆ ನಡೆಯುತ್ತಿದ್ದ ಸಮಾರಂಭದುದ್ದಕ್ಕೂ ಝೈನಬರು ನನ್ನನ್ನು ಅವರ ಜೊತೆಗೇ ಇರುವಂತೆ ನೋಡಿಕೊಂಡಿದ್ದರು. ಪ್ರವಾದಿಪತ್ನಿಯರಾದ ಉಮ್ಮು ಸಲಾಮಾ, ಜುವೈರಿಯಾ, ಸಫಿಯಾ ಕೂಡಾ ನಮ್ಮ ಜೊತೆಗಿದ್ದರು. ಬೇರೆಯೇ ಆಗಿ ನಿಂತಿದ್ದ ಆಯಿಷಾರೊಂದಿಗೆ ಕಾಣಿಸಿದವರು ಪ್ರವಾದಿಪತ್ನಿಯರಲ್ಲಿ ಎಲ್ಲರಿಗಿಂತಲೂ ಹಿರಿಯರಾಗಿದ್ದ ಸೌದಾರವರು ಮಾತ್ರ. ಆಯಿಷಾರನ್ನು

ನಾನು ಈ ಹಿಂದೆ ಕಂಡದ್ದೇ ಇಲ್ಲ. ನಾನು ಮಕ್ಕಾ ತೊರೆದಿದ್ದಾಗ ಅವರಿನ್ನೂ ಪುಟ್ಟ ಮಗು. ಹಾಗಾದರೆ, ಪ್ರವಾದಿಪತ್ನಿಯರಲ್ಲಿ ಎರಡು ಗುಂಪು ಗಳಿವೆಯೆ? ಹಾಗಿದ್ದರೆ ನಾನು ಯಾವ ಗುಂಪಿಗೆ ಸೇರಿಕೊಳ್ಳಬೇಕು? ಝೈನಬರಂತೂ ಈಗಾಗಲೇ ನನ್ನನ್ನು ಅವರ ಗುಂಪಿಗೆ ಸೇರಿಸಿಕೊಂಡದ್ದಾಗಿದೆಯಲ್ಲವೆ? ಹಾಗಾದರೆ ನಾನು ಆಯಿಷಾರ ವಿರೋಧಿ ಗುಂಪಿನವಳಾಗಲಿದ್ದೇನೆಯೆ? ಈ ಅಸಂಬದ್ಧ ಯೋಚನೆಗಳಿಂದ ನನಗೆ ನಗುವೇ ಬಂದಿತ್ತು. ನನ್ನನ್ನು ಈ ಯೋಚನೆಗಳ ಬಲೆಯಿಂದ ಎಳೆದು ಹೊರ ತಂದವನು, ಮದುವೆ ಮಂಟಪದಲ್ಲಿ ಅನಿರೀಕ್ಷಿತವಾಗಿ ಕಾಣಿಸಿದ್ದ ನನ್ನ ಸೋದರ ಮುಆವಿಯಾ! ಅವನು ಇಲ್ಲಿಗೆ ಹೇಗೆ ಬಂದ?

ತಮ್ಮ ಬದ್ಧ ಶತ್ರು ಅಬೂಸುಫ್ಯಾನರ ಮಗನನ್ನು ತಾವ್ಯಾರೂ ನಿರೀಕ್ಷಿಸಿದ್ದಿರಲಿಲ್ಲ ಎಂಬುದನ್ನು ಅಲ್ಲಿ ಸೇರಿದ್ದ ಸತ್ಯವಿಶ್ವಾಸಿಗಳೆಲ್ಲರ ಮುಖಭಾವದಿಂದಲೇ ನಾನು ಗುರುತಿಸಿದ್ದೆ.

ನನ್ನ ಪಕ್ಕದಲ್ಲೇ ನಿಂತಿದ್ದ ಮಹಿಳೆಯೊಬ್ಬಳು, 'ಅಲ್ಲಿ ನೋಡು..! ಅಲ್ಲಿ ನೋಡು! ಅವನ ಧೈರ್ಯ ನೋಡು, ಸೊಂಟದಲ್ಲಿ ಸಣ್ಣ ಚೂರಿ ಕೂಡಾ ಇಲ್ಲ! ಹೂವಿನ ಮಾಲೆ ಹಿಡಿದುಕೊಂಡು ವೇದಿಕೆಯ ಮೇಲೆ ಪ್ರವಾದಿಯವರ ಹತ್ತಿರವೇ ನಿಂತಿದ್ದಾನಲ್ಲ!' ಎಂದಾಗ ನಾನು ಒಳಗೊಳಗೇ ನಕ್ಕಿದ್ದೆ. ನನ್ನ ನಗು ವ್ಯರ್ಥವಾಗಿದ್ದಿರಲಿಲ್ಲ.

ನನ್ನ ಕಿರಿಯ ಸೋದರ ಮುಆವಿಯಾನನ್ನು ನಾನು ಕೊನೆಯ ಬಾರಿ ನೋಡಿದ್ದಾಗ ಅವನೊಬ್ಬ ಏನೂ ಅರಿಯದ ಸಣ್ಣ ಹುಡುಗ. ಈಗ ಬೆಳೆದು ಯಾವ ಹೆಣ್ಣನ್ನೂ ಆಕರ್ಷಿಸಬಲ್ಲ ಬಲಿಷ್ಠ ತರುಣನಾಗಿದ್ದ. ನೋಡು ನೋಡುತ್ತಿರುವಂತೆಯೇ ನನ್ನ ಸೋದರ ಇಡೀ ಸಮಾರಂಭದ ಕೇಂದ್ರ ಬಿಂದುವಾಗಿಬಿಟ್ಟಿದ್ದ. ಎಲ್ಲರನ್ನೂ ನಗು ನಗುತ್ತಾ ಮಾತನಾಡಿಸುತ್ತಿದ್ದ. ಸಮಾರಂಭದಲ್ಲಿ ಭಾಗವಹಿಸಿದ್ದ ಸತ್ಯವಿಶ್ವಾಸಿಗಳೆಲ್ಲರ ಜನ್ಮಶತ್ರು ಅಬೂಸುಫ್ಯಾನರ ಮಗ ತಾನೆಂಬುದನ್ನೂ ಮರೆತವನಂತೆ ಸಂಭ್ರಮಿಸುತ್ತಿದ್ದ. ನನ್ನ ಸೋದರನ ಜಾಣತನದ ಬಗ್ಗೆ ನಾನು ಹೆಮ್ಮೆಯಿಂದ ಬೀಗುತ್ತಿದ್ದೆ.

ಮದುವೆ ಸಮಾರಂಭವನ್ನು ಉಸ್ಮಾನರು ಪ್ರವಾದಿಯವರಿಗೂ ಮುಜುಗರ ವಾಗುವಷ್ಟು ಅದ್ದೂರಿಯಿಂದಲೇ ನಡೆಸಿದ್ದರು. ಸಭೆಯ ನಡುವೆ ಅತ್ತಿತ್ತ ಓಡಾಡುತ್ತಾ ಪ್ರತಿಯೊಬ್ಬರನ್ನೂ ಸ್ವಾಗತಿಸಿ ಅವರು ಕುಶಲ ವಿಚಾರಿಸುತ್ತಿದ್ದರು. ಸೇವಕರ ದಂಡು ಅತಿಥಿಗಳಿಗೆಲ್ಲ ಸಿಹಿ ಪಾನೀಯವನ್ನು ಹಂಚುತ್ತಿದ್ದರು. ಕೆಂಡದಲ್ಲಿ ಬೇಯಿಸಿದ ಒಂಟೆ ಮಾಂಸವನ್ನು ಪೇರಿಸಿದ್ದ ಅಗಲವಾದ ತಟ್ಟೆಗಳನ್ನು ಎತ್ತಿಕೊಂಡು ಓಡಾಡುತ್ತಿದ್ದರು. ಯಾವ ಪ್ರವಾದಿಪತ್ನಿಗೂ ಇಷ್ಟು ಸಿರಿವಂತ ಮದುವೆ ಭಾಗ್ಯ ದಕ್ಕಿದ್ದಿರಲಾರದು.





ಪ್ರವಾದಿಯವರ ಮುಖದಲ್ಲಿ ಕಾಣಿಸುತ್ತಿದ್ದ ಬೆಳದಿಂಗಳನ್ನೇ ಸವಿಯುತ್ತಾ ನಾನು ನಿಂತಿದ್ದೆ.

ಇದ್ದಕ್ಕಿದ್ದಂತೆ ನನ್ನ ದೃಷ್ಟಿ ಆಯಿಷಾರತ್ತ ಸರಿದಿತ್ತು. ಅವರೂ ನನ್ನನ್ನೇ ಚೂಪುಕಣ್ಣು ಗಳಿಂದ ದಿಟ್ಟಿಸಿ ನೋಡುತ್ತಿದ್ದರು. ನಾನು ಪರಿಚಯದ ನಗು ಚೆಲ್ಲಿದೆ. ಆದರೆ, ನನ್ನ ಮುಖವನ್ನೇ ತಿವಿಯುವಂತೆ ದಿಟ್ಟಿಸುತ್ತಿರುವ ಅವರ ತುಟಿಗಳಲ್ಲಿ ನಗುವಿನ ಮೊಗ್ಗು ಕಾಣಿಸದಾಗ, ಗಲಿಬಿಲಿಯಿಂದ ತಲೆ ತಗ್ಗಿಸಿದ್ದೆ.

ಪಕ್ಕದಲ್ಲೇ ನಿಂತು ಇವನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಝೈನಬರು ನನ್ನ ಭುಜ ಸವರುತ್ತಾ, 'ಎಲ್ಲ ಸರಿಯಾಗುತ್ತವೆ ಬಿಡಿ. ಇಂದು ನೀವು ಮತ್ತು ಪ್ರವಾದಿಯವರು ಸಂತಸದಿಂದಿರಬೇಕಾದ ರಾತ್ರಿ. ಅನಗತ್ಯವಾಗಿರುವುದನ್ನು ಯೋಚಿಸುತ್ತಾ ಮುಖದ ಬಣ್ಣ ಕಳೆದುಕೊಳ್ಳದಿರಿ' ಎಂದು ಎಚ್ಚರಿಸಿದಾಗ ನಾನು, ಝೈನಬರನ್ನು ಕೃತಜ್ಞತೆಯಿಂದ ನೋಡಿದ್ದೆ.

ಅಷ್ಟರಲ್ಲೇ ಸಭೆಯೊಳಗಿನಿಂದ ಯಾರೋ ಹಿರಿಯರೊಬ್ಬರು ಗಟ್ಟಿಯಾಗಿಯೇ ಪ್ರಶ್ನಿಸಿದ್ದು ಕೇಳಿಸಿತ್ತು. 'ನಮ್ಮ ಪರಮಶತ್ರುವಾಗಿರುವ ಅಬೂಸುಫ್ಯಾನರು ನಿನ್ನನ್ನು ಇಲ್ಲಿಗೆ ಬೇಹುಗಾರನನ್ನಾಗಿ ಕಳಿಸಿದ್ದೆ?'

ನನಗೆ ಗಾಬರಿಯಾಗಿತ್ತು! ನನ್ನ ಸೋದರ ಮುಆವಿಯಾ ಇನ್ನೂ ಸಣ್ಣ ವಯಸ್ಸಿನ ಬಿಸಿ ನೆತ್ತರಿನ ತರುಣ. ಮಕ್ಕಾಧೀಶನಾಗಿರುವ ಅಬೂಸುಫ್ಯಾನರ ಮಗ ಬೇರೆ. ಅವನನ್ನು ಇಷ್ಟೊಂದು ಸದರವಾಗಿ ಯಾರೂ ಮಾತನಾಡಿಸಿರುವ ಸಾಧ್ಯತೆಗಳಿಲ್ಲ. ಸಿಟ್ಟಿನಿಂದ ಅವನೇನಾದರೂ ಹೇಳಿಬಿಟ್ಟರೆ, ಮದುವೆ ಸಂಭ್ರಮವೇ ಹಾಳಾಗುತ್ತದೆ.

ಮುಆವಿಯಾ ಸ್ವಲ್ಪವೂ ಸಿಟ್ಟಿಗೆದ್ದಂತೆ ಕಾಣಿಸಲಿಲ್ಲ. 'ಇಲ್ಲ ಸೋದರಾ' ಅವನು ಎಲ್ಲರಿಗೂ ಕೇಳಿಸುವಂತೆ ಹೇಳುತ್ತಿದ್ದ, 'ನನ್ನ ಸೋದರಿ ಬಹಳ ಅದೃಷ್ಟವಂತರು. ಆಕೆಯು ಮಾಡಿಕೊಂಡಿರುವ ಈ ವಿವಾಹದ ಕಾರಣದಿಂದ ಇಡೀ ಅರೇಬಿಯದಲ್ಲಿ ಶಾಂತಿ ನೆಲಸಲಿದೆ. ಹಳೆಯ ಶತ್ರುಗಳೆಲ್ಲ ಮಿತ್ರರಾಗಿ ಬದಲಾಗಲಿದ್ದಾರೆ. ನನಗೆ ನೀವು ನೀಡಿರುವ ಬೇಹುಗಾರ ಎಂಬ ಪದವನ್ನು ಬಹಳ ಗೌರವದಿಂದಲೇ ಸ್ವೀಕರಿಸುತ್ತಿರುವೆ. ನಾನು ಬೇಹುಗಾರ ಎಂಬುದು ನಿಜ. ಆದರೆ ಶತ್ರುಗಳ ಕೋಟೆಗೆ ನುಸುಳಿ ಬರುವ ಬೇಹುಗಾರನಲ್ಲ. ಶತ್ರುಗಳ ನಡುವೆ ಪ್ರೀತಿಯ ಹೂವು ಅರಳಿಸಬಯಸುವ ಬೇಹುಗಾರ. ಇಲ್ಲಿಂದ ಮಕ್ಕಾಕ್ಕೆ ಮರಳಿದ ಬಳಿಕ ಎಲ್ಲರಿಗೂ ನಿಮ್ಮ ತಿಳಿಯಾದ ಮನಸ್ಸುಗಳ ಬಗ್ಗೆ ವಿವರಿಸುವೆ. ಹಳೆಯ ಶತ್ರುತ್ವದ ದಿನಗಳು ಅಳಿಯುವಂತೆ ಪ್ರಯತ್ನಿಸುವೆ. ಯುದ್ಧದಿಂದ ಯಾರೂ ಗೆಲ್ಲುವುದಿಲ್ಲ ಎಂಬ ನನ್ನ ಅಕ್ಕನ ಗಂಡನ ಮಾತುಗಳನ್ನು ಅವರಿಗೆಲ್ಲ ಮನದಟ್ಟು ಮಾಡುವೆ' ಎನ್ನುತ್ತಾ, ತನ್ನ ಕೈಯಲ್ಲಿದ್ದ ಬೆಳ್ಳಿಯ ಪಾನೀಯದ ತಟ್ಟೆಯನ್ನು

ಎತ್ತಿ ಹಿಡಿದು, ‘ಇದು ಅರೇಬಿಯಾದ ಎಲ್ಲರ ಒಳಿತಿಗಾಗಿ. ಶಾಂತಿ ಮತ್ತು ಸಹ ಬಾಳ್ವೆಗಾಗಿ’ ಎಂದು ಹೇಳಿ, ಗಟಗಟನೆ ಕುಡಿದು ಸಭೆಯತ್ತ ಗೆಲುವಿನ ನೋಟ ಬೀರಿದ್ದ.

‘ಆದರೂ, ಅವನ ಬಾಯಿಯಿಂದ ಪ್ರವಾದಿ ಎಂಬ ಮಾತು ಬರಲಿಲ್ಲ ನೋಡು. ನನ್ನ ಅಕ್ಕನ ಗಂಡ ಎಂದಷ್ಟೇ ಹೇಳಿದ್ದಾನೆ. ನನಗಂತೂ ಅವನ ಮಾತಿನಲ್ಲಿ ನಂಬಿಕೆಯಿಲ್ಲ.’ ನನ್ನ ಬೆನ್ನಹಿಂದೆ ನಿಂತಿದ್ದ ಹೆಂಗಸೊಬ್ಬಳು ತನ್ನ ಗೆಳತಿಗೆ ಹೇಳುವುದು ನನ್ನ ಕಿವಿಗೂ ಬಿದ್ದಿತ್ತು. ನಾನು ಹಿಂತಿರುಗಿ ಅವಳಾರು ಎಂದು ಹುಡುಕುವಷ್ಟರಲ್ಲಿ, ವೇದಿಕೆಯೇರಿದ್ದ ಉಸ್ಮಾನರು, ‘ಇದು ನನ್ನ ಮನೆ. ಇಲ್ಲಿರುವವರೆಲ್ಲರೂ ನನ್ನ ಅತಿಥಿಗಳು. ಪ್ರವಾದಿಯವರಿಗಾಗಿ ನಾನು ಏರ್ಪಡಿಸಿರುವ ಸಮಾರಂಭಕ್ಕೆ ಬಂದಿರುವ ನನ್ನ ಅತಿಥಿಗಳನ್ನು ಅವಮಾನಿಸುವ ಅಧಿಕಾರ ಯಾರಿಗೂ ಇಲ್ಲ’ ಎಂದು ಕಟುವಾಗಿಯೇ ಹೇಳಿದ್ದರು.

ಅ ಬಳಿಕ ಎಲ್ಲರೂ ಔತಣ ಕೂಟ ಏರ್ಪಡಿಸಿದ್ದ ಮಂಟಪದತ್ತ ಹೆಜ್ಜೆ ಹಾಕಿದರು.

ಅದೇ ರಾತ್ರಿ ನಾನು ಪ್ರವಾದಿಯವರೊಂದಿಗೆ, ನನಗಾಗಿ ಸಿದ್ಧಪಡಿಸಲಾಗಿದ್ದ ಹೊಸ ಮನೆಗೆ ಹೆಜ್ಜೆ ಹಾಕಿದ್ದೆ.

–೩–

ಹೊಸಮನೆಯಲ್ಲಿ ಹೊಸ ಸಂಸಾರ ಆರಂಭಿಸಿ ತಿಂಗಳಾಗುತ್ತಾ ಬಂದಿದ್ದರೂ, ನಿನ್ನೆಯ ರಾತ್ರಿಯನ್ನೂ ಕೂಡಿಸಿಕೊಂಡರೆ, ಅವರ ಜೊತೆಗೆ ನನಗಿರಲು ಸಾಧ್ಯವಾದದ್ದು ಕೇವಲ ಮೂರು ರಾತ್ರಿಗಳಲ್ಲಿ ಮಾತ್ರ. ಹಗಲೆಲ್ಲ ಸಂಗಾತಿಗಳೊಂದಿಗೆ ಸಭೆಗಳ ಮೇಲೆ ಅವರು ಸಭೆ ನಡೆಸುತ್ತಿರುವುದನ್ನು ಮನೆಬಾಗಿಲಲ್ಲಿ ನಿಂತರೇನೇ ನೋಡಲು ಸಾಧ್ಯವಾಗುತ್ತಿತ್ತು. ಮಸೀದಿಗೆ ಹೊಂದಿಕೊಂಡೇ ಇದ್ದ ಆಯಿಷಾರ ಮನೆಯ ಪಕ್ಕದಲ್ಲೇ ನನ್ನ ಮನೆಯಿದ್ದದ್ದು.

ನಾಲ್ಕನೇ ರಾತ್ರಿಯ ನನ್ನ ಸರದಿ ಬರುವುದಕ್ಕಿಂತ ಎರಡು ದಿನಗಳ ಹಿಂದಿನ ಸಂಜೆಯ ನಮಾಜಿನ ಬಳಿಕ ಸಭೆ ಮುಕ್ತಾಯಗೊಳಿಸಿ ಹೊರಟಿದ್ದ ಪ್ರವಾದಿಯವರು ನನ್ನ ಮನೆ ಬಾಗಿಲವರೆಗೂ ಬಂದು, ‘ನಾಳೆ ಅಲ್ಲ, ನಾಳದು ನೀನು ನನ್ನೊಂದಿಗೆ ಉಮ್ರಾ ಯಾತ್ರೆಗೆ ಬರುವವಳಿರುವೆ. ಹೊರಡುವ ಸಿದ್ಧತೆ ಮಾಡಿಕೊಳ್ಳು’ ಎಂದು ಹೇಳಿಹೋದಾಗ ನಾನು ಸಂತೋಷದಿಂದ ಕುಣಿದಿದ್ದೆ.

ನನ್ನ ಹುಟ್ಟಿದ ಊರು ಮಕ್ಕಾವನ್ನು ನೋಡದೆ ಹನ್ನೆರಡು ವರ್ಷಗಳೇ ಕಳೆದು ಹೋಗಿದ್ದವು. ನನ್ನಬ್ಬ ಅಬೂಸುಫ್ಯಾನರು ಈಗ ಮಕ್ಕಾದ ಮಹಾನಾಯಕ. ಅಲ್ಲಿಗೆ





ಹೋದಾಗ ಅವರನ್ನು ದೂರದಿಂದಾದರೂ ಕಾಣಲು ಸಾಧ್ಯವಾದೀತೇನೋ ಎಂಬ ಸಣ್ಣ ಆಸೆ. ಸೋದರ ಮುಆವಿಯಾ ಎಲ್ಲಿಂದಾದರೂ ನುಸುಳಿಕೊಂಡು ಬಂದು ‘ಅಕ್ಕಾ..’ ಎಂದು ತಬ್ಬಿಕೊಳ್ಳದಿರಲಾರ. ಅವನು ಅಕ್ಕಾ ಎನ್ನುತ್ತಾನೋ ಅಥವಾ ‘ಉಮ್ಮಾ’ ಅನ್ನುತ್ತಾನೊ? ಹೇಗೆ ಬೇಕಾದರೂ ಕರೆಯಲಿ, ಅವನು ಕಾಣಲು ಸಿಕ್ಕರೆ ಸಾಕು. ಮದುವೆ ದಿನದ ಗದ್ದಲದಲ್ಲಿ ಅವನೊಂದಿಗೆ ಸರಿಯಾಗಿ ಮಾತನಾಡಲೇ ಸಾಧ್ಯವಾಗಿದ್ದಿರಲಿಲ್ಲ. ನಾನು ಉಮ್ರಾ ವಿಧಿಗಳನ್ನು ನಡೆಸಲ ಮಕ್ಕಾಕ್ಕೆ ಬರಲಿರುವ ಸುದ್ದಿ, ಎಲ್ಲರಿಗಿಂತ ಮೊದಲೇ ಅವನಿಗೆ ತಲುಪಿರುತ್ತದೆ. ನನ್ನನ್ನು ಮಾತನಾಡಿಸಲು ಬಂದೇ ಬಂದಾನು.

ಅಷ್ಟು ದೂರ ಹೋಗಿ ಉಮ್ರಾ ಮುಗಿಸಿಕೊಂಡು ಬರುವಾಗ ಏನಿಲ್ಲವೆಂದರೂ ಒಂದು ತಿಂಗಳು ದಾಟುತ್ತದೆ. ಹತ್ತಿರ ಹತ್ತಿರ ಎರಡು ತಿಂಗಳೂ ಆಗಬಹುದು. ಪ್ರವಾದಿಯವರ ಜೊತೆಯಲ್ಲೇ ಅಷ್ಟು ದಿನಗಳ ಕಾಲ ಇರುವುದಕ್ಕಿಂತ ಹೆಚ್ಚಿನ ಸಂಭ್ರಮ ಇನ್ನೇನಿರಲು ಸಾಧ್ಯ? ಯಾವ ಪ್ರವಾದಿಪತ್ನಿಗೂ ಇದುವರೆಗೂ ಸಿಕ್ಕಿರದ ಅವಕಾಶ ಇದು. ವರ್ಷದ ಹಿಂದೆ ಪ್ರವಾದಿಯವರು ಉಮ್ಮು ಸಲಾಮಾರನ್ನು ಕರೆದುಕೊಂಡು ಉಮ್ರಾ ಯಾತ್ರೆಗೆ ಹೋಗಿದ್ದೇನೋ ನಿಜ. ಆದರೆ, ನನ್ನಬ್ಬ ಅಬೂಸುಫ್ಯಾನರು ಯಾರನ್ನೂ ಮಕ್ಕಾದ ಗಡಿದಾಟಿ ಒಳಬರಲು ಬಿಟ್ಟಿರಲಿಲ್ಲ. ತಮ್ಮ ಸಂಗಾತಿಗಳೊಂದಿಗೆ ಪ್ರವಾದಿಯವರು ನಡುದಾರಿಯಿಂದಲೇ ಮರಳಿ ಬಂದಿದ್ದರಂತೆ. ಆದರೆ, ಅದೇ ದಿನ ಮಕ್ಕಾದವರೊಂದಿಗೆ ಮಾಡಿಕೊಂಡ ‘ಹುದೈಬಿಯಾ’ ಒಪ್ಪಂದದಂತೆ ಮುಂದಿನ ದಿನಗಳಲ್ಲಿ, ವರ್ಷದಲ್ಲೊಂದು ಬಾರಿ, ಮೂರುದಿನಗಳ ಅವಧಿ ಮೀರದಂತೆ ಕಅಬಾ ಸಂದರ್ಶನ ಮಾಡಲು ಅವಕಾಶವಿತ್ತು.

ಈ ಬಾರಿ ಹೊರಟ ತಂಡದಲ್ಲಿ ನಾನೂ ಇರಲಿರುವೆನೆಂಬ ಸುದ್ದಿ ಪ್ರವಾದಿಪತ್ನಿಯರಿಗೆಲ್ಲ ಅಸೂಯೆ ಹುಟ್ಟಿಸಬಲ್ಲದಾಗಿತ್ತು. ಯಾರಿಗೆ ಮೊದಲು ತಿಳಿಸುವುದು? ಎಂದು ಯೋಚಿಸುತ್ತಿದ್ದಾಗ ನೆನಪಾದವರು ಉಮ್ಮು ಸಲಾಮಾ. ಅವರ ಮನೆಗೆ ಹೋಗಿ ಕುಶಲ ವಿಚಾರಿಸುತ್ತಾ, ಹಿಂದಿನ ವರ್ಷ ಉಮ್ರಾ ಯಾತ್ರೆಗೆ ಹೋಗಿದ್ದಾಗ ನಡುದಾರಿಯಿಂದಲೇ ಮರಳಿಬರಲು ಕಾರಣವೇನು? ಅಲ್ಲಿ ಏನೆಲ್ಲಾ ನಡೆದಿತ್ತು? ಇತ್ಯಾದಿ ವಿಚಾರಿಸುವ ನೆಪದಲ್ಲಿ, ಈ ಬಾರಿ ನನಗೆ ಸಿಕ್ಕಿದ ಅವಕಾಶವನ್ನು ಅವರಿಗೂ ತಿಳಿಸಿದರೆ ನನ್ನ ಸಂತಸವನ್ನು ಕೊಚ್ಚಿಕೊಂಡಂತಾಗುವುದಿಲ್ಲ. ಹೀಗೆಲ್ಲ ಯೋಚಿಸಿದ ನಾನು ಮರುದಿನ ಮುಂಜಾನೆಯೇ ಉಮ್ಮು ಸಲಾಮಾರ ಮನೆಗೆ ಹೊರಟಿದ್ದೆ.

ನಾಲ್ಕು ಮನೆಗಳನ್ನು ದಾಟಿದರೆ ಉಮ್ಮು ಸಲಾಮಾರ ಮನೆ.

ಆಯಿಷಾರವರ ಮನೆಯೆದುರು ಹೋಗುತ್ತಿರುವಾಗ ಅಂಗಳದಲ್ಲಿದ್ದ ಅವರು ನನ್ನನ್ನು ಕಂಡು ನಕ್ಕು ಮಾತನಾಡಿಸಿದ್ದು ಮಾತ್ರವಲ್ಲ. ಮನೆಯೊಳಗೆ ಬಂದು ಹೋಗುವಂತೆ ಆಮಂತ್ರಿಸಿದ್ದರು. ಮದುವೆಯಾಗಿ ಬಂದ ಬಳಿಕ ನಾಲ್ಕೈದು ಬಾರಿ ಅವರೊಂದಿಗೆ ಕುಶಲ

ಮಾತು ಬದಲಿಸಿಕೊಂಡಿದ್ದದ್ದೇನೋ ಇತ್ತು. ಅವರ ಮನೆಯೊಳಗೆ ಕಾಲಿಟ್ಟಿದ್ದಿರಲಿಲ್ಲ. ಹೊಸ್ತಿಲು ದಾಟಿ ಮನೆಯೊಳಗೆ ಹೆಜ್ಜೆಯಿರಿಸಿದಾಗ ನನಗೆ ಅಚ್ಚರಿಯಾಗಿತ್ತು. ನಾನು ಕಲ್ಪಿಸಿಕೊಂಡಿದ್ದ ಯಾವ ದೃಶ್ಯವೂ ಅಲ್ಲಿರಲಿಲ್ಲ ನನ್ನ ಮನೆಯೊಳಗೆ ಏನೆಲ್ಲ ಅಗತ್ಯದ ಪರಿಕರಗಳಿದ್ದವೋ, ಅವುಗಳಿಗಿಂತ ಹೆಚ್ಚಿನದೇನನ್ನೂ ನನಗಲ್ಲಿ ಕಾಣಲಾಗಲಿಲ್ಲ.

ಪ್ರವಾದಿಯವರ ನೆಚ್ಚಿನ ಹೆಂಡತಿ ಆಯಿಷಾ ಮಾತ್ರ ಎಂದು ಮದೀನಾದ ಜನರು ಮಾತನಾಡಿಕೊಳ್ಳುತ್ತಿದ್ದಾರೆ ಎಂಬ ಸುದ್ದಿ ಅಬಿಸೀನಿಯಾದಲ್ಲಿದ್ದ ದಿನಗಳಲ್ಲೇ ನನಗೆ ತಲುಪಿತ್ತು. ಇಲ್ಲಿಗೆ ಬಂದಾಗ, ನಾನು ಕೇಳಿಸಿಕೊಂಡ ಸುದ್ದಿಗಳೆಲ್ಲವೂ ನಿಜ ಎಂದೂ ಅನ್ನಿಸಿತ್ತು. ಆದರೆ, ಆಯಿಷಾರ ಮನೆಯೊಳಗಿನ ದೃಶ್ಯವನ್ನು ಕಂಡಾಗ ನಾನು ಅಚ್ಚರಿಗೊಂಡಿದ್ದೆ. ತಮ್ಮ ಪ್ರೀತಿಯ ಹೆಂಡತಿಗಾಗಿ ಪ್ರವಾದಿಯವರು ಒಂದು ಒಳ್ಳೆಯ ಉಡುಪನ್ನೂ ಹೆಚ್ಚಾಗಿ ಕೊಟ್ಟಂತೆ ಕಾಣಿಸಲಿಲ್ಲ. ಗೋಡೆಗೆ ಹೊಡೆದ ಮರದ ಮೊಳೆಯಲ್ಲಿ ತೂಗುತ್ತಿದ್ದ ಎರಡು ನಿಲುವಂಗಿಗಳನ್ನು ಹೊರತುಪಡಿಸಿದರೆ, ಬೇರಾವ ಉಡುಪುಗಳೂ ಅಲ್ಲಿ ಕಾಣಿಸಲಿಲ್ಲ. ತಮ್ಮ ಸಂಗಾತಿಗಳಿಗೆ ಪ್ರವಾದಿಯವರು ಯಾವ ರೀತಿಯಲ್ಲಿ ಸರಳವಾಗಿ ಬದುಕಲು ಹೇಳುತ್ತಿದ್ದರೋ, ಅದನ್ನೇ ಅವರು ಆಚರಿಸಿದಂತೆ ಕಂಡಿತ್ತು. ಬೇರೆ ಪ್ರವಾದಿಪತ್ನಿಯರ ಮನೆಗಳ ಪರಿಸ್ಥಿತಿಯೂ ಇದಕ್ಕಿಂತ ಬೇರೆಯಾಗಿರಲು ಸಾಧ್ಯವಿಲ್ಲ ಎಂಬುದಂತೂ ಖಂಡಿತವಾಗಿತ್ತು.

‘ಉಮ್ಮು ಸಲಾಮಾರ ಮನೆಗೆ ಹೊರಟಿದ್ದೆ. ದಾರಿಯಲ್ಲಿ ನೀವು ಸಿಕ್ಕಿದಿರಿ’ ಎನ್ನುತ್ತಾ ಅವರು ಹಾಸಿದ ಚಾಪೆಯ ಮೇಲೆ ಕುಳಿತೆ. ತಟ್ಟೆಯೊಂದರಲ್ಲಿ ಬಿಸಿ ಹಾಲು ತಂದು ಇರಿಸಿದ ಆಯಿಷಾ, ‘ಅದೇನು ಉಮ್ಮಾ, ಬೆಳಗ್ಗೆ ಬೆಳಗ್ಗೆಯೇ ಅವರ ಹತ್ತಿರ ಅಂತಹಾ ಕೆಲಸ?’ ಆಯಿಷಾ ನಗುತ್ತಲೇ ಪ್ರಶ್ನಿಸಿದ್ದರು. ಅವರ ಮಾತಿನಲ್ಲಿ ಕೊಂಕು ಬೆರೆತಿರುವಂತೇನೂ ಅನ್ನಿಸಲಿಲ್ಲ. ಸಹಜ ಕುತೂಹಲದಿಂದಲೇ ಪಶ್ನಿಸಿದ್ದಂತಿತ್ತು.

‘ಹಾಗೇನಿಲ್ಲ ಉಮ್ಮಾ..’ ಎಂದೆ ಸಂಕೋಚದಿಂದ. ನನ್ನ ಅರೆವಾಸಿ ವಯಸ್ಸಿನ ಹೆಣ್ಣು ಆಯಿಷಾ. ಬಹಳವೆಂದರೆ ಹದಿನಾರು ದಾಟಿದ್ದಿರಬಹುದು. ನಾನೋ ಅದಾಗಲೇ ಮೂವತ್ತೈದರ ಗಡಿ ದಾಟಿದ್ದವಳು. ಆಯಿಷಾರನ್ನು ‘ಉಮ್ಮಾ’ ಎನ್ನಲೂ ಸಂಕೋಚ. ಆದರೆ, ಪ್ರವಾದಿಪತ್ನಿಯರನ್ನು ಎಲ್ಲರೂ ಉಮ್ಮಾ ಎಂದೇ ಗೌರವಿಸ ಬೇಕು. ನಾನು ‘ಉಮ್ಮಾ’ ಎಂದದ್ದನ್ನು ಕೇಳಿಸಿಕೊಂಡ ಆಯಿಷಾರ ತುಟಿಗಳಲ್ಲೂ ತುಂಟ ನಗು ಇಣುಕುತ್ತಿತ್ತು.

‘ಹೌದು ಉಮ್ಮಾ, ಮುಖ್ಯವಾದ ಕೆಲಸವೇ. ಕಳೆದ ವರ್ಷ ಪ್ರವಾದಿಯವರೊಂದಿಗೆ ಉಮ್ರಾ ಯಾತ್ರೆ ಹೊರಟ ಅವರು, ಅರ್ಧ ದಾರಿಯಿಂದಲೇ ಮರಳಿ ಬಂದರಲ್ಲ. ಯಾಕೆ ಹಾಗಾಯಿತು ಅಂತ ತಿಳಿದುಕೊಳ್ಳುವ ಆಸೆ’ ಎಂದವಳು, ಮುಖ್ಯ ಕಾರಣವನ್ನು ಹೇಳುವುದೇ ಬೇಡವೇ ಎಂಬ ಗೊಂದಲದಲ್ಲಿ ಹೇಳಿಯೇಬಿಟ್ಟಿದ್ದೆ. ‘ಇನ್ನೆರಡು ದಿನಗಳ





ಬಳಿಕ ಪ್ರವಾದಿಯವರು ಉಮ್ರಾ ಯಾತ್ರೆ ಮಾಡುವವರಿದ್ದು, ನನ್ನನ್ನೂ ಬರಲು ಹೇಳಿದ್ದಾರೆ’ ಎಂದೆ.

‘ನನಗೆ ಗೊತ್ತಿದೆ.’ ಆಯಿಷಾ ತಣ್ಣಗೆ ಹೇಳಿದ್ದರು; ಅದೇನೂ ವಿಶೇಷವಾದ ಸುದ್ದಿಯೇ ಅಲ್ಲವೆಂಬಂತೆ.

‘ಓ..! ನಿಮಗೆ ಆಗಲೇ ಗೊತ್ತಾಗಿಬಿಟ್ಟಿದೆಯೆ?’

‘ಹೌದು ಉಮ್ಮಾ. ಪ್ರವಾದಿಯವರು ಮೊನ್ನೆಯೇ ಹೇಳಿದ್ದರು. ಪ್ರವಾಸ ಹೋಗು ವಾಗಲೆಲ್ಲ ಅದು ಧಾರ್ಮಿಕ ಯಾತ್ರೆಯಾಗಿರಲಿ, ರಣರಂಗಕ್ಕೇ ಇರಲಿ, ಒಬ್ಬರು ಹೆಂಡತಿಯನ್ನು ಕರೆದುಕೊಂಡು ಹೋಗುವುದು ಅವರ ಕ್ರಮ. ಕಳೆದ ಸಲ ಉಮ್ಮು ಸಲಾಮಾರ ಸರದಿ ಬಂದಿತ್ತು. ಈಗ ನಿಮ್ಮ ಸರದಿ. ಸಂತೋಷದಿಂದಲೇ ಹೋಗಿ ಬನ್ನಿ. ಈ ಸಲ ಏನೂ ಸಮಸ್ಯೆಯಾಗುವುದಿಲ್ಲ. ಮೂರು ದಿನಗಳ ಅವಧಿಯೊಳಗೆ ನಿರ್ವಹಿಸುವ ಉಮ್ರಾ ವಿಧಿಗಳಿಗೆ ಯಾರೂ ಅಡ್ಡಿಪಡಿಸದಂತೆ ಒಪ್ಪಂದವಾಗಿದೆ’ ಎಂದರು.

ಅಷ್ಟರಲ್ಲಿ ಹೊರಗೆಲ್ಲೋ ಹೋಗಿದ್ದ ದಾಸಿ ಅಫೀರಾ ಒಳಗೆ ಬಂದಿದ್ದಳು.

ನನ್ನನ್ನು ಕಂಡವಳೇ ಅಚ್ಚರಿಯಿಂದ ಕಣ್ಣರಳಿಸುತ್ತಾ, ‘ನಮ್ಮ ಮನೆಯಲ್ಲಿ ನಿಮ್ಮನ್ನು ಕಾಣುವಾಗ ಬಹಳ ಸಂತೋಷವಾಯಿತು ಉಮ್ಮಾ. ನಾಳದು ನೀವು ಉಮ್ರಾ ಯಾತ್ರೆಗೆ ಹೊರಡುತ್ತಿರುವುದು ಗೊತ್ತಾಯಿತು. ನಿಮ್ಮ ಅದೃಷ್ಟ. ಪ್ರವಾದಿಯವರ ಮನೆಗೆ ಬಂದು ಇನ್ನೂ ತಿಂಗಳಾಗಿಲ್ಲ. ಆಗಲೇ ನಿಮಗೆ ಈ ಅವಕಾಶ ಸಿಕ್ಕಿದೆ’ ಎಂದಳು. ಅವಳಿಗೆ ನಿಜವಾಗಿಯೂ ಸಂತಸವಾದಂತಿತ್ತು. ಹಾಗಾದರೆ, ನಾನು ಪ್ರವಾದಿಯವರೊಂದಿಗೆ ಉಮ್ರಾ ಯಾತ್ರೆಗೆ ಹೋಗುತ್ತಿರುವುದು ಎಲ್ಲರಿಗೂ ಗೊತ್ತಾಗಿಬಿಟ್ಟಿದೆ. ನಾನೇ ಹೋಗಿ ಟಾಂ ಟಾಂ ಮಾಡುವ ಅಗತ್ಯವೇ ಇಲ್ಲ ಎಂದೆನ್ನಿಸಿತ್ತು.

‘ಅಫೀರಾ..’ ಆಯಿಷಾ ಕರೆದಿದ್ದರು, ‘ನೀನೊಮ್ಮೆ ಉಮ್ಮು ಸಲಾಮಾರ ಮನೆಗೆ ಹೋಗಿಬರುತ್ತೀಯಾ? ನಾನು ವಿನಂತಿಸುತ್ತಿರುವೆ ಅಂತ ಹೇಳಿ ಅವರನ್ನು ಕರೆದುಕೊಂಡು ಇಲ್ಲಿಗೆ ಬರುವೆಯಾ? ರಮ್ಲರವರು ನಮ್ಮ ಮನೆಯಲ್ಲಿರುವುದನ್ನೂ ಹೇಳಿಬಿಡು.’

ಪೂರ್ತಿಯಾಗಿ ಆಯಿಷಾ ಮಾತು ಮುಗಿಸುವ ಮೊದಲೇ ಅಫೀರಾ ಹೋಗಿಬಿಟ್ಟಿದ್ದಳು.

ಉಮ್ಮು ಸಲಾಮಾರ ಮನೆಗೆ ನಾನೇ ಹೋಗದೆ, ಆಯಿಷಾರ ಮನೆಯಲ್ಲಿ ಕುಳಿತು ಕೊಂಡು ಅವರನ್ನು ಕರೆಸಿದರೆ ಅವರು ಬಂದಾರೆಯೆ? ಹಾಲಿನ ತಟ್ಟೆಯನ್ನೆತ್ತಿಕೊಂಡು ಅರೆವಾಸಿಯೂ ಕುಡಿದಿದ್ದಿರಲಿಲ್ಲ. ಅಷ್ಟರಲ್ಲೇ ‘ಅಸ್ಸಲಾಮು ಅಲೈಕುಂ ಉಮ್ಮಾ. ಸುದ್ದಿ ಗೊತ್ತಾಯಿತು. ಸಂಜೆಯ ಹೊತ್ತಲ್ಲಿ ನಾನೇ ನಿಮ್ಮ ಮನೆಗೆ ಬಂದು ಅಭಿನಂದಿಸ ಬೇಕೆಂದಿದ್ದೆ. ನೀವು ಇಲ್ಲೇ ಇರುವುದು ತಿಳಿಯಿತು. ಮನೆಯಲ್ಲಿ ಹಾಲೂ ಮುಗಿದಿತ್ತು. ಪಾತ್ರೆ ಎತ್ತಿಕೊಂಡು ಇಲ್ಲಿಗೇ ಬಂದೆ ನೋಡಿ’ ಎನ್ನುತ್ತಾ ನನ್ನ ಪಕ್ಕದಲ್ಲೇ ಕುಳಿತುಬಿಟ್ಟರು ಉಮ್ಮು ಸಲಾಮಾ.

‘ಇವರು ನಿಮ್ಮ ಮನೆಗೆಂದೇ ಹೊರಟಿದ್ದರು.’ ನಾನು ಹೇಳಲು ಸಂಕೋಚ ಪಡುತ್ತಿರುವ ವಿಷಯವನ್ನು ಆಯಿಷಾರೇ ಪ್ರಸ್ತಾಪಿಸಿದ್ದರು, ‘ಅಂಗಳದಲ್ಲಿದ್ದ ನಾನು ಇವರನ್ನು ಮನೆಯೊಳಗೆ ಕರೆದೆ. ಬಂದರು. ಇಲ್ಲಿಂದ ನೇರವಾಗಿ ನಿಮ್ಮ ಮನೆಗೇ ಬರುವವರಿದ್ದರು. ಅವರಿಗೊಂದು ಕುತೂಹಲವಿದೆ ಉಮ್ಮಾ. ಕಳೆದ ವರ್ಷ ಉಮ್ರಾ ಮಾಡಲು ನೀವೆಲ್ಲ ಹೋಗಿದ್ದಾಗ, ಮಕ್ಕಾದವರು ನಿಮ್ಮನ್ನೆಲ್ಲ ತಡೆದು ಮರಳಿ ಕಳುಹಿಸಿದ್ದರಲ್ಲ? ಆ ದಿನ ಅಲ್ಲಿ ನಿಜವಾಗಿಯೂ ನಡೆದದ್ದು ಏನು ಅಂತ ತಿಳಿದುಕೊಳ್ಳುವ ಆಸೆ ಇವರಿಗೆ.’

‘ಆ ಕೆಟ್ಟ ದಿನವನ್ನು ನೆನಪಿಸಿಕೊಳ್ಳುವುದೇ ಇಲ್ಲ ನಾನು.’ ಬೇಸರದಿಂದಲೇ ಹೇಳಿದ್ದರು ಉಮ್ಮು ಸಲಾಮಾ. ನನ್ನ ಗಂಡನಿಗೆ ಮಾಡಲಾಗಿದ್ದ ದೊಡ್ಡ ಅವಮಾನ ಅದು’ ಎಂದು ಅವರು ಹೇಳುತ್ತಿರುವಂತೆಯೇ ನಾನು, ‘ಅದಕ್ಕೆ ಕಾರಣ ನನ್ನ ಅಬ್ಬ ಎಂಬುದು ನನಗೂ ಅವಮಾನ’ ಎಂದೆ.

‘ಅದರಲ್ಲಿ ನಿಮ್ಮ ತಪ್ಪೇನಿದೆ ಉಮ್ಮಾ.., ನೀವೇನು ಮಾಡಲು ಸಾಧ್ಯವಿತ್ತು? ನಿಮ್ಮ ಮುಖ ನೋಡಲೂ ಇಷ್ಟಪಡದ ಅವರು, ನಿಮ್ಮ ಮಾತನ್ನು ಕೇಳುತ್ತಾರೆಯೆ?’ ಉಮ್ಮು ಸಲಾಮಾ ನನ್ನನ್ನೇ ಸಮಾಧಾನಿಸಿದ್ದರು. ‘ಈಗ ಹೇಗೂ ನೀವೇ ಅಲ್ಲಿಗೆ ಹೋಗುತ್ತಿದ್ದೀರಲ್ಲ. ನಿಮ್ಮ ಬಗ್ಗೆ ಸ್ವಲ್ಪವಾದರೂ ಪ್ರೀತಿ ಉಳಿಸಿಕೊಂಡಿದ್ದರೆ, ನಿಮ್ಮನ್ನು ಕಾಣಲು ಅವರು ಬಂದರೂ ಬಂದಾರು. ಆಗ ಹೇಳಿಬಿಡಿ. ವರ್ಷದ ಹಿಂದೆ ಅವರು ಮಾಡಿದ್ದು ಸರಿಯಲ್ಲ ಎಂಬುದನ್ನು. ನಾವೇನು ಮಕ್ಕಾದ ಮೇಲೆ ಯುದ್ಧಕ್ಕೆ ಹೊರಟಿದ್ದವರೆ? ಯುದ್ಧ ನಿಷೇಧಿತ ದುಲ್‌ಕಅದ್ ತಿಂಗಳಲ್ಲಿ, ಕಅಬಾದಲ್ಲಿ ತವಾಫ್ ಮಾಡುವ ಆಸೆಯಿಂದ ಹೋಗಿದ್ದವರಲ್ಲವೇ ನಾವು?

‘ದುಲ್ ಹಲೀಫ್’ ಮೂಲಕ, ಹುದೈಬಿಯಾದ ‘ಸನಿಇಯತುಲ್ ಮರಾರ್’ ವರೆಗಿನ ಬಲುಕಷ್ಟದ ಹಾದಿಯನ್ನು ಕಲ್ಲು ಮುಳ್ಳುಗಳನ್ನು ತುಳಿಯುತ್ತಾ ಹೋಗಿದ್ದ ನಮ್ಮನ್ನು ಮಕ್ಕಾದವರು ನಿರ್ದಾಕ್ಷಿಣ್ಯವಾಗಿ ತಡೆದಿದ್ದರು. ನಾವೆಲ್ಲ ಉಳಿದು ಕೊಂಡಿದ್ದದ್ದು ‘ಸನಿಇಯತುಲ್ ಮರಾರ್’ನಲ್ಲಿ. ಮರುದಿನ ಸಂಜೆಯೇ ಕುರೈಶರ ಸಂಧಾನಕಾರರಾಗಿ ಬನೀ ಕುಝಾಆ ಗೋತ್ರದ ಬುದೈಲ್ ಬಂದಿದ್ದರು. ಪ್ರವಾದಿಯವರು ಅವರಿಗೆ, ‘ನಾವು ಬಂದಿರುವುದು ಉಮ್ರಾ ವಿಧಿಗಳನ್ನು ಪೂರೈಸಲು ಮಾತ್ರ. ಯುದ್ಧಕ್ಕಲ್ಲ’ ಎಂದು ತಿಳಿಸಿ, ಕುರೈಶರಿಂದ ಅನುಮತಿ ಪಡೆದು ತಿಳಿಸುವಂತೆ ಹೇಳಿ ಕಳುಹಿಸಿದ್ದರು. ಆದರೆ ಎರಡು ದಿನ ಕಳೆದರೂ ಮಕ್ಕಾದವರಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ.

‘ಎರಡನೆಯ ರಾತ್ರಿಯಿಡೀ ಗಂಡ ನಿದ್ರೆಯಿಲ್ಲದೆ ಹೊರಳಾಡುತ್ತಿದ್ದರು. ನಮ್ಮವರಲ್ಲೇ ಯಾರನ್ನಾದರೂ ಸಂಧಾನಕ್ಕೆ ಕಳುಹಿಸಿದರೆ ಪ್ರಯೋಜನವಾದೀತೇ





ಎಂಬ ಆಸೆ ಅವರಿಗೆ. ಸಾಮಾನ್ಯವಾಗಿ ಅವರು ರಾತ್ರಿಯ ಊಟ ತಪ್ಪಿಸಿಕೊಳ್ಳುತ್ತಿರಲಿಲ್ಲ. ಆದರೆ ಅಂದು ಉಪವಾಸ ಮಲಗಿದ್ದರು. ನನಗೂ ಉಪವಾಸವೇ.

‘ಮೂರನೆಯದಿನ ಬೆಳಗ್ಗೆಯೇ ಸಹವರ್ತಿ ಉಸ್ಮಾನರನ್ನು ಸಂಧಾನಕ್ಕೆ ಕಳುಹಿಸಿದ್ದರೆ, ಸಂಜೆಯ ಹೊತ್ತಿಗೆ ಅವರನ್ನು ಹತ್ಯೆಮಾಡಲಾಗಿದೆ ಎಂಬ ಭಯಾನಕ ವಾರ್ತೆ ಮರಳಿ ಬಂದಿತ್ತು. ಸಿಟ್ಟಿಗೆದ್ದ ಸಂಗಾತಿಗಳೆಲ್ಲ ಪ್ರತೀಕಾರದ ಪ್ರತಿಜ್ಞೆ ಮಾಡಿದಾಗ, ಬೇರೆ ದಾರಿ ಕಾಣಿಸದೆ ನನ್ನ ಗಂಡ ಕೂಡಾ ಸಮ್ಮತಿಸಿದ್ದರು. ಆದರೆ, ನಾವು ಯುದ್ಧಕ್ಕೆ ಸಜ್ಜಾಗುತ್ತಿರುವಂತೆಯೇ ಕುರೈಶರ ಮತ್ತೊಬ್ಬ ಪ್ರತಿನಿಧಿ ಅಮ್ರ್ ಪುತ್ರ ಸುಹೈಲ್ ಬಂದಿದ್ದರು.

‘ಉಸ್ಮಾನರು ಕೊಲೆಯಾಗಿರುವುದೆಂಬ ಸುದ್ದಿ ಸುಳ್ಳು. ಅವರು ನಮ್ಮ ಜೊತೆಯಲ್ಲಿ ಸುರಕ್ಷಿತರಾಗಿದ್ದಾರೆ. ನಾನು ತಂದಿರುವ ಒಡಂಬಡಿಕೆಯ ಪತ್ರಕ್ಕೆ ತಾವು ಮುದ್ರೆಯೊತ್ತಿದರೆ, ಎರಡೂ ಕಡೆಗಳಲ್ಲಿ ಸಂಭವಿಸಬಹುದಾದ ಸಾವು ನೋವುಗಳನ್ನು ತಪ್ಪಿಸಿಕೊಳ್ಳಬಹುದು’ ಎಂದಿದ್ದರು.

ನಮಗೆಲ್ಲ ಕುತೂಹಲ. ಮಕ್ಕಾದವರ ಒಡಂಬಡಿಕೆಯ ಶರತ್ತುಗಳು ಏನಿರಬಹುದು ಎಂದು.

ಸುಹೈಲ್ ಮಕ್ಕಾದವರ ಶರತ್ತುಗಳನ್ನು ವಿವರಿಸಿದ್ದರು. ಆ ಶರತ್ತುಗಳಂತೆ, ನಮಗೆ ಮಕ್ಕಾ ಪ್ರವೇಶವನ್ನು ಆ ವರ್ಷ ನಿಷೇಧಿಸಲಾಗಿತ್ತು. ಮುಂದಿನ ವರ್ಷಗಳಲ್ಲಿ ಅಂದರೆ, ಈ ವರ್ಷದಿಂದ, ವರ್ಷದಲ್ಲಿ ಮೂರು ದಿನಗಳ ಮಿತಿಯೊಳಗೆ ಒಂದು ಬಾರಿ ಮಾತ್ರ ಕಅಬಾ ದರ್ಶನ ಮಾಡಬಹುದಿತ್ತು. ಈ ಶರತ್ತುಗಳನ್ನು ಮದೀನಾದವರು ಒಪ್ಪಿಕೊಂಡರೆ ಮಾತ್ರ ಮಕ್ಕಾದವರು ಈ ಹತ್ತು ವರ್ಷಗಳ ಅವಧಿಯ ಒಡಂಬಡಿಕೆಗೆ ಸಮ್ಮತಿಸುತ್ತಾರೆ. ಈ ಹತ್ತು ವರ್ಷಗಳ ಅವಧಿಯಲ್ಲಿ ಯಾವನಾದರೂ ಕುರೈಶನು ಮದೀನಾದವರಲ್ಲಿ ಆಶ್ರಯ ಬೇಡಿದರೆ, ಆತನನ್ನು ಮದೀನಾದವರು, ಮಕ್ಕಾದ ಕುರೈಶರಿಗೆ ಒಪ್ಪಿಸಬೇಕು. ಆದರೆ, ಪ್ರವಾದಿಯವರು ಪ್ರತಿಪಾದಿಸುತ್ತಿರುವ ಧರ್ಮವನ್ನು ತೊರೆದು ಮದೀನಾದಿಂದ ಮಕ್ಕಾಕ್ಕೆ ಬರುವವರನ್ನು ಕುರೈಶರು ಮತ್ತೆ ಮದೀನಾದವರಿಗೆ ಒಪ್ಪಿಸಬೇಕಾಗಿಲ್ಲ.

ಈ ಶರತ್ತುಗಳನ್ನು ಆಲಿಸುತ್ತಿದ್ದಂತೆಯೇ ಸಹವರ್ತಿಗಳೆಲ್ಲರ ರಕ್ತವೂ ಕುದಿಯಲಾರಂಭಿಸಿದ್ದವು.

ಆದರೆ, ಎಲ್ಲರಿಗೂ ಅಚ್ಚರಿಯಾಗುವಂತೆ ಪ್ರವಾದಿಯವರು, ‘ಈ ಎಲ್ಲ ಶರತ್ತುಗಳಿಗೆ ಅಲ್ಲಾಹುವಿನ ಸಮ್ಮತಿ ಇದೆ’ ಎಂದುಬಿಟ್ಟಿದ್ದರು!

ಅಷ್ಟರಲ್ಲಿ, ಅಲ್ಲಿಗೆ ಓಡೋಡಿ ಬಂದ ಸುಹೈಲರ ಮಗ ಅಬೂಜಂದಲ್ ಪ್ರವಾದಿಯವರ ಕಾಲ ಬಳಿ ಕುಸಿದುಬಿಟ್ಟಿದ್ದ. ಆತನ ಕೈಗಳಲ್ಲಿ ಬೇಡಿ ಜೋತಾಡುತ್ತಿತ್ತು. ಮೈ ತುಂಬಾ ಗಾಯಗಳು. ಹಣೆಯಿಂದ ರಕ್ತ ಸೋರುತ್ತಿತ್ತು.

'ಓಹೋ.., ನೀನು ತಪ್ಪಿಸಿಕೊಂಡು ಇಲ್ಲಿಯರೆಗೂ ಬಂದೆಯಾ?' ಮಗನನ್ನು ಕಂಡ ಸುಹೈಲ್ ಸಿಟ್ಟಿನಿಂದ ಅಬ್ಬರಿಸಿದ್ದರು.

'ಹೌದು. ನಾನು ಪ್ರವಾದಿಯವರ ಧರ್ಮವನ್ನು ಸ್ವೀಕರಿಸಿರುವೆ. ಪ್ರಾಣ ರಕ್ಷಣೆಗಾಗಿ ಪ್ರವಾದಿಯವರ ಬಳಿ ಬಂದಿರುವೆ. ನೀವು ನನ್ನ ಅಬ್ಬನಾಗಿರುವುದು ನಿಜವಾದರೂ, ನೀವಿಲ್ಲಿ ಏನೂ ಮಾಡಲಾರಿರಿ' ಎನ್ನುತ್ತಾ ಅಬೂಜಂದಲ್ ತಂದೆಯನ್ನು ಧಿಕ್ಕರಿಸಿದ್ದ.

'ನಮ್ಮ ನಡುವೆ ಒಡಂಬಡಿಕೆಯಾಗಿದೆ. ಇವರಾರೂ ನಿನಗೆ ರಕ್ಷಣೆ ನೀಡುವಂತಿಲ್ಲ.' ಸುಹೈಲ್ ಗಹಗಹಿಸಿ ನಕ್ಕಿದ್ದರು.

'ಇನ್ನೂ ಸಂಧಾನಕ್ಕೆ ನನ್ನ ಮುದ್ರೆ ಬಿದ್ದಿಲ್ಲವಲ್ಲಾ ಸುಹೈಲ್?' ಪ್ರವಾದಿಯವರು ಪ್ರಶ್ನಿಸಿದರೆ, 'ನೀವು ಮಾತು ಕೊಟ್ಟಿರುವಿರಿ. ಪ್ರವಾದಿಯ ಬಾಯಿಯಿಂದ ಸುಳ್ಳು ಬರಬಾರದಲ್ಲಾ?' ಎಂದು ವ್ಯಂಗ್ಯವಾಡುತ್ತಾ ನಮ್ಮೆಲ್ಲರೆದುರೇ ಒಂದು ಕೈಯಲ್ಲಿ ಒಡಂಬಡಿಕೆಯ ಪತ್ರ, ಮತ್ತೊಂದರಲ್ಲಿ ತನ್ನ ಮಗ ಅಬೂಜಂದಲನ ಜುಟ್ಟು ಹಿಡಿದುಕೊಂಡು ಸುಹೈಲರು ಎಳೆದುಕೊಂಡೇ ಹೋಗಿದ್ದರು.

ಆದರೆ, ಅಷ್ಟೆಲ್ಲಾ ಆಗಿದ್ದರೂ ನನ್ನ ಗಂಡನಿಗೆ ಸಿಟ್ಟು ಬಂದಿರಲಿಲ್ಲ. ಅಲ್ಲಾಹು ಬೇರೇನನ್ನೋ ನಿರ್ಧರಿಸಿದ್ದಿರಬಹುದು ಎನ್ನುತ್ತಾ ಎಲ್ಲರನ್ನೂ ಸಮಾಧಾನಪಡಿಸಲು ಯತ್ನಿಸುತ್ತಿದ್ದರು. ಆದರೆ, ಪ್ರವಾದಿಯವರ ಅನಿರೀಕ್ಷಿತ ನಿರ್ಧಾರ ಜೊತೆಗಿದ್ದವರಿಗೆಲ್ಲ ಬಹಳ ನಿರಾಸೆಯನ್ನುಂಟುಮಾಡಿತ್ತು. ಉಮ್ಮರ್ ಬಿನ್ ಖತ್ತಾಬರಂತೂ ಖಡ್ಗ ಝಳಪಿಸುತ್ತಾ, ನೀವೆಲ್ಲ ಇಲ್ಲೇ ಇದ್ದುಬಿಡಿ, ನಾನೊಬ್ಬನೇ ಮಕ್ಕಾದೊಳಗೆ ನುಗ್ಗಿ ಅವರೆಲ್ಲರ ಕತ್ತು ಸೀಳಿಬರುವೆ ಎಂದೇ ಅಬ್ಬರಿಸಿದ್ದರು.

ಆ ರಾತ್ರಿಯೂ ನನ್ನ ಗಂಡ ನಿದ್ರೆ ಮಾಡಿರಲಿಲ್ಲ.

ಕಾರಣ ನನಗೂ ಗೊತ್ತಿತ್ತು. ಮದೀನಾದಿಂದ ಹೊರಡುವಾಗ ಬಲಿ ಕೊಡುವ ಸಲುವಾಗಿ ಸಾಕಷ್ಟು ಪ್ರಾಣಿಗಳನ್ನು ಕೊಂಡುಹೋಗಿದ್ದೆವು. ಆದರೆ, ಮಕ್ಕಾದೊಳಗೆ ಪ್ರವೇಶ ಸಿಗದ ಕಾರಣ ಬಲಿ ಅರ್ಪಿಸಲು ಸಾಧ್ಯವಾಗಿದ್ದಿರಲಿಲ್ಲ. ಎಲ್ಲರಿಗೂ ಪ್ರವಾದಿಯವರ ನಿರ್ಧಾರದಿಂದ ಬಹಳ ನಿರಾಸೆಯಾಗಿತ್ತು. ಎಲ್ಲರೂ ಕ್ಷೌರ ಮಾಡಿಕೊಂಡು, ಪ್ರಾಣಿಗಳನ್ನೂ ಅಲ್ಲಿಯೇ ಬಲಿಕೊಡುವಂತೆ ನನ್ನ ಗಂಡ ತಮ್ಮ ಸಂಗಾತಿಗಳಿಗೆ ಮಧ್ಯಾಹ್ನವೇ ಆದೇಶ ನೀಡಿದ್ದರು. ಆದರೆ, ಮುಸ್ಸಂಜೆಯವರೆಗೂ ಪ್ರವಾದಿಯವರ ಆದೇಶವನ್ನು ಒಬ್ಬರೂ ಪಾಲಿಸಿರಲಿಲ್ಲ. ಹಿಂದೆಂದೂ ಹೀಗಾಗಿದ್ದಿರಲಿಲ್ಲ. ಇದರಿಂದಾಗಿ ಅವರು ಬಹಳ ನೊಂದುಕೊಂಡಿದ್ದರು.

'ನಾನೊಂದು ಸಲಹೆ ನೀಡಬಹುದೆ?' ನಾನು ಪ್ರವಾದಿಯವರ ಕೈಗಳನ್ನು ಹಿಡಿದುಕೊಂಡು ಪ್ರಶ್ನಿಸಿದ್ದೆ.





'ಅದೇನು ಹೇಳು' ಎಂದಷ್ಟೇ ಹೇಳಿದ್ದರು.

'ನಿಮ್ಮ ದುಃಖದ ಕಾರಣ ನನಗೂ ಗೊತ್ತಿದೆ. ನಿಮ್ಮ ಆದೇಶವನ್ನು ಸಂಗಾತಿಗಳು ಪಾಲಿಸದಿರುವುದು ನಿಮ್ಮ ಮೇಲಿನ ಸಿಟ್ಟಿನಿಂದಲ್ಲ. ಅವರಿಗೆ ಸಿಟ್ಟಿರುವುದು ಮಕ್ಕಾದ ಕುರೈಶರ ವಿರುದ್ಧ. ತಮ್ಮ ಆದೇಶವನ್ನು ಧಿಕ್ಕರಿಸಲೇಬೇಕೆಂಬ ಹಟ ಸಹವರ್ತಿಗಳಿಗೆ ಇಲ್ಲ. ತಮಗಾಗಿರುವ ನೋವನ್ನು ಈ ರೀತಿಯಲ್ಲಿ ಪ್ರಕಟಿಸುತ್ತಿದ್ದಾರೆ ಅಷ್ಟೆ. ನನ್ನದೊಂದು ಸಲಹೆ ಇದೆ. ನಾಳೆ ಬೆಳಗ್ಗೆ ತಾವೇ ಅಂಗಳದಲ್ಲಿ ಕುಳಿತು ತಲೆಕ್ಷೌರ ಮಾಡಿಸಿಕೊಂಡು ಕುರ್ಬಾನಿಗೆ ಸಿದ್ಧತೆ ನಡೆಸಿ. ನಿಮ್ಮನ್ನು ಕಂಡು ಅವರೂ ಹಾಗೆ ಮಾಡಿಸಿಕೊಳ್ಳುತ್ತಾರೆ. ನೋಡುತ್ತಿರಿ' ಎಂದೆ.

ನನ್ನ ಕೈಗಳನ್ನು ಬಲವಾಗಿ ಅದುಮಿದ ಪ್ರವಾದಿಯವರು, 'ನಿನ್ನ ಮಾತು ಸರಿ. ನಾಳೆ ಎಲ್ಲರಿಗೂ ಕಾಣಿಸುವಂತೆ ನಾನೇ ಮೊದಲು ಕ್ಷೌರ ಮಾಡಿಸಿಕೊಳ್ಳುವೆ' ಎಂದರು. ಮರುದಿನದ ಬೆಳಕು ಮೇಲೆರುತ್ತಿರುವಂತೆಯೇ, ಡೇರೆಯ ಹೊರಗೆ ಕುಳಿತುಕೊಂಡು ಎಲ್ಲರಿಗೂ ಕಾಣಿಸುವಂತೆ ತಮ್ಮ ತಲೆ ಬೋಳಿಸಿಕೊಳ್ಳತೊಡಗಿದ್ದರು.

ನನ್ನ ಸಲಹೆಯ ಪರಿಣಾಮ ಅದ್ಭುತವಾಗಿತ್ತು! ನೋಡು ನೋಡುತ್ತಿರುವಂತೆಯೇ, ಎಲ್ಲರೂ ಪ್ರವಾದಿಯವರನ್ನು ಅನುಕರಿಸಿದ್ದರು! ಪ್ರಾಣಿಗಳ ಕುರ್ಬಾನಿಗೆ ತಯಾರಿ ಆರಂಭಿಸಿದ್ದರು! ಬೆಟ್ಟದಂತೆ ಎದುರಾಗಿದ್ದ ಸಮಸ್ಯೆಯೊಂದು ಮಂಜಿನಂತೆ ಕರಗಿಹೋಗಿತ್ತು.

ಮರುದಿನವೇ ನಾವು ಮದೀನಾದತ್ತ ಮರಳಿ ಪ್ರಯಾಣ ಆರಂಭಿಸಿದ್ದೆವು.

ವರ್ಷದ ಹಿಂದೆ ನಡೆದ ಕಹಿ ಘಟನೆಗಳನ್ನೆಲ್ಲ ನೆನಪಿಸಿಕೊಂಡು, ಪ್ರತಿಯೊಂದನ್ನೂ ವಿವರಿಸುತ್ತಿದ್ದ ಉಮ್ಮು ಸಲಾಮಾರು, ನನ್ನ ಕಣ್ಣುಗಳಲ್ಲಿ ಕಣ್ಣು ನೆಟ್ಟು, 'ಕಳೆದ ವರ್ಷದಲ್ಲಿ ಮಕ್ಕಾದವರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಯ ಶರತ್ತುಗಳಿಗನುಸಾರವಾಗಿಯೇ, ಪ್ರವಾದಿಯವರು ಈಗ ಉಮ್ರಾ ಯಾತ್ರೆಗೆ ಹೊರಟಿದ್ದಾರೆ. ಅವರೊಂದಿಗೆ ಉಮ್ರಾ ಯಾತ್ರೆ ಕೈಗೊಳ್ಳುವ ಅವಕಾಶ ನಿಮಗೂ ಸಿಕ್ಕಿದೆ. ನೀವು ಅದೃಷ್ಟವಂತರು. ಅಷ್ಟು ಮಾತ್ರವಲ್ಲ ಉಮ್ಮಾ..., ಮಕ್ಕಾದಿಂದ ಪ್ರವಾದಿಯವರು ಮದೀನಾಕ್ಕೆ ವಲಸೆ ಬಂದ ಬಳಿಕ, ಕಅಬಾ ದರ್ಶನ ಮಾಡಿದ ಮೊದಲ ಸತ್ಯವಿಶ್ವಾಸಿ ಮಹಿಳೆಯೆಂಬ ಕೀರ್ತಿಗೂ ನೀವು ಪಾತ್ರವಾಗಲಿದ್ದೀರಿ. ಸಂತೋಷದಿಂದ ಹೋಗಿಬನ್ನಿ' ಎಂದು ಹೇಳುತ್ತಾ ನನ್ನನ್ನು ಮನಸಾರೆ ಅಭಿನಂದಿಸಿದ್ದರು.

–೪–

ನಾನು ಸವಾರಿ ಮಾಡುತ್ತಿದ್ದ ಒಂಟೆಯ ಮುಂದೆ, 'ಕಸ್ವಾ' ಹೆಸರಿನ ಒಂಟೆಯ ಮೇಲೆ ನನ್ನ ಗಂಡ. ಅವರ ಬೆನ್ನ ಹಿಂದೆ ಇನ್ನೂರು ಒಂಟೆಗಳಲ್ಲಿ ಪ್ರಮುಖ ಸಹಾಬಿಗಳು, ಅವರ ಹಿಂದೆ ಎರಡು ಸಾವಿರದಷ್ಟು ಸತ್ಯವಿಶ್ವಾಸಿಗಳ ನಾಲ್ಕು ಸಾಲುಗಳು. ಉಮ್ರಾ ವಿಧಿಗಳನ್ನು ನಿರ್ವಹಿಸುವ ಸಲುವಾಗಿ ನಾವೆಲ್ಲ ಮದೀನಾದಿಂದ ಮಕ್ಕಾದತ್ತ ಹೊರಟಿದ್ದೆವು.

ಒಂಬತ್ತು ದಿನಗಳ ಪಯಾಣದ ಬಳಿಕ 'ಬತನ್ ಯಾಜತ್' ಎಂಬ ಪ್ರದೇಶ ತಲುಪಿದ್ದೆವು. ಕುರ್ಬಾನಿಗೆಂದು ಕರೆತಂದಿದ್ದ ಎಪ್ಪತ್ತು ಒಂಟೆಗಳನ್ನೂ, ನಲುವತ್ತು ಒಂಟೆಗಳ ಬೆನ್ನಮೇಲಿದ್ದ ಯುದ್ಧಾಸ್ತ್ರಗಳನ್ನೂ ಅಲ್ಲೇ ಇಳಿಸಿ, ಕಾವಲಿಗೆ ಇನ್ನೂರು ಯೋಧರನ್ನು ನೇಮಿಸಿ ನಾವು ಮಕ್ಕಾದತ್ತ ಪ್ರಯಾಣ ಮುಂದುವರಿಸಿದ್ದೆವು. ಅಲ್ಲಿಂದ ಮಕ್ಕಾಕ್ಕೆ ಕೆಲವೇ ದಿನಗಳ ಪ್ರಯಾಣ.

ಈ ನಡುವೆ ನಾನು ಕನಸಿನಲ್ಲೂ ಊಹಿಸಿದ್ದಿರದ ಒಂದು ಘಟನೆ ನಡೆದಿತ್ತು,

ರಾತ್ರಿಯ ನಮಾಜು ಮುಗಿಸಿದ ಬಳಿಕ ನನ್ನ ಗಂಡ, ಡೇರೆಯ ಹೊರಗೆ ಕೆಲವು ಸಂಗಾತಿಗಳ ಜೊತೆಗೆ ಮಾತನಾಡುತ್ತಾ ಕುಳಿತಿದ್ದರು. ನಾನೂ ಅಲ್ಲಿಯೇ ಕುಳಿತು ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆ.

ಆ ಕತ್ತಲ ರಾತ್ರಿಯಲ್ಲಿ ವಯಸ್ಸಾದ ಹಿರಿಯರೊಬ್ಬರು ಅಲ್ಲಿಗೆ ಬಂದು, 'ನಾನೊಬ್ಬ ಮಕ್ಕಾದ ನಿವಾಸಿ. ನಿಮ್ಮೆನ್ನೆಲ್ಲ ಕಂಡು ಮಾತನಾಡಿಸಿಕೊಂಡು ಹೋಗುವ ಆಸೆಯಿಂದ ಬಂದಿರುವೆ' ಎಂದವರು ನನ್ನ ಗಂಡನ ಬಳಿಗೆ ಸರಿದು, 'ಪ್ರವಾದಿಯವರಿಗೆ ನನ್ನ ನೆನಪು ಇದೆಯೆಂದು ಭಾವಿಸುವೆ' ಎಂದಿದ್ದರು. ಜೊತೆಗಿದ್ದ ಸಹಾಬಿಗಳೆಲ್ಲ ಮುಖ ಮುಖ ನೋಡಿಕೊಂಡಿದ್ದರು. ಇದ್ದಕ್ಕಿದ್ದಂತೆಯೇ ಕುಳಿತಲ್ಲಿಂದ ಎದ್ದುನಿಂತ ಪ್ರವಾದಿಯವರು ಅವರನ್ನು ಬಲವಾಗಿ ಆಲಿಂಗಿಸಿಕೊಂಡು, 'ಸಂಬಂಧದಲ್ಲಿ ನೀವು ನನ್ನ ಚಿಕ್ಕಪ್ಪ ಅಬ್ಬಾಸ್ ಅಲ್ಲವೆ?' ಎಂದು ಸಂತಸ ವ್ಯಕ್ತಪಡಿಸಿದ್ದರು.

'ಹೌದು. ನೀವು ಸರಿಯಾಗಿಯೇ ಗುರುತು ಹಿಡಿದುಬಿಟ್ಟಿರುವಿರಿ. ಈಗ ನನ್ನ ಅರ್ಧ ಕೆಲಸ ಮುಗಿದಂತಾಗಿದೆ' ಎಂದವರು, ನನ್ನತ್ತ ದಿಟ್ಟಿಸುತ್ತಾ, 'ನೀವು ನಮ್ಮ ನಾಯಕರಾದ ಅಬೂಸುಫ್ಯಾನರ ಮಗಳಲ್ಲವೆ?' ಎಂದು ಪ್ರಶ್ನಿಸಿದ್ದರು.

ನನಗೆ ಅಚ್ಚರಿಯಾಗಿತ್ತು. ನಾನು ಮಕ್ಕಾ ತೊರೆದು ಹನ್ನೆರಡು ವರ್ಷಗಳೇ ಕಳೆದಿದ್ದವು. ಆದರೂ ಅವರಿಗೆ ನನ್ನ ಗುರುತು ಸಿಕ್ಕಿತ್ತು. 'ಹೌದು' ಎಂದ ನಾನು, 'ಕುಳಿತುಕೊಳ್ಳಿ' ಎಂದೆ.

ನನ್ನ ಗಂಡನ ಎದುರು ಕುಳಿತ ಅವರು, 'ನಾನು ಮಕ್ಕಾದಿಂದ ಒಂದು ಸಂದೇಶವನ್ನು ಹೊತ್ತುಕೊಂಡು ಬಂದಿರುವೆ' ಎಂದಾಗ, ನನ್ನ ರಕ್ತವೆಲ್ಲ ತಣ್ಣಗಾಗಿತ್ತು. ವರ್ಷದ





ಹಿಂದೆ ಉಮ್ರುಸಲಾಮ ಬಂದಿದ್ದಾಗಲೂ, ಹೀಗೆಯೇ ಮಕ್ಕಾದವರ ಸಂದೇಶವನ್ನು ಹೊತ್ತುಕೊಂಡು ಒಬ್ಬರು ಹಿರಿಯರು ಬಂದಿದ್ದರು. ಅವರಂದು ತಂದಿದ್ದ ಅ ಸಂದೇಶವೇ ಉಮ್ರಾಯಾತ್ರೆಗೆ ಬಂದಿದ್ದವರನ್ನೆಲ್ಲ, ಮಕ್ಕಾದ ಗಡಿಯಿಂದಲೇ ಮರಳಿ ಮದೀನಾಕ್ಕೆ ಕಳುಹಿಸಿತ್ತು.

'ಏನದು ನೀವು ತಂದಿರುವ ಹೊಸ ಸಂದೇಶ?' ಉಮ್ಮರ್ ಬಿನ್ ಖತ್ತಾಬರು ಸಿಟ್ಟಿನಿಂದಲೇ ಪ್ರಶ್ನಿಸಿದ್ದರು. 'ಮಕ್ಕಾದವರು ಈ ಸಲವೂ ನಮ್ಮನ್ನು ಮಕ್ಕಾದ ಗಡಿಯಿಂದ ಮರಳಿ ಕಳುಹಿಸಲಿದ್ದಾರೆಯೆ? ಹಾಗೇನಾದರೂ ಅವರು ಯೋಚಿಸಿದ್ದರೆ ಅದು ಅವರ ಅಂತ್ಯಕ್ಕೆ ಕಾರಣವಾಗುತ್ತದೆ.' ಉಮ್ಮರ್ ಬಿನ್ ಖತ್ತಾಬರು, ನನ್ನ ಮನಸ್ಸಿನ ಒಳಗಡೆ ಹುಟ್ಟಿಕೊಂಡಿದ್ದ ಸಿಟ್ಟಿಗೆ ಮಾತಿನ ರೂಪ ಕೊಟ್ಟಿದ್ದರು.

ನನ್ನ ಗಂಡ ತಮ್ಮ ಎಡಗೈಯೆತ್ತಿ, ಉಮ್ಮರ್ ಬಿನ್ ಖತ್ತಾಬರತ್ತ ಸುಮ್ಮನಿರಿ ಎಂಬಂತೆ ದಿಟ್ಟಿಸಿ ನೋಡಿದ್ದರೆ, ಸಂದೇಶದೊಂದಿಗೆ ಬಂದಿದ್ದ ಆ ಅತಿಥಿ ಜೋರಾಗಿ ನಕ್ಕಿದ್ದರು.

'ನೀವು ಯೋಚಿಸಿದಂತಿರುವ ಸಂದೇಶವನ್ನು ನನ್ನಂಥ ಮುದಿಯನ ಹೆಗಲ ಮೇಲಿರಿಸಿ ಕಳುಹಿಸುವಷ್ಟು ಮೂರ್ಖರೇನೂ ಅಲ್ಲ ಮಕ್ಕಾದವರು. ನಾನೋ ಖಡ್ಗದ ತುದಿ ಯಾವುದು ಬುಡ ಯಾವುದು ಎಂಬುದನ್ನು ಮರೆತು ಬಹಳ ಕಾಲವಾಗಿದೆ. ನನ್ನನ್ನು ಇಲ್ಲಿಗೆ ಕಳುಹಿಸಿದವರು ಮಕ್ಕಾದವರೆಂಬುದೇನೋ ನಿಜ. ಮಕ್ಕಾದಲ್ಲಿರುವ ಎಲ್ಲರೂ ಮದೀನಾದ ಶತ್ರುಗಳಲ್ಲ. ನಿಮ್ಮನ್ನು ಪ್ರೀತಿಸುವವರೂ ಇದ್ದಾರೆ. ಹಾಗೆ ನಿಮ್ಮನ್ನು ಪ್ರೀತಿಸುವವರೊಬ್ಬರಿಂದ ಸಂದೇಶ ತಂದವನು ನಾನು. ಈ ಸಂದೇಶವು, ಹತ್ತು ಹನ್ನೆರಡು ವರ್ಷಗಳಿಂದ ಮಕ್ಕಾ ಮತ್ತು ಮದೀನಾಗಳ ನಡುವೆ ನಡೆಯುತ್ತಿರುವ ತಿಕ್ಕಾಟಗಳ ಶವಪೆಟ್ಟಿಗೆಗೆ ಹೊಡೆಯುವ ಕೊನೆಯ ಮೊಳೆಯಾಗುವುದಂತೂ ಖಂಡಿತ.' ಎಂದಾಗ ಎಲ್ಲರ ಮುಖದಲ್ಲಿ ಕಾಣಿಸಿದ್ದ ಆತಂಕ ಮರೆಯಾಗಿತ್ತು.

'ಆಯಿತು ಅಬ್ಬಾಸ್ ಅವರೇ. ತಮ್ಮ ಮಾತನ್ನು ನಾವು ಒಪ್ಪಿಕೊಂಡಿದ್ದೇವೆ. ನಮ್ಮ ಬದುಕನ್ನೇ ಬದಲಾಯಿಸುವಂತಹ ಬಂಗಾರದ ಕೀಲಿ ಕೈಯನ್ನೇ ಅದಷ್ಟು ದೂರದಿಂದ ನೀವು ಹೊತ್ತುಕೊಂಡು ಬಂದಿದ್ದೀರಿ. ಒಪ್ಪಿಕೊಂಡೆವು. ದಯವಿಟ್ಟು ಅದ್ಯಾವ ಸಂದೇಶವೆಂಬುದನ್ನು ತಿಳಿಸಿಬಿಡಿರಿ.' ವ್ಯಂಗ್ಯಬೆರೆತ ಧ್ವನಿಯಲ್ಲೇ ವಿನಂತಿಸಿದ್ದರು ಅಲೀ.

ನನಗೆ ಮುಜುಗರವಾಗಿತ್ತು. ಪ್ರವಾದಿಯವರ ಎದುರು ಈ ರೀತಿ ಯಾರಾದರೂ ಮಾತಾಡುತ್ತಾರಾ! ಅವರು ಪ್ರವಾದಿಯವರ ಪ್ರೀತಿಯ ಅಳಿಯನಾಗಿದ್ದಿರಬಹುದು. ಆದರೆ ಸಲಿಗೆಗೂ ಒಂದು ಮಿತಿ ಬೇಡವೆ? ಅವರ ದುಡುಕುತನವನ್ನು ನನ್ನ ಮದುವೆ ಸಮಾರಂಭದಲ್ಲೂ ಕಂಡಿದ್ದೆ. ನನ್ನ ಗಂಡನಿಗೂ ಅಲೀಯ ಮಾತು ಇಷ್ಟವಾದಂತಿರಲಿಲ್ಲ. ಸಿಟ್ಟಿನಿಂದಲೇ ಅವರನ್ನು ದಿಟ್ಟಿಸಿ ನೋಡಿದ್ದರು.

'ಈ ರೀತಿಯ ಸಿಟ್ಟು, ವ್ಯಂಗ್ಯಗಳೆಲ್ಲ ನಿನ್ನ ವಯಸ್ಸಿಗೆ ಚೆನ್ನಾಗಿಯೇ ಒಪ್ಪುತ್ತದೆ ಅಲೀ. ನಾನು ಹಾಗೆಲ್ಲ ಸಿಟ್ಟು ಮಾಡಿಕೊಳ್ಳಲಾರೆ, ನೀನು ನನ್ನ ಮೊಮ್ಮಗನ ವಯಸ್ಸಿನವನು.

ನಾನು ಹೇಳಲಿರುವುದನ್ನು ಪೂರ್ತಿಯಾಗಿ ಕೇಳಿಸಿಕೊಳ್ಳುವವರೆಗೆ ತಾಳ್ಮೆ ಇರಲಿ.' ಅಬ್ಬಾಸ್ ಅವರು ಅಲೀಯನ್ನು ನೇರವಾಗಿಯೇ ಎಚ್ಚರಿಸಿದ್ದರು.

'ಅದೇನು ಸಂದೇಶವೆಂದು ಹೇಳಿಬಿಡಿ ಚಿಕ್ಕಪ್ಪಾ..' ಎಂದು ನನ್ನ ಗಂಡ ನಗುತ್ತಲೇ ವಿನಂತಿಸಿದ್ದರು.

'ನನ್ನ ಹೆಂಡತಿಯ ಹೆಸರು ಅಲ್ ಲುಭಾಹ್. ಅವಳಿಗೊಬ್ಬಳು ತಂಗಿ ಇದ್ದಾಳೆ. ಅವಳ ಹೆಸರು ಮೈಮೂನಾ. ಅವಳಿಗೆ, ಅಮ್ರ್ ಅಲ್ ತಖಾಫೀ ಎಂಬವರ ಮಗ ಮಸೂದ್ ಎಂಬವನೊಂದಿಗೆ ಮದುವೆಯಾಗಿತ್ತು. ಅವನ ಮರಣದ ಬಳಿಕ ಅಬ್ದುಲ್ ಉಜ್ಜಾರ್‌ವರ ಮಗ ಅಬೂ ರುಮಾನ್ ಎಂಬವನನ್ನು ಮದುವೆಯಾಗಿದ್ದಳು. ದುರದೃಷ್ಟವಶಾತ್ ಅವನೂ ತೀರಿಕೊಂಡ.'

'ಈ ಮದುವೆ ಮತ್ತು ಮರಣಗಳ ಪಟ್ಟಿಯನ್ನು ಹಿಡಿದುಕೊಂಡು ಬಂದವರಾ ನೀವು? ನನ್ನ ತಾತನ ವಯಸ್ಸಾಗಿರುವ ಅತಿಥಿಗಳೇ' ಅಲೀ ಮೆತ್ತಗೆ ಗೊಣಗಿಕೊಂಡಿದ್ದರೂ ನನ್ನ ಗಂಡನಿಗೆ ಕೇಳಿಸಿತ್ತು. 'ಅಲೀ.., ಅತಿಥಿಗಳನ್ನು ಸತ್ಕರಿಸುವುದೆಂದರೆ ಇದೇನಾ?' ಪ್ರವಾದಿಯವರು ಮತ್ತೊಮ್ಮೆ ಅಲೀಯನ್ನು ಎಚ್ಚರಿಸಿದ್ದರು.

'ಈಗ ಮೈಮೂನಾ ಒಂಟಿ ಹೆಣ್ಣು. ಅವಳು ನಿಮ್ಮಲ್ಲೊಬ್ಬರನ್ನು ಮದುವೆಯಾಗ ಬಯಸಿದ್ದಾಳೆ' ಅತಿಥಿ ತಣ್ಣಗೆ ಹೇಳಿದಾಗ ಇಡೀ ಸಭೆಯೇ ಸ್ಥಬ್ದವಾಗಿತ್ತು!

ಮದುವೆ ಪ್ರಸ್ತಾಪಕ್ಕೆ ಸಮಯವೇ ಇದು? ಉಮ್ಮರ್ ಬಿನ್ ಖತ್ತಾಬರಿಗೂ ಅತಿಥಿಗಳ ವರ್ತನೆ ಇಷ್ಟವಾದಂತಿರಲಿಲ್ಲ; ಅವರ ಮುಖ ಸಿಂಡರಿಸಿಕೊಂಡದ್ದನ್ನು ನಾನು ಕಡೆಗಣ್ಣಿನಲ್ಲೇ ಗಮನಿಸಿದ್ದೆ. ಅದು ಪ್ರವಾದಿಯವರ ಅರಿವಿಗೂ ಬಂದಿತ್ತು. ಅವರು ಮಂದಹಾಸ ಬೀರುತ್ತಲೇ ಅತಿಥಿಗಳತ್ತ ನೋಡಿ, 'ಹೆಣ್ಣೊಬ್ಬಳು ಗಂಡೊಬ್ಬನನ್ನು ಮದುವೆಯಾಗಬಯಸುವುದು ತಪ್ಪೇನೂ ಅಲ್ಲ. ಅದು ಹೆಣ್ಣಿನ ಹಕ್ಕು. ಆದರೆ, ಅವಳ ಮದುವೆ ಪ್ರಸ್ತಾಪವನ್ನು ಹೊತ್ತುಕೊಂಡು, ಈ ಇಕ್ಕಟ್ಟಿನ ಸಂದರ್ಭದಲ್ಲಿ ತಾವು ಬರಲು ಕಾರಣವೇನು ಚಿಕ್ಕಪ್ಪ?' ಎಂದು ಪ್ರಶ್ನಿಸಿದ್ದರು.

'ಹೌದು. ನನಗೆ ಗೊತ್ತಿದೆ' ಅತಿಥಿ ಯಾವುದೇ ತಡವರಿಕೆಯಿಲ್ಲದೆ, ನಿಧಾನವಾಗಿಯೇ ಹೇಳತೊಡಗಿದ್ದರು. 'ತಾವೆಲ್ಲ ಕೇವಲ ಮೂರು ದಿನಗಳ ಕಾಲ ಮಾತ್ರ ಮಕ್ಕಾದೊಳಗೆ ಇರುವವರು. ಈಗಾಗಲೇ ಮಕ್ಕಾದವರ ಜೊತೆಗೆ ನೀವು ಸಮ್ಮತಿಸಿರುವ ಒಡಂಬಡಿಕೆಯಂತೆ, ಮಕ್ಕಾದ ಯಾರಾದರೊಬ್ಬರು ಆಶ್ರಯ ಬಯಸಿ ಮದೀನಾಕ್ಕೆ ಬಂದರೆ, ಅವರನ್ನು ಮಕ್ಕಾದವರಿಗೆ ಮರಳಿಸುವ ನಿರ್ಬಂಧ ನಿಮ್ಮ ಮೇಲಿದೆ. ಆ ಒಡಂಬಡಿಕೆಯಂತೆ ಯಾವಳೇ ಹೆಣ್ಣಿಗೂ ಈ ದಿನಗಳಲ್ಲಿ ಮದೀನಾದವರನ್ನು ಮದುವೆಯಾಗುವ ಅವಕಾಶವಿಲ್ಲ. ಆದರೆ, ಉಮ್ರಾ ಯಾತ್ರೆಗೆ ಬಂದು





ಮಕ್ಕಾದೊಳಗೆ ಉಳಿದುಕೊಳ್ಳುವ ಮೂರು ದಿನಗಳ ಅವಧಿಯಲ್ಲಿ ನಿಮ್ಮಲ್ಲೊಬ್ಬರನ್ನು ಮದುವೆಯಾದರೆ, ಹೆಂಡತಿಯಾದವಳನ್ನು ಅವರು ಮದೀನಾಕ್ಕೆ ಕರೆದುಕೊಂಡು ಹೋಗುವುದನ್ನು ನಿಷೇಧಿಸುವ ಯಾವುದೇ ನಿಬಂಧನೆಯನ್ನು ಆ ಒಡಂಬಡಿಕೆಯಲ್ಲಿ ಬರೆದಿಲ್ಲ. ಆದ್ದರಿಂದ, ತಾವೆಲ್ಲ ಮದೀನಾದೊಳಗಿರುವ ಮೂರು ದಿನಗಳ ಅವಧಿಯಲ್ಲೇ ಮಕ್ಕಾದ ಒಬ್ಬಳನ್ನು ಮದುವೆಯಾಗಿ, ಮದೀನಾಕ್ಕೆ ಕರೆದುಕೊಂಡು ಹೋಗಬೇಕೆಂಬುದು, ಸಂದೇಶ ಕಳುಹಿಸಿರುವ ಆ ವಿಧವೆಯ ಆಸೆ. ಅವಳ ಆಸೆಯನ್ನು ತಮಗೆ ಮನದಟ್ಟು ಮಾಡಲು ನಾನು ಈ ಅಪರಾತ್ರಿಯಲ್ಲಿ ಬರಬೇಕಾಯಿತು.'

ಎಲ್ಲರೂ ಮುಖ ಮುಖ ನೋಡಿಕೊಂಡರೇ ಹೊರತು ಯಾರೂ ಪ್ರತಿಕ್ರಿಯಿಸಲಿಲ್ಲ.

ಅದನ್ನು ಗಮನಿಸಿದ ಅತಿಥಿಯೇ ಮಾತು ಮುಂದುವರಿಸಿದ್ದರು. 'ಮುಖ್ಯವಾದುದನ್ನೇ ಹೇಳಲು ಮರೆತಿದ್ದೆ. ಈ ಮದುವೆಯ ಮೂಲಕ ಮಕ್ಕಾ ಮತ್ತು ಮದೀನಾದ ನಡುವೆ ಬಾಂಧವ್ಯ ಬೆಳೆಸುವ ಎರಡನೆಯ ದಾರಿಯೊಂದು ತೆರೆದುಕೊಳ್ಳಲಿದೆ. ಅಬೂಸುಫ್ಯಾನರ ಮಗಳನ್ನು ಪ್ರವಾದಿಯವರು ಮದುವೆಯಾಗುವ ಮೂಲಕ ಮೊದಲನೆಯ ದಾರಿಯೊಂದು ಈಗಾಗಲೇ ತೆರೆದಿದೆಯೆಂದು ಮಕ್ಕಾದವರು ಗುಟ್ಟಾಗಿ ಮಾತನಾಡಿಕೊಳ್ಳುತ್ತಿದ್ದಾರೆ' ಎಂದಾಗ, ಎಲ್ಲರ ಕಣ್ಣುಗಳೂ ನನ್ನತ್ತ ತಿರುಗಿದ್ದವು.

ನಾನಂತೂ ಗರ್ವದಿಂದ ಬೀಗಿದ್ದೆ.

ಅವರು ಮಾತು ಮುಗಿಸುವಂತೆ ಹೇಳಿದ್ದರು, 'ಆದ್ದರಿಂದ, ಮಕ್ಕಾದಲ್ಲಿ ತಾವು ಇರುವ ಮೂರು ದಿನಗಳ ಅವಧಿಯಲ್ಲೇ ಪ್ರವಾದಿಯವರನ್ನು ಮದುವೆಯಾಗಲು ಮೈಮೂನಾ ಬಯಸುತ್ತಿದ್ದಾಳೆ.'

ನನ್ನ ಗರ್ವಭಂಗವಾಗಿತ್ತು!!

ಉಮ್ರಾ ಮುಗಿಸಿಕೊಂಡು ಮರಳುತ್ತಿರುವಾಗ, ನನ್ನ ಪಕ್ಕದ ಒಂಟೆಯ ಮೇಲೆ ಹೊಸ ಪ್ರವಾದಿಪತ್ನಿ ಮೈಮೂನಾ ಸವಾರಿ ಮಾಡುತ್ತಿದ್ದರು!

ಈ 'ಪ್ರವಾದಿಪತ್ನಿ' ಯಾವ ಗುಂಪಿನ ಸದಸ್ಯೆಯಾಗಬಹುದು? ಝೈನಬರದ್ದೇ ಅಥವಾ ಆಯಿಷಾರದ್ದೆ?

ಸರದಿ ರಾತ್ರಿಯೊಂದು ಮುಂದೂಡಲ್ಪಡುವ ಬೇಸರದ ನಡುವೆಯೂ ನಗು ಉಕ್ಕಿ ಬಂದಿತ್ತು ನನಗೆ.

* * *

*ನಗು ನನಗೂ ಬಂದಿತ್ತು. ಪಾಪ.., ಹತ್ತಾರು ವರ್ಷಗಳಿಂದ ಕಾತರಿಸುತ್ತಿದ್ದ ಪ್ರವಾದಿಪತ್ನಿ ಪಟ್ಟ ಗಿಟ್ಟಿಸಿಕೊಂಡು ತಿಂಗಳಾಗುವಷ್ಟರಲ್ಲಿ, ಅದೇ ಪಟ್ಟದಲ್ಲಿ ಪಾಲು ಪಡೆಯಲು ಮತ್ತೊಬ್ಬರು ನುಸುಳಿ ಬಂದಿದ್ದರು!*

*'ಮುಗಿಯಿತಾ.., ಅಥವಾ ಇನ್ನೂ ಇದೆಯಾ?' ನಗುತ್ತಲೇ ಪ್ರಶ್ನಿಸಿದ್ದೆ ನಾನು.*

*'ನಿನ್ನ ವ್ಯಂಗ್ಯ ಅರ್ಥವಾಗಿಯಿತು ಗೆಳೆಯಾ. ಆದರೆ, ಪ್ರವಾದಿಯವರು ಮತ್ತೊಂದು ಮದುವೆಯಾಗುವುದನ್ನು ವಿರೋಧಿಸುವ ನೈತಿಕ ಹಕ್ಕನ್ನು ರಮ್ಲರವರು, ಸ್ವತಃ ತಮ್ಮ ಮದುವೆಯ ದಿನಂದಂದೇ ಕಳೆದುಕೊಂಡಿರಲಿಲ್ಲವೆ?' ಅರ್ಷದ್ ಪ್ರಶ್ನಿಸಿದ್ದ.*

*'ನನಗರ್ಥವಾಗಲಿಲ್ಲ' ಎಂದೆ. ನನಗೆ ನಿಜಕ್ಕೂ ಅರ್ಷದ್ ಏನನ್ನು ಹೇಳುತ್ತಿದ್ದಾನೆಂದೇ ಅರ್ಥವಾಗಿರಲಿಲ್ಲ.*

*'ಅರ್ಥವಾಗದಿದ್ದರೆ, ಈಗ ಅರ್ಥ ಮಾಡಿಸುವೆ. ಪ್ರವಾದಿಯವರ ಜೊತೆಗೆ ಮದುವೆ ಒಪ್ಪಂದಕ್ಕೆ ರಮ್ಲರವರು ಸಮ್ಮತಿಸುತ್ತಿರುವಾಗ, ತಮ್ಮ ಪತಿಯಾಗುವವರಿಗೆ ಅದಾಗಲೇ ಹಲವು ಮದುವೆಯಾಗಿದೆಯೆಂಬುದು ಗೊತ್ತಿದ್ದಿರಲಿಲ್ಲವೆ? ಗೊತ್ತಿತ್ತು. ತಾವು ಪ್ರವಾದಿಯವರನ್ನು ಮದುವೆಯಾಗುವುದರಿಂದ, ಈಗಾಗಲೇ 'ಪ್ರವಾದಿ ಪತ್ನಿ' ಪಟ್ಟಕ್ಕೇರಿದವರಿಗೆ ಅಸಮಾಧಾನವನ್ನು ಉಂಟುಮಾಡುತ್ತಿರುವೆನೆಂದು ಅವರಿಗೆ ಹೊಳೆದೇ ಇರಲಿಲ್ಲವೆ? ಹೊಳೆದಿತ್ತು. ಆ ದಿನಗಳಲ್ಲಿ ಕಾಡಿರದಿದ್ದ ಇರುಸು ಮುರುಸು, ತಾವೂ ಒಬ್ಬರು ಪ್ರವಾದಿಪತ್ನಿಯೆನ್ನಿಸಿಕೊಂಡ ಬಳಿಕ ಮಾತ್ರ ಯಾಕೆ ಹಿಂಸಿಸಬೇಕು?'*

*'ನಿಜ ಅರ್ಷದ್. ನಾನು ಈ ದಿಕ್ಕಿನಿಂದ ಯೋಚಿಸಿದ್ದಿರಲಿಲ್ಲ.' ಎಂದೆ.*

*'ಬಾ.., ನನ್ನ ಈ ಮಾತಿಗೆ ಸಮರ್ಥನೆಗಾಗಿ ಮತ್ತೊಂದೆರಡು ಮುಖ್ಯವಾದ ಘಟನೆಗಳನ್ನು ಕಾಣಿಸುವೆ ಬಾ..; ಹೊರಡು' ಎಂದ.*

*ಹೊರಟೆ.*

❐



## ಸ್ವಗತ – ಹದಿನೈದು

## ಅಘೀರಾ ಬಿಂತಿ ಮುಅತ್ತಲ್

–೧–

'ಇನ್ನೊಮ್ಮೆ ಇಂತಹ ಪ್ರಶ್ನೆ ಕೇಳಿದರೆ ಎಚ್ಚರ! ಸಲಿಗೆಗೂ ಒಂದು ಮಿತಿಯಿದೆ ಎಂಬುದನ್ನು ಮರೆಯಬೇಡ' ಎಂದು ಸಣ್ಣ ಒಡತಿ ಗುಡುಗಿದ್ದಾಗ ನಾನು ಹೆದರಿ ಬಿಟ್ಟಿದ್ದೆ. ಕಳೆದ ಹದಿನೆಂಟು ವರ್ಷಗಳಲ್ಲಿ ಒಂದು ದಿನವೂ ಈ ರೀತಿ ವರ್ತಿಸಿದ್ದವರಲ್ಲ ನನ್ನ ಪುಟ್ಟ ಒಡತಿ !

ನಾನು ಕೇಳಿದ್ದ ಪ್ರಶ್ನೆಯಾದರೂ ಏನು ಮಹಾ? ಬೆಳಗ್ಗೆ ಕೆಲಸಕ್ಕೆಂದು ಬಂದಿದ್ದಾಗ, ಅವರ ಕಣ್ಣುಗಳೆರಡೂ ಕೆಂಪು ನೀರಿನ ಕೊಳಗಳಂತೆ ಕಾಣಿಸಿದ್ದುವು. ಅದನ್ನು ಗಮನಿಸಿದ ನಾನು ತಮಾಷೆಯಾಗಿಯೇ ಪ್ರಶ್ನಿಸಿದ್ದೆ, 'ಏನೂ..! ನಿನ್ನೆಯೂ ಜಗಳ ಮಾಡಿಕೊಂಡಿರಾ ನನ್ನ ಒಡತಿ?'

ಅಷ್ಟಕ್ಕೇ ಭೂಮಿಯೇ ಬಿರಿಯುವಂತೆ ಸಿಡಿದುಕೊಂಡುಬಿಟ್ಟಿದ್ದರು ನನ್ನ ಒಡತಿ.

ದೊಡ್ಡ ಒಡತಿಯನ್ನು ಹೊರತುಪಡಿಸಿದರೆ ಸಣ್ಣ ಒಡತಿಯನ್ನು ಹೆಚ್ಚು ಮುಟ್ಟಿ ಆಡಿಸಿದ್ದವಳು ನಾನು. ಅತ್ತಾಗಲೆಲ್ಲ ಎತ್ತಿ ಮುದ್ದಾಡಿದ್ದವಳು ನಾನು. ಬೆಳೆಯುತ್ತಿರುವ ಹೆಣ್ಣೊಬ್ಬಳು ಎದುರಿಸಬೇಕಾಗಿರುವ ಎಲ್ಲ ಸಂಕೋಚಗಳ ಎಲ್ಲ ಸಂಧಿಗ್ಧಗಳ ಸಂದರ್ಭಗಳನ್ನೂ ಅವರು ಚರ್ಚಿಸುತ್ತಿದ್ದದ್ದು ನನ್ನ ಬಳಿ ಮಾತ್ರ; ಅವರ ಉಮ್ಮನೊಂದಿಗೆ ಅಲ್ಲ. ನನ್ನನ್ನು ಎಂದೂ ದಾಸಿಯಂತೆ ನಡೆಸಿಕೊಂಡವರಲ್ಲ ಸಣ್ಣ ಒಡತಿ. ನನ್ನ ಯಾವುದೇ ಚೇಷ್ಟೆಯ ಮಾತಿಗೂ ಸಿಟ್ಟಿಗೆದ್ದವರಲ್ಲ.

ಇಂದು ಇಷ್ಟು ಸಿಟ್ಟಿಗೇಳಬೇಕಾದರೆ, ಬಲು ದೊಡ್ಡ ಕಾರಣವೇ ಇರಬೇಕೆಂದು ಮನದಟ್ಟಾಗಿತ್ತು. ಮತ್ತಷ್ಟು ಕೆದಕಿ ಅವರನ್ನು ಇನ್ನಷ್ಟು ರೇಗಿಸುವುದು ಬೇಡವೆಂದು ಸುಮ್ಮನಾದೆ. ನನ್ನ ಕೆಲಸದಲ್ಲಿ ತೊಡಗಿದೆ.

ಸಣ್ಣ ಒಡತಿಯ ಈ ಅನಿರೀಕ್ಷಿತ ವರ್ತನೆಗೆ, ಗುಂಪು ಕಟ್ಟಿಕೊಂಡು ನಿನ್ನೆ ಸಂಜೆ ಮನೆಗೆ ನುಗ್ಗಿ ಬಂದಿದ್ದ ಪ್ರವಾದಿಪತ್ನಿಯರು ಕಾರಣರಾಗಿದ್ದಿರಬಹುದೆ? ಪಶ್ಚಿಮದ ಬೆಟ್ಟಗಳ ಅಂಚಿನಲ್ಲಿ ನಿನ್ನೆಯ ಸೂರ್ಯ ಇಳಿಯುತ್ತಿರುವ ಹೊತ್ತು ಅದು. ಮನೆಕೆಲಸಗಳನ್ನೆಲ್ಲ ಮುಗಿಸಿಕೊಂಡು ಎಂದಿಗಿಂತ ಸ್ವಲ್ಪ ಬೇಗನೇ ಹೊರಡುವ ತಯಾರಿ ನಡೆಸುತ್ತಿದ್ದೆ.

ನಿನ್ನೆ ಒಡತಿಯ ಸರದಿರಾತ್ರಿ ಬೇರೆ.

ಇನ್ನೇನು, ಹೊಸ್ತಿಲು ದಾಟಿ ಹೊರಗೆ ಕಾಲಿಡಬೇಕು ಅಂದುಕೊಳ್ಳುವಷ್ಟರಲ್ಲಿ, ಹಪ್ಸಾ ಹೊಸ್ತಿಲು ದಾಟಿ ಮನೆಯೊಳಗೆ ಬಂದಿದ್ದರು. ಅವರ ಹಿಂದೆ ಝೈನಬ್, ಅವರ ಹಿಂದೆ ಉಮ್ಮು ಸಲಾಮಾ, ಅವರ ಹಿಂದೆ ರಮ್ಲಾ, ಅವರ ಹಿಂದೆ ಜುವೈರಿಯಾ, ಅವರ ಹಿಂದೆ ಸಫಿಯ್ಯಾ ಮತ್ತು ಅವರ ಹಿಂದೆ ಮೈಮೂನಾ ಒಳಗೆ ನುಗ್ಗಿದಾಗ, ಒಡತಿಯ ಪುಟ್ಟ ಮನೆಯಲ್ಲಿ ಕಾಲೂರಿ ನಿಲ್ಲಲು ನನಗೆ ನೆಲವೇ ಇಲ್ಲದಂತಾಗಿತ್ತು.

ನಾಲ್ಕು ಮಂದಿ ಕುಳಿತರೆ ಒಬ್ಬರ ಕಾಲು ಮತ್ತೊಬ್ಬರಿಗೆ ತಾಕುವಂತಿದ್ದ ಸಣ್ಣ ಗಾತ್ರದ ಮನೆ ಒಡತಿಯದ್ದು. ನನ್ನ ಒಡತಿಯನ್ನೂ ಸೇರಿಸಿಕೊಂಡರೆ ಎಂಟು 'ಪ್ರವಾದಿಪತ್ನಿ'ಯರು ಮನೆಯೊಳಗೆ ನಿಂತುಕೊಂಡಿದ್ದರು. ಹಿರಿಯ ಪ್ರವಾದಿಪತ್ನಿ ಸೌದಾರೂ ಬಂದಿದ್ದಾರೆಯೇ ಎಂದು ಹೊರಗೆ ಇಣುಕಿದೆ. ಇಲ್ಲ; ಅವರು ಕಾಣಿಸಲಿಲ್ಲ. ಮೊದಲ 'ಪ್ರವಾದಿಪತ್ನಿ' ಖದೀಜಾ ಮತ್ತು ಖುಝೈಮಾ ಮಗಳು ಜೈನಬ್ ಈಗ ಬದುಕಿರುತ್ತಿದ್ದರೆ, ಅವರೂ ಬಂದು ಬಿಡುತ್ತಿದ್ದರೇನೋ ಅನ್ನಿಸಿತ್ತು. ನನ್ನ ಮನೆಗೆ ಹೋಗಿಬಿಡುವುದೋ ಅಥವಾ ಒಡತಿಯ ಮನೆಗೆ ಗುಂಪುಗಟ್ಟಿಕೊಂಡು ಬಂದಿರುವ ಅತಿಥಿಗಳನ್ನು ಸತ್ಕರಿಸಲು ನೆರವಾಗುವುದೋ ಎಂಬುದನ್ನು ನಿರ್ಧರಿಸಲಾಗದೆ, ಹೊಸ್ತಿಲ ಬಳಿಯೇ ನಿಂತುಬಿಟ್ಟಿದ್ದೆ.

'ನೀನು ಮನೆಗೆ ಹೋಗು ಅಫೀರಾ...' ಉಮ್ಮು ಸಲಾಮಾ ಹೇಳಿದ್ದರು!

ಎಲ್ಲರಿಗಿಂತಲೂ ಹೆಚ್ಚು ತಿಳಿದವರು ಎಂದು ನಾನು ಗೌರವಿಸುವ 'ಪ್ರವಾದಿಪತ್ನಿ' ಅವರು. ಅವರಿಂದ ಈ ಆದೇಶವನ್ನು ನಾನು ನಿರೀಕ್ಷಿಸಿದ್ದಿರಲಿಲ್ಲ. ನಾನು ದಾಸಿಯಾಗಿರುವುದು ನನ್ನ ಪುಟ್ಟ ಒಡತಿಗೆ, ಉಮ್ಮು ಸಲಾಮರಿಗಲ್ಲ. ನಾನು ನಿಂತಿರುವುದು ನನ್ನ ಒಡತಿಯ ಮನೆಯೊಳಗೆ. ಈ ಮನೆಯೊಳಗೆ ನಾನು ಇರಬೇಕೋ ಬೇಡವೋ ಎಂಬುದನ್ನು ತೀರ್ಮಾನಿಬೇಕಾಗಿರುವವರು ಸಣ್ಣ ಒಡತಿ. ನಾನು ಗೊಂದಲಕ್ಕೊಳಗಾಗಿದ್ದೆ.

'ಸರಿ, ಅಫೀರಾ. ನೀನು ಹೊರಡು. ನಾಳೆ ಬಂದರೆ ಸಾಕು.' ನನ್ನ ಪ್ರೀತಿಯ ಪುಟ್ಟ ಒಡತಿಯೇ ಹೇಳಿದ್ದರು!





ನನಗೆ ಅಳುವೇ ಬಂದುಬಿಟ್ಟಿತ್ತು. ಇವರೆಲ್ಲ ಗುಂಪು ಕಟ್ಟಿಕೊಂಡು ಯಾಕೆ ಬಂದಿರಬಹುದು? ನಾನಿಲ್ಲಿದ್ದರೆ ಅವರಿಗೆ ಏನು ತೊಂದರೆ? ಅವರು ಮಾತನಾಡುವುದನ್ನು ನಾನು ಕೇಳಿಸಿಕೊಳ್ಳಬಾರದೆ? ಅಂತಹ ರಹಸ್ಯವಾದರೂ ಏನಿದ್ದಿರಬಹುದು? ಇಷ್ಟು ಮಂದಿಯನ್ನು ನನ್ನ ಪುಟ್ಟ ಒಡತಿ ಒಬ್ಬಳೇ ಹೇಗೆ ಎದುರಿಸಿಯಾರು? ನಾನೇನು ಮಾಡಬೇಕು ಈಗ? ನಿರ್ಧರಿಸಲಾಗದೆ ಅಲ್ಲೇ ನಿಂತಿದ್ದೆ.

'ಹೆದರಬೇಕಾಗಿಲ್ಲ ಅಫೀರಾ..' ನಾನು ಮನೆಯಿಂದ ದೂರ ಹೋಗಲೇಬೇಕು ಎಂಬುದನ್ನು ಹಪ್ಸಾ ಮತ್ತೊಮ್ಮೆ ನೆನಪಿಸಿದ್ದರು. 'ನಿನ್ನ ಒಡತಿಯನ್ನು ನಾವೇನು ತಿಂದು ಹಾಕುವುದಿಲ್ಲ. ಅವರೊಂದಿಗೆ ಸ್ವಲ್ಪ ಖಾಸಗಿಯಾಗಿ ಮಾತನಾಡುವುದಿದೆ; ಅಷ್ಟೆ. ನಾಳೆ ನಿನಗೆ ಎಲ್ಲ ವಿವರಗಳನ್ನೂ ನಿನ್ನ ಒಡತಿಯೇ ಹೇಳುತ್ತಾರೆ, ಈಗ ನೀನು ಹೋಗು' ಎಂದರು.

ರಾತ್ರಿಯಿಡೀ ನನಗೆ ನಿದ್ರೆಯಿಲ್ಲ. ಒಡತಿಯದ್ದೇ ಯೋಚನೆ.

ಇಂದು ಬೆಳಗ್ಗೆ ಸ್ವಲ್ಪ ಬೇಗನೇ ಬಂದಿದ್ದೆ. ಹಪ್ಸಾ ಹೇಳಿದಂತೆ, ಎಲ್ಲ ವಿವರಗಳನ್ನು ತಿಳಿದುಕೊಳ್ಳುವ ಕುತೂಹಲ.

ಆದರೆ, ಇಂದು ಮನೆಯೊಳಗೆ ಕಾಲಿರಿಸುತ್ತಿದ್ದಂತೆಯೇ ನನ್ನ ಒಡತಿಯ ಕಣ್ಣುಗಳು ಕೆಂಡದಂತಾಗಿರುವುದನ್ನು ಗಮನಿಸಿದ್ದೆ.

'ಅಫೀರಾ...,' ಮತ್ತೊಮ್ಮೆ ಕಿರುಚಿದ್ದಳು ನನ್ನ ಪುಟ್ಟ ಒಡತಿ.

ಉಸಿರೇ ನಿಂತುಹೋದಂತಾಗಿತ್ತು ನನಗೆ. ಇನ್ನೇನು ಕಾದಿದೆಯೋ ಎಂದು ನಡುಗುತ್ತಲೇ ಕೈಯಲ್ಲಿದ್ದ ಪಾತ್ರೆಯನ್ನು ಒಲೆಯ ಮೇಲಿರಿಸಿ, ಅವರ ಮುಖ ನೋಡುತ್ತಾ ನಿಂತೆ.

ನನ್ನ ಬಳಿ ಓಡಿ ಬಂದ ಅವರು, ಉರಿಯುತ್ತಿದ್ದ ಮರದ ಕೋಲೊಂದನ್ನು ಒಲೆಯಿಂದ ಎತ್ತಿಕೊಂಡು ನನ್ನತ್ತ ಚಾಚುತ್ತಾ, 'ಹಿಡಿ ಇದನ್ನು' ಎಂದು ಆರ್ಭಟಿಸಿದ್ದರು.

ನಿರುಪಾಯಳಾಗಿ ಅದನ್ನು ಹಿಡಿದುಕೊಂಡು ನಿಂತೆ.

'ನನ್ನ ಎದೆಗೆ ಅದನ್ನು ಚುಚ್ಚಿಬಿಡು..!' ಇನ್ನೂ ಗಟ್ಟಿಯಾಗಿ ಕಿರುಚಿದ್ದರು ಒಡತಿ.

ನನ್ನ ರಕ್ತವೆಲ್ಲ ತಣ್ಣಗಾಗಿತ್ತು!

ಏನಾಗಿದೆ ನನ್ನ ಮುದ್ದು ಒಡತಿಗೆ? ಕೆಂಪು ಕೆಂಡವನ್ನು ಮೆತ್ತಿಕೊಂಡಿದ್ದ ಮರದ ತುಂಡನ್ನು ಒಲೆಯೊಳಗೆ ತುರುಕಿ, ಅವರ ಎರಡೂ ತೋಳುಗಳನ್ನು ಬಲವಾಗಿ ಹಿಡಿದು ಕುಲುಕುತ್ತಾ, 'ನೀವೇನು ಮಾತಾಡುತ್ತಿರುವಿರಿ ಅಂತ ಗೊತ್ತಿದೆಯೆ?' ಅವರಿಗಿಂತಲೂ ಹೆಚ್ಚು ಗಟ್ಟಿಯಾಗಿ ಪ್ರಶ್ನಿಸಿದ್ದೆ.

ಒಮ್ಮೆಲೆ ನನ್ನ ಮೈಮೇಲೆ ಬೀಳುವವರಂತೆ ಮುನ್ನುಗ್ಗಿದ ಒಡತಿ, ಉಸಿರುಗಟ್ಟುವಂತೆ ನನ್ನನ್ನು ತಬ್ಬಿಕೊಂಡು ಪುಟ್ಟ ಮಗುವಿನಂತೆ ಬಿಕ್ಕಳಿಸತೊಡಗಿದ್ದರು.

ಮನೆಯೊಳಗಾಗುತ್ತಿರುವ ಗದ್ದಲ ಬಾಗಿಲು ದಾಟಿ ಹೊರಗೆ ಚಿಮ್ಮಬಹುದೆಂಬ ಅಳುಕಿನಿಂದ, ಅವರ ಬಿಗಿತದಿಂದ ಬಲವಂತವಾಗಿ ಬಿಡಿಸಿಕೊಂಡ ನಾನು, ಧಾವಿಸಿ ಹೋಗಿ ಬಾಗಿಲು ಮುಚ್ಚಿದೆ.

ಸಣ್ಣ ಒಡತಿ ನೆಲದಲ್ಲಿ ಬಿದ್ದುಕೊಂಡು ಅಳು ಮುಂದುವರಿಸಿದ್ದರು.

ಅವರ ಬಳಿಗೆ ಹೋಗಿ ಕುಳಿತುಕೊಂಡು, 'ಅಂತದ್ದು ಏನಾಯಿತು ಮಗಳೆ?' ಎಂದಿದ್ದೆ!

ತಕ್ಷಣ ನಾನು ಮಾಡಿದ ಬಲುದೊಡ್ಡ ಅಪರಾಧದ ಅರಿವಾಗಿತ್ತು.

ಇಡೀ ಲೋಕವೇ 'ಉಮ್ಮಾ' ಎಂದು ಕರೆಸಿಕೊಳ್ಳುವವರನ್ನು ನಾನು ಮಗಳೇ ಎಂದುಬಿಟ್ಟಿದ್ದೆ!

ನನ್ನ ತಪ್ಪಿಗೆ ಅಲ್ಲಾಹು ಅದಾವ ಶಿಕ್ಷೆ ವಿಧಿಸಬಹುದು ಎಂದು ನಾನು ಚಡಪಡಿಸುತ್ತಿರುವಂತೆಯೇ, ನನ್ನನ್ನು ಬಲವಾಗಿ ತಬ್ಬಿಕೊಂಡ ನನ್ನ ಪುಟ್ಟ ಒಡತಿ ನನ್ನ ಎದೆಯ ಮೇಲೆ ತಲೆಯಿರಿಸಿ ಗಳಗಳನೆ ಅಳಲಾರಂಭಿಸಿದ್ದರು.!

ನಾನು ದೇಹವಿಡೀ ಕಣ್ಣೀರಾಗಿದ್ದೆ.

## –೨–

ಪರಸ್ಪರ ತಬ್ಬಿಕೊಂಡು ನಾವು ಎಷ್ಟು ಹೊತ್ತು ಅಳುತ್ತಿದ್ದೆವೋ..., ಬಾಗಿಲು ದೂಡಿ ಕೊಂಡು ಹಪ್ಸಾ ಒಳಗೆ ಬಂದಾಗಾಲೇ ನಾವು ಎಚ್ಚರಗೊಂಡದ್ದು. ನಮ್ಮಿಬ್ಬರ ಅಳುವನ್ನು ಕಂಡ ಅವರಿಗೆ ಒಳಗೊಳಗೇ ಸಂತೋಷವಾಗಬಹುದೆಂದು ಯೋಚಿಸಿದ್ದ ನನ್ನನ್ನು ಹಪ್ಸಾ ತಬ್ಬಿಬ್ಬುಗೊಳಿಸಿದ್ದರು!

ನಮ್ಮ ಬಳಿಗೆ ಧಾವಿಸಿ ಬಂದು ಪಕ್ಕದಲ್ಲೇ ಕುಳಿತವರು, ಒಡತಿಯನ್ನು ನನ್ನಿಂದ ಸೆಳೆದು ಕೊಂಡು, 'ತಪ್ಪಾಯಿತು ಉಮ್ಮಾ. ತಪ್ಪಾಯಿತು. ದಯವಿಟ್ಟು ನನ್ನನ್ನು ಕ್ಷಮಿಸಿಬಿಡಿ. ಏನೋ ಮಾಡಲು ಹೋಗಿ ಮತ್ತೇನೋ ಮಾಡಿಬಿಟ್ಟೆವು' ಎನ್ನುತ್ತಾ ಅಳಲಾರಂಭಿಸಿದ್ದರು.

ನನಗೆ ಹುಚ್ಚು ಹಿಡಿದಂತಾಗಿತ್ತು!

ಒಬ್ಬರು ಉಮ್ಮಾನನ್ನು ಸಮಾಧಾನ ಪಡಿಸಲು ಸೋಲುತ್ತಿದ್ದ ನನಗೆ, ಇಬ್ಬರನ್ನು ಸಮಾಧಾನಿಸುವ ಹೊಣೆ ಬಿದ್ದಂತಾಗಿತ್ತು. ಅಳುವವರು ಸಾಕು ಅನ್ನಿಸುವಷ್ಟು ಅಳುತ್ತಿರಲಿ. ಅತ್ತೂ ಅತ್ತು ಸುಸ್ತಾದಾಗ ಮಾತಿಗೆ ಅವರೇ ತೊಡಗುತ್ತಾರೆ. ಆಗಲಾದರೂ ನಿನ್ನೆ ಸಂಜೆ ಇಲ್ಲಿ ನಡೆದದ್ದಾದರೂ ಏನು ಎಂಬುದು ತಿಳಿದೀತು ಎಂದು ಯೋಚಿಸಿದ ನಾನು,





ನಿಧಾನವಾಗಿ ಎದ್ದು, ಮಧ್ಯಾಹ್ನದ ಅಡುಗೆ ಮಾಡಲೆಂದು ಬೆಂಕಿ ಉಗುಳುತ್ತಿದ್ದ ಒಲೆಯ ಮೇಲೆ ಪಾತ್ರೆಯನ್ನಿರಿಸಿದೆ.

'ನಾವೆಲ್ಲರೂ ತಪ್ಪು ಮಾಡಿಬಿಟ್ಟೆವು ಅಫೀರಾ..' ಬಹಳ ಹೊತ್ತು ಅಳುತ್ತಲೇ ಇದ್ದ ಹಪ್ಸಾ ಹೇಳಿದ್ದರು. ಹಪ್ಸಾ ಅಷ್ಟೊಂದು ಆಪ್ತವಾಗಿ ಎಂದೂ ನನ್ನನ್ನು ಕರೆದವರಲ್ಲ. ಸಂದರ್ಭ ಸಿಕ್ಕಾಗಲೆಲ್ಲ, ಝೈನಬರೊಂದಿಗೆ ಸೇರಿಕೊಂಡು ಸಣ್ಣ ಒಡತಿಯನ್ನು ನನ್ನೆದುರೇ ಅವಮಾನಿಸುತ್ತಿದ್ದ ಹಪ್ಸಾ ಇಂದು ಬೇರೆಯೇ ಆಗಿ ಕಾಣಿಸಿದ್ದರು. ನಾನು ಉದ್ದೇಶಪೂರ್ವಕವಾಗಿ ಮೌನವಹಿಸಿದೆ. ಹೇಳುವುದೇನಾದರೂ ಇದ್ದರೆ ಅವರು ಹೇಳದಿರುವುದಿಲ್ಲವೆಂಬುದು ನನಗೆ ಗೊತ್ತಿತ್ತು.

'ನಿನ್ನೆಯ ಸಂಜೆ, ನಿನ್ನನ್ನು ಇಲ್ಲಿಂದ ಹೋಗಲು ಹೇಳಲೇಬಾರದಿತ್ತು. ಅದೇ ನಾವೆಲ್ಲ ಮಾಡಿದ್ದ ಮೊದಲ ತಪ್ಪು. ನಾವು ಇವರಿಗೆ ಸೂಚಿಸಿದ ಕೆಲಸವನ್ನು ನೀನು ಖಂಡಿತವಾಗಿಯೂ ವಿರೋಧಿಸುತ್ತಿದ್ದೆ. ನಮ್ಮೆದುರು ನೀನೇನೂ ಮಾತನಾಡದೆ, ತುಟಿ ಕಚ್ಚಿಕೊಂಡು ನಿಂತರೂ, ನಾವೆಲ್ಲ ಹೋದ ಬಳಿಕ 'ಹಾಗೆ ಮಾಡಬೇಡ ಒಡತೀ..' ಎನ್ನುತ್ತಾ ಆಯಿಷಾರನ್ನು ನೀನು ಖಂಡಿತವಾಗಿಯೂ ಎಚ್ಚರಿಸುತ್ತಿದ್ದೆ. ಆ ಕಾರಣ ದಿಂದಲೇ ನಿನ್ನನ್ನು ಹೋಗಲು ಹೇಳಿದ್ದೆವು. ಈಗ ನಮಗೆಲ್ಲ ತಪ್ಪಿನ ಅರಿವಾಗಿದೆ. ಮುಂದೇನಾಗುವುದೋ ಎಂಬ ಭಯದಿಂದ ಬದುಕುತ್ತಿದ್ದೇವೆ.'

ಅವರನ್ನು ಅರೆಕ್ಷಣ ದಿಟ್ಟಿಸಿದ ನಾನು, ಮತ್ತೆ ನನ್ನ ಕೆಲಸದಲ್ಲಿ ಮುಳುಗಿದೆ.

'ನಮ್ಮೆಲ್ಲರ ಲಾಭಕ್ಕಾಗಿ, ನಾವು ಮಾಡಲು ಹಿಂಜರಿದಿದ್ದ ಕೆಲಸವೊಂದನ್ನು ಇವರ ತಲೆಗೆ ಏರಿಸಿಬಿಟ್ಟೆವು. ಇವರಿಗಂತೂ ಅನುಭವ ಕಡಿಮೆ. ಹೆಚ್ಚು ಯೋಚಿಸದೆ, ನಾವು ಸೂಚಿಸಿದಂತೆಯೇ ಮಾಡಿಬಿಟ್ಟರು. ನೀನಿರುತ್ತಿದ್ದರೆ ಹಾಗಾಗುತ್ತಿರಲಿಲ್ಲ. ನಾವು ಮಾಡಿದ್ದ ಆ ಸಣ್ಣ ತಪ್ಪಿಗೆ, ಅಲ್ಲಾಹು ಈಗ ಬಲು ದೊಡ್ಡ ಶಿಕ್ಷೆಯನ್ನೇ ವಿಧಿಸಿದ್ದಾನೆ.'

ನನಗೆ ಹಪ್ಸಾರವರ ಮಾತುಗಳ ತಲೆಬುಡ ತಿಳಿಯಲಿಲ್ಲ.

ಇವರೆಲ್ಲ ಸೇರಿಸಿಕೊಂಡು ನನ್ನ ಸಣ್ಣ ಒಡತಿಯಿಂದ ಮಾಡಿಸಿದ ಆ ಮಹಾಪರಾಧವಾದರೂ ಏನು? ಕೇಳಿಯೇ ಬಿಟ್ಟೆ, 'ನೀವು ಹೇಳುತ್ತಿರುವುದೊಂದೂ ನನಗೆ ಅರ್ಥವಾಗುತ್ತಿಲ್ಲ ಉಮ್ಮಾ. ನಿನ್ನೆ ಸಂಜೆ ನಾನು ಇಲ್ಲಿಂದ ಹೋದ ಬಳಿಕ ಇಲ್ಲಿ ಏನು ನಡೆಯಿತು? ನನ್ನ ಪ್ರೀತಿಯ ಒಡತಿಯಿಂದ ನೀವು ಮಾಡಿಸಿದ್ದ ಅಂತಹಾ ಕೆಟ್ಟ ಕೆಲಸವಾದರೂ ಏನು?'

ಹಪ್ಸಾ ಉತ್ತರಿಸಲು ಹಿಂಜರಿದಂತೆ ಕಾಣಿಸಿತ್ತು. ನಾನೇ ಎಲ್ಲ ತಿಳಿದವಳಂತೆ ಮಾತನಾಡಬೇಕಾಯಿತು. 'ಎಲ್ಲ ಸಮಸ್ಯೆಗಳಿಗೂ, ಏನಾದರೊಂದು ಬಗೆಯ ಪರಿಹಾರವನ್ನು ಅಲ್ಲಾಹು ಇಟ್ಟೇ ಇಟ್ಟಿರುತ್ತಾನೆ. ನಿಮ್ಮೆಲ್ಲರ ಪಶ್ಚಾತ್ತಾಪವನ್ನು ಅಲ್ಲಾಹು

ಖಂಡಿತವಾಗಿಯೂ ಸ್ವೀಕರಿಸುತ್ತಾನೆ. ನಿಮ್ಮನ್ನು ಕ್ಷಮಿಸುತ್ತಾನೆ. ಎಲ್ಲವನ್ನೂ ಅರಿತ ಅವನು. ಎಲ್ಲವನ್ನೂ ಮುಂದಾಗಿ ಯೋಚಿಸಿಯೇ ಅಲ್ಲವೇ ನಿಮಗೆಲ್ಲ 'ಪ್ರವಾದಿಪತ್ನಿ' ಯರೆಂಬ ಬಲುದೊಡ್ಡ ಗೌರವವನ್ನು ನೀಡಿದ್ದು? ಅವನ ಅಣತಿಯಿಲ್ಲದೆ ಯಾವುದೂ ನಡೆಯುವುದಿಲ್ಲ. ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಅವನ ಸೃಷ್ಟಿಯೇ. ಆದರೂ ಒಂದು ಮಾತು ಹೇಳುವೆ ಉಮ್ಮಾ. ಸಿಟ್ಟು ಬಂದರೆ, ಏನೇನೂ ಅರಿಯದ ದಾಸಿಯ ಎಳಸು ಮಾತೆಂದು ಭಾವಿಸಿ ಕ್ಷಮಿಸಿಬಿಡಿರಿ. ಎಲ್ಲ ಮನುಷ್ಯರಿಗೂ ನಾನು ಹೇಳುವ ಮಾತು ಅನ್ವಯಿಸುತ್ತದೆಯಾದರೂ, ಮುಖ್ಯವಾಗಿ ಹೆಂಗಸರಾಗಿ ಹುಟ್ಟಿದ ನಾವು, ನಮಗಿಷ್ಟದ ವಸ್ತುವೊಂದು ನಮ್ಮೊಡನೆ ಇರುವಷ್ಟು ಕಾಲ ಅದರೊಂದಿಗೆ ಸಂತೋಷವನ್ನು ಅನುಭವಿಸುತ್ತಿರಬೇಕೇ ಹೊರತು, ಅದರ ಮೇಲೆ ಯಜಮಾನಿಕೆಯನ್ನು ಸಾಧಿಸಹೊರಟರೆ, ಅದು ನಮ್ಮಿಂದ ತಪ್ಪಿಸಿಕೊಂಡು ಬಲುದೂರಕ್ಕೆ ಓಡಿ ಹೋಗುವ ಸಂಭವಗಳೇ ಹೆಚ್ಚು' ಎಂದೆ.

ಒಮ್ಮೆಲೆ ಬೆಚ್ಚಿಬಿದ್ದವರಂತೆ ನನ್ನ ಒಡತಿಯಿಂದ ಬಿಡಿಸಿಕೊಂಡು ನನ್ನನ್ನು ಹೊಸದಾಗಿ ಕಾಣುತ್ತಿರುವವರಂತೆ ದಿಟ್ಟಿಸುತ್ತಾ ಕುಳಿತುಬಿಟ್ಟಿದ್ದರು. ಒಲೆಯಲ್ಲಿ ಓಲಾಡುತ್ತಿದ್ದ ಬೆಂಕಿಯ ಜ್ವಾಲೆಗೆ, ಅವರ ಕೆಂಪು ಕೆನ್ನೆಯ ಮೇಲೆ ಅಂಟಿಕೊಂಡಿದ್ದ ನೀರಬಿಂದುಗಳು ನಕ್ಷತ್ರಗಳಂತೆ ಮಿನುಗುತ್ತಿದ್ದವು.

'ಅಫೀರಾ.., ನಿನ್ನಂತಹ ಗೆಳತಿಯನ್ನು ಪಡೆದ ನಿನ್ನ ಒಡತಿ ನಿಜಕ್ಕೂ ಬಹಳ ಅದೃಷ್ಟ ವಂತಳು. ಉಮ್ಮು ಸಲಾಮಾ ನಿನ್ನ ಬಗ್ಗೆ ಬಹಳ ಹೇಳುತ್ತಿದ್ದರು. ನೀನೊಮ್ಮೆ ಅವರ ಮನೆಗೆ ಹೋಗಿದ್ದಾಗ, ನಿನ್ನ ಮಾತುಗಳನ್ನು ಕೇಳಿಸಿಕೊಂಡ ಅವರಿಗೆ ನೀನಿಷ್ಟು ಜಾಣೆ ಯಾಗಲು ಏನು ಕಾರಣವಿರಬಹುದೆಂದು ಯೋಚಿಸಿದ್ದರಂತೆ. ಕೊನೆಗೆ ನಿನ್ನ ಗಂಡ ಏನು ಕೆಲಸ ಮಾಡುತ್ತಿದ್ದರು ಎಂದು ಪ್ರಶ್ನಿಸಿದ್ದಾಗ, ನೀನು ನನ್ನ ಗಂಡ ಮಕ್ಕಾದ ನಾಟ್ಯಾಲಯದಲ್ಲಿ ಕುಡುಕರನ್ನು ಸಂತೋಷಪಡಿಸುತ್ತಿರುವ ಹಾಡುಗಾರ ಎಂದಿದ್ದಿಯಂತೆ. ಖಂಡಿತವಾಗಿಯೂ ಅದಷ್ಟೇ ಆಗಿರದು ಅಫೀರಾ. ಅಲ್ಲಾಹು ನಿನ್ನ ಹೃದಯದೊಳಗೆ ಬೇರೇನನ್ನೋ ಇಟ್ಟಿದ್ದಾನೆ' ಎಂದಾಗ ನಾನು ಸಂಕೋಚದಿಂದ ಮುದುಡಿಹೋಗಿದ್ದೆ.

'ನಾನು ಸುಳ್ಳು ಹೇಳಿರಲಿಲ್ಲ ಉಮ್ಮಾ..' ಎಂದೆ.

'ನೀನು ಸುಳ್ಳು ಹೇಳಿದ್ದೆಯೆಂದು ನಾನೆಲ್ಲಿ ಹೇಳಿದೆ ಅಫೀರಾ..'

ತನ್ನ ಪ್ರತಿಯೊಂದು ಮಾತನ್ನೂ ನನ್ನ ಹೆಸರನ್ನು ಹೇಳಿಯೇ ಕೊನೆಗೊಳಿಸುತ್ತಿದ್ದ ಅವರ ಪ್ರೀತಿಯ ಬಗ್ಗೆ ಅಯ್ಯೋ ಅನ್ನಿಸುತ್ತಿತ್ತು ನನಗೆ.

'ಆಗಿದ್ದು ಆಗಿ ಹೋಯಿತು ಉಮ್ಮಾ.' ಸಂತೈಸುವವಳಂತೆ ಹೇಳಿದ್ದೆ, 'ಈಗ ನಮಗೆ ಉಳಿದಿರುವ ದಾರಿ ಒಂದೇ. ಆಗಿರುವುದನ್ನು ಸರಿಪಡಿಸುವ ದಾರಿಯೇನಾದರೂ





ಇದೆಯಾ ಎಂದು ಹುಡುಕುವುದು. ಆಗಲೇ ಹೇಳಿದಂತೆ ಕರುಣಾಳುವಾಗಿರುವ ಅಲ್ಲಾಹು ಏನಾದರೊಂದು ದಾರಿ ತೆರೆದೇ ತೆರೆಯುತ್ತಾನೆ. ಈಗಲಾದರೂ ಹೇಳಿಬಿಡಿ. ನಿನ್ನೆ ಸಂಜೆ ನಾನು ಹೋದ ಬಳಿಕ ಇಲ್ಲಿ ನಡೆದ್ದಾದರೂ ಏನು?' ಪ್ರಶ್ನಿಸಿದ್ದೆ ನಾನು.

–೩–

ಖೈಬರ್ ಯುದ್ಧದಲ್ಲಿ ಸೋಲನ್ನುಂಡ ಪ್ರಮುಖ ಯೆಹೂದೀ ಗುಂಪುಗಳೆಲ್ಲ ಪ್ರವಾದಿ ಯೆದುರು ಮೊಣಕಾಲೂರಿದ ಆನಂತರದ ದಿನಗಳಲ್ಲಿ, ಅರೇಬಿಯಾದಲ್ಲಿ ಮಾತ್ರವಲ್ಲ, ದೂರ ದೂರದ ದೇಶಗಳಲ್ಲೂ ಸತ್ಯವಿಶ್ವಾಸಿಗಳ ಜಯಘೋಷಗಳು ಕೇಳಿಸಲಾರಂಬಿ ಸಿದ್ದವು. 'ಬದರ್' ಮತ್ತು 'ಉಹದ್' ಯುದ್ಧಗಳ ಆತಂಕದ ದಿನಗಳಲ್ಲಿ, ಮಕ್ಕಾದ ಮಹಾನಾಯಕ ಅಬೂಸುಫ್ಯಾನರ ಮಿತ್ರವೃಂದದಲ್ಲಿ ಸೇರಿಕೊಂಡು ಮದೀನಾದ ವಿರುದ್ಧ ಧಾಳಿಯಿಟ್ಟಿದ್ದ ಹಲವು ಬಲಶಾಲೀ ಗೋತ್ರಗಳೂ, ಕೃಪೆ ಯಾಚಿಸುವ ರಹಸ್ಯ ಸಂದೇಶಗಳನ್ನು ಪ್ರವಾದಿಯವರಿಗೆ ಕಳುಹಿಸಲಾರಂಭಿಸಿದ್ದರು. ಸತ್ಯವಿಶ್ವಾಸಿಗಳ ನಾಶಕ್ಕೆ ಸದಾ ಹಲ್ಲು ಮಸೆಯುವ ಅಬೂಸುಫ್ಯಾನರ ಆಟಾಟೋಪಗಳಿಗೆ ಇನ್ನು ಉಳಿಗಾಲವಿಲ್ಲವೆಂದು ಮಕ್ಕಾದ ಕೆಲವು ಕುರೈಶ್ ಗೋತ್ರಗಳು ಗುಟ್ಟಾಗಿ ಮಾತನಾಡಿ ಕೊಳ್ಳುತ್ತಿದ್ದಾರೆಂಬ ಸುದ್ದಿಗಳು ಮದೀನಾದ ಬೀದಿ ಬೀದಿಗಳಲ್ಲಿ ಪ್ರತಿಧ್ವನಿಸುತ್ತಿದ್ದವು. ಬೆಲೆಬಾಳುವ ಕಾಣಿಕೆಗಳೊಂದಿಗೆ ಬಲುದೂರದ ರಾಜ್ಯಗಳಿಂದ ಬರುತ್ತಿರುವ ರಾಜಪ್ರತಿನಿಧಿಗಳು, ಪ್ರವಾದಿಯವರ ಭೇಟಿಗೆಂದು ಮಸೀದಿ ಯಂಗಳದಲ್ಲಿ ಕಾದು ಕುಳಿತುಕೊಳ್ಳುವುದು ನಿತ್ಯನೋಟಗಳಾಗಿದ್ದವು. ಮಸೀದಿಯ ಆವರಣದಲ್ಲೇ ಇದ್ದ 'ಪ್ರವಾದಿಪತ್ನಿ'ಯರ ಮನೆಬಾಗಿಲುಗಳಿಗೆ ಕರಿಪರದೆಗಳು ಇಳಿಬಿದ್ದದ್ದೂ, ಸತ್ಯವಿಶ್ವಾಸಿಗಳ ಇದೇ ಗೆಲುವಿನ ಅವಧಿಯಲ್ಲಿ.

'ಬಾಗಿಲಮುಚ್ಚಿರುವ ಕರಿಪರದೆಗಳು, ಹಗಲ ಬೆಳಕಿನಿಂದ ನಮ್ಮನ್ನು ದೂರವಿಡ ಬಹುದೇ ಹೊರತು, ನಮ್ಮ ಸರದಿರಾತ್ರಿಗಳ ಬೆಳಗನ್ನು ಕಸಿಯಲಾರದೆಂದೇ ನಂಬಿದ್ದೆವು ಅಫೀರಾ..' ಹಾಡಿನ ಸಾಲೊಂದನ್ನು ಹಫ್ಸಾ ಸಿಟ್ಟಿನಿಂದ ಓದಿದಂತೆ ಕೇಳಿಸಿತ್ತು.

ನಾನು ಅಚ್ಚರಿಯಿಂದ ಅವರ ಮುಖ ನೋಡಿದ್ದೆ. ಅದನ್ನು ಗಮನಿಸಿದವರು ನನ್ನತ್ತ ನಗು ಚಿಮ್ಮಿಸಲು ಯತ್ನಿಸಿದ್ದರೆ, ಅವರ ಕಣ್ಣುಗಳು ಚೆಲ್ಲಿದ್ದು ಕಣ್ಣೀರ ಹನಿಗಳನ್ನು ಮಾತ್ರ.

'ಈ ಕರಿಪರದೆಗಳ ಮರೆಯಲ್ಲಿ ಏನೆಲ್ಲ ನಡೆದು ಹೋಯಿತೆಂಬುದು ನಮ್ಮ ಅರಿವಿಗೆ ಬರುವಾಗ ಬಹಳ ತಡವಾಗಿತ್ತು.' ಹಫ್ಸಾ ಲೊಚಗುಟ್ಟಿದ್ದರು.

'ನನಗರ್ಥವಾಗಲಿಲ್ಲ ಉಮ್ಮಾ' ಎಂದೆ.

'ನಿನ್ನೆ ಮುಂಜಾನೆ ದೂರದ ಬಂಧುವೊಬ್ಬಳನ್ನು ಕರೆದುಕೊಂಡು ಸಫಿಯ್ಯಾ ನಮ್ಮ ಮನೆಗೆ ಬರುವವರೆಗೂ ನಮಗೂ ಅರ್ಥವಾಗಿದ್ದಿರಲಿಲ್ಲ ಅಫೀರಾ. ಹುಂ.., ಅವರು ಬರದಿರುತ್ತಿದ್ದರೇ ಚೆನ್ನಾಗಿರುತ್ತಿತ್ತೋ ಏನೋ.'

'ಹಾಗಾದರೆ, ಇದಕ್ಕೆಲ್ಲ ಆ ಉಮ್ಮಾ ಕಾರಣವೆ?' ನಾನು ಅಸಹನೆಯಿಂದಲೇ ಪ್ರಶ್ನಿಸಿದ್ದೆ.

'ಛೇ..ಛೇ.., ಖಂಡಿತವಾಗಿಯೂ ಸಫಿಯ್ಯಾ ಅಲ್ಲ. ನಮ್ಮೆಲ್ಲರ ಸರದಿರಾತ್ರಿಗಳನ್ನು ನುಂಗಲೆಂದು, ಮದೀನಾದೊಳಗೆ ಕಾಲಿರಿಸಿದ ಕೆಂಪು ತೋಳವೊಂದರ ಬಗ್ಗೆ ನಮ್ಮನ್ನು ಎಚ್ಚರಿಸಲೆಂದೇ ಬಂದಿದ್ದವರು ಸಫಿಯ್ಯಾ.

'ನಿನಗೂ ಗೊತ್ತಿದೆ ಅಫೀರಾ; ಬನೂ ನಝೀರ್ ಗೋತ್ರದ ಸಿರಿವಂತ ವರ್ತಕ ಯಹೂದೀ ಹುವಯ್ಯಾರವರ ಮಗಳು ಸಫಿಯ್ಯಾ ಎಂಬುದು. ಸಫಿಯ್ಯಾ ಕರೆದುಕೊಂಡು ಬಂದಿದ್ದ ಆ ಯೆಹೂದೀ ಯುವತಿಯ ಹೆಸರು ಬೀನಾ. ಈಜಿಪ್ಟಿನ ರಾಜಪ್ರತಿನಿಧಿಯೊಬ್ಬರ ಸೋದರ ಸಂಬಂಧಿ. ರಾಜಪ್ರತಿನಿಧಿಗಳ ತಂಡದೊಂದಿಗೆ ಬಂದು, ಮದೀನಾದ ಸಿರಿವಂತ ಯೆಹೂದೀ ವರ್ತಕರೊಬ್ಬರ ಮನೆಯಲ್ಲಿ ತಂಗಿದ್ದ ಬೀನಾಳಿಗೆ, ತನ್ನ ಬಂಧು ಸಫಿಯ್ಯಾ ನೆನಪಾಗಿದ್ದಿರಬೇಕು. ಅಲ್ಲಿ ಇಲ್ಲಿ ವಿಚಾರಿಸಿದಾಗಲೇ ಸಫಿಯ್ಯಾ ಈಗ 'ಪ್ರವಾದಿಪತ್ನಿ'ಯರಲ್ಲೊಬ್ಬರಾಗಿದ್ದಾರೆ ಎಂದು ಬೀನಾಳಿಗೆ ಗೊತ್ತಾಗಿದ್ದದ್ದು.

'ಹಾಗೆ ಹುಡುಕುತ್ತಾ ಸಫಿಯ್ಯಾರ ಮನೆಗೆ ಬಂದ ಬೀನಾ, ಈಜಿಪ್ಟ್ ದೇಶದ ಕ್ರೈಸ್ತ ರಾಜನೊಬ್ಬ ಪ್ರವಾದಿಯವರಿಗೆಂದು ಕಳುಹಿಸಿದ ಉಡುಗೊರೆಗಳ ವಿವರ ನೀಡಿದ್ದಳು. ಆ ಉಡುಗೊರೆಯ ಪಟ್ಟಿಯಲ್ಲಿದ್ದದ್ದು, ಒಂದು ಸಾವಿರ ಚೀಲಗಳಲ್ಲಿ ತುಂಬಿದ ಬಂಗಾರದ ಆಭರಣಗಳು, ಅತ್ಯುತ್ತಮ ದರ್ಜೆಯ ರೇಶ್ಮೆಯ ಇಪ್ಪತ್ತು ಉಡುಪುಗಳು, ಒಂದು ಹೆಣ್ಣು ಕತ್ತೆ ಮತ್ತು ಒಬ್ಬಳು ಸುಂದರಿಯಾದ ಹೆಣ್ಣು.

'ಮಾರಿಯಾ ಖಿಬ್ತಿಯ್ಯಾ ಎಂಬ ಹೆಸರಿನ ಆ ಕ್ರೈಸ್ತ ಧರ್ಮಕ್ಕೆ ಸೇರಿದ ಹೆಣ್ಣಿನ ಸೌಂದರ್ಯವನ್ನು ವರ್ಣಿಸುತ್ತಾ, ವರ್ಣಿಸುತ್ತಾ ಆ ಬಂಗಾರ ಬಣ್ಣದ ಕೂದಲಿನ ಸುಂದರಿಯನ್ನು ಕಂಡ ಯಾವನೇ ಗಂಡು, ಮತ್ತೊಂದು ಹೆಣ್ಣಿನತ್ತ ಕಡೆಗಣ್ಣೂ ಹಾಯಿಸಲಾರ ಎನ್ನುತ್ತಾ ಸಫಿಯ್ಯಾಳನ್ನು ಹೆದರಿಸಿಬಿಟ್ಟಿದ್ದಳು.

'ಬೀನಾಳ ಎಚ್ಚರಿಕೆಯಿಂದ ಕಂಗಾಲಾಗಿದ್ದ ಸಫಿಯ್ಯಾ, ಬೀನಾಳನ್ನು ಕರೆದುಕೊಂಡು ನೇರವಾಗಿ ನನ್ನ ಮನೆಗೆ ಬಂದುಬಿಟ್ಟಿದ್ದರು. ನನ್ನೊಂದಿಗೂ ಬೀನಾ ಅದೇ ಮಾತನ್ನೇ ಹೇಳಿದ್ದಳು. ಆ ಗುಲಾಮಹೆಣ್ಣು ಮಾರಿಯಾಳ ತಲೆಯಿಂದ ಕಾಲ ಉಂಗುಷ್ಟದ ತನಕವೂ ವರ್ಣಿಸುತ್ತಾ, ಅವಳಷ್ಟು ಚೆಲುವೆಯಾದ ಹೆಣ್ಣು ಅರೇಬಿಯಾದಲ್ಲಿ ಮತ್ತೊಬ್ಬಳಿರಲು ಅಸಾಧ್ಯ ಎನ್ನುತ್ತಿದ್ದಾಗ, ಆಕೆಯೊಂದಿಗೆ ಬಂದಿದ್ದ ಸಾವಿರ ಚೀಲಗಳ ಬಂಗಾರ, ಉತ್ತಮ





ರೇಶ್ಮೆಯ ಉಡುಪುಗಳು, ಆ ಹೆಣ್ಣು ಕತ್ತೆ ಎಲ್ಲವೂ ಮರೆತು ಹೋಗಿತ್ತು.

'ಅದಷ್ಟೇ ಆಗಿದ್ದರೂ, ನಾನು ಬಹಳ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ, ಆಕೆಯನ್ನು ಪ್ರವಾದಿಯವರು, ಮದೀನಾ ಪಟ್ಟಣದ ಹೊರಗಿರುವ ಹಿಂದೊಮ್ಮೆ ಸಫಿಯ್ಯಾ ವಾಸಿಸುತ್ತಿದ್ದ ಯೆಹೂದೀ ವಠಾರದ ಮನೆಯೊಂದರಲ್ಲಿ ಇರಿಸಿಕೊಂಡಿದ್ದಾರೆ ಎಂಬ ಗುಟ್ಟನ್ನೂ ತೆರೆದಿಟ್ಟಾಗ, ಅಕಾಶವೇ ತಲೆಮೇಲೆ ಬಿದ್ದಂತಾಗಿತ್ತು.!

'ಏನು ಮಾಡಬೇಕೆಂಬುದನ್ನು ನಿರ್ಧರಿಸಲಾಗದೆ, ಅವರಿಬ್ಬರನ್ನೂ ಬೀಳ್ಕೊಟ್ಟು, ನಾನು ಝೈನಬರ ಮನೆಗೆ ಹೋಗಿದ್ದೆ. ಅಲ್ಲಿ ಉಮ್ಮು ಸಲಾಮಾ ಕೂಡಾ ಇದ್ದರು. ಇಬ್ಬರಿಗೂ ನನ್ನ ಆತಂಕವನ್ನು ಹಂಚಿಕೊಂಡೆ. ಗಾಬರಿಯಾದ ಝೈನಬರು, ಅಲ್ಲೇ ಅಂಗಳದಲ್ಲಿದ್ದ ಹುಡುಗನೊಬ್ಬನನ್ನು ಕರೆದು, ಜುವೈರಿಯಾ ಮತ್ತು ಸಫಿಯ್ಯಾರನ್ನೂ ಮನೆಗೆ ಕರೆಸಿಕೊಂಡರು.

'ನಾವೆಲ್ಲ ಎಷ್ಟು ಹೊತ್ತು ಮಾತನಾಡಿದರೂ ಮುಂದಿನ ದಾರಿ ಹೊಳೆದಿರಲಿಲ್ಲ. ಕೊನೆಗೆ ಜುವೈರಿಯಾ ಒಂದು ಸಲಹೆ ಮುಂದಿಟ್ಟಿದ್ದರು. 'ನಾವೆಲ್ಲರೂ ಸೇರಿ ಒಂದು ಪ್ರತಿಜ್ಞೆ ಮಾಡುವ. ಮಾರಿಯ ಖಿಬ್ತಿಯ್ಯಾಳ ಮನೆಗೆ ಪ್ರವಾದಿಯವರು ಹೋಗುವುದನ್ನು ನಿಲ್ಲಿಸುವವರೆಗೂ, ಅವರಿಗೆ ನಮ್ಮ ಮೈ ಮುಟ್ಟಲು ಬಿಡಬಾರದು.'

'ಜುವೈರಿಯಾಳ ಸಲಹೆ ಆಕರ್ಷಕವಾಗಿಯೇನೋ ಕಾಣಿಸಿತ್ತು. ಆದರೆ ಸರದಿ ರಾತ್ರಿಯಲ್ಲಿ ಮನೆಗೆ ಬರುವ ಪ್ರವಾದಿಯವರನ್ನು 'ನನ್ನ ಮೈ ಮುಟ್ಟದಿರು' ಎಂದು ಹೇಳುವ ಮನಸ್ಸು, ಧೈರ್ಯ ನಮಗಾರಿಗೂ ಇರಲಿಲ್ಲ.

'ಆಗ ನೆನಪಾದವರು ನಿನ್ನ ಒಡತಿ. ನಿನ್ನೆಯ ರಾತ್ರಿ, ಸೌದಾರವರ ಸರದಿ ರಾತ್ರಿ ಯೆಂಬುದು ತಿಳಿದಿತ್ತು. ಮಾತ್ರವಲ್ಲ; ತಮ್ಮ ಸರದಿರಾತ್ರಿಗಳನ್ನೆಲ್ಲ ಅವರು ಆಯಿಷಾರಿಗೆ ಉಡುಗೊರೆಯಾಗಿ ನೀಡಿರುವುದೂ ಗೊತ್ತಿತ್ತು. ಹೆಚ್ಚು ಯೋಚಿಸದೆ ನಿನ್ನೆ ಸಂಜೆಯೇ ನಾವೆಲ್ಲ ಇಲ್ಲಿಗೆ ಬಂದೆವು.

ತಿಂಗಳ ಹಿಂದೆಯಾಗಿರುತ್ತಿದ್ದರೆ, ಮಸೀದಿಯ ಅಂಗಳದಲ್ಲಿ ಏನು ನಡೆಯು ತ್ತಿದ್ದರೂ ಆಯಿಷಾರಿಗೆ ಕಾಣಿಸುತ್ತಿತ್ತು. ಆದರೆ, ಬಾಗಿಲು ಮುಚ್ಚಿದ್ದ ಕರಿಪರದೆ ಯಿಂದಾಗಿ, ಆ ಕ್ರೈಸ್ತ ಸುಂದರಿ ಹೊರಗೆ ಅಂಗಳದಲ್ಲಿ ಅಷ್ಟು ಹೊತ್ತು ಕುಳಿತಿದ್ದದ್ದೂ ಇವರಿಗೆ ಕಾಣಿಸಲಿಲ್ಲ. ನೀನು ಹೋದ ನಂತರ ಆಯಿಷಾರಿಗೆ ಎಲ್ಲವನ್ನೂ ವಿವರಿಸಿದೆವು. ರಾತ್ರಿಯ ನಮಾಜಿನ ಬಳಿಕ ಬರಲಿರುವ ಪ್ರವಾದಿಯವರಿಗೆ ನಮ್ಮೆಲ್ಲರ ಪ್ರತಿಜ್ಞೆಯ ಬಗ್ಗೆ ತಿಳಿಸಲೂ ಹೇಳಿದೆವು. ಮಾರಿಯಾಳ ಮನೆಗೆ ಹೋಗುವುದಿಲ್ಲವೆಂದು ಮಾತು ಕೊಡುವವರೆಗೂ ಮೈ ಮುಟ್ಟಲು ಬಿಡಬೇಡ ಎಂದೂ ಸೂಚಿಸಿದ್ದೆವು.

'ಅವರು ಹಾಗೆಯೇ ಮಾಡಿಬಿಟ್ಟಿದ್ದಾರೆಂಬುದು ಮಧ್ಯರಾತ್ರಿಯಲ್ಲೇ ನನಗೆ ಗೊತ್ತಾಗಿತ್ತು!'

'ಮಧ್ಯರಾತ್ರಿಯಲ್ಲಿ!!, ಯಾರು ಹೇಳಿದರು ನಿಮಗೆ ಮಧ್ಯರಾತ್ರಿಯಲ್ಲಿ?'

ಅದುವರೆಗೂ ಹಪ್ಸಾ ಹೇಳುತ್ತಿದ್ದ ಮಾತುಗಳನ್ನು ಮೌನವಾಗಿ ಆಲಿಸುತ್ತಿದ್ದ ನಾನು ಅಚ್ಚರಿಯಿಂದ ಪ್ರಶ್ನಿಸಿದ್ದೆ.

'ಹೌದು. ಮಧ್ಯರಾತ್ರಿಯಲ್ಲೇ ಗೊತ್ತಾಗಿತ್ತು ಅಫೀರಾ. ನಮ್ಮ ಸಲಹೆಯಂತೆ ನಿನ್ನ ಒಡತಿ ನಡೆದುಕೊಂಡಿರಬಹುದೇ ಇಲ್ಲವೇ ಎಂದು ಯೋಚಿಸುತ್ತಾ ಮಲಗಿಕೊಂಡಿದ್ದ ನನಗೆ ನಿದ್ರೆ ಬರುವಾಗ ರಾತ್ರಿಯ ಮೂರನೇ ಜಾವ ಕಳೆದಿದ್ದಿರಬಹುದು. ಯಾರೋ ಜೋರಾಗಿ ಬಾಗಿಲು ತಟ್ಟಿದ ಸ್ವರ ಕೇಳಿಸಿದಾಗ ಬೆಚ್ಚಿಬಿದ್ದಿದ್ದೆ, ಈ ನಡುರಾತ್ರಿಯಲ್ಲಿ ಯಾರಿದ್ದಿರಬಹುದು!

ಅಷ್ಟರಲ್ಲಿ. 'ನಾನು ನಿನ್ನ ಅಬ್ಬ. ಬಾಗಿಲು ತೆರೆ' ಎಂಬ ಧ್ವನಿ ಕೇಳಿಸಿತ್ತು.

ಕರೆಯುತ್ತಿರುವವರು ನನ್ನ ಅಬ್ಬ ಉಮ್ಮರ್ ಬಿನ್ ಖತ್ತಾಬರು ಎಂದು ಗೊತ್ತಾದಾಗ ರಕ್ತವೆಲ್ಲ ತಣ್ಣಗಾಗಿತ್ತು. ಈ ಅಪರಾತ್ರಿಯಲ್ಲಿ ಅವರೇಕೆ ಬಂದಿರಬಹುದೆಂಬ ಅಳುಕಿನಿಂದಲೇ ಬಾಗಿಲು ತೆರೆದಿದ್ದೆ.

'ನೀನೊಬ್ಬಳು ಪ್ರವಾದಿಪತ್ನಿ ಅಲ್ಲದಿರುತ್ತಿದ್ದರೆ, ಇಲ್ಲೇ ಕತ್ತರಿಸಿ ಹೂಳಿಬಿಡುತ್ತಿದ್ದೆ. ಈಗ ಆ ಅಧಿಕಾರ ನನಗಿಲ್ಲ. ನಾನೇ ಮಾಡಿಕೊಂಡ ತಪ್ಪು ಅದು. ನಿನ್ನ ಮೇಲಿನ ಪ್ರೀತಿಯಿಂದ, ನಿನ್ನನ್ನು ಮದುವೆಯಾಗುವಂತೆ ಪ್ರವಾದಿಯವರನ್ನು ಒಪ್ಪಿಸಿದ್ದೇ ತಪ್ಪಾಯಿತು. ನಿನ್ನ ಗಂಡ ಈಗ ಎಲ್ಲಿದ್ದಾರೆಂಬುದಾದರೂ ಗೊತ್ತಾ ನಿನಗೆ?' ಎಂದೇ ಆರ್ಭಟಿಸಿದ್ದರು ನನ್ನ ಅಬ್ಬ.

'ನಾನು ಕಲ್ಲಾದವಳಂತೆ ನಿಂತುಬಿಟ್ಟಿದ್ದೆ.'

'ನೀವೆಲ್ಲ ಜೊತೆಸೇರಿಕೊಂಡು ಆಯಿಷಾರ ಮೂಲಕ ಅವರನ್ನು ಅನುಮಾನಿಸಲು ಯತ್ನಿಸಿದರೆ, ನಡು ರಾತ್ರಿಯಲ್ಲಿ ಅವರಾದರೂ ಎಲ್ಲಿಗೆ ಹೋಗಬೇಕು? ಅವರೀಗ ಮಾರಿಯ ಖಿಬ್ತಿಯ್ಯಾಳ ಮನೆಯಲ್ಲಿದ್ದಾರೆ ಗೊತ್ತಿದೆಯಾ ನಿನಗೆ?

'ಸಿಡಿಲೆರಗಿದಂತಾಗಿತ್ತು ನನಗೆ. 'ಯಾವುದು ಆಗಬಾರದು ಎಂದು ಬಯಸಿ ಆಯಿಷಾರನ್ನು ವಿನಂತಿಸಿದ್ದೆವೋ, ಅದು ಆಗಿಯೇಬಿಟ್ಟಿತ್ತು!

'ನಿಮ್ಮೆಲ್ಲರ ಮಾತಿನಂತೆ ನಡೆದು ಕೆಟ್ಟವಳಾದದ್ದು ನಾನೊಬ್ಬಳು ಮಾತ್ರ.'

ಹಪ್ಸಾರ ಮಾತುಗಳನ್ನೆಲ್ಲ ತುಟಿಬಿಗಿದು ಕೇಳಿಸಿಕೊಳ್ಳುತ್ತಿದ್ದ ನನ್ನ ಒಡತಿ ಬಿಕ್ಕಳಿಸುತ್ತಲೇ ಹೇಳಿದ್ದರು. 'ಹೀಗೆಲ್ಲ ಆಗುತ್ತದೆಂದು ನನಗೇನು ಗೊತ್ತಿತ್ತು? ಅವರು ಮನೆಯೊಳಗೆ ಬರುತ್ತಿದ್ದಂತೆಯೇ ನಮ್ಮ ಪ್ರತಿಜ್ಞೆಯನ್ನು ಅವರಿಗೆ ಹೇಳಿದೆ. ಮಾರಿಯಾಳ ಮನೆಗೆ ಹೋಗುವುದನ್ನು ನಿಲ್ಲಿಸುವವರೆಗೂ ನನ್ನ ಮೈ ಮುಟ್ಟಬೇಡಿ





ಎಂದೂ ಹೇಳಿಬಿಟ್ಟೆ. ಆಗ ಅವರೇನು ಹೇಳಿದ್ದರೆಂಬುದು ಗೊತ್ತಿದೆಯಾ ನಿಮಗೆ?' ಎಂದು ಪ್ರಶ್ನಿಸಿದ ನನ್ನ ಒಡತಿ ಜೋರಾಗಿ ಅಳತೊಡಗಿದ್ದರು.

'ಗೊತ್ತು ಉಮ್ಮಾ, ರಾತ್ರಿ ಬಂದಿದ್ದ ಅಬ್ಬ ಅದನ್ನೂ ತಿಳಿಸಿದ್ದರು.' ಹಪ್ಸಾ ಹತಾಶೆಯಿಂದಲೇ ಹೇಳಿದ್ದರು.

'ಒಂದು ತಿಂಗಳ ಕಾಲ ನಮ್ಮಲ್ಲಿ ಯಾರ ಮುಖವನ್ನೂ ನೋಡಲು ಬಯಸುವು ದಿಲ್ಲವೆಂದು ಅವರು ಪ್ರಮಾಣ ಮಾಡಿ ಹೋಗಿದ್ದರು.'

ತಾವು ಮಾಡಿದ್ದ ಪ್ರಮಾಣದಂತೆಯೇ, ತಿಂಗಳೊಂದರ ಕಾಲ ಪ್ರವಾದಿಯವರು ಒಡತಿಯ ಮನೆಗೆ ಮಾತ್ರವಲ್ಲ, ಯಾವ ಹೆಂಡತಿಯ ಮನೆಗೂ ಕಾಲಿಟ್ಟಿರಲಿಲ್ಲ. ಧರ್ಮ ಪ್ರಸಾರದ ನೆವದಿಂದ ಊರಿನಿಂದ ಹೋಗುತ್ತಿದ್ದವರು ಸಾಧ್ಯವಾದಷ್ಟು ರಾತ್ರಿಗಳನ್ನು ಪಕ್ಕದ ಊರುಗಳಲ್ಲೇ ಕಳೆದಿದ್ದರು. ಈ ಅವಧಿಯಲ್ಲಿ ಒಡತಿಯ ಬಣ್ಣಗೆಟ್ಟ ಮುಖವನ್ನು ನೋಡಲಾಗುತ್ತಿರಲಿಲ್ಲ. ಹಿಂದೊಮ್ಮೆ ಪ್ರವಾದಿಯವರ ಶತ್ರುಗಳು ಒಡತಿಯ ವಿರುದ್ಧ ಸಂಚುಹೂಡಿ ಮಾನಹಾನಿಗೆ ಯತ್ನಿಸಿದ್ದ ದಿನಗಳಲ್ಲೂ ಅವರು ಇಷ್ಟೊಂದು ಕಂಗೆಟ್ಟಿದ್ದಿರಲಿಲ್ಲ. ಅದಕ್ಕೆ ಕಾರಣವೂ ಇತ್ತು. ಅಂದು ಒಡತಿ ತಪ್ಪು ಮಾಡಿದ್ದಿರಲಿಲ್ಲ. ಆದರೆ, ಈ ಬಾರಿ ಒಡತಿಯಿಂದಾದ ತಪ್ಪು ಬಲು ದೊಡ್ಡದೇ ಆಗಿತ್ತು.

ಬೇರೆ ಯಾವನೇ ಗಂಡನಾಗಿದ್ದರೂ ಆ ಕ್ಷಣದಲ್ಲೇ ಹೆಂಡತಿಯನ್ನು ವಿಚ್ಛೇದಿಸಿ ಮನೆಯಿಂದ ಹೊರಗಟ್ಟುತ್ತಿದ್ದ. ಮಿಕ್ಕೆಲ್ಲ ಸತ್ಯವಿಶ್ವಾಸಿಗಳಿಗೆ ನಾಲ್ಕು ಹೆಂಡಂದಿರ ಮಿತಿ ಹೇರಿದ್ದ ಅಲ್ಲಾಹು, ಅದರ ಜೊತೆಯಲ್ಲೇ ಸರಿಯಾದ ಕಾರಣಗಳಿದ್ದರೆ ಹೆಂಡತಿಯರನ್ನು ನಿಬಂಧನೆಗಳಿಗನುಸಾರವಾಗಿ ವಿಚ್ಛೇದಿಸುವ ಹಕ್ಕನ್ನೂ ನೀಡಿದ್ದ. ಯಾರಾದರೊಬ್ಬರನ್ನು ವಿಚ್ಛೇದಿಸಿ, ಮತ್ತೊಬ್ಬಳನ್ನು ಮದುವೆಯಾಗಲೂ ಅನುಮತಿಸಿದ್ದ. ಅಂತೆಯೇ ವಿಚ್ಛೇದಿತ ಹೆಣ್ಣಿಗೆ ಮದುವೆಯಾಗುವ ಅಧಿಕಾರವನ್ನೂ ನೀಡಿದ್ದ. ಆದರೆ, 'ನಂಬಿದವರ ಉಮ್ಮಾ' ಎಂಬ ಗೌರವಕ್ಕೇರುವ 'ಪ್ರವಾದಿಪತ್ನಿ'ಯರನ್ನು ಮಾತ್ರ ಈ ಅವಕಾಶದಿಂದ ನಿರ್ಬಂಧಿಸಿದ್ದ. ಇವೆಲ್ಲವೂ ಆಯಿಷಾಳಿಗೆ ಗೊತ್ತಿರುವ ಅಂತಿಮ ಸತ್ಯಗಳೇ. ಪ್ರವಾದಿಯವರ ಬಹಳಷ್ಟು ಸಂದೇಶಗಳನ್ನು ನೆನಪಿರಿಸಿಕೊಂಡು, ಯಾವುದೇ ತಪ್ಪಿಲ್ಲದೆ ಪಠಿಸಬಲ್ಲ ಜಾಣೆ ಅವರು.

'ನಿನ್ನನ್ನು ಆ ದಿನ ಮನೆಯಿಂದ ಕಳುಹಿಸಿದ್ದೇ ತಪ್ಪಾಯಿತು ಅಫೀರಾ.'

ಕಳೆದೊಂದು ತಿಂಗಳಲ್ಲಿ ಕಡಿಮೆಯೆಂದರೆ ನೂರು ಸಲವಾದರೂ ಪರಿತಪಿಸಿದ್ದಿರ ಬಹುದು ನನ್ನ ಒಡತಿ. ಪ್ರತಿಸಲ ಹಾಗೆ ಹೇಳಿದಾಗಲೂ ನಾನು, 'ಅಲ್ಲಾಹು ನಿಮ್ಮಿಂದ ಹಾಗೆ ಮಾಡಿಸಿದ್ದಿರಬಹುದು ಒಡತಿ. ಈ ಭೂಮಿಯ ಮೇಲೆ ಅಲ್ಲಾಹು ಬಯಸದೆ ಯಾವುದೂ ನಡೆಯುವುದಿಲ್ಲ; ಅವನ ಉದ್ದೇಶ ಬೇರೇನೋ ಇದ್ದಿರಬಹುದು.

ತಿಂಗಳ ಬಳಿಕ ಪ್ರವಾದಿಯವರು ಬರುತ್ತಾರಲ್ಲ; ಆಗ, ಅವರಲ್ಲೇ ವಿಚಾರಿಸಿಬಿಡಿ. ಅಲ್ಲಿಯವರೆಗೆ ಎದೆಗಟ್ಟಿ ಮಾಡಿಕೊಂಡು ಸಮಾಧಾನ ಮಾಡಿಕೊಳ್ಳಿ ಎನ್ನುತ್ತಿದ್ದೆ.

ಕಳೆದ ವಾರ ಒಡತಿಯ ಮನೆಗೆ ಬಂದಿದ್ದ ಸೌದಾರವರೂ ನಾನು ಹೇಳಿದ ಮಾತುಗಳನ್ನೇ ಪುನರುಚ್ಛರಿಸಿದ್ದರು.

'ನೀವೀಗ ಎಳೆಯ ಹುಡುಗಿಯಲ್ಲ. ಗಂಡನೊಂದಿಗೆ ಹೊಂದಿಕೊಂಡು ಹೋಗಬೇಕೆಂದು ಬೇರೆಯವರು ಕಲಿಸಿಕೊಡಬೇಕಾ? ಆದರೂ ಒಂದು ಮಾತು ಹೇಳುತ್ತಿರುವೆ. ನಮ್ಮ ಕೆಟ್ಟ ತಪ್ಪುಗಳೇ ನಮಗೆ ಬದುಕಿನ ಬಹುದೊಡ್ಡ ಪಾಠಗಳನ್ನು ಕಲಿಸುತ್ತದೆ ಉಮ್ಮಾ. ವಜ್ರದ ಹರಳನ್ನು ಅದೆಷ್ಟು ಗಟ್ಟಿಯಿದೆಯೆಂದು ಪರೀಕ್ಷಿಸಲು ಗುದ್ದಿ ನೋಡಬಾರದು. ಹಾಗೆ ಮಾಡಿದರೆ ಅದು ತಪ್ಪಿಸಿಕೊಂಡು ದೂರಕ್ಕೆ ಚಿಮ್ಮುತ್ತದೆಯೇ ಹೊರತು ಒಡೆದುಹೋಗುವುದಿಲ್ಲ. ಬಿರುಗಾಳಿಯನ್ನು ಸಮಾಧಾನಿಸ ಲೆತ್ನಿಸುವುದು ಜಾಣತನವಲ್ಲ. ನಮ್ಮನ್ನು ನಾವೇ ಸಮಾಧಾನ ಮಾಡಿಕೊಂಡರೆ, ಬಿರುಗಾಳಿ ತನ್ನ ದಾರಿಯಲ್ಲೇ ಸಾಗಿಬಿಡುತ್ತದೆ. ಈಗ ನಿಮ್ಮಿಂದ ತಪ್ಪಾಗಿಬಿಟ್ಟಿದೆ. ಅದಕ್ಕಾಗಿ ನೀವು ಸಾಕಷ್ಟು ನೋವನ್ನೂ ಅನುಭವಿಸಿದ್ದೀರಾ. ಈ ನಿಮ್ಮ ಪಶ್ಚಾತ್ತಾಪ ನಿಮ್ಮನ್ನು ಇನ್ನಷ್ಟು ಗಟ್ಟಿ ಮಾಡುತ್ತದೆ. ಮುಂದೇನಾಗುವುದೋ ಎಂಬ ಭಯ ನಿಮ್ಮನ್ನು ಮತ್ತಷ್ಟು ಧೈರ್ಯಶಾಲಿಯನ್ನಾಗಿ ಮಾಡುತ್ತದೆ. ಹೆದರಬೇಡಿ. ಬೇರೆಯವರ ಮಾತುಗಳನ್ನು ಬೆಳಗಿಸಲು, ನಿಮ್ಮನ್ನು ನೀವೇ ಉರಿಸಿಕೊಳ್ಳದಿರಿ.

'ಅಷ್ಟಕ್ಕೂ ನೀವು ಕಳೆದುಕೊಂಡಿರುವುದಾದರೂ ಏನು ಮಹಾ? ನಾನು ಉಡುಗೊರೆಯಾಗಿ ನೀಡಿದ ರಾತ್ರಿಗಳನ್ನು ಲೆಕ್ಕದಿಂದ ಹೊರಗಿಟ್ಟರೆ, ಬಹಳವೆಂದರೆ ಒಂದೆರಡು ಸರದಿರಾತ್ರಿಗಳನ್ನಷ್ಟೆ. ಇನ್ನೇನು, ಕಣ್ಣು ಮುಚ್ಚಿ ತೆರೆಯುವುದ ರೊಳಗೆ ಪ್ರವಾದಿಯವರು ಬಂದುಬಿಡುತ್ತಾರೆ. ಸ್ವಲ್ಪ ಸಹಿಸಿಕೊಳ್ಳಿ' ಎನ್ನುತ್ತಾ ನಕ್ಕಂತೆ ನಟಿಸಿ, ಸಣ್ಣ ಒಡತಿಯನ್ನು ಗೆಲುವಾಗಿಸಲು ಪ್ರಯತ್ನಿಸಿದ್ದರು.

ಪ್ರಮಾಣ ಮಾಡಿದಂತೆಯೇ, ತಿಂಗಳ ಕೊನೆಯ ದಿನ ಪ್ರವಾದಿಯವರು ಬಂದಿದ್ದರು. ಆದರೆ, ನನ್ನ ಪುಟ್ಟ ಒಡತಿಯ ಮನೆಗಲ್ಲ; ಹಫ್ಸಾರ ಮನೆಗೆ. ನನ್ನ ಒಡತಿಯ ಸರದಿಗೆ ಇನ್ನೂ ಐದು ದಿನಗಳಿದ್ದವು. ಪ್ರವಾದಿಯವರು ಮನೆಯೊಳಗೆ ಕಾಲಿಡುತ್ತಿದ್ದಂತೆಯೇ ಹಫ್ಸಾ, ತನ್ನೆಲ್ಲಾ ಪ್ರತಿಜ್ಞೆಗಳನ್ನು ಕಳಚಿ ಚಾಪೆ ಅಡಿಗೆ ತಳ್ಳಿಬಿಟ್ಟಿದ್ದರಂತೆ.

ಇವೆಲ್ಲ ನಡೆದು ಮೂರು ತಿಂಗಳು ಕಳೆಯುವಷ್ಟರಲ್ಲಿ, ಬಂಗಾರದ ಕೂದಲುಗಳ ಈಜಿಪ್ಟಿನ ಚೆಲುವೆ ಮಾರಿಯ ಖಿಬ್ತಿಯ್ಯಾ, ಪ್ರವಾದಿಯವರ ಮಗುವಿಗೆ ತಾಯಿಯಾಗ ಲಿದ್ದಾರೆಂಬ ಸುದ್ದಿ ಮದೀನಾದ ಬೀದಿ ಬೀದಿಗಳಲ್ಲಿ ನಲಿದಾಡುತ್ತಿದ್ದವು.





–೪–

ನನ್ನ ಪುಟ್ಟ ಒಡತಿಯ ಮುಖದಲ್ಲಿ ಹಿಂದಿನ ಬಣ್ಣಗಳೆಲ್ಲ ಚಿಗುರಿ ಅರಳಿದ ಬಳಿಕದ ಒಂದು ಮುಂಜಾನೆಯ ಹೊತ್ತಲ್ಲಿ 'ಪ್ರವಾದಿಪತ್ನಿ' ರಮ್ಲರವರು ಒಡತಿಯ ಮನೆಗೆ ಬಂದಿದ್ದರು.

ಬಾಗಿಲ ಬಳಿ ನನ್ನನ್ನು ಕಂಡವರೇ, 'ಇಂದು ನಿನ್ನನ್ನು ಮನೆಗೆ ಹೋಗು ಎನ್ನುವುದಿಲ್ಲ ಅಫೀರಾ. ನಿನ್ನ ಒಡತಿಗಿಂತಲೂ ಹೆಚ್ಚಾಗಿ ನಿನ್ನ ಸಲಹೆ ಪಡೆಯಲು ಬಂದವಳು ನಾನು' ಎಂದಾಗ ತಬ್ಬಿಬ್ಬಾಗಿದ್ದೆ.

ಒಳಗೆ ಬಂದು ಚಾಪೆಯ ಮೇಲೆ ಕುಳಿತವರು, 'ಉಮ್ಮಾ..' ಎಂದು ನನ್ನ ಒಡತಿಯನ್ನು ಕರೆದು, 'ನನಗೆ ನಿಮ್ಮಿಬ್ಬರ ಸಲಹೆಗಳೂ ಬೇಕಾಗಿದೆ. ತಿಂಗಳೊಂದರ ಹಿಂದೆ, ಬಕರ್ ಗೋತ್ರದ ಕೆಲವು ಯುವಕರು ಖುಝಾಅ ಗೋತ್ರದ ಕೆಲವು ಯುವಕರ ಮೇಲೆ ಹಲ್ಲೆ ನಡೆಸಿ ಒಂದಿಬ್ಬರನ್ನು ಕೊಂದುಹಾಕಿದ್ದು ನಿಮಗೂ ಗೊತ್ತಿರ ಬಹುದು. ಆ ಹತ್ಯೆಗಳು ಮಕ್ಕಾದ ಕುರೈಶರೊಂದಿಗೆ ಮದೀನಾದ ಸತ್ಯವಿಶ್ವಾಸಿಗಳು ಮಾಡಿಕೊಂಡಿದ್ದ 'ಹುದೈಬಿಯಾ ಸಂಧಿ'ಗೆ ವ್ಯತಿರಿಕ್ತವಾಗಿತ್ತು. ವಿಷಯ ತಿಳಿದ ಪ್ರವಾದಿ ಯವರು, ಮಕ್ಕಾದ ಕುರೈಶರಿಗೆ ಸಂದೇಶವೊಂದನ್ನು ಕಳುಹಿಸಿ ಹತ್ಯೆಗೀಡಾದವರಿಗೆ ಸೂಕ್ತ ರಕ್ತಪರಿಹಾರ ಧನವನ್ನು ನೀಡುವುದಲ್ಲದೆ, ಬಕರ್ ಗೋತ್ರದವರ ಜೊತೆಗಿನ ಸಂಬಂಧಗಳನ್ನೆಲ್ಲ ಕಳೆದುಕೊಳ್ಳಬೇಕೆಂದು ಸೂಚಿಸಿದ್ದರು. ಹಾಗೆ ಮಾಡದೇ ಹೋದರೆ, ಹುದೈಬಿಯಾ ಸಂಧಿ ಮುರಿಯಿತೆಂದು ಭಾವಿಸಬೇಕಾಗುವುದು ಎಂಬ ಎಚ್ಚರಿಕೆಯನ್ನೂ ನೀಡಿದ್ದರು. ಆದರೆ, ಪ್ರವಾದಿಯವರ ಸಂದೇಶವನ್ನು ಮಕ್ಕಾದವರು ಕಡೆಗಣಿಸಿದ್ದರು' ಎಂದ ರಮ್ಲರವರು, ನಮ್ಮಿಬ್ಬರ ಮುಖಗಳನ್ನೂ ಓದುವಂತೆ ದಿಟ್ಟಿಸಿದ್ದರು.

ಅವರು ಹೇಳಿದ ವಿವರಗಳಲ್ಲಿ ಹೊಸದೇನೂ ಇರಲಿಲ್ಲ. ಅವೆಲ್ಲವೂ ಮದೀನಾದ ಮನೆಮಾತುಗಳಾಗಿ ತಿಂಗಳಾಗುತ್ತಾ ಬಂದಿತ್ತು. ಗಂಡಸರ ನಡುವಿನ ಯುದ್ಧಗಳು ಮತ್ತು ಶಾಂತಿ ಒಪ್ಪಂದಗಳಿಗೆ ರಮ್ಲರವರು ಈ ಹಿಂದೆಯೆಂದೂ ತಲೆ ಕೆಡಿಸಿ ಕೊಂಡಿರುವ ಸಾಧ್ಯತೆಗಳಿಲ್ಲ. ಯಾಕೆಂದರೆ, ಕಳೆದ ಹನ್ನೆರಡು ವರ್ಷಗಳ ಕಾಲ ಅಬಿಸೀನಿಯಾದಲ್ಲಿದ್ದ ಅವರು, ಮದೀನಾಕ್ಕೆ ಬಂದು ಬಹಳ ಸಮಯವೇನೂ ಆಗಿದ್ದಿರಲಿಲ್ಲ. ನಾನು ಒಡತಿಯ ಮುಖ ನೋಡಿದರೆ, ಅವರು ನನ್ನನ್ನು ಪ್ರಶ್ನಾರ್ಥಕವಾಗಿ ದಿಟ್ಟಿಸುತ್ತಿರುವುದು ಕಾಣಿಸಿತ್ತು.

'ಮಕ್ಕಾದಿಂದ ನನ್ನ ಅಬ್ಬ ಬಂದಿದ್ದಾರೆ.'

ಏನು! ಅಬೂಸುಫ್ಯಾನರು ಮಕ್ಕಾದಿಂದ ಮದೀನಾಕ್ಕೆ ಬಂದಿದ್ದಾರೆಯೆ! ನನ್ನ ರಕ್ತ ತಣ್ಣಗಾಗಿತ್ತು.

ಪ್ರವಾದಿಯವರ ಮೊದಲಶತ್ರು ಅಬೂಜಹಲ ಹತ್ಯೆಯಾದ ಬಳಿಕದ ದಿನಗಳಲ್ಲಿ, ಪ್ರವಾದಿಯವರನ್ನು ಅವನಷ್ಟೇ ದ್ವೇಷಿಸುತ್ತಿರುವ ಮಕ್ಕಾಧೀಶ ಅಬೂಸುಫ್ಯಾನರು ಮದೀನಾಕ್ಕೆ ಬಂದಿದ್ದಾರೆಯೆ?

ಅವರು ಬಂದದ್ದಾದರೂ ಹೇಗೆ?

ಯಾರೂ ಅವರನ್ನು ಗುರುತು ಹಿಡಿದಿಲ್ಲವೆ?

ವೇಷಮರೆಸಿಕೊಂಡು ಗುಟ್ಟಾಗಿಯೇ ಬಂದಿದ್ದಿರಬಹುದೆ?

ಒಬ್ಬರೇ ಬಂದಿದ್ದಾರೆಯೆ?

ಜೊತೆಯಲ್ಲಿ ಬೇರೆಯವರೂ ಇರಬಹುದೆ?

ಅವರ ಬರುವಿಕೆಯ ಬೆನ್ನ ಹಿಂದೆ ಏನಾದರೂ ಹೊಸ ಸಂಚು ಇರಬಹುದೆ?

'ಮಕ್ಕಾದಿಂದ ಗುಟ್ಟಾಗಿ ಬಂದಿರುವ ನನ್ನ ಅಬ್ಬ, ನಿನ್ನೆಯಿಂದ ಇಲ್ಲಿಯೇ ಯೆಹೂದೀ ವರ್ತಕರೊಬ್ಬರ ಮನೆಯಲ್ಲಿ ತಂಗಿದ್ದಾರಂತೆ' ರಮ್ಲ ಹೇಳುತ್ತಿದ್ದಂತೆಯೇ ಸಣ್ಣ ಒಡತಿ ಕುತೂಹಲದಿಂದ ಪ್ರಶ್ನಿಸಿದ್ದರು, 'ಇವೆಲ್ಲವನ್ನು ನಿಮಗೆ ಯಾರು ಹೇಳಿದರು ಉಮ್ಮಾ?'

ಅದು ನನ್ನ ಪ್ರಶ್ನೆಯೂ ಆಗಿತ್ತು.

'ನನಗೆ ಮಾಹಿತಿ ಕಳುಹಿಸಿದ್ದು ಸ್ವತಃ ಪ್ರವಾದಿಪುತ್ರಿ ಉಮ್ಮು ಕುಲ್ಸೂಮ್. ಆ ಯೆಹೂದೀ ವರ್ತಕರು ಉಮ್ಮು ಕುಲ್ಸೂಮ್ ಅವರ ಪತಿ ಉಸ್ಮಾನರ ಗೆಳೆಯನಂತೆ. ಮಕ್ಕಾದ ಕೆಲವು ಹುಡುಗರು ನಡೆಸಿದ ದೊಂಬಿಯಲ್ಲಿ ಹುದೈಬಿಯಾ ಸಂಧಿಯನ್ನು ಮುರಿದ ಪ್ರಕರಣದಲ್ಲಿ ನನ್ನ ಅಬ್ಬನದೇನೂ ಪಾತ್ರವಿಲ್ಲವಂತೆ. ನನ್ನ ಮೂಲಕ ಪ್ರವಾದಿಯವರಲ್ಲಿ ರಾಜಿ ಸಂಧಾನ ಮಾಡಿಕೊಂಡು, ಹೊಸ ಒಪ್ಪಂದಕ್ಕೆ ಮೊಹರು ಒತ್ತಿಸಿಕೊಳ್ಳಲು ಬಂದವರಂತೆ ನನ್ನ ಅಬ್ಬ.'

ತನ್ನ ಅಬ್ಬ ನಿರಪರಾಧಿಯೆಂಬುದನ್ನು ನಮಗೆ ತಿಳಿಸಲು ರಮ್ಲರವರು ಇಲ್ಲಿಗೆ ಬಂದಿರಬಹುದೆ? ಪ್ರವಾದಿಯವರ ಪ್ರಿಯಪತ್ನಿಯಾಗಿರುವ ನನ್ನ ಒಡತಿಯನ್ನೂ ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ ಪ್ರವಾದಿಯವರಲ್ಲಿ ಪ್ರಾರ್ಥಿಸಿದರೆ, ಅವರಬ್ಬನ ಹೊಸ ಒಪ್ಪಂದದ ತಂತ್ರ ಗೆಲ್ಲಬಹುದೆಂಬ ಯೋಜನೆ ರಮ್ಲರವದ್ದಾಗಿರಬಹುದೆ? ಆಯಿಷಾರೇನಾದರೂ ಇದಕ್ಕೆ ಒಪ್ಪಿಕೊಂಡರೆ, ನಾನದನ್ನು ಖಂಡಿತವಾಗಿ ವಿರೋಧಿಸಬೇಕೆಂದು ನಿರ್ಧರಿಸಿಬಿಟ್ಟಿದ್ದೆ.





ಆದರೆ, ರಮ್ಲರವರ ಮುಂದಿನ ಮಾತುಗಳು ನನ್ನ ಊಹೆಗಳನ್ನೆಲ್ಲ ಬುಡಮೇಲು ಮಾಡಿದ್ದವು.

'ಇಂದು ಸಂಜೆಯ ಹೊತ್ತಿಗೆ ಅಬ್ಬ ನನ್ನ ಮನೆಗೆ ಬರಲಿದ್ದಾರಂತೆ. ನಾನವರನ್ನು ನೋಡದೆ ಹನ್ನೆರಡು ವರ್ಷಗಳೇ ಕಳೆದಿವೆ. ಅವರನ್ನು ಕಂಡಾಗ ನಾನೆಲ್ಲಿ ಕರಗಿ ಬಿಡುವೆನೋ ಎಂಬ ಅನುಮಾನ ಶುರುವಾಗಿದೆ. ಅವರು ಬರುವಾಗ ಈ ಜಾಣೆ ಅಫೀರಾ ನನ್ನ ಜೊತೆಗಿದ್ದರೆ ನಾನು ಗಟ್ಟಿ ಮನಸ್ಸು ಮಾಡಿಕೊಳ್ಳಬಲ್ಲೆ. ಅಬ್ಬನನ್ನು ಮನೆಯ ಹೊಸ್ತಿಲ ಹೊರಗಿನಿಂದಲೇ ಮರಳಿ ಕಳಿಸಲು ನಿರ್ಧರಿಸಿರುವೆ' ಎಂದಿದ್ದರು ರಮ್ಲ.

ಅವರ ಮಾತುಗಳಿಗೆ ನಾನೇ ಕರಗಿಬಿಟ್ಟಿದ್ದೆ. ಕೆಲವು ವರ್ಷಗಳ ಹಿಂದೆ, ಅಸ್ಮಾರ ಮನೆಗೆ ಅವರ ತಾಯಿ ಬಂದಿದ್ದಾಗಿನ ಘಟನೆ ನೆನಪಾಗಿತ್ತು.

'ಅಬ್ಬ ಮನೆಗೆ ಬಂದಾಗ ಒಳಗೆ ಬಿಟ್ಟುಕೊಳ್ಳದಿರುವುದು 'ಪ್ರವಾದಿಪತ್ನಿ'ಯರಿಗೆ ಶೋಭಿಸುವ ಸಂಗತಿಯಲ್ಲ.' ಪುಟ್ಟ ಒಡತಿ ಬಲು ದೊಡ್ಡ ಮಾತನ್ನೇ ಹೇಳಿದ್ದಳು.

'ನನ್ನದೂ ಅದೇ ಅಭಿಪ್ರಾಯ ಉಮ್ಮಾ.' ನಾನು ಸಣ್ಣ ಒಡತಿಯ ಮಾತನ್ನು ಅನುಮೋದಿಸುತ್ತಾ ಹೇಳಿದ್ದೆ, 'ಅಬ್ಬನನ್ನು ಮನೆಯೊಳಗೆ ಕರೆದು ಒಂದು ಲೋಟ ಹಾಲು ಕೊಟ್ಟು ಉಪಚರಿಸುವುದು ಮಗಳಾಗಿರುವ ನಿಮ್ಮ ಕರ್ತವ್ಯ. ಒಂದು ವೇಳೆ ಅವರು ಪ್ರವಾದಿಯವರ ಬಳಿ ಸಂಧಾನಕ್ಕೆ ನಿಮ್ಮನ್ನೂ ಕರೆದುಕೊಂಡು ಹೋಗಲು ನಿರ್ಧರಿಸಿದ್ದರೆ ಮತ್ತು ಅದು ನಿಮಗೆ ಇಷ್ಟವಿಲ್ಲದಿದ್ದರೆ, ನೇರವಾಗಿ ಅದನ್ನೇ ಹೇಳಿಬಿಟ್ಟರಾಯಿತು.'

'ಹೌದು ಅಫೀರಾ, ನಿನ್ನ ಮಾತು ಸರಿಯಾಗಿದೆ. ಆದರೆ, ನಿನ್ನ ಒಡತಿ ಅನುಮತಿಸಿದರೆ ನೀನೂ ನನ್ನ ಜೊತೆಗೆ ಬಂದು, ಅವರು ಮರಳಿ ಹೋಗುವಷ್ಟು ಸಮಯ ನನ್ನ ಮನೆಯಲ್ಲಿ ಇರಬಲ್ಲೆಯಾ? ನೀನು ಜೊತೆಯಲ್ಲಿದ್ದರೆ ನನಗೆ ಧೈರ್ಯ ಬಂದಂತಾಗುತ್ತದೆ.'

ಗಲಿಬಿಲಿಗೊಂಡ ನಾನು ಸಣ್ಣ ಒಡತಿಯ ಮುಖ ನೋಡುವ ಮುನ್ನವೇ ಅವರು ಹೇಳಿಬಿಟ್ಟಿದ್ದರು, 'ನಿಮಗೆ ಸಹಾಯ ಮಾಡಲು ಅಫೀರಾಳಿಗೆ ಇಷ್ಟವಿದೆಯೆಂದಾದರೆ, ನಿಮ್ಮ ಜೊತೆಗೆ ಕರೆದುಕೊಂಡು ಹೋಗಲು ನನ್ನದೇನೂ ಅಡ್ಡಿಯಿಲ್ಲ.' ಸಣ್ಣ ಒಡತಿ ಅನುಮತಿ ಕೊಟ್ಟೇಬಿಟ್ಟಿದ್ದರು.

ನಾನು ಸಂತೋಷದಿಂದಲೇ ರಮ್ಲರವರ ಮನೆಗೆ ಹೋಗಿದ್ದೆ.

ಸಂಜೆಯಾಗುತ್ತಿರುವಂತೆ ರಮ್ಲರಂತೆಯೇ ನನ್ನ ಎದೆಬಡಿತವೂ ಲೆಕ್ಕ ತಪ್ಪಿಸಿಕೊಳ್ಳಲಾರಂಭಿಸಿತ್ತು. ಸಂಜೆಯ ನಮಾಜು ಮುಗಿಸಿ, 'ಈ ಸಂದಿಗ್ಧದಿಂದ ನಮ್ಮಿಬ್ಬರನ್ನೂ ಪಾರು ಮಾಡು ಅಲ್ಲಾಹುವೇ' ಎಂದು ದುವಾ ಮಾಡಿ ಮುಗಿಸುತ್ತಿರುವಂತೆಯೇ

ಬಾಗಿಲನ್ನು ಆವರಿಸಿದ್ದ ಕರಿಪರದೆಯ ಹೊರಗಿನಿಂದ, 'ಯಾರಿದ್ದೀರಿ ಒಳಗೇ' ಎಂಬ ಗಡಸು ಧ್ವನಿ ಕೇಳಿಸಿತ್ತು!

ರಮ್ಲರವರ ಕಣ್ಸೂಚನೆಯಂತೆ, ಬಾಗಿಲ ಬಳಿ ಹೋಗಿ. ಪರದೆ ಸರಿಸಿದೆ.

ರಮ್ಲರ ಅಬ್ಬ ಬಂದಾಗ ನಾನೇ ಹೋಗಿ ಪರದೆ ಸರಿಸುವುದೆಂದು ಮೊದಲೇ ನಿರ್ಧಾರವಾಗಿತ್ತು.

ತಮ್ಮ ಮಗಳ ಮನೆಯಲ್ಲಿ ಅಪರಿಚಿತರೊಬ್ಬರು ಇದ್ದಾರೆಂಬುದು ಗೊತ್ತಾದಾಗ, ಬಂದಿರುವವರಿಗೆ ಖಂಡಿತವಾಗಿಯೂ ಕಸಿವಿಸಿಯಾಗುತ್ತದೆ. ಮುದ್ದು ಮಾತುಗಳಿಂದ ಮಗಳನ್ನು ಮರುಳುಮಾಡಲು ಹಿಂದೇಟು ಹಾಕಬಹುದು. ಅದರಂತೆ ನಾನೇ ಹೋಗಿ ಬಾಗಿಲು ತೆರೆದಿದ್ದೆ.

ಗುರುತು ಸಿಗದಂತೆ ಮುಂಡಾಸಿನಿಂದ ಹಣೆ ಮತ್ತು ಗಲ್ಲವನ್ನು ಮುಚ್ಚಿಕೊಂಡ ಬಲು ದೊಡ್ಡ ದೇಹದ ಒಬ್ಬರು ಅಂಗಳದಲ್ಲಿ ನಿಂತು ಅತ್ತಿತ್ತ ನೋಡುತ್ತಿದ್ದರು. ನನ್ನನ್ನು ಕಂಡವರೇ ಗಲಿಬಿಲಿಗೊಂಡವರಂತೆ ಮುಖ ಮುದುಡಿಸಿದವರಿಗೆ, ತಾವೇನಾದರೂ ಬೇರಾವುದೋ ಮನೆಯೆದುರು ನಿಂತಿದ್ದೇವೆಯೇ ಎಂಬ ಅನುಮಾನವೂ ಕಾಡಿದ್ದಿರಬಹುದು. 'ಇದೂ.. ಇದೂ.. ರಮ್ಲು..' ಎಂದು ತಡವರಿಸುತ್ತಲೇ ಪ್ರಶ್ನಿಸಿದ್ದರು.

ಅಷ್ಟರಲ್ಲಿ, ನನ್ನನ್ನು ಬಲವಂತವಾಗಿ ಬದಿಗೆ ತಳ್ಳಿ, ಹೊಸ್ತಿಲ ಹೊರಗೆ ಧುಮುಕಿದ್ದ ರಮ್ಲರವರ ಬಾಯಿಯಿಂದ, 'ಅಬ್ಬಾ..' ಎಂಬ ಕೂಗು ಕೇಳಿಸಿತ್ತು.

ಈ ಹಿಂದೆ ನಮ್ಮಿಬ್ಬರ ನಡುವೆ ನಡೆದಿದ್ದ ಎಲ್ಲ ಒಪ್ಪಂದಗಳನ್ನೂ ಗಾಳಿಗೆ ತೂರಿದ್ದ ಮಗಳು, ಅಬ್ಬನನ್ನು ಬಲವಾಗಿ ತಬ್ಬಿಕೊಂಡುಬಿಟ್ಟಿದ್ದರು!

ಅದನ್ನು ನೋಡಿದ ನನ್ನ ಕಣ್ಣುಗಳೂ ತೇವವಾಗಿತ್ತು.

ಅಬ್ಬನನ್ನು ಮನೆಯೊಳಗೆ ಕರೆದುಕೊಂಡು ಬಂದ ಮಗಳು, ಸ್ವಲ್ಪವೇ ಹೊತ್ತಿನ ಮೊದಲು ಮಡಚಿಟ್ಟಿದ್ದ ಜಮಖಾನವನ್ನು ಬಿಡಿಸಿ ಅಬ್ಬನನ್ನು ಕುಳ್ಳಿರಿಸಿದ್ದರು! ನಾನು ಅಚ್ಚರಿಯಿಂದ ರಮ್ಲರನ್ನು ನೋಡಿ ಸಣ್ಣದಾಗಿ ನಕ್ಕಿದ್ದೆ. ಪ್ರವಾದಿಯವರು ಕುಳಿತು ಕೊಳ್ಳುವ ಜಮಖಾನದಲ್ಲಿ, ಅವರ ಪರಮ ಶತ್ರು ಅಬೂಸುಫ್ಯಾನರನ್ನು ಕುಳ್ಳಿರಿಸಲಾರೆ ಎಂದು ಶಪಥ ಹಾಕಿ ಜಮಖಾನವನ್ನು ಮಡಚಿಟ್ಟಿದ್ದ ರಮ್ಲು, ಬಹುಕಾಲದ ಬಳಿಕ ಕಂಡ ಅಬ್ಬನೆದುರು ಪುಟ್ಟ ಮಗಳಾಗಿಬಿಟ್ಟಿದ್ದರು.

ಸ್ವಲ್ಪ ಹೊತ್ತು ಇಬ್ಬರೂ ಮುಖ ಮುಖ ನೋಡುತ್ತಾ ಹಾಗೆಯೇ ಕುಳಿತಿದ್ದರು.

ಒಲೆಯಲ್ಲಿ ಕುದಿಯುತ್ತಿದ್ದ ಹಾಲನ್ನು ಎರಡು ತಟ್ಟೆಗಳಿಗೆ ಸುರಿದು ಅವರಿಬ್ಬರ ನಡುವೆ ಇರಿಸಿ ಗೋಡೆಗೊರಗಿ ನಿಂತೆ. ತಟ್ಟೆಯೊಂದನ್ನು ಎತ್ತಿಕೊಂಡ ರಮ್ಲರವರು, 'ಇದನ್ನು ಮೊದಲು ಕುಡಿಯಿರಿ ಅಬ್ಬಾ. ಇಷ್ಟು ವರ್ಷಗಳ ಬಳಿಕವಾದರೂ ನನ್ನನ್ನು ಕಾಣಲು ಬಂದಿರಲ್ಲಾ.' ಎಂದರು.





'ತಪ್ಪು ನನ್ನೊಬ್ಬನದೇ ಅಲ್ಲವಲ್ಲ ರಮ್ಲು..?' ಎಂದ ಅಬೂಸುಫ್ಯಾನರು ಹಾಲಿನ ತಟ್ಟೆ ಎತ್ತಿಕೊಂಡು, 'ಕಳೆದುಹೋದ ವಿಷಯಗಳನ್ನೆಲ್ಲ ಕೆದಕುತ್ತಾ ನನ್ನಿಂದ ಮತ್ತೊಂದು ತಪ್ಪು ಮಾಡಿಸಬೇಡ.' ಎಚ್ಚರಿಸುವಂತೆಯೇ ಹೇಳಿದ್ದರು.

ಅಬ್ಬನ ಕಟು ಮಾತಿಗೆ ಬೆದರಿದ ರಮ್ಲರವರು, 'ನನಗಾದರೂ ಬೇರೆ ಯಾವ ದಾರಿಯಿತ್ತು ಅಬ್ಬಾ. ಮದುವೆಯಾಗಿರುವ ಗಂಡನ ಮಾತು ಕೇಳಬೇಕೋ ಅಥವಾ ಹೆತ್ತ ಅಬ್ಬನ ಮಾತಿಗೆ ಗೌರವ ಕೊಡಬೇಕೋ ಎಂಬುದನ್ನು ನಿರ್ಧರಿಸುವ ವಯಸ್ಸೂ ನನ್ನದಾಗಿರಲಿಲ್ಲ ಆಗ. ಅದೆಷ್ಟು ರಾತ್ರಿಗಳನ್ನು ನಿದ್ರೆಯಿಲ್ಲದೆ ಹೊರಳಾಡಿ ನಾನು ಕಳೆದಿದ್ದೆ ಎಂದು ಹೇಳಿದರೆ ನೀವು ನಂಬುತ್ತೀರಾ?' ಎಂದವರು, ತಮ್ಮ ಮಾತು ತಿದ್ದಿಕೊಳ್ಳುವವರಂತೆ, 'ಹಾಗೆಂದು, ಆ ದಿನಗಳಲ್ಲಿ ನಾನು ತಪ್ಪು ಮಾಡಿದ್ದೆ ಎಂದು ಈವತ್ತೂ ಹೇಳುವುದಿಲ್ಲ' ಎಂದರು.

'ಹೋಗಲಿ ಮಗಳೇ, ಆದದ್ದನ್ನೆಲ್ಲ ಮರೆತುಬಿಡು. ಈಗ ನಾನು ಬಂದ ಕಾರಣವನ್ನು ಕೇಳು. ನನಗೆ ನಿನ್ನ ಗಂಡನನ್ನು ನೋಡಬೇಕಾಗಿದೆ.'

'ಅಂದರೇ..., ಅಲ್ಲಾಹು ಆರಿಸಿರುವ ಅಂತಿಮಪ್ರವಾದಿಯನ್ನು?'

ಅಬೂಸುಫ್ಯಾನರು ಉತ್ತರಿಸಲು ಹಿಂಜರಿದವರಂತೆ ಅತ್ತಿತ್ತ ನೋಡಲಾರಂಭಿಸಿದ್ದರು.

'ಮೊದಲು ನಾನು ಪ್ರವಾದಿಪತ್ನಿ. ಆ ಬಳಿಕ ನಿಮ್ಮ ಮಗಳು.' ಒರಟಾಗಿದ್ದರು ಪ್ರವಾದಿಪತ್ನಿ.

'ಇಷ್ಟಾದರೂ ಅಬ್ಬನ ಬಗ್ಗೆ ಗೌರವ ಉಳಿಸಿಕೊಂಡಿದ್ದೀಯಲ್ಲ ಮಗಳೇ.' ಮಾರ್ಮಿಕವಾಗಿಯೇ ಪ್ರತಿಕ್ರಿಯಿಸಿದ್ದ ಮಕ್ಕಾದ ದೊರೆ, 'ಹಾಗಾದರೆ ನಿನ್ನ ಗಂಡನನ್ನು ಅಲ್ಲಾಹುವಿನ ಪ್ರವಾದಿಯೆಂದು ನಾನು ಒಪ್ಪಿಕೊಳ್ಳುವವರೆಗೆ ನೀನು ಸಹಾಯ ಮಾಡಲಾರೆ ಎಂದು ತಿಳಿದುಕೊಳ್ಳಲೆ?' ನೇರವಾಗಿತ್ತು ಪಶ್ನೆ.

ಸಂದಿಗ್ಧದಲ್ಲಿ ಸಿಕ್ಕವರಂತೆ ರಮ್ಲರವರು ನನ್ನ ಮುಖ ನೋಡಿದ್ದರು.

ನನಗೂ ಗೊಂದಲವಾಗಿತ್ತು. 'ನಾನೊಂದು ಮಾತು ಹೇಳಬಹುದೇ ಉಮ್ಮಾ..;' ಎಂದೆ.

'ನೀನು..?' ಅಸಹನೆಯಿಂದ ಇದ್ದಕ್ಕಿದ್ದಂತೆ, ನನ್ನತ್ತ ತಿರುಗಿದ ಮಕ್ಕಾಧೀಶನ ಕೆಂಪು ಕಣ್ಣುಗಳು ನನ್ನನ್ನು ತಿವಿಯುತ್ತಿದ್ದವು. ಅದನ್ನು ಗಮನಿಸಿದ ರಮ್ಲರವರು ತಕ್ಷಣವೇ, 'ಇವಳು ನನ್ನ ಗೆಳತಿ ಅಫೀರಾ..., ಪ್ರವಾದಿಪತ್ನಿ ಆಯಿಷಾರಿಗೂ ಗೆಳತಿ' ಎಂದು ಪರಿಚಯಿಸಿದ್ದರು.

'ಅಫೀರಾ....!' ಎಂದು ತಮ್ಮೊಳಗೇ ಒಂದೆರಡು ಬಾರಿ ಗುಣುಗಿಕೊಂಡ ಅವರು, ನನ್ನತ್ತ ಅಚ್ಚರಿಯ ನೋಟ ಬೀರುತ್ತಾ ಕುತೂಹಲದ ಧ್ವನಿಯಲ್ಲಿ, 'ಯಾರ ಮಗಳು ನೀನು?' ಎಂದು ಪ್ರಶ್ನಿಸಿದ್ದರು.

'ಮುಅತ್ತಲ್ ಮಗಳು.'

'ಯಾರ ಮಗಳೆಂದೆ ನೀನು!' ಅವರು ಮತ್ತೊಮ್ಮೆ ಪ್ರಶ್ನಿಸಿದ್ದರು

'ಮುಅತ್ತಲ್ ಮಗಳು.'

'ನಿನ್ನ ಅಬ್ಬ ಈ ಊರಲ್ಲಿ ಏನು ಮಾಡುತ್ತಿದ್ದಾರೆ?'

'ದೊಡ್ಡ ಒಡೆಯರ ಮನೆಯ ಕುದುರೆಪಾಲಕ ಅವರು' ಎಂದೆ.

'ದೊಡ್ಡ ಒಡೆಯರೂ...? ಅಂದರೆ, ನಿನ್ನ ದೊಡ್ಡ ಒಡೆಯರಿಗೆ ಹೆಸರೇ ಇಲ್ಲವೆ? ' ಅಸಹನೆಗಿಂತಲೂ ಕುತೂಹಲವೇ ಹೆಚ್ಚಿತ್ತು ಅವರ ಪ್ರಶ್ನೆಯಲ್ಲಿ.

'ಪ್ರವಾದಿಯವರ ಸಂಗಾತಿ ಅಬೂಬಕರ್ ಸಿದ್ದೀಕರನ್ನು ಇವಳು ಕರೆಯುವುದು ದೊಡ್ಡ.....' ರಮ್ಲರವರು ದೊಡ್ಡ ಒಡೆಯರ ಹೆಸರನ್ನು ಪೂರ್ತಿಯಾಗಿ ಹೇಳುವ ಮುನ್ನವೇ, ಮಗಳ ಮಾತನ್ನು ಕತ್ತರಿಸಿದ ಅಬೂಸುಫ್ಯಾನರು, 'ಅಂದರೇ...! ನೀನೂ..., ನೀನೂ..?, ಅಬೂಬಕರರ ಕುದುರೆಪಾಲಕ ಮುಅತ್ತಲನ ಮಗಳೇ...?

'ಓ ಅಫೀರಾ..., ಅದೆಷ್ಟು ವರ್ಷಗಳಿಂದ ಬಲುದೊಡ್ಡ ಬಹುಮಾನವೊಂದು ಮಕ್ಕಾದಲ್ಲಿ ನಿನಗಾಗಿ ಕಾದು ಕುಳಿತಿದೆ ಗೊತ್ತಿದೆಯೆ?' ಎಂದು ಪ್ರಶ್ನಿಸಿದ್ದರು!

ಬಹುಮಾನವೆ! ಏನು ಹೇಳುತ್ತಿದ್ದಾರೆ ಇವರು? ನನಗಾವ ಬಹುಮಾನ ಕಾದಿದೆ ಮಕ್ಕಾದಲ್ಲಿ? ಬಹುಮಾನ ಸಿಗುವಂತಹ ಯಾವ ಕೆಲಸವನ್ನು ಮಾಡಿರುವೆ ನಾನು?

'ದಯವಿಟ್ಟು ಕ್ಷಮಿಸಬೇಕು. ತಮ್ಮ ಮಾತು ಅರ್ಥವಾಗಲಿಲ್ಲ.' ಎಂದೆ.

'ನೀನು ಮಕ್ಕಾಕ್ಕೆ ಬಂದಾಗ ನಿನಗೆಲ್ಲವೂ ಅರ್ಥವಾಗಲಿದೆ ಅಫೀರಾ. ಅದನ್ನು ಈಗಲೇ ಹೇಳುವ ಅಧಿಕಾರ ನನಗಿಲ್ಲ. ನನ್ನನ್ನು ಒತ್ತಾಯಿಸದಿರು.' ಆದೇಶ ನೀಡುತ್ತಿರುವವರಂತೆಯೇ ಹೇಳಿದ್ದರು.

ನನ್ನನ್ನು ಮೆಚ್ಚಿಸಲು ಸುಳ್ಳು ಹೇಳುತ್ತಿರಬಹುದೇನೋ ಎಂಬ ಅನುಮಾನ ಮೂಡಿದರೂ, ಅವರ ಮಾತನ್ನು ಸಂಪೂರ್ಣವಾಗಿ ತಳ್ಳಿ ಹಾಕಲೂ ಇಷ್ಟವಾಗಲಿಲ್ಲ.

'ಅಫೀರಾಳ ಜೊತೆಗೆ ನಾವೂ ಮಕ್ಕಾಕ್ಕೆ ಬರಲಿದ್ದೇವೆಯೆ?' ರಮ್ಲರವರು ಆಸೆಯಿಂದಲೇ ಪ್ರಶ್ನಿಸಿದ್ದರು.

'ನೀನು ಮನಸ್ಸು ಮಾಡಿದರೆ ಅದೂ ಸಾಧ್ಯ.' ತಟ್ಟನೆ ಉತ್ತರಿಸಿದ್ದರು ಅಬ್ಬ.

ರಮ್ಲರವರು ಮಾತಿಗಾಗಿ ತಡವರಿಸುವವರಂತೆ ತುಟಿಕಚ್ಚಿಕೊಂಡಿದ್ದರು.

'ಮನಸ್ಸು ಮಾಡುವಿಯಾ?' ಅಬ್ಬನ ಧ್ವನಿಯಲ್ಲಿ ಯಾಚನೆಯಿತ್ತು.

'ನನ್ನ ಗಂಡನನ್ನು ಅಲ್ಲಾಹುವಿನ ಅಂತಿಮ ಪ್ರವಾದಿಯೆಂದು ನೀವು ಒಪ್ಪಿಕೊಂಡರೆ ಮಾತ್ರ ನಾನು ಮನಸ್ಸು ಮಾಡಲು ಸಾಧ್ಯ.' ಪ್ರವಾದಿಪತ್ನಿ ಬಲವಾದ ಪಟ್ಟನ್ನೇ ಹಾಕಿದ್ದರು.

ಮಕ್ಕಾದ ಒಡೆಯರು ನನ್ನತ್ತ ನೋಡಿದರು. ನಾನು ಅಸಹಾಯಕಳಂತೆ ತಲೆ ತಗ್ಗಿಸಿ ನಿಂತುಬಿಟ್ಟೆ.





'ನೋಡು ಅಫೀರಾ. ಸೋತಿರುವ ಈ ಅಬ್ಬನ ಮೇಲೆ ಸ್ವಲ್ಪವಾದರೂ ಕರುಣೆ ತೋರುವಷ್ಟು ಬುದ್ಧಿಯನ್ನು ಇವಳಿಗೆ ಕರುಣಿಸುವಂತೆ, ಇವಳ ಗಂಡನನ್ನು ಅಂತಿಮ ಪ್ರವಾದಿಯನ್ನಾಗಿ ಆರಿಸಿದ ಅಲ್ಲಾಹುವನ್ನು ನೀನಾದರೂ ಪ್ರಾರ್ಥಿಸಬಲ್ಲೆಯಾ?' ಎಂದು ಪ್ರಶ್ನಿಸಿದ್ದರು, ಪ್ರವಾದಿಯವರ ಪರಮಶತ್ರು ಅಬೂಸುಫ್ಯಾನರು!

'ನಿಮ್ಮ ಅಬ್ಬನನ್ನು ಪ್ರವಾದಿಯವರ ಬಳಿಗೆ ಕರೆದುಕೊಂಡು ಹೋಗಿ ಉಮ್ಮಾ!' ನನ್ನ ಬಾಯಿಂದ ಮಾತೊಂದು ತಪ್ಪಿಸಿಕೊಂಡು ಸದ್ದು ಮಾಡಿತ್ತು. ತಕ್ಷಣ ನನ್ನ ತಪ್ಪಿನ ಅರಿವಾಗಿ ನಾಲಗೆ ಕಡಿದುಕೊಂಡೆ. ಮಕ್ಕಾದ ಒಡೆಯ ಅಬೂಸುಫ್ಯಾನರ ಸಮ್ಮುಖದಲ್ಲೇ, ಅವರ ಮಗಳು ಮಾತ್ರವಲ್ಲ, ಪ್ರವಾದಿಪತ್ನಿಯೊಬ್ಬರಿಗೆ ಕೇವಲ ದಾಸಿಯಾಗಿರುವ ನಾನು, ಅವರೇನು ಮಾಡಬೇಕೆಂಬುದನ್ನು ಸೂಚಿಸಿಬಿಟ್ಟಿದ್ದೆ.

ಒಮ್ಮೆಲೆ ನನ್ನತ್ತ ತಿರುಗಿದ ಅಬೂಸುಫ್ಯಾನರು ಕುಳಿತಲ್ಲಿಂದ ಎದ್ದು ನಿಂತರು; ಮತ್ತು ಕಣಿ ಹೇಳುವವರಂತೆ ಗಟ್ಟಿಯಾಗಿ ಹೇಳಿದರು.

'ಯಾರಿಗೆ ಯಾವಾಗ ಯಾವ ಬಹುಮಾನವನ್ನು ಕರುಣಿಸಬೇಕೆಂಬುದನ್ನು ಅಲ್ಲಾಹು ಮುಂದಾಗಿಯೇ ನಿರ್ಧರಿಸಿರುವನು ಎಂಬುದಾಗಿ, ಅಲ್ಲಾಹುವಿನ ಅಂತಿಮಪ್ರವಾದಿ ಮುಹಮ್ಮದರು ಹೇಳುತ್ತಿದ್ದ ಮಾತುಗಳು ಸುಳ್ಳಲ್ಲ ಎಂಬುದಕ್ಕೆ, ಮಕ್ಕಾದ ನಾಟ್ಯಗ್ರಹದಲ್ಲಿ ಹಾಡುಗಾರನಾಗಿದ್ದವನ ಹೆಂಡತಿಯೊಬ್ಬಳು ಬಲುಬೇಗನೇ ಸಾಕ್ಷಿಯಾಗಲಿರುವಳು!'

–೫–

'ಸತ್ಯವಿಶ್ವಾಸಿಗಳು ಮಕ್ಕಾ ಪ್ರವೇಶ ಮಾಡುವಾಗ ಯಾರೆಲ್ಲ ಅಬೂಸುಫ್ಯಾನರ ಮನೆಯಲ್ಲಿ ಆಶ್ರಯ ಪಡೆಯುವರೋ ಅವರೆಲ್ಲರಿಗೂ ಅಭಯವಿದೆ. ಯಾರೆಲ್ಲ ತಮ್ಮ ತಮ್ಮ ಮನೆಯೊಳಗಿದ್ದು ಬಾಗಿಲು ಮುಚ್ಚಿಕೊಳ್ಳುತ್ತಾರೋ ಅವರಿಗೂ ಅಭಯವಿದೆ. ಯಾರು ಹರಮ್‌ನೊಳಗೆ ಸೇರಿಕೊಳ್ಳುತ್ತಾರೋ ಅವರಿಗೂ ಅಭಯವಿದೆ.'

ಮಕ್ಕಾದ ಹೆಬ್ಬಾಗಿಲ ಹೊರಗೆ, ಬಿಳಿಕುದುರೆಯ ಮೇಲೆ ಕುಳಿತ ಪ್ರವಾದಿಯವರು, ಗಟ್ಟಿಯಾಗಿ ಘೋಷಿಸುತ್ತಿದ್ದಾಗ, ಸಣ್ಣ ಒಡತಿಯ ಬೆನ್ನಿಗಂಟಿಕೊಂಡು ನಾನು ಕುಳಿತಿದ್ದ ಒಂಟೆ, ಹಿಂದೊಮ್ಮೆ ಬಿಟ್ಟುಬಂದಿದ್ದ ಹುಟ್ಟೂರ ನೆಲದ ಮೇಲೆ ಬಲಗಾಲನ್ನು ಇಟ್ಟಾಗಿತ್ತು.

ಬೆನ್ನುನೋವಿನ ಕಾರಣದಿಂದ ನನ್ನಬ್ಬ ಮುಅತ್ತಲ್ ಬಂದಿರಲಿಲ್ಲ. ಬಂದಿದ್ದರೆ ಅದೆಷ್ಟು ಸಂತೋಷಪಡುತ್ತಿದ್ದರೋ.

‘ನಾವು ಮಕ್ಕಾದಲ್ಲಿ ರಮ್ಲ ಉಮ್ಮಾರ ಅಬ್ಬನ ಮನೆಯಲ್ಲಿ ತಂಗಲಿದ್ದೇವೆಯೆ?’ ಸಣ್ಣ ಒಡತಿಯನ್ನು ಪ್ರಶ್ನಿಸಿದ್ದೆ. ಅವರ ಮನೆಯಲ್ಲೇ ತಂಗುವುದಾದರೆ, ಮಕ್ಕಾದಲ್ಲಿ ನನಗಾಗಿ ಕಾದಿರುವ ಬಹುಮಾನದ ಬಗ್ಗೆ ಅಬೂಸುಫ್ಯಾನರೊಂದಿಗೆ ವಿಚಾರಿಸಲು ಅವಕಾಶ ಸಿಗಬಹುದೇನೋ ಎಂಬ ಅಸೆ ನನ್ನದು.

‘ತಿಳಿಯದು ಅಫೀರಾ. ರಮ್ಲರೇನೋ ಅವರ ಅಬ್ಬನ ಮನೆಯಲ್ಲಿ ಉಳಿದುಕೊಳ್ಳಬಹುದು. ನಮಗೆಲ್ಲಿ ವ್ಯವಸ್ಥೆ ಮಾಡಲಿದ್ದಾರೆ ಎಂಬುದು ಅಲ್ಲಿ ಹೋದ ಬಳಿಕವೇ ತಿಳಿಯಬಹುದು. ಎಲ್ಲಾದರೇನು ಅಫೀರಾ. ಬಾಲ್ಯದಲ್ಲಿ ಆಡಿ ಬೆಳೆದ ನಮ್ಮ ಮನೆಯ ಪಕ್ಕದ ಮರಳರಾಶಿಯಲ್ಲಿ ಮಲಗಿದರೂ ನನಗೆ ನಿದ್ರೆ ಬಂದೀತು’ ಎಂದಿದ್ದರು ಒಡತಿ.

ಮಕ್ಕಾದ ಬೆಳಕು ಮತ್ತೊಮ್ಮೆ ಮಕ್ಕಾವನ್ನು ಪ್ರವೇಶಿಸಿತ್ತು.

ಪ್ರವಾದಿಯವರನ್ನು ಬಿಳಿ ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಕಅಬಾದ ಬಳಿ ತಲುಪಿದ ಬೃಹತ್ ಮೆರವಣಿಗೆಯು, ಮಂದಿರದ ಅಂಗಳದಲ್ಲಿ ನಿಂತು ಸುತ್ತಲಿನ ಕಲ್ಲು ಬೆಟ್ಟಗಳೆಲ್ಲ ನಡುಗುವಂತೆ ಜಯಘೋಷ ಮಾಡುತ್ತಿದ್ದಾಗ, ಅಲ್ಲಿ ಅಬೂಸುಫ್ಯಾನರೊಂದಿಗೆ ಕೆಲವೇ ಕುರೈಶರು ಮಾತ್ರ ಕಾಣಿಸಿದ್ದರು.

ಪ್ರವಾದಿಯವರು ದೊಡ್ಡ ಒಡೆಯರನ್ನು ಕಅಬಾದ ಕೀಲಿ ಕೈ ಹೊಂದಿರುವ ಉಸ್ಮಾನರ ಮನೆಗೆ ಕಳುಹಿಸಿದರು. ಕೆಲವೇ ಹೊತ್ತಿನಲ್ಲಿ, ತಲೆ ತಗ್ಗಿಸಿಯೇ ಬಂದ ಉಸ್ಮಾನರು ಕಅಬಾದ ಬಾಗಿಲು ತೆರೆದು, ಕೀಲಿಕೈಯನ್ನು ಪ್ರವಾದಿಯವರಿಗೆ ಒಪ್ಪಿಸಿದರು. ಆದರೆ, ಕೀಲಿಕೈಯ್ಯನ್ನು ಉಸ್ಮಾನರಿಗೇ ಮರಳಿಸಿದ ಮುಹಮ್ಮದರು ಮುಗುಳುನಗುತ್ತಾ, ‘ಅದು ತಮ್ಮ ಜೊತೆಗೇ ಇರಲಿ. ಅಂತಿಮ ದಿನದವರೆಗೂ ಈ ಕೀಲಿಕೈ ನಿಮ್ಮ ವಂಶದ ಬಳಿಯೇ ಇರುತ್ತದೆ’ ಎಂದರು.

ಈ ಮಾತನ್ನು ನಿರೀಕ್ಷಿಸಿರದಿದ್ದ ಉಸ್ಮಾನರ ಕೃತಜ್ಞತೆಗಳೆಲ್ಲ ಕರಗಿ ಕಣ್ಣುಗಳ ಮೂಲಕ ಕೆನ್ನೆಗೆ ಇಳಿದಿತ್ತು.

ಹಫ್ಸಾರ ಅಬ್ಬ ಉಮರ್ ಬಿನ್ ಖತ್ತಾಬ್ ಮತ್ತು ಪ್ರವಾದಿಯವರ ಅಳಿಯ ಅಲೀಯವರ ನೇತೃತ್ವದಲ್ಲಿ, ಸಹವರ್ತಿಗಳೆಲ್ಲ ಕಅಬಾದ ಒಳಗಿದ್ದ ವಿಗ್ರಹಗಳನ್ನೆಲ್ಲ ಕಿತ್ತೆಸೆದಿದ್ದರು. ಅ ಬಳಿಕ, ಕಅಬಾದ ಒಳಗೆ ಪ್ರವಾದಿಯವರು ತಮ್ಮ ಸಹವರ್ತಿಗಳೊಂದಿಗೆ ವಿಶೇಷ ನಮಾಜು ಸಲ್ಲಿಸಿದರು.

ನಾನು ಆಸೆ ಪಟ್ಟಂತೆಯೇ ಆಗಿತ್ತು. ನಮಾಜು ಮುಗಿಯುತ್ತಿದ್ದಂತೆಯೇ, ಸಣ್ಣ ಒಡತಿಯನ್ನು ಅವರ ಸೋದರ ಕರೆದುಕೊಂಡು ಹೋಗಿದ್ದರೆ, ನನ್ನ ಸೋದರ ಸಫ್ವಾನ್ ನನ್ನ ಉಮ್ಮ ಮತ್ತು ನನ್ನನ್ನು, ರಮ್ಲರೊಂದಿಗೆ ಅಬೂಸುಫ್ಯಾನರ ಮನೆಗೇ ಕರೆದುಕೊಂಡು ಹೋಗಿದ್ದ!





ಯಾರಿಗೆ ಯಾವಾಗ ಯಾವ ಬಹುಮಾನವನ್ನು ನೀಡಬೇಕೆಂಬುದನ್ನು ಅಲ್ಲಾಹು ಮುಂದಾಗಿಯೇ ತೀರ್ಮಾನಿಸಿರುವನು ಎಂಬ ಪ್ರವಾದಿಯವರ ಸಂದೇಶಕ್ಕೆ, ನಾಟ್ಯಗ್ರಹದ ಹಾಡುಗಾರರೊಬ್ಬನ ವಿಧವೆ ಸಾಕ್ಷಿಯಾಗುವ ಸಮಯ ಸಮೀಪಿಸುತ್ತಿದೆ ಅನ್ನಿಸತೊಡಗಿತ್ತು.

ಮರುದಿನ ಮುಂಜಾನೆ ಪ್ರವಾದಿಯವರು, ಮಕ್ಕಾದ ಮೇಲೆ ಧಾಳಿ ನಡೆಸಲು ಗುಟ್ಟಾಗಿ ಸಿದ್ಧತೆ ನಡೆಸುತ್ತಿದ್ದ ಹವಾಝಿನ್ ಗೋತ್ರದ ಔಫ್ ಪುತ್ರ ಮಾಲಿಕ್ ನನ್ನು ವಿಚಾರಿಸಿಕೊಳ್ಳಲು ಸೈನ್ಯದೊಂದಿಗೆ ಔತಾಸ್ ಕಣಿವೆಯತ್ತ ಹೋಗಿದ್ದರು. ನನ್ನ ಸೋದರ ಸಫ್ವಾನ್ ಕೂಡ ಸೈನ್ಯದ ಜೊತೆಯಲ್ಲಿ ಹೋಗಿದ್ದ. ನಿನ್ನೆ ಸಂಜೆಯ ಹೊತ್ತಲ್ಲಿ ಬಂದಿದ್ದ ಕೆಲವು ಕುರೈಶ್ ಸರದಾರರು, ಅಬೂಸುಫ್ಯಾನರನ್ನು ಕರೆದುಕೊಂಡು ಬೇರೆಲ್ಲಿಗೋ ಹೋಗಿದ್ದರು. ಮರಳುವಾಗ ಎರಡು ದಿನಗಳಾಗಬಹುದೇನೋ ಎಂದು ಅನುಮಾನಿಸಿದ್ದರು ರಮ್ಲ.

ನಾನು ನಿರಾಸೆಯಿಂದ ಮುಖ ಮುದುಡಿಸಿದ್ದೆ.

ನನಗಾಗಿ ಕಾದು ಕುಳಿತಿರುವ ಬಹುಮಾನದ ಬಗ್ಗೆ ನನಗಾರು ಹೇಳುತ್ತಾರೆ?

ಅಥವಾ, ಅಬೂಸುಫ್ಯಾನರು ಸುಳ್ಳು ಹೇಳಿದ್ದಿರಬಹುದೆ?

‘ಹಿಂದೆ ನಾವಿದ್ದ ದೊಡ್ಡ ಒಡೆಯರ ಮನೆಗೆ ಹೋಗಿ ನೋಡಿಕೊಂಡು ಬರಲು ಆಸೆಯಾಗುತ್ತಿದೆ ಅಫೀರಾ, ಕರೆದುಕೊಂಡು ಹೋಗುತ್ತೀಯಾ?’ ಮರುದಿನ ಸಂಜೆಯ ಹೊತ್ತಿಗೆ ಉಮ್ಮ ವಿಚಾರಿಸಿದ್ದರು. ಆ ಆಸೆ ನನಗೂ ಇತ್ತು. ಆದರೆ, ಹತ್ತು ವರ್ಷಗಳ ಹಿಂದೆಯಿದ್ದಂತೆ ಮಕ್ಕಾ ಪಟ್ಟಣ ಉಳಿದಿಲ್ಲವೆಂಬುದನ್ನು ಮೊದಲ ದಿನವೇ ಗಮನಿಸಿದ್ದೆ. ಪಟ್ಟಣ ಬಲು ದೊಡ್ಡದಾಗಿ ಬೆಳೆದಿತ್ತು. ಕಅಬಾಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ಬಹಳ ಬದಲಾವಣೆಗಳಾಗಿದ್ದವು. ‘ದಾರಿ ತೋರಿಸಬಲ್ಲ ಯಾರಾದರೂ ಸಿಕ್ಕರೆ, ಒಳ್ಳೆಯದಿತ್ತು’ ಎಂದಿದ್ದೆ. ಅದು ಹೇಗೋ, ಸ್ವಲ್ಪವೇ ಹೊತ್ತಿನಲ್ಲಿ ಹೆಂಗಸೊಬ್ಬರನ್ನು ಕರೆದುಕೊಂಡು ಬಂದ ಉಮ್ಮಾ, ‘ನಡಿ, ಬೇಗ ಹೋಗಿ ಬರುವ’ ಎಂದರು.

ಆ ಹೆಂಗಸೇನೋ ನಮ್ಮನ್ನು ಸರಿಯಾದ ಜಾಗಕ್ಕೆ ಕರೆದುಕೊಂಡು ಹೋಗಿದ್ದರು. ಆದರೆ, ಅಲ್ಲಿ ಒಡೆಯರ ಮನೆಯೇ ಇರಲಿಲ್ಲ. ಒಡೆಯರ ಕುದುರೆಲಾಯವಿದ್ದ ಜಾಗ ಇನ್ಯಾರದ್ದೋ ಆಡುಗಳ ಹಟ್ಟಿಯಾಗಿ ಬದಲಾಗಿತ್ತು. ಹತ್ತಿರದಲ್ಲೇ ಇದ್ದ ಪ್ರವಾದಿಯರ ಮನೆಯಾದರೂ ಉಳಿದಿದೆಯಾ ಎಂಬ ಕುತೂಹಲದಿಂದ ಅಲ್ಲಿಗೆ ಹೋದರೆ, ಉಳಿದುಕೊಂಡಿದ್ದದ್ದು ಬೃಹತ್ತಾದ ಕಲ್ಲಿನ ಆವರಣ ಮಾತ್ರ. ಮೊದಲ ಪ್ರವಾದಿಪತ್ನಿ ಖದೀಜಾರ ಬಲುದೊಡ್ಡ ಮನೆ ಅದು. ಆವರಣದ ಮೂಲೆಯಲ್ಲಿ ಚಿಗುರಿದ್ದ ಒಂದಷ್ಟು ಹುಲ್ಲುಪೊದರಿನ ಹೊರತಾಗಿ ಬೇರೇನೂ ಕಾಣಿಸಲಿಲ್ಲ. ನಿರಾಸೆಯಿಂದಲೇ ನಾವು ರಮ್ಲರ ಮನೆಯ ಕಡೆಗೆ ಹೆಜ್ಜೆ ಹಾಕಿದೆವು.

‘ಕಅಬಾ ಮಂದಿರದವರೆಗೂ ಹೋಗಿಬರೋಣವೆ?’ ಜೊತೆಗಿದ್ದ ಹೆಂಗಸನ್ನು ಉಮ್ಮ ಪ್ರಶ್ನಿಸಿದ್ದರು.

‘ಸರಿ. ಬನ್ನಿ ಹೋಗುವ’ ಎಂದವರು ನಮಗಿಂತ ಹೆಚ್ಚು ಉತ್ಸಾಹದಿಂದ ದಾಪುಗಾಲು ಹಾಕಿದ್ದರು.

‘ಮಂದಿರವೇನೂ ಬದಲಾದಂತಿಲ್ಲ’ ಉದ್ಗರಿಸಿದ್ದರು ಉಮ್ಮ. ಪಕ್ಕದಲ್ಲೇ ಇದ್ದ ‘ಝುಮ್ ಝುಮ್’ ಬಾವಿಯತ್ತ ಬೊಟ್ಟು ಮಾಡುತ್ತಾ, ‘ಅದೂ ಹಾಗೆಯೇ ಇದೆ’ ಎಂದಿದ್ದರು. ನಾವು ಮೂವರೂ ಭಾವಿಯ ಮೆಟ್ಟಲುಗಳನ್ನಿಳಿದೆವು. ‘ನೀರಿನ ಬಣ್ಣವೂ ಬದಲಾಗಿಲ್ಲ’ ಎಂದ ಉಮ್ಮ ಉತ್ಸಾಹದಿಂದಲೇ ಎರಡೂ ಕೈಗಳನ್ನು ಬೊಗಸೆ ಮಾಡಿಕೊಂಡು ನೀರೆತ್ತಿ ಕುಡಿದರು. ‘ನೀರಿನ ರುಚಿಯೂ ಹಾಗೆಯೇ’ ಎಂದು ಸಂಭ್ರಮಿಸಿದಾಗ, ನಾನೂ ಬೊಗಸೆಯಿಂದ ನೀರೆತ್ತಿ ಕುಡಿದೆ. ಬಾಲ್ಯದ ನೆನಪುಗಳಂತೆಯೇ ರುಚಿಯಾಗಿತ್ತು.

ರಾತ್ರಿಯೆಲ್ಲ ಕೆಟ್ಟ ಕೆಟ್ಟ ಕನಸುಗಳು.

ಯಾರೋ ಒಬ್ಬರು ನನ್ನ ಎರಡೂ ಕಾಲುಗಳನ್ನು ಹಿಡಿದು ತಲೆಯನ್ನು ಬಾವಿಯ ನೀರೊಳಗೆ ಮುಳುಗಿಸುತ್ತಿದ್ದಾರೆ!

ನನ್ನ ಉಸಿರು ಸಾಯುವ ಮುನ್ನ ಎತ್ತಿ ಹಿಡಿದು ಗಹಗಹಿಸಿ ನಗುತ್ತಿದ್ದಾರೆ!

ಮತ್ತೊಮ್ಮೆ ಜೋರಾಗಿ ಅಳುತ್ತಿದ್ದಾರೆ!

ನನ್ನನ್ನು ಎತ್ತಿಕೊಂಡು ಬಾವಿಯ ಮೆಟ್ಟಲೇರಿ, ಅಲ್ಲಿಂದಲೇ ನನ್ನನ್ನು ನೀರಿಗೆ ಎಸೆಯುತ್ತಾರೆ!

ನಾನು ಸತ್ತೇಹೋದೆ ಎಂದುಕೊಳ್ಳುವಷ್ಟರಲ್ಲಿ, ನೀರಿಗೆ ಹಾರಿ ನನ್ನನ್ನು ಎತ್ತಿಕೊಂಡು ಬಲವಾಗಿ ತಬ್ಬಿ ಮುತ್ತಿಡುತ್ತಾರೆ!

ಮರುಕ್ಷಣದಲ್ಲೇ ನನ್ನನ್ನು ಮೆಟ್ಟಲ ಮೇಲೆ ಮಲಗಿಸಿ ನೀರಿಗೆ ಧುಮುಕುತ್ತಾರೆ!

ಆದರೆ, ಅವರು ಮುಳುಗುವುದೇ ಇಲ್ಲ!

ಭಾವಿಯ ನೀರು ಮರಳ ರಾಶಿಯಾಗಿ ಬದಲಾಗಿರುತ್ತದೆ!

ಗಾಬರಿಗೊಂಡ ಅವರು ಎರಡೂ ಕೈಗಳಲ್ಲಿ ಮರಳನ್ನು ಬಗೆಯುತ್ತಾರೆ!

ಮೇಲೆ ಬಂದು ನನ್ನನ್ನು ಎತ್ತಿ ಮರಳಕುಣಿಯೊಳಗೆ ನಿಲ್ಲಿಸುತ್ತಾರೆ!

ಕತ್ತಿನವರೆಗೂ ಮರಳು ತುಂಬಿಸುತ್ತಾರೆ.

ಇದ್ದಕ್ಕಿದ್ದಂತೆ ಮರಳು ನೀರಾಗಿ ಹರಿಯುತ್ತದೆ!

ನಾನು ಮುಳುಗಲಾರಂಭಿಸುತ್ತೇನೆ!

ಅವರು ನನ್ನತ್ತ ನಗುತ್ತಾ ಕೈ ಚಾಚುತ್ತಾರೆ!

ನಾನವರ ಕೈ ಬೆರಳು ಹಿಡಿದುಕೊಳ್ಳುತ್ತೇನೆ!





ಆದರೆ, ಅವರು ನನ್ನಿಂದ ತಪ್ಪಿಸಿಕೊಂಡು ಓಡುತ್ತಾರೆ!

ದಿಗ್ಗನೆ ಎಚ್ಚರಗೊಂಡು ನೋಡಿದರೆ, ಪಕ್ಕದಲ್ಲೇ ನಿದ್ರಿಸಿದ್ದ ಉಮ್ಮನ ಕೈಬೆರಳುಗಳಲ್ಲಿ, ನನ್ನ ಕೈಬೆರಳುಗಳು ಬೆಸೆದುಕೊಂಡಿದ್ದವು.

ಆ ಬಳಿಕ ರಾತ್ರಿಯಿಡೀ ನಾನು ನಿದ್ರಿಸಿರಲಿಲ್ಲ.

## –೬–

ಅಬೂಸುಫ್ಯಾನರದು ಬಲು ದೊಡ್ಡ ಮನೆ.

ಮನೆಯೊಳಗಿನ ಅಲಂಕಾರಿಕ ವಸ್ತುಗಳನ್ನು ನೋಡುತ್ತಾ ಹೋದರೆ, ಆ ಮನೆಯ ಸೌಂದರ್ಯವು ಅಜ್ಜಿಕತೆಗಳಲ್ಲಿ ಬರುವ ಸಿರಿವಂತ ರಾಜಕುಮಾರರ ಅರಮನೆಗಳನ್ನೂ ಮೀರಿಸುವಂತಿತ್ತು. ಚಂದ್ರಕಾಂತ ಶಿಲೆಯ ನೆಲದ ಮೇಲೆ ಹಾಸಿರುವ ನಯವಾದ ಹಾಗೂ ಬಲು ದಪ್ಪದ ಪರ್ಸಿಯನ್ ರತ್ನಗಂಬಳಿಯ ಮೇಲೆ ಕಾಲಿಟ್ಟರೆ ಪಾದಗಳು ಹುದುಗಿಕೊಳ್ಳುತ್ತಿದ್ದವು. ಹಾಲು ಬಿಳಿ ಬಣ್ಣದ ಕಲ್ಲಿನ ಗೋಡೆಗಳ ಮೇಲೆ, ಅಲ್ಲಲ್ಲಿ ತೂಗಿಸಿದ ಅಲಂಕಾರಿಕ ವಸ್ತುಗಳು, ಬೆಳ್ಳಿ ಬಟ್ಟಲುಗಳು, ಮಣಿಖಚಿತ ಬಂಗಾರದ ಹಿಡಿಗಳುಳ್ಳ ಹೊಳೆಯುವ ಖಡ್ಗಗಳು. ಕಿಟಕಿಗಳನ್ನು ಮುಚ್ಚಿರುವ ಅಬಿಸೀನಿಯಾದ ಹತ್ತಿಯ ಪರದೆಗಳಲ್ಲಿ ಚಿತ್ರಿಸಿದ ಹೂವುಗಳು ಸುಗಂಧ ಸೂಸುತ್ತಿರುವಂತೆ ಕಾಣಿಸುತ್ತಿದ್ದವು. ದಿವಾನಖಾನೆಯಲ್ಲಿ ಇರಿಸಿದ ಮಂಚಗಳ ಮೇಲೆ ಮೆತ್ತನೆಯ ಶುಭ್ರ ಬಿಳಿ ಬಣ್ಣದ ಮೆತ್ತೆಗಳು. ಅವುಗಳಿಗೆ ಹೊಂದುವಂತೆ ಕಡು ನೀಲ ವರ್ಣದ ನೂಲುಗಳಿಂದ ಕಸೂತಿಗೊಂಡ ವಸ್ತ್ರಗಳನ್ನು ಹೊಂದಿರುವ ದಿಂಬುಗಳು. ಒಂದೇ, ಎರಡೇ, ನೋಡಿದಷ್ಟೂ ಮತ್ತಷ್ಟು ನೋಡಬೇಕೆನ್ನಿಸುವ ಬಲು ದೊಡ್ಡ ಮನೆ ಅದು. ರಮ್ಲರವರು ಹೆಮ್ಮೆಯಿಂದಲೇ ತಮ್ಮ ಅಬ್ಬನ ಸಿರಿವಂತಿಕೆಯನ್ನು ಒಂದೊಂದಾಗಿ ತೋರಿಸುತ್ತಿದ್ದರು.

ಮನೆಯಲ್ಲಿ ಗಂಡಸರು ಇರುವಾಗ ಹಜಾರಕ್ಕೆ ಹೆಂಗಸರಾರೂ ಕಾಲಿಡುತ್ತಿರಲಿಲ್ಲವಂತೆ. ಒಳಬಾಗಿಲಿಗೆ ಹೊದಿಸಿದ ರೇಶ್ಮೆಯ ಪರದೆಯೊಳಗಿನಿಂದ ಇಣುಕಿದರೂ ಅಬ್ಬನಿಗೆ ಸಿಟ್ಟು ಬರುತ್ತಿತ್ತಂತೆ. ಬಾಲ್ಯವನ್ನು ನೆನಪಿಸಿಕೊಳ್ಳುತ್ತಾ ನಕ್ಕಿದ್ದರು ರಮ್ಲ. ಅಷ್ಟರಲ್ಲಿ ದಾಸಿಯೊಬ್ಬಳು ಬಂದು, ಅಪರಿಚಿತ ಹೆಣ್ಣೊಬ್ಬಳು ಹೊರಗಿನ ಕೋಣೆಯಲ್ಲಿ ತಮ್ಮನ್ನು ಕಾಣಬಯಸುತ್ತಿದ್ದಾಳೆ ಎಂದು ರಮ್ಲರಿಗೆ ಹೇಳಿ ಹೋದಳು.

‘ನೀನಿಲ್ಲೇ ಕುಳಿತಿರು ಅಫೀರಾ, ಅದಾರೆಂದು ನೋಡಿ ಬರುವೆ’ ಎನ್ನುತ್ತಾ ಅವರು ಹೊರಗೆ ಹೋಗಿದ್ದಳು.

ನಾನು ಹಜಾರದಲ್ಲೇ ಒಂಟಿಯಾಗಿದ್ದೆ.

ಸ್ವಲ್ಪವೇ ಹೊತ್ತಿನಲ್ಲಿ ಪ್ರವಾದಿಪತ್ನಿ ಹಜಾರದೊಳಕ್ಕೆ ಬಂದಿದ್ದರು. ಅವರ ಬೆನ್ನ ಹಿಂದೆ ಹೆಚ್ಚು ಕಮ್ಮಿ ನನ್ನಷ್ಟೇ ವಯಸ್ಸಿನ ಹೆಣ್ಣೊಬ್ಬಳೂ ಇದ್ದಳು.

'ಇವಳು ಬಂದದ್ದು ನನ್ನನ್ನು ಕಾಣಲಲ್ಲ ಅಫೀರಾ, ನಿನ್ನನ್ನು' ಎಂದ ಪ್ರವಾದಿಪತ್ನಿ, ಅತಿಥಿಯನ್ನು ನನ್ನ ಬಳಿಯೇ ಕುಳ್ಳಿರಿಸಿ, 'ನೀವಿಬ್ಬರೂ ಮಾತನಾಡುತ್ತಿರಿ. ಅಕಿಯಾರನ್ನು ಕರೆದುಕೊಂಡು ಬರುವೆ' ಎಂದು ಒಳಗೆ ಹೋಗಿಬಿಟ್ಟರು.

ನಾನು ಅತಿಥಿಯತ್ತ ತಿರುಗಿ, 'ನೀವೂ..' ಎನ್ನುತ್ತಿರುವಂತೆಯೇ ತಲೆ ಸುತ್ತು ಬಂದಂತಾಗಿ, 'ಸಬ್ರಿನಾ..,' ಎಂದು ಚೀರುತ್ತಾ, ಪ್ರೀತಿಯ ದೊಡ್ಡಕ್ಕನ ಮಡಿಲಿಗೆ ಬಿದ್ದುಬಿಟ್ಟಿದ್ದೆ!

ಎಚ್ಚರವಾದಾಗ, ನಾನು ಒಳಕೋಣೆಯಲ್ಲಿದ್ದ ಮಂಚದ ಮೇಲೆ ಮಲಗಿದ್ದೆ.

ನನ್ನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಸಬ್ರಿನಾ ತಲೆ ಸವರುತ್ತಾ ಕುಳಿತಿದ್ದರೆ, ನನ್ನ ಉಮ್ಮ ನನ್ನ ಕಾಲು ನೀವುತ್ತಿದ್ದಳು. ಪ್ರವಾದಿಪತ್ನಿ ರಮ್ಲರವರು ಬಾಗಿಲಿಗೊರಗಿ ಮಂದಹಾಸ ಬೀರುತ್ತಿದ್ದರು.

ನನ್ನ ಉಮ್ಮನತ್ತ ನೋಡುತ್ತಾ 'ಇದೆಲ್ಲ ಏನು ಉಮ್ಮ' ಎಂದೆ.

'ನಿಜ ಅಫೀರಾ.' ಬಿಕ್ಕಳಿಸಿದ್ದರು ಉಮ್ಮ.

'ಮಕ್ಕಾದಲ್ಲಿ ನಿನಗೆ ಬಲುದೊಡ್ಡ ಬಹುಮಾನವೊಂದು ಕಾದಿದೆ ಎಂದು, ಈ ಮನೆಯ ಒಡೆಯ ನಿನಗೆ ಮದೀನಾದಲ್ಲಿ ಹೇಳಿದ್ದರಲ್ಲ. ಆ ದೊಡ್ಡ ಬಹುಮಾನವೇ ಇವಳು; ನಿನ್ನ ದೊಡ್ಡಕ್ಕ ಸಬ್ರಿನಾ.' ರಮ್ಲರವರು ಹೇಳಿದ್ದರು.

ಕಳೆದ ರಾತ್ರಿ ನನ್ನನ್ನು ಕಾಡಿದ್ದ ಕನಸು ನೆನಪಾಗಿತ್ತು.

'ನನಗೆ ಅಬ್ಬ.....' ಎನ್ನುತ್ತಾ ನಾನು ದಢಕ್ಕನೆ ಎದ್ದು ಕುಳಿತಿದ್ದೆ.

'ಅವರೀಗ ಇಲ್ಲ ಅಫೀರಾ.., ತೀರಿಕೊಂಡರು.' ಎಂದ ದೊಡ್ಡಕ್ಕ ಸಬ್ರಿನಾ ಜೋರಾಗಿ ಸ್ವರವೆಬ್ಬಿಸಿ ಅಳತೊಡಗಿದಳು.

'ಆ ಕೆಟ್ಟ ಬೆಳಗ್ಗೆ ನಿನ್ನನ್ನು ಕರೆದುಕೊಂಡು ಹೋಗಿದ್ದವರು, ಸಂಜೆಗೆ ಮನೆಗೆ ಮರಳಿದಾಗ ಅವರ ಕಣ್ಣುಗಳು ಕೆಂಡದಂತಾಗಿದ್ದವು. ನಮ್ಮಲ್ಲಿ ಯಾರನ್ನೂ ಮಾತನಾಡಿಸದೆ ನೇರವಾಗಿ ಅವರ ಕೋಣೆಗೆ ನುಗ್ಗಿ ಬಾಗಿಲು ಮುಚ್ಚಿಕೊಂಡಿದ್ದರು. ಉಮ್ಮ ಓಡಿ ಹೋಗಿ ಬಾಗಿಲು ಬಡಿಯುತ್ತಿದ್ದರೂ ಬಾಗಿಲು ತೆರೆಯಲಿಲ್ಲ. ನಾವು ಇಬ್ಬರು ಮಕ್ಕಳೂ ಅಬ್ಬಾ.., ಅಬ್ಬಾ.., ಎಂದು ಎಷ್ಟು ಅಂಗಲಾಚಿದರೂ ವ್ಯರ್ಥ ವಾಗಿತ್ತು. ಮಂಕಾದ ನಮಗೆ, ಅಳುವುದೊಂದನ್ನು ಬಿಟ್ಟು ಬೇರೇನೂ ಹೊಳೆದಿರಲಿಲ್ಲ.

'ಸ್ವಲ್ಪವೇ ಹೊತ್ತಿನ ಬಳಿಕ ದಡಾರನೆ ಬಾಗಿಲು ತೆರೆದ ಸದ್ದು ಕೇಳಿಸಿದಾಗ ನಾವೆಲ್ಲ ಎದ್ದು ನಿಂತಿದ್ದೆವು. ಆದರೆ, ಬಾಗಿಲ ಪಕ್ಕದಲ್ಲೇ ಕುಳಿತಿದ್ದ ಉಮ್ಮನನ್ನು ಕೈಯಿಂದ ತಳ್ಳಿದ





ಅಬ್ಬ ಹೊರಗೆ ಧಾವಿಸಿದ್ದರು. ಅಂಗಳದಲ್ಲಿ ನಿಲ್ಲಿಸಿದ್ದ ಕುದುರೆಯೇರಿ ಬಾಣದಂತೆ ಚಿಮ್ಮಿದ್ದರು. ಹಾಗೆ ಹೋದ ಅಬ್ಬ ಮಧ್ಯರಾತ್ರಿಯಾದರೂ ಮನೆಗೆ ಬಂದಿರಲಿಲ್ಲ.

'ಮಾತುಗಳನ್ನೇ ಮರೆತಿದ್ದ ನಾವು, ಬಾಗಿಲ ಬಳಿಯೇ ಬಿದ್ದುಕೊಂಡಿದ್ದೆವು.

'ರಾತ್ರಿಯ ಎರಡನೆಯ ಜಾವವಾಗಿದ್ದಿರಬಹುದು.

'ಅಂಗಳದಲ್ಲಿ ಐದಾರು ಮಂದಿ ಮಾತನಾಡುತ್ತಿರುವ ಧ್ವನಿ ಕೇಳಿಸಿತ್ತು. ಬೆಚ್ಚಿ ಎದ್ದು ಕುಳಿತಿದ್ದೆವು. ಏಳೆಂಟು ಮಂದಿ ಅಬ್ಬನನ್ನು ಎತ್ತಿಕೊಂಡು ಒಳಗೆ ಬಂದಿದ್ದರು. ಉಮ್ಮ ಜೋರಾಗಿ ಕಿರುಚಿದ್ದರು. ಜೋತಾಡುತ್ತಿದ್ದ ಅಬ್ಬನ ಎಡಗೈಗೆ ಸುತ್ತಿದ್ದ ವಸ್ತ್ರದ ಹೊದಿಕೆಯಿಂದ ಸೋರುತ್ತಿದ್ದ ರಕ್ತದ ಹನಿಗಳು, ಅವರನ್ನು ಮಲಗುವ ಕೋಣೆಯವರೆಗೂ ಹನಿ ಹನಿಯಾಗಿ ಹಿಂಬಾಲಿಸುತ್ತಿತ್ತು.

'ತಿಂಗಳು ಕಳೆದರೂ ಅಬ್ಬ ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ರೊಟ್ಟಿಗಳನ್ನು ಅರ್ಧ ತಿಂದರೆ, ತಿಂದರು. ಇಲ್ಲದಿದ್ದರೆ ಇಲ್ಲ. ನೀರು ಕುಡಿದರೆ ಕುಡಿದರು, ಕುಡಿಯ ದಿದ್ದರೆ ಅದೂ ಇಲ್ಲ. ನಿತ್ಯವೂ ಹಕೀಮರೊಬ್ಬರು ಬಂದು, ಅಬ್ಬನ ಎಡಗೈಗೆ ಸುತ್ತಿದ ವಸ್ತ್ರವನ್ನು ಬಿಚ್ಚಿ, ಔಷಧಿ ಹಚ್ಚಿ ಹೊಸ ವಸ್ತ್ರದಿಂದ ಸುತ್ತಿ ಹೋಗುತ್ತಿದ್ದರು. ಆದರೆ, ಅದೆಷ್ಟು ದಿನ ಕಳೆದರೂ ಅಬ್ಬನ ಜಜ್ಜಿ ಹೋದ ನಾಲ್ಕೂ ಬೆರಳಿಗಾಗಿರುವ ಗಾಯವು ಗುಣವಾಗುವ ಯಾವ ಸೂಚನೆಯನ್ನೂ ನೀಡಿದ್ದಿರಲಿಲ್ಲ. ಸರಿಯಾಗಿ ಆಹಾರ ತೆಗೆದು ಕೊಳ್ಳದಿರುವುದರಿಂದ, ಅವರ ದೊಡ್ಡ ದೇಹವು ದಿನೇ ದಿನೇ ಕ್ಷೀಣಿಸುತ್ತಿತ್ತು. ಎರಡು ಹೆಜ್ಜೆ ಸರಿಯಾಗಿ ನಡೆಯುವಾಗಲೂ ಸುಸ್ತಾಗುತ್ತಿದ್ದರು. ಅಬ್ಬನ ಕೆಲವು ಗೆಳೆಯರು, ಆಗೊಮ್ಮೆ ಈಗೊಮ್ಮೆ ಮನೆಗೆ ಬಂದು, ಅಬ್ಬನ ಕೋಣೆಯ ಒಳಗೆ ಹೋಗಿ ಕುಶಲ ವಿಚಾರಿಸಿ ಹೋಗುತ್ತಿದ್ದರು. ಕ್ರಮೇಣ ಬರುವವರ ಸಂಖ್ಯೆಯೂ ಕಡಿಮೆಯಾಗಿತ್ತು.

'ಬದುಕು ಹಾಗೆಯೇ ಮುಂದುವರಿದಿತ್ತು. ಅಬ್ಬನ ಮಂಡಿ ವ್ಯಾಪಾರವನ್ನು ಚಿಕ್ಕಪ್ಪ ನವರ ಸೋದರ ಸಂಬಂಧಿಯೊಬ್ಬರು ನೋಡಿಕೊಳ್ಳುತ್ತಿದ್ದುದರಿಂದ, ಮನೆವಾರ್ತೆ ಹೇಗೋ ನಡೆದುಕೊಂಡು ಹೋಗುತ್ತಿತ್ತು. ನಾಲ್ಕೈದು ತಿಂಗಳ ಬಳಿಕದ ಒಂದು ದಿನ, ಹಕೀಮರು ಐದಾರು ಹಿರಿಯ ಸರದಾರರುಗಳನ್ನು ಕರೆದುಕೊಂಡು ಮನೆಗೆ ಬಂದಿದ್ದರು. ಔಷಧೋಪಚಾರವಾದ ಬಳಿಕ, ಉಮ್ಮನನ್ನೂ ಕೋಣೆಗೆ ಕರೆಸಿಕೊಂಡು ಬಾಗಿಲು ಎಳೆದುಕೊಂಡಿದ್ದರು.

'ನಮಗೆಲ್ಲ ಬಹಳ ಭಯವಾಗಿತ್ತು. ಬಹಳ ಹೊತ್ತು ಒಳಗಿದ್ದ ಉಮ್ಮ, ಕಣ್ಣೀರು ಒರೆಸಿಕೊಳ್ಳುತ್ತಾ ಬಾಗಿಲು ತೆರೆದು ಹೊರಗೆ ಬಂದರು. ಅವರ ಹಿಂದೆ ನಡೆದ ನಾನು, ಒಳಗೇನಾಯಿತು ಉಮ್ಮ ಎಂದು ಪ್ರಶ್ನಿಸಿದ್ದೆ. ಆದರೆ, ಉಮ್ಮ ಮೌನವಾಗಿದ್ದರು. ನನ್ನ ತಂಗಿ ಅಫ್ರಿನಾಳಿಗೆ ಮದುವೆಯಾದ ಬಹಳ ದಿನಗಳ ಬಳಿಕವೆ ಉಮ್ಮ ಆ ಗುಟ್ಟನ್ನು

ಬಿಟ್ಟುಕೊಟ್ಟದ್ದು.' ಒಂದೇ ಸವನೆ ಮಾತನಾಡುತ್ತಿದ್ದ ದೊಡ್ಡಕ್ಕ, ಬಾಗಿಲತ್ತ ನೋಡಿದ್ದವರು ಇದ್ದಕ್ಕಿದ್ದಂತೆ ಮೌನವಹಿಸಿದ್ದಳು.

ಕೋಣೆಯೊಳಗೆ, ನನ್ನ ಪುಟ್ಟ ಒಡತಿ ಕಾಲಿರಿಸಿದ್ದರು!

ಮಂಚದಿಂದ ಗಡಬಡಿಸಿ ಇಳಿದು ಧಾವಿಸಿದ ನಾನು, ಅವರನ್ನು ಬಿಗಿಯಾಗಿ ಅಪ್ಪಿಕೊಂಡು ಅಳತೊಡಗಿದ್ದೆ.

ಅಷ್ಟರಲ್ಲಿ ಹಿರಿಯ ಪ್ರವಾದಿಪತ್ನಿ ಸೌದಾ, ಝೈನಬ್ ಮತ್ತು ಉಮ್ಮು ಸಲಾಮಾ ಒಟ್ಟಾಗಿ ನುಗ್ಗಿ ಬಂದಿದ್ದರು!

ಇವರಿಗೆಲ್ಲ ಯಾರು ಹೇಳಿ ಕಳುಹಿಸಿದರು?

'ಹೆಣ್ಣು ಮಕ್ಕಳನ್ನು ಹೂಳುವ ಅಂಧಕಾರದ ದಿನಗಳು ಕೊನೆಗೊಂಡವು. ಪುರುಷರಿಗೆ, ಅವರ ತಂದೆ, ತಾಯಿ ಮತ್ತು ಬಂಧುಗಳು ಬಿಟ್ಟು ಹೋದುದರಲ್ಲಿ ಪಾಲಿದೆ. ಹಾಗೆಯೇ ಸ್ತ್ರೀಯರಿಗೂ ಪಾಲು ಮಾತ್ರ ನಿಶ್ಚಿತವಾಗಿದೆ; ಸ್ವಲ್ಪವೇ ಆದರೂ. ಹೆಣ್ಣು ಮಕ್ಕಳನ್ನು ಅವರ ಅಬ್ಬನ ಹೆಸರಿನಿಂದಲೇ ಕರೆಯಿರಿ ಅವರಿಗೆ ವಿವಾಹವಾಗಿದ್ದರೂ, ಆಗದಿದ್ದರೂ.'

ನನ್ನ ಪುಟ್ಟ ಒಡತಿ ಗಂಭೀರವಾಗಿ ಹೇಳುತ್ತಿದ್ದಾಗ, ಪ್ರವಾದಿಯವರ ಸಂದೇಶವನ್ನೇ ಆಲಿಸಿದಂತಾಗಿತ್ತು. ಪ್ರವಾದಿವಚನಗಳನ್ನು ನನ್ನ ಪುಟ್ಟ ಒಡತಿ ಕಂಠಪಾಟ ಮಾಡಿಕೊಳ್ಳುತ್ತಿರುವುದು ಗೊತ್ತಿತ್ತು. ಆದರೆ ಇಷ್ಟೊಂದು ಗಟ್ಟಿಯಾಗಿ ಅವರೆಂದೂ ಪಠಿಸಿದ್ದಿರಲಿಲ್ಲ.

'ಅಬ್ಬ ಕೂಡಾ ಅದನ್ನೇ ಹೇಳಿದ್ದರಂತೆ!' ದೊಡ್ಡಕ್ಕ ಅಚ್ಚರಿಯಿಂದ ಉದ್ಗರಿಸಿದ್ದರು.

'ಮಕ್ಕಾದ ಹಿರಿಯರೆದುರು ಉಮ್ಮನನ್ನು ಕರೆಸಿಕೊಂಡಿದ್ದ ಆ ದಿನ, ಅಬ್ಬ ಹೇಳಿದ್ದ ಗುಟ್ಟು ಇದುವೇ ಆಗಿತ್ತು. ಇಬ್ಬರು ಹೆಣ್ಣು ಮಕ್ಕಳೂ ಮದುವೆಯಾಗಿ ಹೋಗುವ ವರೆಗೂ ಆ ಗುಟ್ಟನ್ನು ಯಾರಿಗೂ ತಿಳಿಸಬಾರದೆಂದು ಉಮ್ಮನಿಂದ ಪ್ರಮಾಣ ಮಾಡಿಸಿ ಕೊಂಡಿದ್ದರಂತೆ ಅಬ್ಬ. ನಮ್ಮಿಬ್ಬರಿಗೂ ಮದುವೆಯಾಗಿ ನಾಲ್ಕೈದು ತಿಂಗಳುಗಳ ಬಳಿಕ, ನಮ್ಮಿಬ್ಬರನ್ನು ನಮ್ಮ ಗಂಡಂದಿರೊಂದಿಗೆ ಮನೆಗೆ ಕರೆಸಿಕೊಂಡಿದ್ದ ಉಮ್ಮ, ಅಬ್ಬನ ಕೊನೆಯ ಬಯಕೆಯನ್ನು ಮೊದಲ ಬಾರಿಗೆ ಪ್ರಕಟಿಸಿದ್ದರು.

'ಕೊನೆಮಗಳು ಅಫೀರಾ ಜೀವಂತವಾಗಿ ಉಳಿದುಕೊಂಡಿದ್ದಾಳೆಂದೂ, ಊರೊಳಗಿನ ಒಂದು ಮನೆಯಲ್ಲಿ ಸುಖವಾಗಿಯೇ ಬೆಳೆಯುತ್ತಿದ್ದಾಳೆಂದೂ ಅಬ್ಬ ತಿಳಿಸಿದ್ದರಂತೆ. ಅಷ್ಟು ಮಾತ್ರವಲ್ಲ ತಮ್ಮ ತಪ್ಪಿಗೆ ಪ್ರಾಯಶ್ಚಿತವೆಂಬಂತೆ, ನಮ್ಮ ದೊಡ್ಡ ಮನೆ ಮತ್ತು ಅಂಗಡಿವ್ಯಾಪಾರಗಳನ್ನೆಲ್ಲ ಅವಳೊಬ್ಬಳಿಗೇ ಉಡುಗೊರೆಯಾಗಿ ನೀಡುವುದೇ ತಮ್ಮ ಕೊನೆಯಾಸೆಯೆಂಬುದಾಗಿ ಅಬ್ಬ ಹೇಳಿದ್ದರಂತೆ. ನಾವು ಇಬ್ಬರು





ಹೆಣ್ಣು ಮಕ್ಕಳೂ, ನಮ್ಮ ಗಂಡಂದಿರೂ, ನನ್ನಬ್ಬನ ಕೊನೆಯಾಸೆಯನ್ನು ಯಾವುದೇ ತಕರಾರು ಇಲ್ಲದೆ ಒಪ್ಪಿಕೊಂಡಿದ್ದೆವು.

'ಅಬ್ಬನ ಬಗ್ಗೆ ನಮಗೆಲ್ಲರಿಗೂ ಹೆಮ್ಮೆಯೆನ್ನಿಸಿತ್ತು. ಆದರೆ, ನಮ್ಮ ಕೊನೆಯ ತಂಗಿ ಯಾರ ಮನೆಯಲ್ಲಿ ಬೆಳೆಯುತ್ತಿದ್ದಾಳೆಂಬುದನ್ನು ತಿಳಿಯಲು ಇಂದಿನವರೆಗೂ ಕಾಯಬೇಕಾಯಿತು.'

ಅಷ್ಟರಲ್ಲಿ ಕೋಣೆಯ ಹೊಸ್ತಿಲಲ್ಲಿ ಮನೆಯೊಡೆಯ ಅಬೂಸುಫ್ಯಾನರು ಕಾಣಿಸಿ ಕೊಂಡಿದ್ದರು!

ಅವರ ಬೆನ್ನ ಹಿಂದೆಯೆ ಬಂದಿದ್ದ ಇನ್ನೊಬ್ಬಳು ಯುವತಿ, ಓಡಿ ಬಂದು ನನ್ನನ್ನು ತಬ್ಬಿಕೊಂಡು ಬಿಕ್ಕಳಿಸಲಾರಂಭಿಸಿದ್ದಳು.

ನನ್ನ ತುಂಟಿ ಅಕ್ಕ ಅಫ್ರಿನಾ!

'ಪರ್ವೇಝ್ ನನ್ನ ಬಾಲ್ಯದ ಗೆಳೆಯ.' ಬಹುಕಾಲ ಎದೆಯೊಳಗೇ ಬಚ್ಚಿಟ್ಟಿದ್ದ ರಹಸ್ಯವೊಂದನ್ನು ಅಬೂಸುಫ್ಯಾನರು ಎಳೆಯೆಳೆಯಾಗಿ ಬಿಚ್ಚಿಡಲಾರಂಭಿಸಿದ್ದರು.

'ತೀರಿಹೋಗುವ ಕೆಲವು ತಿಂಗಳುಗಳ ಹಿಂದೆ ನಾನವನ ದೊಡ್ಡ ಮನೆಗೆ ಹೋಗಿದ್ದೆ. ಆದಿನ ಅವನೊಂದು ಗುಟ್ಟು ಹೇಳಿದ್ದ.

ಆ ಕೆಟ್ಟ ದಿನದಲ್ಲಿ ಮಗಳನ್ನು ಕತ್ತಿನವರೆಗೂ ಮರಳಲ್ಲಿ ಮುಳುಗಿಸಿ, ಕಅಬಾ ಮಂದಿರಕ್ಕೆ ಹೋಗಿ ಅಳುತ್ತಾ ಕುಳಿತಿದ್ದವನಿಗೆ, ಕತ್ತಲಾಗುತ್ತಿದ್ದಂತೆ ಯಾರೋ ಓಡಿ ಬರುತ್ತಿರುವ ಸದ್ದು ಕೇಳಿಸಿತ್ತಂತೆ. ಗಲಿಬಿಲಿಯಿಂದ ಎದ್ದು, ಪಕ್ಕದಲ್ಲೇ ಇದ್ದ ಕಂಬದ ಮರೆಯಲ್ಲಿ ನಿಂತು ಇಣುಕಿದ ಗೆಳೆಯನಿಗೆ ಪುಟ್ಟ ಅಫೀರಾಳನ್ನು ಎದೆಗೊತ್ತಿಕೊಂಡು ಬಂದ ಮುಅತ್ತಲ್ ಕಾಣಿಸಿದ್ದ.

'ಪರ್ವೇಝುನಿಗೆ ಮುಅತ್ತಲನ ಗುರುತು ಇತ್ತು. ಆಗಿನ್ನೂ ಮುಅತ್ತಲ್, ಅಬೂಬಕರರ ಮನೆಯ ಕುದುರೆಪಾಲಕನಾಗಿದ್ದಿರಲಿಲ್ಲ. ಮಗುವನ್ನೆತ್ತಿಕೊಂಡು ಮುಅತ್ತಲ್ ಬಾವಿಯ ಮೆಟ್ಟಲುಗಳನ್ನು ಇಳಿಯುತ್ತಿರುವುದನ್ನು ಮರೆಯಿಂದಲೇ ಗಮನಿಸಿದ್ದ ಗೆಳೆಯ, ತಡ ಮಾಡದೆ ತನ್ನ ಮನೆಗೆ ಸಾಧ್ಯವಾದಷ್ಟು ವೇಗದಲ್ಲಿ ಧಾವಿಸಿದ್ದ. ಮನೆಯೊಳಗೆ ಇರಿಸಿದ್ದ ಅಷ್ಟೂ ಬಂಗಾರದ ನಾಣ್ಯಗಳನ್ನು ಚೀಲವೊಂದಕ್ಕೆ ತುಂಬಿಕೊಂಡು, ಕುದುರೆಯೇರಿ ಮತ್ತೆ ಬಾವಿಯತ್ತ ಧಾವಿಸಿದ್ದ.

'ಆದರೆ, ಅಲ್ಲಿ ಯಾರೂ ಕಾಣಿಸಿರಲಿಲ್ಲ. ಕಂಗಾಲಾದ ಪರ್ವೇಝು, ಕುದುರೆಯೇರಿ ಮಗಳನ್ನು ಹುಡುಕುತ್ತಾ ಹೊರಟಿದ್ದ. ಪರ್ವೇಝುನ ಅದೃಷ್ಟವೋ ಅಫೀರಾಳ ಅದೃಷ್ಟವೋ ಒಟ್ಟಿನಲ್ಲಿ, ಮಗುವನ್ನೆತ್ತಿಕೊಂಡು ಹೋಗುತ್ತಿರುವ ಮುಅತ್ತಲ್ ಬಲು

ದೂರದಲ್ಲಿ ಕಾಣಿಸಿದ್ದ. ಬಳಸು ದಾರಿಯಲ್ಲಿ ಕುದುರೆಯನ್ನು ಓಡಿಸಿದ ಪರ್ವೇಝು, ಮುಅತ್ತಲನನ್ನು ಅಡ್ಡ ಹಾಕಿದ್ದ. ತನ್ನ ಗುರುತು ಸಿಗಬಾರದೆಂದು ಮುಖವನ್ನು ಪೂರ್ತಿಯಾಗಿ ಮುಂಡಾಸಿನಿಂದ ಮುಚ್ಚಿಕೊಂಡು, ಮುಅತ್ತಲನಿಗೆ ನಾಣ್ಯಗಳ ಚೀಲವನ್ನು ಒಪ್ಪಿಸಿ ಮಗುವನ್ನು ಚೆನ್ನಾಗಿ ಸಾಕಬೇಕೆಂದೂ, ಯಾರಿಗೂ ಈ ಮಗು ಎಲ್ಲಿ ಸಿಕ್ಕಿತು ಎಂಬುದನ್ನು ತಿಳಿಸಬಾರದೆಂದು ಎಚ್ಚರಿಸಿ, ಕಅಬಾ ಮಂದಿರಕ್ಕೆ ಮರಳಿದ್ದ.

'ಅಷ್ಟೆಲ್ಲಾ ಮಾಡಿದ ಬಳಿಕವೂ, ಪರ್ವೇಝುನನ್ನು, ಅವನು ಮಾಡಿದ್ದ ಕ್ರೂರ ಕೃತ್ಯ ಹಿಂಸಿಸುತ್ತಿತ್ತು. ಎದೆ ಪಶ್ಚಾತಾಪದಿಂದ ಕುದಿಯುತ್ತಿತ್ತು. ಪಕ್ಕದಲ್ಲೇ ಕಾಣಿಸಿದ ದೊಡ್ಡ ಕಲ್ಲೊಂದನ್ನು ಬಲಗೈಯಿಂದ ಎತ್ತಿಕೊಂಡು, ಎಡಗೈಯನ್ನು ಬಾವಿಯ ಕಟ್ಟೆಯ ಮೇಲಿರಿಸಿ ಬಲವಾಗಿ ಜಜ್ಜಿಕೊಂಡುಬಿಟ್ಟಿದ್ದ!

'ಮರಣದವರೆಗೂ ಆ ಗಾಯ ಗುಣವಾಗಿದ್ದಿರಲೇ ಇಲ್ಲ.'

ದೊಡ್ಡಕ್ಕ ಆಪ್ರಿನಾ, ತನ್ನ ತಂಗಿ ಅಫ್ರಿನಾಳನ್ನು ನೋಡಿ ಏನೋ ಕಣ್ಸನ್ನೆ ಮಾಡಿದ್ದಳು.

ಅಫ್ರಿನಾ ಕೋಣೆಯಿಂದ ಹೊರಗೆ ಹೋದಳು. ಇದೆಲ್ಲ ಏನು ನಡೆಯುತ್ತಿದೆಯೆಂದು ನಾನು ಅಚ್ಚರಿಪಡುತ್ತಿದ್ದಂತೆಯೇ, ಒಣಗಿದ ಕರ್ಜೂರದ ಸೋಗೆಯಂತೆ ಬಡಕಲಾಗಿದ್ದ ಹೆಂಗಸೊಬ್ಬರ ಭುಜವನ್ನು ಹಿಡಿದು ನಡೆಸಿಕೊಂಡು ಅಫ್ರಿನಾ ಬಂದಿದ್ದಳು.

ಯಾರಿದ್ದಿರಬಹುದು ಇವರು!

ಅವರನ್ನು ಅಫ್ರಿನಾ ನೆಲದ ಮೇಲೆ ಕುಳ್ಳಿರಿಸುತ್ತಿರುವಂತೆಯೇ ಇಬ್ಬರು ಅಕ್ಕಂದಿರೂ ಅವರನ್ನು ತಬ್ಬಿಕೊಂಡು ನೆಲದಲ್ಲಿ ಕುಳಿತುಬಿಟ್ಟರು.

ನನ್ನನ್ನು ಹೆತ್ತ ಉಮ್ಮ!

ಮರಳಲ್ಲಿ ನಾನು ಆಡುತ್ತಿರುವಾಗಲೆಲ್ಲ ಹಸಿದಿರಬಹುದೆಂದು ಭಾವಿಸುತ್ತಾ, ಆಗಾಗ್ಗೆ ಕರೆದು ಹಾಲು ಕುಡಿಸುತ್ತಿದ್ದ ನನ್ನ ಪ್ರೀತಿಯ ಉಮ್ಮ! ಮಕ್ಕಾದ ಅತಿಸುಂದರಿಯರ ಸಾಲಿನಲ್ಲಿ ಎದ್ದು ಕಾಣುತ್ತಿದ್ದ ನನ್ನ ಉಮ್ಮ ಇದೀಗ ಎಲುಬಿನ ಹಂದರವಾಗಿದ್ದರು. ಅಳುವುದನ್ನೂ ಮರೆತ ನಾನು ಕಲ್ಲಿನಂತೆ ನಿಂತುಬಿಟ್ಟಿದ್ದೆ. ಉಮ್ಮನೂ ಹಾಗೆಯೆ; ಕೈ ಚಾಚಿದರೆ ಸಿಗುವಷ್ಟು ಹತ್ತಿರದಲ್ಲಿ ಕುಳಿತಿದ್ದರೂ ತಲೆಯೆತ್ತಿ ನನ್ನತ್ತ ಕಣ್ಣು ಹಾಯಿಸಲೂ ಇಲ್ಲ!

'ಅಫೀರಾ...,' ಅಬೂಸುಫ್ಯಾನರು ತಮ್ಮ ಗಡಸು ಸ್ವರದಲ್ಲೇ ಹೇಳಿದರು, 'ನೀನು ಅಬ್ಬನನ್ನು ಕ್ಷಮಿಸಿರುವೆಯೆಂದು ಹೇಳಿದರೆ ಮಾತ್ರ, ನಿನ್ನೊಂದಿಗೆ ಅವರು ಮಾತನಾಡುತ್ತಾರಂತೆ!'





'ಉಮ್ಮಾ..!'

ನಾನು ಗಟ್ಟಿಯಾಗಿ ಕಿರುಚಿದ್ದು ಮಕ್ಕಾದ ಒಡೆಯರ ಕಲ್ಲುಮನೆಯನ್ನೇ ನಡುಗಿಸಿದ್ದಿರಬಹುದು.

ನಾನೂ ಗಡಗಡನೆ ನಡುಗುತ್ತಿದ್ದೆ. ಅಷ್ಟರಲ್ಲಿ ನನ್ನನ್ನು ಬಲವಾಗಿ ಹಿಡಿದುಕೊಂಡ ಝೈನಬರು, 'ತಾಳ್ಮೆಗೆಡದಿರು ಅಫೀರಾ' ಎಂದರು.

'ಹೇಳಿರಿ!' ನನ್ನ ಪುಟ್ಟ ಒಡತಿ ಪ್ರವಾದಿಯವರ ಮತ್ತೊಂದು ವಚನವನ್ನು ಹೇಳಲಾರಂಭಿಸಿದ್ದರು, 'ನೀವು ನಿಮ್ಮ ಮನದಲ್ಲಿರುವುದನ್ನು ಗುಟ್ಟಾಗಿಟ್ಟರೂ, ಬಹಿರಂಗವಾಗಿ ಪ್ರಕಟಿಸಿದರೂ, ಅಲ್ಲಾಹು ಅದನ್ನು ಖಂಡಿತವಾಗಿಯೂ ಅರಿಯುವನು. ಆಕಾಶ ಮತ್ತು ಭೂಮಿಯ ಮೇಲಿರುವ ಎಲ್ಲವನ್ನು ಅರಿತವನು ಅವನು. ಅವನು ಎಲ್ಲವನ್ನೂ ಮಾಡಲು ಶಕ್ತನು.'

ಅಷ್ಟರಲ್ಲಿ, ನನ್ನ ಉಮ್ಮ ಬುಡಕಿತ್ತ ಖರ್ಜೂರದ ಮರದಂತೆ ವಾಲುತ್ತಾ ದೊಡ್ಡಕ್ಕನ ತೊಡೆಯಮೇಲೆ ಬಿದ್ದುಬಿಟ್ಟಿದ್ದರು. ಗಾಬರಿಗೊಂಡ ನಾನು, ಉಮ್ಮನ ಪಕ್ಕದಲ್ಲಿ ಕುಳಿತು, ಎದೆಯ ಮೇಲೆ ಒರಗಿದೆ. ಅದೇಕೋ ಅನುಮಾನ ಬಂತು. ದಢಕ್ಕನೆ ಎದ್ದು ಕುಳಿತೆ. ಅವರ ಕೈ ಮುಟ್ಟಿದೆ.

ಅದು ಮಂಜಿನಂತೆ ತಣ್ಣಗಾಗಿತ್ತು!

ನಾನು ಕಿರುಚಲಿಲ್ಲ. ಅವರನ್ನು ತಬ್ಬಿಕೊಂಡು ಹಾಗೆಯೇ ಮಲಗಿಬಿಟ್ಟೆ. ದೊಡ್ಡಕ್ಕ ಸಬ್ರಿನಾಳಿಗೆ ನನ್ನ ವರ್ತನೆಯಿಂದ ಅನುಮಾನವಾಗಿದ್ದಿರಬೇಕು. ಉಮ್ಮನ ಹಣೆ ಮುಟ್ಟಿ, 'ಉಮ್ಮಾ..' ಎಂದಳು, ನಮ್ಮಿಬ್ಬರನ್ನೂ ತಬ್ಬಿಕೊಂಡುಬಿಟ್ಟಳು.

ಅಬೂಸುಫ್ಯಾನರ ದೊಡ್ಡ ಮನೆ ಮಸಣವಾಗಿತ್ತು.

'ಮರಣವನ್ನು ಎದುರಿಸುವ ಮುನ್ನ ನೀವು ಅದಕ್ಕಾಗಿ ಹಂಬಲಿಸುತ್ತಿದ್ದಿರಿ. ಇದೀಗ ನೀವು ಅದನ್ನು ಕಣ್ಣಾರೆ ಕಾಣುತ್ತಿರುವಿರಿ.' ಪುಟ್ಟ ಒಡತಿಯ ದೊಡ್ಡ ಧ್ವನಿ ಕೇಳಿಸುತ್ತಿತ್ತು, 'ಸತ್ಕರ್ಮಗಳನ್ನು ಮಾಡಿದವರು ಸ್ವರ್ಗದ ಉದ್ಯಾನವನವನ್ನು ನೇರವಾಗಿ ಪ್ರವೇಶಿಸುವರು.'

ಮಕ್ಕಾ ವಿಜಯದ ಎಲ್ಲ ಸಂತಸಗಳನ್ನೂ ಉಮ್ಮನ ಮರಣ ನುಂಗಿಬಿಟ್ಟಿತ್ತು.

ಹುಟ್ಟಿ ಬೆಳೆದ ನನ್ನ ಮನೆಯೊನ್ನೊಮ್ಮೆ ನೋಡಬೇಕೆಂಬ ಆಸೆಯೂ ಬತ್ತಿ ಹೋಗಿತ್ತು.

ಯಾರು ಎಷ್ಟೇ ಒತ್ತಾಯಿಸಿದರೂ, ಕೊನೆಯಲ್ಲಿ ಸ್ವತಃ ಅಬೂಸುಫ್ಯಾನರೇ ಆದೇಶ ನೀಡುವವರಂತೆಯೇ ಸೂಚಿಸಿದ್ದರೂ, ನನ್ನ ಅಬ್ಬನ ಕೊನೆಯಾಸೆಯನ್ನು ಪೂರೈಸಲು ನಾನು ಖಡಾಖಂಡಿತವಾಗಿ ನಿರಾಕರಿಸಿದ್ದೆ.

ನನ್ನ ಹಟದ ಸುದ್ದಿ, ದೊಡ್ಡ ಒಡೆಯ ಅಬೂಬಕರರಿಗೂ ತಲುಪಿದ್ದಿರಬೇಕು.

ನೇರವಾಗಿ ನಾನಿರುವಲ್ಲಿಗೇ ಧಾವಿಸಿ ಬಂದಿದ್ದರು. ನನ್ನ ಬಳಿ ನೆಲದಲ್ಲಿ ಕುಳಿತು, ನನ್ನನ್ನು ಎದೆಗೊರಗಿಸಿಕೊಂಡು ಬೆನ್ನು ನೇವರಿಸುತ್ತಾ, 'ಅದ್ಯಾಕೆ ಮಗು ಪುಟ್ಟ ಮಗುವಿನಂತೆ ಹಟ ಮಾಡುತ್ತಿರುವೆ? ನಿನ್ನ ಅಬ್ಬನ ಪ್ರಾಯಶ್ಚಿತದ ಬಯಕೆಯನ್ನೂ ಪೂರೈಸಲಾರದಷ್ಟು ಕಲ್ಲು ಮನಸ್ಸು ನಿನ್ನದಲ್ಲವಲ್ಲಾ? ನೋಡು ಮಗು. ನಿನ್ನನ್ನು ಇಲ್ಲಿಯೇ, ಮಕ್ಕಾದಲ್ಲಿ ಬಿಟ್ಟು ಮದೀನಾಕ್ಕೆ ಹೋಗುವ ಮನಸ್ಸು ನಮಗಾರಿಗೂ ಇಲ್ಲ. ನಿನ್ನಂಥ ಗೆಳತಿಯನ್ನು ನನ್ನ ಮಗಳಿಗೆ ಅಲ್ಲಾಹು ಇನ್ನೊಮ್ಮೆ ಕರುಣಿಸುವುದೂ ಇಲ್ಲ' ಎನ್ನುತ್ತಾ ತಾವೇ ಗದ್ಗದಿತರಾದಾಗ, ಪ್ರತಿಭಟನೆಯ ನನ್ನ ಮಾತುಗಳೆಲ್ಲವೂ ಸತ್ತುಹೋದಂತಾಗಿತ್ತು.

ಬಾಲ್ಯದಿಂದಲೂ ಅವರ ಮನೆಯಲ್ಲೇ ಅವರ ಮಕ್ಕಳೊಂದಿಗೆ ಮತ್ತೊಬ್ಬಳು ಮಗಳಾಗಿಯೇ ಬೆಳೆದಿದ್ದವಳು ನಾನು. ಒಂದು ದಿನವೂ ನನ್ನನ್ನು ದಾಸಿಯಂತೆ ಕಂಡವರಲ್ಲ ದೊಡ್ಡ ಒಡೆಯರು.

ಆದರೆ, ಸಣ್ಣ ಒಡತಿಯಿಲ್ಲದ ಸ್ವರ್ಗದಂಥ ಮನೆಯೂ ನನಗೆ ನರಕಸಮಾನ.

'ಕ್ಷಮಿಸಿ ದೊಡ್ಡ ಒಡೆಯರೇ.' ನಾನು ಅಳುತ್ತಲೇ, ಆದರೆ, ನಿರ್ಧಾರದ ಧ್ವನಿಯಲ್ಲೇ ಹೇಳಿದ್ದೆ, 'ಕಅಬಾದ ಎದುರು. ಅಫೀರಾ ತನ್ನ ದಾಸಿ ಅಲ್ಲವೇ ಅಲ್ಲವೆಂದು ನನ್ನ ಪುಟ್ಟ ಒಡತಿ ಪ್ರಮಾಣ ಮಾಡಿದರೆ ಮಾತ್ರ ನನ್ನಬ್ಬನ ಮಾತಿಗೆ ಸಮ್ಮತಿಸುವೆ' ಎಂದಿದ್ದೆ. ನನ್ನ ಮಾತು, ಒಡತಿಯ ಪುಟ್ಟ ಎದೆಯನ್ನು ಹಿಂಡಿ ಹಿಪ್ಪೆ ಮಾಡಿದ್ದಿರಬಹುದು. ಆದರೂ, ಅವರು ಏನನ್ನೂ ನಿರ್ಧರಿಸಲಾಗದೆ ಕಲ್ಲಿನಂತೆ ನಿಂತುಬಿಟ್ಟಿದ್ದರು.

'ಹಾಗಾದರೆ, ನಿನಗೆ ಬಳುವಳಿಯಾಗಿ ಬಂದಿರುವ ಸೊತ್ತುಗಳನ್ನೇನು ನಾವೇನು ಮಾಡಬೇಕು?' ಅಬೂಸುಫ್ಯಾನರು ಸಿಟ್ಟಿನಿಂದಲೇ ಪಶ್ನಿಸಿದ್ದರು.

'ಅವುಗಳನ್ನು ಮಾರಾಟ ಮಾಡಿರಿ!' ಪಕ್ಕದಲ್ಲೇ ನಿಂತಿದ್ದ ನನ್ನನ್ನು ಇದುವರೆಗೂ ಸಾಕಿದ್ದ ಉಮ್ಮ ಅಕಿಯಾ ಹೇಳಿದ್ದರು, 'ಮಾರಾಟದಿಂದ ಬಂದ ಹಣದಿಂದ, ನನ್ನ ಮಗಳನ್ನು ಅಂದು ಬದುಕಿಸಿದ್ದ ಝಮ್ ಝಮ್ ಬಾವಿಯ ಮೆಟ್ಟಲುಗಳಿಗೆ ಹೊಸ ಕಲ್ಲು ಚಪ್ಪಡಿಗಳನ್ನು ಹೊದಿಸಿರಿ!'

ಬಲುದೊಡ್ಡ ಸಂಕಟವೊಂದರಿಂದ ನನ್ನನ್ನು ಪಾರು ಮಾಡಿದ ಉಮ್ಮನನ್ನು ಕೃತಜ್ಞತೆಯಿಂದ ದಿಟ್ಟಿಸಿದ ನಾನು, ಅರೆಕ್ಷಣವೂ ಯೋಚಿಸದೆ ನನ್ನ ತೀರ್ಮಾನವನ್ನು ಹೇಳಿದ್ದೆ, 'ನನ್ನ ಉಮ್ಮ ಹೇಳಿದಂತೆಯೇ ಮಾಡಿರಿ.'





ಎಲ್ಲರೂ ಪರಸ್ಪರ ಮುಖ ಮುಖ ನೋಡಿಕೊಂಡರೇ ಹೊರತು ಯಾರೂ ಏನನ್ನೂ ಪ್ರತಿಕ್ರಿಯಿಸಿರಲಿಲ್ಲ.

'ನೀನಿನ್ನು ಮುಂದೆ ನಿನ್ನ ಹೆಸರನ್ನು ಬದಲಿಸಿಕೊಳ್ಳಬೇಕು ಅಫೀರಾ.' ಅಬೂಸುಫ್ಯಾನರು ನನ್ನನ್ನು ಗೊಂದಲಕ್ಕೆ ಸಿಲುಕಿಹಾಕುವ ಧ್ವನಿಯಲ್ಲೇ ಹೇಳತೊಡಗಿದ್ದರು. 'ನಮ್ಮ ಸಂಪ್ರದಾಯದಂತೆ ನಿನ್ನನ್ನು ಯಾರೂ ಇನ್ನು ಮುಂದೆ ಅಫೀರಾ ಬಿಂತಿ ಮುಅತ್ತಲ್ ಎಂದು ಗುರುತಿಸುವಂತಿಲ್ಲ. ನಿನ್ನ ಅಬ್ಬ ಮುಅತ್ತಲ್ ಅಲ್ಲ; ಪರ್ವೇಝ್. ಆದ್ದರಿಂದ, ನಿನ್ನನ್ನು ಇನ್ನು ಮುಂದೆ ಅಫೀರಾ ಬಿಂತಿ ಪರ್ವೇಝ್ ಎಂದೇ ಕರೆಯಬೇಕು.

'ಇಲ್ಲ! ಅದು ಸಾಧ್ಯವೇ ಇಲ್ಲ!!'

ಖಡಾಖಂಡಿತ ಸ್ವರದಲ್ಲೇ ಹೇಳಿದ್ದೆ, 'ನನ್ನನ್ನು ಮರಳಿನಾಳದಲ್ಲಿ ಜೀವಂತವಾಗಿ ಹೂಳಿದ್ದವರ ಹೆಸರಿನೊಂದಿಗೆ ನಾನೆಂದೂ ಗುರುತಿಸಿಕೊಳ್ಳಲಾರೆ. ಹಾಗೆಂದು ತಾವು ಹೇಳುತ್ತಿರುವ ಸಂಪ್ರದಾಯವನ್ನೂ ನಾನು ವಿರೋಧಿಸುವುದೂ ಇಲ್ಲ.

'ನಮ್ಮ ಸಂಪ್ರದಾಯವು ಅನುಮತಿಸಿದಂತೆ, ಇನ್ನು ಮುಂದೆ ಎಲ್ಲರೂ ನನ್ನನ್ನು ಉಮ್ಮು ಆಯಿಷಾ ಎಂದು ಗುರುತಿಸಿದರೆ ಸಾಕು.'

'ಉಮ್ಮಾ...!'

ಇಡೀ ಮಕ್ಕಾ ನಗರವೇ ನಡುಗುವಷ್ಟು ಗಟ್ಟಿಯಾಗಿ ನನ್ನ ಸಣ್ಣ ಒಡತಿ ಕೂಗಿದಾಗ, ಕೋಣೆಯಲ್ಲಿದ್ದವರೆಲ್ಲ ದಿಗ್ಭ್ರಾಂತರರಾಗಿದ್ದರು!

ಧ್ವನಿ ಕೇಳಿಸಿದ ದಿಕ್ಕಿಗೆ ಎಲ್ಲರ ಕಣ್ಣುಗಳೂ ತಿರುಗುತ್ತಿರುವಂತೆಯೇ, ನನ್ನತ್ತ ಬಾಣದಂತೆ ನುಗ್ಗಿ ಬಂದು ನನ್ನೆದೆಗೆ ತಲೆಯೊರಗಿಸಿದ ಪ್ರವಾದಿಪತ್ನಿ, ಪುಟ್ಟ ಮಗುವಿನಂತೆ ನನ್ನನ್ನು ತಬ್ಬಿಕೊಂಡು ಮತ್ತೊಮ್ಮೆ ಕೂಗಿದ್ದರು.

'ಉಮ್ಮಾ....!'

*          *          *

*ನನಗೂ ತಬ್ಬಿಕೊಳ್ಳಬೇಕೆನ್ನಿಸಿತ್ತು.*

*ಉಮ್ಮಾ..!' ಎನ್ನುತ್ತಾ ಅಫೀರಾಳನ್ನು ನನಗೂ ತಬ್ಬಿಕೊಳ್ಳಬೇಕೆನ್ನಿಸಿತ್ತು.*

ಹುಟ್ಟಿಸಿದ ಅಬ್ಬನಾದರೇನಾಯಿತು? ಸಂಪತ್ತಿನ ಬಲದಿಂದ ಮಗಳ ಕ್ಷಮೆಯನ್ನು ಖರೀದಿಸಲು ಯೋಚಿಸಿದ್ದ ಅ ಕ್ರೂರಿ ಅಬ್ಬ. ಆದರೆ, ಅಬ್ಬನ ತಂತ್ರಕ್ಕೆ ಬಲಿಯಾಗದ ನಾಟ್ಯಮಂದಿರದ ಹಾಡುಗಾರನ ಹೆಂಡತಿ, ಮತ್ತೆ ಮತ್ತೆ ಮುಟ್ಟಿ ನೋಡಿಕೊಳ್ಳುವಂತಹ ಶಿಕ್ಷೆಯನ್ನೇ ಅವನಿಗೆ ಕೊಟ್ಟಿದ್ದಳು!

ಪ್ರತಿಭಟನೆಯೆಂದರೆ ಇದಪ್ಪಾ..!' ಮನಸಾರೆ ಅಭಿನಂದಿಸಿದ್ದೆ.

'ಇನ್ನ್ಯಾರನ್ನೂ ಅಭಿನಂದಿಸುವುದಿಲ್ಲವೇ ಗೆಳೆಯಾ?' ಅರ್ಷದ್ ಪ್ರಶ್ನಿಸಿದ್ದ.

'ಯಾವ ಕಾರಣಕ್ಕಾಗಿ ಅಭಿನಂದಿಸಬೇಕು ಹೇಳು?' ನಾನು ವ್ಯಂಗ್ಯವಾಗಿಯೇ ಪ್ರಶ್ನಿಸಿದ್ದೆ.

'ಕಾರಣ!' ಅರ್ಷದ್ ಜೋರಾಗಿ ನಕ್ಕಿದ್ದ.

'ನಗುವಂತಹ ಯಾವ ಮಾತು ಆಡಿದೆ ನಾನು? ಅಫೀರಾ ಒಬ್ಬಳನ್ನು ಹೊರತುಪಡಿಸಿದರೆ, ಮಿಕ್ಕವರೆಲ್ಲರೂ ತಮ್ಮ ಕತೆಗಳೆಂಬ ಭ್ರಮೆಗಳಲ್ಲಿ ನೆನಪಿಸಿಕೊಂಡು ಹೇಳುತ್ತಿದ್ದದ್ದು, ತಮ್ಮ ತಮ್ಮ ಗಂಡಂದಿರ ಮದುವೆ ಕತೆಗಳನ್ನಲ್ಲವೆ? ವೈಯುಕ್ತಿಕವಾದ ಯಾವ ಬದುಕೂ ಅವರಿಗಿದ್ದಿರಲಿಲ್ಲವೆ?' ಎಂದು ಪ್ರಶ್ನಿಸಿದ್ದೆ.

'ಯಾಕಿದ್ದಿರಬಹುದು ಹೇಳು?' ಉತ್ತರಿಸುವ ಬದಲಾಗಿ ಅವನೇ ಮತ್ತೊಂದು ಪ್ರಶ್ನೆ ಎಸೆದಿದ್ದ.

'ಯಾಕಿದ್ದಿರಬಹುದು ಎಂದರೇ..!, ನಾನೇನು ಹೇಳಲಿ? ಅವರನ್ನು ಕಾಡುತ್ತಿದ್ದ ನೆನಪುಗಳು ಅವುಗಳು ಮಾತ್ರವೇನೋ..' ಎಂದೆ.

'ಅದಷ್ಟೇ ನೆನಪುಗಳು ಅವರನ್ನು ಯಾಕೆ ಕಾಡಿದ್ದಿರಬಹುದು?'

'ಇದೊಳ್ಳೆ ಪ್ರಶ್ನೆಯಾಯಿತಲ್ಲ ನಿನ್ನದು..?' ನಾನು ಸಿಡಿಮಿಡಿಗೊಂಡಿದ್ದೆ.

'ಸಿಟ್ಟಿಗೇಳಬೇಡ ಗೆಳೆಯಾ, ಅದು ನನ್ನ ಪ್ರಶ್ನೆಯಲ್ಲ; ನಿನ್ನದೇ ಪ್ರಶ್ನೆಗಳು. ಕಳೆದ ಎರಡು ಮೂರು ವರ್ಷಗಳಿಂದಲೂ ನಿನ್ನನ್ನು ನೀನೇ ಕೇಳಿಕೊಳ್ಳುತ್ತಿದ್ದ ಪ್ರಶ್ನೆಗಳು ಅವು. ಇಪ್ಪತ್ತೊಂದನೆಯ ಶತಮಾನದಲ್ಲಿ ಕುಳಿತಿರುವ ನೀನು, ಏಳನೆಯ ಶತಮಾನದ ಗಂಡುಗಳೂ ನಿನ್ನಂತೆಯೇ ಇರಬೇಕು ಎಂದು ಬಯಸುತ್ತಿರುವೆ. ಇದು ನಿನ್ನೊಬ್ಬನ ತಪ್ಪಲ್ಲ. ನಿನ್ನ ಕಾಲದ ಎಲ್ಲ ಗಂಡಸರ ಬಯಕೆಗಳೂ ಇದುವೆ.

'ಸ್ವಲ್ಪ ಯೋಚಿಸು ಗೆಳೆಯಾ. ನಿನ್ನ ಕಾಲದಿಂದ ಹತ್ತು ಹದಿನೈದು ಶತಮಾನಗಳ ಹಿಂದಕ್ಕೆ ಹೋಗಿ, ಆ ಕಾಲದ ಅರೇಬಿಯಾದ ವಾಸ್ತವವನ್ನು ಅರಿತುಕೊಳ್ಳಲು ಪ್ರಯತ್ನಿಸು. ಗಂಡನನ್ನು ದುರುಗುಟ್ಟಿ ನೋಡಿದರೇನೆ, ತಾನೆಲ್ಲಿ ಮನೆಯಿಂದ ಹೊರದಬ್ಬಲ್ಪಡುವೆನೋ ಎಂಬ ಆತಂಕದಿಂದಲೇ ಉಸಿರಾಡುತ್ತಿದ್ದ ದಿನಗಳವು. ಹಾಗೆ ಗಂಡನಿಂದ ತ್ಯಜಿಸಲ್ಪಡುವ ಹೆಣ್ಣು, ಮರುದಿನ ಮುಂಜಾನೆಯ ಒಂದು ತುಂಡು





ರೊಟ್ಟಿಗೂ ಬೇರೆಯವರ ಮನೆಯೆದುರು ಕೈ ಚಾಚಬೇಕಾಗಿತ್ತು. ಸ್ವಂತ ಗಳಿಕೆಯಿಲ್ಲದ ಯಾವಳೇ ಹೆಣ್ಣು, ಅದು ಹುಟ್ಟಿಸಿದ ಅಬ್ಬನಿರಲಿ, ಒಡಹುಟ್ಟಿದ ಸೋದರರಿರಲಿ, ಹತ್ತಿರದ ಬಂಧುಗಳೇ ಆಗಿರಲಿ, ಒಟ್ಟಿನಲ್ಲಿ ಗಂಡಸರ ಅಧೀನದಲ್ಲಿ, ಗಂಡಸರ ಇಷ್ಟದಂತೆಯೇ ಬದುಕಬೇಕಾಗಿತ್ತು. ಸುಡುವ ಮರಳಿನಾಳದಲ್ಲಿ ಹೆಣ್ಣು ಮಕ್ಕಳನ್ನು ಹೂತುಬಿಡುತ್ತಿದ್ದ ಕ್ರೂರಿ ಗಂಡಸರ ಕಾಲ ಅದು ಎಂಬುದನ್ನು ಮರೆಯಬೇಡ. ನಿನ್ನ ಯೋಚನೆಗಳೆಲ್ಲವೂ ಗಂಡಸರದ್ದು. ಹೋಗಲಿ ಬಿಡು. ಅದು ನಿನ್ನ ತಪ್ಪಲ್ಲ; ಯಾಕೆಂದರೆ ನೀನೂ ಒಬ್ಬ ಗಂಡಸು.

'ಆ ಹೆಣ್ಣುಗಳೆಲ್ಲ ಬಾಲ್ಯದಲ್ಲಿ ಅವರ ಅಬ್ಬಂದಿರ ಹೊಸ ಹೊಸ ಮದುವೆಗಳಲ್ಲಿ ಕೈತಟ್ಟಿ ಹಾಡಿ ಕುಣಿದಿದ್ದರಿಂದ, ಬಗೆ ಬಗೆಯ ಮದುವೆಯೂಟಗಳನ್ನು ಹೊಟ್ಟೆ ತುಂಬಾ ಉಂಡು ತೇಗಿದ್ದರಿಂದ, ಮುಂದೆ ತಮಗೂ ಮದುವೆಯಾದ ಬಳಿಕ ತಮ್ಮ ಗಂಡಂದಿರ ಮರುಮದುವೆಯಾಟಗಳನ್ನು ತೀರಾ ಸಹಜವಾಗಿಯೇ ಸ್ವೀಕರಿಸಿದ್ದಿರ ಬಹುದು ಎಂದು ನೀನು ತರ್ಕಿಸಿಕೊಂಡಿದ್ದೆ. ಅಥವಾ, ಆ ಎಲ್ಲ ಮದುವೆಗಳೂ ಅಲ್ಲಾಹುವಿನ ಆದೇಶದಂತೆಯೇ ನಡೆದಿದ್ದವು ಎಂದೇ ನೀನು ನಂಬಿದ್ದೆ. ಅಲ್ವೆ?'

'ಅಂ! ಎಲ್ಲದಕ್ಕೂ ಕಾರಣನು ಅಲ್ಲಾಹು ಒಬ್ಬನೇ ಎಂದು ನಂಬಿರುವುದು ನನ್ನ ತಪ್ಪು ಹೇಗಾಗುತ್ತದೆ? ನಾನು ಓದಿರುವ ಎಲ್ಲ ಧಾರ್ಮಿಕ ಗ್ರಂಥಗಳಲ್ಲೂ ಈ ನಂಬಿಕೆಯನ್ನು ಸಮರ್ಥಿಸುವ ಮಾತುಗಳೇ ಇದ್ದವಲ್ಲಾ? ನಾನೇನು ನನ್ನ ಸ್ವಂತ ಅಭಿಪ್ರಾಯಗಳನ್ನು ಹೇಳುತ್ತಿದ್ದೇನೆಯೆ? ಹಾಗಾದರೆ, ಗಾರೆಮಣ್ಣಿನಿಂದ ಸೃಷ್ಟಿಸಿ ನಮಗೆಲ್ಲ ಮಾತು ಕಲಿಸಿದ ಅಲ್ಲಾಹು, ಸೂರ್ಯ ಮತ್ತು ಚಂದ್ರನನ್ನು ನಿರ್ದಿಷ್ಟ ಸೂತ್ರಕ್ಕೆ ಬಂಧಿಸಿಟ್ಟಿರುವುದು ನಿಜವಲ್ಲವೆ? ಆಕಾಶವನ್ನು ಎತ್ತರಕ್ಕೇರಿಸಿ ಸಮತೋಲನವನ್ನು ಅವನು ಸ್ಥಾಪಿಸಿಲ್ಲವೆ? ಮನುಷ್ಯರಿಗಾಗಿ ಭೂಮಿಯನ್ನೂ ಹಾಸಿಲ್ಲವೆ?, ಅವುಗಳಲ್ಲಿ ಎರಡು ಝರಿಗಳನ್ನು ಹರಿಯುವಂತೆ ಆದೇಶಿಸಿದ್ದೂ ಸುಳ್ಳೆ? ಬೆಳೆದ ಕಾಯಿಗಳನ್ನು ಹಾಗೂ ಕವಚವಿರುವ ಖರ್ಜೂರಗಳನ್ನು ಹಣ್ಣಾಗಿಸಿ. ಹೂವುಗಳಿಗೆ ಪರಿಮಳ ತುಂಬಿದ್ದೂ ಕಟ್ಟುಕತೆಯೇ?

'ಮುಂದೊಂದು ದಿನ ಅಲ್ಲಾಹುವಿನ ಆದೇಶದಂತೆ, ಇಸ್ರಾಫೀಲ್ ಎಂಬ ದೂತನು ಸೂರ್ ಎಂಬ ಕಹಳೆ ಊದಿದಾಗ, ಸೂರ್ಯ ಚಂದ್ರರು ಒಂದಾಗಿ, ಕೋಟಿ ಕೋಟಿ ನಕ್ಷತ್ರಗಳು ಪರಸ್ಪರ ಡಿಕ್ಕಿ ಹೊಡೆದು, ಸಮುದ್ರಗಳ ಆಳದಲ್ಲಿ ಜ್ವಾಲಾಮುಖಿಗಳು ಸಿಡಿದು, ಬೆಟ್ಟಗುಡ್ಡಗಳೆಲ್ಲ ಚಿಮ್ಮಿದ ಮೋಡಗಳಂತೆ ಆಕಾಶದಲ್ಲಿ ತೇಲಾಡಿ, ನದಿಗಳಲ್ಲಿ ಅವಿಶ್ವಾಸಿಗಳ ಕೆಂಪು ನೆತ್ತರು ಕಾಲುವೆಗಳಾಗಿ ಹರಿಯಲಿದೆ ಎಂಬಿತ್ಯಾದಿ ಮಾತುಗಳನ್ನೆಲ್ಲ ಹಸಿಸುಳ್ಳುಗಳೆಂದು ತಿರಸ್ಕರಿಸಬೇಕೆ? ಇವೆಲ್ಲವೂ ನಡೆದ ಬಳಿಕ, ಭಾಗ್ಯವಂತರನ್ನು ಬಲಗುಂಪಿನಲ್ಲೂ, ಭಾಗ್ಯಹೀನರನ್ನು ಎಡಗುಂಪಿನಲ್ಲೂ

*ನಿಲ್ಲಿಸಿ, ಯಾವುದೇ ಗುಂಪಿಗೆ ಸೇರದಿರುವವರನ್ನು ನೇರವಾಗಿ ಸ್ವರ್ಗಕ್ಕೆ ಅಲ್ಲಾಹು ಸ್ವಾಗತಿಸಲಿದ್ದಾನೆ ಎಂಬ ಮಾತುಗಳೂ ಸುಳ್ಳೆ?*

*'ಅವೆಲ್ಲ ಹೋಗಲಿ; ಈಗ ನೀನೇ ಹೇಳು. ನನಗೆ ಕಾಣಿಸಿದ್ದವರಲ್ಲಿ ಒಬ್ಬರಾದರೂ ತಮ್ಮ ಗಂಡಂದಿರು ಒಬ್ಬರ ಬಳಿಕ ಇನ್ನೊಬ್ಬರನ್ನು ಮದುವೆಯಾಗುತ್ತಿರುವಾಗಲೂ ಸಣ್ಣದೊಂದು ವಿರೋಧವನ್ನಾದರೂ ಪ್ರಕಟಿಸಿದ್ದಿದೆಯೆ? ಎಲ್ಲವನ್ನೂ ಅಲ್ಲಾಹುವಿನ ಆಟವೆಂಬ ವಿಶ್ವಾಸದಿಂದ, ಅನಿವಾರ್ಯವಾಗಿ ಬಾಯಿಮುಚ್ಚಿಕೊಂಡು ಕುಳಿತದ್ದು ನಿಜವಲ್ಲವೆ?'*

*'ಸಾಕು, ಸಾಕು. ನಾನು ಕಾಣಿಸಿದ್ದವರ ಸ್ವಗತಗಳನ್ನು ನೀನು ಉರುಹೊಡೆಯುತ್ತಿದ್ದಾಗಲೇ, ಈ ವಿದ್ಯೆಯಲ್ಲಿ ನೀನು ಬಹಳ ನಿಸ್ಸೀಮ ಎಂದು ಅರ್ಥಮಾಡಿಕೊಂಡಿರುವೆ. ಈಗ ನನ್ನ ಮಾತುಗಳನ್ನೂ ಸ್ವಲ್ಪ ಆಲಿಸು.' ಹಿತೋಪದೇಶದ ಸ್ವರದಲ್ಲಿ ಹೇಳತೊಡಗಿದ್ದ ಅರ್ಷದ್.*

*'ನಿನ್ನ ಮಾತಿನಲ್ಲಿರುವ ಅನಿವಾರ್ಯ ಎಂಬ ಒಂದು ಪದದಲ್ಲೇ, ನಿನ್ನೆಲ್ಲಾ ಪ್ರಶ್ನೆಗಳ ಉತ್ತರ ಅಡಗಿದೆ. ಅನಿವಾರ್ಯತೆಯೆಂಬುದು ಎಂದೂ ಅಂತಿಮಸತ್ಯವಲ್ಲ. ಕಣ್ಣೆದುರು ಕುಣಿಯುತ್ತಿರುವ ಅನಿರ್ವಾಯತೆಯನ್ನು ಸೋಲಿಸುವ ಶಕ್ತಿ, ತನ್ನೊಳಗೇ ಇದೆಯೆಂಬುದು ಹೆಣ್ಣಿಗೆ ಅರಿವಾದ ದಿನದಂದು, ಪ್ರತಿಯೊಂದು ಹೆಣ್ಣೂ ಅದನ್ನು ಪ್ರಶ್ನಿಸತೊಡಗುತ್ತಾಳೆ. ಬಹಿರಂಗವಾಗಿ ಹೇಳಲು ಅಂಜಿಕೆಯಾದರೆ, ಕನಿಷ್ಠ ತನ್ನ ಸ್ವಗತದಲ್ಲಾದರೂ ಪ್ರಶ್ನಿಸಿಕೊಳ್ಳುತ್ತಿರುತ್ತಾಳೆ. ನಿನಗೆ ನಾನು ಇದುವರೆಗೆ ಕಾಣಿಸಿದ್ದೆಲ್ಲವೂ ಅವರ ಸ್ವಗತಗಳನ್ನು ಮಾತ್ರ ಎಂಬುದನ್ನೂ ಮರೆತುಬಿಟ್ಟಿಯಾ?'*

*ಗಲಿಬಿಲಿಗೊಂಡ ನಾನು ಉತ್ತರಿಸುವ ಪದಗಳಿಗಾಗಿ ತಡಕಾಡತೊಡಗಿದ್ದೆ.*

*ಅಷ್ಟರಲ್ಲಿ ಅವನೇ ಹೇಳಿದ್ದ, 'ಹೂಂ..., ನಿನ್ನ ತಪ್ಪಲ್ಲ ಬಿಡು; ನೀನು ಆರಂಭದಲ್ಲೇ ಹೇಳಿದ್ದ, ಯಾವ ಕಾರಣಕ್ಕಾಗಿ ಎಂಬ ಪದಗಳನ್ನು ಕೇಳಿಸಿಕೊಂಡಾಗಲೇ ನಿಜವಾಗಿ ನೀನು ಏನು ಎಂಬುದನ್ನು ಗ್ರಹಿಸಿಕೊಂಡಿದ್ದೆ. ಎಲ್ಲ ಗಂಡಸರೂ ಯೋಚಿಸುವುದೂ ನಿನ್ನಂತೆಯೆ.*

*ನಡುಬೀದಿಯಲ್ಲಿ ನಿಲ್ಲಿಸಿ ಚಾಟಿಯಿಂದ ಹೊಡೆದಂತಾಗಿತ್ತು. ತುಟಿ ಬಿಗಿದುಕೊಂಡು ಮೌನದ ಮೊರೆಹೋದೆ..*

*'ಹೋಗಲಿ; ಬಿಡು. ಮುಂದೆ ಹೋಗೋಣವೆ?' ಅರ್ಷದ್ ಪ್ರಶ್ನಿಸಿದ್ದ.*





*ನಾನು ಉತ್ತರಿಸಲಿಲ್ಲ.*

*'ಮುಂದೆ ಹೋಗೋಣವೆ?' ಅವನು ಮತ್ತೊಮ್ಮೆ ಪ್ರಶ್ನಿಸಿದ್ದ.*

*'ಬೇಡ' ಎಂದೆ ಸಿಟ್ಟಿನಿಂದ.*

*'ಏನು! ಬೇಡವೆ? ಯಾಕೆ ಬೇಡ?' ಅರ್ಷದ್ ಅಚ್ಚರಿಯ ಧ್ವನಿಯಿಂದಲೇ ಪ್ರಶ್ನಿಸಿದ್ದ.*

*ಏನಾದರೊಂದು ಕಾರಣ ಹೇಳಬೇಕಾಗಿತ್ತು; ಹೇಳಿದೆ.*

*'ಬರೆಯುವುದೆಂದರೆ ಇನ್ನೊಬ್ಬರಿಗೆ ಹೇಳುವುದಕ್ಕಿಂತಲೂ ಹೆಚ್ಚಾಗಿ, ಅದು ನನ್ನನ್ನೇ ನನಗೆ ಕಾಣಿಸುವ ಒಂದು ಕನ್ನಡಿಯಾಗಬೇಕೆಂದು ನಂಬಿದವನು ನಾನು. ನನ್ನನ್ನು ನನಗೆ ಸಮರ್ಥವಾಗಿ ಕಾಣಿಸಲಾರದ ಕೃತಿಯೊಂದನ್ನು ಬರೆದು, ಓದುಗರನ್ನು ವಂಚಿಸಲಾರೆ. ನೀನು ಇದುವರೆಗೆ ಕಾಣಿಸಿದ ಸ್ವಗತಗಳ ಸತ್ಯಾಸತ್ಯತೆಗಳನ್ನು ಪರಿಶೀಲಿಸದೆ ಏನನ್ನೂ ಬರೆಯಲಾರೆ. ನನಗೆ ಯೋಚಿಸಲು ಸ್ವಲ್ಪ ಸಮಯ ಬೇಕು. ಈಗ ನನ್ನನ್ನು ನೇರವಾಗಿ ನನ್ನ ಮನೆಗೆ ಕರೆದುಕೊಂಡು ಹೋಗಿಬಿಟ್ಟುಬಿಡು.'*

*'ಕ್ಷಮೆಯಿರಲಿ ಗೆಳೆಯಾ. ನಾನು ಕಾಣಿಸಿದ್ದ ಸ್ವಗತಗಳನ್ನು ಬಳಸಿಕೊಂಡು ಕಾದಂಬರಿಯನ್ನು ಬರೆಯಬೇಕೇ ಬೇಡವೇ ಎಂಬುದನ್ನು ನಿರ್ಧರಿಸುವ ಹಕ್ಕು ನಿನಗಿದೆ; ಒಪ್ಪುವೆ. ಆದರೆ, ನಿನ್ನ ಬಳಿಗೆ ನನ್ನನ್ನು ಕಳುಹಿಸಿದವನು ನೀಡಿದ್ದ ಆದೇಶಗಳನ್ನು ಸಂಪೂರ್ಣವಾಗಿ ಪೂರೈಸದೆ ನಿನ್ನನ್ನು ಮರಳಿ ಮನೆಗೆ ತಲುಪಿಸುವ ಅಧಿಕಾರ ನನಗಿಲ್ಲ.'*

*'ಅಂದರೆ? ನಾವೀಗ ನನ್ನ ಮನೆಗೆ ಹೋಗುವುದಿಲ್ಲವೆ!'*

*'ಇಲ್ಲ ಗೆಳೆಯಾ, ಮುಂದೊಂದು ದಿನ ನಡೆಯಲಿರುವ ನಿನ್ನ ಅಂತಿಮದಿನದ ವಿಚಾರಣೆಯನ್ನು ಕಾಣಲು ನಾವೀಗ ಹೋಗುತ್ತಿದ್ದೇವೆ.' ಖಂಡಿತವಾದ ಧ್ವನಿಯಲ್ಲಿ ಹೇಳಿದ್ದ ಅರ್ಷದ್.*

*'ಏನು! ಏನು ಹೇಳುತ್ತಿರುವೆ ಅರ್ಷದ್! ನನ್ನ ಅಂತಿಮದಿನದ ವಿಚಾರಣೆಯನ್ನು ನಾನು ಮುಂದಾಗಿಯೇ ಕಾಣಲಿದ್ದೇನೆಯೆ?!'*

*ನಾವು ಹೊರಟೆವು.*

❐

**ಸಂಭವಿಸಬೇಕಾಗಿರುವುದು**
**ಸಂಭವಿಸಿದಾಗ...**

–೧–

ಇಲ್ಲಿ ನನ್ನೊಂದಿಗಿರುವ ಸುಮಾರು ಶತಕೋಟಿಸಹಸ್ರಲಕ್ಷಶತಕೋಟಿ ವಿಚಾರಣಾಧೀನರ ನೆತ್ತಿಯ ಮೇಲೆ ಸುಡುವ ಸೂರ್ಯನಿರಲಿಲ್ಲ. ತಂಪು ಚಂದ್ರನಿರಲಿಲ್ಲ. ಹೊಳೆಯುವ ನಕ್ಷತ್ರಗಳಿರಲಿಲ್ಲ. ಬೆಟ್ಟ, ಗುಡ್ಡ, ಕಾಡು, ನಾಡು, ನದಿ, ಸಾಗರಗಳು ಯಾವುದೂ ಇರಲಿಲ್ಲ. ಬಾಲ್ಯದಲ್ಲಿ ಜೋಗುಳ ಆಲಿಸುತ್ತ ಮಲಗಿದ್ದ ತೊಟ್ಟಿಲುಗಳಿರಲಿಲ್ಲ. ನಮ್ಮನ್ನು ತೂಗಿದ ತಾಯಂದಿರ ಕೈಬಳೆಗಳ ಕಿಣಿಕಿಣಿ ಕೇಳಿಸುತ್ತಿರಲಿಲ್ಲ. ಹೊಡೆದು, ಬಡಿದು, ಬುದ್ಧಿ ಹೇಳಿದ್ದ ತಂದೆ ಇರಲಿಲ್ಲ. ತಪ್ಪುಗಳನ್ನು ನುಂಗಿಕೊಂಡು ಬೆಂಬಲಿಸುತ್ತಿದ್ದ ಒಡಹುಟ್ಟಿದವರಿರಲಿಲ್ಲ. ಶಾಶ್ವತವಾಗಿ ತಮ್ಮದೇ ಅಂದುಕೊಂಡು, ಠಸೆ ಕಾಗದಗಳಲ್ಲಿ ಬರೆದು ನೋಂದಾಯಿಸಿದ್ದ ಮನೆಗಳಿರಲಿಲ್ಲ. ತೋಡಿಸಿದ ಬಾವಿಗಳಿರಲಿಲ್ಲ. ಕೊರೆಯಿಸಿದ ಬೋರ್‌ವೆಲ್‌ಗಳಿರಲಿಲ್ಲ. ಹಸಿರು ಹೊಲಗಳಿರಲಿಲ್ಲ. ಮರಕೋತಿಯಾಟವಾಡಿದ್ದ ಹುಳಿಮಾವಿನ ಮರಗಳಿರಲಿಲ್ಲ. ಧರ್ಮ ಓದಿಸಿದ್ದ ಮದರಸಗಳಿರಲಿಲ್ಲ, ಕರ್ಮ ಕಲಿಸಿದ್ದ ಶಾಲೆಗಳಿರಲಿಲ್ಲ. ಉದ್ಯೋಗ ಮಾಡಿದ್ದ ಕಚೇರಿಗಳಿರಲಿಲ್ಲ. ಎಳೆದುಕೊಂಡು ಹೋಗಿ ಜೈಲಿನಲ್ಲಿರಿಸಿದ್ದ ಪೊಲೀಸರಿರಲಿಲ್ಲ. ಕಲ್ಯಾಣ ಮಂಟಪಗಳಿರಲಿಲ್ಲ. ಸಂಸಾರ ನಡೆಸಿದ್ದ ಮಂಚಗಳಿರಲಿಲ್ಲ. ಎತ್ತಿ ಆಡಿಸಿದ್ದ ಮಕ್ಕಳಿರಲಿಲ್ಲ. ಆರೋಗ್ಯ ಕೆಡಿಸಿಕೊಂಡಿದ್ದ ಆಸ್ಪತ್ರೆಯೂ ಅಲ್ಲಿರಲಿಲ್ಲ.

ಸರದಿ ಕಾಯುತ್ತಿದ್ದವರಲ್ಲಿ ಎಳೆಯ ಮಕ್ಕಳಿದ್ದರು. ಬೆಳೆದ ಬಾಲ–ಬಾಲೆಯರಿದ್ದರು. ತೋಳೇರಿಸಿದ ಜವ್ವನಿಗರಿದ್ದರು. ಎದೆಬಿರಿದ ಜವ್ವನೆಯರಿದ್ದರು. ನಡು ಬಾಗಿದ ಗಂಡಸರಿದ್ದರು, ಹೆಂಗಸರಿದ್ದರು. ಹಣ್ಣು ಹಣ್ಣು ಮುದುಕರಿದ್ದರು, ಮುದುಕಿಯರಿದ್ದರು.

ನಾವೆಲ್ಲ ಮುಖಮಾಡಿ ನಿಂತಿದ್ದ ವೇದಿಕೆಯ ಎಡಬಲಗಳಲ್ಲಿ, ಮುಖಗಂಟಿಕ್ಕಿಕೊಂಡಿದ್ದ ಆರು ದೇವದೂತರು ಅರ್ಧಚಂದ್ರಾಕಾರವಾಗಿ ನಿಂತಿದ್ದರೆ, ಏಳನೆಯವನಾಗಿ ನಿಂತಿದ್ದ ನಾಯಕದೂತನ ಅರೆಬಿರಿದ ತುಟಿಗಳ ಸೆರೆಯಿಂದ ತುಂಟ ನಗು

ಇಣುಕುತ್ತಲೇ ಇತ್ತು. ನಮ್ಮೊಂದಿಗೆ ಭೂಮಿಗೆ ಬಂದದ್ದು ಮಾತ್ರವಲ್ಲ, ಭೂಬದುಕಿನುದ್ದಕ್ಕೂ ನಮ್ಮ ಎಡಬಲಗಳಲ್ಲಿ ಕಾವಲು ನಿಂತಿದ್ದು, ನಮ್ಮೊಂದಿಗೇ ಮರಳಿದ್ದ ಕೋಟಿಗಟ್ಟಲೆ ಕಾವಲುದೂತರುಗಳ ಬೆನ್ನುಗಳ ಮೇಲೆ ಕಡತಗಳ ಮೂಟೆಗಳಿದ್ದವು. ಪುಟ್ಟ ಮಕ್ಕಳ ಎಡಬಲಗಳಲ್ಲಿ ನಿಂತಿದ್ದ ಕಾವಲುದೂತರುಗಳ ಕೈಗಳಲ್ಲಿರುವ ಕಡತಗಳು ಹೂಚೆಂಡುಗಳಂತೆ ಹಗುರವಾಗಿ ಕಾಣಿಸಿದ್ದರೆ, ನನ್ನಂತಹ ಮುದಿಯರ ಎಡಬಲಗಳಲ್ಲಿರುವ ಕಾವಲುದೂತರುಗಳ ಬೆನ್ನು ಹೊರೆಯಾದ ಕಡತಗಳು, ಸುರುಳಿ ಸುತ್ತಿಕೊಂಡಿರುವ ಹೆಬ್ಬಾವುಗಳಂತೆ ಕಾಣಿಸುತ್ತಿದ್ದವು.

ಕಾವಲುದೂತರುಗಳ ಹಾಗೂ ವಿಚಾರಣಾಧೀನರ ಹೇಳಿಕೆಗಳಲ್ಲಿ ಬಹಳಷ್ಟು ವ್ಯತ್ಯಾಸಗಳು ಕಾಣಿಸಿದರೆ, ಅಂತಹ ಹೇಳಿಕೆಗಳನ್ನು ನಾಯಕದೂತನು ತನ್ನ ಸ್ವಂತ ಕಡತಗಳೊಂದಿಗೆ ತಾಳೆ ಹಾಕಿ ಪರೀಕ್ಷಿಸುತ್ತಿದ್ದನು. ಹೆಚ್ಚು ಅನುಮಾನ ಮೂಡಿದರೆ, ಸಂಬಂಧಿತ ಘಟನೆಗಳಲ್ಲಿ ಭಾಗಿಯಾಗಿದ್ದ ಸಾಕ್ಷಿಗಳನ್ನು ಕರೆಸುತ್ತಿದ್ದನು. ಹಾಗೆ ಬರುವ ಸಾಕ್ಷಿಗಳು, 'ಹೌದು' ಅಥವಾ 'ಅಲ್ಲ' ಎಂದಷ್ಟೇ ಚುಟುಕಾಗಿ ಸಾಕ್ಷ್ಯ ನುಡಿದು ಸರಿದು ಹೋಗುತ್ತಿದ್ದರು. ಭೂಮಿಯಲ್ಲಿ ನಮ್ಮನ್ನು ಅಡ್ಡದಾರಿಗೆ ಸೆಳೆಯಲು ಯತ್ನಿಸಿದ್ದ ಸೈತಾನರೂ ಕರೆದಾಗಲೆಲ್ಲ ಬಂದು ತಲೆತಗ್ಗಿಸಿ ನಿಲ್ಲುತ್ತಿದ್ದರು. ಭೂಲೋಕದ ಸಿನೆಮಾಗಳಲ್ಲಿ ಹೆಣ್ಣು ಪ್ರೇತಗಳನ್ನೇ ಕಂಡು ಅಭ್ಯಾಸವಾಗಿದ್ದ ನನಗೆ, ಸಾಕ್ಷಿ ಹೇಳಲು ಬರುತ್ತಿದ್ದ ಸೈತಾನರುಗಳಲ್ಲಿ ಒಬ್ಬಳೇ ಒಬ್ಬಳು ಹೆಣ್ಣು ಸೈತಾನ ಕಾಣಿಸದಿದ್ದಾಗ ನಿರಾಸೆಯೂ ಆಗಿತ್ತು. ಬುದ್ಧಿ ಬಲಿಯದ ಪುಟ್ಟ ಮಕ್ಕಳನ್ನು, ಬುದ್ಧಿಮಾಂದ್ಯರನ್ನು ಮತ್ತು ಕುರುಡರನ್ನು, ಪ್ರಾಥಮಿಕ ವಿಚಾರಣೆಯಿಂದ ಹೊರಗಿಡಲಾಗಿತ್ತು.

ಇದೊಂದು ಭಯಾನಕ ಪರಿಸರ.

ಯಾರ ಮುಖದಲ್ಲೂ ನಗುವಿರಲಿಲ್ಲ. ಪರಸ್ಪರ ಮುಖ ನೋಡಿಕೊಂಡು 'ಹಾಯ್' ಅನ್ನುತ್ತಿರಲಿಲ್ಲ. ಎಲ್ಲರ ಕಣ್ಣುಗಳಲ್ಲೂ ಭಯದ ಮೊಟ್ಟೆಗಳು. ಅದೆಷ್ಟು ವರ್ಷಗಳಿಂದ ಇಲ್ಲಿ ವಿಚಾರಣೆ ನಡೆಯುತ್ತಿತ್ತು ಎಂಬುದನ್ನಾಗಲೀ, ಅದೆಷ್ಟು ಕಾಲದಿಂದ ವಿಚಾರಣೆ ಎದುರಿಸಲೆಂದು ನಾವು ಸರದಿ ಸಾಲುಗಳಲ್ಲಿ ನಿಂತಿದ್ದೆವು ಎಂಬುದನ್ನಾಗಲೀ ಅಳೆಯಲಾಗುತ್ತಿರಲಿಲ್ಲ. ಸೂರ್ಯೋದಯಾಸ್ತಗಳಿರುವಲ್ಲಿ ತಾನೇ ಕಾಲದ ಲೆಕ್ಕ? ಅದೆಂದೋ ಒಂದು ಕ್ಷಣ, ಕೋಟ್ಯಂತರ ವರ್ಷಗಳ ಹಿಂದೆಯೂ ಇದ್ದೀತು; ವಿಚಾರಣೆ ನಡೆಸುತ್ತಿದ್ದವರ ನಾಯಕನಂತೆ ವರ್ತಿಸುತ್ತಿದ್ದವನು ನನ್ನತ್ತ ಕಡೆಗಣ್ಣು ಹಾಯಿಸಿದ್ದ; ಅಷ್ಟೆ. ಭೂಮಿಯ ಮೇಲೆ ನಾನಾಡಿದ್ದ ಮಾತುಗಳು, ನಡೆಸಿದ್ದ ಕೃತ್ಯಗಳೆಲ್ಲವೂ ತಟ್ಟನೆ ನೆನಪಾಗಿದ್ದವು.

ಸಾಕ್ಷ್ಯ ನುಡಿಯುವ ಮುನ್ನ, ಧರ್ಮಗ್ರಂಥಗಳನ್ನು ಕಟ್ಟಿದ ರೇಶ್ಮೆವಸ್ತ್ರದ ಗಂಟಿನ ಮೇಲೆ ಕೈಯಿರಿಸಿ, 'ಸತ್ಯವನ್ನೇ ಹೇಳುತ್ತೇನೆ. ಸತ್ಯವನ್ನಲ್ಲದೆ ಬೇರೇನನ್ನೂ ಹೇಳುವುದಿಲ್ಲ' ಎಂಬಿತ್ಯಾದಿ ಪ್ರಮಾಣ ಮಾಡಿ ಅಭ್ಯಾಸವಾಗಿದ್ದ ನನಗೆ,





ಆಸುಪಾಸುಗಳಲ್ಲಿ ಅಂಥದ್ದೇನೂ ಕಾಣಿಸದಿದ್ದಾಗಲೇ ತಲೆ ಕೆಟ್ಟಿತ್ತು. ಭೂಲೋಕದ ನ್ಯಾಯಾಧೀಶರುಗಳು, ಅಂತಹ ಗಂಟಿನೊಳಗೆ ಬೇರೇನನ್ನೋ ಅಡಗಿಸಿಟ್ಟಿರುವ ಸಾಧ್ಯತೆಗಳು ಕಡಿಮೆ ಎಂಬ ನಂಬಿಕೆಯಿಂದ ಹಲವು ಬಾರಿ ಪ್ರಮಾಣ ಮಾಡಿದ್ದುಂಟು. ಆದರೆ, ಇಲ್ಲಿ ಅಂತಹ ಯಾವುದೇ ಗಂಟುಗಳು ಕಾಣಿಸಿದ್ದಿರಲಿಲ್ಲ.

ಹಾಗೆ ನೋಡಿದರೆ, ಸುಳ್ಳು ಹೇಳಲು ಇಲ್ಲಿ ಯಾರ ಭಯವೂ ಇರಲಿಲ್ಲ. ಈ ಪರಿಸರವೇ ಹಾಗಿತ್ತು.

ಕಾವಲುದೂತರು ಓದುವ ಯಾವುದಾದರೊಂದು ಮಾಹಿತಿ ಅಪ್ಪಟ ಸುಳ್ಳೇ ಆಗಿದ್ದರೂ, 'ಅದು ಹಾಗಲ್ಲ, ನಿಜವಾಗಿ ನಡೆದದ್ದು ಹೀಗೆ' ಎಂದು ಹೇಳಲು ಕೊನೆಯಲ್ಲೊಮ್ಮೆ ನನ್ನಂತಹ ವಿಚಾರಣಾಧೀನನಿಗೆ ಅವಕಾಶ ಕೊಡುತ್ತಾರಾದರೂ, ಆತನ ವಾದಗಳಾವುವೂ ಕಡತಗಳಲ್ಲಿ ದಾಖಲಾಗುವ ಸಾಧ್ಯತೆಗಳಿದ್ದಿರಲಿಲ್ಲ. ಕಾವಲುದೂತರು ಬರೆದುಕೊಂಡು ಬಂದಿದ್ದ ಕಡತಗಳಲ್ಲಿನ ಮಾಹಿತಿಗಳನ್ನು ನಾಯಕದೂತನು ಯಾವುದೇ ಕಾರಣಕ್ಕೂ ಬದಲಾಯಿಸುತ್ತಿರಲಿಲ್ಲ. ಎಡ ಹಾಗೂ ಬಲ ಕಾವಲುದೂತರುಗಳು, ವಿಚಾರಣಾಧೀನನೊಬ್ಬನ ಬಗ್ಗೆ ನೀಡಿದ ಸಾಕ್ಷಿಗಳಲ್ಲಿ ಹೆಚ್ಚು ವ್ಯತ್ಯಾಸಗಳಿಲ್ಲವೆಂದು ನಾಯಕದೂತನಿಗೆ ಮನವರಿಕೆಯಾದರೆ, ಅವನನ್ನು ಪಕ್ಕದಲ್ಲೇ ಇದ್ದ ವಿಶಾಲವಾದ ಹಸಿರು ಬೆಟ್ಟದ ನೆರಳಿಗೆ ಕಳುಹಿಸುತ್ತಿದ್ದನು. ನಾಯಕದೂತನು ಅಂತಿಮವಾಗಿ ನೀಡಲಿರುವ ಅಂತಿಮ ವರದಿಗಳ ಆಧಾರದಲ್ಲಿ, ಮುಂದೊಂದು ದಿನ ಪ್ರತ್ಯಕ್ಷವಾಗಲಿರುವ ಅಲ್ಲಾಹು ತನ್ನ ಅಂತಿಮತೀರ್ಪು ನೀಡಲಿದ್ದನು.

**–೨–**

ಅಂತಿಮ ದಿನದ ವಿಚಾರಣೆಯನ್ನು ಆರಂಭಿಸುವ ಪೂರ್ವಭಾವಿ ವಿಧಿಗಳನ್ನು ಆಚರಿಸುವವನಂತೆ, ತನ್ನೆರಡೂ ಕೈಗಳನ್ನೆತ್ತಿದ ನಾಯಕದೂತನು ಕಂಚಿನ ಕಂಠದಿಂದ ಹೇಳತೊಡಗಿದ್ದನು.

'ಗಾರೆಮಣ್ಣಿನಿಂದ ಮನುಷ್ಯನನ್ನು ಸೃಷ್ಟಿಸಿದ ಅಲ್ಲಾಹುವೇ ಅವನಿಗೆ ಮಾತು ಗಳನ್ನೂ ಕಲಿಸಿದನು. ಸೂರ್ಯ ಮತ್ತು ಚಂದ್ರನನ್ನು ನಿರ್ದಿಷ್ಟ ಸೂತ್ರಕ್ಕೆ ಬಂಧಿಸಿದವನೇ ಮುತ್ತು ಹವಳಗಳಂತಿರುವ ಸಮುದ್ರಗಳನ್ನೂ ಒಂದಾಗಿಸಿದನು. ಆಕಾಶವನ್ನು ಎತ್ತರಕ್ಕೇರಿಸಿ ಸಮತೋಲನವನ್ನು ಸ್ಥಾಪಿಸಿದವನೇ ಮನುಷ್ಯರಿಗಾಗಿ ಭೂಮಿಯನ್ನೂ ಹಾಸಿದನು. ಅವುಗಳಲ್ಲಿ ಎರಡು ಝರಿಗಳನ್ನೂ ಹರಿಸಿದನು. ಬೆಳೆದ ಕಾಯಿಗಳನ್ನು ಹಾಗೂ ಕವಚವಿರುವ ಖರ್ಜೂರಗಳನ್ನು ಹಣ್ಣಾಗಿಸಿದನು. ಹೂವುಗಳಿಗೆ ಪರಿಮಳ ತುಂಬಿದನು.

ಆ ಬಳಿಕ, ಎಲ್ಲವೂ ತನ್ನ ಅಣತಿಯಂತೆಯೇ ನಡೆಯಲಿ ಎಂದು ಆದೇಶಿಸಿ, ಕೆಲವು ಕಾಲ ಸುಮ್ಮನಿದ್ದನು. ಆ ಬಳಿಕ ಹೇಳಿದ್ದನು, 'ಸಂಭವಿಸಬೇಕಾಗಿರುವುದು ಸಂಭವಿಸಲಿ.

'ಆಗ, ಭೂಮಿಯು ತೀವ್ರ ಕಂಪನದಿಂದ ತತ್ತರಿಸಿತ್ತು. ಆಗ, ನೀವೆಲ್ಲ ಮೂರು ಗುಂಪುಗಳಾಗಿದ್ದಿರಿ.

ಭಾಗ್ಯವಂತರು ಬಲ ಗುಂಪಿನಲ್ಲಿ.
ಭಾಗ್ಯಹೀನರು ಎಡಗುಂಪಿನಲ್ಲಿ.
ಯಾವುದೇ ಗುಂಪಿಗೆ ಸೇರದವರು ನೇರವಾಗಿ ಸ್ವರ್ಗದಲ್ಲಿ.

ಅಲ್ಲಿ, ಸ್ವರ್ಣಾಲಂಕೃತ ಪೀಠಗಳಿರುವುದು. ಪರಿಶುದ್ಧ ಪಾನೀಯವಿರುವುದು. ಅಲ್ಲಿ, ಬಗೆ ಬಗೆಯ ಸ್ವಾದಿಷ್ಟ ಮಾಂಸದೂಟ ವಿರುವುದು. ಅಲ್ಲಿ, ಜೋಪಾನವಾಗಿ ಕಾಪಿಟ್ಟ ಮುತ್ತಿನಂತಿರುವ ಸ್ವರ್ಗಕನ್ನಿಕೆಯರು ಅವರ ಕಾಲೊತ್ತುವರು. ಇಲ್ಲಿ, ಪಾಪಿಗಳನ್ನು ಅವರ ಮುಖಭಾವಗಳಿಂದಲೇ ಗುರುತಿಸಲಾಗುವುದು. ಇಲ್ಲಿ, ಪಾಪಿಗಳನ್ನು ಕುದಿವ ನೀರಿನಲ್ಲಿ ಮುಳುಗಿಸಿ ತೀವ್ರ ವಿಚಾರಣೆಗೆ ಗುರಿಪಡಿಸಲಾಗುವುದು. ಇಲ್ಲಿ, ಪಾಪಿಗಳಿಗೆ ತಿನ್ನಲು ಝುಕ್ಕೂಮ್ ಮರದ ತೊಗಟೆಗಳನ್ನು ಮಾತ್ರ ನೀಡಲಾಗುವುದು. ಇಲ್ಲಿ, ಕೆಂಡದ ರಾಶಿಯ ಮೇಲೆ ಅವರನ್ನು ಓಡಿಸುತ್ತಿರುವಾಗ ತಡೆಯುವವರು ಯಾರೂ ಇರುವುದಿಲ್ಲ.'

ಸ್ತೋತ್ರವನ್ನು ಪಠಿಸುವವನಂತೆ ಒಂದೇ ಸವನೆ ಹೇಳುತ್ತಿದ್ದ ನಾಯಕದೂತನು ಮಾತು ನಿಲ್ಲಿಸಿ, ನನ್ನ ಪಕ್ಕದ ಸರದಿ ಸಾಲಲ್ಲಿ ನಿಂತಿದ್ದ, ಹೆಚ್ಚು ಕಮ್ಮಿ ನನ್ನಷ್ಟೇ ವಯಸ್ಸಾಗಿರಬಹುದಾದ ಹಿರಿಯರೊಬ್ಬರ ಕಾವಲುದೂತನತ್ತ ಕೈ ಚಾಚಿ ಸನ್ನೆ ಮಾಡಿದನು. ನಾಯಕದೂತನ ಆದೇಶವನ್ನು ಪಾಲಿಸುವವನಂತೆ, ಆ ಕಾವಲು ದೂತನು ತಾನು ಕರೆದುಕೊಂಡು ಬಂದಿದ್ದ ಹಿರಿಯರ ಬಗ್ಗೆ, ಬಹಳ ಆದರಾಭಿಮಾನಗಳಿಂದಲೇ ತನ್ನ ಬಳಿ ಇದ್ದ ಕಡತದಾಖಲೆಗಳನ್ನು ಓದಲಾರಂಭಿಸಿದನು.

ಆ ಹಿರಿಯರ ಭೂಬದುಕಿನ ಎಲ್ಲ ಸಾಧನೆಗಳನ್ನೂ ಓದಿದ ಕಾವಲುದೂತನು, ಕೊನೆಯಲ್ಲಿ ತನ್ನ ಓದು ಮುಗಿಸುವವನಂತೆ, 'ಇವನು ಅಲ್ಲಾಹುವಿನಲ್ಲಿ ಸಂಪೂರ್ಣವಾಗಿ ವಿಶ್ವಾಸವಿರಿಸಿದ್ದನು. ಅಲ್ಲಾಹುವಿನ ಅಂತಿಮಪ್ರವಾದಿಯಲ್ಲಿ ವಿಶ್ವಾಸ ವಿರಿಸಿದ್ದನು. ಅಲ್ಲಾಹು ಇದುವರೆಗೆ ಭೂಮಿಗೆ ಇಳಿಸಿರುವ ಎಲ್ಲ ಪ್ರವಾದಿಗಳಲ್ಲೂ ವಿಶ್ವಾಸವಿರಿಸಿದ್ದನು. ಅಲ್ಲಾಹುವಿನ ಗ್ರಂಥದಲ್ಲಿ ವಿಶ್ವಾಸವಿರಿಸಿದ್ದನು. ಒಳಿತು ಕೆಡುಕುಗಳ ನಿರ್ಣಾಯಕನು ಅಲ್ಲಾಹು ಒಬ್ಬನೇ ಎಂಬುದಾಗಿ ಪ್ರಮಾಣವನ್ನೂ ಮಾಡಿದ್ದನು. ದಿನಕ್ಕೈದು ಬಾರಿಯಂತೆ ನಮಾಜುಗಳನ್ನು ನಿರ್ವಹಿಸಿದ್ದನು. ಹಜ್ ಯಾತ್ರೆಗೂ ಹೋಗಿದ್ದನು. ತನ್ನ ಆದಾಯದಲ್ಲಿ ನಿಗದಿತ ಪಾಲನ್ನು ದಾನವನ್ನಾಗಿಯೂ





ಹಂಚಿದ್ದನು. ಅಂತಿಮದಿನದಲ್ಲೂ ಇವನು ವಿಶ್ವಾಸವಿರಿಸಿದ್ದನು. ಆದ್ದರಿಂದ, ಇವನು ಖಂಡಿತವಾಗಿಯೂ ಸ್ವರ್ಗದ ಸುಖಗಳಿಗೆ ಅರ್ಹನಾಗುವನು' ಎಂದಿದ್ದನು.

ಆ ಹಿರಿಯರ ಧರ್ಮನಿಷ್ಠೆಯನ್ನು ಗಮನಿಸಿದ ನನಗೂ ಹಾಗೆಯೇ ಅನ್ನಿಸಿತ್ತು.

ಸ್ವರ್ಗಕ್ಕೆ ಆಯ್ಕೆಯಾದ ಆ ಹಿರಿಯತ್ತ ನಾನು ಅಭಿನಂದನೆಯ ನೋಟ ಬೀರಿದ್ದೆ. ಆದರೆ, ನಾಯಕದೂತನು ಹೇಳಿದ್ದು ಮಾತ್ರ ಕಾವಲು ದೂತನ ನಿರ್ಧಾರಕ್ಕೆ ವ್ಯತಿರಿಕ್ತವಾಗಿತ್ತು!

'ಅಯ್ಯೋ ದಡ್ಡಾ..' ಎಂಬಂತೆ ಕಾವಲುದೂತನನ್ನು ದಿಟ್ಟಿಸಿದ ನಾಯಕದೂತನು, 'ನಿನ್ನ ಅಭಿಪ್ರಾಯವನ್ನು ನಾನು ಒಪ್ಪಲಾರೆ. ಅವೆಲ್ಲವೂ ನರಕಕ್ಕೆ ಹೋಗುವುದರಿಂದ ತಪ್ಪಿಸಿಕೊಳ್ಳಲು ಸತ್ಯವಿಶ್ವಾಸಿಯೊಬ್ಬನು ಮಾಡಲೇಬೇಕಿರುವ ಕನಿಷ್ಠ ಧರ್ಮ ಕಾರ್ಯಗಳೇ ಹೊರತು, ಇವಿಷ್ಟರಿಂದಲೇ ಯಾವೊಬ್ಬನೂ ಸ್ವರ್ಗದ ಮೇಲೆ ಹಕ್ಕು ಸಾಧಿಸಲಾರನು. ಈ ಕಡ್ಡಾಯ ಧಾರ್ಮಿಕ ವಿಧಿಗಳನ್ನು ಹೊರತುಪಡಿಸಿ, ಬೇರೇನಾದರೂ ಜನೋಪಯೋಗಿ ಕೆಲಸವನ್ನು ಮಾಡಿದ್ದಿದೆಯೆ?'

ಕಾವಲುದೂತನಿಗೆ ಗಲಿಬಿಲಿಯಾಗಿದ್ದಿರಬೇಕು. ತನ್ನ ಕೈಯಲ್ಲಿದ್ದ ಕಡತಗಳ ಮೇಲೆ ಅವಸರವಸರವಾಗಿ ಕಣ್ಣಾಡಿಸುತ್ತಾ, 'ಇವನು ಇತರರಿಗೆ ಕೇಡು ಬಯಸಿದ್ದ ಒಂದು ಉದಾಹರಣೆಯೂ ಇಲ್ಲ ನಾಯಕರೇ, ಅದು ಸಾಲದೆ?' ಎಂದು ಪ್ರಶ್ನಿಸಿದ್ದ.

'ಇಲ್ಲ, ಅದೂ ಸಾಕಾಗುವುದಿಲ್ಲ.'

ತುಟಿಸಂದುಗಳಲ್ಲಿ ನಗುವಿನ ಮೊಗ್ಗೆ ಅರಳಿಸುತ್ತಲೇ ನಾಯಕದೂತನು ಹೇಳಿದ್ದ, 'ಇತರರಿಗೆ ಕೇಡು ಬಯಸದಿರುವುದನ್ನು ಮನುಷ್ಯನೊಬ್ಬನ ಸಾಧನೆಯೆಂದು ಪರಿಗಣಿಸಲಾಗುವುದಿಲ್ಲ. ಮನುಷ್ಯನೊಬ್ಬ ಇರಬೇಕಾಗಿರುವುದೇ ಹಾಗೆ. ಅಲ್ಲಾಹು ಮನುಷ್ಯನನ್ನು ಭೂಮಿಗೆ ಕಳುಹಿಸಿದ್ದೇ ಆ ಉದ್ದೇಶದಿಂದ. ಅದಿರಲಿ, ಇವನು ಇತರರಿಗೆ ಸಹಾಯ ಮಾಡಿದ್ದ ಒಂದೇ ಒಂದು ಉದಾಹರಣೆ ಇಲ್ಲವೆ?'

ಕಡತಗಳ ಮೂಲೆ ಮೂಲೆಗಳನ್ನು ಮತ್ತೊಮ್ಮೆ ಇಣುಕಿದ ಅವನ ಕಾವಲುದೂತನು ನಿರಾಸೆಯಿಂದ ಇಲ್ಲವೆನ್ನುವಂತೆ ತಲೆಯಾಡಿಸಿದ್ದ.

ಅಷ್ಟೊಂದು ನಿಷ್ಠೆಯಿಂದ ಧರ್ಮದ ಎಲ್ಲ ವಿಧಿಗಳನ್ನೂ ಚಾಚೂತಪ್ಪದೆ ಪಾಲಿಸಿದ್ದ ಆ ಹಿರಿಯರಿಗೂ ನಾಯಕದೂತನು ಸ್ವರ್ಗದ ಖಾತರಿಯನ್ನು ನೀಡದಿದ್ದಾಗ ನನಗೆ ನಿರಾಸೆಯಾಗಿತ್ತು. ಅಥವಾ, ಯಾರಿಗೆ ಸ್ವರ್ಗ ಯಾರಿಗೆ ನರಕ ಎಂಬುದನ್ನು ಅಲ್ಲಾಹು ಈಗಾಗಲೇ ತೀರ್ಮಾನಿಸಿದ್ದು, ಇಲ್ಲಿ ನಾಯಕದೂತನು ನಡೆಸುವ ವಿಚಾರಣಾ ಕಲಾಪಗಳೆಲ್ಲವೂ ಬರಿಯ ತೋರಿಕೆಗಾಗಿ ನಡೆಸುತ್ತಿರುವ ನಾಟಕಗಳಿರಬಹುದೇ ಎಂಬ ಸಣ್ಣ ಅನುಮಾನವೂ ಮೂಡಿತ್ತು.

ಎಡವಟ್ಟಾದದ್ದೇ ಅಲ್ಲಿ. ನನ್ನ ಯೋಚನೆಗಳು ನಾಯಕದೂತನಿಗೂ ತಿಳಿದು ಬಿಡುತ್ತವೆ ಎಂದು ನಾನು ಊಹಿಸಿದ್ದಿರಲಿಲ್ಲ!.

ಆದರೆ, ನಾಯಕದೂತ ಸಿಟ್ಟಾಗಿದ್ದಿರಲಿಲ್ಲ. 'ನಿನ್ನ ತರ್ಕ ತೀರಾ ಅಸಹಜವೇನೂ ಅಲ್ಲ.' ನಾಯಕದೂತನು ನನ್ನನ್ನು ನೋಡುತ್ತಾ ಹೇಳಿದ್ದ. 'ಆರಂಭದಲ್ಲೇ ನೀನು ಅನುಮಾನಿಸಿದ್ದು ಒಳ್ಳೆಯದಾಯಿತು. ಇಲ್ಲದೇ ಹೋಗಿದ್ದರೆ, ವಿಚಾರಣೆಗಳೆಲ್ಲ ಮುಗಿಯುವವರೆಗೂ ನಿನಗೆ ಮಾತ್ರವಲ್ಲ ಈ ನಡಾವಳಿಗಳನ್ನು ಗಮನಿಸುತ್ತಿರುವ ವರಿಗೂ ಈ ಅನುಮಾನ ಉಳಿದುಬಿಡುತ್ತಿತ್ತು. ಅಲ್ಲಾಹುವಿಗೆ ಎಲ್ಲವೂ ಮುಂದಾಗಿಯೇ ತಿಳಿದಿರುತ್ತದೆಂಬುದೇನೋ ನಿಜ. ಆದರೆ, ಸ್ವರ್ಗ–ನರಕಗಳ ವಿತರಣೆಯ ಅಂತಿಮ ತೀರ್ಪು ಘೋಷಣೆಯಾದ ಬಳಿಕ ಯಾರೊಬ್ಬರೂ, 'ನನಗೆ ಅನ್ಯಾಯವಾಗಿದೆ, ವಾದ ಮುಂದಿಡಲು ತನಗೆ ಅವಕಾಶವೇ ಸಿಗಲಿಲ್ಲ' ಎಂಬಿತ್ಯಾದಿಯಾಗಿ ಪ್ರತಿಭಟಿಸಬಾರದು ನೋಡು; ಅದಕ್ಕಾಗಿ ಪ್ರತಿಯೊಬ್ಬರ ಭೂಬದುಕಿನ ಎಲ್ಲ ಘಟನೆಗಳನ್ನೂ ಹಾಗೂ ಆ ಸಂದರ್ಭಗಳಲ್ಲಿ ಸಂಬಂಧಿಸಿದವರು ಪ್ರತಿಕ್ರಿಯಿಸಿದ್ದ ಎಲ್ಲ ವಿವರಗಳನ್ನೂ ಸಾಕ್ಷಿಗಳ ಸಹಿತ ಪ್ರತಿಯೊಬ್ಬರ ಎದುರು ಮತ್ತೊಮ್ಮೆ ಇಲ್ಲಿ ನಿರೂಪಿಸಲಾಗುತ್ತದೆ. ಅಗತ್ಯ ಬಿದ್ದರೆ ಕೆಲವು ಘಟನೆಗಳ ಮರುಸೃಷ್ಟಿಗಳನ್ನೂ ಮಾಡಲಾಗುತ್ತದೆ.

'ನಿನ್ನಂಥವರು ಒಂದಲ್ಲ ಒಂದು ದಿನ ಇಂತಹ ಅಧಿಕಪ್ರಸಂಗಿ ಪ್ರಶ್ನೆ ಕೇಳಬಹುದೆಂಬ ಮುಂದಾಲೋಚನೆ ಮಾಡಿದ್ದ ಅಲ್ಲಾಹು, ತಾನು ಭೂಮಿಗೆ ಇಳಿಸುತ್ತಿದ್ದ ಪ್ರತಿಯೊಂದು ಜೀವಿಯೊಂದಿಗೂ, ಇಬ್ಬಿಬ್ಬರು ಕಾವಲುದೂತರುಗಳನ್ನೂ ಕಳುಹಿಸಿದ್ದನು. ಪ್ರತಿಯೊಬ್ಬ ಮನುಷ್ಯನ ಬಲಭುಜದಲ್ಲಿ ನೆಲೆಸುವ ಕಾವಲುದೂತನು ಒಳ್ಳೆಯ ಕೃತ್ಯಗಳನ್ನೂ, ಎಡಭುಜದಲ್ಲಿ ನೆಲೆಸುವ ಕಾವಲುದೂತನು ಕೆಟ್ಟ ಕೃತ್ಯಗಳನ್ನೂ ಬರೆದಿಟ್ಟುಕೊಳ್ಳುವಂತೆ ಅಲ್ಲಾಹು ಆದೇಶಿಸಿದ್ದನು. ಅಷ್ಟು ಮಾತ್ರವಲ್ಲ; ಮನುಷ್ಯರಿಗಿಂತಲೂ ಹೆಚ್ಚು ಜಾಣನೂ, ಹೆಚ್ಚು ಬುದ್ಧಿವಂತನೂ ಆಗಿರುವ ಅಲ್ಲಾಹು, ಮನುಷ್ಯ ಲೋಕದ ಭಾವುಕತೆಗಳಿಗೆ ತಾನು ಕಳುಹಿಸಿದ ಕಾವಲುದೂತರು ಒಳಗಾಗುವುದನ್ನು ತಪ್ಪಿಸುವ ಸಲುವಾಗಿ, ಪ್ರತಿ ನೂರು ದಿನಗಳಿಗೊಮ್ಮೆ ಸರದಿಯಂತೆ, ಎಡಗಡೆಯ ಕಾವಲುದೂತನು ಒಳ್ಳೆಯ ಕೃತ್ಯಗಳನ್ನೂ, ಬಲಗಡೆಯ ಕಾವಲುದೂತನು ಕೆಟ್ಟ ಕೃತ್ಯಗಳನ್ನೂ ಬರೆದಿಟ್ಟುಕೊಳ್ಳುವಂತೆ ಆದೇಶಿಸಿದ್ದನು. ಅಲ್ಲಾಹು ಕಳುಹಿಸಿದ್ದ ಈ ಕಾವಲುದೂತರುಗಳು ನಿಮ್ಮೆಲ್ಲರ ಮಾತು ಮತ್ತು ಕೃತ್ಯಗಳನ್ನು ಬರೆದುಕೊಂಡು ಬಂದದ್ದೂ ಆಗಿದೆ. ಇನ್ನೇನಿದ್ದರೂ ವಿಚಾರಣೆ ಮತ್ತು ತೀರ್ಪು ಮಾತ್ರ.'

ನಾನು ಪ್ರತಿಕ್ರಿಯಿಸಲು ಯತ್ನಿಸಲಿಲ್ಲ.

'ಈಗ ನಿನ್ನ ವಿಚಾರಣೆಯನ್ನೇ ಆರಂಭಿಸೋಣ' ಎಂದ ನಾಯಕದೂತನು, ನನ್ನ ಬಲಕಾವಲುದೂತನತ್ತ ಬೊಟ್ಟು ಮಾಡಿ ಕಣ್ಣಲ್ಲೇ ಆದೇಶ ನೀಡಿದ.

ನನ್ನ ಎದೆ ಧಸಕ್ಕೆಂದಿತ್ತು.





ನಾಯಕದೂತನ ಆದೇಶವನ್ನೇ ನಿರೀಕ್ಷಿಸುತ್ತಿದ್ದವನಂತೆ, ತನ್ನ ಬೆನ್ನಮೇಲಿದ್ದ ಕಡತಗಳಿಂದ ಕೆಲವು ಪತ್ರಗಳನ್ನು ಆರಿಸಿಕೊಂಡ ಬಲಕಾವಲುದೂತನು ಅವುಗಳನ್ನು ಓದುವ ಮುನ್ನ ನಾಯಕದೂತನತ್ತ ಕಣ್ಣು ಹಾಯಿಸಿ, 'ಇವನು ಏನೇನು ಕಸರತ್ತು ಮಾಡಿದರೂ, ನರಕಕ್ಕೆ ಹೋಗುವುದರಿಂದ ಮಾತ್ರ ತಪ್ಪಿಸಿಕೊಳ್ಳಲಾರ' ಎಂದುಬಿಟ್ಟಿದ್ದ!

ಗರಬಡಿದವನಂತೆ ನಾಯಕದೂತ ಸ್ವಲ್ಪಹೊತ್ತು ಕಲ್ಲಿನಂತೆ ನಿಂತುಬಿಟ್ಟಿದ್ದ! ಬಳಿಕ ಸಾವರಿಸಿಕೊಂಡು, 'ಅಲ್ಲಾಹು ತನ್ನ ಅಂತಿಮತೀರ್ಪು ಪ್ರಕಟಿಸುವುದಕ್ಕಿಂತ ಮೊದಲೇ ಹೇಗೆ ಅದನ್ನು ಅಷ್ಟೊಂದು ಕರಾರುವಾಕ್ಕಾಗಿ ನಿರ್ಧರಿಸಿದೆ ನೀನು?' ಎಂದು ಪ್ರಶ್ನಿಸಿದ್ದ.

'ಹೌದು ನಾಯಕರೇ, ನನ್ನ ನಿರ್ಧಾರಕ್ಕೆ ಕಾರಣವಿದೆ.' ಬಹಳ ಭರವಸೆಯಿತ್ತು ಅವನ ಉತ್ತರದಲ್ಲಿ.

'ಏನು! ಕಾರಣವಿದೆಯೆ?'

'ಹೌದು, ಇದೆ ನಾಯಕರೇ. ಇವನು ಮಾತೆತ್ತಿದರೆ ಸುಳ್ಳು ಹೇಳುತ್ತಿದ್ದ.' ಖಚಿತತೆ ಇತ್ತು ಬಲಕಾವಲುದೂತನ ಧ್ವನಿಯಲ್ಲಿ.

'ಸುಳ್ಳು..!'

'ಹೌದು ಸುಳ್ಳು. ನೀರು ಕುಡಿದಷ್ಟೇ ಸಲೀಸಾಗಿ ಇವನು ಸುಳ್ಳು ಹೇಳುತ್ತಿದ್ದ.'

'ಅದೆಲ್ಲಿಂದ ಇವನು ಅಷ್ಟೊಂದು ಸಲೀಸಾಗಿ ಸುಳ್ಳು ಹೇಳುವುದನ್ನು ಕಲಿತನು?

'ಇವನನ್ನು ಹೆತ್ತ ಉಮ್ಮನಿಂದ.' ಅರೆಕ್ಷಣವೂ ಯೋಚಿಸದೆ ಉತ್ತರಿಸಿದ್ದ ಬಲಕಾವಲುದೂತ!

'ಏನೂ!? ಹೆತ್ತ ಉಮ್ಮನಿಂದ ಇವನು ಸುಳ್ಳು ಹೇಳುವುದನ್ನು ಕಲಿತನೆ?

'ಹೌದು ನಾಯಕರೇ. ಹಾಗೆಂದು ತನ್ನ ದಿನಚರಿ ಪುಸ್ತಕದಲ್ಲಿ ಇವನೇ ಬರೆದುಕೊಂಡಿದ್ದ.'

'ಯಾಕಂತೆ?'

ಕಾವಲುದೂತ ತನ್ನ ಕೈಗಳಲ್ಲಿ ಹಿಡಿದುಕೊಂಡಿದ್ದ ಕಾಗದಪತ್ರಗಳನ್ನು ಓದತೊಡಗಿದ.

'ಕರಾವಳಿ ಕರ್ನಾಟಕದ ಮುತ್ತುಪ್ಪಾಡಿ ಎಂಬಲ್ಲಿ ಬೀಡಿಕಟ್ಟಿಕೊಂಡು ಸಂಸಾರ ನಡೆಸುತ್ತಿದ್ದ ಅಬ್ಬಾಸ್ ಬ್ಯಾರಿ ಎಂಬವನ ಐದು ಮಕ್ಕಳಲ್ಲಿ ಇವನು ಎರಡನೆಯವನು. ಇವನನ್ನು ಹೆರುವಾಗ, ಇವನ ಉಮ್ಮ ಕುಲ್ಸೂಮಳಿಗೆ ಅಂಟಿಕೊಂಡಿದ್ದ ಉಬ್ಬಸ ಖಾಯಿಲೆಗೆ, ದಿನಕ್ಕೊಂದರಂತೆ ಹಸಿಮೊಟ್ಟೆ ತಿನ್ನುವಂತೆ ಸರಕಾರೀ ಆಸ್ಪತ್ರೆಯ ವೈದ್ಯನು ಸಲಹೆ ನೀಡಿದ್ದನು. ಆಣೆಗೆರಡೋ, ನಾಲ್ಕೋ ಮೊಟ್ಟೆ ಸಿಗುತ್ತಿದ್ದ ಕಾಲ ಅದು. ಪ್ರತಿ ಶನಿವಾರ ಸಂಜೆಯ ಹೊತ್ತಲ್ಲಿ ಬೀಡಿಮಜೂರಿ ಬಟವಾಡೆಯಾದಾಗ, ಇತರ ಜೀನಸು ಸಾಮಾನುಗಳ ಜೊತೆಗೆ, ಇವನಬ್ಬ ಆರು ಕೋಳಿಮೊಟ್ಟೆಗಳನ್ನು ಖರೀದಿಸಿ ಮನೆಗೆ ತರುತ್ತಿದ್ದನು.

ಹೀಗೆ, ವಾರಕ್ಕೊಮ್ಮೆ ತರುವ ಆರು ಕೋಳಿಮೊಟ್ಟೆಗಳನ್ನು ಇವನ ಉಮ್ಮ ದಿನಕ್ಕೊಂದರಂತೆ ವಾರವಿಡೀ ಸೇವಿಸುತ್ತಿದ್ದಳು.

'ಏನು! ಆರು ಮೊಟ್ಟೆಗಳನ್ನು ಏಳು ದಿನಗಳಲ್ಲಿ ಸೇವಿಸುತ್ತಿದ್ದಳೆ? ಅದು ಹೇಗೆ ಸಾಧ್ಯ?' ನಾಯಕದೂತ ಅಚ್ಚರಿ ಪ್ರಕ್ತಪಡಿಸಿದ್ದ.

'ಇವನ ಪ್ರಶ್ನೆಯೂ ಅದೇ ಆಗಿತ್ತು ನಾಯಕರೇ.' ಬಲಕಾವಲುದೂತ ಉತ್ಸಾಹ ದಿಂದಲೇ ತನ್ನ ಓದು ಮುಂದುವರಿಸಿದ್ದ, 'ಶಾಲೆಯಲ್ಲಿ ಮೂರನೇ ತರಗತಿಯಲ್ಲಿರು ವಾಗಲೇ, ವಾರದ ದಿನಗಳ ಕೂಡು–ಕಳಿ ಲೆಕ್ಕಾಚಾರಗಳಲ್ಲಿ ಇವನು ಬಹಳ ಪರಿಣಿತ ನಾಗಿದ್ದನು. ವಾರದಲ್ಲೊಮ್ಮೆ ಇವನ ಅಬ್ಬ ತರುವ ಆರು ಮೊಟ್ಟೆಗಳನ್ನು ಪ್ರತಿ ಮುಂಜಾನೆಯಲ್ಲಿ ದಿನಕ್ಕೊಂದರಂತೆ ವಾರವಿಡೀ ತಿನ್ನುತ್ತಿದ್ದ ಉಮ್ಮನ ಮೊಟ್ಟೆ ಲೆಕ್ಕಾಚಾರದ ಬಗ್ಗೆ ಇವನಿಗೆ ಅನುಮಾನವಿತ್ತು. ಹಸಿಮೊಟ್ಟೆಯನ್ನು ಒಮ್ಮೆ ಒಡೆದ ಬಳಿಕ, ಅದರಲ್ಲಿ ಅರೆವಾಸಿಯಷ್ಟನ್ನು ಮರುದಿನಕ್ಕೆ ಉಳಿಸಲು ಸಾಧ್ಯವಿಲ್ಲವೆಂಬುದನ್ನು, ಪ್ರಯೋಗವೊಂದರಿಂದ ಸ್ವತಃ ಕಂಡುಹಿಡಿದಿದ್ದನು.

'ಒಂದೋ, ಶಾಲೆಯಲ್ಲಿ ಅಪ್ಪಿಬಾಯಿ ಟೀಚರು ಕಲಿಸಿರುವ ವಾರಕ್ಕೆ ಏಳು ದಿನಗಳು ಎಂಬ ಪಾಠವು ಸುಳ್ಳಿರಬೇಕು, ಅಥವಾ ಆರು ಮೊಟ್ಟೆಗಳನ್ನು ದಿನಕ್ಕೊಂದರಂತೆ ಏಳು ದಿನಗಳ ಕಾಲ ತಿನ್ನುತ್ತೇನೆನ್ನುವ ತನ್ನ ಉಮ್ಮ ಸುಳ್ಳು ಹೇಳುತ್ತಿರಬೇಕು ಎಂಬುದು ಇವನ ತರ್ಕ ವಾಗಿತ್ತು. ಅಂತಿಮಸತ್ಯದಲ್ಲಿ ಎರಡು ಸತ್ಯಗಳು ಇರುವುದಿಲ್ಲವೆಂಬ ಕಠು ಸತ್ಯವನ್ನು, ಮದರಸದ ಗುರುಗಳು ಇವನಿಗೆ ಕಂಠಪಾಟ ಮಾಡಿಸಿದ್ದರು. ಈ ಎಲ್ಲ ಗೊಂದಲಗಳಿಂದ ಗೊಂದಲಗೊಳ್ಳುವ ಇವನು, ನೇರವಾಗಿ ಉಮ್ಮನೊಡನೆ ವಿಚಾರಿಸಲು ಇಷ್ಟವಾಗದೆ, ತಾನೇ ಸ್ವತಃ ಸುಳ್ಳುಪತ್ತೆ ಪರೀಕ್ಷೆ ಮಾಡಲು ನಿರ್ಧರಿಸಿದ್ದನು.

'ಒಂದು ಶನಿವಾರದಂದು ಅಬ್ಬ ತಂದಿದ್ದ ಆರು ಮೊಟ್ಟೆಗಳನ್ನು, ಇವನ ಉಮ್ಮ ಬೆತ್ತದ ಬುಟ್ಟಿಯಲ್ಲಿ ಹಾಸಿದ ಬಟ್ಟೆಯಲ್ಲಿ ಸುತ್ತಿಡುವುದನ್ನು ಗಮನಿಸಿದವನು, ಮೊದಲೇ ಸಂಗ್ರಹಿಸಿ ಇಟ್ಟಿದ್ದ ತೆಂಗಿನ ಚಿಪ್ಪೊಂದರಲ್ಲಿ ಆರು ಪುಟ್ಟ ಕಲ್ಲುಗಳನ್ನು ಎಣಿಸಿ ಇರಿಸಿದ್ದನು. ಮರುದಿನದಿಂದ ಪ್ರತಿ ಮುಂಜಾನೆ ಒಂದೊಂದೇ ಕಲ್ಲುಗಳನ್ನು ಎತ್ತಿ ಹೊರತೆಗೆದು ಅಂಗಳಕ್ಕೆ ಎಸೆದಿದ್ದನು. ಶುಕ್ರವಾರದ ಮುಂಜಾನೆ ಕೊನೆಯ ಕಲ್ಲೆಸದವನಿಗೆ, ವಾರದಲ್ಲಿ ಏಳು ದಿನಗಳು ಇರುವುದಂತೂ ಖಾತರಿಯಾಗಿತ್ತು. ಯಾಕೆಂದರೆ, ಶನಿವಾರದಂದು ಹೊರಗೆಸೆಯಲು ಚಿಪ್ಪಿನೊಳಗೆ ಕಲ್ಲೇ ಉಳಿದಿರಲಿಲ್ಲ.

'ಉಮ್ಮ ಸುಳ್ಳು ಹೇಳುತ್ತಿದ್ದಾಳೆ ಎಂಬುದಕ್ಕೆ ಬೇರೆ ಸಾಕ್ಷಿಯ ಅಗತ್ಯ ಕಾಣಿಸಲಿಲ್ಲ. ಆದರೆ, ಯಾಕೆ ಸುಳ್ಳು ಹೇಳುತ್ತಿದ್ದಾಳೆ ಎಂಬುದು ಮಾತ್ರ ಒಗಟಾಗಿತ್ತು. ಆಗ ಅವನಿಗೆ ನೆನಪಾದವಳು ಅವನಕ್ಕ ಫಾತಿಮಾ.

'ಕಲಿಯುವುದರಲ್ಲಿ ಇವನಂತೆಯೇ ಚುರುಕಾಗಿದ್ದ ಇವನಕ್ಕ ಫಾತಿಮಾ ಕೂಡಾ ಒಂದು, ಎರಡು, ಮೂರು ಮತ್ತು ನಾಲ್ಕನೆಯ ತರಗತಿಗಳಲ್ಲಿ ಕೇವಲ ಆರಾರು





ತಿಂಗಳು ಕುಳಿತು, ಡಬಲ್ ಪ್ರಮೋಷನ್ ಹೆಸರಲ್ಲಿ ಮುಂದಿನ ತರಗತಿಗಳಿಗೆ ಕುಪ್ಪಳಿಸಿ ದ್ದವಳು. ಆದರೆ, ಐದನೆ ತರಗತಿಯ ಬಳಿಕ ಅವಳಿಗೆ ಓದಲಾಗಲಿರಲಿಲ್ಲ. ಅದಕ್ಕೆ ಮೊದಲ ಕಾರಣ; ಮನೆಪಕ್ಕದಲ್ಲೇ ಇದ್ದ ಆ ಶಾಲೆಯಲ್ಲಿ ಆರನೆಯ ತರಗತಿ ಇರಲಿಲ್ಲ ಮತ್ತು ಎರಡನೆಯದಾಗಿ, ಅವಳ ಜಾತಿಯ ಹುಡುಗಿಯರು ಕನ್ನಡ ಶಾಲೆಗೆ ಹೋಗಲು ಅನುಮತಿಯಿರಲಿಲ್ಲ.

'ಉಮ್ಮನ ಸುಳ್ಳಿನ ಮೊಟ್ಟೆಕತೆಯನ್ನು ಅಕ್ಕ ಫಾತಿಮಾಳಿಗೆ ಹೇಳಿದಾಗ, ಅದೇನೂ ದೊಡ್ಡ ಸಂಗತಿಯೇ ಅಲ್ಲ ಎಂಬಂತೆ ಅವಳು ವರ್ತಿಸಿದ್ದಳು. ಸಿಟ್ಟಿಗೆದ್ದ ಇವನು ನೇರವಾಗಿ ತಂದೆಗೇ ದೂರು ಕೊಟ್ಟಿದ್ದನು. ಅಲ್ಲೂ ಇವನಿಗೆ ನಿರಾಸೆಯಾಗಿತ್ತು. 'ಸುಳ್ಳೇಕೆ ಹೇಳುತ್ತಿರುವೆ?' ಎಂದು ಉಮ್ಮನನ್ನು ಅಬ್ಬ ಗದರಿಸಿಯಾನು ಎಂದು ಕೊಂಡಿದ್ದವನಿಗೆ ಅಚ್ಚರಿಯಾಗುವಂತೆ, ಇವನಬ್ಬ ಮಗನ ಮುಖವನ್ನು ದಿಟ್ಟಿಸುತ್ತಾ ಮೂಕನಂತೆ ಕುಳಿತುಬಿಟ್ಟಿದ್ದನು. ಅಬ್ಬನ ಕಣ್ಣುಗಳು ಮಂಜಾಗುತ್ತಿರುವುದನ್ನು ಗಮನಿಸಿದ್ದ ಇವನಕ್ಕ, ಇವನನ್ನು ಅಂಗಳಕ್ಕೆ ಎಳೆದುಕೊಂಡು ಹೋಗಿ ಉಮ್ಮನ ಸುಳ್ಳಿನ ಮೊಟ್ಟೆ ಒಡೆದಿದ್ದಳು!

'ಮನೆ ಖರ್ಚು ಕಡಿಮೆ ಮಾಡುವ ಉದ್ದೇಶದಿಂದ ಶುಕ್ರವಾರದಂದು ಉಮ್ಮ ಮೊಟ್ಟೆ ಸೇವಿಸುತ್ತಿರಲಿಲ್ಲ. ಪ್ರತಿ ಶುಕ್ರವಾರ ಜುಮ್ಮಾ ನಮಾಜಿಗೆಂದು ಅಬ್ಬ ಮಸೀದಿಗೆ ಹೋದಕೂಡಲೇ ತಾನೂ ನಮಾಜು ಮಾಡುವ ಉಮ್ಮ, 'ಈ ಒಂದು ದಿನ ಮೊಟ್ಟೆ ತಿನ್ನದಿದ್ದರೂ, ಉಬ್ಬಸ ಹೆಚ್ಚು ಕಾಡದಂತೆ ಕಾಪಾಡು ಅಲ್ಲಾಹುವೇ..,' ಎಂದು ಎದೆಹಿಡಿದುಕೊಂಡು ವಿಶೇಷವಾಗಿ ದುವಾ ಮಾಡುತ್ತಿದ್ದಳು. ಏಳು ಮೊಟ್ಟೆಗಳನ್ನು ಖರೀದಿಸಿ ತರಲು ಅಬ್ಬ ಸಿದ್ಧರಿದ್ದರೂ, ಮೂರೇ ಸಾಕು ಎಂದು ಹಟ ಹಿಡಿಯುತ್ತಿದ್ದ ಉಮ್ಮ, ಅಂತಿಮವಾಗಿ ಆರು ಮೊಟ್ಟೆಗಳಿಗೆ ಒಪ್ಪಂದ ಮಾಡಿಕೊಂಡಿದ್ದಳು. ಆದರೂ, ಇವನು ವಿಚಾರಿಸುತ್ತಿದ್ದಾಗಲೆಲ್ಲ ಉಮ್ಮ ಹೇಳುತ್ತಿದ್ದದ್ದು, 'ಶುಕ್ರವಾರದಂದು ಅಲ್ಲಾಹುವೇ ನನಗೆ ಒಂದು ಮೊಟ್ಟೆ ತಂದು ಕೊಡುತ್ತಾನೆ' ಎಂಬ ಸುಳ್ಳನ್ನು. ಹೀಗೆ, ಇವನಿಗೆ ಸುಳ್ಳಿನ ಪಾಠ ಮಾಡುತ್ತಿದ್ದ ಉಮ್ಮ, ಅದಕ್ಕೆ ಸ್ವತಃ ಅಲ್ಲಾಹುವನ್ನೇ ಸಾಕ್ಷಿಯನ್ನಾಗಿರಿಸಿಕೊಳ್ಳುತ್ತಿದ್ದಳು.

–೩–

'ಸುಳ್ಳು ಹೇಳುವುದನ್ನು ಅಮ್ಮನಿಂದ ಕಲಿತೆ' ಎಂದು ದಿನಚರಿ ಪುಸ್ತಕದಲ್ಲಿ ಇವನು ಬರೆದುಕೊಂಡ ಸಾಲುಗಳೂ ಸುಳ್ಳಾಗಿದ್ದಿರಬಾರದೇಕೆ?' ನಾಯಕದೂತ ಹೊಸ ದೊಂದು ತರ್ಕವನ್ನು ಮುಂದಿಟ್ಟಿದ್ದ.

ನಾಯಕದೂತನ ಅನುಮಾನದಲ್ಲಿರುವ ಕಟುವಾಸ್ತವವನ್ನು ಗಮನಿಸಿದ ಬಲಕಾವಲುದೂತನು, ಅರೆಕ್ಷಣ ತಡವರಿಸಿದ್ದರೂ 'ಏಕಾಂತದಲ್ಲಿರುವಾಗ ಮನುಷ್ಯರು ಸಾಮಾನ್ಯವಾಗಿ ಸುಳ್ಳು ಹೇಳುವುದಿಲ್ಲ. ಅ ಹೊತ್ತುಗಳಲ್ಲಿ ಸುಳ್ಳು ಹೇಳುವುದಾದರೂ ಯಾರಲ್ಲಿ? ದಿನಚರಿಗಳನ್ನು ಏಕಾಂತದಲ್ಲಿ ಬರೆಯಲಾಗುವುದರಿಂದ, ಆ ಸಾಲುಗಳನ್ನು ನಿಜವಿರಬಹುದು ಎಂದು ನಂಬಬಹುದು' ಎಂಬ ಸಮಜಾಯಿಷಿ ನೀಡಿದ್ದ.

'ನಿನ್ನ ವಾದವನ್ನು ಒಪ್ಪಿದೆ. ಆದರೆ, ಅದೇ ವಾದವನ್ನು ಮುಂದುವರಿಸುವುದಾದರೆ, ಏಕಾಂತದಲ್ಲಿ ಸೃಷ್ಟಿಯಾಗುವ ಇವನ ಸಾಹಿತ್ಯದಲ್ಲೂ ಸುಳ್ಳುಗಳಿರಲು ಸಾಧ್ಯವಿಲ್ಲವಲ್ಲ? ನೀನೇ ಹೊತ್ತು ತಂದಿರುವ ಕಡತದಾಖಲೆಗಳಂತೆ ಇವನಿಗೆ ಉಗ್ಗು ಇದೆ. ಮಾತನಾಡಿರುವುದಕ್ಕಿಂತ ಇವನು ಬರೆದಿರುವುದೇ ಹೆಚ್ಚು. ಆದ್ದರಿಂದ ಈತನ ನಿಜ ಮತ್ತು ಸುಳ್ಳುಗಳನ್ನು ನ್ಯಾಯದ ತಕ್ಕಡಿಯಲ್ಲಿ ತೂಗಿದರೆ ನಿಜದ ತಟ್ಟೆಯೇ ಹೆಚ್ಚು ತೂಕ ತೋರಿಸುತ್ತದೆ. ಅಂತಿರುವಾಗ ಈತನೊಬ್ಬ ಮಹಾ ಸುಳ್ಳುಗಾರ, ಈತನಿಗೆ ಸ್ವರ್ಗದಲ್ಲಿ ಜಾಗವೇ ಸಿಗದು ಎಂಬ ನಿನ್ನ ವಾದ ಸುಳ್ಳಾಗುತ್ತದೆ' ಎಂದ ನಾಯಕದೂತನು, 'ಇದಕ್ಕೇನು ಹೇಳುತ್ತಿ?' ಎಂಬಂತೆ ಸವಾಲಿನ ನೋಟ ಬೀರಿದ್ದ.

ನಾಯಕದೂತ ನಿರೀಕ್ಷಿಸಿದಂತೆ ಕಾವಲುದೂತನು ವಿಚಲಿತನೇನೂ ಆಗಿದ್ದಿರಲಿಲ್ಲ. ಬದಲಿಗೆ, ತನ್ನ ವಾದದಲ್ಲಿ ಬಹಳ ಭರವಸೆಯಿರುವವನ ಧ್ವನಿಯಲ್ಲಿ, 'ಎಲ್ಲ ವಾದಗಳಿಗೂ ಅಪವಾದಗಳಿರುವಂತೆ, ಈತನ ಮಾತುಗಳಲ್ಲೂ ಕೆಲವು ನಿಜದ ದಾಖಲೆಗಳು ಸಿಗುತ್ತವೆ. ಸಾಮಾನ್ಯವಾಗಿ ಇವನು ಸಾರ್ವಜನಿಕವಾಗಿ ಮಾತೇ ಆಡುತ್ತಿರಲಿಲ್ಲ. ಭಾಷಣಗಳ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಒಪ್ಪಿಕೊಂಡ ಸಂದರ್ಭಗಳಲ್ಲಿ, ಬೇರೆ ಭಾಷಣಕಾರರೆಲ್ಲ ಏನೇನು ಮಾತನಾಡಬೇಕೆಂದು ಚೀಟಿ ಬರೆದುಕೊಂಡು ವೇದಿಕೆಯೇರುತ್ತಿದ್ದರೆ, ಇವನು ಮಾತ್ರ ಏನೇನೆಲ್ಲ ಮಾತನಾಡಬಾರದೆಂಬುದನ್ನು ಬರೆದುಕೊಂಡು ಹೋಗುತ್ತಿದ್ದ. ಇವನು ಸಭೆಯಲ್ಲಿ ಮಾತು ಆರಂಭಿಸುತ್ತಿದ್ದದ್ದೇ, ನಿಜ ಹೇಳುವ ಧೈರ್ಯ ತನಗಿಲ್ಲ ಎಂಬ ಮಾತಿನ ಮೂಲಕವೇ.

'ಓಹ್! ಬಹಳ ಕುತೂಹಲಕರವಾಗಿದೆ, ಮುಂದೇ..?' ನಾಯಕದೂತ ತನ್ನ ಆಸಕ್ತಿಯನ್ನು ಪ್ರಕಟಿಸಿದ್ದ.

ಉತ್ಸಾಹಗೊಂಡ ಕಾವಲುದೂತ ಮಾತು ಮುಂದುವರಿಸಿದ್ದ. 'ಬರವಣಿಗೆಯಲ್ಲಂತೂ ಇವನು ನಿಜ ಹೇಳಿದ್ದೇ ಇಲ್ಲ. ಸಾಹಿತ್ಯವು ಬದುಕಿನ ಪ್ರತಿಬಿಂಬ ಎಂದು ತಿಳಿದವರೆಲ್ಲ ಹೇಳುತ್ತಿದ್ದರೆ, ಇವನು ಮಾತ್ರ ದಡ್ಡನಂತೆ ಅದಕ್ಕೆ ವಿರುದ್ಧವಾಗಿ, ಸಾಹಿತ್ಯವು ಬದುಕಿನ ಪ್ರತಿಬಿಂಬವಲ್ಲ, ಅದು ಗತಿಬಿಂಬವಾಗಬೇಕು ಎಂದೇ ವಾದಿಸುತ್ತಿದ್ದ.

'ತನ್ನ ವಾದಗಳ ಸಮರ್ಥನೆಗೆಂದು ಇವನು, ತನ್ನೆಲ್ಲಾ ಕತೆ ಕಾದಂಬರಿಗಳಲ್ಲಿ ಮನುಷ್ಯರೆಲ್ಲರೂ ಬಹಳ ಒಳ್ಳೆಯವರೆಂದೂ, ಅವರಲ್ಲಿ ಕೆಟ್ಟವರೇ ಇಲ್ಲವೆಂದೂ ಸುಳ್ಳು





ಸುಳ್ಳೇ ಪ್ರತಿಪಾದಿಸುತ್ತಿದ್ದ. ಕೃತಿಯೊಂದರ ಆರಂಭದಲ್ಲಿ ಕೆಲವು ಕೆಟ್ಟ ಮನುಷ್ಯರನ್ನು ಕಾಣಿಸಿದಂತೆ ಮಾಡಿದರೂ, ಕೊನೆ ಕೊನೆಗೆ ಅವರನ್ನೂ ಒಳ್ಳೆಯ ಮನುಷ್ಯರಾಗಿ ಬದಲಾಯಿಸಿಬಿಡುತ್ತಿದ್ದ.

'ಅಷ್ಟು ಮಾತ್ರವಲ್ಲ ನಾಯಕದೂತರೇ. ಇವನ ಯಾವುದೇ ಕತೆ ಕಾದಂಬರಿಗಳಲ್ಲಿ ಹೆಣ್ಣುಗಳು ತಪ್ಪು ಮಾಡುವುದೇ ಇಲ್ಲ. ಇವನೊಬ್ಬ ಮಹಾ ಸುಳ್ಳುಗಾರನೆನ್ನಲು ಇವುಗಳಿಗಿಂತ ದೊಡ್ಡ ಸಾಕ್ಷಿ ಬೇಕೆ?

'ಉದಾಹರಣೆಗೆ...' ಎಂದು ಮಾತು ನಿಲ್ಲಿಸಿದ ಬಲಕಾವಲುದೂತನು, ತನ್ನ ಬೆನ್ನ ಮೇಲಿನ ಕಡತಗಳೊಂದಿಗೆ ಇರಿಸಿಟ್ಟಿದ್ದ ಚರ್ಮದ ಚೀಲವೊಂದರಿಂದ ಕಡತವೊಂದನ್ನು ಹೊರತೆಗೆದು, 'ಇದು, ಇವನು ಬರೆದ ಕೊನೆಯ ಕಾದಂಬರಿಯ ಹಸ್ತಪ್ರತಿ. ಬರೆದು ಮುಗಿಸಿದ್ದರೂ ಪ್ರಕಟಿಸಿದ್ದಿರಲಿಲ್ಲ. ಇದನ್ನು ಪೂರ್ತಿಯಾಗಿ ಓದಿದರೆ, ಯಾಕೆ ಪ್ರಕಟಿಸಿರಲಿಲ್ಲವೆಂಬುದು ತಮಗೂ ಅರಿವಾಗುತ್ತದೆ. ಈ ಹಸ್ತಪ್ರತಿಯನ್ನು, ಇವನ ವಿರುದ್ಧ ಸಾಕ್ಷಿಯಾಗಿ ಪರಿಗಣಿಸಬೇಕೆಂದು ತಮ್ಮನ್ನು ವಿನಂತಿಸುವೆ' ಎಂದ.

'ಹೌದಾ..!' ನೀನು ಓದಲಿರುವ ಆ ಹಸ್ತಪ್ರತಿಯನ್ನು, ಇವನ ವಿರುದ್ಧ ಸಾಕ್ಷಿಯೆಂದು ನಾನು ಪರಿಗಣಿಸಬೇಕೆ? ಹಾಗಾದರೆ ಮೊದಲು ಅದನ್ನು ಓದಿಬಿಡು. ನಾನೂ ಆಲಿಸುವೆ.' ನಾಯಕದೂತ ಅವಸರಪಡಿಸಿದ.

–೪–

'ಅದು ನಾನು ಬರೆದು ಮುಗಿಸಿದ ಕಾದಂಬರಿಯಲ್ಲ.' ಬಲಕಾವಲುದೂತ ಓದಲಾರಂಭಿಸುವ ಮುನ್ನವೇ ನಾನು ಗಟ್ಟಿಯಾಗಿಯೇ ಕೂಗಿ ಹೇಳಿದ್ದೆ.

'ಕಾದಂಬರಿಯಲ್ಲ! ಏನು ಹೇಳುತ್ತಾ ಇದ್ದೀಯಾ? 'ಮತ್ತೇನಿದು?' ನನ್ನತ್ತ ತಿರುಗಿದ ನಾಯಕದೂತನು ಹುಬ್ಬೇರಿಸುತ್ತಲೇ ಪ್ರಶ್ನಿಸಿದ್ದ.

'ಟಿಪ್ಪಣಿಗಳು ಅವು. ಪ್ರವಾದಿಪತ್ನಿ ಆಯಿಷಾರವರ ಜೀವನಪ್ರೇರಿತ ಕಾದಂಬರಿಯೊಂದನ್ನು ಬರೆಯಬೇಕೆಂಬ ಆಸೆಯಿಂದ ನಾನು ಬರೆದಿಟ್ಟುಕೊಂಡಿದ್ದ ಸ್ವಗತಗಳ ಟಿಪ್ಪಣಿಗಳು.'

'ಸ್ವಗತಗಳ ಟಿಪ್ಪಣಿಗಳು!' ನಾಯಕ ದೂತ ಅವಾಕ್ಕಾಗಿದ್ದ!

ಸ್ವಲ್ಪ ಹೊತ್ತು ಹಸ್ತಪ್ರತಿಯ ಮೇಲೆ ಕಣ್ಣಾಡಿಸಿದ ಅವನು, 'ಸರಿ ಇವನ್ನು ನೀನು ಮಾಡಿಕೊಂಡಿದ್ದ ಸ್ವಗತಗಳ ಟಿಪ್ಪಣಿಗಳೆಂದೇ ಒಪ್ಪಿಕೊಳ್ಳುವೆ. ಅದರೆ, ಇವಿಷ್ಟೇ

ಟಿಪ್ಪಣಿಗಳಿಂದ ಉಮ್ಮಾರ ಸಂಪೂರ್ಣ ಬದುಕನ್ನು ಬರೆಯಲು ಸಾಧ್ಯವೆ? ಪ್ರವಾದಿಯವರ ಮರಣಾನಂತರ ನಲುವತ್ತಾರು ವರ್ಷ ಬದುಕಿದ್ದರು ಆ ಉಮ್ಮಾ. ಪ್ರವಾದಿಯವರ ಮೂಲಕ ಅಲ್ಲಾಹು ಪ್ರಕಟಿಸಿದ್ದ ಅಂತಿಮಸತ್ಯಗಳನ್ನು ಗ್ರಂಥರೂಪದಲ್ಲಿ ದಾಖಲಿಸಲು ಪ್ರಮುಖವಾಗಿ ಶ್ರಮಿಸಿದ್ದವರು. ಪ್ರಾರಂಭದ ಮೂರು ಖಲೀಫರು ಗಳಾದ ಅಬೂಬಕರ್ ಸಿದ್ದೀಕ್, ಉಮರ್ ಬಿನ್ ಖತ್ತಾಬ್ ಹಾಗೂ ಉಸ್ಮಾನ್ ಬಿನ್ ಅಫ್ಫಾನರ ಆಡಳಿತ ಕಾಲದಲ್ಲಿ ಬಹಳ ಗೌರವಕ್ಕೂ ಪಾತ್ರರಾಗಿದ್ದವರು. ಆ ಕಾರಣದಿಂದಲೇ ತಮ್ಮ ಹತ್ತಿರದ ಬಂಧುಗಳ ವಿರೋಧಗಳನ್ನೂ ಎದುರಿಸಿದ್ದವರು ಈ ಉಮ್ಮಾ. ಮುಖ್ಯವಾಗಿ ಪ್ರವಾದಿಯವರ ಅಳಿಯ ಅಲೀಯವರ ಕಾಲದಲ್ಲಿ ನಡೆದಿದ್ದ ಒಂಟೆ ಯುದ್ಧದಲ್ಲೀ....,'

'ಅವೆಲ್ಲವನ್ನೂ ನಾನು ಬರೆದು ಮುಗಿಸಿರುವ 'ಉಮ್ಮಾ' ಕಾದಂಬರಿಯಲ್ಲಿ ಸೇರಿಸಿಕೊಂಡಿರುವೆ' ಎಂದೆ.

'ಏನು ಹೇಳುತ್ತಿರುವೆ ನೀನು! ಅವೆಲ್ಲವನ್ನೂ ಸೇರಿಸಿಕೊಂಡಿದ್ದಿರುವೆಯಾ? ಈ ಹಸ್ತಪ್ರತಿಯಲ್ಲಿ ಅವೆಲ್ಲಿವೆ ತೋರಿಸು?' ಎನ್ನುತ್ತಾ ಬಲ ಕಾವಲುದೂತನಿಂದ ಹಸ್ತಪ್ರತಿಯನ್ನು ಕಿತ್ತುಕೊಂಡ ನಾಯಕದೂತ, ಅದನ್ನು ನನ್ನ ಮೂಗಿನ ಸಮೀಪದಲ್ಲೇ ಹಿಂದೆ ಮುಂದೆ ಕುಣಿಸಿದ್ದ.

'ಇದರಲ್ಲಿ ಅಲ್ಲ; ನಾನು ಬರೆದು ಮುಗಿಸಿರುವ ಉಮ್ಮಾ ಕಾದಂಬರಿಯಲ್ಲಿ' ಎಂದೆ ತಣ್ಣಗೆ.

'ಬರೆದು ಮುಗಿಸಿದ ಉಮ್ಮಾ ಕಾದಂಬರಿ! ಅದೊಂದು ಬೇರೆಯೇ ಇದೆಯೆ?' ಎಂದು ಪ್ರಶ್ನಿಸುತ್ತಾ ತನ್ನಿಬ್ಬರೂ ಕಾವಲುದೂತರನ್ನೂ ಕ್ರೂರವಾಗಿ ದಿಟ್ಟಿಸಿದ್ದ.

'ನನ್ನ ಬಳಿ ಇದೆ ನಾಯಕರೇ.' ಅಲ್ಲಿಯವರೆಗೂ ತುಟಿ ಬಿಚ್ಚಿರದಿದ್ದ, ಎಡಕಾವಲುದೂತ ಬಾಯಿತೆರೆದಿದ್ದ!

೮

'ಏನು! ನಿನ್ನ ಬಳಿ ಇದೆಯೆ? ಇವನು ಬರೆದು ಮುಗಿಸಿದ್ದ ಕಾದಂಬರಿ ನಿನ್ನ ಬಳಿ ಇದೆಯೆ? ಎಲ್ಲಿದೆ?' ಎನ್ನುವಷ್ಟರಲ್ಲಿ ಎಡಕಾವಲುದೂತ, ತನ್ನ ಬೆನ್ನಮೇಲಿನ ಕಡತಗಳ ರಾಶಿಯಿಂದ ಕಾದಂಬರಿಯ ಹಸ್ತಪ್ರತಿಯನ್ನು ಹೊರತೆಗೆದು, ನಾಯಕದೂತನಿಗೆ ತೋರಿಸಿದ್ದ.

'ಅದು ಕಾದಂಬರಿಯೆ!? ಕಾದಂಬರಿಯೆಂದರೆ ಹಾಗಿರುತ್ತದೆಯೆ? ಅದೂ ಹಸ್ತಪ್ರತಿಯಂತೆ ಕಾಣಿಸುತ್ತಿದೆಯಲ್ಲ?'

'ಹೌದು. ಅದು ಇವನು ಬರೆದು ಮುಗಿಸಿರುವ ಕಾದಂಬರಿಯ ಹಸ್ತಪ್ರತಿಯೇ.' ಎಡಕಾವಲುದೂತ ಹೇಳಿದ.

'ಬರೆದು ಮುಗಿಸಿದ್ದರೆ ಪ್ರಕಟಿಸದಿರಲು ಕಾರಣವೇನು?' ಅವನೀಗ ಸಿಟ್ಟಿನ ಬೆಟ್ಟದ ಮೇಲೇರಿದ್ದ.





'ಬಲು ಮುಖ್ಯವಾದ ಎರಡು ಕಾರಣಗಳಿವೆ ನಾಯಕರೇ. ಅವುಗಳನ್ನು ಎರಡು ಕಾರಣಗಳು ಅನ್ನುವುದಕ್ಕಿಂತ ಇವನ ಎರಡು ಬಯಕೆಗಳು ಎಂದರೇನೆ ಸೂಕ್ತ.'

'ಎರಡು ಬಯಕೆಗಳು!?' ನಾಯಕದೂತ ಹುಬ್ಬೇರಿಸಿದ್ದ.

'ಬಹಳ ಮುಖ್ಯವಾದ ಎರಡು ಬಯಕೆಗಳು.' ಎಡಕಾವಲುದೂತ ಹೇಳ ತೊಡಗಿದ್ದ, 'ಪ್ರವಾದಿ ಮುಹಮ್ಮದರ ಜೀವನಾಧಾರಿತ ಐತಿಹಾಸಿಕ ಕಾದಂಬರಿಯೊಂದನ್ನು ಬರೆಯಬೇಕೆಂಬುದು ಇವನ ಮೊದಲ ಬಯಕೆಯಾಗಿದ್ದರೆ. ಪ್ರವಾದಿ ಪತ್ನಿ ಆಯಿಷಾರ ಜೀವನಪ್ರೇರಿತ ಕಾದಂಬರಿಯೊಂದನ್ನು ಬರೆಯಬೇಕೆನ್ನುವುದು ಇವನ ಮತ್ತೊಂದು ಬಯಕೆಯಾಗಿತ್ತು. ಇದರಲ್ಲಿ ಮೊದಲನೆಯದನ್ನು ಅಲ್ಲಾಹುವೇ ಪೂರೈಸಿಕೊಟ್ಟಿದ್ದ.'

'ಅಲ್ಲಾಹುವೇ ಪೂರೈಸಿಕೊಟ್ಟಿದ್ದ!' ನಾಯಕದೂತ ಅಚ್ಚರಿಯಿಂದ ಉದ್ಘರಿಸಿದ್ದ.

'ಓ.. ಹಾಗೋ.? ಹಾಗಾದರೆ, ಅಲ್ಲಾಹುವಿಗೆ ಇವನ ಮೇಲೆ ಕರುಣೆಯಿದೆಯೆಂದಾಯಿತು' ಎನ್ನುತ್ತಾ ನನ್ನನ್ನು ಅಭಿನಂದಿಸುವಂತೆಯೇ ಕಿರುನಗು ಚೆಲ್ಲಿದ್ದ ನಾಯಕದೂತ, ಬಳಿಕ ಎಡಕಾವಲುದೂತನತ್ತ ತಿರುಗಿ, 'ಹಾಗಿದ್ದರೆ, ಇವನ ಎರಡನೆಯ ಬಯಕೆಯಾಗಿದ್ದ ಈ ಹಸ್ತಪ್ರತಿಯಲ್ಲಿರುವ ಕಾದಂಬರಿ ಪ್ರಕಟವಾಗುವ ಮುನ್ನವೇ ಯಾಕೆ ಅಲ್ಲಾಹು ತನ್ನ ಬಳಿಗೆ ಕರೆಸಿಕೊಂಡ?'


ಉತ್ತರಿಸಲು ಹಿಂದೆಮುಂದೆ ನೋಡಿದ ಎಡಕಾವಲುದೂತನು, 'ಅದನ್ನು ಅಲ್ಲಾಹುವೇ ಹೇಳಬೇಕು' ಎಂದಿದ್ದ.

'ನಿಜ ನಿಜ. ಅಲ್ಲಾಹು ತಾನಿಚ್ಛಿಸಿದವರಿಗೆ ಕೊಡುಗೆಗಳನ್ನು ವಿಸ್ತರಿಸುವನು ಅಥವಾ ಸೀಮಿತಗೊಳಿಸುವನು. ಅವನು ಯಾರಿಂದ ಯಾವಾಗ ಏನನ್ನು ಮಾಡಿಸುತ್ತಾನೆ ಎಂಬುದನ್ನು ತೀರ್ಮಾನಿಸಲು ಬೇರೆ ಯಾರಿಂದಲೂ ಸಾಧ್ಯವಾಗದು.

ಇವನು ಬರೆದ ಕಾದಂಬರಿಯನ್ನು ಪೂರ್ತಿಯಾಗಿ ಓದಿಕೊಳ್ಳದೆ, ಅವಸರದಲ್ಲಿ ತೀರ್ಮಾನಕ್ಕೆ ಬರುವವವರನ್ನು ಅಲ್ಲಾಹು ಖಂಡಿತವಾಗಿಯೂ ಕ್ಷಮಿಸುವುದಿಲ್ಲ. ಓದು..., ಆ ಹಸ್ತಪ್ರತಿಯನ್ನು ನೀನು ಓದು.'

ನಾಯಕದೂತನ ಆದೇಶದಂತೆ, ನಾನು ಬರೆದು ಮುಗಿಸಿದ್ದ 'ಉಮ್ಮಾ' ಕಾದಂಬರಿಯ ಹಸ್ತಪ್ರತಿಯನ್ನು ತನ್ನೆರಡೂ ಕೈಗಳಲ್ಲಿ ಎತ್ತಿ ಹಿಡಿದುಕೊಂಡ ಎಡಕಾವಲುದೂತ ಓದಲಾರಂಭಿಸಿದನು.....

**[ಸಶೇಷ]**




⬆ ಸೌದಿ ಅರೇಬಿಯಾ ಭೂಪಟ ಮತ್ತು ಪುರಾತನ ಕಅಬಾ ⬇

